ಸಾಹಿತ್ಯ ಮಂಥನ

ಟಿ. ವಿ. ವೆಂಕಟಾಚಲ ಶಾಸ್ತ್ರೀ

53

ವಿ. ಗಾಯತ್ರಿದೇವಿ.
ರಾಷ್ಟ್ರೀಯ ವಿದ್ಯಾಲಯ
ಬೆಂಗಳೂರು.
3.9.91
VG.810

ಸಾಹಿತ್ಯ ಮಂಥನ

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ನಿಯಮಿತ
ಬೆಂಗಳೂರು

SAHITYA MANTHANA—A collection of research papers and translated articles by T. V. Venkatachala Sastry M.A., Institute of Kannada Studies, Manasa Gangotri, Mysore-6. Published by Karnataka Co-op. Publishing House Limited, Bangalore. First Edition: April 1972. Pages vi + 345. Price: Rs. 12

ಸಂಪಾದಕೀಯ ಸಮಿತಿ :

ಡಾ|| ಹಾ. ಮಾ. ನಾಯಕ (ಅಧ್ಯಕ್ಷ)
ಪಿ. ಎಸ್. ಭಟ್ಟ
ನಿರಂಜನ (ಪ್ರಧಾನ ಸಂಪಾದಕ)

ಬೆಲೆ: ರೂ. ೧೨

ಮುದ್ರಕರು
ಮೈಸೂರು ರಾಜ್ಯ ಸಹಕಾರ ಮುದ್ರಣಾಲಯ, ನಿಯಮಿತ
ಲಾಲ್‌ಬಾಗ್ ರಸ್ತೆ, ಬೆಂಗಳೂರು-೨೭,

ಅರ್ಪಣೆ

ದಿ|| ಡಾ. ಡಿ. ಎಲ್. ನರಸಿಂಹಾಚಾರ್

ದಿ|| ಆಸ್ಥಾನ ವಿದ್ವಾನ್ ಎಂ. ಎಸ್. ಸುಬ್ರಹ್ಮಣ್ಯ ಶಾಸ್ತ್ರೀ

ಅವರಿಗೆ

ಈ ಗ್ರಂಥವು ಭಕ್ತಿಗೌರವಪೂರ್ವಕವಾಗಿ ಅರ್ಪಿತವಾಗಿದೆ.

ಅರಿಕೆ

೧೯೫೩ ರಿಂದ ೧೯೬೯ರವರೆಗೆ ನಾನು ಬರೆದ ಲೇಖನಗಳಲ್ಲಿ ೧೪ ಸ್ವತಂತ್ರ ಲೇಖನಗಳನ್ನೂ ೭ ಅನುವಾದಿತ ಲೇಖನಗಳನ್ನೂ ಆಯ್ದು ಪುಸ್ತಕ ಮಾಡಿ 'ಸಾಹಿತ್ಯ ಮಂಥನ' ಎಂಬುದಾಗಿ ಕರೆದಿದ್ದೇನೆ. ಈ ಲೇಖನಗಳು ಈ ಮೊದಲು ಪ್ರಬುದ್ಧ ಕರ್ಣಾಟಕ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ನುಡಿ, ಜೀವನ, ಸುಬೋಧ – ಈ ಪತ್ರಿಕೆಗಳಲ್ಲಿಯೂ 'ಜ್ಞಾನೋಪಾಸಕ', 'ಉಪಾಯನ', 'ದೇವಗಂಗೆ', 'ಸವಿನೆನಪು' ಈ ಅಭಿನಂದನ ಸ್ಮಾರಕ ಗ್ರಂಥಗಳಲ್ಲಿಯೂ ಆಯಾ ಪತ್ರಿಕೆಯ ಆಂದಂದಿನ ಸಂಪಾದಕರ ಹಾಗೂ ಆಯಾ ಗ್ರಂಥಗಳ ಸಂಪಾದಕರ ಕೃಪೆಯಿಂದ ಬೆಳಕು ಕಂಡವಾಗಿವೆ. ನನ್ನ ಬರೆವಣಿಗೆಯ ಮೊದಮೊದಲ ದಿವಸಗಳಲ್ಲಿ, ವಿದ್ವತ್ಪತ್ರಿಕೆಗಳ ಸಂಪಾದಕರು ತೋರಿದ ಅಭಿಮಾನವನ್ನೂ ನೀಡಿದ ಪ್ರೋತ್ಸಾಹವನ್ನೂ ಈ ಸಂದರ್ಭದಲ್ಲಿ ನಾನು ಕೃತಜ್ಞತೆಯಿಂದ ನೆನೆಯಬೇಕು. ಮುಖ್ಯವಾಗಿ, ಪರಿಷತ್ಪತ್ರಿಕೆ ಮತ್ತು ಕನ್ನಡ ನುಡಿಗಳ ಅಂದಿನ ಸಂಪಾದಕರಾಗಿದ್ದ ದಿ|| ಆಸ್ಥಾನ ವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು, 'ಜೀವನ' ಪತ್ರಿಕೆಯ ಅಂದಿನ ಸಂಪಾದಕರಾಗಿದ್ದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಇವರನ್ನು ನಾನು ವಿಶೇಷವಾಗಿ ನೆನೆಯುತ್ತೇನೆ. ಈ ಇಬ್ಬರೂ ನನ್ನ ಬರೆಹಗಳ ಬಗೆಗೆ ತುಂಬ ಒಳ್ಳೆಯ ಮಾತುಗಳನ್ನಾಡಿ ಬೆನ್ನುತಟ್ಟಿದ್ದಾರೆ. 'ಈ ಚಿಕ್ಕವನು ಚೆನ್ನಾಗಿ ಮುಂದಕ್ಕೆ ಬರಲಿ' ಎಂಬ ಅಕ್ಕರೆಯ ಭಾವವೇ ಆ ಉದಾರವಾದ ಮಾತಿನ ಹಿನ್ನೆಲೆಯೆಂದು ನನಗೆ ಕಂಡಿದೆ. ಇದೇ ಬಗೆಯ ಆದರಣೆಯನ್ನು ಆಯಾ ಕಾಲದ ಪ್ರಬುದ್ಧ ಕರ್ಣಾಟಕದ ಸಂಪಾದಕರೂ ಇತರರೂ ನನ್ನ ವಿಷಯದಲ್ಲಿ ತೋರಿದ್ದಾರೆ. ಈ ಎಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಸುಮಾರು ಇಪ್ಪತ್ತು ವರ್ಷಗಳ ಕಾಲದಿಂದ ನನ್ನ ಬರೆವಣಿಗೆ ನಡೆದಿದೆ. ನಾನು ಬರೆದುದೆಲ್ಲ ಚಿನ್ನ, ಹೊನ್ನು ಎಂಬ ಗರ್ವ ನನಗಿಲ್ಲ. ನನ್ನ ಹಿಂದಿನ ಎಷ್ಟೋ ಬರೆಹಗಳನ್ನು ನಾನು ಮರೆತು ನೆಮ್ಮದಿಯಿಂದಿದ್ದೇನೆ. ಪ್ರಸ್ತುತ,

ಇಂದಿನ ನನ್ನ ಮನೋಧರ್ಮಕ್ಕೆ ಒಪ್ಪುವ ಕೆಲವನ್ನು ಮಾತ್ರ ಇಲ್ಲಿ ಒಗ್ಗೂಡಿಸಿದ್ದೇನೆ. ಅಲ್ಪ ವ್ಯತ್ಯಾಸಗಳ ಹೊರತು ಲೇಖನಗಳನ್ನು ಎಲ್ಲಿಯೂ ತಿದ್ದುವುದಕ್ಕೆ ಹೋಗಿಲ್ಲ. ಒಂದು ವರ್ಗದ, ಮುಖ್ಯವಾಗಿ ಪ್ರಾಚೀನ ಸಾಹಿತ್ಯದ, ಅಭ್ಯಾಸಿಗಳಿಗೆ ಇವು ಅಷ್ಟಿಷ್ಟು ಉಪಯುಕ್ತವಾಗಬಹುದೆಂಬುದು ನನ್ನ ಎಣಿಕೆ. ಕನ್ನಡ ಭಾಷಾ ಸಾಹಿತ್ಯಗಳ ಅಭ್ಯಾಸದಲ್ಲಿ ನನ್ನ ಒಲವುನಿಲವುಗಳೇನು ಸೋಲುಗೆಲವುಗಳೇನು ಎಂಬುದನ್ನಂತೂ ಈ ಲೇಖನಗಳಂ ಬಯಲುಮಾಡುವುದು ಸಾಧ್ಯ. ಬರೆಹಗಳ ಸಾರ್ಥಕತೆಯ ಬಗೆಗೆ ಹೇಳತಕ್ಕವರು ಓದುಗರೇ ಎಂಬುದನ್ನು ನಾನು ಬಲ್ಲೆ. ನನ್ನ ಲೇಖನಗಳ ವಿಷಯ ಗಣ್ಯವಾದ್ದಾಗಿ ಪ್ರಯತ್ನ ಮಹತ್ತ್ವದ್ದಾಗಿ ತೋರದಿರಬಹುದು; ಆದರೆ ಬರೆಯಲು ಎತ್ತಿಕೊಂಡ ವಿಷಯದಲ್ಲಿ ಪ್ರಾಮಾಣಿಕವಾದ ಶ್ರದ್ಧೆ ಆಸಕ್ತಿಗಳನ್ನು ನಾನು ತೋರಿದ್ದೇನೆಂದು ಅವರಿಗೆ ಮನವರಿಕೆಯಾದರೆ ನಾನು ಕೃತಾರ್ಥ.

ಈ ಸಂಕಲನದ 'ಗದಾಯುದ್ಧದ ಒಂದು ಪದ್ಯ' ಪ್ರಬುದ್ಧ ಕರ್ಣಾಟಕದಲ್ಲಿ ಮೊದಲು ಅಚ್ಚಾದಾಗ ಶ್ರೀಮಾನ್ ಎಸ್. ಶಿವಣ್ಣನವರು ತಮ್ಮ ಪ್ರತಿಕ್ರಿಯೆಯನ್ನು ಸೂಚಿಸುತ್ತ (ಪ್ರ. ಕ. ೪೮–೨) ಶರಸಂವರ್ಧನೆಯನ್ನು ತಿಳಿಸುವ ಆ ಪದ್ಯಕ್ಕೆ ಪೊನ್ನನ ಒಂದು ಪದ್ಯ (ಶಾಂತಿಪುರಾಣ, ೪–೨೭) ಪ್ರೇರಣೆಕೊಟ್ಟಿರುವ ಸಂಭವವಿದೆಯೆಂದಿದ್ದಾರೆ. ಆ ಕಂದ ಪದ್ಯವನ್ನೂ ಈ ಬಗೆಯ ಪದ್ಯಗಳ ಗುಂಪಿಗೆ ಸೇರಿಸಿಕೊಳ್ಳಬಹುದು. ಆದರೆ ಪ್ರೇರಣೆಯ ವಿಷಯದಲ್ಲಿ ಹೀಗೇ ಎಂದು ಹೇಳುವುದು ಕಷ್ಟ.

ಇನ್ನು ಅನುವಾದಿತ ಲೇಖನಗಳ ಬಗೆಗೆ ಎರಡು ಮಾತು. ಮೊದಲ ಮೂರು ಇಂಗ್ಲಿಷ್ ಮೂಲದವು, ಆಮೇಲಿನ ನಾಲ್ಕು ತೆಲುಗು ಮೂಲದವು. ಲೇಖನಗಳ ಮೂಲವನ್ನು ಅಲ್ಲಲ್ಲೇ ಸೂಚಿಸಿದೆ (ಕೊನೆಯ ತೆಲುಗು ಲೇಖನಾನುವಾದವು ಯಾವ ಮೂಲದ್ದು ಎನ್ನುವುದು ಮರೆತುಹೋಗಿರುವುದರಿಂದ ಅದನ್ನು ಗುರುತಿಸಿಲ್ಲ). ಇವುಗಳಲ್ಲಿ ಡಾ|| ಸಿ. ನಾರಾಯಣರಾಯರ 'ಮಾತ್ರಾಛಂದಸ್ಸುಗಳು' ಎಂಬ ಲೇಖನದ ವಿಷಯವಾಗಿ ಒಂದು ಮಾತು ಹೆಚ್ಚಿಗೆ ಹೇಳಬೇಕು. ಈ ಲೇಖನ ಶ್ರೀಯುತರ ಅಪಾರ ಪರಿಶ್ರಮದ

ಫಲವಾಗಿದೆ. ಆದರೆ ಶಾಸ್ತ್ರೀಯದೃಷ್ಟಿಯಿಂದ ನೋಡಿದರೆ, ಹಲವು ವಿವಾದಾಸ್ಪದವಾದ ಸಂಗತಿಗಳನ್ನು ಅದು ಒಳಕೊಂಡಿರುವುದು ಕಂಡುಬರುತ್ತದೆ. ಉದಾಹರಣೆಗೆ, ಆಂಧ್ರ ಕರ್ಣಾಟಕ ಛಂದಸ್ಸುಗಳನ್ನು ಕುರಿತು ವಿವೇಚಿಸುವಾಗ 'ಛಂದೋಂಬುಧಿ'ಗೆ ಕಿಟ್ಟೆಲ್ ಪ್ರತಿಯ ಪ್ರಕ್ಷೇಪಯುಕ್ತ ವಿಸ್ತೃತಪಾಠವನ್ನಾಧರಿಸಿರುವುದು, ಅಂಶ ಮತ್ತು ಮಾತ್ರಾಛಂದಸ್ಸುಗಳನ್ನು ಒಂದೇ ಎನ್ನುವಂತೆ ಭಾವಿಸಿ ಒಂದರೊಡನೊಂದನ್ನು ಬೆರಸಿ ವಿಚಾರಮಾಡಿರುವುದು ಇಂಥವನ್ನು ಹೇಳಬಹುದು. ಆದ್ದರಿಂದ ಇಲ್ಲಿಯ ಹಲವು ವಿಷಯಗಳು ಇಂದು ಮಾನ್ಯವಾಗದೆ ಹೋಗಬಹುದಾದರೂ ಗ್ರಾಹ್ಯವಾಗಬಹುದಾದ ಕುತೂಹಲಕರವೂ ನವೀನವೂ ಆದ ಸಂಗತಿಗಳು ಕೂಡ ಅದರಲ್ಲಿವೆಯೆಂಬುದನ್ನು ಮರೆಯುವಂತಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಈ ಲೇಖನವು ೧೯೩೩ರಷ್ಟು ಹಿಂದೆ ಪ್ರಕಟವಾಗಿರುವುದರಿಂದ ಅದಕ್ಕೆ ಚಾರಿತ್ರಿಕ ಪ್ರಾಮುಖ್ಯವಿದೆ. ಸುಮಾರು ಇದೇ ಅವಧಿಯಲ್ಲಿ ಬಿ. ಎಂ. ಶ್ರೀ ಅವರ ಹಾಗೂ ಸೇಡಿಯಾಪು ಕೃಷ್ಣಭಟ್ಟರ ಹೊಸ ದೃಷ್ಟಿಯ ಛಂದಸ್ಸಿನ ವಿವೇಚನೆಗಳು ಕನ್ನಡದಲ್ಲಿ ಕಾಣಿಸಿಕೊಂಡವೆಂಬುದನ್ನು ಇಲ್ಲಿ ನೆನೆಯಬಹುದು.

ಈ ಗ್ರಂಥದ ಪ್ರಕಟನೆಯಲ್ಲಿ ನನಗೆ ನೆರವಾದವರನ್ನು ಕೃತಜ್ಞತೆಯಿಂದ ಸ್ಮರಿಸುವ ಸಂತೋಷದಾಯಕವಾದ ಕರ್ತವ್ಯಭಾರವಷ್ಟೆ ಇನ್ನು ಇಲಿ ಹೇಳುವುದಕ್ಕೆ ಉಳಿದಿರುವುದು.

ಈ ಲೇಖನಗಳನ್ನು ನಾನು ಬರೆದ ಕಾಲಕ್ಕೆ ಇವನ್ನು ಹೀಗೆ ಕೂಡಿಸಿ ಒಂದು ಪುಸ್ತಕವಾಗಿ ಮಾಡಬಹುದೆಂಬ ಯೋಚನೆಯೇ ನನಗೆ ಹೊಳೆದಿರಲಿಲ್ಲ. ಆದರೆ ಈಗ ಒಂದೆರಡು ವರ್ಷಗಳ ಹಿಂದೆ ಆ ಬಗೆಯ ಯೋಚನೆಯೊಂದು ಮನಸ್ಸಿನಲ್ಲಿ ಸುಳಿಯುತ್ತಲೂ, ಹೇಗಾದರೂ ಆಗಲಿ ಎಂದು ಪ್ರಾಸ್ತಾವಿಕವಾಗಿ ಒಮ್ಮೆ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ|| ಹಾ. ಮಾ. ನಾಯಕ ಅವರಲ್ಲಿ ಆ ಲೇಖನಗಳ ಪ್ರಸ್ತಾಪವನ್ನೆತ್ತಿದೆ. ಇಂಗಿತಜ್ಞರಾದ ಅವರು ಕೂಡಲೇ ನನ್ನ ಆಶಯವನ್ನು ಗ್ರಹಿಸಿ ಬೆಂಗಳೂರಿನ ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದ ವತಿಯಿಂದ ಈ ಪುಸ್ತಕದ ರೂಪದಲ್ಲಿ ಅವು ಹೊರಬರುವಂತೆ ವ್ಯವಸ್ಥೆಮಾಡಿಕೊಟ್ಟರು. ಆ ಪ್ರಕಾಶನ

ಮಂದಿರದ ಪ್ರಧಾನ ಸಂಪಾದಕರೂ ಪ್ರಸಿದ್ಧ ಸಾಹಿತಿಗಳೂ ಆದ ಶ್ರೀಮಾನ್ ನಿರಂಜನರು ಈ ಗ್ರಂಥವನ್ನು ಪ್ರಕಟನೆಗೆ ದಯೆಯಿಟ್ಟು ಒಪ್ಪಿಕೊಂಡು, ನನ್ನನ್ನು ಆಪ್ತಸ್ನೇಹಿತನಂತೆ ಕಂಡು, ಅಚ್ಚಿಗೆ ಅಗತ್ಯವಾದ ಎಲ್ಲಾ ಏರ್ಪಾಡು ಗಳನ್ನೂ ಮಾಡಿದರು. ಈ ಇಬ್ಬರು ಮಹನೀಯರಿಗೂ ನಾನು ಬಹುವಾಗಿ ಕೃತಜ್ಞನಾಗಿದ್ದೇನೆ.

ಮೈಸೂರ್ ರಾಜ್ಯ ಸಹಕಾರ ಮುದ್ರಣಾಲಯ, ನಿ. ಬೆಂಗಳೂರು-೨೭ ಅಚ್ಚುಕೂಟದ ವ್ಯವಸ್ಥಾಪಕರಾದ ಶ್ರೀಮಾನ್ ಬಿ. ಆರ್. ಚಂದ್ರಶೇಖರ್ ಮತ್ತು ಶ್ರೀಮಾನ್ ಬಿ. ಎಂ. ನಾರಾಯಣರಾವ್ ಅವರು ನನ್ನ ಬಗೆಗೆ ವಿಶ್ವಾಸವಿಟ್ಟು ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿದ್ದಾರೆ. ಅಚ್ಚುಕೂಟದ ಸಿಬ್ಬಂದಿಯವರೂ ಅವರಿಗೆ ತಕ್ಕ ಸಹಕಾರವನ್ನು ನೀಡಿದ್ದಾರೆ. ನನ್ನ ಪ್ರಿಯಮಿತ್ರರೂ ಕನ್ನಡ-ಕನ್ನಡ ನಿಘಂಟಿನ ಸಹಸಂಪಾದಕರೂ ಆಗಿರುವ ಶ್ರೀಮಾನ್ ಟಿ. ಎಸ್. ಕೃಷ್ಣಮೂರ್ತಿಗಳು ಈ ಗ್ರಂಥದ ಕರಡುಗಳನ್ನು ತಿದ್ದು ವುದರಲ್ಲಿ ನನ್ನ ಜತೆಗೆ ಸ್ನೇಹಭಾವದಿಂದ ಸಹಕರಿಸಿದ್ದಾರೆ. ಈ ಮಹನೀ ಯರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಟಿ. ವಿ. ವೆಂಕಟಾಚಲ ಶಾಸ್ತ್ರೀ

ವಿಷಯ ಸೂಚಿ

ಭಾಗ ೧

ಭಾಗ ೨

ಭಾಗ ೧

ಕನ್ನಡದ ಕಬ್ಬಿಗಿತಿಯರು

(೧೯ನೆಯ ಶತಮಾನದವರೆಗೆ)

"ಪುರುಷವತ್ ಯೋಷಿತೋಽಪಿ ಕವೀ ಭವೇಯುಃ । ಸಂಸ್ಕಾರೋ ಹ್ಯಾತ್ಮನಿ ಸಮವೈತಿ, ನ ಸ್ತ್ರೈಣಂ ಪೌರುಷಂ ವಾ ವಿಭಾಗಮಪೇಕ್ಷತೇ । ಶ್ರೂಯಂತೇ ದೃಶ್ಯಂತೇ ಚ ರಾಜಪುತ್ರ್ಯಃ, ಮಹಾಮಾತ್ರದುಹಿತರೋ ಗಣಿಕಾಃ ಕೌತುಕಿಭಾರ್ಯಾಶ್ಚ ಶಾಸ್ತ್ರಪ್ರಹತಬುದ್ಧಯಃ ಕವಯಶ್ಚ ।"

– ಎಂದರೆ "ಪುರುಷರಂತೆ ಸ್ತ್ರೀಯರೂ ಕವಿಗಳಾಗಬಹುದು; ಸಂಸ್ಕಾರವು ಆತ್ಮನಿಷ್ಠವೇ ಸರಿ; ಗಂಡು ಹೆಣ್ಣೆಂಬ ಭೇದವನ್ನು ಅದು ನೋಡುವುದಿಲ್ಲ; ರಾಜಪುತ್ರಿಯರು, ಮಹಾಮಾತ್ರರ ಪುತ್ರಿಯರು, ಗಣಿಕೆಯರು, ಸುಸಂಸ್ಕೃತರ ಮಡದಿಯರು ಇವರೆಲ್ಲ ಶಾಸ್ತ್ರಸಂಸ್ಕಾರವುಳ್ಳವರೂ ಕವಿಗಳೂ ಆಗಿದ್ದುದನ್ನು ಕೇಳಿಬಲ್ಲೆವು, ಕಂಡೂ ಬಲ್ಲೆವು"– ಎಂಬುದು ರಾಜಶೇಖರನ ಮಾತು.

ಈ ಮಾತು ದಿಟವೇ ಇರಬಹುದಾದರೂ ಸಂಸ್ಕೃತ ಸಾಹಿತ್ಯದಲ್ಲಾಗಲಿ, ಬೇರೆ ಯಾವುದೇ ಸಾಹಿತ್ಯದಲ್ಲಾಗಲಿ ಲೇಖಿಕೆಯರ ಸಂಖ್ಯೆ ಕಡಮೆ; ಸಾಧನೆ ಸ್ವಲ್ಪ. ಪ್ರಾಯಶಃ ಆಯಾ ಸಾಹಿತ್ಯಕ್ಕೆ ಅವರ ಕಾಣಿಕೆ ಅಷ್ಟೇನೂ ಗಮನಾರ್ಹವಾದುದಲ್ಲ. ಒಬ್ಬ ಕಾಲಿದಾಸನ, ಪಂಪನ, ಷೇಕ್ಸ್‌ಪಿಯರನ ಪ್ರತಿಭೆ ಪಾಂಡಿತ್ಯಗಳನ್ನು, ಪ್ರಸಿದ್ಧಿಯನ್ನು ಸರಿಗಟ್ಟಬಲ್ಲ ಒಬ್ಬ ಬರಹಗಾರ್ತಿಯೂ ಕಾಣಿಸಿಕೊಳ್ಳಲಿಲ್ಲ. ಇದಕ್ಕೆ ನಿಶ್ಚಿತವಾದ ಕಾರಣಗಳನ್ನು ಕೊಡುವುದು ಸಾಧ್ಯವಿಲ್ಲ. ಬಹುಮಟ್ಟಿಗೆ ಸಂಸ್ಕಾರ, ಶಿಕ್ಷಣ, ಸಾಮಾಜಿಕ ಧಾರ್ಮಿಕ ಸ್ಥಾನಮಾನಗಳು ಕಾರಣವಾಗಿರಬಹುದು. ಇಲ್ಲಿ ಎರಡು ಅಭಿಪ್ರಾಯಗಳನ್ನು ಉದ್ಧರಿಸಬಹುದು. "ಬಹುಶಃ ಮಹಿಳೆಯರಿಗೆ ಸಾಮಾಜಿಕ ನಿರ್ಬಂಧ, ಪ್ರತಿಕೂಲಗಳು ಹೆಚ್ಚು ಒದಗಿ, ಅವರ ವಿದ್ಯಾಭ್ಯಾಸವನ್ನೂ ಅನುಭವದ ವೈಶಾಲ್ಯವನ್ನೂ ಕುಗ್ಗಿಸುತ್ತಿರಬಹುದು, ಕುಗ್ಗಿಸಿರಬಹುದು."[1] "ನಮ್ಮ

---

1. ಡಿ. ಚಂಪಾಬಾಯಿ (ಸಂ.): 'ಹದಿಬದೆಯ ಧರ್ಮ', ಪೀಠಿಕೆ, ಪುಟ, 34.

ನಾಡಿನಲ್ಲಿ ಹೆಂಗಳೆಯರು ಕವಿಯಿತ್ರಿಯರೂ ಲೇಖಕಿಯರೂ ಹೆಚ್ಚಾಗಿ ಹಿಂದೆ ಆಗದಿರಲು ಅವರಲ್ಲಿ ಪ್ರತಿಭೆ-ಮೇಧಾಶಕ್ತಿಗಳು ಇರಲಿಲ್ಲವೆಂಬುದಲ್ಲ, ಅವರ ವ್ಯಕ್ತಿತ್ವ ವಿಕಾಸಕ್ಕೆ ಸೌಕರ್ಯಗಳು ದೊರೆಯಲಿಲ್ಲವೆಂಬುದು ಮುಖ್ಯಕಾರಣ." [2]

ಈ ಎರಡು ಅಭಿಪ್ರಾಯಗಳನ್ನು ಸಮೀಕರಿಸಿ ವಿಮರ್ಶಿಸಿದರೆ ಇವು ಬಲುಮಟ್ಟಿಗೆ ನಿಜವೆಂದು ಒಪ್ಪಬೇಕಾಗುವುದು. ಈ ಕಾರಣಗಳಿಂದಲೇ ಸ್ತ್ರೀಯರು ಸಾಹಿತ್ಯರಂಗದಲ್ಲಿ ಉತ್ಸಾಹದಿಂದಲೂ ಸಾಮರ್ಥ್ಯದಿಂದಲೂ ಶ್ರಮಿಸುವುದಿರಲಿ, ಒಂದೆರಡು ನಿದರ್ಶನಗಳನ್ನು ಬಿಟ್ಟರೆ ಪ್ರವೇಶಿಸಲೇ ಇಲ್ಲ ವೆನ್ನಬಹುದು. ಇದನ್ನು ಸಮರ್ಥಿಸಲು ಕನ್ನಡ ಸಾಹಿತ್ಯದಲ್ಲಿಯೇ ಉತ್ತಮ ಸಾಕ್ಷ್ಯವಿದೆ ವೀರಶೈವ ಧರ್ಮ ಮತ್ತು ಸಮಾಜದಲ್ಲಿ ಪುರುಷರಿಗಿರುವಂತೆ ಸ್ತ್ರೀಯರಿಗೂ ಸಮಾನಾವಕಾಶ ಮತ್ತು ಮಾನ್ಯತೆಗಳಿದ್ದುದರಿಂದ ಅವರು ಸ್ವತಃ ಸಾಧನೆ ನಡೆಸಿ, ಸ್ವತಃ ಸಿದ್ಧಿಗಳಿಸಿ ಜ್ಞಾನೋಪದೇಶ ಮಾಡುವ ಮಹಾನುಭಾವೆ ಯರಾದರು. ತಮ್ಮ ವಿಶಿಷ್ಟ ಜೀವನಾನುಭವ ಶಿವಾನುಭವ ಮತ್ತು ಉಪದೇಶ ಸಾರವನ್ನು ಶಿವಶರಣರಂತೆಯೇ ವಚನರಚನೆಯ ಮೂಲಕ ಧಾರಾಳವಾಗಿ ವ್ಯಕ್ತಪಡಿಸಿದರು. ಇಂಥ ವಚನಗಳಲ್ಲಿ ಹಲವಾರು ಕಾವ್ಯಸ್ಫೂರ್ತಿಯಿಂದಲೇ ಹೊಮ್ಮಿ ಕಾವ್ಯಮಾರ್ಗದಲ್ಲಿಯೇ ನಡೆದಿವೆ. ಕಾವ್ಯಾಲಂಕಾರ ಮಾರ್ಗವು ವಚನ ಕಾರ್ತಿಯರ ಧರ್ಮ ಪ್ರಕೃತಿ ಮತ್ತು ಕಾವ್ಯಪ್ರಕೃತಿಗಳನ್ನು ಅಪೂರ್ವ ಸುಂದರ ವಾಗಿ ಒಂದುಗೂಡಿಸಿದೆ. ಸ್ತ್ರೀಯರಿಗೆ ಈ ತೆರನಾದ ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಕಂಡು ಬರದ ದಾಸಕೂಟದ ಹರಿದಾಸ ಶ್ರೇಣಿಯಲ್ಲಿ ಒಬ್ಬ ಹರಿದಾಸಿಯೂ ಕಾಣಿಸಿದಂತೆ ತೋರದು ; ಪದಗಳನ್ನು ಹಾಡಿ ತನ್ನ ಅನುಭವಗಳನ್ನು ವ್ಯಕ್ತಪಡಿಸಿದಂತೆ ತೋರದು. (ಈ ಭಾಗವತ ಪಂಥದ ಪರೋಕ್ಷ ಪ್ರಭಾವ ಹೆಳವನಕಟ್ಟೆ ಗಿರಿಯಮ್ಮನ ಮೇಲೆ ಆಗಿರುವಂತೆ ಕಂಡರೂ ಆಕೆ ಸ್ವತಂತ್ರವಾಗಿಯೇ ಸಾಧನೆ ನಡೆಸಿದಳೆಂಬುದು ಆಕೆಯ ಕೃತಿಗಳಿಂದ ತಿಳಿದು ಬರುತ್ತದೆ.)

ಶಿವಶರಣೆಯರೂ ಇನ್ನುಳಿದ ಕಬ್ಬಿಗಿತಿಯರೂ, ತಮ್ಮ ಕೃತಿಗಳಲ್ಲಿ ತಮ್ಮ ಕವಿತ್ವಶಕ್ತಿ, ಸಾಧನೆ. ಸ್ಥಾನಮಾನ, ಸ್ವಾತಂತ್ರ್ಯ ಇತ್ಯಾದಿಗಳ ಮಹತ್ತ್ವವಾಗ

2. ರಂ. ಶ್ರೀ. ಮುಗಳಿ ; ಕನ್ನಡ ಸಾಹಿತ್ಯ ಚರಿತ್ರೆ, ಪು. 309.

ಅವರು ಹೇಗೆ ಪುರುಷ ಪ್ರಾಬಲ್ಯ, ಸಹಜ ದೌರ್ಬಲ್ಯ, ಸಮಯಶೃಂಖಲೆ ಮತ್ತು ಬಾಹ್ಯಪ್ರತಿಕೂಲಗಳನ್ನು ಸಹಿಸಿ, ನಯಭಯಗಳಿಂದ ಸಾಹಿತ್ಯರಂಗದಲ್ಲಿ ಪ್ರವಿಸಿ ದ್ದಾರೆಂಬುದು ಸ್ವಲ್ಪಮಟ್ಟಿಗಾದರೂ ತಿಳಿಯುತ್ತದೆ. ತಮ್ಮ ಕಾವ್ಯಶಕ್ತಿಯನ್ನು ಪುರುಷ ಕವಿಗಳು ಹೆಮ್ಮೆ ಹೆಗ್ಗಳಿಕೆಗಳಿಂದ ಉಗ್ಗಡಿಸಿಕೊಂಡರೆ ಸ್ತ್ರೀಕವಿಗಳು ಕೃತಿರಚನೆಗೆ ತಾವು ಅಸಮರ್ಥರೋ ಎನ್ನುವಷ್ಟು ವಿನಯ ಸೌಜನ್ಯಗಳಿಂದ ಅರಿಕೆಮಾಡಿಕೊಳ್ಳುತ್ತಾರೆ. ಅದರಲ್ಲಿಯೂ ಅವಸರ ಅಪೇಕ್ಷೆ ಆಶ್ರಯ ಒತ್ತಾಯ ಇಲ್ಲದಿದ್ದರೆ ಹೊನ್ನಮ್ಮನೂ ಚೆಲುವಾಂಬೆಯೂ ಕೃತಿರಚನೆಗೆ ತೊಡಗುತ್ತಿರಲಿಲ್ಲವೆಂದು ತೋರುತ್ತದೆ. ಸುಶಿಕ್ಷಿತರೂ ಸುಸಂಸ್ಕೃತರೂ ಪ್ರತಿ ಭಾವಂತರೂ, ಬಿರುದಾಂಕಿತರೂ ಆಗಿದ್ದು ರಾಜಾಶ್ರಯ, ಪೋಷಣೆ ಬಂಧವ್ಯ ಗಳನ್ನುಪಡೆದಿದ್ದು, ದೌರ್ಬಲ್ಯಮೂಲವಾದ ಅಸಾಮರ್ಥ್ಯ ಶಂಕೆಯೋ, ಪರಿಮಿತ ಜೀವನದೃಷ್ಟಿ–ಕಾವ್ಯದೃಷ್ಟಿಗಳೋ ಲೋಕಾನುಭವವೈಶಾಲ್ಯಹೀನತೆಯೋ ಬಾಹ್ಯಪರಿಸರದ ಯಾವ ನಿಯಮ ನಿರ್ಬಂಧಗಳೋ ಕನ್ನಡ ಕಬ್ಬಿಗಿತಿಯರು ಕಾವ್ಯರಚನೆಯಲ್ಲಿ ಮಹದುದ್ಯಮಗಳಿಗೆ ತೊಡಗಲು ಅಂತೂ ಸಾಧ್ಯವಾಗಲಿಲ್ಲ. ಸ್ತ್ರೀಕವಿಗಳ ಒಂದು ಪೂರ್ವಪರಂಪರೆ ಪ್ರೋತ್ಸಾಹಕ ವಾತಾವರಣ ಇಲ್ಲದೇ ಹೋದುದು ಕೂಡ ಒಂದು ಮಹತ್ತ್ವದ ಕೊರತೆಯೆನ್ನಬಹುದು.

ಈ ದೃಷ್ಟಿಯಿಂದ ನೋಡಿದರೆ ಹೃದ್ಯವಾದ ಸಾಹಿತ್ಯಾಂಶ ವಿಪುಲವಾಗಿ ದ್ದರೂ ಶುದ್ಧ ಸಾಹಿತ್ಯಕ ರಚನೆಗಳಲ್ಲದ ವಚನವಾಙ್ಮಯವನ್ನೂ ಕಾವ್ಯ ವ್ಯವಸಾಯವು ಮುಖ್ಯೋದ್ದೇಶವಲ್ಲದ ವಚನಕಾರ್ತಿಯರನ್ನೂ ಹಾಗೆಯೇ ಪದಗಳನ್ನು (ಹಾಡು ಅಥವಾ ಕೀರ್ತನೆ) ಪದಕವಯಿತ್ರಿಯರನ್ನೂ ಸಾಹಿತ್ಯ ದೃಷ್ಟಿಯಿಂದ ಬದಿಗಿರಿಸಿದರೆ ಕೆಲವೇ ಕಬ್ಬಿಗಿತಿಯರು ಉಳಿಯುತ್ತಾರೆ. ಇವರ ರಚನೆಗಳಲ್ಲಿ ಒಂದು ಬುದ್ಧಿಕೌಶಲದ ಸಮಸ್ಯಾ ಪೂರ್ತಿಯ 'ಚತುರಕವಿತೆ'; ಇನ್ನೊಂದು ಸತೀಧರ್ಮವನ್ನು ಬೋಧಿಸುವ 'ನೀತಿಕಾವ್ಯ'; ಉಳಿದ ಕೆಲವು ಹರಿಭಕ್ತಿಪ್ರಚಾರದ ವಿವಾಹ ಕಥೆಗಳು ಮತ್ತು ಉಪಾಖ್ಯಾನಗಳು. ಎಲ್ಲವೂ ಪ್ರಮಾಣದಲ್ಲಿ ಲಘು ಕೃತಿಗಳು. ಇವು ಸಾಮಾನ್ಯವಾಗಿ ಸಂಪ್ರದಾಯಕವಿತೆ ಹಾಕಿಕೊಟ್ಟ ಹಾದಿಯ ಗೆರೆದಾಟಿ ಹೋದವಲ್ಲ; ಸ್ವಾತಂತ್ರ್ಯವನ್ನೂ ನಾವೀನ್ಯ ವನ್ನೂ ಅಷ್ಟೇನೂ ತೋರಿದವಲ್ಲ; ಕಬ್ಬಿಗಿತಿಯರ ವ್ಯಕ್ತಿತ್ವವನ್ನೂ ಔನ್ನತ್ಯ

ವನ್ನೂ ಹಿರಿದಾಗಿ ಒಡಮೂಡಿಸಲಿಲ್ಲ. ಕಬ್ಬಿಗಿತಿಯರು ಆರಿಸಿಕೊಂಡ ಗುರಿ ಬಲುಮಟ್ಟಿಗೆ ಸ್ತ್ರೀಯರ ರಂಜನೆ, ಸ್ತ್ರೀಯರ ಏಳಿಗೆ, ಸ್ತ್ರೀಯರ ಶುಭ. ಬಳಸಿಕೊಂಡ ಛಂದಸ್ಸು ಬಲುಮಟ್ಟಿಗೆ ಲಲಿತಲಯಗತಿಯ ಸಾಂಗತ್ಯ.

ಹೀಗೆ ಸ್ತ್ರೀಯರ ಸಾಹಿತ್ಯ ಕೃತಿಗಳಲ್ಲಿ ಸಾರ್ವತ್ರಿಕತೆ, ಶಾಶ್ವತಾಂಶ, ಉದ್ದಾಮ ವಸ್ತು ಶೈಲಿಗಳು ವಿಶಾಲ ಭಾವನಾಪ್ರಪಂಚ ವಿವಿಧ ರಸೋತ್ಕರ್ಷ ಅಷ್ಟಾಗಿ ಕಂಡುಬಂದಿಲ್ಲ ಎಂದು ಹೇಳಿದರೆ, ಅವುಗಳಲ್ಲಿ ಗುಣೋತ್ಕರ್ಷವಿಲ್ಲ ವೆಂದು ಅರ್ಥವಲ್ಲ. ಈ ಲಘುಕೃತಿಗಳಲ್ಲಿ ಸ್ತ್ರೀಸಹಜವಾದ ಕೋಮಲಾಂತಃಕರಣ ಅರಳಿ ಪರಿಮಳಿಸಿದೆ. ಸ್ತ್ರೀಸಹಜವಾದ ಮಧುರ ಮೋಹನ ವಾಣಿ ವೀಣೆ ಯಂತೆ ಇಂಪಾಗಿ ಮಿಡಿದಿವೆ. ಸ್ತ್ರೀಪ್ರಪಂಚದ ಸಾರಸರ್ವಸ್ವವೂ ಹೃದಯಂಗ ಮವಾಗಿ ಪರಿಸ್ಫುಟಗೊಂಡಿದೆ. ಹೊನ್ನಮ್ಮ ಗಿರಿಯಮ್ಮರ ಕೃತಿಗಳು ಬಹು ಕಾಲ ನಿಲ್ಲಬಲ್ಲ ಕೃತಿಗಳು. ಧರ್ಮಪ್ರಕೃತಿ ಮೂಲದಿಂದ ಹೊಮ್ಮಿದ್ದರೂ ಭಾವಗೀತೆಯ ಸ್ಫೂರ್ತಿಯನ್ನೂ ಸತ್ತ್ವವನ್ನೂ ತುಂಬಿಕೊಂಡು ರಸಾರ್ದ್ರವಾಗಿ ರುವ ಅಕ್ಕಮಹಾದೇವಿಯ ವಚನಗಳು ಕನ್ನಡ ಸಾಹಿತ್ಯದ ಶಾಶ್ವತನಿಧಿ. ಅಕ್ಕಮಹಾದೇವಿ ಮತ್ತು ಇತರ ಶಿವಶರಣೆಯರಲ್ಲಿ ಶೈವಧರ್ಮವೂ ಶಿವ ಭಕ್ತಿಯೂ, ಚೆಲ್ವಾಂಬೆ ಗಿರಿಯಮ್ಮರಿಗೆ ವೈಷ್ಣವ ಧರ್ಮವೂ ವಿಷ್ಣುಭಕ್ತಿಯೂ ಕಾವ್ಯಸ್ಫೂರ್ತಿಗೆ ಮೂಲವಾದವು. ನಿರ್ಮಲ ಸತೀಧರ್ಮವನ್ನು ಕಾವ್ಯರೂಪ ದಲ್ಲಿ ಬಿತ್ತರಿಸಲು ಹೊರಟ ಹೊನ್ನಮ್ಮನಿಗೆ ಸ್ತ್ರೀಶುಭಾಕಾಂಕ್ಷೆಯೇ ಕಾವ್ಯ ಸ್ಫೂರ್ತಿಗೆ ಮೂಲವಾಯಿತು. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ಅಕ್ಕಮಹಾದೇವಿ, ಹೊನ್ನಮ್ಮ, ಚೆಲ್ವಾಂಬೆ, ಹೆಳವನಕಟ್ಟೆ ಗಿರಿಯಮ್ಮ, ಈ ನಾಲ್ವರು ಗಣನಾರ್ಹರಾದ ಕನ್ನಡ ಕಬ್ಬಿಗಿತಿಯ ರೆಂದು ಹೇಳಬಹುದು.

ಆರಂಭ ಕಾಲದಿಂದ ಹನ್ನೊಂದನೆಯ ಶತಮಾನದವರೆಗೆ

ಸದ್ಯಃ ಕನ್ನಡ ಸಾಹಿತ್ಯದ ಆದಿಗ್ರಂಥವಾದ ಕವಿರಾಜಮಾರ್ಗ (ಸು.೮೫೦) ದಲ್ಲಿ ಪೂರ್ವಿಕರಾದ ಕೆಲವರು ಗದ್ಯ ಮತ್ತು ಪದ್ಯಗ್ರಂಥಕರ್ತರ ಹೆಸರುಗಳನ್ನು

ಹೇಳಿದೆ. ಇವರಲ್ಲಿ ಕಬ್ಬಿಗಿತಿಯರು ಯಾರೂ ಇಲ್ಲ. ೯, ೧೦, ೧೧ನೆಯ ಶತಕಗಳಲ್ಲಿ (ಕಾಲ ನಿಶ್ಚಯವಾಗಿರದ ಕಂತಿ ಎಂಬ ಕಬ್ಬಿಗಿತಿಯನ್ನು ಪರಿಗಣಿಸಿಲ್ಲ.) ಯಾವುದೇ ಸ್ತ್ರೀಕವಿಯ ಹೆಸರಾಗಲಿ, ಅವಳ ಕೃತಿಯ ಹೆಸರಾಗಲಿ ದೊರೆಯುವುದಿಲ್ಲ. ೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಹಲವರು ಸ್ತ್ರೀವಚನಕಾರರ ಹೆಸರುಗಳು, ಅಂಕಿತಗಳು, ವಚನಗಳು, ಕಣ್ಣಿಗೆ ಬೀಳುತ್ತವೆ. ಆದುದರಿಂದ ಕನ್ನಡ ಸಾಹಿತ್ಯದಲ್ಲಿ ಬಲುಮಟ್ಟಿಗೆ ೧೨ನೆಯ ಶತಕದ ಉತ್ತರಾರ್ಧದಲ್ಲಿ ಕಬ್ಬಿಗಿತಿಯರ ಪ್ರವೇಶವಾಯಿತೆಂದು ಭಾವಿಸಬಹುದು. [3]

ಹನ್ನೊಂದನೆಯ ಶತಮಾನ

ಕಂತಿ (ಸು. ೧೧೦೦ ?)

ಜೈನಕವಿ ಕಂತಿ ಕನ್ನಡಸಾಹಿತ್ಯದಲ್ಲಿ ಮೊಟ್ಟಮೊದಲ ಕಬ್ಬಿಗಿತಿಯೆಂಬುದು ಸಾಮಾನ್ಯವಾದ ಗ್ರಹಿಕೆ. ಕವಿಕಾವ್ಯ ವಿಚಾರ ದೃಷ್ಟಿಯಿಂದ ಈಕೆ ಸಮಸ್ಯಾತ್ಮಕವ್ಯಕ್ತಿ. ಈಕೆಯ ಹೆಸರು. ಕಾಲ, ದೇಶ, ರಾಜಾಶ್ರಯ, ಕಾವ್ಯಸಿದ್ಧಿ, ಕೃತಿ-ಈ ಮೊದಲಾದ ಸಂಗತಿಗಳು ಸಂದಿಗ್ಧವಾಗಿದ್ದು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆ ಮಾಡಿವೆ. ಇನ್ನೂ ನಿರ್ಣಯ ಸಾಧ್ಯವಾಗಿಲ್ಲ. ಕಂತಿಯನ್ನು ಕುರಿತು ಏನನ್ನಾದರೂ ಹೇಳುವುದಕ್ಕಿರುವ ಆಧಾರವೆಂದರೆ, ಈ ಮೂರು ಬಾಹ್ಯಪ್ರಮಾಣಗಳು : (೧) ಬಾಹುಬಲಿಯ (ಸು. ೧೫೬೦) 'ನಾಗಕುಮಾರ' ಚರಿತೆಯ ಒಂದು ಹೇಳಿಕೆ. (೨) ದೇವಚಂದ್ರನ (೧೮೩೮) 'ರಾಜಾವಳೀ' ಕಥೆಯ ಒಂದು ಹೇಳಿಕೆ. (೩) 'ಕಂತಿ-ಹಂಪನ ಸಮಸ್ಯೆಗಳು' ಎಂಬೊಂದು ಪದ್ಯಸಂಕಲನ.

---

3. ವಚನಕಾರ್ತಿಯರ ಮತ್ತು ಇತರ ಕಬ್ಬಿಗಿತಿಯರ ಕಾಲ ಸೂಚನೆಗೆ ಈ ಲೇಖನದಲ್ಲಿ ಶ್ರೀ ಆರ್. ನರಸಿಂಹಾಚಾರ್ಯರ 'ಕರ್ಣಾಟಕ ಕವಿಚರಿತೆ'ಯನ್ನು ಆಧಾರವಾಗಿ ಇರಿಸಿಕೊಂಡಿದೆ.

ಬಾಹುಬಲಿಯ ಉಲ್ಲೇಖದ ಪ್ರಕಾರ ತಿಳಿದು ಬರುವ ಸಾರಾಂಶ : ಈಕೆ ಶ್ರೀ ವೀರದೋರನ ಸಭೆಗೆ ಮಂಗಳ ಲಕ್ಷ್ಮಿಯೆನಿಸಿದ್ದಳು ಎಂಬುದರಿಂದ ರಾಜ ಸನ್ಮಾನಿತೆಯಾಗಿರಬಹುದು ; 'ಕಂತಿಕೆಯರು' ಎಂಬ ಗೌರವ ಬಹುವಚನವನ್ನು ಹೇಳಿರುವುದರಿಂದ ಕವಿಜನ ಪೂಜ್ಯಳಾಗಿರಬಹುದು ; 'ಅಭಿನವ ವಾಗ್ದೇವಿ' ಎಂದಿರುವುದರಿಂದ (ಇದು ಅವಳ ಬಿರುದೋ ಕವಿಯ ಮೆಚ್ಚುಮಾತೋ ಆಗಿರಬಹುದು) ಘನ ಪಂಡಿತೆಯಾಗಿರಬಹುದು.

ದೇವಚಂದ್ರನ ಉಲ್ಲೇಖದ ಪ್ರಕಾರ ತಿಳಿದು ಬರುವ ಸಾರಾಂಶ : ಸಾಮಾನ್ಯ ಸ್ತ್ರೀಯಾಗಿದ್ದ ಈಕೆ ಮತಿಪ್ರಕಾಶವನ್ನುಂಟುಮಾಡುವ ಔಷಧಿದ್ರವ್ಯ ವೆನಿಸಿದ ಜ್ಯೋತಿಷ್ಮತೀತೈಲಪಾನ ಮಾಡಿ ವಿದ್ಯಾವಿಶಾರದೆಯಾದಳು. ಅನಂತರ ಅದರ ಬಲದಿಂದ (ಅಭಿನವ) ಪಂಪನಂಥ ಸಮರ್ಥಕವಿಯ ಪ್ರಶ್ನೆ ಗಳನ್ನು ಸುಲಭವಾಗಿ ಬಿಡಿಸಬಲ್ಲವಳಾಗಿ ರಾಜಾಸ್ಥಾನದ ಕವಿವರ್ಗದಲ್ಲಿ ಹಿರಿಯ ಮನ್ನಣೆಯನ್ನು ಗಳಿಸಿದಳು.

ಕಂತಿ-ಹಂಪನ ಸಮಸ್ಯೆಗಳು ; ಈ ಹೆಸರಿನ ಪದ್ಯಸಂಕಲನ ಗ್ರಂಥ ವೊಂದು ದೊರೆತು ಅಚ್ಚಾಗಿದೆ. ಇದರಲ್ಲಿ ಶಬ್ದಾರ್ಥ ಚಮತ್ಕಾರಗಳಿರುವ ಕೆಲವು ಸಮಸ್ಯೆಗಳು ಪ್ರಶ್ನೋತ್ತರ ರೂಪದಲ್ಲಿವೆ. ಇಂತಹ ಕೃತಿಗಳು ಪ್ರಾಯಶಃ ಸಂಸ್ಕೃತದಲ್ಲಿ ಹಲವು ಇವೆಯಾದರೂ ಕನ್ನಡದಲ್ಲಿ ಸದ್ಯಃ ಇದು ಒಂದೇ. ಕಂತಿಯೂ ಹಂಪನೂ ಪರಸ್ಪರ ನಡೆಸಿದ ಸಮಸ್ಯಾ ಸ್ಪರ್ಧೆಯನ್ನು ಈ ಪದ್ಯಗಳಿಂದ ತಿಳಿಯಬಹುದು. ಈ ಪದ್ಯಗಳಲ್ಲಿ ಕಂತಿಯ ಹೆಮ್ಮೆ ಹೆಗ್ಗಳಿಕೆ ಗಳೂ ಆಶುಕವಿತ್ವಶಕ್ತಿಯೂ ಪರಿಸ್ಫುಟಗೊಂಡಿವೆ. ಇಲ್ಲಿ ಕವಿತ್ವದ ಅಭಿವ್ಯಕ್ತಿ ಗಿಂತ ಬುದ್ಧಿಚಮತ್ಕಾರದ ಪ್ರದರ್ಶನ, ಸಮಯ ಸ್ಫೂರ್ತಿಯ ಜಾಣ್ಮೆ ಮೇಲಾಗಿ ಕಾಣುತ್ತವೆ. ಪದರಚನೆಗೆ ಉಚಿತವಾದ ಸೌಲಭ್ಯ ಪದನ್ಯಾಸದಲ್ಲಿ ಕಾಣುತ್ತದೆ, ಆಪಾತತಃ ಅಸಂಬದ್ಧವೂ ಅಸಾಧ್ಯವೂ ಆಗಿ ತೋರುವ ಕೊನೆಯ ಪಾದದ ಅಭಿಪ್ರಾಯವೊಂದು, ಉಚಿತವಾದ ಮೂರು ಪಾದಗಳನ್ನು ಹಿಂದೆ ಸೇರಿಸುವು ದರಿಂದ ಸಂಬದ್ಧವೂ ಸ್ವಾರಸ್ಯವೂ ಆಗಿ ಪರಿಣಮಿಸುತ್ತದೆ. ಯಾವುದಾದರೂ ಸಾಧಾರಣವಾದ ನಾಲ್ಕೈದು ಪದಗಳಿಂದ ಅರ್ಥಸಾಮಂಜಸ್ಯವಿರುವ ಪದ್ಯ

ವೊಂದನ್ನು ರಚಿಸುವುದು, ಮೂಲ ಸಮಸ್ಯೆಯ ಅರ್ಥವೈಪರೀತ್ಯವು ಹೋಗುವಂತೆ ಶಬ್ದವೊಂದನ್ನು ಭಿನ್ನಾರ್ಥದಲ್ಲಿ ಬಳಸಿ ಪದ್ಯವೊಂದನ್ನು ರಚಿಸುವುದು, ನಿರ್ದಿಷ್ಟೋಚ್ಚಾರಣೆಯ ಅಕ್ಷರಗಳನ್ನು ಮಾತ್ರ ಉಪಯೋಗಿಸಿ ಪದ್ಯವೊಂದನ್ನು ರಚಿಸುವುದು, ಅಕ್ರಮ ಶಬ್ದಾನ್ವಯದಿಂದ ಆಗುವ ಅರ್ಥ ವೈಪರೀತ್ಯವನ್ನು ಕಳೆದು ಕ್ರಮಾನ್ವಯವುಂಟಾಗುವಂತೆ ಪದ್ಯವನ್ನು ಸರಿಪಡಿಸುವುದು, ಒಗಟುಗಳ ಜಾತಿಯ ಪದ್ಯಗಳು–ಈ ಮೊದಲಾದ ಬಂಧ ಚಮತ್ಕಾರಗಳನ್ನು ಇಲ್ಲಿ ನಿದರ್ಶಿಸಲಾಗಿದೆ. ಹಂಪನು ಹೆಗ್ಗಳಿಕೆಯ ಕಂತಿಯಿಂದ ಹೊಗಳಿಸಿಕೊಳ್ಳುವ ಅಪೇಕ್ಷೆಯಿಂದ ಪಂಥವನ್ನು ಹೂಡಿ ಸತ್ತವನಂತೆ ನಟಿಸಿ ಮಲಗಿದನಂತೆ. ಆಗ ಆಪ್ತವಿಯೋಗದಿಂದ ದುಃಖಭರಿತಳಾದ ಕಂತಿ ಅವನ ಗುಣಾತಿಶಯವನ್ನು ಕಂಠೋಕ್ತವಾಗಿ ಕೀರ್ತಿಸಿದಳಂತೆ. ಥಟ್ಟನೆ ನಾಗಚಂದ್ರನೆದ್ದು ಪಂಥವನ್ನು ಗೆದ್ದುದಾಗಿ ಕೂಗಿಕೊಂಡನಂತೆ !

ಈ ವೀರದೋರ ಅಥವಾ ದೋರರಾಯ ಯಾರು ? ಪಂಪಕವಿ ಯಾರು ? ಹೊಯ್ಸಳಪ್ರಭು ೧ ನೆಯ ಬಲ್ಲಾಳರಾಜನೇ (ಕ್ರಿ.ಶ. ೧೧೦೦–೧೧೦೬) ಆ ದೊರೆಯೆಂದೂ, ಅವನ ಆಸ್ಥಾನಕವಿಯಾಗಿದ್ದಿರಬಹುದಾದ ಅಭಿನವಪಂಪ ನಾಗಚಂದ್ರನೇ ಆ ಕವಿಯೆಂದೂ ಕವಿಚರಿತೆಕಾರರು ಊಹಿಸಿದ್ದಾರೆ. ಹಿಂದೆ ಹೇಳಿದ ೩ ಬಾಹ್ಯಪ್ರಮಾಣಗಳೇ ಅವರಿಗೆ ಆಧಾರ,

ಮೇಲಿನ ೩ ಬಾಹ್ಯಪ್ರಮಾಣಗಳೂ ನಂಬಿಕೆಗೆ ಅರ್ಹವಲ್ಲ ಎಂಬ ಪ್ರತಿವಾದವನ್ನು ಡಾ|| ಎ. ವೆಂಕಟಸುಬ್ಬಯ್ಯನವರು ಸವಿಸ್ತಾರವಾಗಿ ಹೂಡಿದ್ದಾರೆ.[4] ದೋಷರಹಿತವಾದ ಬೇರೆ ಆಧಾರಗಳು ದೊರೆಯುವವರೆಗೆ ಕಂತಿಯೆಂಬ ಕಬ್ಬಿಗಿತಿಯೇ ಇರಲಿಲ್ಲವೆಂಬ ತಾತ್ಕಾಲಿಕ ನಿರ್ಣಯಕ್ಕೆ ಬಂದು ಮುಟ್ಟಿದ್ದಾರೆ. ಈ ಪ್ರತಿವಾದವನ್ನು ಕವಿಚರಿತೆಕಾರರು ಖಂಡಿಸಿದ್ದಾರೆ.[5] ಡಾ॥ ರಂ, ಶ್ರೀ. ಮುಗಳಿಯವರು ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಆ ಕಬ್ಬಿಗಿತಿಯ ವಿಷಯವನ್ನು ಪ್ರಸ್ತಾವಿಸುವಾಗ ಮತ್ತೆರಡು ಸಂದೇಹಗಳನ್ನು ಜತೆಗೂಡಿಸಿದ್ದಾರೆ (ಪು. ೧೩೧). ಕೊನೆಗೊಂದು ನಿರ್ಣಯವನ್ನೂ

---

4. ನೋಡಿ : ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ, ಪು. 249-259.
5. ರಾ. ನರಸಿಂಹಾಚಾರ್ ; ಕರ್ಣಾಟಕ ಕವಿಚರಿತೆ, iii, ಪೀಠಿಕೆ, ಪು. 78-9.

ಸೂಚಿಸಿದ್ದಾರೆ. ಈ ಸಂಬಂಧವಾದ ಪ್ರತಿವಾದಗಳನ್ನೂ ಸಂದೇಹಗಳನ್ನೂ ಸಾಧ್ಯವಾಗುವ ಸಮಾಧಾನಗಳನ್ನೂ ಇಲ್ಲಿ ವಿವರಿಸಲು ಅವಕಾಶವಿಲ್ಲ.

ಈ ವಿಚಾರದಲ್ಲಿ ಸದ್ಯಃ ಇಷ್ಟು ಹೇಳಬಹುದು. ದೇವಚಂದ್ರನ ಹೇಳಿಕೆಗೆ (ಹಂಪೆಗನನ್ನೂ ಕಂತಿಯನ್ನೂ—ಕುಂತಿ ಎಂದಿರುವುದು ಲೇಖನ ಸ್ಖಾಲಿತ್ಯವೇ ಇರಬೇಕು— ಒಂದೆಡೆಯಲ್ಲಿ ತಂದು ಹೇಳಿರುವ ಅನಿರ್ದಿಷ್ಟ ಕಾಲಕರ್ತೃಕವಾದ ಮುದ್ರಿತ 'ನೀತಿಸಾರ'ದ ಉಲ್ಲೇಖವನ್ನೂ ಇಲ್ಲಿ ಸೇರಿಸಬಹುದೆಂದು ತೋರುತ್ತದೆ.) ಬಾಹುಬಲಿಯ ಉಲ್ಲೇಖವೂ, ಕಂತಿಹಂಪನ ಸಮಸ್ಯೆಗಳೂ ಒಂದು ಪಕ್ಷ ಆಧಾರವಾಗಿದ್ದು, ಅಪ್ರಮಾಣಿತವೆಂದು ತೋರಿ ಅಂಗೀಕಾರ ಯೋಗ್ಯವೆನಿಸದೇ ಹೋದರೂ, ಬಾಹುಬಲಿಯ ಹೇಳಿಕೆಯನ್ನು ಪ್ರಮಾಣಾರ್ಹವೆಂದು ಸ್ವೀಕರಿಸಲು ಅಡ್ಡಿಯಿಲ್ಲ. ಡಾ|| ರಂ. ಶ್ರೀ. ಮುಗಳಿಯವರು ಹೇಳಿರುವ ನಿರ್ಣಯ ಸದ್ಯಃ ಸರಿಯಾದುದು: "೧೨ನೇ ಶತಮಾನಕ್ಕೆ ಮುಂಚೆ ಬಾಹುಬಲಿಗೆ ಪೂರ್ವಿಕಳಾಗಿ ಕಂತಿ(ಕೆ)ಯೆಂಬ ಕವಯಿತ್ರಿ ಆಗಿಹೋಗಿರಬಹುದು. ಅಭಿನವಪಂಪ—ದೋರರಾಯ ಇವರ ಹೆಸರಿನ ಸಂಬಂಧ ಚಾರಿತ್ರಿಕ ಸತ್ಯವಾಗದೇ ಹೋದರೂ ಅವಳ ಅಸ್ತಿತ್ವವೇ ಕಲ್ಪಿತವಾದುದೆನ್ನುವುದು ಸರಿಯಲ್ಲ." 6

ಹನ್ನೆರಡನೆಯ ಶತಮಾನ

ವೀರಶೈವ ಧರ್ಮದಲ್ಲಿ ಸ್ತ್ರೀಯರಿಗೆ ಪುರುಷರೊಂದಿಗೆ ಸರ್ವಪ್ರಕಾರವಾದ ಸಮಾನ ಸ್ಥಾನಮಾನಗಳು ದೊರೆತು ಅವರು ತಮ್ಮ ಶ್ರೇಯಸ್ಸಿಗೆ ಸ್ವತಂತ್ರರಾಗಿ ಶ್ರಮಿಸುವುದು ಸಾಧ್ಯವಾಯಿತು. ಸಂಸಾರ ನಿರ್ವಹಣೆಯಲ್ಲಿಯೂ ಪುರುಷಾರ್ಥ ಸಾಧನೆಯಲ್ಲಿಯೂ ತಮ್ಮ ಸತ್ತ್ವಶಕ್ತಿಯನ್ನೂ ತೋರಲು ಅವಕಾಶವಾಯಿತು. ಈ ಎರಡರ ಆಯ್ಕೆಯಲ್ಲಿಯೂ ಆಚರಣೆಯಲ್ಲಿಯೂ ಅವರಿಗೆ ಬೇಕಾದ ಹಾಗೆ ಸ್ವಾತಂತ್ರ್ಯವೂ ಸೌಲಭ್ಯವೂ ಸಾಧ್ಯವಾಯಿತು. ವಿವಾಹಿತವಾದರೆ ಪುರುಷರ ಭೋಗ ಸಾಮಗ್ರಿಯೆನಿಸಬೇಕಾದ, ಗೃಹಕೃತ್ಯನಿರ್ವಹಣದ ತೊತ್ತಾಗಬೇಕಾದ ಆವಶ್ಯಕತೆಯಿರಲಿಲ್ಲ. ಸಾಮಾನ್ಯವಾಗಿ ಸಮರಸ ದಾಂಪತ್ಯದ ಸೌಭಾಗ್ಯವೇ ಅವರ

---

6. ರಂ. ಶ್ರೀ. ಮುಗಳಿ: 'ಕನ್ನಡ ಸಾಹಿತ್ಯ ಚರಿತ್ರೆ', ಪು. 130-1.

ಪಾಲಿಗೆ ದೊರೆಯುತ್ತಿತ್ತು. ಪತಿ ಪತ್ನಿಯರು ಶಿವಭಕ್ತರೂ ಶಿವಾಚಾರನಿಷ್ಠರೂ ಆಗಿ ಸಂಸಾರದಲ್ಲಿ ಆಧ್ಯಾತ್ಮ ಸಾಧನೆಯಲ್ಲಿ ನೆರವಾಗುತ್ತಿದ್ದರು. ದಾಂಪತ್ಯ ವೆಂದರೆ ಧರ್ಮಾವಿರುದ್ಧವಾದ ಭೋಗನಿಷಿದ್ಧವಾದ ಶುದ್ಧ ಜೀವನವೆಂದು ಅವರು ದೃಢವಾಗಿ ನಂಬಿದ್ದರು. ತಪ್ಪೊಪ್ಪಿನ ನಡವಳಿಕೆಯಲ್ಲಿ ಪರಸ್ಪರ ಮಾರ್ಗ ದರ್ಶನ ಪಡೆಯುತ್ತಿದ್ದರು. ಗಂಡುಹೆಣ್ಣೆಂಬ ಭೇದಭಾವ ಅಜ್ಞಾನಮೂಲ ವಾದ್ದು. ದೇಹೋಪಾಧಿಯಿಂದ ಭಿನ್ನತೆಯಲ್ಲದೆ ಆ ತ್ಮ ಸ್ವ ರೂ ಪ ದಿ ಂ ದ ಲ್ಲ ಎಂಬುದು ನಿಚ್ಚಟವಾದ ತಿಳುವಳಿಕೆಯಾಗಿತ್ತು. ಒಂದು ವೇಳೆ ವಿವಾಹಿತರಾಗದೆ ಉಳಿದರೆ, ವಿವಾಹವಾದರೂ ಅದು ವೀರಶೈವ ಧರ್ಮ ಸಮ್ಮತವಾಗದೆ ಶೈವವ್ರತ ಭ್ರಷ್ಟರಾಗಬೇಕಾಗಿಬಂದರೆ 'ಶರಣಸತಿ ಲಿಂಗಪತಿ' ಭಾವದಿಂದ ಶಿವೋಪಾಸನೆ ಮಾಡುತ್ತಿದ್ದರು. ಅವರಿಗೆ ದೀಕ್ಷೆ ಮತ್ತು ಷಟ್ಸ್ಥಲ ಸಾಧನಾಮಾರ್ಗಗಳು ಕೊಡಲಾದವು ಇದರಿಂದ ಅವರು ಸ್ವಸ್ವರೂಪಜ್ಞಾನ ಪಡೆದು ಮೋಕ್ಷಗಾಮಿ ಗಳಾಗುವ ಅರ್ಹತೆ ಪಡೆದರು.

ಹೀಗೆ ದೊರೆತ ಸ್ವಾತಂತ್ರ್ಯದಿಂದ, ತಿಳುವಳಿಕೆಯಿಂದ, ಅವಕಾಶಗಳಿಂದ ಸ್ತ್ರೀಯರಲ್ಲಿ ಸ್ವಶಕ್ತಿ ಪರಿಜ್ಞಾನ, ಆತ್ಮವಿಶ್ವಾಸ, ಧರ್ಮಶ್ರದ್ಧೆ, ಶ್ರೇಯಸ್ಸಾಧನೆ ಗಳು ಪುನಶ್ಚೇತನಗೊಂಡವು. ಶಿವಶರಣರಂತೆ ಕೆಲವು ಶಿವಶರಣೆಯರು ಹಿರಿಯ ಶಿವಶರಣೆಯರ ಆದರ್ಶದ ಉಪದೇಶದ ಹೊಂಬೆಳಕಿನಲ್ಲಿ ದಾರಿನಡೆದು, ಅಧ್ಯಾತ್ಮ ಸಾಧನೆಯಲ್ಲಿ ಉನ್ನತಸ್ತರಗಳನ್ನು ಮುಟ್ಟುವುದು ಸಾಧ್ಯವಾಯಿತು. ಈ ಹಾದಿ ಯೇನೂ ಹೂವಿನ ಹಾಸಿಗೆಯಾಗಿರದೆ ಕೆಲವರಮಟ್ಟಿಗಾದರೂ ಮುಳ್ಳು ಹಾದಿಯೇ ಆಗಿದ್ದಿತೆಂಬುದು ಅಕ್ಕಮಹಾದೇವಿಯಂತಹ ಶಿವಶರಣೆಯರ ಬದುಕಿ ನಿಂದ ತಿಳಿಯಬಹುದಾಗಿದೆ. ಜೀವನದಲ್ಲಿ ಈ ಶಿವಶರಣೆಯರ ಸ್ಥಾನಮಾನಗಳೇ ನಿದ್ದರೂ, ಎಂತಹವೇ ಉಪಜೀವನದ ವೃತ್ತಿಗಳನ್ನು ಅವರು ಕೈಗೊಂಡಿದ್ದರೂ, ಬದುಕಿನ ಬಹುಭಾಗವನ್ನು ಬಡತನದ ಬನ್ನಬವಣೆಗಳಲ್ಲಿಯೇ ಕಳೆದಿರಬಹು ದಾದರೂ ಅವರು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿರುವ ಉಜ್ವಲ ಶೈವನಿಷ್ಠೆ, ನಿರ್ಮಲ ಧರ್ಮಶ್ರದ್ಧೆ, ಸುಸಂಸ್ಕೃತ ಮನೋಧರ್ಮ, ಉನ್ನತ ಅಧ್ಯಾತ್ಮಸಾಧನೆ, ಆಶ್ಚರ್ಯಕರ ಭಕ್ತಿ ಜ್ಞಾನ ವೈರಾಗ್ಯಗಳು ಕನ್ನಡ ಸಂಸ್ಕೃತಿಯ ಹಿರಿತನದ ಪ್ರತೀಕಗಳಾಗಿವೆ.

ಈ ಶಿವಶರಣೆಯರು ಸಾತ್ತ್ವಿಕರು, ಸಾಧಕರು, ಭಕ್ತಿ ಜ್ಞಾನ ವೈರಾಗ್ಯ ಸಂಪನ್ನರು. ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಧಾರ್ಮಿಕ ಚರ್ಚೆಗಳಲ್ಲಿ ಇವರು ಭಾಗವಹಿಸುತ್ತಿದ್ದುದೇ ಅಲ್ಲದೆ ತಮ್ಮ ಗಂಡಂದಿರಿಗೆ ಸಮಯೋಚಿತವಾದ ಸಲಹೆಗಳನ್ನೂ ತತ್ತ್ವೋಪದೇಶವನ್ನೂ ಕೊಟ್ಟು ಮಾರ್ಗದರ್ಶನ ಮಾಡುತ್ತಿದ್ದ ನಿದರ್ಶನಗಳೂ ಇವೆ. ಬಸವಣ್ಣನವರ ಲಿಂಗೈಕ್ಯದ ಸಂದರ್ಭದಲ್ಲಿ ಶಿವನ ಸರ್ವವ್ಯಾಪ್ತತ್ವವನ್ನು, ಅದರ ಅರಿವು ಮರಹಿನ ಆಳದಿಂದೆತ್ತಿ ಅವರಿಗೆ ಮನವರಿಕೆ ಮಾಡಿದ, ಅವರ ಮುದ್ದು ಮಡದಿ ನೀಲಾಂಬಿಕೆ; ಕಾಯಕದಲ್ಲಿ ನಿಷ್ಠೆಯನ್ನೂ ನಿಸ್ಪೃಹತೆಯನ್ನೂ ಶಿವಕೃಪೆ ಶಿವಭಕ್ತಿಗಳಲ್ಲಿ ನಿಶ್ಶಂಕಾ ಭಾವನೆಯನ್ನೂ ಪತಿ ಆಯ್ದಕ್ಕಿ ಮಾರಯ್ಯನಿಗೆ ಬೋಧಿಸಿದ ನಿಷ್ಠಾಭಕ್ತೆ ಅಕ್ಕಮ್ಮ; ತಾನೇ ಶಿವನೆಂಬ ತನ್ನನ್ನು ತಾನರಿಯಬೇಕೆಂಬ ಅದ್ವೈತ ಬೋಧನೆಯನ್ನು ಪತಿ ಮೋಳಿಗೆಯ ಮಾರಯ್ಯನಿಗೆ ತಿಳಿಸಿದ ತತ್ತ್ವಜ್ಞಾನಿ ರಾಣಿಮಹಾದೇವಿ–ಇವರು, ಇಂಥವರು ಆ ಪಂಕ್ತಿಗೆ ಸೇರಿದವರು. ಲೋಕದ ಕೊಂಕುಡೊಂಕುಗಳನ್ನು ನೋಡಿ ಕೆರಳಿದ ಸಾತ್ವಿಕ ಸಂತಾಪದಿಂದ ಲೋಕದ ದುಷ್ಟದೃಷ್ಟಿಗೆ ಗುರಿಯಾಗಿ ಪಾಡುಪಟ್ಟು ಕೆರಳಿದ ರಾಜಸ ಸಂತಾಪದಿಂದ ಮನಸ್ಸು ಉದ್ವಿಗ್ನಗೊಂಡು ವಚನಗಳನ್ನು ರಚಿಸಿರುವುದೂ ಉಂಟು. ಗುರು ಲಿಂಗ ಜಂಗಮ ಭಕ್ತಿಯನ್ನೂ ಶೈವಧರ್ಮದ ನಿಯಮ ನಿಷ್ಠೆಯನ್ನೂ ಸ್ವಾನುಷ್ಠಾನ ಮಾಡಿದ ಮುಕ್ತಜೀವಿ ಲಿಂಗಮ್ಮ, ಶರಣಸತಿ ಲಿಂಗಪತಿ ಭಾವದಿಂದ ಉಜ್ವಲವಾಗಿ ಶಿವೋಪಾಸನೆ ಮಾಡಿದ ಮತ್ತು ಹಿರಿಯ ಶಿವಶರಣರಿಂದಲೇ ಪ್ರಶಂಸೆಯ ಪುಷ್ಪವೃಷ್ಟಿಯನ್ನು ಕೊಂಡ ಅಕ್ಕಮಹಾದೇವಿ, ಶೈವವ್ರತಹೀನತೆ ವ್ರತಭ್ರಷ್ಟತೆಗಳನ್ನು ಕಟುವಾಗಿ ತೆಗಳಿ ಶೈವ ವ್ರತದ ಮಹತ್ತ್ವವನ್ನು ಎತ್ತಿಹಿಡಿದ ರೆಮ್ಮವ್ವೆ, ರೇಚವ್ವೆ, ಸೋಮವ್ವೆ, ವೀರಮ್ಮ, ಕಾಳವ್ವೆ, ಗುಡ್ಡವ್ವೆ, ಮಸಣಮ್ಮ, ರೇಕಮ್ಮ ಇವರ ವಚನಗಳಲ್ಲಿ ನಿದರ್ಶನಗಳನ್ನು ಕಾಣಬಹುದು. ಶರಣಸತಿ-ಲಿಂಗಪತಿ ಭಾವದಿಂದ ಶಿವೋಪಾಸನೆ ಮಾಡುವಲ್ಲಿ ಅಕ್ಕಮಹಾದೇವಿಯ ಆದರ್ಶವನ್ನೇ ಪ್ರತಿಬಿಂಬಿಸಿದ ಸತ್ಯಕ್ಕ ಮತ್ತು ಕದಿರ ರೆಮ್ಮವ್ವೆ, ಬಸವಣ್ಣನೇ ಪ್ರಾಣಾಧಾರವೆಂದೂ ಸರ್ವಸ್ವವೆಂದೂ ನಂಬಿದ್ದು ಅವನ ಲಿಂಗೈಕ್ಯದಿಂದ ನಲುಗಿಹೋದ ತಂಗಿ ನಾಗಲಾಂಬಿಕೆ, ದ್ವೈತಾದ್ವೈತ ಮೀಮಾಂಸೆಯಲ್ಲಿ ಗುರು ಅಲ್ಲಮಪ್ರಭುವಿನಿಂದಲೇ ಜ್ಞಾನಪರೀಕ್ಷೆ

ಯನ್ನು ಕೊಂಡ ವಿಚಾರವಾದಿ ಮುಕ್ತಾಯಕ್ಕ–ಇವರು ಪತಿಪ್ರೇಮದ, ಭ್ರಾತೃ ವಾತ್ಸಲ್ಯದ ಪರಮಾದರ್ಶವನ್ನು ತೋರಿದ್ದಾರೆ.

ಒಂದುಕಡೆ ಧಾರ್ಮಿಕ ಸಾಮಾಜಿಕ ಕ್ರಾಂತಿಯ ಫಲವಾಗಿ ದೊರೆತ ಸ್ವಾತಂತ್ರ್ಯದಿಂದ, ಇನ್ನೊಂದು ಕಡೆ ಸಾಹಿತ್ಯರಂಗದಲ್ಲಿ ನಡೆದ ಸಾಹಿತ್ಯಕ ಮೌಲ್ಯಗಳ ಪರಿವರ್ತನೆಯ ಫಲವಾಗಿ ದೊರೆತ ಸೌಲಭ್ಯದಿಂದ, ಸ್ತ್ರೀಯರಿಗೆ ಧರ್ಮ ಮತ್ತು ಸಾಹಿತ್ಯಗಳ ನಿಕಟ ಸಂಪರ್ಕವನ್ನು ಪಡೆಯುವುದು ಸಾಧ್ಯವಾಯಿತು. ಬಲುಮಟ್ಟಿಗೆ ಪಂಡಿತ ರಂಜನೆಯ ಗ್ರಾಂಥಿಕವೂ ಸಂಪ್ರದಾಯಬದ್ಧವೂ ಆದ ಭಾಷಾಶೈಲಿಗಳ ಗೊಡವೆಯನ್ನು ಬಿಟ್ಟು ಆಡುಮಾತಿನ 'ವಚನಶೈಲಿ'ಯಲ್ಲಿ ಮನಸ್ಸಿನ ಭಾವಗಳನ್ನೆಲ್ಲ ಸರಳ ಸಹಜವಾಗಿ ಪ್ರಕಟಿಸುವ ಸೌಲಭ್ಯ ವಚನಕಾರ್ತಿಯರಿಗೆ ತುಂಬಾ ಸಹಕಾರಿಯಾಯಿತು. ವೀರಶೈವ ಧರ್ಮದ ಸಾರವಿಚಾರವೆಲ್ಲ, ಸಾತ್ತ್ವಿಕ ಸದ್ಭಾವಗಳೆಲ್ಲ ವಚನಗಳ ರೂಪದಲ್ಲಿ ಹೊರಹೊಮ್ಮಿವೆ. ಆದರೆ ಇವುಗಳಲ್ಲಿ ಎಲ್ಲವೂ ಅನುಭವದ ಅರಳಾಗಿಯೇ ಸಿಡಿದ ಅನುಭವವಾಣಿಯೆನ್ನುವುದು ಅತ್ಯುಕ್ತಿಯಾದೀತು. ಇವುಗಳಲ್ಲಿ ಬುದ್ಧಿಪೂರ್ವಕವಾಗಿ ರಚಿಸಿದ ಅಧ್ಯಾತ್ಮ ವಿಚಾರಲಹರಿಯುಂಟು. ನೀರಸ ಧರ್ಮತತ್ತ್ವಗಳ ಪ್ರಕ್ರಿಯಾ ಪ್ರಪಂಚವುಂಟು, ಹೇರಳವಾದ ಪುನರುಕ್ತಿಗಳುಂಟು, ಶುಷ್ಕಾನುಕರಣೆಗಳುಂಟು, ದುರವಗಾಹ್ಯವೂ ದುರ್ಬೋಧ್ಯವೂ ಆದ ಬೆಡಗಿನ ವಚನಗಳೆಂಬ ಒಗಟುಗಳ ಕಗ್ಗಂಟುಗಳೂ ಉಂಟು !

ಈ ದೃಷ್ಟಿಯಿಂದ ನೋಡಿದರೆ ವಚನ ಸಾಹಿತ್ಯದಲ್ಲಿ ಮತಧರ್ಮದ ಛಾಂದಸತೆ ತುಂಬಿರುವ ವಚನಗಳನ್ನು ಕಾವ್ಯಾಂಶವಿರುವ ವಚನಗಳಿಂದ ಪ್ರತ್ಯೇಕಿಸಿ ಪ್ರತಿಯೊಬ್ಬ ವಚನಕಾರ್ತಿಯ ನೆಲೆಬೆಲೆಗಳನ್ನು ಗುರುತಿಸಬೇಕಾಗುತ್ತದೆ. ಅಕ್ಕಮಹಾದೇವಿಯಲ್ಲಿ ತತ್ತ್ವಜ್ಞಾನವೂ ಕವಿಸ್ವಭಾವವೂ ಸಮಸಮವಾಗಿ ಮೇಲುಮಟ್ಟದಲ್ಲಿರುವುದು ಕಾಣುತ್ತದೆ. ಉಳಿದವರಲ್ಲಿ ಇವು ಈ ಪ್ರಮಾಣದಲ್ಲಿಯೇ ಇಲ್ಲವಾದರೂ ಯಥೋಚಿತವಾಗಿ ಇವುಗಳ ಹೊಂದಿಕೆಯುಂಟು. ಗಣನಾರ್ಹವಾದ ಸಂಖ್ಯೆಯಲ್ಲಿ ಒಂದಿಬ್ಬರ ವಚನಗಳು ದೊರೆತಿವೆಯಾದರೂ ಉಳಿದ ಹಲವರ ವಚನಗಳು ಕೇವಲ ಪ್ರಾತಿನಿಧಿಕವಾಗಿ ಕೆಲವೇ ಕೆಲವು ದೊರೆ

ತಿವೆ. ಇವುಗಳಿಂದಲೇ ಅವರ ವ್ಯಕ್ತಿತ್ವವನ್ನೂ ಕಾವ್ಯಶಕ್ತಿಯುನ್ನೂ ನಿರ್ಧರಿಸುವುದು ಸಾಧ್ಯವಿಲ್ಲ. ಅಲ್ಲದೆ ಆತ್ಮ ಸಂವಾದಿಯಾದ ವಚನಗಳಿಗಿಂತ ಮತ ಸಂಬಂಧಿಯಾದವೇ ಹೆಚ್ಚು. ಕಾವ್ಯಾಂಶವಿರುವ ವಚನಗಳು ನಿಜವಾಗಿ ಚಿತ್ತಾಕರ್ಷಕವಾಗಿವೆ. ಸೂಕ್ಷ್ಮವಾದ ಜೀವನಾನುಭವಗಳನ್ನೂ ಗಹನವಾದ ಆಧ್ಯಾತ್ಮಿಕ ಅನುಭವಗಳನ್ನು ವ್ಯಕ್ತಪಡಿಸುವುದರಲ್ಲಿ ಸಹಜೋಕ್ತಿಯಿದ್ದು ಹೃದ್ಯವಾಗಿದೆ. ರೂಪಕ, ಉಪಮೆ, ದೃಷ್ಟಾಂತ, ಪ್ರಾಸಾನುಪ್ರಾಸ ಮೊದಲಾದ ಅಕ್ಲಿಷ್ಟ ಅಲಂಕಾರಗಳ ಚೆಲುವಿದೆ. ಬಹುತೇಕ ಅಲಂಕಾರಗಳು ಕವಿಸಮಯಗಳಾಗಿರದೆ, ವ್ಯಕ್ತಿವೈಶಿಷ್ಟ್ಯದಿಂದ ಲೌಕಿಕ ಜೀವನದ ಪರಿಸರದಿಂದ ಹೊಮ್ಮಿ, ಸಹಜತೆ ನವೀನತೆಗಳ ಕಾಂತಿಯಿಂದ ಕೂಡಿ, 'ಮುತ್ತಿನ ಹಾರದಂತೆ' 'ಸ್ಫಟಿಕದ ಶಲಾಕೆಯಂತೆ' ಮಿರುಗುತ್ತವೆ. ಅದರೆ ಎಲ್ಲೆಡೆಗೂ ಇದು ಹೀಗೇ ಇಲ್ಲ. ವ್ಯಕ್ತಿವೈಶಿಷ್ಟ್ಯವುಳ್ಳ ಹಿರಿಯ ಶರಣಶರಣೆಯರ ಪ್ರಭಾವ ಮತ್ತು ಸಾದೃಶ್ಯ, ಮಾತು, ಅಭಿಪ್ರಾಯ, ಅಲಂಕಾರ, ಶೈಲಿ—ಈ ಮೊದಲಾದ ವಿವರಗಳಲ್ಲಿ, ಕಿರಿಯರ ವ್ಯಕ್ತಿತ್ವದ ಮತ್ತು ವಚನರಚನೆಯ ಮೇಲೆ ಆಗಿರುವುದನ್ನು ಕಾಣಬಹುದು.

ಅಕ್ಕಮಹಾದೇವಿ (ಸು. ೧೧೬೦)

ಈಕೆ ವೀರಶೈವ ಧರ್ಮದ ಅಗ್ರೇಸರರಾದ ಅಲ್ಲಮಪ್ರಭು ಮತ್ತು ಬಸವೇಶ್ವರರ ಸಮಕಾಲೀನಳು; ವೀರಶೈವ ಧರ್ಮ ಮತ್ತು ಸಾಹಿತ್ಯದ ದೃಷ್ಟಿಯಿಂದ ಈಕೆಯ ಹೆಸರು ಶಾಶ್ವತವಾಗಿ ಉಳಿಯುವಂಥದು. ಎರಡರಲ್ಲಿಯೂ ಈಕೆಯದು ಬಸವಣ್ಣನವರ ಮಾರ್ಗ. ಭಕ್ತಿ ಜ್ಞಾನ ವೈರಾಗ್ಯಗಳ ಕಠೋರ ಸಾಧನೆಯಲ್ಲಿ ವಚನಾಮೃತದ ವಾಗ್ವೈಖರಿಯಲ್ಲಿ ವ್ಯಕ್ತಿವೈಶಿಷ್ಟ್ಯವುಳ್ಳವಳು ಈಕೆ. ಪ್ರಾಚೀನರೂ ಆಧುನಿಕರೂ ಈಕೆಯ ವಚನಗಳ ಸಂದರ್ಭ ವಿಶೇಷಗಳನ್ನು ಸ್ಥೂಲವಾಗಿ ಗುರುತಿಸಿ ಪೃಥಕ್ಕರಿಸಿ, ಸಾಧ್ಯವಾದಂತೆ ಆಕೆಯ ಜೀವನ ಚಿತ್ರವನ್ನು ರಚಿಸಲು ಪ್ರಯತ್ನಿಸಿದ್ದಾರೆ. ಮಹಾದೇವಿ ಅಕ್ಕನ ರಗಳೆ—ಪುರಾಣ ಸಾಂಗತ್ಯ ಹಿಂದೆ ರಚನೆಯಾಗಿವೆ. ಇವುಗಳಲ್ಲಿ ಈಕೆಯ ಜೀವನವನ್ನು ಕಾವ್ಯ ಸಹಜವಾದ ಕಲ್ಪಕ ಮಾರ್ಗದಲ್ಲಿಯೋ ಪೌರಾಣಿಕ ಮಾರ್ಗದಲ್ಲಿಯೋ ಶ್ರದ್ಧಾ ಭಕ್ತಿ ಸಮನ್ವಿತ ವೀರಪೂಜಾಮಾರ್ಗದಲ್ಲಿಯೋ ವಿವರಿಸಿರುವುದು ಕಾಣುತ್ತದೆ. ಇವರಿಂದ ಘಟನೆಗಳ ನಿರೂಪಣೆಯಲ್ಲಿ ಏಕಸೂತ್ರತೆಯಿಲ್ಲದಿರುವುದು ಕಾಣು

ತ್ತದೆ. ಆಕೆಯ ವಿವಾಹ ಸಮಸ್ಯೆಯನ್ನೇ ಇವಕ್ಕೆ ಉದಾಹರಣೆಯಾಗಿ ಕೊಡಬಹುದು. ಈಕೆಯ ಆತ್ಮೀಯ ವಚನಗಳು ಅಧಿಕ ಸಂಖ್ಯೆಯಲ್ಲಿ ದೊರೆತ ಹೊರತು ಈಕೆಯ ಜೀವನ ಚಿತ್ರ ನೈಜವಾಗದು, ಕಳೆಗೊಳ್ಳದು. ಈಕೆಯ ಜೀವನವನ್ನು ಕಾವ್ಯರೂಪದಲ್ಲಿ ಮೊದಲು ಬರೆದ ಕವಿ ಹರಿಹರ. ಈತನ ಪ್ರಕಾರ 'ಅಕ್ಕನು ತನಗಿಷ್ಟವಿಲ್ಲವಾದರೂ ಕೌಶಿಕನನ್ನು ಮದುವೆಯಾಗಬೇಕಾಯಿತು. ಅವನು ಅವಳಿಗೆ ಕೊಟ್ಟ ಭಾಷೆಯನ್ನು ಪಾಲಿಸದೆ ಹೋದನು.; ಅವಳಿಗೆ ವೈರಾಗ್ಯ ಉಂಟಾಗಿ ಪರಿವ್ರಾಜಕಳಾಗಿ ಶ್ರೀಶೈಲಕ್ಕೆ ಹೊರಟು ಬಂದು ಚೆನ್ನಮಲ್ಲಿಕಾರ್ಜುನನ ಸಂಗವನ್ನು ಪಡೆದಳು.' ಕೆಲವೆಡೆ ಈಕೆ ಕಲ್ಯಾಣದ ಶಿವಾನುಭವ ಮಂಟಪಕ್ಕೆ ಬಂದಳೆಂದೂ ಅಲ್ಲಿ ಇತರ ಶರಣರು ಈಕೆಯನ್ನು ಪರೀಕ್ಷಿಸಿದಂತೆಯೂ ಹೇಳಿದೆ. ಒಟ್ಟಿನಲ್ಲಿ "ಮಹಾದೇವಿ ಅಕ್ಕನ ಜೀವನಚರಿತ್ರೆ ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥಸಾಧನೆಯ ಒಂದು ಮಹಾಪ್ರಕರಣ."

ಕೃತಿಗಳು : ವಚನಗಳು, ಯೋಗಾಂಗ ತ್ರಿವಿಧಿ.ಸೃಷ್ಟಿಯ ವಚನ, ಅಕ್ಕಗಳ ಪೀಠಿಕೆ.[7] ಇವುಗಳಲ್ಲಿ ಕೊನೆಯದರ ಹೊರತು ಉಳಿದವು ದೊರೆತು ಅಚ್ಚಾಗಿವೆ. 'ಅಕ್ಕಗಳು ನಿರೂಪಿಸಿದ ಕೊರವಂಜಿ' ಎಂಬೊಂದು ಲಘುರಚನೆಯೂ ಈಕೆಯ ಹೆಸರಿನಲ್ಲಿಯೇ ಅಚ್ಚಾಗಿದೆ. ಇದಕ್ಕೆ ವಚನಾರ್ಥವೆಂಬ ಒಂದು ವಿವರಣೆಯೂ ಉಂಟು. ಈಕೆಯ ಕೃತಿಗಳಲ್ಲಿ 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತವಿರುತ್ತದೆ. (ಮಹಾದೇವಿ ಅಕ್ಕನ ಸಾಂಗತ್ಯ ಎಂಬ ಗ್ರಂಥದಲ್ಲಿ ಈಕೆಯ ಏಳು ವಚನಗಳು 'ಗಿರಿಮಲ್ಲಿಕಾರ್ಜುನ' ಎಂಬ ಅಂಕಿತದೊಡನೆ ದೊರೆಯುವುವು.)

೧. **ವಚನಗಳು :** ಶಿವಶರಣೆಯರ ಗುಂಪಿನಲ್ಲಿ ಮಹಾದೇವಿ ಅಕ್ಕನದೆ ಅತ್ಯಧಿಕ ಸಂಖ್ಯೆಯ ವಚನಗಳು. ಈಗ ಅಚ್ಚಾಗಿರುವ ವಚನಗಳ ಸಂಖ್ಯೆ ಸುಮಾರು ೨೫೦. ಅಕ್ಕನ ವಚನಗಳಲ್ಲಿ ಹೆಚ್ಚು ಭಾಗ ಸಾಹಿತ್ಯಸೌರಭದಿಂದ ಪರಿಮಳಿಸಿ ಆಕೆಗೆ ಸಾಹಿತ್ಯ ಕ್ಷೇತ್ರದಲ್ಲಿ ಶಾಶ್ವತ ಸ್ಥಾನವನ್ನು ಕಲ್ಪಿಸಿದೆ. ವಚನಗಳಲ್ಲಿ ಕಾಣು ಬರುವ ಈಕೆಯ ಮನೋಧರ್ಮವನ್ನು ಹೀಗೆ ಸಂಗ್ರಹಿಸಬಹುದು :

---

7. ರಾ. ನರಸಿಂಹಾಚಾರ್ : ಕರ್ಣಾಟಕ ಕವಿಚರಿತೆ (I-188)
8. ಶರಣ ಸಾಹಿತ್ಯ (1, 352, 353)

ಸಾಮಾನ್ಯವಾಗಿ ಪರೋಪದೇಶವಾಗಲಿ ಸಮಾಜ ವಿಮರ್ಶೆಯಾಗಲಿ ಇಲ್ಲಿ ಅಷ್ಟಾಗಿ ಕಾಣುವುದಿಲ್ಲ. ಆತ್ಮ ಸಾಧನೆಯ ಹಲವಾರು ಸ್ಥಿತ್ಯಂತರಗಳನ್ನು ಇಲ್ಲಿ ನಾವು ಕಾಣುತ್ತೇವೆ. ಈ ವಚನ ವೀಣೆಯಲ್ಲಿ ಮಿಡಿಯುವ ಶ್ರುತಿಮೂಲ ವೆಂದರೆ ಇಷ್ಟದೈವವಾದ ಚೆನ್ನಮಲ್ಲಿಕಾರ್ಜುನನನ್ನು ಪ್ರೇಮಭಾವದಿಂದ ಒಲಿಯುವುದು, ಒಲಿಸುವುದು, ಒಡವೆರೆಯುವುದು. ಶರಣಸತಿ–ಲಿಂಗಪತಿ ಎಂಬ ವಿವರವ ನಾನರಿಯೆ' ಎಂಬುದು ಆಕೆಯ ಮಾತಾದರೂ, ಆ 'ವಿವರ'ವನ್ನರಿ ಯಲು ಆಕೆಯೇ ಇತರರಿಗೆ ಪರಮಾದರ್ಶ, ಪರಮಗುರು. ಈ ಭಾವದಿಂದ ಭಗವದುಪಾಸನೆ ಮಾಡಿದ ಶರಣ ಶರಣೆಯರಲ್ಲಿ ಯಾರಲ್ಲಿಯೂ ಈಕೆಯ ಸಹಜತೆ ಉತ್ಕಟತೆಗಳು ಕಂಡುಬಂದಿಲ್ಲ. ಅಕ್ಕನ ಭಕ್ತಿ ಬಾಹ್ಯೋಪಚಾರಗಳ ಮೂರ್ತಿನಿಷ್ಠ ಭಕ್ತಿಯಲ್ಲ, ಅನನ್ಯಭಾವದ ಅವಿಚ್ಛಿನ್ನ ಅಂತರಂಗಭಕ್ತಿ. ತಾನು ಶಿವನಾಗುವ, ಶಿವನೇ ತಾನಾಗುವ ಅದ್ವೈತಭಕ್ತಿ, ನಿಷ್ಕಾಮಭಕ್ತಿ. ಶಿವಸಾಕ್ಷಾ ತ್ಕಾರಕ್ಕಾಗಿ ಪ್ರೇಮೋತ್ಕಂಠಿತವಾಗಿ ತುಡಿದುಕೊಳ್ಳುವ ಆಕೆಯ ಹೃದಯದ ಹಂಬಲಿಕೆ, ಕಂಡ ಮೇಲೆ ಮೂಡಿರುವ ಶಿವಾನುಭವದ ದಿವ್ಯತೃಪ್ತಿ ಆಕೆಯ ವಚನಗಳಲ್ಲಿ ರಸಾರ್ದ್ರವಾಗಿ ತೆರೆವೊರೆದಿದೆ, ಮಡುಗಟ್ಟಿದೆ. ಭಕ್ತಿ ಜ್ಞಾನ ವೈರಾಗ್ಯಗಳ ಸಾಧನೆ ಸಿದ್ಧಿಗಳಲ್ಲಿ ಆಕೆ ಬಸವಣ್ಣನವರ ಪ್ರತಿಮೂರ್ತಿ. ತನಗೆ ಗುರುವೆಂದು ತಂದೆಯೆಂದು ಅವರಲ್ಲಿ ಆಕೆಗೆ ಅಪಾರ ಭಕ್ತಿಗೌರವ. ಮಾಯೆಯ ಬಂಧನದಿಂದ ಬಿಡಿಸಿಕೊಂಡು ,ಸಾಂಸಾರಿಕ ಕಷ್ಟಕ್ಲೇಶಗಳನ್ನು ತುಳಿದಿಕ್ಕಿಅಧ್ಯಾತ್ಮ ನಿಷ್ಠೆಯ ಕಡೆಗೆ ದಿಟ್ಟ ಹಜ್ಜೆ ಹಾಕುವ ಛಲಗಾರ್ತಿ. ಹಲವು ತೆರೆದ ಕಾಯ ಕ್ಲೇಶಗಳನ್ನೂ ಲೋಗರ ಕೀಟಲೆ ಕಿರುಕುಳಗಳನ್ನೂ ಶಿವ ಶರಣರ ಮಾರ್ಮಿಕ ವಾದ ಪರೀಕ್ಷೆಗಳನ್ನೂ ಆಕೆ ಸಹಿಸುತ್ತಾಳೆ. ಆಕೆಯಾದ್ದರಿಂದ ಸಹಿಸುತ್ತಾಳೆ; ಜಯಿಸುತ್ತಾಳೆ; ಹದಗೊಳ್ಳುತ್ತಾಳೆ. ಬಸವಾದಿ ಹಿರಿಯ ಶರಣರಲ್ಲಿ ಗುರು ಭಾವವನ್ನು ತಳೆದು ಅವರ ಕರುಣೆಯ ಕಂದನೆಂದು ಹೇಳಿಕೊಳ್ಳುತ್ತಾಳೆ ; ಅವರ ಸಂಗ ಸೌಭಾಗ್ಯಕ್ಕೆ ಹಾರೈಸುತ್ತಾಳೆ. ಅಂತರಂಗ ಶುದ್ಧಿಯಿಲ್ಲದ ಸಾಮಾನ್ಯ ಶರಣರನ್ನು ಟೀಕಿಸುತ್ತಾಳೆ, ತಿದ್ದುತ್ತಾಳೆ.

೨. **ಯೋಗಾಂಗ ತ್ರಿವಿಧಿ**: ಇದರಲ್ಲಿ ೬೭ ತ್ರಿಪದಿಗಳಿವೆ. ತಾತ್ತ್ವಿಕ ವಿಷಯಗಳ ಜತೆಗೆ ವೈಯಕ್ತಿಕ ಅಂಶಗಳೂ ಇಲ್ಲಿ ಬಂದಿವೆ, ತಾತ್ತ್ವಿಕ ವಿಷಯಗಳಲ್ಲಿ ಬಹುಪಾಲು ಬೆಡಗಿನ ವಚನಗಳ ಧಾಟಿ. ಅರ್ಥ

ವಿವರಣೆ, ವ್ಯಾಖ್ಯಾನಗಳಿಲ್ಲದ ಹೊರತು ಇವು ದುರ್ಬೋಧ್ಯ. ಆದುದರಿಂದ ವಚನಗಳಲ್ಲಿ ವಿಜೃಂಭಿಸಿರುವ ರಸಾದ್ರ್ರತೆ ಭಾವನಾಶಕ್ತಿ ಇಲ್ಲಿ ಲುಪ್ತಗೊಂಡಿವೆ. ಶಬ್ದಶಕ್ತಿಗೆ ಕೊರತೆಯಿಲ್ಲವಾದರೂ ವಚನಗಳ ಓಜಸ್ಸು ತೇಜಸ್ಸು ಇಲ್ಲಿ ಕಾಣುವುದಿಲ್ಲ. ಅಕ್ಕನ ಅನುಭಾವ ಚಿತ್ರವಾಗಲಿ ಜೀವನ ಚಿತ್ರವಾಗಲಿ ಈ ಕೃತಿಯಲ್ಲಿ ಅಷ್ಟೇನೂ ವಿಶದಪಡುವುದಿಲ್ಲ. ಆದರೆ ತತ್ತ್ವಜ್ಞಾನ ಗುರುಭಕ್ತಿಗಳು ಚೆನ್ನಾಗಿ ಒಡಮೂಡಿವೆ. ಸಾಂಕೇತಿಕ ಮಾರ್ಗದಲ್ಲಿ ತತ್ತ್ವವನ್ನು ನಿರೂಪಿಸುವ ಪರಿಣತಿ ಆಶ್ಚರ್ಯಕರವಾಗಿದೆ. ಇದೇ ಈ ಕೃತಿಯ ವೈಶಿಷ್ಟ್ಯ.

೩. **ಸೃಷ್ಟಿಯ ವಚನ**: ಈ ಸುದೀರ್ಘವಾದ ವಚನ ವೀರಶೈವ ಧರ್ಮದ ದೃಷ್ಟಿಯಿಂದ ಸೃಷ್ಟಿಕ್ರಮವನ್ನೂ ಲಿಂಗಾಂಗ ಸ್ವರೂಪವನ್ನೂ ಶಾಸ್ತ್ರ ಪದ್ಧತಿಯಲ್ಲಿ ಸಾಂಕೇತಿಕವಾಗಿ ಪ್ರತಿಪಾದಿಸುತ್ತದೆ. ಇದು ಧಾರ್ಮಿಕ ದೃಷ್ಟಿಯಿಂದ ಮಾತ್ರ ಗಮನಾರ್ಹವಾದ ರಚನೆ. (ಈ ಕೃತಿ ಚೆನ್ನಬಸವ ರಚಿತವೆಂದು ಈಚೆಗೆ ಅಚ್ಚಾಗಿದೆಯಂತೆ [9].)

ಅಕ್ಕಗಳು ನಿರೂಪಿಸಿದ ಕೊರವಂಜಿ: ಇದು ಎಷ್ಟರಮಟ್ಟಿಗೆ ಅಕ್ಕನದೇ ರಚನೆಯೋ ಹೇಳುವುದು ಕಷ್ಟ. ಇದು ಬೆಡಗಿನ ವಚನಗಳ ಧಾಟಿಯಲ್ಲಿಯೆ ಶಿವೈಕನಿಷ್ಠೆಯನ್ನೂ ಯೋಗಸಾಧನೆಯನ್ನೂ ಪ್ರತಿಪಾದಿಸುತ್ತದೆ. ಅಕ್ಕನ ವ್ಯಕ್ತಿತ್ವ ಮತ್ತು ಸಾಹಿತ್ಯದ ದೃಷ್ಟಿಯಿಂದ ಇದು ಗಮನಾರ್ಹವಾದ ರಚನೆಯೇನಲ್ಲ.

ಸಾಹಿತ್ಯದಲ್ಲಿ ಅಕ್ಕನ ಸ್ಥಾನ: ಅಕ್ಕಮಹಾದೇವಿಯು ಕನ್ನಡ ಕಬ್ಬಿಗಿತಿಯರಲ್ಲಿ ಆದ್ಯತೆಯ ದೃಷ್ಟಿಯಿಂದ ಹೇಗೇ ಇರಲಿ ಯೋಗ್ಯತೆಯ ದೃಷ್ಟಿಯಿಂದಂತೂ ಮೊದಲಿಗಳು, ಈಕೆಯ ವಚನಗಳು ಸತ್ತ್ವಶಾಲಿಯೂ ರಸಾದ್ರ್ರವೂ ಆದ ಸಾಹಿತ್ಯ ಕೃತಿಗಳು; ಶಿವಾನುಭವದ ಬಳ್ಳಿಯಲ್ಲಿ ಅರಳಿದ ಸುಗಂಧಪುಷ್ಪಗಳು; ಶಿವಪ್ರೇಮದಿಂದ ಉತ್ಕಂಠಿತವಾದ ಹೃದಯದ ಮೂಷೆಯಲ್ಲಿ ಪುಟಗೊಂಡ ಅಪರಂಜಿ ಗಟ್ಟಿಗಳು. ಧರ್ಮದ ತನಿಗಂಪು ಮತ್ತು ಕಾವ್ಯದ ಪೆರ್ಮೆ ಅನ್ಯಾದೃಶವಾಗಿ ಇವುಗಳಲ್ಲಿ ಜತೆಗೂಡಿವೆ. ಇಲ್ಲಿ ಕಂಡು ಬರುವ ಭಕ್ತಿಭಾವದ ಲಹರಿ ಕಾವ್ಯವಾಣಿಯ ವಿಲಾಸ ಪ್ರಾಯಶಃ ಬಸವಣ್ಣ

9. ರಾ. ನರಸಿಂಹಾಚಾರ್: ಕರ್ಣಾಟಕ ಕವಿಚರಿತೆ. I-ಅನು. II, 23-4.

ನವರ ಹೊರತಾಗಿ ಅನ್ಯರಲ್ಲಿ ಕಂಡು ಬರುವುದಿಲ್ಲ. ಇದನ್ನು ಕಂಡೇ ಏನೋ 'ಓದಿಯು ಶಿವಶರಣರ ಹಲವು ವಚನಗಳಿಗೆ ಈಕೆಯ ಒಂದು ವಚನ ಸಮ' ಎಂದು ಚೆನ್ನಬಸವರಾಜ ದೇವರ ಒಂದು ವಚನದಲ್ಲಿ ಶ್ಲಾಘನೆಯಿದೆ. ಆಕೆಯ ಸಾಹಿತ್ಯಕವಾದ ಹಲವು ವಚನಗಳಲ್ಲಿ ಸಹಜ ಸುಂದರವಾದ ಅಲಂಕಾರಗಳ ಚಿತ್ರಕಲ್ಪನೆಗಳ ಬೆಡಗುಂಟು. ಧ್ವನಿಶಕ್ತಿ ರಮ್ಯತೆಯುಂಟು. ಕವಿ ಹೃದಯದಿಂದ ಸಹಜವಾಗಿ ಹೊಮ್ಮಿರುವುದರಿಂದ ಹೃದಯಸ್ಪರ್ಶಿಯಾಗಿವೆ. ಈ ಗುಣವಿಶೇಷ ದಿಂದಲೇ ಅವು ಜನಪ್ರಿಯವೂ ಆಗಿವೆ. ಕೆಲವು ವಚನಗಳು ಗಾಯನಯೋಗ್ಯ ವಾಗಿದ್ದು ಅವುಗಳಿಗೆ ರಾಗಸಂಯೋಜನವೂ ಕಾಣುತ್ತದೆ. ದಿವ್ಯವೂ ಮಧುರವೂ ಆದ ದಾಂಪತ್ಯದ ಸೂಕ್ಷ್ಮವೂ ಅನುಭವಗ್ರಾಹ್ಯವೂ ಆದ ಹಲವು ಸ್ಥಿತ್ಯಂತರಗಳು ಇಲ್ಲಿ ತೆರೆ ತೆರೆಯಾಗಿ ಹೊಮ್ಮಿವೆ. ಜೀವನಾನುಭವ ಮತ್ತು ಶಿವಾನುಭವದ ಸಂಪತ್ತನ್ನು ವರ್ಣವೊಗೆದು ಸೂಸಲು ಸಮರ್ಥವಾದ ಶಬ್ದಶಕ್ತಿ ಆಕೆಗಿದೆ. ಒಂದು ಮಾತಿನಲ್ಲಿ ಹೇಳಬಹುದಾದರೆ, ಅಕ್ಕಮಹಾದೇವಿ ಕನ್ನಡ ಸಾಹಿತ್ಯದಲ್ಲಿ ನೈಜಕವಿ, ಸಮರ್ಥ ಕವಿ. ರೂಢಿಯ ಮಹಾಕಾವ್ಯವನ್ನೋ ಲಘುಕಾವ್ಯವನ್ನೋ ರಚಿಸದೇ ಹೋದರೂ, ಕಾವ್ಯರಚನೆ ಆಕೆಯ ಉದ್ದೇಶವಲ್ಲವಾದರೂ ರಚನೆ ಯಲ್ಲಿ ಕೆಲಪಾಲು ಸಾಹಿತ್ಯಕವಲ್ಲವಾದರೂ ತನ್ನ ಕೆಲವು ವಚನ ಕೃತಿಗಳಿಂದಲೇ ಕನ್ನಡ ಕಬ್ಬಿಗಿತಿಯರಲ್ಲಿ ಆಕೆ ಸರ್ವಶ್ರೇಷ್ಠಳಾಗಿದ್ದಾಳೆ.

ಲಿಂಗಮ್ಮ (ಸು. ೧೧೬೦)

ಈಕೆ ವಚನಕಾರ ಹಡಪದಪ್ಪಣ್ಣನ ಪತ್ನಿ, ಚೆನ್ನಮಲ್ಲೇಶ್ವರನ ಶಿಷ್ಯೆ. ಈಕೆಯ ೧೧೧ ವಚನಗಳು ದೊರೆತು ಅಚ್ಚಾಗಿವೆ. ವಚನಗಳ ಅಂಕಿತ 'ಅಪ್ಪಣ್ಣಪ್ರಿಯ ಚನ್ನಬಸವಣ್ಣ'. ಸಂಸಾರಿಯಾಗಿದ್ದು ಆಧ್ಯಾತ್ಮವನ್ನು ಸಾಧಿಸಿ ಶಿವಾನುಭವಸಿದ್ಧಿಯ ಶಿಖರದತ್ತ ತೆರಳಲು ಶಕ್ತಳಾದ ಸಾರ್ಥಕ ಜೀವಿ ಲಿಂಗಮ್ಮ. ಗುರುಕಾರುಣ್ಯದಿಂದ ಶರಣರ ಕೃಪೆಯಿಂದ ತಾನು ಉದ್ಧಾರ [illegible] ಕೃತಜ್ಞತಾಭಾವ, ಮನಃಶುದ್ಧಿ ನಿಜಭಕ್ತಿಗಳಿಲ್ಲದವರ ಬಗೆಗೆ ಸಾತ್ವಿಕ ಸಂತಾಪ. ಶಿವಾಚಾರ ಮಾರ್ಗದಲ್ಲಿ ನಿಯಮನಿಷ್ಠೆಗಳ ಶುದ್ಧ ಜೀವನ [illegible], ಶಿವಶರಣರ ಮಹಾನುಭಾವತೆ, ಶಿವಾನುಭವ ಸಾಧನೆಯಲ್ಲಿ ಸ್ವಾನುಭವ ಪ್ರಕಟನೆ – ಇತ್ಯಾದಿ ಸಂಗತಿಗಳನ್ನು, ಜಟಿಲ ಪರಿಭಾಷೆಯನ್ನು ಬಳಸದ ಸುಲಭಶೈಲಿಯಲ್ಲಿ ಈಕೆಯ ವಚನಗಳು ನಿರೂಪಿಸುತ್ತವೆ. ಲಿಂಗಮ್ಮನ

ಗುರುಲಿಂಗ ಜಂಗಮಭಕ್ತಿ ಶಿವಾನುಭವ ಜ್ಞಾನ ಸಹಜಸುಂದರವಾಗಿ ವಚನಗಳಲ್ಲಿ ಪಡಿಮೂಡಿವೆ. ಬೆಡಗಿನ ವಚನಗಳೂ ಸಾಕಷ್ಟು ಸಂಖ್ಯೆಯಲ್ಲಿವೆ.

ಸಾಹಿತ್ಯ ದೃಷ್ಟಿಯಿಂದ ಇಲ್ಲಿ ಎತ್ತಿ ಹೇಳಬಹುದಾದುದೇನಿಲ್ಲ. ಅರ್ಥ ವ್ಯಕ್ತಿಗುಣ, ಬಳಕೆಯ ಅಲಂಕಾರಗಳು, ಹಿರಿಯರ ಶೈಲಿಯ ಅನುಕರಣೆ ಓದುವಾಗ ಗಮನಕ್ಕೆ ಬರುವಂಶಗಳು.

ರಾಣಿ ಮಹಾದೇವಿ (ಸು. ೧೧೬೦)

ಈಕೆ ವಚನಕಾರ ಮೋಳಿಗೆಯ ಮಾರಯ್ಯನ ಪತ್ನಿ. ರಾಜ ದಂಪತಿಗಳಾಗಿದ್ದ ಇವರು ರಾಜ್ಯಕೋಶಗಳನ್ನು ತ್ಯಜಿಸಿ ವೀರಶೈವ ದೀಕ್ಷೆಯನ್ನು ವಹಿಸಿ ಶಿವಭಕ್ತಿ ಸಂಧಾನವನ್ನು ಕೈಗೊಳ್ಳಲು ಕಲ್ಯಾಣಕ್ಕೆ ಬಂದು ಅಲ್ಲಿಯೇ ನೆಲಸಿದರೆಂದು ತಿಳಿದುಬರುತ್ತದೆ. ಈಕೆಯ ೬೯ ವಚನಗಳು ಅಚ್ಚಾಗಿವೆ, ಅಂಕಿತ: 'ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ'. ಈಕೆಯ ವಚನಗಳಲ್ಲಿ ತಕ್ಕಮಟ್ಟಿಗೆ ಜಟಿಲವೂ ಸೂಕ್ಷ್ಮವೂ ಆಗಿರುವ ತಾತ್ತ್ವಿಕ ವಿಷಯ ಸಂಗ್ರಹ ವಿಪುಲವಾಗಿರುವುದರಿಂದ ಈಕೆ ಶಿವಾಚಾರ ಮಾರ್ಗದಲ್ಲಿ ಅರಿತ ನುರಿತ ತತ್ತ್ವಜ್ಞಾನಿಯಾಗಿದ್ದಂತೆ ತೋರುತ್ತದೆ. ಶಿವಾನುಭವದಲ್ಲಿ ಈಕೆಯದು ಪರೋಪದೇಶ ಸಮರ್ಥವಾದ ಅಧಿಕಾರವಾಣಿ. ಷಟ್‌ಸ್ಥಲಸ್ವರೂಪ, ಭಕ್ತಿ ಕರ್ಮ ಜ್ಞಾನ ಸ್ವರೂಪ, ಗುರುಲಿಂಗ ಜಂಗಮನಿಷ್ಠೆ, ಶಿವಾದ್ವೈತನಿಷ್ಠೆ, ಶಿವ ಪೂಜಾಸ್ವರೂಪ -ಇತ್ಯಾದಿ ವಿಷಯಗಳನ್ನು ಈಕೆಯ ವಚನಗಳು ಕಾಣಿಸಿವೆ. ಶಿವಾದ್ವೈತ ಸಾಧನೆಯಲ್ಲಿ ಪತಿಗೆ ಸಮಯೋಚಿತ ಸಲಹೆಗಳನ್ನಿತ್ತು ಸೂಕ್ತ ಮಾರ್ಗದರ್ಶನ ನೀಡಿರುವುದಕ್ಕೆ ಸಾಕ್ಷ್ಯವಿದೆ. 'ಇವಳ ವಚನಗಳಲ್ಲಿ ಕೆಲವು ಗಂಡನ ವಚನಗಳಿಗೆ ಪ್ರತ್ಯುತ್ತರವಾಗಿವೆ' ಎಂದು ಕವಿಚರಿತೆಕಾರರು ಬರೆದಿದ್ದಾರೆ.

ಮಹಾದೇವಿ ಅಕ್ಕನ ವಚನಗಳಲ್ಲಿ ಆಕೆಯ ಸಾಧನಶೀಲ ಚೇತನದ ಕಳಕಳಿ, ವ್ಯಕ್ತಿಜೀವನದ ವೈಭವ ಪ್ರತಿಬಿಂಬಿಸಿರುವಂತೆ ಇಲ್ಲಿ ಪ್ರತಿಬಿಂಬಿಸಿಲ್ಲ. ಅಕ್ಕನದು ಭಕ್ತಿಮಾರ್ಗ. ಈಕೆಯದು ಜ್ಞಾನಮಾರ್ಗ. ಜ್ಞಾನಮಾರ್ಗದಲ್ಲಿ ಈಕೆ ಮುಕ್ತಾಯಕ್ಕನನ್ನು ಹೋಲುವಳಾದರೂ ಮುಕ್ತಾಯಕ್ಕ ವಿಚಾರವಾದಿಯಂತೆ ಮಾತನಾಡಿದರೆ ರಾಣಿ ಮಹಾದೇವಿ ದೃಷ್ಟಾನುಭಾವಿಯಂತೆ ಮಾತನಾಡಿದ್ದಾಳೆ.

ಇದರಿಂದಾಗಿ ಈಕೆಯ ವಚನಗಳಲ್ಲಿ ಹೃದಯಸ್ಪರ್ಶಿಯಾದ ಭಾವಾಂಶವು ತೀರ ಕಡಿಮೆಯಿದ್ದು, ತತ್ತ್ವಬೋಧೆಯ ಚಿಂತನಾಂಶವೇ ತುಂಬಿದ್ದು ಸಾಹಿತ್ಯ ದೃಷ್ಟಿಯ ಓದುಗರಿಗೆ ಅವು ಅಷ್ಟೇನೂ ರಂಜಕವಾಗಿಲ್ಲ ಆದರೂ ಮೇಲಿಂದ ಮೇಲೆ ಕಾಣಿಸಿಕೊಳ್ಳುವ, ತತ್ತ್ವಪುಷ್ಟಿಗೆಂದೇ ಬರುವ ಶಬ್ದ ಮತ್ತು ಅರ್ಥಾಲಂಕಾರಗಳು ಆಗಾಗ ಹೃದಯ ತುಷ್ಟಿಯನ್ನೂ ಪೂರೈಸದೇ ಇರುವುದಿಲ್ಲ. ಇವುಗಳಲ್ಲಿ ಕ್ವಚಿತ್ತಾಗಿ ಅನುಕರಣೆಯಿದ್ದರೂ ಸಾಮಾನ್ಯವಾಗಿ ನಾವೀನ್ಯವೂ, ವೈಶಿಷ್ಟ್ಯವೂ ಔಚಿತ್ಯವೂ ಸ್ವಾರಸ್ಯವೂ ಕಂಡು ಬರುತ್ತದೆ.

ಲಕ್ಕಮ್ಮ (ಸು. ೧೧೬೦)

ಈಕೆ ವಚನಕಾರ ಆಯ್ದಕ್ಕಿ ಮಾರಯ್ಯನ ಪತ್ನಿ. ಈಕೆಯ ೨೪ ವಚನಗಳು ಶೂನ್ಯಸಂಪಾದನೆಯಲ್ಲಿ ಬಂದಿವೆ. ಅಂಕಿತ : 'ಮಾರಯ್ಯಪ್ರಿಯ ಅಮರೇಶ್ವರ ಲಿಂಗ' ಈಕೆಯ ವಚನಗಳಿಂದ ಈಕೆ ಒಳ್ಳೆಯ ಶಿವಾನುಭವಿಯೂ ಶಿವಾಚಾರ ನಿಷ್ಠಳೂ ಆಗಿದ್ದಂತೆ ತಿಳಿದುಬರುತ್ತದೆ. ಈ ವಿಚಾರದಲ್ಲಿ ಈಕೆಯು ಇವಳಷ್ಟು ಜ್ಞಾನಿಯಲ್ಲದ ಪತಿಗೆ ಮಾರ್ಗದರ್ಶಕಳಾಗಿದ್ದಂತೆ ತೋರುತ್ತದೆ. ಪತಿಯನ್ನು ಕಾಯಕನಿರ್ವಹಣೆಗೆ ಪ್ರೇರಿಸುವುದು, ಕಾಯಕದಲ್ಲಿ ನಿಸ್ಪೃಹತೆ ನಿಷ್ಠೆಗಳನ್ನು ಬೋಧಿಸುವುದು, ಭಕ್ತಿಯ ಸ್ವರೂಪ, ದಾಸೋಹಶ್ರದ್ಧೆ, ಸಮರಸದಾಂಪತ್ಯ, ಜೀವನನಿರ್ಲಿಪ್ತತೆ, ಭಾವಶುದ್ಧಿ - ಈ ಮೊದಲಾದ ಭಾವನೆಗಳನ್ನು ಇಲ್ಲಿಯ ವಚನಗಳು ಕುರಿತಿವೆ.

ಈ ವಚನಗಳು ಸಾಹಿತ್ಯದೃಷ್ಟಿಯಿಂದ ಅಷ್ಟು ಉತ್ತಮವಲ್ಲದಿದ್ದರೂ ಇವುಗಳಲ್ಲಿ ಅರ್ಥವ್ಯಕ್ತಿಗುಣ ಸ್ಪಷ್ಟವಾಗಿದೆ. ಸುಂದರವೂ ಸುಲಭವೂ ಆದ ದೃಷ್ಟಾಂತಗಳು ಹೃದ್ಯವಾಗಿವೆ. ಕ್ಲಿಷ್ಟಪಾರಿಭಾಷಿಕವೂ ಜಟಿಲ ತಾತ್ತ್ವಿಕವೂ ಆದ ವಿಷಯಾಂತರಣೆ ಇಲ್ಲಿ ಇಲ್ಲದಿರುವುದರಿಂದ ವಚನಗಳ ಭಾವ ಹೃದಯ ಸ್ಪರ್ಶಿಯಾಗಿದೆ.

ಮುಕ್ತಾಯಕ್ಕ (ಸು. ೧೧೬೦)

ಈಕೆ ಶಿವಶರಣ ಅಜಗಣ್ಣನ ಸೋದರಿ. ಅಜಗಣ್ಣನು ತೀರಿಕೊಂಡಾಗ ಅವನ ಸೋದರಿಗೆ ಅಪಾರ ವ್ಯಥೆಯಾಗಿ ಪ್ರಲಾಪಿಸುವ ಸಮಯದಲ್ಲಿ ಅಲ್ಲಮ

ಪ್ರಭು ಅವಳನ್ನು ಮಹಾಜ್ಞಾನಿಯೆಂದು ತಿಳಿದು ಅವಳನ್ನು ಕುರಿತು ಕೆಲವು ಸಮಾಧಾನ ವಾಕ್ಯಗಳನ್ನಾಡಿದನು. ಅವರಿಬ್ಬರಿಗೂ ನಡೆದ ಮೇಲುಮಟ್ಟದ ತಾತ್ತ್ವಿಕವಿಷಯಗಳ ಚರ್ಚೆಯಲ್ಲಿ ಮುಕ್ತಾಯಕ್ಕನ ಪ್ರಖರ ಬುದ್ಧಿಶಕ್ತಿ ತರ್ಕ ನೈಪುಣ್ಯ ಆತ್ಮವಿಶ್ವಾಸ ತತ್ತ್ವಜ್ಞಾನ ಭ್ರಾತೃವಾತ್ಸಲ್ಯದ ಕೋಮಲಾಂತಃಕರಣ -ಇವು ಪರಿಸ್ಫುಟಗೊಂಡಿವೆ.

ಈಕೆಯ ೨೪ ವಚನಗಳು ಶೂನ್ಯಸಂಪಾದನೆಯಲ್ಲಿ ಬಂದಿವೆ. (ವಿಚಾರಿತ ಕಾರರು ಅಜಗಣ್ಣನದೆಂದು ಉದ್ಧರಿಸಿರುವ ಒಂದು ವಚನ ಈಕೆಯದೇ ಇರಬೇಕು.) ವಚನಗಳ ಅಂಕಿತ : '(ಎನ್ನ) ಅಜಗಣ್ಣ ತಂದೆ' ಅಥವಾ '(ಎನ್ನ) ಅಜಗಣ್ಣ'. ಈಕೆಯ ವ್ಯಕ್ತಿತ್ವವನ್ನು ಅಕ್ಕಮಹಾದೇವಿಯ ವ್ಯಕ್ತಿತ್ವದೊಂದಿಗೆ ಹೋಲಿಸಿ ವಿದ್ವಾಂಸರು ಸಾದೃಶ್ಯ ವೈದೃಶ್ಯಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಈಕೆಯ ವಚನಗಳಲ್ಲಿ ಹೃದ್ಯವಾದ ಸಾಹಿತ್ಯಾಂಶ ಅಷ್ಟಿಲ್ಲ. ಮುಕ್ತಾಯಕ್ಕನ ತರ್ಕನೈಪುಣ್ಯ ತಾತ್ತ್ವಿಕಜ್ಞಾನ ಮೇಲುಗೈಯಾಗಿ ಕುತೂಹಲ ಜನಕವಾಗಿರುವಂತೆ ವಾಗ್ವಿಲಾಸ ಅಲಂಕಾರವೈಖರಿ ಭಾವನಾಶಕ್ತಿ ಅಷ್ಟು ಚಿತ್ತಾಕರ್ಷಕವಾಗಿಲ್ಲ. ಒಂದೆರಡು ದೃಷ್ಟಾಂತಗಳು ರಮ್ಯವಾಗಿವೆ. ಆಕೆಯದು ಪ್ರಧಾನವಾಗಿ ತಾರ್ಕಿಕನ ದೃಷ್ಟಿ, ಕವಿಯ ದೃಷ್ಟಿಯಲ್ಲ.

ಸತ್ಯಕ್ಕ (ಸು ೧೧೬೦)

ಈಕೆಯ ಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಹಿರೇ ಜಂಬೂರು. ಶಿವಭಕ್ತರ ಮನೆಯಂಗಳವನ್ನು ಗುಡಿಸಿ ಅವರು ನೀಡುತ್ತಿದ್ದ ಧಾನ್ಯದಿಂದ ಜೀವನ ಮಾಡುತ್ತಿದ್ದಳಂತೆ. ಇವಳ ಏಕದೇವತಾನಿಷ್ಠೆಯನ್ನು ನಿದರ್ಶಿಸುವ ಕಥೆಯೊಂದು ಭೈರವೇಶ್ವರ ಕಥಾಸೂತ್ರ ರತ್ನಾಕರದಲ್ಲಿ ಬರುತ್ತದೆ. ಇವಳ ೨೦ ವಚನಗಳು ಅಚ್ಚಾಗಿವೆ. ಅಂಕಿತ : 'ಶಂಭು ಜಕ್ಕೇಶ್ವರಾ'. ಈಕೆಯ ವ್ಯಕ್ತಿತ್ವ ಮತ್ತು ವಚನಗಳ ಮೇಲೆ ಅಕ್ಕಮಹಾದೇವಿಯ ಪ್ರಭಾವ ಮುದ್ರೆಯನ್ನು ಕಾಣಬಹುದು. ಈಕೆಯೂ ಅಕ್ಕಮಹಾದೇವಿಯಂತೆಯೇ ಶರಣಸತಿ-ಲಿಂಗಪತಿ ಭಾವದಿಂದ ಶಿವನೇ ತನ್ನ ದೈವ, ತನ್ನ ಪತಿ, ತನ್ನ ಸರ್ವಸ್ವ ಎಂದು ಭಾವಿಸಿ ಪೂಜಿಸಿದಳು. ನಿಂದಾಸ್ತುತಿಮೂಲವಾದ ಶಿವಭಕ್ತಿ, ಜಂಗಮಭಕ್ತಿ, ಆತ್ಮಾರ್ಪಣಭಾವ, ಶಿವಶರಣ್ಯ ಭಾವ, ಆತ್ಮಶುದ್ಧಿ ಮೊದಲಾದ ಸತ್ತ್ವಮಯ

ಭಾವಗಳು ಈಕೆಯ ವಚನಗಳಲ್ಲಿ ಹರಿಹಾಯ್ದಿವೆ. ಮಾತುಗಳು ಸರಳವೂ ಹೃದ್ಯವೂ ಆಗಿದ್ದು ಕಾವ್ಯದ ಸೊಗಸು ಅಲ್ಲಲ್ಲಿ ಮಿಣಿಮಿಂಚುತ್ತದೆ,

ನೀಲಲೋಚನೆ (ಸು. ೧೧೬೦)

ಈಕೆಯನ್ನು ನೀಲಮ್ಮ, ನೀಲಲೋಚನೆಯಮ್ಮ, ನೀಲಾಂಬಿಕೆ ಎಂದೂ ಕರೆಯಲಾಗಿದೆ. ಈಕೆ ಬಸವಣ್ಣನವರ ದ್ವಿತೀಯ ಪತ್ನಿ. 'ಸಹಸ್ರಗಣನಾಮ'ದಲ್ಲಿ ಈಕೆಯ ಹೆಸರೂ ಬಂದಿದೆ. ಬಸವೇಶ್ವರರು ಕೂಡಲ ಸಂಗಮದಲ್ಲಿ ಲಿಂಗೈಕ್ಯರಾದ ಮೇಲೆ ಈಕೆ ತಾನಿದ್ದೆಡೆಯಲ್ಲಿಯೇ ಕರಸ್ಥಳದ ಇಷ್ಟಲಿಂಗದಲ್ಲಿ ಐಕ್ಯಳಾದಂತೆ ಶೂನ್ಯಸಂಪಾದನೆಯಲ್ಲಿ ಹೇಳಿದೆ.

ಈಕೆಯ ೧೩ ವಚನಗಳು ಶೂನ್ಯ ಸಂಪಾದನೆಯಲ್ಲಿ ಬಂದಿವೆ. ಅಂಕಿತ 'ಸಂಗಯ್ಯ'. ಈಕೆ ಪ್ರಸಾದ ಸಂಪಾದನೆಯನ್ನೂ ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತಿಳಿಯಬರುತ್ತದೆ (ಕರ್ಣಾಟಕ ಕವಿಚರಿತೆ I–೨೦೧). ಇವು ದೊರೆತಂತೆ ಕಾಣುವುದಿಲ್ಲ. "ನೀಲಮ್ಮನ ಸ್ತೋತ್ರ, ನೀಲಾಂಬಿಕಾ ಪಂಚವಿಂಶತಿ ನೀಲಮ್ಮನ ತ್ರಿವಿಧಿ ಮೊದಲಾದ ಗ್ರಂಥಗಳು ಇವಳ ಸ್ತುತಿರೂಪವಾಗಿವೆ,"— ಎಂದು ಕವಿಚರಿತೆಯಲ್ಲಿ ಹೇಳಿದೆ, ಇವು ಯಾವುವೂ ಅಚ್ಚಾದಂತೆ ಇಲ್ಲ. ಈಕೆಯ ವಚನಗಳ ಸಾರಾಂಶ: ಬಸವಣ್ಣನವರು ಕೂಡಲಸಂಗಮ ಕ್ಷೇತ್ರಕ್ಕೆ ಬಂದು ಐಕ್ಯವಾಗುವ ಮೊದಲು ಪತ್ನಿ ನೀಲಲೋಚನೆಗೆ ಹೇಳಿ ಕಳುಹಿದ್ದು, ಆಕೆ ತಾನು ಇಷ್ಟಲಿಂಗದಲ್ಲಿಯೇ ಐಕ್ಯವಾಗುವುದಾಗಿ ಅಪ್ಪಣ್ಣನಿಗೆ ಬಿನ್ನವಿಸಿದ್ದು, ಅನಂತರ ಬಸವಣ್ಣನವರ ಲಿಂಗೈಕ್ಯದ ಸುದ್ದಿ ಕೇಳಿ ಪ್ರಲಾಪಿಸುತ್ತಿದ್ದ ಈಕೆಯನ್ನು ಚೆನ್ನಬಸವಣ್ಣನು ಸಮಾಧಾನಗೊಳಿಸಲು, ಈಕೆಯೂ ಲಿಂಗೈಕ್ಯವಾದುದು. ನೀಲಮ್ಮನಿಗೆ ಪತಿಯೂ ಗುರುವೂ ಆಗಿದ್ದ ಬಸವಣ್ಣನವರ ಲಿಂಗೈಕ್ಯದ ವಿಯೋಗದುಃಖ ವಚನಗಳಲ್ಲಿ ಹೃದಯಸ್ಪರ್ಶಿಯಾಗಿ ಮೂಡಿದೆ; ಮಾತು ಸರಳ, ಅರ್ಥ ಸುಲಭ, ಸಹಜವಾದ ಸಾನುಪ್ರಾಸದ ಸೊಗಸಿದೆ. ಎತ್ತಿಹೇಳಬಹುದಾದ ಹೆಚ್ಚಿನ ಸಾಹಿತ್ಯಾಂಶವೇನೂ ಇಲ್ಲ.

ಅಕ್ಕ ನಾಗಮ್ಮ (ಸು. ೧೧೬೦)

ನಾಗಾಯಕ್ಕ ನಾಗಲಾಂಬಿಕೆ ಅಕ್ಕನಾಗಲೆ ಎಂದೂ ಈಕೆ ಕರೆಯಲ್ಪಡುತ್ತಾಳೆ. ಈಕೆ ಬಸವಣ್ಣನವರ ಸೋದರಿಯೂ ಚೆನ್ನಬಸವಣ್ಣನ ಮಾತೆಯೂ

ಆಗಿಷ್ಟು ಬಸವಣ್ಣನವರೊಂದಿಗೆ ಕಲ್ಯಾಣದಲ್ಲಿ ಇರುತ್ತಿದ್ದಳೆಂದು ತಿಳಿದು ಬರುತ್ತದೆ. ಶೂನ್ಯ ಸಂಪಾದನೆಯಲ್ಲಿ ಈಕೆಯ ವಚನಗಳು ದೊರೆಯುತ್ತವೆ. ಅಂಕಿತ: 'ಬಸವಣ್ಣಪ್ರಿಯ ಚೆನ್ನಸಂಗಯ್ಯಾ'.

ಬಸವಣ್ಣ ಚೆನ್ನಬಸವಣ್ಣ ಅಲ್ಲಮಪ್ರಭು ಇವರಲ್ಲಿ ಈಕೆಗೆ ಅಪಾರ ಭಕ್ತಿ ಗೌರವಗಳುಂಟು. ಅವರಿಂದ ತಾನು ಉದ್ಧಾರವಾದೆನೆಂಬ ಕೃತಜ್ಞತಾಭಾವವುಂಟು. ಬಸವಣ್ಣನವರು ಲಿಂಗೈಕ್ಯರಾದಾಗ ಆಕೆಯ ಕರುಣಾಪೂರ್ಣವಾದ ಪ್ರಲಾಪ ಇಲ್ಲಿ ಅತ್ಯಂತ ಸಹಜವಾಗಿ ಹೃದಯಸ್ಪರ್ಶಿಯಾಗಿ ರೂಪಗೊಂಡಿದೆ.

ಗೊಗ್ಗವ್ವೆ (ಸು. ೧೧೬೦)

'ನಾಸ್ತಿನಾಥ' ಎಂಬ ಅಂಕಿತದಲ್ಲಿ ಈಕೆಯ ೬ ವಚನಗಳು ದೊರೆತು ಅಚ್ಚಾಗಿವೆ. ಶಿವಪೂಜಾನಿಷ್ಠೆ, ಭಕ್ತರ ಜೀವನಮಾರ್ಗ, ಸ್ತ್ರೀಪುರುಷ ವಿವೇಕ-ಇವನ್ನು ಈ ವಚನಗಳು ಕುರಿತಿವೆ, ಇವುಗಳಲ್ಲಿ ಕಾವ್ಯಶೈಲಿಯ ಸ್ಪಷ್ಟ ಮುದ್ರೆಯಿದೆ.

ರಾಯಮ್ಮ (ಸು. ೧೧೬೦)

ಈಕೆ ರಾಯಸದ ಮಂಚಣ್ಣನ ಪತ್ನಿ. ೩ ವಚನಗಳು ಅಚ್ಚಾಗಿವೆ. ಅಂಕಿತ: 'ಅಮುಗೇಶ್ವರ ಲಿಂಗ'. ಭವಿಗಳಿಗಲ್ಲದೆ ಲಿಂಗಧಾರಿಗಳಿಗೆ ಪ್ರಸಾದವನ್ನೀಯಬೇಕೆಂಬುದೂ, ಜ್ಞಾನದ ಮಹತ್ತ್ವವೂ ಶಿವಶರಣ್ಯಭಾವವೂ ವಚನಗಳ ವಿಷಯ. ಬಳಸುವ ದೃಷ್ಟಾಂತಗಳು ಸ್ವಾರಸ್ಯವಾಗಿಯೂ ಮಾರ್ಮಿಕವಾಗಿಯೂ ಇದ್ದು ಸಾಹಿತ್ಯಶಕ್ತಿ ಸ್ಫುಟವಾಗಿ ಕಾಣುವುದು.

ರೆಮ್ಮವ್ವೆ (ಸು. ೧೧೬೦)

ಜೀವನ ವಿವರ ತಿಳಿಯದು. ೨ ವಚನಗಳು ಅಚ್ಚಾಗಿವೆ. ಅಂಕಿತ: 'ಆಚಾರವೇ ಪ್ರಾಣವಾದ ರಾಮಲಿಂಗ'. ಶೈವಾಚಾರ ನಿಷ್ಠೆಯನ್ನು ಒಂದು ವಚನದಲ್ಲಿಯೂ ಕಪಟವರ್ತನದ ಭರ್ತ್ಸನೆಯನ್ನು ಇನ್ನೊಂದು ವಚನದಲ್ಲಿಯೂ ಮಾರ್ಮಿಕವಾಗಿ ಹೇಳಿದೆ. ಸ್ಪಷ್ಟವಾದ ಮಾತು, ನಿಶಿತವಾದ ಅರ್ಥ,

ಬೊಂತಲದೇವಿ (ಸು. ೧೧೬೦)

ಈಕೆಯ ನಿಜನಾಮ ನಿಜದೇವಿ. ಬೊಂತಾದೇವಿ ಅಥವಾ ಬೊಂತಲ ದೇವಿಯೆಂದೂ ಈಕೆಯನ್ನು ಕರೆಯಲಾಗುತ್ತದೆ. ರಾಣಿಯಾಗಿದ್ದವಳು ರಾಜ್ಯವನ್ನು ತೊರೆದು ಅಕ್ಕಮಹಾದೇವಿಯಂತೆಯೇ ನಿರ್ವಾಣವಾಗಿ ಕಲ್ಯಾಣಕ್ಕೆ

ಹೋದಳೆಂತೆ. ಕಲ್ಯಾಣದ ಕ್ರಾಂತಿಯ ಅನಂತರವೂ ಕಲ್ಯಾಣದಲ್ಲಿಯೇ ನಿಂತಳಂತೆ. ಈಕೆ 'ಸಹಸ್ರಗಣನಾಮ'ದಲ್ಲಿ ಉಕ್ತಳಾಗಿದ್ದಾಳೆ. ಈಕೆಯ ೨ ವಚನಗಳು ಲಭ್ಯವಾಗಿವೆ. ಅಂಕಿತ: 'ಬಿಡಾಡಿ'('ಬಿಡಾಡಿ'). ಪರಮಾತ್ಮನು ಒಲಿಯಲು ದೇಹ ಕುಲ ಜಾತಿಭೇದದ ತಡೆಯಾಗದೆಂದೂ, ಪರಮಾತ್ಮನು ಸರ್ವವ್ಯಾಪಿಯೆಂದೂ ಈ ವಚನಗಳ ಸಾರಾಂಶ.

ಕದಿರಕಾಯಕದ ರೆಮ್ಮವ್ವೆ (ಕದಿರ ರೆಬ್ಬವ್ವೆ) (ಸು. ೧೧೬೦)

ಈಕೆ ನೇಯ್ಗೆ ವೃತ್ತಿಯವಳು. ಇವಳ ೩ ವಚನಗಳು ದೊರೆತಿದ್ದು, ೨ ವಚನಗಳು ಅಚ್ಚಾಗಿವೆ. ಅಂಕಿತ: 'ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ' ವೃತ್ತಿನಿರ್ವಹಣಕ್ಕೆ ಶಿವಭಕ್ತಿತಲ್ಲೀನತೆಯಿಂದ ತಡೆಯೊದವಿತೆಂಬ ಭಾವವೂ, ಶಿವಶರಣ್ಯ ಭಾವವೂ ವಚನಗಳ ಸಾರಾಂಶ.

ವೀರಮ್ಮ (ಸು. ೧೧೬೦)

ವಚನಕಾರ ಬಸವಯ್ಯನ ಪತ್ನಿ. ೨ ವಚನಗಳು ಅಚ್ಚಾಗಿವೆ. ಅಂಕಿತ: 'ಗುಂಡಬ್ರಹ್ಮೇಶ್ವರಾ'. ಭವಿಗಳೊಂದಿಗೆ ಬೆರೆಯಬಾರದು ಎಂದು ಒಂದು ವಚನದಲ್ಲೂ, ವೀರಶೈವಾಚಾರದ ಪ್ರಸಾದವನ್ನು ಇನ್ನೊಂದು ವಚನದಲ್ಲಿಯೂ ಹೇಳಿದೆ.

ರೇಚವ್ವೆ (ಸು. ೧೧೬೦)

ಕಾಟಕೋಟಯ್ಯನ ಪತ್ನಿ. ೧ ವಚನ ಅಚ್ಚಾಗಿದೆ ಅಂಕಿತ: 'ಕಂಭೇಶ್ವರಾ' ಭಕ್ತ ಭವಿಗಳನ್ನು ಬೆರೆಯಬಾರದು ಎಂಬುದು ಇಲ್ಲಿಯ ವಿಷಯ.

ಕೊಟ್ಟಣದ ಸೋಮವ್ವೆ (ಸು. ೧೧೬೦)

[illegible]. ದವಸ ಧಾನ್ಯದ ಕೊಟ್ಟಣದಿಂದ ಹೊಟ್ಟೆ ಹೊರೆಯುತ್ತಿದ್ದಳೆನಬಹುದು. ೧ ವಚನ ಅಚ್ಚಾಗಿದೆ. ಅಂಕಿತ: 'ನಿರ್ಲಜ್ಜೇಶ್ವರ'. ಭಕ್ತ ಭವಿಗಳೊಡನೆ ಬೆರೆಯಬಾರದೆಂಬುದನ್ನು ಸ್ಪಷ್ಟೋಕ್ತಿಯಿಂದ ಹೇಳಿದ್ದಾಳೆ.

ಲಕ್ಷ್ಮಮ್ಮ (ಸು ೧೧೬೦)

ಈಕೆ ಬಿಜ್ಜಳನ ಆಸ್ಥಾನದಲ್ಲಿದ್ದ ಕೊಂಡೆಯ ಮಂಚಣ್ಣನ ಪತ್ನಿ. ಪತಿ ಪತ್ನಿಯರು ಗುಪ್ತಭಕ್ತಿಯಿಂದ ನಡೆಯುತ್ತಿದ್ದರಂತೆ. ೧ ವಚನ

ಅಚ್ಚಾಗಿದ್ದು, ಅದರಲ್ಲಿ ಶೈವವ್ರತ ನಿಷ್ಠೆಯನ್ನು ಪ್ರತಿಪಾದಿಸಿದೆ. ಅಂಕಿತ: 'ಅಗಜೇಶ್ವರಲಿಂಗ'

ಕಾಳವ್ವೆ I (ಸು. ೧೧೬೦)

ಬಾಚಿ ಕಾಯಕದ ಬಸವಣ್ಣನ ಪತ್ನಿ. "ಈಕೆ ಕಗ್ಗಲ್ಲಿನಿಂದ ಹಾಲನ್ನು ಕರೆದು ಈಶ್ವರನಿಗೆ ಉಣಿಸಿದಳಂತೆ'. ಅಚ್ಚಾಗಿರುವ ಒಂದು ವಚನದಲ್ಲಿ ಶೈವ ವ್ರತ ಹೀನನೊಡನೆ ಬೆರೆಯಬಾರದೆಂದು ಪ್ರತಿಪಾದಿಸಿದೆ. ಅಂಕಿತ: ಕರ್ಮಹರ ಕಾಳೇಶ್ವರ'.

ಕಾಳವ್ವೆ II ((ಸು. ೧೧೬೦) ;

ಸಿದ್ಧಬುದ್ಧಯ್ಯನ ಪತ್ನಿ. ಅಚ್ಚಾದ ಒಂದು ವಚನದಲ್ಲಿ. ಶೈವವ್ರತ ಭ್ರಷ್ಟನೊಡನೆ ಬೆರೆಯಬಾರದೆಂದು ಹೇಳಿದೆ. ಅಂಕಿತ: 'ಭೀಮೇಶ್ವರ'.

ಕಾಳವ್ವೆ III (ಸು. ೧೧೮೦)

ವಚನಕಾರ ಉರಿಲಿಂಗ ಪೆದ್ದಿಯ ಪತ್ನಿ. ೨ ವಚನ ಅಚ್ಚಾಗಿವೆ. ಅಂಕಿತ: 'ಉರಿಲಿಂಗಪೆದ್ದಿಗಳರಸ', ವ್ರತದ ಮಹತ್ತ್ವವನ್ನು ಒಂದು ವಚನದಲ್ಲಿಯೂ, ಯಾರು ನಿಜಭಕ್ತರಲ್ಲವೆಂಬುದನ್ನು ಮತ್ತಿನ ವಚನದಲ್ಲಿಯೂ ಸ್ವಪ್ರೋಕ್ತಿಯಲ್ಲಿ ಹೇಳಿದೆ.

(ಅ) ಹೆಸರುಗಳು ಮತ್ತು ಅಂಕಿತಗಳು ದೊರೆತಿದ್ದು, ವಚನಗಳು ದೊರೆಯದಿರುವ ಕೆಲವು ವಚನಕಾರ್ತಿಯರ ಪಟ್ಟಿಯನ್ನು (i) ಕವಿಚರಿತೆಯಿಂದ ಎತ್ತಿ ಇಲ್ಲಿ ಬರೆದಿದೆ: ಕನ್ನಡಿ ಕಾಯಕದ ರೆಮ್ಮವ್ವ ('ಸದ್ಗುರು ಲಿಂಗ ನಿರಂಗ ಲಿಂಗ') ಗಂಗಮ್ಮ ('ಗಂಗೇಶ್ವರ ಲಿಂಗ'), ಗಂಗಾಂಬಿಕೆ ('ಗಂಗಾಪ್ರಿಯ ಕೂಡಲ ಸಂಗಮ ದೇವ'), ಮಹಾದೇವಿ ('ಮಹಾದೇವ ಜ್ಯೋತಿರ್ಲಿಂಗ') ಸುವರ್ಣದೇವಿ ('ಸುವರ್ಣಲಿಂಗ'), (ii) 'ಲಿಂಗವಂತರ ಅಮರ ಕೃತಿಗಳು ಮತ್ತು ಲಿಂಗವಂತ ಕವಿಗಳು'–ಎಂಬ ಗ್ರಂಥದಿಂದ ಎತ್ತಿ ಇಲ್ಲಿ ಬರೆದಿದೆ: ಕದಿರ ಕಾಯಕದ ಕಾಳವ್ವೆ (ಅಂಕಿತ: 'ಗುಮ್ಮೇಶ್ವರಾ') ಶಾಂಭವದೇವಿ–ಸಿಂಹವಿಕ್ರಮ ಚೋಳನ ಮಗಳು ('ಶಾಂಭವೀಲಿಂಗ'), ಸುಂದರನಾಚಿ–ರಾಜೇಂದ್ರಚೋಳನ ಮಗಳು ('ಶ್ರೀ ಗುರು ಸೋಮಲಿಂಗ ಶರಣೆ ಸೌಂದರಿ'), ವೀರರಾಜೇಂದ್ರನ ಮಗಳು ('ಅಗಮ ಮೋಹಿನಿ') ಕೇತಲ ದೇವಿ ('ಕುರಂಗೇಶ್ವರ ಲಿಂಗ')

(ಆ) ವಚನಗಳೂ ಅಂಕಿತಗಳೂ ದೊರೆತಿದ್ದು ವಚನಕಾರರ ಹೆಸರುಗಳು ತಿಳಿಯದ ಗುಂಪಿನಲ್ಲಿ (ಕರ್ಣಾಟಕ ಕವಿಚರಿತೆ I–೫೧೫), ಅಂಕಿತಗಳು ಮಾತ್ರ ದೊರೆತಿದ್ದು ವಚನಕಾರರ ಹೆಸರುಗಳೂ ವಚನಗಳೂ ತಿಳಿಯದ ಗುಂಪಿನಲ್ಲಿ (ಕರ್ಣಾಟಕ ಕವಿಚರಿತೆ I–೫೨೩). ಮತ್ತೆ ಕೆಲವರು ವಚನಕಾರ್ತಿಯರು ಸೇರಿರಬಹುದೇನೋ ಎಂಬುದು ಮುಂದೆ ವಿಶದಪಡಬೇಕಾಗಿರುವ ವಿಷಯ,

(ಇ) ಪಾಲ್ಕುರಿಕೆ ಸೋಮನಾಥನ (ಕ್ರಿ. ಶ. ಸು. ೧೧೬೫) 'ಸಪ್ತಗಣ ನಾಮ', ಹರಿಹರನ (ಕ್ರಿ. ಶ. ಸು. ೧೧೬೫.) ಲಿಂಗಾರ್ಚನ ರಗಳೆ, ಬಸವ ಲಿಂಗನ (ಕ್ರಿ, ಶ. ಸು. ೧೬೧೧) ಶಿವಾಧಿಕ್ಯ ಪುರಾಣ, ವಿರಕ್ತ ತೋಂಟದಾರ್ಯನ (ಕ್ರಿ. ಶ ೧೫೬೦) ಪಾಲ್ಕುರಿಕೆ ಸೋಮೇಶ್ವರ ಪುರಾಣ—ಈ ಮೊದಲಾದ ಗ್ರಂಥಗಳಲ್ಲಿ ಉಕ್ತರಾಗಿರುವ ಶಿವಶರಣೆಯರಲ್ಲಿ ಯಾರಾದರೂ ವಚನರಚನೆ ಮಾಡಿರಬಹುದೇ ಎಂಬುದು ಮುಂದೆ ವಿಶದಪಡಬೇಕಾಗಿರುವ ವಿಷಯ.

(ಈ) ಬಿಜ್ಜಳದೇವಿ (ಸು. ೧೧೬೦) :

'ಈಕೆ ವಚನಗಳನ್ನು ಬರೆದಿರುವಂತೆ ತಿಳಿಯಬರುತ್ತದೆ' ಎಂದು ಕವಿ ಚರಿತೆಯಲ್ಲಿ ಹೇಳಿದೆ. ಈಕೆಯ ಅಂಕಿತವನ್ನಾಗಲಿ ವಚನವನ್ನಾಗಲಿ ಕೊಟ್ಟಿಲ್ಲ. ಬಿಜ್ಜವ್ವೆ, ಬಿಜ್ಜಮಹಾದೇವಿ ಎಂದೂ ಈಕೆಗೆ ಹೆಸರಿದ್ದು, ಕದಿರಕಾಯಕದ ಅಮ್ಮವ್ವೆಯಿಂದ ಈಕೆ ಅಭಿನ್ನಳು. ಅಮ್ಮವ್ವೆಯನ್ನು ಕುರಿತ ಒಂದು ರಗಳೆ ಯನ್ನು ತ್ರಿಭುವನ ತಾತ ಎಂಬ ಕವಿ ಬರೆದಿದ್ದಾನೆ. ಈ ಬಿಜ್ಜಳದೇವಿ ಅಥವಾ ಅಮ್ಮವ್ವೆಯ ವಚನಗಳಾವುವೂ ಅಚ್ಚಾಗಿಲ್ಲ.

ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನ

ಸದ್ಯಃ ನಮಗೆ ತಿಳಿದಿರುವಂತೆ ೧೩ ಮತ್ತು ೧೪ನೆಯ ಶತಮಾನಗಳ ಅವಧಿಯಲ್ಲಿ ಯಾವುದೇ ಸ್ತ್ರೀ ಕವಿಯ ಹೆಸರಾಗಲಿ ಕೃತಿಯಾಗಲಿ ಲಭ್ಯವಿಲ್ಲ.

ಹದಿನೈದನೆಯ ಶತಮಾನ

ಗುಡ್ಡವ್ವೆ (ಸು. ೧೪೩೦)

ಈಕೆ ಬತ್ತಲೇಶ್ವರನ ಪತ್ನಿ. ಒಂದು ವಚನ ಅಚ್ಚಾಗಿದ್ದು, ಚಿತ್ತಶುದ್ಧಿ ಪೂರ್ವಕವಾದ ವ್ರತನಿಷ್ಠೆಯನ್ನು ಇದರಲ್ಲಿ ನಿರೂಪಿಸಿದೆ. ಅಂಕಿತ : **'ನಿಂಬೇಶ್ವರಾ',**

ಮಸಣಮ್ಮ (ಸು ೧೫೦೦)

ಈಕೆ ಮಡಿವಾಳ ಮಾಗಿದೇವನ ಪತ್ನಿ. ಇವರು ಕೃಷ್ಣಾ ತೀರದ ಚಿನ್ಮ ಲಿಗಿಯ ಬಳಿ ವಾಸಿಸುತ್ತಿದ್ದರೆಂದೂ ಕಾಂಚಿಪಟ್ಟಣದಿಂದ ಬಂದವರೆಂದೂ ಐತಿಹ್ಯ. ದಂಪತಿಗಳು ಶಿವಯೋಗಿ ನಿಜಗುಣೇಶ್ವರನ ಶಿಷ್ಯರು. 'ನಿಜಗುಣೇಶ್ವರ ಲಿಂಗ' ಎಂಬ ಅಂಕಿತದಲ್ಲಿ, ಶೈವವ್ರತನಿಷ್ಠೆಯ ಹಿರಿಮೆಯನ್ನು ನಿರೂಪಿಸುವ ಈಕೆಯ ಒಂದು ವಚನ ಅಚ್ಚಾಗಿದೆ.

ರೇಕಮ್ಮ (ಸು. ೧೫೦೦)

ಈಕೆ ರೇವಣಸಿದ್ಧಯ್ಯನ ಪತ್ನಿ. 'ಶ್ರೀ ಗುರುಸಿದ್ಧೇಶ್ವರ' ಎಂಬ ಅಂಕಿತದಲ್ಲಿ, ಶೈವಾಚಾರ ನಿಷ್ಠೆಯನ್ನು ಉಗ್ರವಾಗಿ ಪ್ರತಿಪಾದಿಸುವ ಈಕೆಯ ಒಂದು ವಚನ ಅಚ್ಚಾಗಿದೆ.

ಕಾಲುಕಣ್ಣಿಯ ಕಾಯಮ್ಮ (ಸು. ೧೫೦೦)

'ನಿರ್ಭೀತಿ ನಿಜಲಿಂಗದಲ್ಲಿ 'ಎಂಬ ಅಂಕಿತದಲ್ಲಿ ಶೈವಾಚಾರ ನಿಷ್ಠೆಯನ್ನು ಉಗ್ರವಾಗಿ ಪ್ರತಿಪಾದಿಸುವ ಈಕೆಯ ಒಂದು ವಚನ ಅಚ್ಚಾಗಿದೆ. ಜೀವನವಿವರ ತಿಳಿಯದು.

ಪೂರ್ವೋಕ್ತರಾದ ಈ ನಾಲ್ವರೂ ವೀರಶೈವ ಧರ್ಮದ ಶಿವಶರಣೆಯರು.

ಹದಿನಾರನೆಯ ಶತಮಾನ

ಕಾಲಜ್ಞಾನದ ನೀಲಮ್ಮ (ಸು. ೧೫೪೩)

ಈಕೆ ಕಾಲಜ್ಞಾನದ ಎಮ್ಮೆ ಬಸವಣ್ಣನ ಸಮಕಾಲೀನಳು ಒಂದು ಕಾಲಜ್ಞಾನ ಗ್ರಂಥವನ್ನು ಬರೆದಿದ್ದಾಳೆ. ಇದು ದೊರತು ಅಚ್ಚಾಗಿರುವಂತೆ ತೋರುತ್ತದೆ. ೧೫೬೫ರಲ್ಲಿ ವಿಜಯನಗರದಲ್ಲಿ ನಡೆದ ತುರುಕರ ಹಾವಳಿಯನ್ನು ಕಣ್ಣಾರೆ ಕಂಡ ನೀಲಮ್ಮನು ತನ್ನ ಕಾಲಜ್ಞಾನದಲ್ಲಿ ಅದನ್ನು ವಿವರಿಸಿದ್ದಾಳೆ. (ಶರಣ ಸಾಹಿತ್ಯ, ೧೧-೪).

ಹದಿನೇಳನೆಯ ಶತಮಾನ

ಸಂಚಿಯ ಹೊನ್ನಮ್ಮ (ಸು. ೧೬೮೦)

೧೬೭೨ ರಿಂದ ೧೭೦೪ರವರೆಗೆ ಮೈಸೂರರಸರಾಗಿದ್ದ ಚಿಕ್ಕದೇವರಾಜ ಒಡೆಯರ ಆಶ್ರಯದಲ್ಲಿ ಈಕೆ ಸಂಚಿಯ ಊಳಿಗದವಳಾಗಿದ್ದಳು. ಇವಳ

ಪೂರ್ವಸ್ಥಳ ಎಳಂದೂರಾಗಿರಬಹುದೆಂದೂ ಈಕೆ ಚತುರ್ಥ ವರ್ಣದವಳಿರಬಹುದೆಂದೂ ಕವಿಚರಿತೆಕಾರರು ಊಹಿಸಿದ್ದಾರೆ. ವೇದಮಾರ್ಗ ಪ್ರತಿಷ್ಠಾಪನಾಚಾರ್ಯನೂ ಉಭಯವೇದಾಂತಾಚಾರ್ಯನೂ ಆದ ಅಳಸಿಂಗರಾರ್ಯನು ಇವಳ ಗುರು. ಕನ್ನಡ ಮಿತ್ರವಿಂದಾ ನಾಟಕದ ಕರ್ತೃ ಸಿಂಗರಾರ್ಯನೇ ಈತನೆಂದು ವಿದ್ವಾಂಸರ ಬಹು ಮತದ ಗ್ರಹಿಕೆ. (ಈ ನಾಟಕದ ಕರ್ತೃವಾದ ಕೌಶಿಕ ಸಿಂಗರಾರ್ಯನ ತಂದೆ ಅಳಸಿಂಗರಾರ್ಯನು ಹೊನ್ನಮ್ಮನ ಗುರು ಎಂಬ ಅಭಿಪ್ರಾಯವೂ ಇದೆ. ನೋಡಿ: ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಜೂನ್ ೧೯೪೧). ಈಕೆ ವಿಷ್ಣುಭಕ್ತಳೂ ವೈಷ್ಣವ ಧರ್ಮತತ್ತ್ವಜ್ಞಳೂ ಆಗಿದ್ದಳು. 'ಹದಿಬದೆಯ ಧರ್ಮ' ಎಂಬುದು ಇವಳ ಒಂದೇ ಒಂದಾದ ಕೃತಿ

ಹೊನ್ನಮ್ಮನು ತನ್ನ ರಾಜಭಕ್ತಿ ರಾಜಾಶ್ರಯಗಳನ್ನು ತನ್ನ ಕೃತಿಯಲ್ಲಿ ಕುರೋಕ್ತವಾಗಿ ತಿಳಿಸಿರುವಂತೆ ಸ್ವವಿಚಾರದ ವಿವರಗಳನ್ನು ತಿಳಿಸಿಲ್ಲ ಆದರೆ ಈಕೆಯ ಕಾವ್ಯಾಧಾರದ ಮೇಲೆ ಈಕೆ ರಾಜಾಶ್ರಯವನ್ನು ಪಡೆಯುವ ಮೊದಲು ಅಷ್ಟು ಉತ್ತಮ ಸ್ಥಿತಿಯಲ್ಲಿರಲಿಲ್ಲವೆಂದೂ. ಪಡೆದ ಮೇಲೆ ತನ್ನ ಬಂಧುಬಾಂಧವರಿಗೆ ಬೇಕಾದ ಸಹಾಯ ಮಾಡುವಷ್ಟು ಉನ್ನತಸ್ಥಿತಿಗೆ ಬಂದಳೆಂದೂ ತಿಳಿಯಬಹುದಾಗಿದೆ. ಚಿಕ್ಕದೇವರಾಜನ ಆಶ್ರಿತವರ್ಗದಲ್ಲಿದ್ದು, ಅದರಲ್ಲಿಯೂ ಸಂಚಿಯ ಊಳಿಗದಲ್ಲಿದ್ದು, ಪ್ರಭುವಿನಲ್ಲಿಯೂ ಪ್ರಭುಪತ್ನಿ ಎಳವಂದೂರ ದೇವಮ್ಮನಲ್ಲಿಯೂ ಅತಿಶಯಭಕ್ತಿ ಗೌರವಗಳನ್ನು ತಳೆದಿದ್ದಳು. ಅವರ ಪ್ರೀತಿವಾತ್ಸಲ್ಯಗಳನ್ನೂ ಆದರಾಭಿಮಾನಗಳನ್ನೂ ಇದಕ್ಕೆ ಪ್ರತಿಫಲವಾಗಿ ಪಡೆದುಕೊಂಡಿದ್ದಳು. ತನ್ನ ಸತ್ತ್ವಸಾಮರ್ಥ್ಯಗಳು ಏನೇ ಇದ್ದರೂ ಪ್ರಭು ಸೇವೆಯೇ ತನಗೆ ಪರಮಾರ್ಥವೆಂದೂ ಅದನ್ನು ಮೀರಿದ ಬಯಕೆಗಳು ತನಗಿಲ್ಲವೆಂದೂ ತೃಪ್ತಿ ಕೃತಜ್ಞತೆಗಳನ್ನು ಮನಃಪೂರ್ವಕವಾಗಿ ವ್ಯಕ್ತಪಡಿಸಿದ್ದಾಳೆ.

ಹೊನ್ನಮ್ಮನು ಕನ್ನಡ ಸಂಸ್ಕೃತ ಭಾಷಾಸಾಹಿತ್ಯಗಳನ್ನು ಶಾಸ್ತ್ರಗ್ರಂಥಗಳನ್ನು ಪುರಾಣೇತಿಹಾಸಗಳನ್ನು ಗುರುಸನ್ನಿಧಿಯಲ್ಲಿ ಕ್ರಮಾಧ್ಯಯನ ಮಾಡಿರಬಹುದಾದ ಪಂಡಿತೆ. ಇದರೊಂದಿಗೆ ದೈವಾಯತ್ತ ಪ್ರತಿಭೆ, ಲೋಕಾನುಭವ ಜತೆಗೂಡಿದ್ದವು. 'ಸರಸಸಾಹಿತ್ಯದ ವರದೇವತೆ' ಎಂದು ಅವಳ ಗುರುವೇ ಮನಮೆಚ್ಚಿ ದೊರೆಯಿದಿರು ಅವಳನ್ನು ಪರಿಪರಿಯಾಗಿ ಹೊಗಳಿದ್ದನು.

ದೊರೆಯು ಇವಳ ಸಾಹಿತ್ಯದ ಸವಿಯನ್ನು ಬಯಸಿ ಪಟ್ಟಮಹಿಷಿಯ ಮೂಲಕ ಈಕೆಯನ್ನು ಕೃತಿರಚನೆಗೆ ಪ್ರೇರಿಸಿದನು. ಪಂಡಿತೆಯಾದರೂ ವಿನೀತೆಯಾಗಿದ್ದ ಈಕೆ ಅಂಜುತ್ತ ಅಳುಕುತ್ತ ದೊರೆಯ ಆಶಯವನ್ನು ನೆರವೇರಿಸಲು ಒಪ್ಪಿದಳು. ಚಿಕ್ಕದೇವರಾಜನ ಆಸ್ಥಾನದ ವಿದ್ವತ್ ವಾತಾವರಣವು, ಪ್ರಭುವಿನ ಸಾಹಿತ್ಯ ಪೋಷಣೆಯ ಉದಾರ ಬುದ್ಧಿ, ಸಂಚಿಯ ಹೊಳಿಗದ ಹೆಣ್ಣು ಹೊನ್ನಮ್ಮನನ್ನು ಒಳ್ಳೆಯ ಪಂಡಿತೆಯನ್ನಾಗಿಯೂ ಕವಿಯನ್ನಾಗಿಯೂ ಮಾಡಿದ್ದು ಕನ್ನಡ ಸಾಹಿತ್ಯದಲ್ಲಿ ಒಂದು ಸ್ಮರಣೀಯವಾದ ಘಟನೆ.

ಕಾವ್ಯರಚನೆಗೆ ವಸ್ತುವಿನ ಆಯ್ಕೆಯಲ್ಲಿ ಆಕೆ ಬಯಸಿ ಹೊಸ ಹಾದಿ ಹಿಡಿದಳು. ಪತಿವ್ರತೆಯರ ಧರ್ಮವನ್ನು ನಿರೂಪಿಸುವುದೇ ಇವಳ ಕೃತಿ' ಹದಿಬದೆಯ ಧರ್ಮ'ದ ಉದ್ದೇಶ. ಸತಿಯರು ಸತೀಧರ್ಮನಿಷ್ಠರಾಗಿ ಇಹಪರಗಳಲ್ಲಿ ಸುಖಸಂತೋಷಗಳನ್ನೂ ಸದ್ಗತಿಯನ್ನೂ ಪಡೆಯಲೆಂಬುದೇ ಇದರ ಪ್ರಯೋಜನ. ಸನಾತನ ಆರ್ಯ ಸ್ತ್ರೀಯರ, ಆದರ್ಶಸ್ತ್ರೀಯರ ಗುಣಶೀಲಗಳನ್ನೂ ಕರ್ತವ್ಯಗಳನ್ನೂ, ಸಮಾಜ ಮನೆ ವಿದ್ಯೆ ಮೊದಲಾದವುಗಳಲ್ಲಿ ಅವರಿಗೆ ಇರಬೇಕಾದ ಸ್ಥಾನಮಾನಗಳನ್ನೂ ಹೆಣ್ಣಿನ ಕಣ್ಣಿಂದಲೇ ನೋಡಿ ಸಹಜವಾಗಿ ನಿರೂಪಿಸಿದ್ದಾಳೆ, ಸ್ತ್ರೀಧರ್ಮದ ಸರ್ವಸಾಧಾರಣವೂ ಸಾರಭೂತವೂ ಆದ ಜೀವನತತ್ತ್ವಗಳನ್ನೂ, ಸಂಪ್ರದಾಯದಲ್ಲಿ ಶ್ರೇಷ್ಠವೂ ಆಚರಣಯೋಗ್ಯವೂ ಆದ ಆಚಾರವಿಚಾರಗಳನ್ನೂ ಇಲ್ಲಿ ಎತ್ತಿ ಹೇಳಿದೆ. ಇದಕ್ಕಾಗಿ ಶಾಸ್ತ್ರಾಧಾರಗಳನ್ನೂ ನಿದರ್ಶನಗಳನ್ನೂ ಅನುವಾದಿಸಿದೆ, ಉದ್ಧರಿಸಿದೆ, ವಿಮರ್ಶೆಮಾಡಿದೆ. ಆಧುನಿಕ ಮನೋಧರ್ಮದ ಕೆಲವರಿಗೆ ಇಲ್ಲಿಯ ಹಲವು ಅಭಿಪ್ರಾಯಗಳು ಹಳತಾಗಿಯೂ ಅಹಿತವಾಗಿಯೂ ತೋರಬಹುದು (ನೋಡಿ : ಕ. ಸಾ. ಪ, ಜನವರಿ ೧೯೫೭). ಆದರೆ ತತ್ಕಾಲದ ಸಮಾಜದಲ್ಲಿ ಸ್ತ್ರೀಯರ ಸ್ಥಿತಿಗತಿಗಳು, ಕಾವ್ಯದಲ್ಲಿ ಧರ್ಮ ಮತ್ತು ಆದರ್ಶಗಳ ಪಾತ್ರ, ಹೊನ್ನಮ್ಮನ ಸ್ವಂತ ಸಂಸ್ಕಾರ ಮತ್ತು ಸಂಬಂಧ, ಒಂದೆರಡು ಮಾತು ಮತ್ತು ವಿವರಗಳಲ್ಲಿ ಮಾತ್ರ ಕಾಣುವ ಪೂರ್ವಾಚಾರನಿಷ್ಠೆ ಶಾಸ್ತ್ರಾನುಶಾಸನದ ಉಗ್ರತೆ, ಈ ಮೊದಲಾದುವನ್ನು ದೃಷ್ಟಿಯಲ್ಲಿರಿಸಿಕೊಂಡು 'ಹದಿಬದೆಯ ಧರ್ಮ'ವನ್ನು ಸಹಾನುಭೂತಿಯಿಂದ ಪುನರ್ಪರಿಶೀಲಿಸುವುದು ಸಾಧ್ಯ. ಕೆಲವೆಡೆ ಹೊನ್ನಮ್ಮನ ಸ್ವತಂತ್ರವಿಚಾರಧಾರೆ,

ಸಮಾಜದ ರೂಢಮೂಲ ನಂಬಿಕೆಗಳ ವಿಡಂಬನೆ, ಚೆನ್ನಾಗಿಯೇ ಒಡಮೂಡಿದೆ. (ಉದಾ. ೫–೪, ೮, ೧೧)

ಸ್ತ್ರೀಧರ್ಮನಿರೂಪಣೆ ಇಲ್ಲಿಯ ವಸ್ತುವಾದರೂ ಸ್ತ್ರೀಯ ಬಗೆಗೆ ತಾಯಿ ತಂದೆ, ಅತ್ತೆಮಾವ, ಪತಿ ಹೇಗೆ ನಡೆದುಕೊಳ್ಳಬೇಕೆಂಬ ವಿವೇಚನೆಯೂ ಇದೆ. ಒಟ್ಟಿನಲ್ಲಿ ಇದು ಸ್ತ್ರೀಧರ್ಮದ ಕೈಪಿಡಿ; ಸ್ತ್ರೀಸ್ವಭಾವದ ಮಣಿಮುಕುರ; ಒಂದು ಸತ್ಕೃತಿ; ಸಾಹಿತ್ಯಕ್ಕೆ ಒಂದು ಶಾಶ್ವತವಾದ ಕೊಡುಗೆ. ಆದರೆ ವೃತ್ತಿ ಸಂಕೀರ್ಣತೆಯಿಂದಲೂ ಭೌತಿಕ ಮನೋಧರ್ಮದಿಂದಲೂ ನವನಾಗರಿಕತೆಯ ಕೈಗೊಂಬೆಯಾಗಿರುವ ಇಂದಿನ ಸಮಾಜ ಈ ಕೃತಿಯನ್ನು ಉಪೇಕ್ಷಾಬುದ್ಧಿಯಿಂದ ನೋಡಿದರೆ ಅಚ್ಚರಿಯೇನಿಲ್ಲ.

ಇಲ್ಲಿ ಇನ್ನೊಂದು ವಿಚಾರ. ಹೊನ್ನಮ್ಮನು ತನ್ನ ಕೃತಿಯನ್ನು ವ್ಯಾಸಂಗ ಬಲದಿಂದ ಬರೆದಳೇ ಸ್ವಾನುಭವದಿಂದ ಬರೆದಳೇ ಎಂಬೊಂದು ಸಂದೇಹ ವಿಮರ್ಶೆಯಲ್ಲಿ ಸುಳಿದಿದೆ ('ಕನ್ನಡ ಸಾಹಿತ್ಯ ಚರಿತ್ರೆ' ೩೦೯). ಇದರೊಂದಿಗೆ ಆಕೆ ಅಂತಃಪುರವರ್ಗವನ್ನು ಸೇರಿ ಸತೀಧರ್ಮವನ್ನು ನಿಷ್ಠೆಯಿಂದ ಆಚರಿಸಿರ ಬೇಕೆಂದು ಅವಳ ಕಾವ್ಯಸರಣಿಯಲ್ಲಿ ಸೂಚನೆಯಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ (ಅದೇ. ಪು. ೩೦೯). ಸ್ವಲ್ಪ ಹೆಚ್ಚು ಕಡಮೆ ಇಂಥ ಅಭಿಪ್ರಾಯ ಈ ಹಿಂದೆಯೂ ಕೆಲವೊಮ್ಮೆ ಬಂದಿದೆ. (ಹದಿಬದೆಯ ಧರ್ಮದ ೧೯೬೭ರ ಮುದ್ರಣದ ಪೀಠಿಕೆ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ–ಜೂನ್ ೧೯೪೧). ಈ ಅಭಿಪ್ರಾಯಕ್ಕೆ ವಿರೋಧವು ವ್ಯಕ್ತಪಟ್ಟಿದೆ (ಪ್ರಬುದ್ಧ ಕರ್ಣಾಟಕ ೩೭–೩). ಇವುಗಳ ಸಾರಾಸಾರ ವಿಚಾರವಿಮರ್ಶೆಗೆ ಇಲ್ಲಿ ಎಡೆಯಿಲ್ಲ. ಹೊನ್ನಮ್ಮನು ಚಿಕ್ಕದೇವರಾಜನ ಅಂತಃಪುರವರ್ಗವನ್ನು ಸೇರಿರಬಹುದು ಅಥವಾ ಇಲ್ಲವೆಂಬುದನ್ನು ಅವಳದೇ ಮಾತುಗಳ ಕಾವ್ಯಾಧಾರದ ಅಂತಃಪ್ರಮಾಣದ ಮೇಲೆ ಊಹಿಸಿ ಮಾತ್ರ ಹೇಳಬೇಕಾಗಿದೆ. ಅವಳು ಹಾಗೆ ಸೇರಿದ್ದ ಪಕ್ಷಕ್ಕೆ ಅವಳ ಸ್ಥಾನಮಾನಗಳ ಕುರಿತು ಕಾವ್ಯದಲ್ಲಿ ವ್ಯಕ್ತಾವ್ಯಕ್ತವಾದ ಸಂಗತಿಗಳೆಷ್ಟೋ ಏನೋ ಹೇಳುವುದು ಕಷ್ಟ. ಈ ಸಿದ್ಧಕಾವ್ಯಾಧಾರಗಳು ವಾದಿಪ್ರತಿವಾದಿಗಳಿಬ್ಬರೂ ಅನುಕೂಲವಾಗಿ ಉಪಯೋಗಿಸಿಕೊಳ್ಳುವಂತೆ ಕೇವಲ ಸಂದಿಗ್ಧಗಳಾಗಿವೆ ಎಂಬುದೇ ಈ ಸಮಸ್ಯೆಯ ನಿರ್ಣಯದಲ್ಲಿರುವ ತೊಡಕು. (ಅವೇ ಕಾವ್ಯಾಧಾರಗಳ ವೈಯಕ್ತಿಕ

ವಿಶ್ಲೇಷಣೆಯಿಂದ ಅವಳು ಅಂತಃಪುರವರ್ಗಕ್ಕೆ ಸೇರಿರದೆ ಸಂಚಿಯ ಊಳಿಗದವಳಾಗಿಯೇ ಇದ್ದಿರಬೇಕೆಂದು ನನ್ನ ಅಭಿಪ್ರಾಯ).

ಸಂಚಿಯ ಹೊನ್ನಮ್ಮ ಕನ್ನಡ ಕಬ್ಬಿಗಿತಿಯರ ತಲೆವಣಿ. ಆ ಗುಂಪಿನ ಸಮರ್ಥ ಪ್ರತಿನಿಧಿ, ಮರೆಯಲಾಗದ ಹೆಸರು. ಧರ್ಮದ ತನಿಗಂಪು, ಕಾವ್ಯದ ಪೆರ್ಮೆ ಅವಳ ಕೃತಿಯಲ್ಲಿ ಸಮರಸವಾಗಿ ಹೊಂದಿಕೊಂಡಿದೆ. ವಿಷಯ ಎಷ್ಟು ಗಂಭೀರ, ಶೈಲಿ ಅಷ್ಟು ಸರಳ. ಇಲ್ಲಿಯ ಸರಳ ಅರ್ಥಾಲಂಕಾರಗಳು ನೆಟ್ಟನೆ ಎದೆಗೆ ಮುಟ್ಟುವಂತೆ ಸುಂದರ ಶಬ್ದಾಲಂಕಾರಗಳು ತಟ್ಟನೆ ಕಿವಿಗೆ ತಟ್ಟುತ್ತವೆ. ಉಪಮೆ ರೂಪಕ ದೃಷ್ಟಾಂತಗಳು ಹಿತಮಿತವಾಗಿ ಬಂದಿವೆ. ಅವರೆ ಇವು ಹಿರಿಯರಲ್ಲಿ ಬಳಕೆಯಾಗಿ ಬಂದಿರುವ ನಾಣ್ಯಗಳೇ. ಮಾತಿಗೆ ಮಾತು ಮುತ್ತು ಪೋಣಿಸಿದಂತೆ ಹೊಂದಿಕೊಂಡು, ಯಮಕಾನುಪ್ರಾಸಗಳು ಅಪ್ರಯತ್ನವಾಗಿ ಒಂದನ್ನೊಂದು ತೂರಿಬಂದು. ಸುಂದರವಾಗಿ ಪದ್ಯಶಿಲ್ಪ ನಿರ್ಮಿತವಾಗುತ್ತದೆ. ಎಲ್ಲಿಯೂ ಅರ್ಥಕ್ಲೇಶದ ಶಬ್ದಗಳಿಲ್ಲ, ಭಾವಗಳಿಲ್ಲ. ಸಂಸ್ಕೃತ ಕನ್ನಡಗಳ ಹಿತ ಮಿತಮಿಶ್ರಣದ ಹದ ಕಾವ್ಯಕ್ಕೆ ವಿಶೇಷವಾದ ಚೆಲುವು ತಂದಿದೆ. ದೇಸಿಪದ ಪದ್ಧತಿಯಲ್ಲಿ ನಾವೀನ್ಯ, ಭಾವನಿರೂಪಣೆಯಲ್ಲಿ ಸ್ವಾತಂತ್ರ್ಯ ಎದ್ದುಕಾಣುತ್ತವೆ. ಒಟ್ಟಿನಲ್ಲಿ ಈ ಕೃತಿ ಸ್ತ್ರೀಕವಿಯ ಲಲಿತ ಕೋಮಲ ಸ್ತ್ರೀಮನೋಧರ್ಮವನ್ನು ನಿಚ್ಚಳವಾಗಿ ಬಿಂಬಿಸುತ್ತದೆ. ಸಾಂಗತ್ಯ ಛಂದಸ್ಸಿನಲ್ಲಿ ಹೊನ್ನಮ್ಮನು ತೋರಿರುವ ನಯರುಚಿ, ಪ್ರೌಢತೆ, ಶಬ್ದಾಲಂಕಾರ ವೈಖರಿ, ನಾದ ಮಾಧುರ್ಯ, ಅರ್ಥಗುರುತ್ವ ಪ್ರಾಯಶಃ ಚೆಲ್ವಾಂಬೆಯಲ್ಲಾಗಲಿ ಗಿರಿಯಮ್ಮನಲ್ಲಾಗಲಿ ಅಷ್ಟಾಗಿ ಕಾಣುವುದಿಲ್ಲ.

'ಹದಿಬದೆಯ ಧರ್ಮ' ೯ ಸಂಧಿಗಳು ೪೭೮ ಪದ್ಯಗಳು ಇರುವ ಒಂದು ಸಾಂಗತ್ಯಕೃತಿ. ಪ್ರತಿ ಸಂಧಿಯ ವಿಷಯ ವಿವರ ಹೀಗಿದೆ : ದೇವತಾಸ್ತುತಿ, ಮೈಸೂರರಸರ ಚರಿತ್ರೆ, ಆಶ್ರಯದಾತರಾದ ಪ್ರಭು ಪ್ರಭುಪತ್ನಿಯರ ಪ್ರಶಂಸೆ ಕಾವ್ಯ ರಚನೆಗೆ ಪ್ರೇರಣೆ, ಪತಿವ್ರತಾಧರ್ಮದ ಮಹಿಮೆ (ಸಂಧಿ ೧) ; ಪತಿವ್ರತೆಯರ ಹಿರಿಮೆ, ಮಾಹಾತ್ಮ್ಯ, ಏಕಪತ್ನಿಯ ಕಥೆಯ ಒಂದು ನಿದರ್ಶನ. (ಸಂಧಿ ೨) ; ಪತಿಶುಶ್ರೂಷೆ ಮತ್ತು ಪತಿಭಕ್ತಿ, ಪ್ರಾಚೀನರಾದ ಪತಿವ್ರತೆಯರ ಪ್ರಶಂಸೆ (ಸಂಧಿ ೩) ; ಸಾಧ್ವಿ ಮನೆಯ ಹಿರಿಯರನ್ನು ಆದರಿಸುವ ರೀತಿ,

ಮನೆಯ ಹಿರಿಯರು ಸೊಸೆಯನ್ನು ನೋಡಿಕೊಳ್ಳುವ ರೀತಿ, ಮಕ್ಕಳನ್ನು ಸಾಧ್ವಿಯು ಸಲಹುವ ರೀತಿ, ನೆರಹೊರೆಯ ಸತಿಯರನ್ನು ಪುರಸ್ಕರಿಸಿ ಅಸತಿಯನ್ನು ದೂರವಿರಿಸುವ ರೀತಿ ಇತ್ಯಾದಿ (ಸಂಧಿ ೪) ; ಹೆಣ್ಣಿನ ಹೆಚ್ಚು ಗಾರಿಕೆ, ತವರು ಮನೆಯವರು ಮಗಳನ್ನು ನೋಡಿಕೊಳ್ಳಬೇಕಾದ ರೀತಿ, ಅವಳ ಸುಖಬಾಳ್ವಿಗೆ ಮಾಡಬೇಕಾದ ಕರ್ತವ್ಯಗಳು (ಸಂಧಿ ೫) ; ಗಂಡು ಹೆಣ್ಣುಗಳು ಸುಖದಾಂಪತ್ಯ ನಡಸುವ ರೀತಿ (ಸಂಧಿ ೬) ; ಪತಿಯ ಅಗಲಿಕೆ ಯಲ್ಲಿ ಪತ್ನಿಯ ವಿರಹತಾಪದ ಚಿತ್ರ (ಸಂಧಿ ೭) ; ಹೆಣ್ಣಿನ ದಿನಚರಿಯ ಶ್ರೇಯ ಸ್ಕರವಾದ ಕಾರ್ಯಕಲಾಪಗಳು (ಸಂಧಿ ೮); ಸ್ತ್ರೀಯರು ಆಚರಿಸಬೇಕಾನ ಭಗವ ದ್ಭಕ್ತಿ, ಸತ್ಕರ್ಮನಿಷ್ಠೆ, ಪುರಾಣಪುಣ್ಯಕಥಾಶ್ರವಣ ಇತ್ಯಾದಿ, ಸಮಾಪ್ತಿವಾಕ್ಯ ಗಳು (ಸಂಧಿ ೯)

ಶೃಂಗಾರಮ್ಮ (ಸು. ೧೬೮೫)

ಈಕೆ ಶ್ರೀವೈಷ್ಣವ ಕವಿ. ತಂದೆ ಚಿಂತಾಮಣಿ ದೇಶಿಕೇಂದ್ರ. ಗುರು ಶ್ರೀನಿವಾಸ ದೇಶಿಕ ಅಥವಾ ಶ್ರೀನಿವಾಸಾಚಾರ್ಯ. 'ಕಂತುಗಿಮ್ಮಡಿರೂಪ ಚಿಕದೇವ ಭೂಪಾಲ ಸಂತವಿಸಿದ ಸಣ್ಣ ಮಗಳು' ಎಂಬುದರಿಂದ ಮೈಸೂರರಸ ಚಿಕದೇವ ರಾಜನ (೧೬೭೨–೧೭೦೪) ಪೋಷ್ಯವರ್ಗಕ್ಕೆ ಸೇರಿದವಳೆಂದು ತಿಳಿಯುತ್ತದೆ. ಇವಳ ಕೃತಿ 'ಪದ್ಮಿನೀಕಲ್ಯಾಣ'. ಇದು ಸಾಂಗತ್ಯದಲ್ಲಿದೆ. ಪದ್ಯ ಸಂಖ್ಯೆ ೧೮೯. ಇದರಲ್ಲಿ ತಿರುಪತಿ ಶ್ರೀನಿವಾಸದೇವ ಗೂ ಪದ್ಮಿನಿಗೂ ನಡೆದ ವಿವಾಹ ವರ್ಣನೆಯಿದೆ.

ಇವಿಷ್ಟು ಕವಿಚರಿತೆಕಾರರು ಕೊಟ್ಟಿರುವ ಕವಿಕಾವ್ಯ ವಿಚಾರ. ಪದ್ಮಿನಿಯ ಬಾಲ್ಯವನ್ನು ವಿವರಿಸುವ ೩ ಪದ್ಯಗಳನ್ನು ಆಕೆಯ ಗ್ರಂಥದಿಂದ ಉದಾಹರಿಸಿ ದ್ದಾರೆ. ಆದರೆ ಈಗ ಈಕೆಯ ಕೃತಿಯ ಹಸ್ತಪ್ರತಿಯಾಗಲಿ ಮುದ್ರಿತಪ್ರತಿ ಯಾಗಲಿ ಕಂಡುಬರುವುದಿಲ್ಲ,

ಹದಿನೆಂಟನೆಯ ಶತಮಾನ

ಚೆಲ್ವಾಂಬೆ (ಸು. ೧೭೨೫)

ಈಕೆಯ ಕೃತಿಗಳಲ್ಲಿ ಈಕೆಯ ಹೆಸರನ್ನು ಚೆಲ್ವಾಜಮ್ಮ ಚೆಲ್ವಮಾಂಬೆ ಎಂದೂ ಹೇಳಿದೆ. ಈಕೆ ಮೈಸೂರು ದೊರೆ ದೊಡ್ಡಕೃಷ್ಣರಾಜನ (ಒಂದನೆಯ

ಕೃಷ್ಣರಾಜ ಒಡೆಯರ್ (೧೭೧೩-೧೭೩೧) ಮಹಿಷಿ. ದಳವಾಯಿ ದೊಡ್ಡೇಂದ್ರನ ತನುಜ ಕಳಿಲೆ ಕಾಂತನೃಪನ ಮಗಳು. ಈಕೆಯು ಕೃತಿಗಳು : ವರನಂದಿಕಲ್ಯಾಣ, ವೇಂಕಟಾಚಲ ಮಾಹಾತ್ಮ್ಯ ಲಾಲಿಪದ, ತುಲಾಕಾವೇರೀ ಮಾಹಾತ್ಮ್ಯ ಟೀಕೆ, ಕೃಷ್ಣ ಕರ್ಣಾಮೃತ ಟೀಕೆ. (ಕರ್ಣಾಟಕ ಕವಿಚರಿತೆ III–೨೨ ಮತ್ತು ೪೭೨). ಮೊದಲ ಮೂರು ದೊರೆತಿವೆ. (ಓರಿಯಂಟಲ್ ಲೈಬ್ರರಿ, ಹಸ್ತಪ್ರತಿ ಕೆ. ೮೦). ಆದರೆ ಇನ್ನೂ ಅಚ್ಚಾಗಿಲ್ಲ. ಉಳಿದವು ನಷ್ಟವೋ ಉಪಲಬ್ಧವೋ ತಿಳಿಯದು. ಈಕೆಯು ಕೃತಿಗಳೆಲ್ಲ ದೊರೆತು ಅಚ್ಚಾದರೆ ಕನ್ನಡ ಸಾಹಿತ್ಯದಲ್ಲಿ ಈಕೆಯು ಕಾಣಿಕೆಯನ್ನೂ ಸ್ಥಾನಮಾನಗಳನ್ನೂ ಸೂಕ್ತವಿಮರ್ಶೆಯಿಂದ ಗುರುತಿಸ ಬಹುದು. ಆಗ ಈಕೆಯ ಹೆಸರು ಇತರ ಖ್ಯಾತ ಸ್ತ್ರೀಕವಿಗಳ ಹೆಸರಂತೆ ಒಂದು ಹೆಸರಾಗಿ ನಿಲ್ಲಬಹುದು. ಅವರೆಗೆ ಈಕೆ ಒಂದು ಹೆಸರು ಮಾತ್ರ !

ಕವಿಚರಿತೆಕಾರರು ಈಕೆಯ ನಾಲ್ಕು ಕೃತಿಗಳ ಸ್ಥೂಲಪರಿಚಯವನ್ನು ಕೊಟ್ಟಿದ್ದಾರೆ (ಕರ್ಣಾಟಕ ಕವಿಚರಿತೆ III–೨೨). ಒಂದೆರಡು ಹೆಚ್ಚಿನ ಅಂಶಗಳನ್ನು ಇವಕ್ಕೆ ಕೂಡಿಸಬಹುದು.

೧ **ವರನಂದಿ ಕಲ್ಯಾಣ*** :—೭ ಸಂಧಿ ೮೮೧ ಪದ್ಯಗಳಿರುವ ಒಂದು ಸಾಂಗತ್ಯ ಗ್ರಂಥ. 'ವರ್ನಕ' ಎಂದು ಕರೆದಿದೆ. ಆದಿಯಲ್ಲಿ ಕವಿಯ ಇಷ್ಟದೈವ ವೆಂಕಟೇಶನ, ಗುರು ಪರಕಾಲ ಗುರುವಿನ ಹೆಸರು ಬಂದಿದೆ. ಪತಿಯು ಅಪ್ಪಣೆ ಯಂತೆ ಕೃತಿರಚನೆ ಮಾಡಿದುದಾಗಿ ಹೇಳಿಕೊಂಡಿದ್ದಾಳೆ. ಪರಕಾಲ ಗುರುವಿನ ಅನುಜ್ಞೆಯಂತೆ ತಿರುವೆಂಕಟೇಶನಿಗೂ ಅಲಮೇಲು ಮಂಗೆಗೂ ಪ್ರಪತ್ತಿಯನ್ನು ಮಾಡಿ, ಅಚ್ಚಗನ್ನಡದ ಇನಿಮಾತುಗಳಲ್ಲಿ, ವರ್ಣಕ ಮಾರ್ಗದಲ್ಲಿ ಈ ಕೃತಿಯನ್ನು ಹೇಳುವುದಾಗಿ ಹೇಳಿಕೊಂಡಿದ್ದಾಳೆ. ಆಕೆಗೆ ಶ್ರೀವೈಷ್ಣವ ಧರ್ಮದಲ್ಲಿ ಭಕ್ತಿಶ್ರದ್ಧೆಗಳಿದ್ದುವೆಂದು ಇದರಿಂದ ತಿಳಿಯಬಹುದಾಗಿದೆ. ಇದರ ಕಥೆಯು ಹಂದರ ಹೀಗೆ: ದೆಹಲಿಯ ಬಾದಶಹನಿಗೆ ಮಕ್ಕಳಿ ರಲಿಲ್ಲ. ಅವನ ಮನೆ ಕಳಾಹೀನವಾಗಿತ್ತು. ದೈವಕೃಪೆಯಿಂದ ಅವನಿಗೆ ಸತ್ಯಭಾಮೆಯೇ ವರನಂದಿಯೆಂಬ ಮಗಳಾಗಿ ಹುಟ್ಟಿದಳು. ಆ ಮಗು ಅಸಾಧಾರಣಶಿಶು ; ತಾಯ ಹಾಲನ್ನೊಲ್ಲದೆ ಎಣ್ಣೆಯುಣ್ಣುತ್ತಿತ್ತು ! ಒಮ್ಮೆ

ಅಶರೀರವಾಣಿಯಾಗಿ ಅದು ಅಲೌಕಿಕ ಶಿಶುವೆಂದೂ ಪರಮಾತ್ಮನನ್ನೇ ಲಗ್ನವಾಗುವುದಾಗಿಯೂ ಬ್ರಾಹ್ಮಣ ಸ್ತ್ರೀಯರಿಂದ ಸ್ತನ್ಯಪಾನ ಮಾಡಿಸಬೇಕೆಂದೂ ಸೂಚಿಸುತ್ತದೆ. ಬಾಲಲೀಲೆಗಳಿಂದ ವರನಂದಿಯು ಬೆಳೆದು ದೊಡ್ಡವಳಾಗಿ ಯೌವನವನ್ನು ಆಲಿಂಗಿಸುತ್ತಾಳೆ. ಒಮ್ಮೆ ಬಾದಷಹನು ದಿಗ್ವಿಜಯ ಸಂದರ್ಭದಲ್ಲಿ ಕನ್ನಡ ನಾಡಿಗೆ ಬಂದಾಗ ಚೆಲುವ ಚೆನ್ನಿಗರಾಯನ ವಿಗ್ರಹವನ್ನು ಉಪಾಯಾಂತರದಿಂದ ತರಿಸಿಕೊಂಡು ಮಗಳಿಗೆ ಕೊಡುತ್ತಾನೆ, ಆ ವಿಗ್ರಹವೇ ಆಕೆಗೆ ಪತಿಯಾಗುತ್ತದೆ. ಮುಂದೆ ಶ್ರೀರಾಮಾನುಜರ ದಿವ್ಯದೃಷ್ಟಿಗೆ ವಿಗ್ರಹ ದೆಹಲಿಯಲ್ಲಿರುವುದು ಗೋಚರವಾಗಿ ಅವರು ಹಲವು ರಾಜರ ದಂಡುಗಳನ್ನು ನಡೆಸಿಕೊಂಡು ಅಲ್ಲಿಗೆ ಹೊರಡುತ್ತಾರೆ. ಬಾದಷಹನು ಹೆದರಿ ಧನಕನಕಾದಿಗಳನ್ನು ಕೊಡುತ್ತಾನೆ; ಅವರು ಅಲ್ಲಿಯೇ ಕೆಲವು ಪವಾಡಗಳನ್ನು ಮೆರೆಯುತ್ತಾರೆ. ವಿಗ್ರಹವನ್ನು ತಮ್ಮೊಂದಿಗೆ ಕೊಂಡು ತೆರಳುತ್ತಾರೆ. ವರನಂದಿ ಆ ವಿಗ್ರಹವನ್ನೇ ಹಿಂಬಾಲಿಸಿ ಆ ದೇವರನ್ನೇ ಮದುವೆಯಾಗುತ್ತಾಳೆ.

ಈ ಕೃತಿಯ ಪದ್ಯಬಂಧ ಲಲಿತ, ಓಟ ಸರಾಗ, ಕಾವ್ಯಮಾರ್ಗ ಸಂಪ್ರದಾಯ ಶರಣ್ಯವಾದರೂ ಜೀವನಾನುಭವ ಸೀಮಿತವಾದರೂ ಕೆಲವು ವರ್ಣನೆಗಳು ಚೆನ್ನಾಗಿವೆ. ಉದಾಹರಣೆಗೆ, ವರನಂದಿಯ ಬಾಲ್ಯ, ಯೌವನ, ವಿರಹಾರ್ತತೆ ಇತ್ಯಾದಿ. ಹೊನ್ನಮ್ಮನ ಪ್ರಭಾವ ಬಹುಶಃ ಚೆಲುವಾಂಬೆಯ ಮೇಲೆ ಆಗಿದೆ ಎಂದು ಈ ಕೃತಿಯ ಆಧಾರದ ಮೇಲೆ ಅಭಿಪ್ರಾಯಪಡಲಾಗಿದೆ ('ಹದಿಬದೆಯ ಧರ್ಮ'ದ ಪೀಠಿಕೆ ಪು. ೩೯.)

೨. **ವೇಂಕಟಾಚಲ ಮಹಾತ್ಮ್ಯೆ ಲಾಲಿಪದ* :** — ಇದರಲ್ಲಿ ೨೦೩ ಲಾಲಿಪದಗಳಿವೆ. ವೇಂಕಟಾಚಲದ ಮಹಿಮೆಯನ್ನು ಯಮುನೆಯ ತೀರದ ಮುನಿಗಳಿಗೆ ಸೂತಮುನಿ ಹೇಳಿದನು. ಹಾಗೆಯೇ ವರಾಹರೂಪಿ ಶ್ರೀವಿಷ್ಣುವು ಭೂದೇವಿಗೆ ಪುರಾಣೋಕ್ತ ಕಥೆಗಳನ್ನೊರೆದನು. ವೇಂಕಟಾಚಲದ ವೃಷಭಾದ್ರಿ ಶೇಷಾದ್ರಿ ಮೊದಲಾದ ಬೇರೆ ಬೇರೆ ಶಿಖರಗಳಿಗೆ ಸಂಬಂಧಪಟ್ಟ ಹಲವು ಕಥೆಗಳನ್ನು ಲಾಲಿಪದಗಳಾಗಿ ಇಲ್ಲಿ ಹೇಳಿದೆ. ಈ ಪದಗಳಿಗೆ ಗೇಯಾನುಕೂಲವಾಗಿ ರಾಗ ಸಂಯೋಜನೆಯೂ ಉಂಟು. ಆದ್ಯಂತ ಪ್ರಾಸವಿರುವ ಚತುಷ್ಪದಿಗಳು ಇವು. ಇವು ಕರ್ಣಮಧುರವಾದ ಲಯಗತಿಯನ್ನು, ಹೃದಯಂಗಮ

ವಾದ ಲಲಿತಭಾವನೆಗಳನ್ನು ಒಳಗೊಂಡು ಹೆಂಗಳೆಯರನ್ನು ರಂಜಿಸುವ 'ಪುರಾಣ ಪುಣ್ಯಕಥೆ' ಯಾಗಿದೆ.

೩. ಅಲರ್ಮೇಲುಮಂಗೆ ಲಾಲಿಪದ*: ೩೫ ಪದಗಳಿವೆ. ಅಲರ್ಮೇಲು ಮಂಗೆಯ ಸರ್ವಾಂಗ ಸೌಂದರ್ಯವನ್ನೂ ಸರ್ವಗುಣಪರಿಪೂರ್ಣತೆಯನ್ನೂ ಸ್ತುತಿರೂಪದಲ್ಲಿ ಕವಿತೆಯಾಗಿ ರಚಿಸಿದೆ. ಲಕ್ಷ್ಮಿಯ ಸೌಂದರ್ಯ ವರ್ಣನೆ ಸಾಂಪ್ರದಾಯಿಕವಾದರೂ ತಕ್ಕಷ್ಟು ಚಮತ್ಕಾರದ ಕಲ್ಪನೆಗಳಿವೆ.

೪. ತುಲಾಕಾವೇರೀ ಮಾಹಾತ್ಮ್ಯ ಟೀಕೆ: "ಇದು ಆಗ್ನೇಯ ಪುರಾಣೋಕ್ತ ತುಲಾಕಾವೇರಿ ಮಾಹಾತ್ಮ್ಯಕ್ಕೆ ಗದ್ಯರೂಪವಾದ ಕನ್ನಡ ವ್ಯಾಖ್ಯಾನ. ೩೦ ಅಧ್ಯಾಯಗಳಿವೆ. ಇದಕ್ಕೆ 'ಚೆಲುವಾಂಬಿಕಾ ವಾಣೀವಿಲಾಸ' ವೆಂದು ಹೆಸರು. ಗ್ರಂಥಾಂತ್ಯದಲ್ಲಿರುವ ಒಂದು ಶ್ಲೋಕದಿಂದ ಚೆಲುವಾಂಬೆಯ ಅಂಕಿತದಲ್ಲಿ ಮೌದ್ಗಲ್ಯ ಗೋತ್ರದ ವೇಂಕಟಾರ್ಯನ ಮಗನಾದ ಶ್ರೀನಿವಾಸನು ಈ ಟೀಕೆಯನ್ನು ಬರೆದಂತೆ ತೋರುತ್ತದೆ". (ಕರ್ಣಾಟಕ ಕವಿಚರಿತೆ III-೨೫.)

೫. ಕೃಷ್ಣಕರ್ಣಾಮೃತ ಟೀಕೆ: — ಇದರ ಬಗೆಗೆ ವಿವರ ತಿಳಿಯದು.

ಹೆಳವನಕಟ್ಟೆ ಗಿರಿಯಮ್ಮ (ಸು. ೧೭೫೦)

ಬ್ರಾಹ್ಮಣ ಕವಿ; ಹೆಳವನಕಟ್ಟೆ ರಂಗನಾಥನು ಇಷ್ಟ ದೈವ. ಆದರೆ ಹರಿಹರರಲ್ಲಿ ಸಮಾನಭಕ್ತಿ. ಮೈಸೂರು ಪ್ರಾಂತದ ಹರಿಹರದ ರಾಣಿಬೆನ್ನೂರು ಹುಟ್ಟೂರು. ಹರಿಹರದ ಬಳಿಯ ಕೊಮಾರನಹಳ್ಳಿಯಲ್ಲಿದ್ದಂತೆ ಪ್ರತೀತಿ. ತಂದೆ ಭಿಷ್ಟಪ್ಪ, ಪತಿ ತಿಪ್ಪರಸ. "ವಿವಾಹಿತೆಯಾಗಿದ್ದರೂ ವೈರಾಗ್ಯಶೀಲೆಯಾಗಿ ವಿಷ್ಣುಭಕ್ತಿಯಲ್ಲಿ ತನ್ಮಯಳಾಗಿ ಬಾಳಿದಳು". ಈಕೆ ಪರಮ ವೈರಾಗ್ಯನಿಧಿಯೂ ದೈವ ಸಾಕ್ಷಾತ್ಕಾರ ಪಡೆದ ಉಜ್ವಲ ದೈವಭಕ್ತಳೂ ಆಗಿದ್ದಂತೆ ದೈವಾಂಶ ಸಂಭೂತೆಯಾಗಿ ಹಲವು ಪವಾಡ ಕಾರ್ಯಗಳನ್ನು ಮೆರೆದಂತೆ ಇವಳ ವಿಷಯವಾಗಿ ಜನಸಾಮಾನ್ಯರಲ್ಲಿ ಪ್ರಚಾರವಾಗಿರುವ ಹಲವು ಕಥೆಗಳಿಂದ ತಿಳಿದುಬರುತ್ತದೆ. ಗ್ರಂಥಗಳು : 'ಚಂದ್ರಹಾಸನ ಕಥೆ,' 'ಸೀತಾಕಲ್ಯಾಣ' 'ಉದ್ದಾಳಿಕನ ಕಥೆ', ಹಾಡುಗಳು ಅಥವಾ ಕೀರ್ತನೆಗಳು (ಬ್ರಹ್ಮಕೊರವಂಜಿ,

ಗಜೇಂದ್ರಮೋಕ್ಷ, ಗಿಳಿಪಾರಿಜಾತ ಮುಂತಾದುವನ್ನೂ ಇವಳೇ ಬರೆದಿರಬಹುದೆಂದು ಕೆಲವರ ಊಹೆ). ಈಕೆಯ ಮೂರು ಕೃತಿಗಳೂ ಕೆಲವು ಕೀರ್ತನೆಗಳೂ ದೊರೆತಿದ್ದು, 'ಸೀತಾಕಲ್ಯಾಣ'ವೊಂದನ್ನುಳಿದು ಉಳಿದುವೆಲ್ಲ ಅಚ್ಚಾಗಿವೆ.

ಈಕೆಯ ಕೃತಿಗಳಲ್ಲಿ ಹೆಳವನಕಟ್ಟೆ ರಂಗನಾಥನ ಅಂಕಿತವಿರುತ್ತದೆ. ಈಕೆಗೆ ಪ್ರಾಯಶಃ ಗುರುಮುಖದಿಂದ ಕ್ರಮವಾಗಿ ವಿದ್ಯಾಭ್ಯಾಸವಾಗಿರಲಾರದು. ಆದರೆ ಪೂರ್ವಕಾವ್ಯಗಳ ಪುರಾಣೇತಿಹಾಸಗಳ ಒಳ್ಳೆಯ ಪರಿಚಯವಿದ್ದಂತೆ ತೋರುತ್ತದೆ. ಇವಳ ಕಾವ್ಯಶಕ್ತಿ ನೈಸರ್ಗಿಕವೂ ಪ್ರಾಸಾದಿಕವೂ ಆದದ್ದು. "ಈಕೆಯ ಕೃತಿಗಳಲ್ಲಿ ಶುದ್ಧ ದೇಸಿಯ ಸರಳ ಸೌಂದರ್ಯವೂ ನಿರ್ವ್ಯಾಜವಾದ ಭಾವನಾಶಕ್ತಿಯೂ ಇದೆ" ಎಂಬುದು ದಿಟ. ಈಕೆ ಸೌಜನ್ಯಶಾಲಿಯಾದ ಕವಿ. ಕೃತಿರಚನೋದ್ದೇಶ, ಪ್ರೌಢರಿಗೆ ರಮ್ಯಕಾವ್ಯಕಥನವಲ್ಲ; ಜನಸಾಮಾನ್ಯರಿಗೆ–ಅದರಲ್ಲಿಯೂ ಸ್ತ್ರೀಸಮುದಾಯಕ್ಕೆ–ಭಕ್ತಿಮಾರ್ಗ ಪ್ರೇರಣೆ, ಹಾಗೂ ಸ್ವಕರ್ಮ ಖಂಡನ. ಈಕೆ ಕನ್ನಡ ಕಬ್ಬಿಗಿತಿಯರಲ್ಲಿ ಅಗ್ರಪಂಕ್ತಿಯ ಭಕ್ತಕವಿ, ಸಮರ್ಥಕವಿ.

೧. **ಚಂದ್ರಹಾಸನ ಕಥೆ:** ಇದು ಒಂದು ಜನಪ್ರಿಯವಾದ ಸಾಂಗತ್ಯಗ್ರಂಥ. ಇದರಲ್ಲಿ ೪ ಸಂಧಿಗಳು, ೩೫೫ ಪದ್ಯಗಳಿವೆ (ಕರ್ಣಾಟಕ ಕವಿಚರಿತೆ–೫ ಸಂಧಿಗಳು; ೪೨೨ ಅಥವಾ ೪೩೧ ಪದ್ಯಗಳು). ಜೈಮಿನಿ ಭಾರತದ ಚಂದ್ರಹಾಸೋಪಾಖ್ಯಾನವೇ ಇದರ ಮೂಲ. ಅಲ್ಲಿಯ ಉಕ್ತಿಗಳನ್ನೂ ಭಾವನೆಗಳನ್ನೂ ಇಲ್ಲಿ ಹಿತಮಿತವಾಗಿ ಬಳಸಿಕೊಂಡಿದೆ. ಇದೊಂದು ಸರಳ ಸುಂದರ ಲಘುಕೃತಿ. ಕಥೆಯ ಹರವು ಸರಳ, ಓಟ ಸಲೀಲ, ಮಾತು ಲಲಿತ ಹಾಗೂ ರಸಮಯ. ವರ್ಣನೆಗಳು ಚಿಕ್ಕವಾದರೂ ಚೊಕ್ಕವಾಗಿವೆ. ವಸ್ತು ಧಾರ್ಮಿಕವಾದರೂ ನಿರೂಪಣೆ ಕಾವ್ಯಮಯ. ಅರ್ಥಸೌಲಭ್ಯವಿರುವ ತಿಳಿಗನ್ನಡದ ಲಲಿತಕಾವ್ಯ ಇದು. ಸಂಕ್ಷೇಪವಾಗಿ ಕಥಾವಸ್ತು ಹೀಗಿದೆ: ಚಂದ್ರಹಾಸನು ಹುಟ್ಟಿದ ಹೊಸದರಲ್ಲಿಯೇ ತಾಯಿ ತಂದೆಗಳು ತೀರಿಕೊಂಡರು. ದಾಸಿ ಹಾಗೂ ಕೇರಿಯ ಹೆಂಗಳ ಕರುಣೆಯ ಕಂದನಾಗಿ ಹೇಗೋ ಕಷ್ಟದಲ್ಲಿ ಬೆಳೆದನು. ಕುಂತಳರಾಜ್ಯದ ಮಂತ್ರಿ ದುಷ

ಬುದ್ಧಿಯು ಈ ಅನಾಥ ಬಾಲಕನೇ ಮುಂದೆ ರಾಜ್ಯದ ಪ್ರಭುವಾಗುವ ನೆಂಬುದನ್ನು ಬ್ರಾಹ್ಮಣ ಮುಖದಿಂದ ಕೇಳಿ ಅಸೂಯೆಗೊಂಡನು. ಚಂದ್ರಹಾಸನ ಕೊಲೆಗೆ ಅವನು ನಡಸಿದ ಪ್ರಯತ್ನಗಳೆಲ್ಲ ವಿಧಿವಿಲಾಸದಿಂದ ವಿಫಲವಾದವು. ಕೊನೆಗೆ ತನ್ನ ತಪ್ಪಿನಿಂದಲೇ ಅಚಾತುರ್ಯ ನಡೆದು ಸತ್ತ ಮಗನೊಡನೆ ತಾನೂ ಸತ್ತು, ಚಂದ್ರಹಾಸನ ದಯೆ ದೈವಭಕ್ತಿಗಳ ಫಲವಾಗಿ ಬದುಕಿ ಬುದ್ಧಿಗಲಿತನು. ದೈವಭಕ್ತಿಯ ಹಿರಿಮೆ, ದೈವಶಕ್ತಿಯ ಮಹಿಮೆ - ಇವನ್ನು ಹರಿಭಕ್ತನಾದ ಚಂದ್ರಹಾಸನ ದೃಷ್ಟಾಂತ ಕಥೆಯ ಮೂಲಕ ಜನಸಾಮಾನ್ಯರಿಗೆ ಪ್ರತಿಪಾದಿಸುವುದೇ ಈ ಕೃತಿಯ ಉದ್ದೇಶ.

೨. **ಉದ್ದಾಳಿಕನ ಕಥೆ:**—ಇದು ಇನ್ನೊಂದು ಜನಪ್ರಿಯವಾದ ಸಾಂಗತ್ಯಗ್ರಂಥ. ಪದ್ಯಸಂಖ್ಯೆ ೪೪೭. ಈಗ ಹತ್ತಿಪ್ಪತ್ತು ವರ್ಷಗಳ ಹಿಂದೆ ಅಲ್ಲಲ್ಲಿ ಯಾರಾದರೊಬ್ಬರ ಮನೆಯಲ್ಲಿ ಹೆಂಗಸರು ಗುಂಪುಗೂಡಿ ಈ ಕಥೆಯನ್ನು ಓದಿ, ಓದಿಸಿ ಕೇಳುತ್ತಿದ್ದ ನೆನಪು ನನಗುಂಟು. ಅದು ಕಾಲಕ್ಷೇಪಕ್ಕೂ ಪುಣ್ಯಾರ್ಜನೆಗೂ ದಾರಿಯೆಂದು ಅವರು ಭಾವಿಸಿದ್ದರು. ಏಕೆಂದರೆ ಇಲ್ಲಿಯ ಕಥಾವಸ್ತು ಸ್ತ್ರೀಯರಿಗೆ ತುಂಬ ಆತ್ಮೀಯ; ನಿರೂಪಣೆಯ ರೀತಿ ಸುಲಭವೇದ್ಯ ಮತ್ತು ಹೃದ್ಯ. ಸಾಂಸಾರಿಕ ಸುಖದುಃಖಗಳಿಂದ ಹದಗೊಂಡ ಸುಸಂಸ್ಕೃತ ಸ್ತ್ರೀಹೃದಯದ ಕೋಮಲಾಂತಃಕರಣ ಈ ಕಾವ್ಯದ ತುಂಬ ಅರಳಿ ಪರಿಮಳಿಸಿದೆ. ಕವಿಯು ಇಲ್ಲಿ ಸ್ತ್ರೀತ್ವದ ಸಾರಸರ್ವಸ್ವವನ್ನು ಹೃದಯಸ್ಪರ್ಶಿಯಾಗುವಂತೆ ತೆರೆದು ತೋರಿದ್ದಾಳೆ. ಇಲ್ಲಿಯ ವ್ಯಕ್ತಿಲೋಕ ಅತಿ ಸರಳಸ್ವಭಾವದ್ದು; ನಿತ್ಯಸಾಧಾರಣವಾದ್ದು. 'ಚಂದ್ರಹಾಸನ ಕಥೆ'ಗಿಂತ ಇಲ್ಲಿಯ ಕಾವ್ಯಗುಣ ಉತ್ತಮವಾದ್ದು, ಕಥೆ ಸ್ವಾರಸ್ಯವಾದ್ದು, ವರ್ಣನೆಗಳು ಚಿತ್ರವತ್ತಾದ್ದು, ಉಳಿದಂತೆಲ್ಲ ಚಂದ್ರಹಾಸನ ಕಥೆಯಂತೆಯೇ. ಸಾಂಗತ್ಯದ ಸವಿ ಸೊಗಸು ಇಲ್ಲಿ ಸೊಂಪಾಗಿ ಹರಡಿದೆ. ಸಾಮಾನ್ಯ ಸ್ತ್ರೀಪ್ರತೀಕವಾದ ಚಂದ್ರಾವತಿಯ ಗರ್ಭಿಣೀ ಸಹಜವಾದ ಬಯಕೆ, ಅವಳ ಅರಣ್ಯರೋದನ, ಅವಳ ಮಗುವಿನ ಬಾಲಲೀಲೆ, ಮದುವೆಯ ಸಮಾರಂಭ-ಇವೆಲ್ಲ ಸಹಜ ಸುಂದರವೂ ರಸಾರ್ದ್ರವೂ ಆಗಿದ್ದು, ಗಿರಿಯಮ್ಮನ ಲೋಕಾನುಭವದ ನೈಜಚಿತ್ರಗಳಾಗಿವೆ. ಕಥೆಯ ಹಂದರ ಹೀಗೆ: ಅಯೋಧ್ಯೆಯಲ್ಲಿ ರಘುಮಹಾರಾಜನು ಆಳುತ್ತಿದ್ದನು,

ಇಲ್ಲಿಯೇ ಉದ್ದಾಳಿಕನೆಂಬ ಬ್ರಾಹ್ಮಣ ಒಬ್ಬನಿದ್ದನು. ಈತನು ಬ್ರಹ್ಮಚರ್ಯ ದಲ್ಲಿದ್ದು ದೀರ್ಘತಪಸ್ಸನ್ನು ಆಚರಿಸಿದನು. ಪುತ್ರನಿಂದ ಸಂತಾನ ಬೆಳೆಯದೆ, ಇವನ ಪಿತೃಗಳು ಸದ್ಗತಿಯಿಲ್ಲದೆ, ನರಕದಲ್ಲಿ ನರಳಬೇಕಾಯಿತು. ಆದ್ದರಿಂದ ಉದ್ದಾಳಿಕನು ಮದುವೆಯಾಗಬೇಕಾಯಿತು. ಆದರೆ ಮುದುಕನಿಗೆ ಹೆಣ್ಣು ಕೊಡುವವರು ಯಾರು ? ತಾನೇ ಸತ್ಯಲೋಕಕ್ಕೆ ತೆರಳಿ ಬ್ರಹ್ಮನನ್ನು ಪ್ರಶ್ನಿಸಿ ದನು. ರಘುರಾಜಪುತ್ರಿ ಚಂದ್ರಾವತಿಯೇ ಇವನ ಭಾವಿಪತ್ನಿಯೆಂದೂ ಪುತ್ರೋ ದಯವಾದ ಏಳು ವರ್ಷಗಳಿಗೆ ಅವಳು ಗೋಚರವಾಗುವಳೆಂದೂ ತಿಳಿದು ಬಂತು. ಒಂದು ದಿನ ಚಂದ್ರಾವತಿ ಸಖೀಸಹಿತೆಯಾಗಿ ಉದ್ದಾಳಿಕನ ಆಶ್ರಮ ದೆಡೆಯ ಸರಸ್ಸಿಗೆ ಬಂದಳು. ಆವೇಳೆಗೆ ಗಗನಗಾಮಿನಿಯಾಗಿದ್ದ ರಂಭೆಯನ್ನು ನೋಡಿ ಋಷಿಗೆ ಇಂದ್ರಿಯಕ್ಷರಣೆಯಾಗಿ ವಿಧಿವಿಲಾಸದಿಂದ ಅದು ಚಂದ್ರಾ ವತಿಯ ಗರ್ಭವನ್ನು ಸೇರಿತು. ಕನ್ಯೆ ಚಂದ್ರಾವತಿ ಗರ್ಭಿಣಿಯೆಂದು ಸ್ವಲ್ಪ ಕಾಲದಲ್ಲಿಯೇ ತಿಳಿದ ತಾಯಿತಂದೆಗಳು ಭಯಗೊಂಡರು. ಲೋಕಾಪವಾದ ಭೀತಿಯಿಂದ ಅವಳನ್ನು ಕಟುಕರ ಕೈಗೊಪ್ಪಿಸಿ ಕೊಲೆಮಾಡಬೇಕೆಂದು ರಾಜಾಜ್ಞೆ ಯನ್ನು ಮಾಡಲಾಯಿತು. ಕಟುಕರು ಅವಳಲ್ಲಿ ಕರುಣೆಗೊಂಡು ಕೊಲ್ಲದೆ ಬಿಟ್ಟರು. ಆಕೆ ಹೇಗೋ ಮುನಿಯೊಬ್ಬನ ಆಶ್ರಮದಲ್ಲಿ ಸ್ವಲ್ಪ ದಿನಗಳಿದ್ದು ಒಂದು ಗಂಡುಮಗುವನ್ನು ಹಡೆದಳು ಉದ್ದಾಳಿಕನ ಪಿತೃಗಳೇನೋ ಸ್ವರ್ಗವನ್ನು ಸೇರಿದರು. ಆದರೆ ಇತ್ತ ಚಂದ್ರಾವತಿ ಹೆದರಿ ಆ ರಾತ್ರಿಯೆ ನದಿಯಲ್ಲಿ ಮಗುವನ್ನು ತೇಲಿಬಿಟ್ಟಳು. ವಿಧಿಸಂಕಲ್ಪದಂತೆ ಮಗು ಮರುದಂಡೆ ಯತ್ನಣ ಉದ್ದಾಳಿಕನ ಕೈಸೇರಿತು. ಆ ಮಗುವನ್ನು ಆತನು ತನ್ನದೆಂದೇ ಗುರುತಿಸಿ ಅದನ್ನು ಏಳು ವರ್ಷ ಬೆಳೆಸಿದನು. ಚಂದ್ರಾವತಿ ಅಲ್ಲಲ್ಲಿ ಅಲೆಯುತ್ತ ಅನಾಥ ಸ್ಥಿತಿಯಲ್ಲಿ ಅದೇ ಆಶ್ರಮಕ್ಕೆ ಬಂದು ಸೇರಿದಳು ಮಗನನ್ನು ಗುರುತಿಸಿ ಹರ್ಷಿಸಿದಳು ಆದರೆ ತಂದೆಯ ಭಯದಿಂದಾಗಿ ಬಾಲಕನು ಆಕೆಯನ್ನು ಆಶ್ರಮದಲ್ಲಿರಗೊಡಲಿಲ್ಲ. ಮುನಿಗೆ ಮಗನಿಂದ ವಿಷಯ ತಿಳಿದ ಮೇಲೆ, ಹಾಗೆ ಬಂದು ಹೋದವಳು ರಂಭೆಯೆಂದೇ ಭಾವಿಸಿ ಮುನಿವೃಂದದೊಡನೆ ತನ್ನ ಪೂರ್ವಸಂಗತಿಯನ್ನೆಲ್ಲ ಹೇಳಿಕೊಂಡನು. ಚಂದ್ರಾವತಿಯನ್ನೇ ಪ್ರತ್ಯೇಕವಾಗಿ ಮುನಿಗಳು ಪ್ರಶ್ನಿಸಲಾಗಿ ಇಬ್ಬರ ಹೇಳಿಕೆಗಳೂ ಸರಿಹೊಂದಿಕೊಂಡವು. ಅವರ ಪ್ರಯತ್ನ ಫಲಿಸಿ ರಾಜಧಾನಿಯಿಂದ ರಾಜರಾಣಿಯರೂ ಬಂದರು. ಮಗಳನ್ನು

ಗುರುತಿಸಿ ಹರ್ಷಿಸಿದರು. ದೇವತೆಗಳು ಪ್ರತ್ಯಕ್ಷರಾಗಿ ಉದ್ದಾಳಿಕನಿಗೆ ದೀರ್ಘಾಯುಷ್ಯವನ್ನೂ ಯೌವನವನ್ನೂ ಅನುಗ್ರಹಿಸಿದರು. ಮದುವೆಯು ಮಂಗಳ ಜರುಗಿತು. ಉದ್ದಾಳಿಕನು ಪತ್ನೀಪುತ್ರರೊಡಗೂಡಿ ಆನಂದಿಸಿದನು.

'ಪುತ್ರನಿಲ್ಲದೆ ಸದ್ಗತಿಯಿಲ್ಲ' ಎಂಬ ಶ್ರುತಿತತ್ತ್ವವನ್ನು ಜನಸಾಮಾನ್ಯರಿಗೆ ಸಾರುವುದೇ ಈ ಕಥೆಯ ಉದ್ದೇಶ.

ಸೀತಾಕಲ್ಯಾಣ* :—ಇದರಲ್ಲಿ ಹಾಡಿನ ಮಟ್ಟಿನ ೮೭ ಪದ್ಯಗಳಿವೆ. ಪ್ರತಿಪದ್ಯವೂ ಜಯ ಜಯಾ ಎಂಬ ಮಾತಿನಿಂದ ಮುಗಿಯುತ್ತದೆ. ಇದರಲ್ಲಿ ಸೀತಾರಾಮರ ವಿವಾಹ ಪ್ರಸಂಗವನ್ನು ವರ್ಣಿಸಿದೆ. ಅದರಲ್ಲಿಯೂ ಮದುವೆಯ ಳ ದಿವಸಗಳಲ್ಲಿ ಮದುವಣಿಗನಾದ ಶ್ರೀರಾಮನು ಮದುವಣಿಗಿತ್ತಿ ಸೀತೆಗೆ ಅರಿಸಿನೆಣ್ಣೆ ಮಾಡುವ ಪ್ರಸಂಗ ಇಲ್ಲಿ ಉಕ್ತವಾಗಿದೆ. ರಾಮನಿಗೆ ಅರಿಸಿನೆಣ್ಣೆ ಮಾಡಲು ಕೌಸಲ್ಯೆ ಕೇರಿಕೇರಿಯ ಮುತ್ತೈದೆಯರನ್ನು ಆಹ್ವಾನಿಸಿದ್ದು, ಸೀತೆಯು ರಾಮನ ಪಾದಗಳಿಗೆ ಅರಿಸಿನ ಹಚ್ಚುವ ಮುಚ್ಚಟೆ—ಇಂಥ ಕಡೆ ಗಿರಿಯಮ್ಮ ತಾನೇ ಕಂಡಿರಬಹುದಾದ ಆಧುನಿಕವೂ ಆತ್ಮೀಯವೂ ಆದ ವಿವಾಹದ ಚಿತ್ರವನ್ನು ಕೊಡುತ್ತಾಳೆ. ವಸ್ತು ಯಾವುದೇ ಇರಲಿ, ವರ್ಣನೆ ಯಾವುದೇ ಇರಲಿ, ತನ್ನ ವ್ಯಕ್ತಿವೈಶಿಷ್ಟ್ಯದ ಸ್ವಾನುಭವ ಸಂಪತ್ತಿಯ ಬಣ್ಣವನ್ನು ತುಂಬಿಸಿ, ಓದುಗರು ಅವುಗಳನ್ನು ಆತ್ಮೀಯತೆಯಿಂದ ಅನುಭವಿಸುವಂತೆ ಮಾಡುವ ಕವಿಪ್ರಕೃತಿ ಗಿರಿಯಮ್ಮನಿಗೆ ವಿಶೇಷ.

ಒಟ್ಟಿನಲ್ಲಿ ಕಾವ್ಯದೃಷ್ಟಿಯಿಂದ ಮಹತ್ತ್ವವಾದುದನ್ನು ಕಾಣದೇ ಹೋದರೂ ಕವಿಯ ಸ್ತ್ರೀಸಹಜ ಕೋಮಲ ಮನೋಧರ್ಮ, ದೈವಭಕ್ತಿ ಪ್ರೇರಿತವಾದ ಆಶುಕವಿವಾಣಿಯನ್ನು ಇಲ್ಲಿ ಕಾಣಬಹುದು. ಹೆಂಗಸರು ಹಬ್ಬಹರಿದಿನಗಳಲ್ಲಿ ಹಾಡಿಕೊಳ್ಳಲಿ, ಹಾಡಿ ಕೇಳಿಸಲಿ, ಪುಣ್ಯಸಂಪಾದನೆ ಮಾಡಲಿ-ಎಂಬುದು ಕವಿಯ ಉದ್ದೇಶವೆಂದು ಹೇಳಬಹುದು.

ಹಾಡುಗಳು ಅಥವಾ ಕೀರ್ತನೆಗಳು

ಈಕೆ ರಚಿಸಿರಬಹುದಾದ ಕೀರ್ತನೆಗಳ ಸಂಖ್ಯೆ ಎಷ್ಟೆಂದು ತಿಳಿಯದು. ಕೆಲವು ದೊರೆತು ಅಚ್ಚಾಗಿವೆ. ಇವೆಲ್ಲ ಬಹುಮಟ್ಟಿಗೆ ಅಪ್ರಯತ್ನವಾಗಿ

ಸಮಯಸ್ಫೂರ್ತಿಯಿಂದ ಹುಟ್ಟಿಬಂದ ಭಾವಗೀತೆಗಳೆನ್ನುವಂತಿವೆ. ರಾಗ ಸಂಯೋಜನವೂ ಉಂಟು. ಇಲ್ಲಿಯ ವಸ್ತು ಹರಿಭಕ್ತಿಯೇ ; ಆದರೆ ಅಲ್ಲಲ್ಲಿ ಹರಭಕ್ತಿಯೂ ವಸ್ತುವಾಗಿರುವುದುಂಟು. ಎಲ್ಲ ದೈವಗಳಲ್ಲಿಯೂ ಜಡಚೇತನಗಳಲ್ಲಿಯೂ ಗಿರಿಯಮ್ಮನು ಹೆಳವನಕಟ್ಟೆ ರಂಗಸ್ವಾಮಿಯನ್ನೇ ಕಾಣುತ್ತಾಳೆ. ಪರಮಾತ್ಮನಲ್ಲಿ ಆತ್ಮಾರ್ಪಣೆ, ಅವನ ದರ್ಶನಾನಂದ, ಕಲ್ಯಾಣ ಗುಣಸಂಕಥನ, ನಾಮಸ್ಮರಣೆ, ಮೊದಲಾದವು ಈ ಕೀರ್ತನೆಗಳ ವಿವರ. ಅಲ್ಲಲ್ಲಿ ಸುಖದುಃಖಾನುಭವ ವಿಶೇಷಗಳೂ ವ್ಯಕ್ತವಾಗಿವೆ. ಕೆಲವು ಸಂದರ್ಭವಿಶೇಷಗಳಲ್ಲಿ ತೀರ್ಥಯಾತ್ರಾ ಸಂದರ್ಭದಲ್ಲಿ ಹೇಳಿದ ಹಲವು ಹಾಡುಗಳೂ ಉಂಟು. ಇಲ್ಲೆಲ್ಲ ಅವಳ ಹರಿಭಕ್ತಿಯಿಂದ ಆರ್ದ್ರವಾದ ಹೃದಯ, ಸ್ತ್ರೀಸಹಜ ಕೋಮಲಾಂತಃಕರಣ, ಕವಿಪ್ರಕೃತಿ ಇವುಗಳನ್ನು ನಾವು ಕಾಣಬಹುದು. ಇಲ್ಲಿಯ ಕೆಲವು ಕೀರ್ತನೆಗಳಲ್ಲಿ ಬೇರೆ ಬೇರೆ ಅಂಕಿತಗಳೂ ಇವೆ. ಕೆಲವು ಕೀರ್ತನೆಗಳು ಪ್ರೌಢವಾಗಿಯೂ ಇವೆ.

ಮಹಾಲಕ್ಷ್ಮಿ (ಸು. ೧೭೫೦)

'ಶ್ರೀರಾಮಪಟ್ಟಾಭಿಷೇಕ'ವೆಂಬ ಗ್ರಂಥ ಮೊದಲೆರಡು ಬಾರಿ ಎಂದರೆ ೧೮೯೭–೯೮ರಲ್ಲಿ ಪ್ರಕಟವಾದಾಗ ಮಹಾಲಕ್ಷ್ಮಿಯೆಂಬಾಕೆಯ ಹೆಸರಿನಲ್ಲಿ ಪ್ರಕಟವಾಯಿತು. ಈ ಕಾವ್ಯದ ಸಂಶೋಧಕರು ಇದು ಸ್ತ್ರೀಕವಿ ರಚಿತವಾದ್ದೆಂದೇ ಭಾವಿಸಿ ಪೀಠಿಕೆಯನ್ನೂ ಬರೆದರು. ಮೊದಲು ಕವಿಚರಿತೆಕಾರರು ಕೂಡ ಹೀಗೆಯೇ ಭ್ರಾಂತಿಪಟ್ಟು ೧೮ನೆಯ ಶತಕದ ಕವಿಗಳ ಸಾಲಿನಲ್ಲಿ ಈ ಹೆಸರನ್ನು ಸೇರಿಸಿದರು. ಆದರೆ ಮುಂದೆ ಈ ಗ್ರಂಥವು ೧೯ನೆಯ ಶತಕದ ಮುದ್ದಣನೆಂಬ ಆಧುನಿಕ ಕವಿ ರಚಿಸಿದ್ದೆಂದೂ ಆತನು ಕಾರಣಾಂತರಗಳಿಂದ ಇದನ್ನು ತನ್ನ ತಾಯಿಯ ಹೆಸರಿನಲ್ಲಿ ಬರೆದು ಪ್ರಸಿದ್ಧಿಸಲು ಯತ್ನಿಸಿದನೆಂದೂ ಬರೆದರು.

ಹತ್ತೊಂಬತ್ತನೆಯ ಶತಮಾನ

ಸಿ. ಆರ್. ಚೆಲ್ಲಮ್ಮ (ಸು. ೧೯೦೦)

ಈಕೆ ಬ್ರಾಹ್ಮಣ ಕವಿ. ಕೃಷ್ಣಾ ಜಿಲ್ಲೆಯ ಇಕ್ಷುಗ್ರಾಮ (ಚೆಱುಕುಪಲ್ಲಿ ?) ಎಂಬ ಸಣ್ಣ ಗ್ರಾಮದಲ್ಲಿ ಇರುತ್ತಿದ್ದ ಯೆಲ್ಲಾಪ್ರಗಡ ವಂಶದ ಆಂಧ್ರ

ಆರುವೇಲುನಿಯೋಗಿಗಳ ಮನೆತನದಲ್ಲಿ ಹುಟ್ಟಿದ ರಾಮಯ್ಯ ಮತ್ತು ಸೀತಮ್ಮ ಎಂಬ ದಂಪತಿಗಳಿಗೆ ಈಕೆ ಮಗಳೆಂದೂ, ತಂದೆಯಾದ ರಾಮಯ್ಯನು ಉಪಜೀವನಕ್ಕಾಗಿ ಕರ್ಣಾಟಕದಲ್ಲಿ ಬಂದು ನೆಲೆಸಿದಮೇಲೆ ಇಲ್ಲಿಯೇ ತಾನು ಹುಟ್ಟಿದುದಾಗಿಯೂ, ಮೈಸೂರು ಮಹಾರಾಣಿ ಬಾಲಿಕಾ ಪಾಠಶಾಲೆಯಲ್ಲಿ ತಾನು ಉಪಾಧ್ಯಾಯಿನಿಯಾಗಿ 'ಶ್ರೀಹರಿಕಥಾಮೃತಭೂತಿ'ಯನ್ನು ಅನುಭವಿಸಿದ ಫಲವಾಗಿ ರುಕ್ಮಿಣೀ ಪರಿಣಯವೆಂಬ ಕಾವ್ಯವನ್ನು ತಾನು ರಚಿಸಿದುದಾಗಿಯೂ ಆ ಕೃತಿಯಲ್ಲಿ ಸ್ವವಿಚಾರವನ್ನು ಹೇಳಿಕೊಂಡಿದ್ದಾಳೆ.

ಗ್ರಂಥಗಳು :—ರುಕ್ಮಿಣೀ ಪರಿಣಯ, ಪಾರಿಜಾತಾಪಹರಣ, ರಾಜಕಲಾನಿಧಿ, ವೈರಾಗ್ಯಮಂಜರಿ, ದ್ವಾದಶಮಂಜರೀ ಸ್ತೋತ್ರ, ಗೀತಿಕಾಲಹರಿ (ಕರ್ಣಾಟಕ ಕವಿಚರಿತೆ, III) ಇವುಗಳಲ್ಲಿ ಮೊದಲೆರಡು ಪ್ರಕಟವಾಗಿದ್ದು ದೊರೆಯುತ್ತವೆ.

ರುಕ್ಮಿಣೀ ಪರಿಣಯ :—೫ ಆಶ್ವಾಸಗಳಿರುವ ಭಾಮಿನಿಷಟ್ಪದಿಕಾವ್ಯ. ೧೮೯೫ರಲ್ಲಿ ಮೈಸೂರಿನಲ್ಲಿ ಅಚ್ಚಾಗಿದೆ. ಕೃಷ್ಣರುಕ್ಮಿಣಿಯರ ವಿವಾಹ ಪ್ರಸಂಗವನ್ನು ಕುರಿತಿದೆ. ಕಥೆಯ ಗತಿಯಲ್ಲಿ ಚುರುಕಿದೆ. ವರ್ಣನೆಯಲ್ಲಿ ಗಾಂಭೀರ್ಯವಿದೆ. ಕೃಷ್ಣನಿಗಾಗಿ ಹಂಬಲಿಸುತ್ತಿದ್ದ ರುಕ್ಮಿಣಿಯ ವರ್ಣನೆ ಸ್ವಲ್ಪ ಹೃದ್ಯವಾಗಿದೆ. ಆದರೆ ಸಾಮಾನ್ಯವಾಗಿ ಅಲಂಕಾರ ರಮ್ಯತೆ, ಕಲ್ಪನಾಸಂಪತ್ತಿ ಕಾಣುವುದಿಲ್ಲ. ನಿರಾಡಂಬರವಾದ ಸಹಜೋಕ್ತಿ ಕೆಲವೆಡೆ ಚೆನ್ನಾಗಿದೆ. ಆಧುನಿಕ ಶಬ್ದಪ್ರಯೋಗಗಳಿವೆ. ಷಟ್ಪದಿಗಳ ರಚನೆಯಲ್ಲಿ ಶೈಥಿಲ್ಯವಿಲ್ಲದಿದ್ದರೂ ಪ್ರೌಢತೆಯಿಲ್ಲ. ಲಕ್ಷಣಾನ್ವಿತವಾಗಿದ್ದರೂ ಕೃತಕತೆಯಿದೆ. ಶೈಲಿ ಲಲಿತವೂ ಸುಲಭವೂ ಆಗಿದೆ. ಈ ಪುಟ್ಟಕಾವ್ಯದ ಬಗೆಗೆ ಕವಿಗೆ ತುಂಬ ಅಭಿಮಾನವಿದೆ ; ಕಾವ್ಯರಚನೆಯಲ್ಲಿ ಉತ್ಸಾಹವುಂಟೆಂದು ತಿಳಿಯಲವಕಾಶವಿದೆ. ಕೃತಿ ಚಾಮುಂಡೇಶ್ವರಿಗೆ ಅರ್ಪಿತವಾಗಿದೆ.

ಪಾರಿಜಾತಾಪಹರಣ* :—ಇದು ೫ ಅಂಕಗಳಿರುವ ಒಂದು ನಾಟಕ. ೧೮೯೭ರಲ್ಲಿ ಮೈಸೂರಿನಲ್ಲಿ ಮುದ್ರಿತವಾಗಿದೆ. ನಾರದನು ಸ್ವರ್ಗದಿಂದ ತಂದು ಕೊಟ್ಟ ಪಾರಿಜಾತ ಪುಷ್ಪಕ್ಕಾಗಿ ಕೃಷ್ಣಸತಿಯರಾದ ರುಕ್ಮಿಣಿ ಸತ್ಯಭಾಮೆಯರಲ್ಲಿ ನಡೆಯುವ ಕಲಹ ಮತ್ತು ಸಮಾಧಾನದಲ್ಲಿ ಪರ್ಯವಸಾನ ಇಲ್ಲಿಯ ವಸ್ತು

ಕವಿ ವ್ಯಾಸರ ಹರಿವಂಶದಿಂದ ವಸ್ತುವನ್ನು ಆರಿಸಿಕೊಂಡು ನಾಟಕ ರೂಪದಲ್ಲಿ ಬರೆದಿರುವಂತೆ ಕವಿಯ ಅರಿಕೆ. ನಾಟಕದ ವಸ್ತುನಿರೂಪಣೆಯ ರೀತಿ ಆದ್ಯಂತಗಳು ಹಳೆಯ ಸಂಸ್ಕೃತ ನಾಟಕಗಳ ಅಚ್ಚು. ಆದರೆ ಇದು ತಂತ್ರದಲ್ಲಿ ಅಲ್ಲದೆ ತಿರುಳಿನಲ್ಲಿ ಅಲ್ಲ. ಭಾಷೆ ಬಸವಪ್ಪ ಶಾಸ್ತ್ರಿಗಳ ಕನ್ನಡ ಶಾಕುಂತಲವನ್ನು ಕೆಲಮಟ್ಟಿಗೆ ನೆನಪಿಗೆ ತರುತ್ತದೆ. ಹಾಡಿಗೂ ಪದ್ಯಕ್ಕೂ ರಾಗ ನಿರ್ದೇಶನವಿದೆ. ಎಷ್ಟೋ ಕಡೆ ಹಾಡಿನ ಧಾಟಿಯಲ್ಲೇ ಸಂವಾದ ಜರುಗುತ್ತದೆ. ‡ (೧೯೬೮)

---

‡ ಈ ಲೇಖನವನ್ನು ಸಿದ್ಧಪಡಿಸಲು ನನಗೆ ನೆರವಾಗಿರುವ ಶ್ರೀಯುತರಾದ ಎಸ್. ಬಸವಾರಾಧ್ಯ, ಡಾ॥ ಎಂ. ಚಿದಾನಂದಮೂರ್ತಿ, ಕೆ. ರಾಘವೇಂದ್ರರಾವ್ ಇವರಿಗೂ, ನನಗಾಗಿ ಕೆಲವು ಕೃತಿಗಳ ಹಸ್ತಪ್ರತಿಗಳನ್ನು ನೋಡಿಕೊಳ್ಳಲು ನನ್ನ ಮಿತ್ರರಿಗೆ ಅವಕಾಶ ವಿತ್ತ ಮೈಸೂರು ಪ್ರಾಚ್ಯಕೋಶಾಗಾರದ ಮುಖ್ಯಾಧಿಕಾರಿಗಳಾದ ಶ್ರೀ ಎಚ್. ದೇವೀರಪ್ಪ ಅವರಿಗೂ ನಾನು ಕೃತಜ್ಞ. *ಈ ಗುರುತಿನ ಗ್ರಂಥಗಳ ವಿವರ ಡಾ। ಎಂ. ಚಿದಾನಂದ ಮೂರ್ತಿಗಳದು.

ವಡ್ಡಾರಾಧನೆಯ ದೇಸಿ

ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರು ಅಪೂರ್ವವೂ ವಿಶಿಷ್ಟವೂ ಆದ ಕನ್ನಡ ಗದ್ಯಕೃತಿ 'ವಡ್ಡಾರಾಧನೆ'ಯನ್ನು ಮೊದಲಬಾರಿಗೆ ಆರು ಹಸ್ತ ಪ್ರತಿಗಳ (ಕ, ಖ, ಗ, ಘ, ಚ, ಛ.) ಆಧಾರದಿಂದ ಪರಿಷ್ಕರಿಸಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ೧೯೩೯–೪೩ ಈಯವಧಿಯಲ್ಲಿ ಪ್ರಕಟಿಸಿದರು. ಆಮೇಲೆ ಈ ಗ್ರಂಥವು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಯಾಗಿ ೧೯೪೯ರಲ್ಲಿಯೂ ಮೈಸೂರು ಶಾರದಾ ಮಂದಿರದ ಪ್ರಕಟನೆಯಾಗಿ ೧೯೫೯ರಲ್ಲಿಯೂ ಮುದ್ರಣವಾಯಿತು. ಈ ಗ್ರಂಥದ ಕವಿಕಾವ್ಯವಿಚಾರಗಳ ಬಗೆಗೂ, ಸಂಸ್ಕರಣ ಸಂಶೋಧನೆಗಳ ಬಗೆಗೂ ಅವರ ಶ್ರಮ ಪರಿಶ್ರಮಗಳೂ, ಸಲಹೆ ಸೂಚನೆಗಳೂ ಶ್ಲಾಘನೀಯವಾಗಿವೆ. ಹಳಗನ್ನಡ ಗ್ರಂಥಗಳ ಸಂಸ್ಕರಣ ವಿಧಾನದಲ್ಲಿ ಅರಿತು ನುರಿತು ಪ್ರಸಿದ್ಧರಾದ ಅವರು ಸಂಪ್ರತಿಕಾರರ ಕೈವಾಡಗಳಿಗೆ ಸಿಕ್ಕಿ ಹಲವು ಬಗೆಯ ಮಾರ್ಪಾಟುಗಳ ಜಟಿಲವಾದ ಜಾಲದಲ್ಲಿ ತೊಡಕಿಕೊಂಡ ಶುದ್ಧ ಪಾಠವನ್ನು ಕವಿಯ ಕಾಲಕ್ಕೂ ಆಶಯಕ್ಕೂ ಸರಿಯಾಗುವಂತೆ ಬಿಡಿಸಿ ತೆಗೆಯುವ ಸಾಹಸದಲ್ಲಿ ಎಷ್ಟು ಶ್ರಮಪಟ್ಟಿರುವರೆಂಬುದು ಆ ಕೃತಿಯನ್ನು ಆ ದೃಷ್ಟಿಯಿಂದ ಪರಿಶೀಲಿಸಿದವರಿಗೆ ಮನವರಿಕೆಯಾಗುತ್ತದೆ. ಅವುಗಳಲ್ಲಿ ಒಂದೆರಡು ಅಂಶಗಳನ್ನು ಮಾತ್ರ ಇಲ್ಲಿ ಸೂಚಿಸಿದೆ.

ಕೆಲವು ಪ್ರತಿಗಳಲ್ಲಿ ಭಿನ್ನಪಾಠಗಳೂ, ಅಧಿಕಪಾಠಗಳೂ ಇರುವುವಲ್ಲದೆ ಪಾಠಗಳು ಇಲ್ಲದಿರುವುದೂ ಉಂಟು. ಅಂಥವನ್ನು ಅಡಿಟಿಪ್ಪಣಿಯಲ್ಲಿ ಸಂಕೇತಗಳೊಡನೆ ಕೊಟ್ಟಿದ್ದಾರೆ. [1]ಕಾಲೋಚಿತವಲ್ಲದ, [2]ವ್ಯಾಕರಣವಿರುದ್ಧವಾದ

---

1. ಕೊಲೆಸತ್ತ — ಕೊಲಲ್ಪಟ್ಟ, ನೀನ' — ನೀನು, ಗಾವುಂಡಾ — ಗೌಡಾ, ಕುಡು — ಕೊಡು, ಪೊಟ್ರಿಡೆ — ಹೊತ್ತಿಱೆ[3]. ಪುಣ' — ಪುಂಣು. ಬತ್ತಲೆಗ — ಬೆತ್ತಲೆಗ ಇತ್ಯಾದಿ.

2. ನಾಟ್ರಿಕ್ಕೆ — ನಾಡ್ಗೆ. ಪನ್ನೆರಟ್ಟಿರಿಸ — ಪನ್ನೆರಡ್ವರಿಸ, ನಾಟ್ರಿಗಳ್ — ನಾಡ್ಗಳ್, ಇರ್ದು — ಇಳ್ದು, ಪೊರ್ದು — ಪೊಳ್ದು. ಬಳೆ — ಬೆಳೆ ಇತ್ಯಾದಿ.

ಮತ್ತು ಪ್ರಮಾದವಶದಿಂದಾದ, [3]ಭ್ರಮಾಸ್ಪದವಾದ, [4]ಮತ್ತಿತರ ಬಗೆಯ ಪಾಠಗಳನ್ನು ಪ್ರತಿಗಳ ಆಧಾರಬಲದಿಂದಲೇ ಸರಿಪಡಿಸಿಕೊಂಡು ಉಳಿದವನ್ನು ಪಾಠಾಂತರಗಳಾಗಿ ಕೊಟ್ಟಿದ್ದಾರೆ. ಕೆಲವನ್ನು ಪಂಪಾದಿಗಳ ಗ್ರಂಥಾಧಾರ ಗಳಿಂದಲೂ ನಿರ್ಣಯಿಸಿರಬಹುದು. [5]ಕೆಲವೆಡೆ ಯುಕ್ತವಾದ ಪಾಠಗಳನ್ನು ಊಹಿಸಿ, ಸರಿಯಾದ ವಾಕ್ಯವಿನ್ಯಾಸವನ್ನು ಊಹಿಸಿ' ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. [6]ಕೆಲವು ಅಪೂರ್ವ ಶಬ್ದಗಳನ್ನೂ ಪ್ರಯೋಗಗಳನ್ನೂ ಮೂಲ ಪಾಠವಾಗಿ ನಿರ್ಧರಿಸಿರುವುದು ತುಂಬ ಗಮನಾರ್ಹವಾಗಿದೆ.

ಭಾಷೆ ಸಾಹಿತ್ಯಗಳ ದೃಷ್ಟಿಯಿಂದ ಗಮನಾರ್ಹವಾದ ಕೃತಿಯಾಗಿರುವ 'ವಡ್ಡಾರಾಧನೆ'ಯ ದೇಶ್ಯಶಬ್ದಗಳನ್ನು ಪ್ರಾಚೀನತೆ, ವೈಶಿಷ್ಟ್ಯಗಳು

---

3. ಬಿಳ್ದು—ಬಿರ್ದು, ಪರ್ಚು—ಪಚ್ಚು, ಎರ್ಚು—ಎಚ್ಚು, ಪೊಳ್ದು—ಪೊರ್ದು, ಮುರ್ಚು—ಮುಚ್ಚು. ಪೆಳ್ತೊಡೆ—ಪೆತ್ತೊಡೆ, ಪೆಳ್ತೆ—ಪೆತ್ತೆ, ಪೊಳ್ತು—ಪೊತ್ತು. ಕಿಳ್ತಯ್ಯು—ಕಿತ್ತಯ್ಯು, ಮಾದೆಂಗ—ಮಾದೆಗ, ಪಂಡಿತಿರ್ಕೆ—ಪಂಡಿತಿಕ್ಕೆ, ಮರ್ಕಳ್—ಮಕ್ಕಳ್, ನೋಱ್ಕುಂ—ನೋರ್ಕುಂ ಇತ್ಯಾದಿ.

4. ಱ ವು ಳವಾಗುವುದೂ, ಱವು ರೇಫವಾಗಿ ದ್ವಿತ್ವವಾಗುವುದೂ ಉಂಟು.

ಪಱ> ಪಳೆ, ನಾಱ್ಕಿ> ನಾಳ್ಗೆ, ಪೇಱ್> ಪೇಳ್, ಸೂಱ್> ಸೂಳ್, ಪಾಱಿ > ಪಾಳಿ, ಕೂಱ್> ಕೂಳ್, ಪುಱಿತು> ಪುಳ್ತು. ಕಱ್ತಿ > ಕಳ್ತಿ, ಪೞಿವೊಱ್ತು> ಪೞಿವೊಳ್ತು, ಪೊಱಲ್> ಪೊಳಲ್, ಬಾಱ್ತೆ> ಬಾರ್ತೆ—ಬಾರ್ತ್ತೆ, ತಱ್ಪಲ್—ತಪ್ಪಲ್, ಕಿಱ್ತು—ಕಿರ್ತು, ಅಱ್ತಿ-ಅರ್ತಿ—ಅರ್ತ್ತಿ, ಬಿಱ್ದು—ಬಿರ್ದು ಕಳ್ದು—ಕರ್ದು, ಪೞ್ತಿ—ಪತ್ತಿ, ಕಱ್ಬಪ್ಪು—ಕರ್ಬಪ್ಪು ಇತ್ಯಾದಿ.

ಪ—ೞ; ಪುಷ್ಪ> ಪೞ ; ೞ—ರ; ಅೞಸಿ—ಅರಸಿ.

ಶಿಥಿಲ ಪ್ರಯೋಗ: ಸಲ್ಗೆ—ಸಲುಗೆ, ಕೊಯ್ತಲೆ> ಕೊಯಿತಲೆ; ಗ್ರಾಮ್ಯ: ಗಳುಹಂ—ಗಳ್ಪಂ

5. ಪುಟ ೩. ೪, ೮, ೩೯, ೪೮, ೧೦೬, ೧೬೬, ೧೭೩, ೧೭೫, ೧೮೫ ನೋಡಿ.

6. ಪುಟ ೨. ೫೪, ೧೫೫ (ಕೇಳ್ಪ. ಅೞಪ ಬಳ್ಳಿ, ಚದುರಸಿಗೆ ಇತ್ಯಾದಿ)

ಮನವರಿಕೆಯಾಗುವಂತೆ ಇಲ್ಲಿ ಸ್ವಲ್ಪಮಟ್ಟಿಗೆ ವರ್ಗೀಕರಿಸಿದೆ. ಶಬ್ದಗಳನ್ನೂ ಶಬ್ದಸ್ವರೂಪವನ್ನೂ ವಿಚಾರಮಾಡದೆ ಅಂತಹ ವಿಚಾರಕ್ಕೆ ಅನುಕೂಲವಾಗುವಂತೆ ಪದಗಳ ಪಟ್ಟಿಯನ್ನು ಕೊಟ್ಟಿದೆ. ಹಲವೆಡೆ ಹೋಲಿಕೆ ವ್ಯತ್ಯಾಸಗಳಿಗೆ ಪಂಪಕವಿಯನ್ನು ಲಕ್ಷಿಸಿದೆ. ಆದರೆ ಇತರ ಪ್ರಾಚೀನ ಕವಿಪರಂಪರೆಯನ್ನೂ ಲಕ್ಷಿಸುವುದೂ ಆವಶ್ಯಕ.

ಕೆಲವು ವೈಶಿಷ್ಟ್ಯಗಳು :

೧) ರೂಢಿಯ 'ನೆಯ್'ಗೆ ಬದಲಾಗಿ 'ತುಪ್ಪ' ಬಂದಿದೆ. ೨) 'ಉಕ್ಕಿವ'ದ ಬಳಕೆಗಿಂತ 'ಉರ್ಕಿವ'ದ ಬಳಕೆ ಹೆಚ್ಚು. ೩) 'ನೋಟ'ಕ್ಕೆ 'ನೋಂಟ' ಎಂದಿದೆ. ೪) 'ಬೇಂಟ' ಎಲ್ಲಿಯೂ 'ಬೇಟ'ವಾದಂತಿಲ್ಲ. ೫) 'ತಾಮರೆ' ಎಲ್ಲಿಯೂ 'ತಾವರೆ'ಯಾದಂತಿಲ್ಲ. ೬) 'ನೊಳವು' 'ಬರವು' ಎಲ್ಲಿಯೂ 'ನೊಳ' 'ಬರ' ಆಗಿಲ್ಲ. ೭) ಪ ಕಾರವು ಎಲ್ಲಿಯೂ ಹ ಕಾರವಾದಂತಿಲ್ಲ. ೮) ವಿಶೇಷ ಪ್ರಯೋಗವಾದ 'ಕಲ್ಪಿಸು' ಶಬ್ದವು ವಿವಿಧಾರ್ಥಚ್ಛಾಯೆಗಳಲ್ಲಿ ವಿಶೇಷವಾಗಿ ಬಳಕೆಯಾಗಿದೆ. ೯) ವಿಭಕ್ತಿಪಲ್ಲಟಗಳು ಹೇರಳವಾಗಿವೆ: ಪಂಚಮಿಯ 'ದೆಸೆಯಿಂದ' ಕ್ವಚಿತ್ತಾಗಿ ಬಂದಿದೆ ; ಸಪ್ತಮಿಗೆ 'ಒಡೆಯು' ಎಂಬುದು ಹೇರಳವಾಗಿ ಬಂದಿದೆ. ೧೦) 'ಅರಸ' ಎಂಬುದು 'ಅರಸು' ಎಂದೂ. 'ಪಡೆ' ಧಾತುವು 'ಪೆಱು' ಆಗಿಯೂ 'ದಂಡನೆ'ಗೆ 'ದಂಡಣೆ'ಯೂ, ಉಳ್ಳ ಎಂಬರ್ಥದಲ್ಲಿ 'ಒಡೆಯು' ಎಂಬುದೂ ಹೆಚ್ಚಾಗಿ ಬಳಕೆಯಾಗಿವೆ. ೧೧) ಪ್ರತ್ಯಯಗಳಲ್ಲಿ ಪ್ರಾಚೀನತೆಯ ನಿಷ್ಠೆ ಕಾಣುತ್ತದೆ. (ಅ>ಒ: ಕಾವೊಂ, ಆಳ್ವೊಂ, ಕಿರಿಯೊಳ್, ಬರ್ದೊರ್ ಇತ್ಯಾದಿ.) ೧೨) ಅನ್ಯತ್ರ ದುರ್ಲಭವಾದ ಅಪೂರ್ವ ಧಾತುಗಳೂ ಶಬ್ದಗಳೂ ಕಾಣುತ್ತವೆ. ೧೩) ಕೃತಿಯೊಳಗೆ ಯಥಾವತ್ತಾದ ಪ್ರಾಕೃತ ಶಬ್ದಗಳೂ, ಅಪೂರ್ವವಾದ ಅವುಗಳ ತದ್ಭವಗಳೂ, ವಾಕ್ಯಸರಣಿಯೂ ಕಾಣುತ್ತವೆ. ೧೪) ಒಂದೇ ಶಬ್ದಕ್ಕೆ ಬೇರೆ ಬೇರೆ ರೂಪಗಳೂ ಅರ್ಥಗಳೂ ಇರುವುದುಂಟು. ೧೫) ಟಕಾರವಾದ ಶಬ್ದಗಳು ರೇಫವಾಗುವುದೂ, ಅನಾವಶ್ಯಕವಾಗಿ ರೇಫವಿಲ್ಲದೆಡೆ ರೇಫ ಬರುವುದೂ ಉಂಟು. ೧೬) ಪಂಪಾದಿಗಳಲ್ಲಿ ವಿರಳವಾಗಿ ಬರುವ ಪ್ರಯೋಗಗಳು ಇಲ್ಲಿ

ಹೇರಳವಾಗಿ ಬರುತ್ತವೆ. ೧೭) ದೀರ್ಘಾದೇಶವುಳ್ಳ ನಾಮಪದ ಕ್ರಿಯಾ ಪದಗಳು ಕಾಣುವುದಿಲ್ಲ. ೧೮) ವ್ಯಾಕರಣವಿರುದ್ಧವೆನ್ನಬಹುದಾದ ಶಬ್ದ ರೂಪಗಳೂ ವಿಲಕ್ಷಣ ಪ್ರಯೋಗಗಳೂ ಕಾಣುತ್ತವೆ. ೧೯) ಇರುವ ಶಬ್ದ ಸಾಮಗ್ರಿಯಿಂದ ಸಮಾಸಗಳನ್ನು ಮಾಡಿ ಹೊಸ ಅರ್ಥಗಳನ್ನು ಹೊರಡಿಸಿದೆ. ೨೦) ಶಬ್ದರೂಪಗಳಲ್ಲಿ ಪಂಪನಿಗೆ ಪ್ರಾಚೀನವಾದವು, ಅರ್ಥಗಳಲ್ಲಿ ವ್ಯತ್ಯಾಸವಾದವು ಇಲ್ಲಿ ಕಾಣುತ್ತವೆ. ೨೧) ಕನ್ನಡದಲ್ಲಿ ಕರ್ಮಣಿ ಪ್ರಯೋಗದ ಸ್ವರೂಪ ತಿಳಿಯುತ್ತದೆ. ೨೨) ವಿಶೇಷ ಸಂಗತಿಗಳನ್ನು ತಿಳಿಸುವ ವಿಶಿಷ್ಟವಾದ ಮಾತುಗಳಿವೆ. ೨೩) ವಿರಳವಾಗಿ ನುಡಿಗಟ್ಟುಗಳಿವೆ. ೨೪) ಕ್ವಚಿತ್ಪ್ರಯೋಗ ಬಿಟ್ಟರೆ ಸಾಮಾನ್ಯವಾಗಿ ಸಬಿಂದುಕಗಳು ಅಬಿಂದುಕಗಳಾಗಿಲ್ಲ. ೨೫) ರೂಢಿಯ ಹಾಗೂ ಸಂಬಂಧ, ಪ್ರಾಣಿ, ಕಾಲ, ಆಹಾರ ವಾಚಕ ಶಬ್ದಗಳು ಹೇರಳವಾಗಿವೆ:

ಪ್ರಾಣಿವಾಚಕ ಶಬ್ದಗಳು: ಆನೆ, ಗಣೆಯಾನೆ, ಸೊರ್ಕಾನೆ, ಕಾಡಾನೆ, ಬಿಳಿಯಾನೆ, ಪುಲಿ, ಕರಡಿ, ಪುಲ್ಲೆ, ನಾಯ್, ಸೀನ್ನಾಯ್, ಪಂದಿ. ತೋಳ, ಎಟ್ಟು. ಕಟಿತ್ರ, ವೇಸರಿಗಟಿತ್ತಿ. ಬೆಳ್ಗಟಿತ್ತಿ, ಎಮ್ಮೆ, ಕುದುರೆ, ಒಟ್ಟೆ. ಉಡು, ಪಾವು, ಇಲಿ, ಬೆಕ್ಕು, ಭೇರುಂಡಪಕ್ಕಿ, ಒಂತಿ, ಕಪ್ಪೆ. ಮುಂಗುರಿ, ಮೀನು, ಮೊಸಳೆ, ನೆಗಟ್, ಆಮೆ, ಕಾಗೆ, ಗೂಗೆ. ಪರ್ದು, ಕುರ್ಕು, ಗಿಳಿ. ಪುರುಳಿ, ಪೆಂಗುರು (ಪಿಂಗುರಿ), ಮಾಂದೆ, ಎಸಡು, ಚಿಕ್ಕುಟು, ಗುಂಗುಱು, ಪೆರ್ವಾವು, ಲಾವುಗೆ, ಕೆ(ಲ)ಕೊರಸು. ಪೊಱಸು ಇಱುಪೆ, ಕಟ್ಟಿಱುಂಪೆ, ಪೆರ್ದಲೆಯ ಕಟ್ಟಿಱುಂಪೆ, ಕೋಡಗ, ಮೀನಂಬುಟು, ಪಯುನು, ನೊಳವು.

ಕಾಲವಾಚಕ ಶಬ್ದಗಳು; ಪೊೞ್ತು, ಪೊೞ್ತಱ್, ಪೊೞ್ತಡೆ, ಪಗಲ್, ಇರುಳ್, ಬೈಗು, ಬೈಗಿರುಳ್, ನಡುವಗಲ್, ಸಂಜೆವೊೞ್ತು, ಪಱಿವೊೞ್ತು, ಕಟಿಲ್ದಿಂಗಳ್.

ಆಹಾರವಾಚಕ ಶಬ್ದಗಳು: ಮೋದಗೆ, ಲಡ್ಡುಗೆ, ಮಂಡಗೆ. ತುಯ್ಯಲ್, ಅವರೆ, ಎಣ್ಣೆ. ಅಳೆ, ಕಟಿ, ಎಳ್ಳುಂಡೆ, ಮಲ್ಲಲ್, ಕೂೞ್,

ಮಲ್ಲಲಕೂೞ್, ಪಾರಕಿನ ಕೂೞ್, ಕಱಮೆಯ ಕೂೞ್, ರಾಜಾನ್ನದ ಕೂೞ್, ಬೆಣ್ಣೆ, ಬಾಯ್ವೆಣ್ಣೆ, ತುಪ್ಪ, ತೊವೆ, ಪೆಸಱತೊವೆ, ಮಸಿ (?), ಅಂಬಲಿ, ಅಕ್ಕಿ, ಬೋನ, ಅಡುಗೆ, ಬಾಡುಗಳ್, ಪೂರಿಗೆ, ಇಡ್ಡಲಿಗೆ, ಸೋದಿಗೆ (ಪಾಠಾಂ : ಪೋಳಿಗೆ, ಸೊಂಡಿಗೆ), ಲಾವಣಿಗೆ, ನೆಲವತ್ತಿಯಡಕೆ, ಎಲೆ, ಗಿಣ್ಣು.

ಸಂಬಂಧವಾಚಕ ಶಬ್ದಗಳು : ತಾಯ್, ತಂದೆ, ತಮ್ಮ, ಮಗನ್, ಮಗಳ್, ಅಮ್ಮ, ಅಬ್ಬೆ, ಅಣ್ಣ, ಅಯ್ಯ, ಅಜ್ಜ, ಅಜ್ಜಿ, ಅತ್ತೆ. ಅಳಿಯ, ಮಾವ, ಪೆಂಡತಿ, ಮಯ್ದುನ, ಸೋದರಳಿಯ, ಸೋದರಮಾವ, ಸೋದರ ಮಯ್ದುನ, ಸೋದರ ತಮ್ಮಂ, ಸೋದರ ತಂಗೆ.

ವಿಶೇಷ ಸಂಗತಿ ಸೂಚಕ ಶಬ್ದಗಳು : ದೀನಾರ, ದ್ರಮ್ಮ (ದಮ್ಮ), ಫಾಲ್ಗುನ ನಂದೀಶ್ವರ, ಪಗರಣಿಗ, ಪಗರಣದಾಟಪಾಟ, ಬಾದುಬ್ಬೆಯ ಪರ್ವ ಅಗ್ರಾಸನ, ಅಗ್ರಹಾರ, ಕಬ್ಬಪ್ಪುನಾಡು, ತಿಮುಟನಾಡು, ದ್ರವಿಟ ವಿಷಯ, ನಾಟಕ, ತುರುಷ್ಕ.

ನುಡಿಗಟ್ಟುಗಳು ; ಗೋಸಣೆಯುಂ ತೊಟಿಲ್ಲು, ಗೋಸನೆಗಳೆಯಿಸು, ತೊಟಿಲ್ವಗೋಸಣೆಯುಂ ಪಿಡಿ, ನೆಲನಂ ಬರೆ, ಅರ್ಚನೆಯಂ ಕೊಂಡು ಪೋಗು.

ಬಳಕೆಯ ಮಾತುಗಳು ; ಮಣೆ, ನೆರವಿ, ಎಮ್ಮೆ, ಅಂಗಡಿ, ಮಡ, ದಾದಿ, ಮಡು, ಮನೆ, ಬಡವ, ತೊಱೆ. ಕೆಱೆ, ಅಂಗಣ, ನೆತ್ತಿ, ಎಣ್ಣೆ, ಕನ್ನ, ಕೋಣೆ, ಬಟ್ಟಲ್, ನಂಜು, ಮಣ್ಣು, ತುತ್ತು, ಕೆಳವಿ, ನೆಲಮನೆ, ಮದುವೆ, ಗಾಳ, ಕಾಗೆ, ತಳಿಗೆ, ಅಡಿ, ಮಱಿ, ಪುಳ್ಳಿ, ಜಾತ್ರೆ, ಬಡಗಿ, ಗಾಲಿ, ನೆಲ, ಗಿಣ್ಣು, ಒಟ್ಟು, ಒಕ್ಕಲಿಗ, ಗೊಬ್ಬರ, ಬಂಡಿ, ಮಾಱಿ, ಊರು, ಕನ್ನಡಿ, ಅಕ್ಕಿ, ಕೊಡೆ, ಕೇರಿ, ಕಚ್ಚೆ, ಮಡಕೆ, ತುಪ್ಪ, ಉಟು, ಗಾಣ.

ಪ್ರಾಕೃತ ಪ್ರಭಾವದ ಮಾತುಗಳು, ಮಾತಿನ ಸರಣಿ ; ವಖ್ಖಾಣೆ. ವಖ್ಖಾಣಿಸು, ನಿಂದಣೆ, ಗರುಹಣೆ, ದಂಡಣೆ, ಝೊಂಬ, ಠೇವತೋದ್ಯಾನ,

ಪಚ್ಚಖ್ಖಾಣ, ಮಹಾಲಚ್ಛಿ, ಜಾವಜ್ಜೀವ, ಭಟ್ಟ, ಸೂರಾ, ಭಟ್ಟಟ್ಟಮ ದಸಮದುವಾಳ, ಬೋಳಹ ಬೋಳಹ ಭಟ್ಟಾರಾ, ಕಚ್ಚುಜರ ಖಾಸ ಸೋ ಸೋ–, ಆಮೋಷಧಿ, ಖೇಳೋಷಧಿ–, ಗಮ್ಮಇ ಧಮ್ಮೇಣ ದೇವಳೋ ಯಮ್ಮಿ, ಮಿಸ್ಸೇಣ ಮಾಣುಸತ್ತಮ್, ದೋಣ್ಣಂಪಿ ಖಯೇಣ ಣಿವ್ವಾಣಂ.

ಮೇಲೆ ಮೇಲೆ ಬರುವ ಮಾತಿನ ಸರಣಿ; ಅತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯಳ್, ಅಂತವ ರ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಿರೆ, ಪ್ರಶಸ್ತದಿನ ವಾರ ನಕ್ಷತ್ರ ಮುಹೂರ್ತ ಹೋರಾಲಗ್ನದೊಳ್, ಗ್ರಾಮೇಕರಾತ್ರಾ ನಗರೇ ಪಂಚ ರಾತ್ರಮ್, ಗ್ರಾಮನಗರ ಖೇಡ ಖರ್ವಡ ಮಡಂಬ ಪತ್ತನ–, ಶಂಕಾ ದ್ಯಷ್ಟಮಲಂಗಳುಮೆಂಟು ಮದಂಗಳುಂ–, ನಾಲ್ಕು ವೇದಮಾಱಿಂಗಮುಂ. ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದು–, ಕೂಸಂ ಬೇಡಿಯಟ್ಟಿ ಪೆತ್ತು, ದಿಶಾವಳೋಕನಂಗೆಯ್ಯುತುಂ, ದ್ವಾದಶಾಂಗ ಚತುರ್ದಶ ಪೂರ್ವ ಮಪ್ಪ–, ಗಿಡಿಗಿಡಿಜಂತ್ರಂ ಮಿಳಿಮಿಳಿ ನೇತ್ರರ್, ಪಟುಪಟಹತುಣವ ಭಂಭಾ ಮರ್ದಳೆ–.

ಭಾವನಾಮಗಳು; ಕೇಳ್ವಿ, ಅಱಿತ, ಕುಶಲಿಕೆ, ಪಂಡಿತಿಕ್ಕೆ ಬಾೞ್ಕೆ, ನಿಳ್ಕೆ, ಬೇಂಟ, ನೋಂಟ, ತಳಾಱಿಕೆ, ಕೆಯ್ತ, ಬಾೞಿಮೆ, ಬಲ್ಮೆ. ನಣ್ಪು, ಪಾಟ, ಬಲ್ಲಾಳ್ತನ, ಮನೆವಾೞ್ತೆ, ಕಷ್ಟತಿಕೆ, ಮೆಚ್ಚುಗೆ, ಪೇಱು, ಬರವು-ಪೋಗು.

ಕ್ರಿಯಾಸಮಾಸಗಳು : ಕೊಸೆಗೊಳ್, ಲೋಚುಗೆಯ್, ಬಟ್ಟೆಗಟ್ಟು, ಪಚ್ಚುಗೊಳ್, ಪಚ್ಚುಗೊಡು, ತೂಂಕಡುಗೆಡು, ಬೞಿವೞಿಗೊಡು. ತಳಾಱುಗೆಯ್, ಮುಟ್ಟುಗಿಡಿಸು, ಚರಿಗೆದೊೞಲು, ಒಂದೆವೞಿಗುಟ್ಟು, ನಿದಾಸಂಗೆಯ್, ನೆರಂಬೆಱು, ಆಜಡಿಗೊಳ್, ಬಾವರಿವುಗು, ಬೈಕಂದಿರಿ, ಪಾನಿಗಟ್ಟು.

ಧಾತುಗಳು : ಚಳಿ, ನೆಗಪು, ಒಳಱ್, ಮಱುಗು, ಬೇಸಱ್, ಕಾ, ಕೇ, ಬಾ, ತಾಂಗು, ಒಗು, ಕೆಡು, ಸುಲಿ, ಸಲ್, ಉಗು, ಕಿರಿ, ಆನ್, ತಿಳಿಪು, ಅದಿರ್, ಬಿದಿರ್, ಪೆಱು, ತೊಡಂಗು, ಒದಱ್, ಅಟ್ಟು,

ಮುರುಂಟು, ಪಡು, ನಾರ್, ಕಿಟ್ಟು, ಪಣ್, ಲುಂದು, ಪೆಱಿಕು, ತಳಿ, ತಿಳಿ, ಬೞ್ವ, ತೊಡು, ಊಡು.

ಕರ್ಮಣಿ ಪ್ರಯೋಗ : ಎ ಪಡು : ಮೂಗರಿಯೆ ಪಡು, ಕೊಲೆಪಡು, ಕಟ್ಟೆಪಡು, ನಾಣಿಸೆಪಡು, ಪೇಸೆಪಡು, ಇರ್ಕೆಪಡು, ಬೆರಸೆಪಡು, ಬೆಸಗೊಳೆ ಪಡು, ಖಂಡಿಸೆಪಡು, ಉರ್ಕೆಪಡು, ಮಾಡೆಪಡು, ನೆಗೞೆಪಡು.

ಕೆ, ಗೆ : ಪೋಕೆ, ಅಟ್ಟುಗೆ, ಎಯ್ದುಗೆ; ಉದು : ಕೊಟ್ಟುದು.

ವಿಲಕ್ಷಣ ಪ್ರಯೋಗಗಳು (ವ್ಯಾಕರಣ ದೃಷ್ಟಿಯಿಂದ): ಪ್ರಣಮ, ಅಲ್ಲವು, ಸಿದ್ಧಸೇಸೆ, ಕೋಣೊಳ್, ಕೈಯಲಿಕ್ಕು, ಅಱಿಪಬಳ್ಳಿ, ಪಟ್ಟಣಕ್ಕೆ ಪೋಪೆ, ಎಲೆ ಗಳಾ, ಉಣ್ಣಪಟ್ಟು ಸತ್ತರ್, ಸಿದ್ಧಾರ್ಥರಿಷಿ, ನೀರಪೊೞೆ, ದಿಬ್ಯದೇಹ, ಬ್ರತಭಂಗ, ಒಡನೆಯ ಕೂಸುಗಳ್, ಕಳ್ಳದ, ಕಡುಗತ್ತಲೆ, ಪಾರಿಸು, ಇರುಳಿನ, ಬಂದೆವು, ಅೞಿಸೆವು, ಪೊಡೆವಂಟು, ಇರ್ವರ್, ಕೂಸನುಯ್, ಬಾಗಿಲ್ಮಾಡ, ಓರಗೆಗಳ್, ಒಂದೊರ್ವರ್. ಒರ್ಮಿಂಗೆ, ಪದಿರ್ಮಡಿ ಮಗಳಿಂಗೆ, ಬಡಪಡು, ಪಿಡಿಕೊಳ್, ಓಜ, ಕೊೞೆದ ಪುಲ್, ಸಲ್ಲೆಂದು, ಅರ್ಥಗಪ್ಪಡ, ಬೞಿಕ.

ವಿಲಕ್ಷಣ ಪ್ರಯೋಗಗಳು (ಪ್ರಯೋಗದ ದೃಷ್ಟಿಯಿಂದ) :

ಮಕ್ಕಳೊಳರಿಲ್ಲ, ಇಲ್ಲೋದಿಸಿದೆನ್, ಗೆಯ್ವಲ್ಲಿಯೊಳಪ್ಪ, ಕಾದಲಿಸೆಪಡುವ, ನಾಣಿಸೆ ಪಡು, ಕೆಂದಾವರೆಯ ವಣ್ಣ, ಓರಾಸನ, ಮಾಱಿಪ್ಪವೊಲೆ ಆಯ್ತು, ಉದ್ದಂ ಬಿಡಿದು ಬಾೞ್ವುದು, ಸಲ್ಲವಾಗಪ್ಪುದು, ಜೋಗಭಕ್ತಿಗೆಯ್ದು, ಎನ ಗುಡಲಿಲ್ಲೇನುಂ, ನೀನೆನಗೆ ಸೋದರಮುಂ ಕಲ್ಯಾಣಮಿತ್ರೆಯುಮಾದಯ್, ಕಿಂಕುರ್ವಾಣಂಗೆಯ್ದಪ್ಪೆನ್, ಎನಗೆ ಪುಣ್ಯಮಿಲ್ಲಾಗದೆ, ನಿನಗೆ ದೇವತೆಗಳ್ ಬೆಸಕೆಯ್ವವು, ಪೆಱವುಳಿವಿಸುಡು, ಕುಳ್ಳಿರು ಮಗನೆ, ಏಱು ಮಗನೆ, ಅವಱಿಂ ಬಿಡಿಸಿ.

ನವೀನಾರ್ಥ ಕಲ್ಪನೆ : ಪಸರಂಗೊಡು, ಪರಕೆಗುಡು, ಮೆಚ್ಚುಗೆಗೊನ್, ನನ್ನಿಗೊಡು, ಪಗೆಸಾಱ್, ಮೞೆವಾೞು, ಅಂಸುಗುಡು, ಕೋಲೆಸಾಱ್,

ಕೈನೀರೆಟಿ, ಅರಸುಗೆಯ್, ಗಾಳಿಗೊಳ್, ನೀರ್‌ಪೊಗು, ನೀರೂಡು, ನನ್ನಿಗೊಳ್ ನೀರಿೞಿ, ಅೞಿಗೊಳ್, ಬಸಿರ್ಪೆಂಡತಿ.

ಕೆಲವು ಗಮನಾರ್ಹವಾದ ಶಬ್ದಗಳು :

ಬೊಡ್ಡಣಬಾವಿ, ನೆಗೞ್ತಿ, ಕುತ್ತಿಸಿಱಿ, ಉಳಿಸೆಂಡು, ನೇತ್ರಪಟಿ, ಗುರ್ದು, ಪ್ರಡುಕುನೀರ್, ಆಳಂಬೆ, ವೊಱಿ, ಬೆಂಟೆ, ಪೊಟ್ಟಳಿಗೆ, ಕಱಮೆ, ನಾಳಿ, ಲಂಗಿಗ, ಪೇಪಂದಿ, ಗುಡ್ಡ, ತಗರ್, ಉತ್ತವಳ, ಕರ್ನ್ನಾಟ, ಪುಣ್ಣಮಿ, ಪರದು, ನೇತ್ರವಟ್ಟು, ನಚ್ಚುವ, ಬಿಚ್ಚುವ, ಬಾಲವದ್ದೆ, ಅಲವಡ, ಕಿರುಂಡೆಗ, ಕೈಯದು, ಭಾಗಸ, ತಿಂಬಡಂಗಳ್, ಪದಿರ್, ಪಟ್ಟಿಗೆ, ಗುಂಡಿಗೆ, ಕವಡಿಕೆ, ಮಸಿ, ಕಱಚ್ಚುಟ, ಸಂಬಳ, ಸಂಜೆವಾರಿಸು, ದೋಣಿ ಕೊಂಡ, ಝುಣಂಬ, ಪಲಗೆ, ಬಳಸಿ, ಬೈಕಂಗುಳಿ, ಒಲ್ಲಣಿಗೆ, ಜಯನ ಶಾಲೆ, ಚದುರಸಿಗೆ, ಉಂಡೆ, ಸಾರಬೀದಿ ಗೊಡ್ಡ, ಕೊಂಕ, ಎೞತನಿಗರು, ಲವಟು, ಕಂಚು, ಸಾಲಿಗ, ಸಖಾಯ, ಕೈ ಸಾಣೆ, ಮಿಳಿ, ಕೆರ್ಪು, ತುಪ್ಪ, ಬಾದಣ, ಕಾಜು, ತರುಷಲಿ, ಬಟ್ಟು, ಕದಿರ್ಗಳ್, ಪಿನ್ನ, ಮಾನಂಬುೞ, ಓಸರಿಗೆ, ಗುಜ್ಜ, ಮುಟ್ಟಿ, ಓದಲಿಡು, ತಟಿ, ವೊಗಪೆ, ಮರವೊಗಂ, ಮಲಚ್ಚಿರ್ಕ್ಕು, ದಾಯ, ಬರೆ, ವೊಡೆನಾರ್, ನಾರ್, ಸೋರೆ, ಪಿಟ್ಟು, ಏಕಸಱಿ, ಪಾನಿಗಟ್ಟು.

ಒಂದು ಶಬ್ದಕ್ಕೆ ಎರಡು ರೂಪಗಳು :

ತೊಡಂಗು—ತೊಡಗು, ಬಾಚಿಸು—ಬಾಜಿಸು, ಪಟ್ಟಣ—ಪತ್ತನ, ಬಂಡ—ಭಂಡ, ಕೞ್ತಲೆ—ಕತ್ತಲೆ, ಆಪಣ—ಆವಣ, ಪಚ್ಚುಗೊಡು—ಪರ್ಚುಗೊಡು (ಪರ್ಚಿಗೊಡು), ಉರ್ಕೆವ—ಉಕ್ಕೆವ, ತಳಾಱ—ತಳವರ ತೊವಲ್—ತೊಗಲ್, ಕೞ್ಪಿಂಗಳ್—ಕರ್ದಿಂಗಳ್, ತಳಾಱು—ತಳಾಱಿಕೆ, ಆರವೆ ಅಾವೆ, ಪಸವು ಪಸವ, ನಿಸಿದ್ಧಿಗೆ—ನಿಸಿದಿಗೆ, ಬೞ್ಸಿ—ಬಂೞಿಸಿ ನಾೞ್ಕೆ ನಾಡ್ಗೆ, ಇೞಿಪೆ—ಇೞಿಪೆ, ದೆವಸ—ದಿವಸ, ಓವರಿ—ಓವರಿಗೆ ಕಲ್ಲೆಲೆನಿಲ್—ಕಲ್ಮಿಲೆನಿಲ್, ರಿಷಿ—ರಿಸಿ, ದ್ರುಮ್ಮ—ದಮ್ಮ, ಪಚ್ಚು—ಪರ್ಚು, ಕೞ್ತೆ—ಕತ್ತೆ, ಎೞ್ದು—ಎರ್ದು, ಬೞ್ದು—ಬರ್ದು, ಇೞ್ದು—ಇರ್ದು, ಪೊೞ್ತು—ಪೊರ್ದು, ಅೞ್ದು—ಅರ್ದು, ಬಿೞ್ದು—ಬಿರ್ದು,

ಬಾೞ್—ಬಾೞು (ಬಾೞ್ವೆ), ಗೋಸಣೆ—ಗೋಸನೆ, ಎರ್ಮೆ—ಎಮ್ಮೆ, ಆನ್—ನಾನ್, ಆವ್—ನಾವ್ (ಆವು).

ಒಂದು ಶಬ್ದಕ್ಕೆ ಎರಡು ಅರ್ಥಗಳು :

ಪೊಟಲ್ (ಪಟ್ಟಣ, ಪೊಟರೆ), ಕರ್ಚು (ತೊಳೆ, ಕಚ್ಚು), ಕೆಡು (ಬೀಳು, ಹಾಳಾಗು), ಕೊಳ್ (ಆಗು, ಕಚ್ಚು), ಉಣ್ (ತಿನ್ನು, ಕುಡಿ), ಓಳಿ (ರಾಶಿ, ಸ್ಥಳ).

ಪಂಪನ ಮಾತುಗಳೊಂದಿಗೆ ಹೋಲಿಕೆ : (ಮೊದಲ ಮಾತು ವಡ್ಡಾರಾಧನೆಯದು ; ಎರಡನೆಯದು ಪಂಪಭಾರತ ಆದಿಪುರಾಣಗಳದು)

ಅಡುಗೆ—ಅಟ್ಟಿಗೆ, ಪೆಡಂಗಯ್—ಪೆಡಗಯ್, ಪಾಳಿ—ಪಾೞಿ, ಬೞ್ಚಿಸು—ಬಂಚಿಸು, ಆದಮಾನುಂ—ಆದಂ, ಆರಮೆ—ಆರವೆ, ಕಲ್ಪಿಸು—ಕಲ್ಪಿ, ಪರ್ಚುಕೊಡು—ಪಚ್ಚುಗೊಡು, ಮುಯ್ಯು—ಮುಯ್ವು, ಕುರ್ಕು—ಕುಕ್ಕು, ಬೞಿವೞಿಗೊಡು—ಬಳಿವಳಿಗೊಡು, ವಾದುಗೆಯ್—ಬಾದುಗೆಯ್, ಬಾೞ್ತೆ—ಬಾೞ್ತೆ, ಬೇಂಟ—ಬೇಟ, ಮದೆವಳ್—ಮದವಳಿಗೆ, ಅೞ್ತಿ—ಆರ್ತಿ, ಕೆಂದು—ಮಱಿಕೆಂದು, ಲುಂದು—ಮಱಿಲುಂದು, ಕುೞಿವಡ—ಕುೞುವಡ, ಬಿಚ್ಚಳಿಸು—ಬಿಚ್ಚೞಿಸು, ಚಿತ್ತಾರಿಗ—ಚಿತ್ತಾರಿ, ನೇಲ್—ನೇೞು, ಕಾಜು—ಕಾಚ, ತಾಮರೆ—ತಾವರೆ.

ಅರ್ಥಸಂದೇಹದ ಪರಿಹಾರಕ್ಕೆ ಶಬ್ದಸಾಮಗ್ರಿ : (ಪಂಪಭಾರತ ಮತ್ತು ಆದಿಪುರಾಣಗಳನ್ನು ಮಾತ್ರ ಲಕ್ಷಿಸಿದೆ.)

ಅ) ಪಸವು : ಆದಿಪು : 11.99,7. 70 ; ಪಂಪಭಾ: 12.219, 8.51 (ಶಾಂತಿಪು ; 6.102 ವ.) ವಡ್ಡಾ : ಪು. 81, 83, 85, 87. ಅರ್ಥ : ಹೆಚ್ಚಾದ ಅರಕೆ, ಬರ.

ತೆಗಲೆ : ಪಂಪಭಾ 11.136; ವಡ್ಡಾ : ಪು. 43, 51, 55. 91 ಇ, ಅರ್ಥ : ಎದೆಗುಂಡಿಗೆ ಅಥವಾ ಕತ್ತಿನ ಹಿಂಭಾಗ.

ಪುಟ್ಟಿಗೆ : ಪಂಪಭಾ : 4.17, 3.45 ; ಆದಿಪು : 12.12, ವಡ್ಡಾ : ಪು. 116 (ಪಟ್ಟಿಗೆ). ಅರ್ಥ : ವಸ್ತ್ರ, ಉಡಿಗೆ.

ತರುವಲಿ : ಪಂಪಭಾ : 11.48 ; ವಡ್ಡಾ : ಪು. 71

ಅರ್ಥ : ತಬ್ಬಲಿ.

ಒದ್ದೆ, ಒದ್ದೆವಜ್ಜೆ : ಪಂಪಭಾ 5-45 ; ವಡ್ಡಾ : ಪು. 40, 108. (ಬಾಲವದ್ದೆ). ಅರ್ಥ ; ಶೈಶವದ ಸ್ವಭಾವ, ಚರ್ಯೆ, ಮುದ್ದು.

ಕುಮ್ಮರಿಗಡಿ : ಪಂಪಭಾ 10-88; ವಡ್ಡಾ : ಪು. 148, (ಕುಮ್ಮರಿಯುಂ ಸುಡು). ಅರ್ಥ ; ಕಾಡಿನಲ್ಲಿ ಮರಗಳನ್ನೊಟ್ಟಿ ಸುಡು,

ಪಿಟ್ಟೆ : ಪಂಪಭಾ 3-9 ; ವಡ್ಡಾ : ಪು. 26 (ಪೆಟ್ಟೆ) ಅರ್ಥ : ಪೆಂಟೆ.

ಬಟ್ಟುಳಿಸೆಂಡು : ಪಂಪಭಾ 2-30 ; ವಡ್ಡಾ. ಪು. 68, 122 (ಬಟ್ಟು, ಉಳಿಸೆಂಡು). ಅರ್ಥ : ಬಚ್ಚದಾಟ ಮತ್ತು ಚೆಂಡಿನಾಟ.

ಒಲ್ಲಣಿಗೆ : ಪಂಪಭಾ 12-48 ವ; 12-206 ವ; ವಡ್ಡಾ ಪು. 19. ಅರ್ಥ : ನೆನೆದ ಅಥವ ನೆನೆಯಿಸುವ ಬಟ್ಟೆ.

ಆ) ಕೀಱು : ಪಂಪಭಾ 6-67 ವ; ಆದಿಪು 13-85 ; ವಡ್ಡಾ ಪು. 83 ಇ ; ಅರ್ಥ : ವಡ್ಡಾ : ಬೇಡಿಕೆ, ಪ್ರಾರ್ಥನೆ, ಒತ್ತಾಯ, ಪಂಪಭಾ : ರೇಗು ; ಆದಿಪು : ಘೋಷಿಸು.

ಬಲ್ಲಾಳ್ತನ : ಪಂಪಭಾ 5-22, 6-67 (ಪರಾಕ್ರಮ)
ವಡ್ಡಾ : ಪು 118, 137 (ಒತ್ತಾಯ).

ಗೊಡ್ಡ : ಪಂಪಭಾ : 4-65; 5-101, 8-90, 7-4 ವ, (ತೊಂದರೆ, ಬಾಧೆ); ವಡ್ಡಾ : ಪು 159. 170 (ಕ್ಷುದ್ರವರ್ತನೆ, ಕಳ್ಳಾಟ).

ಪಣ್ಣು : ಪಂಪಭಾ (ಅಲಂಕರಿಸು), ವಡ್ಡಾ (ಮಾಡು).
ಹೀಗೆಯೇ ಬೇರೆ ಅರ್ಥವನ್ನು ಸೂಚಿಸುವವು ;

ವಿರ್ಗವಿಸು, ಜಾಱ್, ತೊವಲ್, ಕೂಸು, ಕೊಳ್ (ಧಾ), ಕಱಿ (ಧಾ), ಚಳಿ (ಧಾ) ಇ

ಇ) ಕುಱುಪಡ : ಪಂಪಭಾ : 5-57, 5·67 (ಕುಱುಪಡಿ)
ವಡ್ಡಾ : ಪು. 88. (ಪಂಪಭಾ ದರೂಪ ಸರಿಯಾಗಿದೆ)
ಅರ್ಥ : ಕುಱು + ಮಡಿ ; ಸಣ್ಣಮಡಿ ಬಟ್ಟೆ,

೧೯೬೦)

ಕನ್ನಡದಲ್ಲಿ ವರ್ಣಪಲ್ಲಟದ ಕೆಲವಂಶಗಳು

ದ್ರಾವಿಡ ಭಾಷೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಕೆಲವು ವೈಲಕ್ಷಣ್ಯ ಗಳಲ್ಲಿ ವರ್ಣಪಲ್ಲಟವೂ ಒಂದು. ಕನ್ನಡದಲ್ಲಿಯೂ ಇದರ ನಿದರ್ಶನಗಳು ಕಾಣುತ್ತವೆ. ವರ್ಣಪಲ್ಲಟವನ್ನು ವರ್ಣವ್ಯತ್ಯಯ, ವರ್ಣವಿಪರ್ಯಾಯ, ಅಕ್ಷರಪಲ್ಲಟ ಎಂದೂ ವ್ಯವಹರಿಸುತ್ತಾರೆ. ಹಲಕೆಲವು ಕಾರಣಗಳಿಂದ ಕೆಲವು ಶಬ್ದಗಳಲ್ಲಿ, ಸಾಮಾನ್ಯವಾಗಿ ಕೆಲವು ವಿಶಿಷ್ಟ ಪರಿಸರಗಳಲ್ಲಿ ಸ್ವರ ಮತ್ತು ವ್ಯಂಜನಗಳಲ್ಲಿ ಈ ಪಲ್ಲಟವು ನಡೆಯುವುದು. ಇಂತಹ ಕೆಲವು ಪರಿಸರಗಳನ್ನು ನಿದರ್ಶನಪೂರ್ವಕವಾಗಿ ಇಲ್ಲಿ ಸ್ವಲ್ಪಮಟ್ಟಿಗೆ ಗುರುತಿಸಿದೆ.

ಸ್ವರಪಲ್ಲಟ : "ಸಾಮಾನ್ಯವಾಗಿ ಸ್ವರಾದಿಯಾದ ಮೂರು ಲಘ್ವಕ್ಷರ ಗಳಿದ್ದಾಗ, ಮುಖ್ಯವಾಗಿ ಸರ್ವನಾಮ ಶಬ್ದಗಳಲ್ಲಿ, ಮತ್ತಿತರ ಕೆಲವು ನಾಮ ಪ್ರಕೃತಿಗಳಲ್ಲಿ ಉಚ್ಚಾರ ಸೌಕರ್ಯಕಾರಣವಾಗಿ, ಎರಡನೆಯ ಸ್ವರ ಲೋಪ ಗೊಂಡು, ಪದಾದಿಯ ಮೊದಲ ಸ್ವರ ಎರಡನೆಯ ಅಕ್ಷರಕ್ಕೆ ವರ್ಗಾಂತರವಾಗಿ ನಷ್ಟಸ್ವರದ ಕೊರೆಯನ್ನು ತುಂಬಲು ಆಗಲೇ ದೀರ್ಘವೂ ಆಗಿರುತ್ತದೆ. ಎರಡನೆಯ ಸ್ವರ ಬಿಟ್ಟುಹೋಗುವುದೂ ಅದರ ಪೂರೈಕೆಗೆ ಮೊದಲದರ ದೀರ್ಘರೂಪ ಬರುವುದೂ ಈ ಪಲ್ಲಟದ ಕಾರಣವಿರಬಹುದು. ಸ್ವರಗಳ ಈ ಅಸ್ಥಿರತೆ ಮುಖ್ಯವಾಗಿ ಲಕಾರ ರಕಾರಗಳ ಮತ್ತು ಇತರ ಮೃದುವ್ಯಂಜನಗಳ ಉಚ್ಚಾರಣೆಯನ್ನು ಹೊಂದಿಕೊಂಡಿರುತ್ತದೆ"—ಎಂದು ಅರ್ಥ ಬರುವಂತೆ ರೆ. ಕಾಲ್ಡ್‌ವೆಲ್ ತೆಲುಗು ಭಾಷೆಯನ್ನು ಮುಖ್ಯವಾಗಿ ಲಕ್ಷ್ಯವಾಗರಿಸಿಕೊಂಡು ಅಭಿಪ್ರಾಯಪಟ್ಟಿದ್ದಾರೆ.

"ಕಾಲ್ಡ್‌ವೆಲ್ ಹೇಳಿರುವ ಸೂತ್ರ ಸರಿಹೋಗದು. ತೆಲುಗಿನಲ್ಲಿ ಪದಾದಿಯಲ್ಲೇ ಒತ್ತು ಉಂಟು. ಆ ಒತ್ತು ಕೆಲವು ಕಾರಣಗಳಿಂದ ಕೆಲವು ಶಬ್ದಗಳಲ್ಲಿ ಪ್ರಾಚೀನಕಾಲದಲ್ಲಿಯೇ ಭ್ರಷ್ಟವಾಗಿ ಎರಡನೆಯಕ್ಷರದ ಮೇಲೆ ಜಾರಿದೆ. ಪ್ರಥಮಾಕ್ಷರದ ಒತ್ತು ತಪ್ಪಿಹೋಗಲು, ಆ ಅಕ್ಷರವು ಲೋಪ ಗೊಂಡು ಎರಡನೆಯ ಅಕ್ಷರಕ್ಕೆ ಆಯಾ ಪದಕ್ಕುಚಿತವಾದ, ಅನುಕೂಲವಾದ ಮಾರ್ಪಾಟಾಯಿತು. ಈ ಮಾರ್ಪಾಟನ್ನು ಸ್ವರದ ಮೇಲಿನ ಒತ್ತಿನ ವಸೆ ಯಿಂದಾದ ಮಾರ್ಪಾಟೆಂದು ಹೇಳಬೇಕಾಗಿರುವಾಗ ಇವನ್ನು ಕೆಲವರು ಕೇವಲ ವರ್ಣವ್ಯತ್ಯಯವೆಂದು ಭ್ರಾಂತಿಪಟ್ಟರು" —ಎಂದು ಅರ್ಥ ಬರುವಂತೆ

ಪ್ರೊ. ಜಿ. ಜೆ. ಸೋಮಯಾಜಿ "ಆಂಧ್ರಭಾಷಾವಿಕಾಸಮು" ಗ್ರಂಥದಲ್ಲಿ ಬರೆದಿದ್ದಾರೆ.

ವಾಸ್ತವವಾಗಿ ಈಯೆರಡು ಅಭಿಪ್ರಾಯಗಳು ಸೇರಿಯೇ ಸ್ವರಪಲ್ಲಟದ ಪ್ರಕ್ರಿಯೆಗೆ ವಿವರಣೆಯನ್ನು ನೀಡುವುದೆನ್ನಬೇಕು. ಈ ವಿಚಾರದ ತೆಲುಗಿನ ಪದಸಮುದಾಯದಲ್ಲಿ ಸ್ವರಾಘಾತದ (ಸ್ವರಭಾರದ) ಸ್ಥಾನಾಂತರದ ಪರಿಣಾಮವಾಗಿಯೇ ಆದ್ಯಸ್ವರ ಸ್ಥಾನಾಂತರವು ನಡೆಯುವುದೆಂದು ಹೇಳಬಹುದು.[1] ಪದಾದಿಯಲ್ಲಿ ಸ್ವರಾಘಾತವು ತಪ್ಪಿ, ದ್ವಿತೀಯ ವ್ಯಂಜನದ ಮೇಲಾದಾಗ, ಲೋಪಿಸಿದ ಪದಾದಿಯ ಆದ್ಯಸ್ವರವು ದ್ವಿತೀಯ ವ್ಯಂಜನವನ್ನು ಕೂಡುತ್ತದೆ. ಆಗ ಕೆಲಕೆಲವು ಪದಗಳಲ್ಲಿ ತಮತಮಗೆ ಅನುರೂಪವಾದ ಇಂಥ ಕೆಲವು ಮಾರ್ಪಾಟುಗಳಾಗಿ ಶಬ್ದರೂಪಗಳು ಮಾರ್ಪಡುತ್ತವೆ : (i) ದ್ವಿತೀಯ ಸ ರವನ್ನಳಿಸಿ ಅದರ ಸ್ಥಾನವನ್ನು ದೀರ್ಘಾದೇಶಗೊಂಡ (ಅಳಿದ ಸ್ವರದಿಂದ ಕೊರೆಯಾದ ಏಕಮಾತ್ರಾಕಾಲದ ಉಚ್ಚಾರಣೆಯ ಪೂರೈಕೆಗಾಗಿ ಈ ದೀರ್ಘವು ಬರುತ್ತದೆ.) ಆದ್ಯಸ್ವರವು ಆಕ್ರಮಿಸುತ್ತದೆ. (ಉದಾ: ಅದಿನಿ > ದಾನಿ, ಇದಿನಿ > ದೀನಿ). (ii) ಆದ್ಯಸ್ವರವು ದೀರ್ಘಾದೇಶಗೊಳ್ಳುವುದೇ ಅಲ್ಲದೆ ಅಂತ್ಯವ್ಯಂಜನವು ಸ್ವರಯುಕ್ತವೂ ಆಗುವುದು. (ಉದಾ : ಅವರ್ > ವಾರು, ಇವರ್ > ವೀರು). (iii) ಆದ್ಯಸ್ವರವು ದೀರ್ಘಾದೇಶದ ಅನ್ಯಸ್ವರವಾಗಿ ಮಾರುಗೊಳ್ಳಬಹುದು. (ಉದಾ : ಉಕಿರ್ > ಗೋರು). (iv) ಏಕ ಹ್ರಸ್ವಸ್ವರಾದಿ ಶಬ್ದದಲ್ಲಿ ಆ ಸ್ವರವು ದೀರ್ಘಾದೇಶಗೊಂಡು ಇಲ್ಲವೆ ದೀರ್ಘಾದೇಶದ ಅನ್ಯಸ್ವರವಾಗಿ ಮಾರುಗೊಂಡು ಅಂತ್ಯವ್ಯಂಜನದೊಡನೆ ಕೂಡಬಹುದು.[2] (ಉದಾ: ಎಳ > ಲೇ, ಏಟ್ > ಲೇ ; ಉಳ್ > ಲೋ, ಇಲ್ಲ > ಲೇ).

---

[1] ಸ್ವರಾಘಾತವಲ್ಲದ ಅನ್ಯವಿಧಿಯಿಂದಲೂ ಸ್ವರಯುಕ್ತ ವ್ಯಂಜನಾದಿಯ ಸ್ವರವು ದ್ವಿತೀಯ ಸ್ವರವನ್ನಳಿಸಿ ಆ ವ್ಯಂಜನವನ್ನು ಕೂಡುವುದೂ (ಉದಾ: ಪೊಟಲ್ > ಪ್ರೊಲು; ಕೊಟಿತ > ಕ್ರೊತ್ತ) ಎರಡನೆಯಕ್ಷರವಾದ ಸಂಯುಕ್ತಾಕ್ಷರದ ಮೊದಲ ವ್ಯಂಜನವನ್ನು ಹಾಗೆಯೇ ಕೂಡುವುದೂ (ಉದಾ : ಪೊದ್ದು > ಪ್ರೊದ್ದು, ಬದ್ರುಕು > ಬ್ರದುಕು) ಕಾಣುತ್ತದೆ.

[2] ಪಲ್ಲಟವಿಧಿಯಲ್ಲಿ ಪದೋಚಿತವಾದ, ಶ್ರಾವ್ಯತಾನುಸಾರವಾದ ಬೇರೆ ಮಾರ್ಪುಗಳಾಗಬಹುದು.

ತೆಲುಗಿನಲ್ಲಿ ಈ ರೂಪವ್ಯತ್ಯಾಸದ ಪರ್ಯಾಯವನ್ನು ವರ್ಣಪಲ್ಲಟವೆಂದು ಕರೆಯಲಾಗದು ಎಂಬ ಮತ ಒಂದು ದೃಷ್ಟಿಯಿಂದ ಸರಿ. ಏಕೆಂದರೆ ಇಲ್ಲ ವ್ಯಂಜನಪಲ್ಲಟದಂತೆ ವರ್ಣಗಳಲ್ಲಿ ಪರಸ್ಪರ ಸ್ಥಾನಾಂತರ ನಡೆಯುವ ಕೇವಲ ಆದ್ಯಸ್ವರವು ಸ್ಥಾನಾಂತರಗೊಳ್ಳುವುದು ಕಾಣುತ್ತದೆ. ಶಬ್ದಾರ್ಥವು ಬೇರೆಯಾಗದ ಅಕ್ಷರಗಳು ಎಂದರೆ ಸ್ವರಯುಕ್ತ ವ್ಯಂಜನಗಳೆರಡು ಪರಸ್ಪರವಾಗಿ ಸ್ಥಾನಾಂತರವಾಗುವ ವೈಲಕ್ಷಣ್ಯವನ್ನು ವರ್ಣಪಲ್ಲಟವೆಂದು ಸಾಮಾನ್ಯವಾಗಿ ವ್ಯವಹರಿಸುವುದು ರೂಢಿಯಾಗಿದೆ.

ಇದನ್ನು ದೃಷ್ಟಿಯಲ್ಲಿರಿಸಿಕೊಂಡು ಕನ್ನಡದಲ್ಲಿ ಸ್ವರಪಲ್ಲಟವನ್ನು ಹೀಗೆಯೇ ವಿವೇಚಿಸಬೇಕಾಗುವುದು. ಇಂತಹ ಸ್ವರಪಲ್ಲಟದ ನಿದರ್ಶನಗಳು ತೆಲುಗಿನಲ್ಲಿ ಸಾಮಾನ್ಯ. ಕನ್ನಡದಲ್ಲಿ ವಿರಳ.

ಆದ್ಯಸ್ವರದ ಸ್ಥಾನಾಂತರ: (i) ನಡುಗನ್ನಡ ಕಾವ್ಯಗಳಲ್ಲಿ ಕಾಣಿಸಿಕೊಂಡಿರುವ ಅಹಗೆ, ಇಹಗೆ, ಎಹಗೆ ಎಂಬ ಪದಗಳಲ್ಲಿ ಸ್ವರಾಘಾತವು ಪದಾದಿಯ ಆದ್ಯಸ್ವರದಿಂದ ದ್ವಿತೀಯ ವ್ಯಂಜನದ ಮೇಲಾಗುವಾಗ, ದ್ವಿತೀಯಸ್ವರ ಲೋಪಿಸಿ, ನಷ್ಟಸ್ವರದ ಉಚ್ಚಾರಣೆಯ ಪೂರೈಕೆಗೆ ಆದ್ಯಸ್ವರವು ದೀರ್ಘರೂಪದಲ್ಲಿ ಅದನ್ನು (ದ್ವಿತೀಯ ವ್ಯಂಜನವನ್ನು) ಕೂಡಿ ಹಾಗೆ, ಹೀಗೆ, ಹೇಗೆ ಎಂಬ ಹೊಸಗನ್ನಡ ರೂಪಗಳು ಬರುತ್ತವೆ. ಇದು ಉಚ್ಚಾರಣೆಯಲ್ಲಿ ಸೌಲಭ್ಯಾಕಾಂಕ್ಷೆಯ ಪರಿಣಾಮವಾಗಿ ಆದಂಥವು. ಇದೇ ದಾರಿಯಲ್ಲಿ ನಡೆಯುವಂಥವು ಅಹಂಕಾರ > ಹಾಂಕಾರ, ಅಹಂ > ಹಮ್ಮು ಮುಂತಾದವು.

(ii) ಕರ್ಣಾಟಕದ ಕೆಲವೆಡೆ (ಬಿಜಾಪುರ ಜಿಲ್ಲೆ) ನಡುಗನ್ನಡದ ಅಹನ್ ಅಹರ್ ಇತ್ಯಾದಿ ಶಬ್ದರೂಪಗಳನ್ನು ಹಾನ, ಹಾರ ಮುಂತಾಗಿ ಹೇಳುತ್ತಾರೆ. ಇಲ್ಲಿ ಪಲ್ಲಟಗೊಂಡ ಆದ್ಯಸ್ವರವು ಪೂರ್ವೋಕ್ತ ವಿಧಿಯಲ್ಲಿ ದೀರ್ಘಾದೇಶಗೊಳ್ಳುವುದೇ ಅಲ್ಲದೆ ವ್ಯಂಜನಾಂತವು ಮಾತ್ರಾಸಮತೆಗಾಗಿ ಸ್ವರಾಂತವೂ ಆಗಿದೆ. ಇವು ಉಚ್ಚಾರಣೆಯಲ್ಲಿ ಪ್ರದೇಶರೂಢಿ ಮೂಲವಾದ ಸೌಲಭ್ಯಾಕಾಂಕ್ಷೆಯ ಪರಿಣಾಮವಾಗಿ ಆದಂಥವು.

(iii) ಹೊಸಗನ್ನಡದ ಹೌದು ಎಂಬುದು ಅಪ್ಪುದು > ಅಹುದು ಎಂಬುದರ ಮುಂದಿನ ರೂಪ. ಇಲ್ಲಿ ಆದ್ಯಸ್ವರವು ದ್ವಿತೀಯ ವ್ಯಂಜನದೊಡನೆ

ಕೂಡುವಾಗ ಹಿಂದೆ ನೋಡಿದಂತೆ ದ್ವಿತೀಯಸ್ವರವಳಿಯುದು. ಅದರೊಡನೆ ಸೇರಿ ಅವು–ಔ ಎಂಬ ಸಂಧಿಸ್ವರವಾಗಿ ಮಾರ್ಪಟ್ಟು (ಅ+ಉ>ಅವು>ಔ) ಹೌವು (<ಹವುವು) ಎಂಬ ರೂಪವು ಸಿದ್ಧಿಸುತ್ತದೆ.[3]

(iv) ಎಱಂಕೆ ಎಂಬ ಶಬ್ದದಲ್ಲಿ ಆದ್ಯಸ್ವರವು ದ್ವಿತೀಯಸ್ವರವನ್ನಳಿಸಿ, ದ್ವಿತೀಯವ್ಯಂಜನದೊಡನೆ ಸೇರಿ ಱೆಂಕೆ ಎಂದಾಗಿ ಕಾಲಕ್ರಮದಲ್ಲಿ ಱೆಕ್ಕೆ> ರೆಕ್ಕೆ ಆಗುತ್ತದೆ[4]. ಇಲ್ಲಿ ಮಾತ್ರಾಸಮತೆ ಕಾಣದಿರುವುದು ಗಮನಾರ್ಹವಾಗಿದೆ,

ಈ ಮೇಲಣ ನಿದರ್ಶನಗಳಿಂದ ಸಾಮಾನ್ಯವಾಗಿ ಸ್ವರಾಘಾತದ ಸ್ಥಾನಾಂತರದಿಂದ ಆದ್ಯಸ್ವರವು ಸ್ಥಾನಾಂತರಿಸುವುದು ಸ್ವರಪಲ್ಲಟದ ಸಾಧಾರಣ ಲಕ್ಷಣವೆಂದು ತಿಳಿಯಬಹುದು[5]. ಇದಲ್ಲದೆ, ಸ್ವರಾಘಾತಕಾರಣದಿಂದಲ್ಲದೆ ಸಾಮೀಪ್ಯಸಂಬಂಧವುಳ್ಳ ಭಿನ್ನಸ್ವರಗಳೂ ಪರಸ್ಪರವಾಗಿ ಸ್ಥಾನಾಂತರಗೊಳ್ಳುವ ನಿದರ್ಶನಗಳು ಕೆಲವೆಡೆ ಕಾಣುತ್ತವೆ. ಸೌಲಭ್ಯಾಕಾಂಕ್ಷೆ. ಲೇಖನಪ್ರಮಾದ ಮತ್ತು ಅಂಧಾನುಸರಣೆ ಇವರ ಮುಖ್ಯಕಾರಣವಿರಬಹುದು. ಉದಾ : (i)

---

[3] 'ಮುಖ್ಯವಾಗಿ ದ್ವಿತೀಯಾಕ್ಷರವು ಹಕಾರವಾಗಿದ್ದಾಗ (ಉದಾ : ಅಹಗೆ ಹಾಗೆ; ಇಹಗೆ ಹೀಗೆ; ಎಹಗೆ ಹೇಗೆ; ಅಹುದು ಹವುದು; ಅಹೆನು ಹೇನು; ಅಹನು ಹಾನು; ಇತ್ಯಾದಿ) ಒಂದೆರಡನೆಯ ಅಕ್ಷರಗಳು ಪರಸ್ಪರ ಸ್ಥಾನಾಂತರವಾಗುವ ಚರ್ಯೆಯು ಹೊಸಗನ್ನಡದಲ್ಲಿಯೂ ಉಂಟು—ಎಂಬರ್ಥದಲ್ಲಿ ರಾ. ನರಸಿಂಹಾಚಾರ್ಯರು ಹೇಳಿರುವ ಮಾತನ್ನು ಇಲ್ಲಿ ನೆನೆಯಬಹುದು.

[4] 'ಬಹುಶಃ ಎರಡನೆಯಕ್ಷರದ ಮೇಲಣ ಒತ್ತಿನ ಕಾರಣವಾಗಿ ಆದ್ಯಸ್ವರವಾದ 'ಎ' ಕಾರ ಹೋಗುತ್ತದೆ'—ಎಂಬರ್ಥದಲ್ಲಿ ಬರೆದಿರುವ ಜಿ. ಎಸ್. ಗಾಯಿ ಅವರ ವಿವರಣೆ ಅಸಮಗ್ರವೆನ್ನಬಹುದು.

[5] ಕಿಟ್ಟೆಲ್ ನಿಘಂಟಿನಲ್ಲಿ ಹೋಲಿಕೆಗೆಂದು ಕೊಟ್ಟಿರುವ ಹಾಗೂ ಮೂಲವಿರಬಹುದೆಂದು ಸೂಚಿಸಿರುವ ಈ ಮೊದಲಾದ ಪದಗಳನ್ನೂ ಗಮನಿಸಬಹುದು : ಒರಸು—ರೊಪ್ಪು (ರೋಸು?), ಅರಚು—ರಚ್ಚೆ (ರಚ್ಚು?), ಅರಣೆ—ರಾಣಿ (ರಾಣೆ?), ಉಗುರುಳಿ—ಗೋರುಳಿ, ಅರಟೆ—ರಾಟೆ ಇತ್ಯಾದಿ.

ಸಹಜವಾಗಿ ಕನ್ನಡದಲ್ಲಿ ರಾದಿಲಾದಿಯಾದ ಶಬ್ದಗಳು ಇಲ್ಲವೆಂಬುದನ್ನು ಲಕ್ಷ್ಯದಲ್ಲಿಟ್ಟು ಕೊಂಡು ಈ ಪದಗಳನ್ನೂ ಗಮನಿಸಬಹುದು : ಱೊಪ್ಪ (<ಒಱಗು?). ಱೊಪ್ಪಂ (<ಒಱಲ್?), ರುಬ್ಬು(<ಉರುಬು ?), ಲೆಂಕ (<ಎಲಂಕ ?), ರೇಗು (<ಎಱಗು ?) ಗೋರಂಟಿ (<ಉಗುರಂಟಿ ?) ಇತ್ಯಾದಿ.

ಚೆಲ್ಲಿ (ಪಂಪಭಾರತ ೭-೯೪ ವ., ಚಂದ್ರಪ್ರಭಪುರಾಣ ೭-೫೧, ೪-೪೩ವ. ೯)>ಚಲ್ಲಿ (ಶಬ್ದಮ. ೧೧೮); ಚೆಲ್ಲಗಣ್ (ಪುಷ್ಪದಂತಪುರಾಣ ೫-೨೪)> ಚೆಲ್ಲಿಗಣ್ (ಧರ್ಮಾಮೃತ ೮-೧೯೬ ವ; ಜಗನ್ನಾಥವಿಜಯ ೧೧-೧೫).

(ii) ಜನ್ನವಿರಂ (ಕಾವ್ಯಸಾರ ೫೩೫, ಪಂಪಭಾ. ೨-೯೭ ವ. ೬-೮.)>ಜನ್ನಿವರಂ (ಚಾವುಂಡರಾಯ ಪುರಾಣ ೩೫-೧೫, ಸೌಂದರಪುರಾಣ ೪-೩೦, ೯.).

ಯಜ್ಞಸೂತ್ರವೆಂಬರ್ಥದಲ್ಲಿ ಈ ಎರಡು ಪದಗಳಲ್ಲದೆ ಜನ್ನವಾರ, ಜನ್ನಿವಾರ, ಜನ್ನದಾರ, ಜನಿವಾರ ಮುಂತಾದ ಶಬ್ದಗಳು ಹಳೆಯ ಪ್ರಯೋಗಗಳಲ್ಲಿ ಕಾಣುತ್ತವೆ. ಈ ಶಬ್ದರೂಪಗಳ ಕಾಲಕ್ರಮದ ಬೆಳವಣಿಗೆ, ವ್ಯುತ್ಪತ್ತಿಯನ್ನು ಗುರುತಿಸುವುದು ತೊಡಕಿನ ಕೆಲಸ. ಗುಣವರ್ಮನ ಶೂದ್ರಕದ ಮತ್ತು ಪಂಪಭಾರತದ ಪ್ರಯೋಗಗಳಿಂದ ಜನ್ನವಿರಂ ಎಂಬುದೇ ಮೂಲರೂಪವಿರುವಂತೆ ಕಾಣುತ್ತದೆ. ಇದರಲ್ಲಿ ಶೂದ್ರಕದ ಪ್ರಯೋಗವೇ ಸದ್ಯಕ್ಕೆ ಮೊದಲಿನದು, ಪಂಪಭಾರತದ ನಿಘಂಟಿನಲ್ಲಿ ಈ ಶಬ್ದವನ್ನು ದೇಶ್ಯವಾಗಿ ಸೂಚಿಸಿರುವುದು ಗಮನಾರ್ಹವಾಗಿದೆ.

ಇಂಥ ಶಬ್ದಗಳೊಂದಿಗೆ ಅಂಬಲಿ–ಅಂಬಿಲ,[7] ವಾರಣಾಸೀ>ವಾರಣಾಸಿ, ಬಟ್ಟಲು> ಬಟ್ಟುಳ (ಜಾನಪದ ಕಥನ ಗೀತೆಗಳು ೪೬೫) ಮೊದಲಾದವು ಸೇರುತ್ತವೆ.

---

[6] ಈಯುಂತವನ್ನು ನನ್ನ ಗಮನಕ್ಕೆ ತಂದವರು ಶ್ರೀ ಎನ್. ಬಸವಾರಾಧ್ಯರು ಜನ್ನವಿರಂ ಎಂಬುದನ್ನು ಮೂಲರೂಪವಾಗಿ ಗ್ರಹಿಸಿ ಹೀಗೆ ಪದದ ಬಳವಿಯನ್ನು ಸೂಚಿಸಬಹುದೆ ?: ಜನ್ನವಿರಂ> ಜನ್ನಿವರಂ> ಜನ್ನಿವಾರಂ> ಜನ್ನವಾರಂ> ಜನಿ(ನ)ವಾರ (?)

[7] 'ಅಂಬಿಲ' ಶಬ್ದವು ಸಂಸ್ಕೃತ ನಿಘಂಟುಗಳಲ್ಲಿರುವಂತಿಲ್ಲ: ಇದು ಸಂ, 'ಅಮ್ಲ'ದ ತದ್ಭವವಾಗಿರಬಹುದು. ಅಂಬಲಿ ಎಂಬುದು ಸಂಸ್ಕೃತೀಕರಣಗೊಂಡು 'ಅಂಬಿಲ'ವಾಗಿರಬಹುದೆ ? ಅಂಬಲಿ (ವಡ್ಡಾರಾಧನೆ ೭೨.೨೦, ಧರ್ಮಾಮೃ. ೨-೬೯), ಅಂಬಿಲ (ಚಾವುಂಪು, ೪೮-೧೨, ಖಮುದ ೨-೭೪).

ವ್ಯಂಜನ ಪಲ್ಲಟ : "ದ್ರಾವಿಡ ಭಾಷೆಗಳಲ್ಲಿ, ಪ್ರಧಾನವಾಗಿ ಗ್ರಾಮ್ಯರ ನುಡಿಯಲ್ಲಿ, ಕೆಲವೊಮ್ಮೆ ವ್ಯಂಜನಗಳು ತ್ವರೆಯ ಕಾರಣ, ಉಚ್ಚಾರ ಸೌಕರ್ಯದ ಕಾರಣ ಸ್ಥಳಾಂತರಗೊಳ್ಳುತ್ತವೆ; ಆದರೆ ಇದು ಇತರತ್ರವೂ ಆಗಬಹುದು. ಹಲವೆಡೆ ಈ ಪಲ್ಲಟದ ದೆಸೆಯಿಂದಾಗಿ ತಮಿಳಿನಲ್ಲಿ ಶಬ್ದದ ಒಂದು ರೂಪವೂ ತೆಲುಗು ಕನ್ನಡಗಳಲ್ಲಿ ಸ್ವಲ್ಪ ಬೇರೆಯೇ ಆದ ಅದರ ಇನ್ನೊಂದು ರೂಪವೂ ಕಂಡುಬರುತ್ತವೆ.[8] ಈ ಸೋದರ ಭಾಷೆಗಳಲ್ಲಿ ಶಬ್ದಗಳನ್ನು ಹೋಲಿಸುವಾಗ ಈ ಪಲ್ಲಟದ ವ್ಯಾಪ್ತಿಯನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕು" ಎಂದು ರೆ. ಕಾಲ್ಡ್‌ವೆಲ್ ಬರೆದಿದ್ದಾರೆ. "ಶಬ್ದಗಳನ್ನು ಉಚ್ಚರಿಸುವಾಗ ಕೇವಲ ತ್ವರೆಯ ದೆಸೆಯಿಂದ ಅಕ್ಷರಗಳು ತಡವರಿಸಿ ಪರಸ್ಪರ ಸ್ಥಾನಾಂತರಗೊಳ್ಳುವುದು ವರ್ಣ ವ್ಯತ್ಯಯವೆನಿಸುವುದು.[9] ಇದು ಆಯಾ ಪದಕ್ಕೆ ಮಾತ್ರ ಸಂಬಂಧಪಟ್ಟದ್ದು" ಎಂದು ತೆಲುಗನ್ನು ಲಕ್ಷೀಕರಿಸಿಕೊಂಡು ಹೇಳಿದ ಇನ್ನೊಂದು ಮತವುಂಟು.

ಇವೆರಡೂ ಅಸಮಗ್ರವಾದ ಅಭಿಮತಗಳೆನ್ನಬಹುದು. ಏಕೆಂದರೆ ದ್ರಾವಿಡ ಭಾಷೆಗಳಲ್ಲಿ, ಕನ್ನಡವನ್ನು ಲಕ್ಷ್ಯವಾಗಿಟ್ಟು ಪರಿಶೀಲಿಸಿದರೆ, ಗ್ರಾಮ್ಯರ ನುಡಿಯಲ್ಲಿಯೂ ಅನ್ಯಪರಿಸರಗಳಲ್ಲಿಯೂ ಸಮಾನವಾಗಿ ವ್ಯಾಪ್ತವಾಗಿರುವ ವ್ಯಂಜನಪಲ್ಲಟವು, ತ್ವರೆ, ಉಚ್ಚಾರಸೌಕರ್ಯದ ಪರಿಣಾಮವಾಗಿಯೇ ಅಲ್ಲದೆ, ಪ್ರಾಸಸ್ಥಾನದಲ್ಲಿ ನಿರ್ದಿಷ್ಟ ಅಕ್ಷರದ ಆವಶ್ಯಕತೆ, ಶಬ್ದಾರ್ಥಗಳ ಸಂದಿಗ್ಧತೆ, ಪಾಠಾಂತರದ ಲೋಪದೋಷಗಳು ಮೊದಲಾದ ಕಾರಣಗಳಿಂದಲೂ ನಡೆಯ

---

[8] ಇದಕ್ಕೆ ಅವರು ಕೊಟ್ಟಿರುವ ಉದಾ.ಗಳು : ಕೊಪ್ಪುಳ್ (ತ.) ಪೊಕ್ಕುಳ್— ಪೊಕ್ಕಿಳ್ (ಮಲೆ.) ಪೊಕ್ಕಿಲಿ (ತೆ.), ಪಡರ್ (ತ.), ಪರಡು (ಕ). ಅದರೊಂದಿಗೆ ತಮಿಳಿನಲ್ಲಿ ವ್ಯಂಜನಪಲ್ಲಟದ ಒಂದೆರಡು ಉದಾಹರಣೆಗಳನ್ನೂ ನೋಡಬಹುದು: ಕುದಿರೈ: ಕುರಿದೈ, ತಶೈ: ತದೈ, ಕಲ್ಯಾಣಂ ; ಕಣ್ಣಾಲಂ, ಮಧುರೈ : ಮುರುದೈ.

[9] ಇದಕ್ಕೆ ಕೊಟ್ಟಿರುವ ಉದಾ.ಗಳು : ನವ್ವುಲಾಟ—ವವ್ವಟಾಲ, ಜೋನಡ— ಜೋಡನ, ವಾರುವಮು—ವಾವುರಮು, ಪಾರುವಮು—ಪಾವುರಮು.

ಇದರೊಂದಿಗೆ ಆವಶ್ಯಕವಿದ್ದಂತೆ ಪಡಗ (ಪಡಿಗ)—ಪಾಗಡ, ಪಾಡಗವು— ಪಾಗಡವು ಮೊದಲಾದುವನ್ನೂ ನೋಡಿಕೊಳ್ಳಬಹುದು.

ಬಹುದೆಂದು ತಿಳಿಯುವುದು. ಎರಡನೆಯದಾಗಿ, ಕೆಲವು ಪದಗಳ ಮಟ್ಟಿಗೆ ಅನಿರ್ದಿಷ್ಟ ಪರಿಸರಗಳಲ್ಲಿ, ಆಕಸ್ಮಿಕವಾಗಿ, ಪ್ರಮಾದಜನ್ಯವಾಗಿ, ಸ್ವಚ್ಛಂದವಾಗಿ ವರ್ಣಪಲ್ಲಟವು ತಲೆದೋರಿರುವ, ತಲೆದೋರುವ ಸಂದರ್ಭಗಳಿದ್ದರೂ, ಸಾಮಾನ್ಯವಾಗಿ ವರ್ಣೋತ್ಪತ್ತಿಸ್ಥಾನದಲ್ಲಿ ಪರಸ್ಪರ ಸಾಹಚರ್ಯವಿರುವ, ಏಕ ಸ್ಥಾನಿಗಳೆನಿಸುವ, ಅಸ್ಥಿರಸ್ವಭಾವದ ವರ್ಣಗಳು ಸೌಲಭ್ಯಾಕಾಂಕ್ಷೆ ಮೊದಲಾದ ಕಾರಣಗಳಿಂದ ಉಚ್ಚಾರಣೆಯ ಮತ್ತು ಬರೆವಣಿಗೆಯ ಅವಸರದಲ್ಲಿ ಸ್ಥಳಾಂತರ ಗೊಳ್ಳುವ ನಿರ್ದಿಷ್ಟ ಪರಿಸರಗಳು ಕಂಡುಬರುವುದನ್ನು ನಿದರ್ಶನಪೂರ್ವಕವಾಗಿ ತಿಳಿಯಬಹುದು. ಇದು ಬಹುಮಟ್ಟಿಗೆ ಕನ್ನಡೇತರ ದ್ರಾವಿಡ ನುಡಿಗಳಿಗೂ ಅನ್ವಯಿಸುತ್ತದೆ.

ವ್ಯಂಜನಪಲ್ಲಟಗಳಲ್ಲಿ ರೇಫಲಕಾರಗಳೂ ಕುಳರಳಗಳೂ ಪ್ರಧಾನಪಾತ್ರ ವನ್ನು ವಹಿಸುತ್ತವೆಂಬುದು ದೃಷ್ಟಪೂರ್ವಕವಾದುದು. ಇವು ನಾದಾನುಬಂಧಿ ಗಳು, ಬಹುಮಟ್ಟಿಗೆ ಏಕಸ್ಥಾನಿಗಳು, ಸಹಚರ ವರ್ಣಗಳು. ಅಂದಮೇಲೆ ಪಲ್ಲಟ ಸಹಜ.

ಈ ಪಲ್ಲಟ ಕೆಲವೆಡೆ ಸ್ಥಾಯಿ, ಕೆಲವೆಡೆ ತಾತ್ಕಾಲಿಕ, ಕೆಲವಡೆ ವರ್ಣ ವ್ಯತ್ಯಯವಾದ ಮೇಲೆ ಶಬ್ದದ ಮೂಲರೂಪವು ಬಹುಮಟ್ಟಿಗೆ ಇಲ್ಲವೆ ಪೂರ್ತಿ ಯಾಗಿಯೇ ಕಣ್ಮರೆಯಾಗಿ ವ್ಯತ್ಯಸ್ತರೂಪವು ಸಾರ್ವಕಾಲಿಕವಾಗಿ, ಸಾರ್ವತ್ರಿಕ ವಾಗಿ ಮುಂದುವರಿಯಬಹುದು (ಉದಾ : ಅಸಗ> ಅಗಸ). ಕೆಲವೆಡೆ ಆಯಾ ಪರಿಸರಗಳಲ್ಲಿ, ಆಯಾ ಉದಾಹರಣೆಯಲ್ಲಿ ಮಾತ್ರ ಕಾಣಿಸಿಕೊಂಡ ವ್ಯತ್ಯಸ್ತ ರೂಪವು ತಾತ್ಕಾಲಿಕವಾಗಿ ವೈಯಕ್ತಿಕವಾಗಿ ಅಲ್ಲಿಗೇ ನಿಂತುಹೋಗಬಹುದು (ಉದಾ : ಅಗಳು> ಅಳಗು). ಹಾಗಲ್ಲದೆ ಮೂಲರೂಪವೂ ವ್ಯತ್ಯಸ್ತರೂಪವೂ ಎಡೆಯೆಡೆಯಲ್ಲಿಯೇ ಬಳಕೆಯಲ್ಲಿ ಮುಂದುವರಿಯಬಹುದು (ಉದಾ : ಅಲು ಗಾಡು> ಅಗಳಾಡು). ಇವುಗಳ ತಪ್ಪೊಪ್ಪುಗಳ ಉಚಿತಾನುಚಿತಗಳ ಎಣಿಕೆ ಬರಬಹುದು, ಬರದಿರಬಹುದು. ಇಂಥ ನುಡಿನಿರಿಗೆ ವ್ಯಕ್ತಿಯ ಮನೋಧರ್ಮ ದಿಂದ ಪ್ರಭಾವಿತವಾದುದು.

ವ್ಯಂಜನಪಲ್ಲಟದ ಕೆಲವು ನಿರ್ದಿಷ್ಟ ಪರಿಸರಗಳು :–

1. ಪ್ರಾಸಸ್ಥಾನದಲ್ಲಿ : ಪದ್ಯದ ಪ್ರಾಸಸ್ಥಾನದಲ್ಲಿ ನಿರ್ದಿಷ್ಟ ಅಕ್ಷರದ ಆವಶ್ಯಕತೆಗಾಗಿ ರೂಢಿಯ ಪದದಲ್ಲಿ ವರ್ಣಪಲ್ಲಟವಾಗಬಹುದು :

ಉದಾ : (1) ತಳವರ > ತರವಳ (ಕುಮಾರವ್ಯಾಸ ಭಾರತ ೧೦-೯-೧೪)

(2) ತಳವರಿಕೆ > ತರವಳಿಕೆ (ಕುವ್ಯಾಭಾ. ೪-೮-೭೩)[10]

2. ಅನುಕರಣೆಯಲ್ಲಿ: ಕಾವ್ಯರೂಢಿಯಲ್ಲಿ ಮತ್ತು ಲೋಕರೂಢಿಯಲ್ಲಿ, ಕೆಲವು ಅನುಕರಣೆಯ ಶಬ್ದಗಳಲ್ಲಿ, ಸಾಮಾನ್ಯವಾಗಿ ಅರ್ಥವೈಪರೀತ್ಯವೇನೂ ಉಂಟಾಗದ ಎಡೆಗಳಲ್ಲಿ, ಉಚ್ಚಾರಕರ್ತನ ರೂಢಿ, ಅಪೇಕ್ಷೆ, ಶೀಘ್ರೋಚ್ಚಾರಣೆ ಮೊದಲಾದ ಕಾರಣಗಳ ಪರಿಣಾಮವಾಗಿ ವರ್ಣಪಲ್ಲಟವು ಘಟಿಸಬಹುದು:

ಉದಾ : (1) ಮಗಮಗಿಸು : ಗಮಗಮಿಸು.

ಮಗಮಗಿಸು (ಪಂಪಭಾ. ೧೪-೨೫, ಭರತೇಶ್ವರಚರಿತೆ ೧-೯೪) — ಗಮಗಮಿಸು (ಭರಚ. ಸಂಗ್ರಹ ೪೦೪, ಹಳ್ಳಿಹಾ. ೧೬೪)[11]

ಮಘಮಘಿಸು : ಘಮಘಮಿಸು

ಮಘಮಘಿಸು (ಮದನತಿಲಕ ೮, ಹರಿಹರನ ರಗಳೆಗಳು I-೨,೫,೯.) ಘಮಘಮಿಸು (ಭರಚ. ೧೬೦.)[12]

---

[10] ಇವು ರಳವಿಪರ್ಯಯ ವ್ಯಾಪ್ತಿಯಲ್ಲಿಯೂ ಇರುವುದರಿಂದ ಈ ಪರಿಸರಕ್ಕೆ ಅಷ್ಟು ಒಳ್ಳೆಯ ಉದಾ. ಗಳಾಗುವುದಿಲ್ಲ. ಆದರೂ ಇಲ್ಲಿ ಪ್ರಾಸಸ್ಥಾನದ ಆವಶ್ಯಕತೆಗಾಗಿಯೇ ವರ್ಣಪಲ್ಲಟವಾಗಿದೆಯೆಂದು ತಿಳಿಯಬಹುದು. ಕಾವ್ಯಾಧಾರದ ದೃಷ್ಟಿಯಿಂದ ನೋಡಿದರೆ, ಇಲ್ಲಿಯ ವ್ಯತ್ಯಸ್ತರೂಪ ಬಹುಶಃ ತಾತ್ಕಾಲಿಕ ಹಾಗೂ ವೈಯಕ್ತಿಕವೆಂದು ಹೇಳಬಹುದು.

[11] ಸಾಮಾನ್ಯವಾಗಿ ಹಳಗನ್ನಡ ನಡುಗನ್ನಡಗಳಲ್ಲಿ 'ಮಗಮಗಿಸು' ಎಂಬುದೇ ಬಹು ಪ್ರಚುರವಾದ ರೂಪವಾಗಿದ್ದು ಹೊಸಗನ್ನಡದಲ್ಲಿ ಗಮಗಮಿಸು ಎಂಬುದು ವ್ಯಾಪ್ತವಾಯಿತು. ಆದರೂ ಇವುಗಳಲ್ಲಿ ಕ್ವಚಿತ್ತಾಗಿ ಮೊದಲಿನದು ಹೊಸಕವಿಗಳಲ್ಲಿಯೂ, ಎರಡನೆಯದು ಹಳೆಯ ಕವಿಗಳಲ್ಲಿಯೂ ಬಳಕೆಯಾಗಿದೆ.

[12] "ಗಡಿಗೆಯ ಪಾಲುರ್ವಿ ಘಮುಘಮೆನುತಿರೆ'' ಎಂಬುದು ಲೀಲಾವತಿಯ ಪ್ರಯೋಗ (೫-೧೨೩.)

(2) ಗಿಜಗಿಜ : ಜಗಿಜಗಿ, ಪಟಪಟನೆ : ಟಪಟಪನೆ, ರಿಪಿರಿಪಿ : ಪಿರಿಪಿರಿ, ಕಬಕಬ: ಬಕಬಕ, ಮಾರಾಮಾರಿ: ರಮಾರಮಿ (?), ಕಳಕಳಿಸು: ಲಕಲಕಿಸು(?) ಇತ್ಯಾದಿ.

3. ಪಾಠಾಂತರಗಳಲ್ಲಿ : ಕಾಲಕ್ರಮದಲ್ಲಿ ಮೂಲಗ್ರಂಥದ ಪ್ರತಿಗಳನ್ನೆತ್ತುವಾಗ ಹಲವು ಬಗೆಯ ಪ್ರತಿಕಾರರು ಹಲವು ಬಗೆಯ ಲೇಖನ ಪ್ರಮಾದಗಳನ್ನು ಮಾಡಿರುವ ಸಂದರ್ಭಗಳಿವೆ. ಇವುಗಳಲ್ಲಿ ವರ್ಣಪಲ್ಲಟವೂ ಒಂದು. ಇದು ಕೇವಲ ಪ್ರಮಾದಜನ್ಯವಾಗಿರುವ ಕಾರಣದಿಂದ, ಅರ್ಥದ ದೃಷ್ಟಿಯಿಂದ ನೋಡಿದರೆ[13] ಇದನ್ನು ಇಲ್ಲಿ ಸೇರಿಸಲಾಗದು. ಆದರೆ ಇದರಿಂದ ವರ್ಣಪಲ್ಲಟವಿಧಿಯ ವೈಲಕ್ಷಣ್ಯಗಳನ್ನೂ, ಕೆಲವು ಸಾಮಾನ್ಯ ಪರಿಸರಗಳನ್ನೂ ತಿಳಿಯಲು ಸಹಾಯವಾಗುವುದು. ಪ್ರತಿಕಾರನ ಅನಭಿಜ್ಞತೆ, ಅನವಧಾನ, ಅಂಧಾನುಸರಣೆ, ಶಬ್ದಾರ್ಥಗಳ ಅಬೋಧತೆ, ಸಂದಿಗ್ಧತೆ ಮೊದಲಾದ ಕಾರಣಗಳಿಂದ ಈ ಪ್ರಮಾದವು ತಲೆದೋರಬಹುದು. ಅಂತಹ ಕೆಲವು ನಿದರ್ಶನಗಳನ್ನು ಇಲ್ಲಿ ಪ್ರಾತಿನಿಧಿಕವಾಗಿ ತೋರಿಸಿದೆ,

(i) ಅನವಧಾನ : ಚಂಪಾನಗರ : ಪಂಚಾನಗರ (ಛ) (ವಡ್ಡಾರಾಧನೆ ೧೦೧-೪),[14] ಕರಗದಡಪದ : ಕರಗಡಪಡದ (ಗ) (ಮದನತಿಲಕ ೮-೫೯).

(ii) ಸಂದಿಗ್ಧತೆ: ಮೇಲುರದ : ಮೇಲುದರ (ಹು) (ಚೆನ್ನಬಸವ ಪುರಾಣ ೩೭-೪೩),[15] ತಳರದಗಲದೆ : ತಳರದಲುಗದೆ (ನಂಬಿಯಣ್ಣನ ರಗಳೆ ೧೦೨).

---

13 ವರ್ಣಪಲ್ಲಟದಲ್ಲಿ ಅರ್ಥಭೇದವಾಗಕೂಡದು. ಆದರೂ ಇದಕ್ಕೆ ಅಪವಾದವಾಗುವ ಒಂದೆರಡು ನಿದರ್ಶನಗಳುಂಟು. ಅಲ್ಲದೆ ಶಬ್ದಾಂತರದೊಡನೆ ಮೂಲಾರ್ಥದ ವ್ಯಾಪ್ತಿಯು ವಿಕಾಸಗೊಂಡ ಅರ್ಥಭೇದವೂ ಕಾಣಬಹುದು.

14 ವಡ್ಡಾರಾಧನೆಯ ಬೇರೆಯ ಕತೆಗಳಲ್ಲಿ ಚಂಪಾನಗರ ಎಂಬ ಹೆಸರು ವಿಶೇಷವಾಗಿ ಬರುತ್ತದೆ.

15 ಇಲ್ಲಿ ಪಾಠಾಂತರವೆಂದು ಸೂಚಿಸಿರುವುದೇ ಮೂಲಪಾಠವಾಗಿರಬೇಕೆಂದು ತೋರುತ್ತದೆ. ನೋಡಿ : ಮೇಲುದ್ಗಲ ಸೆಜ್ಜಂಗನೋಸರಿಸುವಂತಿರೆ_(ಶಮ.ದ. ೧೯೦.೪)

(iii) ಅನಭಿಜ್ಞತೆ : ಗಜವರ್ತಿ, ಗಜವತ್ತಿ: ಜಗವರ್ತಿ : ಜಗಬತ್ತಿ (ಕಿ. ಖ.) (ಶಮದ. ೨೬೩), ರತದೀಪಿಕೆಗಳ್ : ತರದೀಪಿಕೆಗಳ್ (ಖ.ಬ.) (ಸೂಕ್ತಿಸುಧಾರ್ಣವ ೨೨೫.)

(iv) ಅಂಧಾನುಸರಣೆ : ಜಗಂಗಳಂ : ಗಜಂಗಳಂ (ಕ. ಖ. ಗ.) (ಪಂಪಭಾ. ೧೧-೧೦೦) ಗುರ್ದುಂ: ದುರ್ಗಂ (ಕ. ಖ. ಗ.) (ವಡ್ಡಾ. ೧೩೬-೧೦.)

(v) ಅಬೋಧತೆ :[16]

(1) ವೇರಣೆಗಿತಿ : ರೇವಣಗಿತಿ

ವೇರಣೆಗಿತಿ[17] (ಶಮದ. ಮೈಸೂರು ಮುದ್ರಣ ೧೯೫೯. ಪು. ೧೭೨)–ರೇವಣಗಿತಿ (ಖ) ಪೇರಡಿಗಿತಿ (ಕಿ. ಪ.) ವೇರಡಿಗಿತಿ (ಶಮದ. ಮಂಗಳೂರು ಮುದ್ರಣ, ೧೯೨೦,); ಪೇರಡಗಿತ್ತಿ (ಸೂಕ್ತಿಸು. ೮-೧೦೭)--ವೇಡರಗಿತ್ತಿ (ಬ.)

(2) ಬೊಗಸೆ ಎಂಬರ್ಥದ ಬಗಸಿರೆ, ಬಗಸೆರೆ, ಬೆಲಗಸೆ ಮೊದಲಾದ ಶಬ್ದರೂಪಗಳಲ್ಲಿ :

ಬಗಸಿರೆ (ಪಂಪಭಾ. ೧೨–೧೫೩)—ಬೆಗಸಲೆ (ಖ) ಬೆಗೆಸರಿ (ಗ) ಬಗಸಲೆ (ಘ), ಬೆಲಗಸೆ (ಪ.)

ಬಗಸೆರೆ (ಗದಾಸಂ. : ಸಂ. ತೀ. ನಂ ಶ್ರೀ. ಪು. ೧೨೪ರ ಟಿಪ್ಪಣಿಯಲ್ಲಿ ಬಗಸೆರೆ = ಬೆಸಲಗೆ = ಬೆಲಗಸೆ—ಬೊಗಸೆ ಎಂದು ಬರೆಯಲಾಗಿದೆ.)

—ಬೆಲಗಸೆ (ಗದಾಯುದ್ಧ : ಸಂ. ಕೆ. ವಿ ಕೃಷ್ಣಭಟ್ಟ ೩-೨೮.)

---

16 ಪ್ರಾಯಶಃ ಶಬ್ದಾರ್ಥವು ಅಬೋಧವಾಗಿದ್ದು, ಅವ್ಯುತ್ಪನ್ನಮತಿಯಾದ ಪ್ರತಿಕಾರನು ಒಮ್ಮೆ ಮಾಡುವ ಒಂದು ತಪ್ಪು ಮುಂದೆ ಹಲವು ಸಂಕ್ಲೇಶಗಳಿಗೆ ಎಡೆಮಾಡಬಹುದು,

17 ವೇರಟಕಿ—ಎಂದರೆ ಅಲ್ಪ, ಅಕುಲೀನ ಎಂದು ಸಂ. ನಿಘಂಟಿನಲ್ಲಿ ಹೇಳಿದೆ. ಪ್ರಸ್ತುತ ಶಬ್ದವು ಸ್ತ್ರೀಲಿಂಗದ ತದ್ಧಿತಾಂತರೂಪ. 'ರೇವಣಗಿತಿ' ಎಂಬ ಶಬ್ದಕ್ಕೆ ಅರ್ಥವಿಲ್ಲ.

— ಬೆಸಲಗೆ (ಗದಾಯು : ಸಂ. ಮಂ. ಆ. ರಾ. ಹಾಗೆಯೇ ಮದ್ರಾಸು ಓ. ಲೈ. ಪ್ರತಿಯ ನಕಲು)

ಅಜಿತಪುರಾಣದ ೬–೧೫ ನೆಯ ಪದ್ಯವನ್ನು ಉದಾಹರಿಸುವ :

(i) ಕಾವ್ಯಾವಲೋಕನದಲ್ಲಿ : ಬೆಲಗಸೆ (ಪ. ೮೫೫.)— ಬೆಲಸಗೆ (ಅ.)

(ii) ಸೂಕ್ತಿಸುಧಾರ್ಣವದಲ್ಲಿ : ಬೆಲಗಸೆ (೮-೨೭೯.) — ಬೆಳಸಿಗೆ (ಖ. ಬ.)

ಈ ಉದಾ.ಯಲ್ಲಿ ಶಬ್ದಾಂತರಗಳಿಂದ ಅರ್ಥಭೇದವೇನೂ ಆಗಿಲ್ಲ.[18] ಲೋಕರೂಢಿಯಲ್ಲಿ:—ಹಲವು ಶಬ್ದಗಳ ಮೂಲರೂಪಗಳು ಗ್ರಾಂಥಿಕ ಪ್ರಯೋಗಗಳಲ್ಲಿ ಯಥಾರೀತಿಯಲ್ಲಿ ನಿಲ್ಲುವುದು ಹಲಮಟ್ಟಿಗೆ ಸಾಧ್ಯವಾದರೂ ಲೋಕರೂಢಿಯಲ್ಲಿ ಕೆಲಮಟ್ಟಿಗಾದರೂ ಅದು ಕಷ್ಟ. ಶಬ್ದೋಚ್ಚಾರಣೆಯ ಸಂದರ್ಭದಲ್ಲಿ ಸೌಲಭ್ಯಾಕಾಂಕ್ಷೆಯೋ ಮಿತವ್ಯಯಾಸಕ್ತಿಯೋ, ಶಬ್ದಕ್ಲೇಶವೋ ಉಚ್ಚಾರದೌರ್ಬಲ್ಯವೋ, ಪ್ರದೇಶರೂಢಿಯೋ ಅಂಧಾನುಸರಣೆಯೋ, ಅಶಿಕ್ಷಿತ ಪ್ರಕೃತಿಯೋ, ನಿಜರೂಪಭ್ರಾಂತಿಯೋ ಕಾರಣವಾಗಿ, ವ್ಯವಹಾರ ಭಾಷೆಯಲ್ಲಾಗುವ ಇತರ ಮಾರ್ಪಾಡುಗಳಲ್ಲಿ ಒಂದಾಗಿ, ವರ್ಣಪಲ್ಲಟವೂ ಘಟಿಸುತ್ತಿರುತ್ತದೆ. ಇಂತಹ ಪಲ್ಲಟಗಳು ಸಾಮಾನ್ಯವಾಗಿ ನಿರ್ದಿಷ್ಟ ಪರಿಸರಗಳಲ್ಲಿಯೇ ನಡೆಯುವುದೆಂಬುದನ್ನು ನಿದರ್ಶನಗಳ ವಿಶ್ಲೇಷಣೆಯಿಂದ ತಿಳಿಯಬಹುದು. ಇಂತಹ ನಿದರ್ಶನಗಳು ಆಗಿಂದಾಗ್ಗೆ ಅನುಭವಗೋಚರವಾಗುವಂತೆ, ಮಾತಿನಲ್ಲಿ ಕಾಣಿಸಿಕೊಂಡು ಮಾಯವಾಗುವಂತೆ, ಕ್ವಚಿತ್ತಾಗಿ ರೂಢಿಯಲ್ಲಿಯೂ ಬರೆಹದಲ್ಲಿಯೂ ನೆಲೆನಿಲ್ಲಬಹುದು.

---

[18] ಇವರೊಂದಿಗೆ ಬರಡಗೆ : ಬರಗಡೆ (ಲೀಲಾವತಿ ೨-೧೦೧) ಎಂಬುದನ್ನೂ ನೋಡಿ. (ಪ್ರ. ಕ. ೪೨-೧ ರಲ್ಲಿ, 'ಕವ್ಯಟದ ಕಿಡಿಗಳು' ವಿಭಾಗದಲ್ಲಿ ಪ್ರೊ. ಡಿ. ಎಲ್. ಎನ್., ಅವರ ಲೇಖನ ನೋಡಿ.).

(i) ಕಿಟ್ಟೆಲ್ ನಿಘಂಟಿನಲ್ಲಿ ದೊರೆಯುವ ಉದಾಹರಣೆಗಳಲ್ಲಿ ಕೆಲವು : ಅರಳಿ—ಅಳಲಿ, ಕಣಗಿಲೆ—ಕಣಲಿಗೆ, ಕಾಲವೆ—ಕಾವಲೆ, ಹೆಳಲು—ಹೆರಳು, ತಿರುಳು—ತಿಳಲು, ರಾಮಾಯಣ — ರಾವಾಣ್ಯ, ಗುಂಜು — ಜುಂಗು, ಅಲುಗು—ಅಗುಲು, ಕಾಸರಿಕೆ–ಕಾರಸಿಕೆ[19], ಚರವಿಗೆ—ಚವರಿಗೆ[20] ಇತ್ಯಾದಿ.

(ii) ವ್ಯವಹಾರದಲ್ಲಿ : ಸಾಮಾನ್ಯವಾಗಿ ಅಶಿಕ್ಷಿತ ಪ್ರಕೃತಿಯ ಜನಸಾಮಾನ್ಯದಲ್ಲಿ : ಅಲುಗಾಡು—ಅಗಲಾಡು[21] ಹಣೇಬರಹ—ಹಣೇಭಾರ, ಫಲಾಹಾರ—ಫರಾಳ, ಕಾಗದ—ಕಾದಗ, ಒಳಲೆ—ಒರಳೆ, ತಳಿರು—ತರಿಳು, ಕಾಲವೆ—ಕಾವಲಿ[22] ಇತ್ಯಾದಿ.

(iii) ರೂಢಿಯ ಸಂಸ್ಕೃತ ಶಬ್ದಗಳನ್ನು ಅಶಿಕ್ಷಿತರಾದ ಗ್ರಾಮೀಣರು ಉಚ್ಚರಿಸುವಾಗ ಉಚ್ಚಾರದೌರ್ಬಲ್ಯಮೂಲವಾದ ಸೌಲಭ್ಯಾಕಾಂಕ್ಷೆಯ ಪರಿಣಾಮವಾಗಿ :

---

19 ಕಾಸರಕ (ಭರಚ. ಸಂ., ೨೯೫-೨೧.) : ಕಾರಸಿಕೆ ಎಂಬುದು ನಾಚಿರಾಜೀಯದಲ್ಲಿ ಪಾಠಾಂತರವಾಗಿ ಬಂದಿದೆಯೆಂದು ಕಿಟ್ಟೆಲಿನಲ್ಲಿ ಹೇಳಿದೆ.

20 ಚರುವಿಗೆ (ಸಿದ್ಧರಾಮಚರಿತೆ ೯-೩.)—ಇದೇ ಮೊದಲ ರೂಪವೆಂದು ಕಾಣುತ್ತದೆ. ಕಿಟ್ಟೆಲ್ ಈ ಶಬ್ದಕ್ಕೆ ಕನ್ನಡೇತರ ದ್ರಾವಿಡಗಳ ಪರ್ಯಾಯಶಬ್ದಗಳನ್ನು ಕೊಟ್ಟಿದ್ದಾರೆ : ಚವರಿಗೆ (ಜಾನಪದ ಕಥನ ಗೀತೆಗಳು—ಪು. ೪೬೨). ಈಗ ರೂಢಿಯಲ್ಲಿ ಚೌರಿಗೆ, ಚರಿಗೆ ಎನ್ನುತ್ತಾರೆ. ಚರುವಿಗೆ> ಚವುರಿಗೆ> ಚೌರಿಗೆ> ಚರಿಗೆ ಎಂದಾಗಿರಬಹುದು. (ಅರ್ಥ : ತಂಬಿಗೆ, ಬಿಂದಿಗೆ.)

21 ಹೋಲಿಸಿ : ತಗುಲು—ತಲುಗು (ತೆ.) ಈ ಸಾಲಿನ ಉದಾ.ಗಳು ಬರೆಹದಲ್ಲಿಯೂ ಪ್ರವೇಶಿಸಿವೆ.

22 ಉತ್ತರ ಕರ್ನಾಟಕದಲ್ಲಿ "ಶಾಸನಗಳ ಬಾಯ್ಯಾಲ್, ಅನಂತರ ಸಾಹಿತ್ಯದ ಕಾಲ್ವಾಯ್, ಕಾಲ್ವೆಯಾಗಿ, ಅಕ್ಷರ ಪಲ್ಲಟ ಪಡೆದು ಕಾವಲಿಯಾದಾಗ 'ಗಟಾರ' ಎನ್ನುವ ಹೀನಾರ್ಥವನ್ನು ಕೊಡಲು ಪ್ರಾರಂಭಿಸಿತು." (ಕನ್ನಡ ಭಾಷಾಶಾಸ್ತ್ರ : ಪು. ೧೨೫–೧೨೬) ಹಾಗೆಯೇ ಇದೇ ಕೃತಿಯಲ್ಲಿ ಎಲ್ಲಾಪುರ=ಏಲಾಪುರ> ಏಲೂರ> ಏರೂಳ> ವೇರೂಳ ಎಂಬುದರ ಸೂಚನೆಯನ್ನೂ ನೋಡಿ (ಪು.೧೭೪.).

ಉತ್ಸವ—ಉಸ್ತವ; ವ್ಯತ್ಯಾಸ—ಯೆತ್ವಾಸ; ಪ್ರಹ್ಲಾದ—ಪ್ರಲ್ಹಾದ;[23] ಜಿಹ್ವೆ—ಜಿವ್ಹೆ.[23] ಇ.,

(iv) ತ್ವರೆ, ಅನವಧಾನ ಮೊದಲಾದ ಕಾರಣಗಳಿಂದ :

ಪ್ರಣಾಮ—ಪ್ರಮಾಣ ; ಬಹುವ್ರೀಹಿ—ಬಹುರ್ವೀಹಿ ; ಬೆಗಡು—ಬೆಡಗು ಇತ್ಯಾದಿ.

ಗ್ರಂಥಗಳಲ್ಲಿ :

1. ರೇಫದ ಅಸ್ಥಿರತೆ : [24]

(i) ಕರ್ದುಂಕು :[25] ಕದ್ರುಂಕು, ಕದ್ರುಕು, ಕದೃಂಕು (ಭೈರವೇಶ್ವರ ಕಾವ್ಯ ೧೨-೭೮, ೮೧, ?)

(ii) ಅದಿರ್ಗಂತಿ: ಅದ್ರುಗಂತಿ (ಕ.), ಅದೃಗಂಚಿ (ಖ), ಆದ್ರಿಗಂತಿ (ಗ.) ಅದ್ರುಗಂತಿ (ಚ.), ಅದ್ರಿಗಂತಿ (ಜ.) (ನಂಬಿಯಣ್ಣನ ರಗಳೆ ೭೪.).

---

[23] ಇಂಥವು ಪ್ರದೇಶರೂಢಿ, ಅಂಧಾನುಸರಣೆಗಳ ದೆಸೆಯಿಂದಲೂ ಬಳಕೆಗೆ ಬಂದಿವೆ; ಬರೆಹವನ್ನೂ ಪ್ರವೇಶಿಸಿವೆ.

[24] (i) ರೇಫವು ಪೆಜ್ಜು ಜಾರಿಕೆಯ ವರ್ಣವಾದುದರಿಂದ ಪದದ ಯಾವ ಪರಿಸರದಲ್ಲಿದ್ದರೂ ಸ್ಥಾನಾಂತರಗೊಳ್ಳುವ ಸಂಭವವಿರುವಂತೆ ಕಾಣುತ್ತದೆ. (ii) (ಸಂ) ಸರಣಿ> ರಪಣಿ (ಕ,(?) (ನೋಡಿ. ರಪಣಿಯೆನಲ್ ಸರಣಿ—ಭಾರತ ನಿಘಂಟು ೧೨೧.) (iii) ("ಪಾದರಸ' ವರ್ಣಪಲ್ಲಟವನ್ನು ಪಡೆದು 'ಪಾರದ'ವಾಯಿತು" ಎಂದು ಒಂದೆಡೆ ಸೂಚಿಸಿದೆ (ಕನ್ನಡ ಭಾಷಾಶಾಸ್ತ್ರ—೧೧೩). ಇದು ಸರಿಯಿರಲಾರದು. ಏಕೆಂದರೆ ಪಾರದದಿಂದಲೇ ಪಾದರಸ ಬಂದಿರುವುದು ಸಂಭವನೀಯ : ಪಾರದಃ+ರಸಃ (ಸಂ.)> ಪಾರದರಸ> ಪಾದರಸ (ಆದ್ಯ ರಕಾರಚ್ಯುತಿ).

[25] ಕರ್ದುಂಕು—ಕದ್ರುಂಕು (ಕಿ.), ಕದೃಕು, ಕದೃಕ್ಕು, ಕದ್ರುಂಕು (ಜೈಮಿನಿ ಭಾರತದ ಹಳೆಯ ಮುದ್ರಣ : ೩—೧೧೩, ೧೧-೨೨)

(iii) ಬಣ್ಣರಸಂ : <ಬಣ್ಣಸರಂ (?)[26]

ಬಣ್ಣರಸಂ (ಅಜಿತಪುರಾಣ ೧೫-೩೧.) <ಬಣ್ಣಸರಂ (ಆದಿಪುರಾಣ ೧೯-೩೧)

(iv) ಅರಣ್ಯ (ಸಂ.); ಆರ್ರ್ಯಾಣ (ಗರತಿಯ ಹಾಡು—೧೭೪)

(v) ಕವರೀ <? ಸಂ.) ಕವುರಿ (ಕಿ.)—ಕುರವಿ (ಮಂಗನಿ. ೧೧೬.)

2. ಲಕಾರ ಳಕಾರಗಳ ಅಸ್ಥಿರತೆ—

(i) ಕುಲಾವಿ—ಕುವಾಲಿ (ಅವರ ನೆನೆದೇವು ೨೨-೩೧)[27]

(ii) ಅಗಳು—ಅಳಗು (ಭರತೇಶ್ವರ ವೈಭವ ಸಂಗ್ರಹ ೨೪೧-೩೧.)[28]

(iii) ಹಸಲುಗೂಳ್ (ಹರಿಶ್ಚಂದ್ರ ಕಾವ್ಯ ೩೯-೪೯) :

---

[26] ವರ್ಣ (ಬಣ್ಣ) ಮತ್ತು ಸ್ವರ (ಸರ) ಎಂಬ ಸಂಗೀತ ಪರಿಭಾಷೆಯ ಎರಡು ಶಬ್ದಗಳು ಸೇರಿ ಆದ ಸಮಾಸ ಶಬ್ದವಿದು. ಆದಿಪು. ದಲ್ಲಿ ತೀರ್ಥಂಕರ ಜನ್ಮಾಭಿಷೇಕೋತ್ಸವದ ಸಂದರ್ಭದಲ್ಲಿ ಇದು ಬಂದಿದೆ. ಬಣ್ಣಸರಂ ಎಂಬ ಶಬ್ದವೇ, ಸದೃಶಸಂದರ್ಭದಲ್ಲಿ, ಅದೇ ಅರ್ಥದಲ್ಲಿ ಅಜಿಪು. ದಲ್ಲಿ ವರ್ಣಪಲ್ಲಟಗೊಂಡು ಬಣ್ಣರಸಂ ಎಂದು ಬಂದಿರುವಂತೆ ತೋರುತ್ತದೆ. ಬಣ್ಣಸರಂ ಎಂದು ಇದ್ದಲ್ಲದೆ, ಬಣ್ಣರಸಂ ಎಂದಿದ್ದರೆ, ಆ ಸಂದರ್ಭದಲ್ಲಿ ಆ ಪದಾರ್ಥವು ಸ್ಪಷ್ಟವಾಗದು. ಅಜಿಪು.ದ ಹಳೆಯ ಮತ್ತು ಹೊಸ ಮುದ್ರಣಗಳೆರಡಲ್ಲಿಯೂ ಬಣ್ಣರಸಂ ಎಂದೇ ಇದೆ. ಇದು ಕವಿಪ್ರಯೋಗವಿರಲಾರದು

[27] ಸಂಪಾದಕರು ಅಡಿಟಿಪ್ಪಣಿಯಲ್ಲಿ ಕುವಾಲಿ=ಟೋಪಿ ಎಂದು ಬರೆದಿದ್ದಾರೆ. ಈ ಉದಾಹರಣೆಯೊಂದಿಗೆ ಲೋಕರೂಢಿಯ ಇತರ ಉದಾ.ಗಳನ್ನೂ ನೋಡಿಕೊಳ್ಳಬಹುದು.

[28] ಉಗ್ರಾಣ ಮಂಗೇಶರಾಯರ ಗ್ರಂಥದಲ್ಲಿ ಅಗಳು (ಭರಚ. ೧೨-೯-೭೩) ಎಂದೇ ಇದೆ. ಶ್ರೀ ತ. ಸು ಶಾಮರಾಯರು ಸಂಗ್ರಹ ಗ್ರಂಥದಲ್ಲಿ 'ಅಳಗು' ಎಂಬ ಪಾಠವನ್ನಿಟ್ಟುಕೊಂಡು ಶಬ್ದಕೋಶದಲ್ಲಿ ಅಗಳು, ಕಂದಕ ಎಂಬರ್ಥವನ್ನು ಇದಕ್ಕೆ ಸೂಚಿಸಿದ್ದಾರೆ

<ಹಳಸುಗೂಳ್ (?)[29]

(iv) ನೆಕಲ್—ನೆಲಕ್ (ಬಸವರಾಜದೇವರ ರಗಳೆ, ೨–೪೫).

3. ಅನುನಾಸಿಕ ವರ್ಣಗಳಲ್ಲಿ :

(i) ಪರಿಮಾಣ ವೃತ>ಪರಿಣಾಮ ವೃತ

ಪರಿಮಾಣ ವೃತ (ಜೀವ ಸಂಬೋಧನಂ ೧೫೫-೯ ವ.)—ಪರಿಣಾಮ ವೃತ (ಜೀವಸಂ. ೧೫೫–೯೦.)[30]

---

[29] ಶ್ರೀ ರಾಮಾನುಜ ಅಯ್ಯಂಗಾರ್ಯರ ಮುದ್ರಿತ ಪ್ರತಿಯ ಪಾಠ ಕಲಸುಗೂಳ್ ಎಂದಿದೆ; ಉಳಿದೆಲ್ಲ ಪ್ರತಿಗಳಲ್ಲಿಯೂ ಹಸಲುಗೂಳ್ ಎಂದಿದೆಯೆಂದು ಹೊಸದಾಗಿ ಸಂಪಾದಿತವಾದ ಹರಿಶ್ಚಂದ್ರ ಕಾವ್ಯದ ಸಂಪಾದಕರು ತಿಳಿಸುತ್ತಾರೆ. (ಪ್ರಕಾಶಕರು : ಪ್ರಾಚ್ಯ ಕಾವ್ಯ ಪ್ರಕಾಶ ಮಂದಿರ, ಮೈಸೂರು). ಈ ಶಬ್ದದ ಅರ್ಥವು ಸ್ಪಷ್ಟವಿಲ್ಲದೆಯೋ ಏನೋ, ಸದೃಶ ಸಂದರ್ಭಗಳಲ್ಲಿ ಅನ್ಯತ್ರ (ಉದಾ_ಲೀಲಾವತಿ ೧೫-೭೦) ಕಲಸುಗೂಳ್ ಇರುವುದರಿಂದಲೋ ಏನೋ, ಅದೇ ಪದವನ್ನು ಯೋಜಿಸಿರುವಂತಿದೆ. ಆದರೆ ಪ್ರಾಚ್ಯಕಾವ್ಯ ಪ್ರಕಾಶ ಮಂದಿರದ ಪ್ರತಿಯಲ್ಲಿ ಸರ್ವಪ್ರತಿಯ ಪಾಠವಾದ ಹಸಲುಗೂಳ್ ಪದವನ್ನಿರಿಸಿಕೊಂಡು ಶಬ್ದಕೋಶದಲ್ಲಿ ತಂಗನ್ನ ಎಂಬರ್ಥವನ್ನು ಪ್ರಶ್ನಚಿಹ್ನೆಯೊಡನೆ ಸೂಚಿಸಿದೆ. ತಂಗಳನ್ನ ಎಂದರೆ ತಂಗೂಳು, ಬಿಸಿಯಾರಿದ ಅನ್ನ (ಬುತ್ತಿಗೂಳು?) ಎಂಬರ್ಥವಿರಬಹುದಾದರೆ ಈ ಶಬ್ದವು ಬಹುಶಃ ಹಳಸ ಗೂಳ್ ಎಂಬುದರ ವರ್ಣಪಲ್ಲಟ ಘಟಿತ ರೂಪವಿರಬಹುದೆಂದು ಸಂಪಾದಕರು ಗ್ರಹಿಸಿರುವಂತಿದೆ. ಅಲ್ಲದೆ ಅವರು ಕಲಸುಗೂಳ್ ಪದಕ್ಕಿಂತ ಹಸಲುಗೂಳ್ ಪದವೇ ಹೆಚ್ಚಿನ ಸಾರ್ಥಕತೆಯನ್ನು ಸಾಧಿಸುತ್ತದೆ ಎನ್ನುತ್ತಾರೆ. ಮೂಲ ಶಬ್ದದ ಳಕಾರ (ಹಳಸುಗೂಳ್) ಪಲ್ಲಟ ಶಬ್ದದಲ್ಲಿಯೂ ಮೂಲರೂಪದಲ್ಲಿ ಕಾಣುತ್ತಿದ್ದರೆ ಈ ಪಲ್ಲಟವನ್ನು ಖಚಿತವಾಗಿ ಒಪ್ಪಿಕೊಳ್ಳಬಹುದಾಗಿತ್ತು ಎಂದು ಕಾಣುತ್ತದೆ. (ಬಹುಶಃ ಇಲ್ಲಿ ನಾದಾನುಬಂಧಿಯಾಗಿ, ಳಕಾರದೆಡೆಗೆ ಪಾರ್ಶ್ವಿಕ ವರ್ಣವಾದ ಲಕಾರವು ಬಂದಿರಬಹುದು.)

(ii) ಬಣ್ಣನೆ—ಬನ್ನಣೆ (ಭರಚ. ೧೪-೨೦, [31]ಹದಿಬದೆಯ ಧರ್ಮ ೩-೩೦, ೮-೪೪, ೧೧-೪೭, [32]ರಾಮಾಶ್ವಮೇಧಂ ೨೪-೬೧.)

4. ಯಕಾರ ವಕಾರಗಳಲ್ಲಿ (ಅಂತಸ್ಥವರ್ಣಗಳು) :

ಕಯ್ವಾರ (ಕೈವಾರ) < ಕವೆಯೂರ (ವೃತ್ತ, ವೃತ್ತರೇಖೆ, ರೇಖಾ ಗಣಿತದ ಒಂದು ಉಪಕರಣ, ‘ಕಂಪಾಸು’)[33] ಕವೆಯೂರ (ಶಮದ. ಮೈ ಪ್ರತಿ ೧೨—೨೭ ವೃ.)—ಕೈವಾರ (ಶಮದ. ಮುಂ. ಪ್ರತಿ ಪ್ರ. ೩೨.)

ಕವೆಯೂರ > ಕವಯೂರ > ಕಯುವಾರ > ಕಯ್ವಾರ (ಕೈವಾರ) (?)

5. ವರ್ಗೀಯ ವ್ಯಂಜನಗಳಲ್ಲಿ :

ಕುಂಗ : ಗುಂಕ.

---

31 ಪ್ರ್ಯೆ.ವಿ.ದ ಈ ಗ್ರಂಥದಲ್ಲಿ ಮೇಲಣ ಮೂರು ಆಕರಗಳಲ್ಲಿಯೂ ಬನ್ನಣೆ ಎಂಬುದೇ ಮೂಲ ಪಾಠವಿರಬೇಕೆಂದೂ, ಆಯೆಡೆಗಳಲ್ಲಿ (ಬಣ್ಣನೆ) ಎಂಬ ಸ್ವೀಕೀಯ ಪಾಠದ ಸೂಚನೆಯ ಅವಶ್ಯಕತೆ ಇರಲಿಲ್ಲವೆಂದೂ ಹೇಳಬಹುದು. ೧೯೩೫ರ ಕಾವ್ಯಕಲಾನಿಧಿಯ ಪರಿಷ್ಕೃತ ದ್ವಿತೀಯ ಮುದ್ರಣದಲ್ಲಿ, ಈಯೆಡೆಗಳಲ್ಲಿ, ಬನ್ನಣೆಯೆಂದೇ ಪಾಠವಿದೆ. ಅರ್ಥಕೋಶದಲ್ಲಿ ‘ವರ್ಣನೆ’ ಎಂದು ಅರ್ಥವನ್ನು ಸೂಚಿಸಿದೆ,

32 ಈ ಗ್ರಂಥದ ಕಾವ್ಯಾಲಯದ ಪ್ರಕಟನೆಯಲ್ಲಿ, ಎರಡು ಮುದ್ರಣಗಳಲ್ಲಿಯೂ ಮೊದಲು ಬನ್ನಣೆಯೆಂಬ ಪಾಠವನ್ನೊಪ್ಪಿ, ಅದನ್ನು ಪ್ರಮಾದವಾಗಿ ಭಾವಿಸಿ, ಆಮೇಲೆ ಬಣ್ಣನೆ ಎಂಬ ಪಾಠವನಿಟ್ಟಿರುವಂತೆ ಕಾಣುತ್ತದೆ. ಕಾವ್ಯಕಲಾನಿಧಿಯ ಮುದ್ರಣದಲ್ಲಿ ಬನ್ನಣೆಯೆಂದೇ ಇದೆ. ಇದೇ ಉಚಿತಪಾಠವೆನ್ನಬಹುದು.

33 ಸೂಕ್ತಿ ಸುಧಾರ್ಣವದಲ್ಲಿ ಕವಯುರ ಎಂಬ ಪ್ರಯೋಗವಿದೆ (೧೪-೭೨-೭೬). ಕವೆಯೂರ > ಕವೆಯುರ > ಕವಯುರ_ಎಂದಾಗಿರಬಹುದು. ತಮಿಳಿನಲ್ಲಿ ಕವರಾಯ (ಜ) ಎಂಬ ರೂಪವಿರುವಂತೆ ಕಿ. ದಲ್ಲಿ ಹೇಳಿದೆ. ತೆಲುಗಿನಲ್ಲಿ ‘ಕೈವಾರಮು’ ಎಂಬ ಈಚಿನ ರೂಪ ಮಾತ್ರವೇ ಇರುವಂತಿದೆ.

[34]ಕುಂಗ (ಶಮದ. ೧೦-೫೭೨. ಕುಂಗರೆಂದು ಬೆಸದವರ್.) ಗುಂಕ (ಕರ್ಣಾನಿ. ೭೭ ಗುಂಕರೆನಲ್ ಬೆಸದವರೊಳ್ ; ಅನಂತನಾಥ ಪುರಾಣ ೧೧-೧೨).

6. ರೇಫ ಳಕಾರಗಳಲ್ಲಿ :[35]

(i) ಮಳಾರ > ಮರಾಳ.

ಮರಾಳ (ಮಳಾರ) ವೆಂದು ಕುದುರೆಯ ಪಟ್ಟಿ (ಶಮದ. ೩೮೩ ಪು). ಇದರೊಂದಿಗೆ ಶಬ್ದಮಂಜರಿ ೪೨೦, ಕಬ್ಬಿಗರ ಕೈಪಿಡಿ ೭೭ ಇವನ್ನೂ ನೋಡಿ.

(ii) ನಾಳಿಕೇರ/ನಾರಿಕೇಳ.

ಸಂಸ್ಕೃತದಲ್ಲಿ ರಲಗಳ ಅಭಿನ್ನತೆಯಿಂದ ವಿವಿಧವಾಗಿ ಬರೆಯಲ್ಪಡುವ ನಾರಿಕೇರಃ ಪದವು ಕನ್ನಡದಲ್ಲಿ ರಳ ವಿಪರ್ಯಯ ವ್ಯಾಪ್ತಿಗೊಳಪಟ್ಟು ಮೇಲಿನ ಎರಡು ರೂಪಗಳಲ್ಲಿ ಪರ್ಯಾಯವಾಗಿ ಬಳಕೆಯಾಗುವುದೆನ್ನ ಬಹುದು (ಉದಾ : ನಂಬಿಯಣ್ಣನ ರಗಳೆ ಪು. ೬೭.).

---

34 ಕಿ. ದಲ್ಲಿ ಕುಂಗ ಪದಕ್ಕೆ ವಿನಾಶಗಾರ ಎಂಬ ಅರ್ಥವನ್ನು ಕೊಟ್ಟಿದೆ. ಈ ಅರ್ಥದಲ್ಲಿ ಈ ಶಬ್ದ ರೂಢಿಯಲ್ಲಿರಬಹುದೆಂದು ಕಾಣುತ್ತದೆ. ದ. ರಾ. ಬೇಂದ್ರೆಯವರ ಉಯ್ಯಾಲೆಯಲ್ಲಿ (೨೬—೩೧) ಇದೇ ಅರ್ಥದಲ್ಲಿ ಪ್ರಯೋಗವಿದೆ. ಅನಂಪು.ದ ಗುಂಕ ಪದಕ್ಕೆ ಕೆಲಸದವನೆಂಬ ಅರ್ಥ ಒಪ್ಪುವುದಿಲ್ಲವೆಂದೂ, ಮರಾಠಿಯ 'ಗುಂಗ' ಎಂಬ ಪದಕ್ಕಿರುವ ದಡ್ಡ, ಗಾಂಪ ಎಂಬರ್ಥಗಳು ಹೊಂದುವಂತಿವೆಯೆಂದೂ, ಕುಂಗ ಶಬ್ದವೇ ಈ ಅರ್ಥದಲ್ಲಿ ಬೆಳೆದಿರಬಹುದೆಂದೂ ಶ್ರೀ ಎನ್, ಬಸವಾರಾಧ್ಯರು ಊಹಿಸುತ್ತಾರೆ. ಅಲ್ಲದೆ ಈ ಅರ್ಥಗಳನ್ನು ಪೋಷಿಸುವುದೆಂಬಂತೆ ಈ ಪದ್ಯದ 'ಸೂಕ್ತಿ ಸುಧಾರ್ಣವ'ದ ಪಾಠದಲ್ಲಿ 'ಗುಂಕರುಂ' ಎಂಬ ಪದಕ್ಕೆ ಬದಲಾಗಿ 'ಗಾಂಪರುಂ' ಎಂಬ ಪದವೇ ಇರುವುದು ಗಮನಾರ್ಹ ವಾಗಿದೆ.

35 ಈ ವಿಭಾಗದಲ್ಲಿಯೇ ಸೇರಿಸಬಹುದಾದ, ಪಲ್ಲಟವಿಧಿಯು ಸ್ಪಷ್ಟವಾಗಿ ತೋರದ ಕೆಲವು ಉದಾಹರಣೆಗಳು : (ತಟಿಲ್ >) ತಳಲ್ > ತರಳು (= ಮುತ್ತಕಾಯ್, ಶಮದ. ಪು. ೨೦.), (ನೆಟಿಲ್ >) ನೆಳಲ್ > ನೆರಳು, (ಮಟಲ್ >) ಮಳಲ್ > ಮರಳು. ಇವು ಗಳಲ್ಲಿ ಪಲ್ಲಟವಿಧಿ ಳಲ > ಲಳ > ರಳ ಕ್ರಮದಲ್ಲಿ ನಡೆದಿರಬಹುದು.

(iii) ಅರಳಿ (ಧರ್ಮಾಮೃ. ೩೫-೧೩೨. ಇ.,) <ಆಳರಿ (ಜಿಟ್ಟಮತ ೪೪-೧೧.)[36]

(vi) ಅರಳಿಯೆಲೆ (ಅಶ್ವಶಾಸ್ತ್ರ ೧೮-೧೨.,) <ಆಳರಿಯೆಲೆ (ಅಶ್ವಶಾ. ೧೬-೬.)[37]

---

36 ಕಡೆಯ ಈ ಮೂರು ಉದಾಹರಣೆಗಳಲ್ಲಿ ಆಳರಿ, ಆಳರಿಯೆಲೆ, ಆಳರೆಲೆ ಎಂಬ ಶಬ್ದಗಳು ಪದ್ಯಾದಿಯಲ್ಲಿ ಆರಂಭ ಶಬ್ದಗಳಾಗಿ ಬಂದಿವೆ. ಆದಕಾರಣ ಇವು ಪ್ರಾಸಸ್ಥಾನದ ಆವಶ್ಯಕತೆಗಾಗಿ ಅರಳಿ, ಆರಳಿಯೆಲೆ, ಅರಳೆಲೆ ಎಂಬ ಪ್ರಚಲಿತ ರೂಪಗಳಿಂದ ವರ್ಣಪಲ್ಲಟಗೊಂಡು ಬಂದುವೆಂದು ಹೇಳಲು ಸಾಧ್ಯವಿಲ್ಲ. ಕಾವ್ಯಾಧಾರಗಳನ್ನು ಗಮನಿಸಿದರೆ ಅರಳಿಯೆಂಬ ಶಬ್ದವು ಧರ್ಮಾಮೃತ ಸಮಯಪರೀಕ್ಷೆ (೧೦೦-೧೧೮) ಗಿರಿಜಾ ಕಲ್ಯಾಣ (೧-೭) ಮುಂತಾದೆಡೆಗಳಲ್ಲಿ ಮೊದಮೊದಲು ಕಣ್ಣಿಗೆ ಬೀಳುತ್ತವೆ. ಶಾಸನಾಧಾರಗಳನ್ನು ಗಮನಿಸುವಲ್ಲಿ ಆಳರಿ ಎಂಬ ರೂಪವೇ ಹೆಚ್ಚು ಪ್ರಚಲಿತವಾಗಿ ಕಾಣುತ್ತದೆ. ಉದಾಹರಣೆಗೆ ಈ ಶಾಸನಾಧಾರಗಳ ಉಲ್ಲೇಖನವನ್ನು ನೋಡಬಹುದು; ಇಂಡಿಯನ್ ಆಂಟಿಕ್ವೆರಿ XII, ಪು. ೧೬, 14 ಬಿ.ಕ್ರಿ.ಶ. ೭೩೫; ಇ. ಆ. XIV. ೨೩೩, ೧೫೭-೬೦೦, ೯ ನೇ ಶತಮಾನ; ಎಪಿಗ್ರಾಫಿಯ ಕರ್ಣಾಟಿಕ XII (5), ತಿಪಟೂರು ೧೪೦-೬೯, ಕ್ರಿ.ಶ. ೯೦೦. ಇವುಗಳನ್ನು ನೋಡುವಲ್ಲಿ ಆಳರಿ ಎಂಬ ಮಧ್ಯಳಕಾರ ರೂಪವೇ ಪ್ರಾಚೀನವಾಗಿದ್ದು, ಮೂಲರೂಪವಾಗಿದ್ದು, ಎರಡನೆಯ ಘಟ್ಟದಲ್ಲಿ ಅರಳಿಯೆಂಬ ಅದರ ಪಲ್ಲಟರೂಪವು ಅದರೊಂದಿಗೆ ಪರ್ಯಾಯವಾಗಿ ಬಳಕೆಯಾಗುತ್ತಿದ್ದು, ಮೂರನೆಯ ಘಟ್ಟದಲ್ಲಿ ಈಚೆಗೆ 'ಅರಳಿ' ಎಂಬ ಪಲ್ಲಟರೂಪವೇ ಸ್ಥಾಯಿಯಾದಂತೆ ಹೇಳಬಹುದು. ಆದರೆ ವ್ಯಾಪ್ತಿಯಲ್ಲಿ 'ಆಳರಿ' ಎಂಬ ರೂಪವು ಬಹು ಹಿಂದೆಯೇ ಕುಗ್ಗುತ್ತ ನಡೆದಂತೆಯೂ ಆ ಸ್ಥಾನವನ್ನು 'ಅರಳಿ' ರೂಪವು ಆಕ್ರಮಿಸುತ್ತ ಬಂದಂತೆಯೂ ಕಾಣುತ್ತದೆ. (ಈ ಸಂದರ್ಭಕ್ಕೆ ಶಾಸನಾಧಾರಗಳನ್ನು ಒದಗಿಸಿಕೊಟ್ಟು ಉಪಕರಿಸಿದ ಶ್ರೀ ಎನ್. ಬಸವಾರಾಧ್ಯರಿಗೆ ನಾನು ಕೃತಜ್ಞ.)

37 ಇಲ್ಲಿ ಮೂಲರೂಪವೂ ಪಲ್ಲಟರೂಪವೂ ಒಂದೇ ಕಾವ್ಯದಲ್ಲಿ ಪರ್ಯಾಯವಾಗಿ ಬಳಕೆಯಾಗಿರುವುದು ಗಮನಾರ್ಹವಾಗಿದೆ.

(v) [38]ಅರಳೆಲೆ (ಪಂಪಭಾ. ೨-೪. ೩.,) >ಅಳರೆಲೆ (ಸೂಕ್ತಿ ಸುಧಾರ್ಣವ[39] ೧೭-೭೫-೧೩೧,[40] ಶಬ್ದಪಾ. ೫೪).

ಕೆಲವು ಸಂದೇಹಗಳು :

(1) ತಳರ್/ತೆರಳ್

ಹಳಗನ್ನಡದಲ್ಲಿ ತಳರ್ (ತಳರ್ಚು), ತೆರಳ್ (ತೆರಳ್ಚು) ಎಂಬೆರಡು ಭಿನ್ನಾರ್ಥದ ಪ್ರತ್ಯೇಕ ಧಾತುಗಳಿದ್ದು ಅವರಲ್ಲಿ ಪ್ರಯೋಗಸಿದ್ಧವಾಗಿ ತಳರ್ ಚಲನಾರ್ಥದಲ್ಲಿಯೂ ತೆರಳ್ ಚಯನಾರ್ಥದಲ್ಲಿಯೂ ವಿಶೇಷ ಪ್ರಚುರವಾಗಿದ್ದು ಇವು ರಳವಿಪರ್ಯಯ ವ್ಯಾಪ್ತಿಯಲ್ಲಿರುವ ಕಾರಣ, ಬರುಬರುತ್ತ ಅರ್ಥ ಭೇದವು ಸಂದಿಗ್ಧವಾಗಿ, ಅಗಣ್ಯವಾಗಿ, ತೆರಳ್ ಶಬ್ದವು ಚಲನಾರ್ಥವನ್ನೂ ಪಡೆದು, ಉಭಯ ಶಬ್ದಗಳಲ್ಲಿಯೂ ಅರ್ಥಸಾಮ್ಯವೇರ್ಪಟ್ಟ ಪರಿಣಾಮವಾಗಿ ರೂಢಿಯಲ್ಲಿಯೂ ಬರೆಹದಲ್ಲಿಯೂ ಇವನ್ನು ಪರ್ಯಾಯವಾಗಿ ಬಳಸುವುದು ತೊಡಗಿ ತೆರಳ್ ಚಯನಾರ್ಥದಲ್ಲಿ ಮಸುಕಾಗಿ, ಲುಪ್ತವಾಗಿ, ಚಲನಾರ್ಥದಲ್ಲಿ ವ್ಯಾಪಕವಾಯಿತೇ ಎಂಬುದು ವಿಚಾರಾರ್ಹವಾದ ವಿಷಯ.

---

38 ಅಳರೆಲೆ ಎಂಬುದರ ವಿರಳ ಪ್ರಯೋಗಗಳನ್ನು ಬಿಟ್ಟರೆ ಸಾಮಾನ್ಯವಾಗಿ 'ಅರಳೆಲೆ' ಎಂಬುದೇ ಕಾವ್ಯ ಪ್ರಸಿದ್ಧವಾದ ಶಬ್ದರೂಪ. ಆದಿಪು.ದಲ್ಲಿ ಲಕಾರ ಳಕಾರ ಪ್ರಾಸದೊಡನೆ, ಪದ್ಯಾದಿಯಲ್ಲಿ 'ಅರಳೆಲೆ' ಎಂದು ಪ್ರಾರಂಭವಾಗಿರುವುದು ಗಮನಾರ್ಹವಾಗಿದೆ.

39 ಇಲ್ಲಿ ಅಳರೆಲೆಗೆ ಎರಡು ಪ್ರತಿಗಳಲ್ಲಿ ಅರಳೆಲೆ ಎಂಬ ಪಾಠಾಂತರವುಂಟು.

40 ಈ ಪ್ರಯೋಗವನ್ನು ನನಗೆ ತೋರಿಸಿಕೊಟ್ಟ ಪ್ರೊ. ಡಿ. ಕೆ. ಭೀಮಸೇನರಾಯರಿಗೆ ನಾನು ಕೃತಜ್ಞ. ಉಸ್ಮಾನಿಯಾ ವಿಶ್ವವಿದ್ಯಾಲಯದ ಶಬ್ದ...ದ ಪ್ರತಿಯಲ್ಲಿ ವ್ಯಾಖ್ಯಾನಕಾರನು ಅರಲ್‌ಗೆ ಅಲರ್‌ರೂಪವನ್ನು ಹೇಳುವುದಲ್ಲದೆ 'ಅಳರೆಂದುಮುಂಟು' ಎಂದೂ ಹೇಳಿ ಒಂದು ಪ್ರಯೋಗಾಧಾರವನ್ನು ಕೊಟ್ಟಿದ್ದಾನೆ. ಇದು ಭ್ರಾಂತಿಮೂಲವಾದ ಅಭಿಪ್ರಾಯ. ಏಕೆಂದರೆ ಅಳರ್ ಎಂಬ ರೂಪ ಅಲರ್ಗೆ ಕನ್ನಡದಲ್ಲಿ ಪ್ರಯುಕ್ತವಲ್ಲ. ಇಲ್ಲಿ ... ಶಬ್ದ ಮಕ್ಕಳ ಆಭರಣ ವಿಶೇಷ ಎಂಬರ್ಥದಲ್ಲಿ ಪೂರ್ವಪದ ಅಳರಿ ಎಂದಿರುವ ಅರಳೆಲೆ ಶಬ್ದ ... ಇಲ್ಲಿ ಅರಳೆಲೆಯ ಪಲ್ಲಟರೂಪವಾದ ಅಳರೆಲೆ. (ನೋಡಿ : ಶಬ್ದಮಣಿ ದರ್ಪಣದ ಪಾಠಾಂತರಗಳು ಪು. ೫೪-೫೫.)

(2) ಕೆಳರ್/ಕೆರಳ್

ಕೆಳರ್—ವಿಜೃಂಭಣೇ, ಕೆರಳ್ಚು—ಆಸ್ಫೋಟನೇ ಎಂದು ಶಮಂದ. ದ ಧಾತುಪಾಠದಲ್ಲಿ ಹೇಳಿದೆ. ಆದರೆ ಹಳಗನ್ನಡದಲ್ಲಿ ಕೆರಳ್ (ಕೆರಳ್ಚು) ಧಾತುವು ಬಳಕೆಯಲ್ಲಿ ಅಷ್ಟಾಗಿ ಕಂಡುಬರದೆ ಕೆಳರ್ ಧಾತುವು ಬಹುಪ್ರಚುರವಾಗಿದ್ದು ಉಭಯ ಶಬ್ದಾರ್ಥವನ್ನೂ ಪಡೆದುಕೊಂಡಿದ್ದಂತೆ ಕಾಣುತ್ತದೆ. ಆದ್ದರಿಂದ ಕೆಳರ್ > ಕೆರಳ್ ಆಗಿರಬಹುದು. ಇಲ್ಲವೆ ಎರಡೂ ಪ್ರತ್ಯೇಕಧಾತುಗಳಾಗಿದ್ದರೆ ರಳ ವಿಪರ್ಯಾಯ ವ್ಯಾಪ್ತಿಯಲ್ಲಿರುವುದರಿಂದಲೂ, ಅರ್ಥಸಾದೃಶ್ಯವಿರುವುದರಿಂದಲೂ ಬಳಕೆಯಲ್ಲಿ ಪರ್ಯಾಯವಾಗಿ ಪ್ರಯೋಗವಾಗುತ್ತಿದ್ದಿರಬಹುದೇ ಎಂಬುದು ವಿಚಾರಾರ್ಹವಾದ ವಿಷಯ.

(3) ಒಳಱ್/ಒಱಲ್

ಹಳಗನ್ನಡದಲ್ಲಿ ಒಳಱ್–ರಾವೇ, ಒಱಲ್–ಸ್ನೇಹೇ ಎಂಬ ಭಿನ್ನಾರ್ಥಗಳಲ್ಲಿಯೇ ಮೊದಮೊದಲು ಈ ಶಬ್ದಗಳು ಪ್ರಯೋಗವಾಗುತ್ತಿದ್ದು, ರಳ ವಿಪರ್ಯಾಯ ವ್ಯಾಪ್ತಿಯಲ್ಲಿರುವ ಕಾರಣ ಬರುಬರುತ್ತ ಅರ್ಥವು ಸಂದಿಗ್ಧವಾಗಿ ಅಗಣ್ಯವಾಗಿ, ಒಱಲ್ ಸ್ನೇಹಾರ್ಥದಲ್ಲಿ ಅಪಕರ್ಷಗೊಂಡು ಧ್ವನ್ಯರ್ಥದಲ್ಲಿ ಉತ್ಕರ್ಷಗೊಂಡು, ರೂಢಿಯಲ್ಲಿಯೂ ಬರೆಹದಲ್ಲಿಯೂ ವ್ಯಾಪ್ತಿಯನ್ನು ಪಡೆಯಿತೇ ಎಂಬುದು ವಿಚಾರಾರ್ಹವಾದ ವಿಷಯ. ಹೊಸಗನ್ನಡದಲ್ಲಿ ಧ್ವನ್ಯರ್ಥದಲ್ಲಿ 'ಒರಲು' ಶಬ್ದವು ಸ್ಥಾಯಿಯಾಗಿರುವುದನ್ನು ಗಮನಿಸಬಹುದು.[41]

---

41 ಮೂಲದ ಮಧ್ಯ ಳಕಾರ ಶಬ್ದಗಳು ಬೆಳವಣಿಗೆಯ ಘಟ್ಟದಲ್ಲಿ ಮಧ್ಯ ರಕಾರ ಶಬ್ದಗಳಾಗಿ ಮಾರ್ಪುಗೊಂಡು ಮುಂದೆ ಸ್ಥಾಯಿರೂಪಗಳಾಗುವುದು ವರ್ಣಪಲ್ಲಟ ವಿಧಿಯಲ್ಲಿ ಒಂದು ಸಾಮಾನ್ಯ ಲಕ್ಷಣವಾಗಿ ಕಾಣುತ್ತದೆ. ಈ ಮೊದಲಿನ ಉದಾಹರಣೆಗಳಂತೆ ಈ ಮೇಲಿನ ಉದಾಹರಣೆಗಳಲ್ಲಿಯೂ ಈ ಪಲ್ಲಟವಿಧಿಯ ಪ್ರಭಾವವನ್ನು ಕೆಲಮಟ್ಟಿಗೆ ಕಾಣಬಹುದು.ಇದು ಬಹುಮಟ್ಟಿಗೆ ಶಬ್ದೋಚ್ಚಾರಣೆಯಲ್ಲಿ ಸೌಲಭ್ಯಾಕಾಂಕ್ಷೆಯ ಪರಿಣಾಮವಾಗಿ ಆದಂಥವೆನ್ನಬಹುದು. ಆದರೆ ಒಮ್ಮೊಮ್ಮೆ ತ್ವರೆ, ಉಚ್ಚಾರ ದೌರ್ಬಲ್ಯ, ಗ್ರಾಮ್ಯಪ್ರಯೋಗಗಳ ದೆಸೆಯಿಂದ ಸ್ಥಾಯಿರೂಪವೆನ್ನಬಹುದಾದ ರೇಫ ಳಕಾರಯುಕ್ತ ಶಬ್ದಗಳಲ್ಲಿ ಮತ್ತೆ ವರ್ಣಪಲ್ಲಟಗಳುಂಟಾಗುವುದು ಸಹಜ,

7. ರೇಫಲಕಾರಗಳಲ್ಲಿ :

ಅಲರ್/ಅರಲ್, ಎಲರ್/ಎರಲ್, ಮಲರ್/ಮರಲ್.[42]

ರೇಫ ಲಕಾರಗಳಲ್ಲಿ ವರ್ಣಪಲ್ಲಟವು ಸ್ಪಷ್ಟವಾಗಿ, ಸ್ವೇಚ್ಛೆಯಾಗಿ, ವಿಪುಲವಾಗಿ ಕಾಣುವುದು ಈ ಮೂರು ನಿದರ್ಶನಗಳಲ್ಲಿ. ಸಾಮಾನ್ಯವಾಗಿ ಎಲ್ಲ ಹಳೆಯ ಕವಿಗಳೂ[43] ಈ ಶಬ್ದಗಳ, ಉಭಯ ರೂಪಗಳನ್ನೂ ಅವಶ್ಯಕವಾದ ಎಡೆಗಳಲ್ಲೆಲ್ಲ, ಸ್ವೇಚ್ಛೆಯಾಗಿ ಅನಿರ್ಬಂಧವಾಗಿ, ಸ್ವತಂತ್ರ ಶಬ್ದವಾಗಿಯೂ, ಸಮಾಸ ಶಬ್ದವಾಗಿಯೂ, ಕ್ರಿಯಾರೂಪವಾಗಿಯೂ ನಾಮರೂಪವಾಗಿಯೂ (ಇದು ಎಲರ್/ಎರಲ್‌ಗೆ ಅನ್ವಯಿಸುವುದಿಲ್ಲ.) ಬಳಸುವುದು ಕಂಡುಬರುತ್ತದೆ. ಇದರಲ್ಲಿ ಮೊದಲರೂಪ ಯಾವುದಿರಬಹುದು ?

ಶಬ್ದಮಣಿದರ್ಪಣದ ಸೂತ್ರ ೩೮ ರಲ್ಲಿ ನಿತ್ಯಲಾಂತಗಳಾದ ಕೆಲವು ಶಬ್ದಗಳ ಪಟ್ಟಿಯಲ್ಲಿ ಈ ಶಬ್ದಗಳು ಮಧ್ಯರೇಫೆಯಾಗಿ ಬಂದಿವೆ. ಸೂತ್ರ ೩೯ರ ಪ್ರಕಾರ ಮಧ್ಯರೇಫೆಯ ಈ ಶಬ್ದಗಳಿಗೆ ರ ಲಕಾರಗಳ ವಿಪರ್ಯಯದಿಂದ ಮಧ್ಯಲಕಾರ ಶಬ್ದಗಳು ವಿಕಲ್ಪವಾಗಿ ಬರುತ್ತವೆಂದು ತಿಳಿಯುವುದು. ಇದು ಎಷ್ಟರಮಟ್ಟಿಗೆ ಪ್ರಯೋಗಸಿದ್ಧವಾದ ಸೂತ್ರವೆಂಬುದು ವಿಚಾರಾರ್ಹವಾದ

---

42 ಈ ಶಬ್ದಗಳ ರೂಪ ಮತ್ತು ಅರ್ಥಗಳಲ್ಲಿ ವಿಚಾರದ ತೊಡಕುಂಟು. ಅದು ಇಲ್ಲಿಗೆ ಪ್ರಸ್ತುತವಲ್ಲ. ಇಲ್ಲಿ ಪುಷ್ಪಾರ್ಥದಲ್ಲಿ ಮಾತ್ರ ಇವನ್ನು ಪರಿಭಾವಿಸಿದೆ. ಆದರೆ ಇವುಗಳ ಅನ್ಯಾರ್ಥಗಳಲ್ಲಿ ಕೂಡ ವರ್ಣಪಲ್ಲಟಗಳಾಗದಿಲ್ಲ. ಇಂಥವು ಕವಿಪ್ರಯೋಗಗಳಲ್ಲಿಯೂ ಪ್ರತಿಕಾರರ ಕೈವಾಡದಲ್ಲಿಯೂ ಸಮಾನವಾಗಿವಾಗಿ ಕಾಣುತ್ತವೆ.

43 ಕಾವ್ಯಾಧಾರಗಳನ್ನು ಗಮನಿಸುವಲ್ಲಿ ಕೇಶಿರಾಜನ ಕಾಲಕ್ಕೆ ಮುಂಚಿನ ನಾಗವರ್ಮನ 'ಕಾದಂಬರಿ'ಯಲ್ಲಿ ಅರಲ್-ಅಲರ್ ಎಂಬೆರಡೂ ರೂಪಗಳು ದೊರಕುತ್ತವೆ ಎಂಬರ್ಥದಲ್ಲಿ ಕನ್ನಡ ಭಾಷಾಶಾಸ್ತ್ರದಲ್ಲಿ ಹೇಳಿದೆ (ಪು. ೧೦೨.). ಹಾಗೆ ನೋಡಿದರೆ ಪಂಪನ ಆದಿ ಪುರಾಣದಲ್ಲಿಯೆ ಇದನ್ನು ಕಾಣಬಹುದು (ನೋಡಿ. ಅಲರ್ ೧೨-೬೫, ಅರಲ್ ೧೧೪-೧೧೮.). ಹಾಗೆಯೇ ನೋಡಿ : ಅಲರ್ (ಪಂಪಭಾ. ೧-೫೫)-ಅರಲ್ (ಪಂಪಭಾ. ೧-೫೮), ಎಲರ್ (ಪಂಪಭಾ. ೨-೧೨)-ಎರಲ್ (ಪಂಪಭಾ. ೫-೩೩).

ವಿಷಯ. ವಾಸ್ತವವಾಗಿ ಮೊದಮೊದಲು ಹಳಗನ್ನಡ ಕೃತಿಗಳಲ್ಲಿ ಮಧ್ಯ ಲಕಾರ ಶಬ್ದಗಳೇ ಅತಿ ಪ್ರಚುರವಾಗಿದ್ದು ಬರುಬರುತ್ತ ಮಧ್ಯ ರೇಫೆಯ ಶಬ್ದಗಳು ಅತಿ ಪ್ರಚುರವಾದುವೆಂದು ಕಂಡುಬರುತ್ತದೆ.[44] ವಸ್ತುಕ ಕವಿಗಳ ಪ್ರೌಢಶೈಲಿಯಲ್ಲಿ, ಮೂಲ ರೂಪವಾಗಿರಬಹುದಾದ ಮಧ್ಯಲಕಾರ ಶಬ್ದಗಳು ಬಹುಮಟ್ಟಿಗೆ ಸ್ಥಾಯಿಯಾಗಿದ್ದು, ವರ್ಣಕ ಕವಿಗಳ ಸುಲಭಶೈಲಿಯಲ್ಲಿ ವರ್ಣಪಲ್ಲಟ ಘಟಿತ ಮಧ್ಯರೇಫೆಯ ಶಬ್ದಗಳು ಬಹುಪಾಲು ಸ್ಥಾಯಿಯಾದಂತೆ ತೋರುತ್ತದೆ. ಲೋಕ ರೂಢಿಯಲ್ಲಿ ಸೌಲಭ್ಯಾಕಾಂಕ್ಷೆಯಿಂದಾದ ರಲವಿಪರ್ಯಯದ ಪರಿಣಾಮವೇ ಇದರ ಮುಖ್ಯ ಕಾರಣವಿರಬಹುದು. ದಂತಮೂಲೀಯಗಳಾದ ಈ ವರ್ಣಗಳಲ್ಲಿ ಪಲ್ಲಟ ಸಹಜ. ಅಲ್ಲದೆ ಮಧ್ಯ ಲಕಾರ ಳಕಾರ ಶಬ್ದಗಳು ಕೆಲವು, ಕಾಲಕ್ರಮದಲ್ಲಿ ಮಧ್ಯ ರೇಫೆಯ ಶಬ್ದಗಳಾಗಿ ಮಾರ್ಪಟ್ಟಿರುವುದರಲ್ಲಿ ವರ್ಣಪಲ್ಲಟದ ಒಂದು ಸಾಮಾನ್ಯ ಲಕ್ಷಣವನ್ನು ಗುರುತಿಸಬಹುದು. ಇಂಥ ಶಬ್ದಗಳು ಬಹುಮಟ್ಟಿಗೆ ಸ್ಥಾಯಿಸ್ವರೂಪದವು, ಮಿತಪ್ರಮಾಣದವು. ಪ್ರಾಯಶಃ ಕೇಶಿರಾಜನ ಕಾಲಕ್ಕಾಗಲೇ ಇಂಥ ಮಧ್ಯ ರೇಫೆಯ ಶಬ್ದಗಳು ಮಾತು ಮತ್ತು ಬರೆಹಗಳಲ್ಲಿ ಅಧಿಕವಾಪ್ತಿಯನ್ನು ಪಡೆಯುತ್ತಿದ್ದುದೇ ಈ ಬಗೆಯ ಸೂತ್ರರಚನೆಗೆ ಕಾರಣವಾಗಿರಬಹುದು.

ಅನ್ಯ ಪರಿಸರಗಳಲ್ಲಿ : (1) ಅಸಗ : ಅಗಸ.

ವರ್ಣಪಲ್ಲಟದ ಯಾವ ವಿಧಿಗನುಸಾರವಾಗಿ ಪಲ್ಲಟವು ನಡೆಯಿತೆಂದು ಹೇಳಲು ಸದ್ಯಕ್ಕೆ ಸಾಧ್ಯವಿಲ್ಲದಿರುವ ನಿದರ್ಶನಗಳಲ್ಲಿ ಅಸಗ : ಅಗಸ ಸೇರುತ್ತದೆ. ವರ್ಣಪಲ್ಲಟದ ಪ್ರಕರಣದಲ್ಲಿ ಇದೊಂದು ಧ್ರುವ ನಿದರ್ಶನ. ಹಳಗನ್ನಡ ನಡುಗನ್ನಡ ಶಾಸನಗಳಲ್ಲಿ, ಕೃತಿಗಳಲ್ಲಿ ಅಸಗ ಶಬ್ದವು ಬಹುಪ್ರಚುರವಾಗಿದ್ದು, ಆ

---

[44] ತಮಿಳು ತೆಲುಗುಗಳಲ್ಲಿಯೂ ಅಲರ್/ಅರಲ್ ಶಬ್ದಗಳಲ್ಲಿ ಮಧ್ಯ ಲಕಾರ ರೂಪವೇ ಪ್ರಾಚೀನ ಪ್ರಯೋಗಗಳಲ್ಲಿ ಮಿಗಿಲಾಗಿದ್ದು, ತರುವಾಯ ಮಧ್ಯರೇಫ ರೂಪವು ವ್ಯಾಪ್ತವಾದದ್ದು ಕಾಣುತ್ತದೆ. ದ್ರಾವಿಡ ವ್ಯುತ್ಪತ್ತಿಕೋಶದಲ್ಲಿಯೂ ಅಲರ್, ಅರಲ್ ಎಂಬ ಕ್ರಮದಲ್ಲಿಯೇ ಕನ್ನಡ ಶಬ್ದಗಳನ್ನು ಗುರುತಿಸಿರುವುದು ಕಾಣುತ್ತದೆ (ನಂ. 289).

ಕಾಲದಲ್ಲಿ ಬಹುಶಃ ಕೇವಲ ಕ್ವಚಿತ್ ಪ್ರಯೋಗವಾಗಿದ್ದಿರಬಹುದಾದ,[45] ಅದರ ವರ್ಣಪಲ್ಲಟ ಘಟಿತರೂಪವಾದ ಅಗಸ ಶಬ್ದವು ಸು. ೧೭ ನೆಯ ಶತಮಾನದಿಂದೀಚೆ ಬಹು ಪ್ರಚುರವೂ ಸ್ಥಾಯಿಯೂ ಆಯಿತೆಂದು ಪ್ರಯೋಗಾಧಾರಗಳಿಂದ ತಿಳಿಯಬಹುದು. ಸು. ೧೬ ನೆಯ ಶತಕದ ಹಲವು ಕೃತಿಗಳಲ್ಲಿ ಅಸಗ ರೂಪವೇ ನಿಚ್ಚಟವಾಗಿ ಕಂಡುಬರುವಂತೆ,[46] ಸು. ೧೭ ನೆಯ ಶತಕದ ಮತ್ತು ಅದರ ಮುಂದಿನ ಕೃತಿಗಳಲ್ಲಿ ಅಗಸ ರೂಪವೇ ನಿಚ್ಚಟವಾಗಿ ಕಾಣುವುದು ಹೀಗೆ ಹೇಳುವುದಕ್ಕೆ ಮುಖ್ಯಕಾರಣ.[47] ಅಸಗ>ಅಗಸ ಆದುದು ಎಂದು, ಎಲ್ಲಿ, ಹೇಗೆ ಎಂಬುದನ್ನು ಸದ್ಯಕ್ಕೆ ತಿಳಿಯುವುದು ಕಷ್ಟ. ಸೌಲಭ್ಯಾಕಾಂಕ್ಷೆಯ ಪರಿಣಾಮವಾದ ಉಚ್ಚಾರ ಪ್ರಮಾದದಿಂದಾಗಿ, ಈಚೀಚೆಗೆ ಲೋಕರೂಢಿಯಲ್ಲಿ 'ಅಗಸ' ಎಂದು ಹೆಚ್ಚು ಬಳಕೆಯಾಗುತ್ತಿದ್ದುದು ಬರೆಹವನ್ನೂ ಹೊಕ್ಕಿರಬಹುದು.

(2) (ಬಿರ್ದಿನಂ>) ಬಿದ್ದಿನ>ದಿಬ್ಬಣ (?)

ಕ್ರಮ : ಬಿರ್ದಿನಂ>ಬಿದ್ದಿನ>ಬಿದ್ದನ>ಬಿದ್ದಣ>ದಿಬ್ಬಣ (?)> ನಿಬ್ಬಣ (?)— ಇದನ್ನು ಹೀಗೆ ಸ್ಥೂಲವಾಗಿ ಗುರುತಿಸಬಹುದೆ ?

ಬಿರ್ದು = ಔತಣ (ಪಂಪಭಾ. ೧೩–೩೪ ವ., ೬–೩೩ವ.)

ಬಿರ್ದಿನಂ - ಔತಣಕ್ಕರ್ಹನು, ಅತಿಥಿ (ಪಂಪಭಾ. ೪-೪೪.)

---

45 ಇದ್ದಿರಲಾರದೆಂದು ತೋರುತ್ತದೆ. ಪಂಚತಂತ್ರ ೨೮೨-೧೨೧ರಲ್ಲಿ ಮತ್ತು ಧರ್ಮಾಮೃತ ೩೩-೭೩ರಲ್ಲಿ 'ಅಗಸ' ಎಂದು ಬರುವ ಕ್ವಚಿತ್ ಪ್ರಯೋಗಗಳೂ ಪ್ರಮಾದಜನ್ಯಗಳೆಂದು ತಿಳಿಯಲವಕಾಶವಿದೆ.

46 ತೊರವೆ ರಾಮಾಯಣ, ನೇಮಿಜಿನೇಶ ಸಂಗತಿ, ಕುಮಾರರಾಮನ ಸಾಂಗತ್ಯ, ಸಾಳ್ವಭಾರತ, ಮೋಹನ ತರಂಗಿಣಿ, ನಾಗಕುಮಾರ ಕಥೆ, ಚೆನ್ನಬಸವ ಪುರಾಣ ಇತ್ಯಾದಿ. ಇದೇ ಕಾಲದ ಪುರಂದರದಾಸರ ಕೃತಿಗಳಲ್ಲಿ, ೨೨-೨೮-೮ರಲ್ಲಿ ಬರುವ ಅಗಸ ಪ್ರಯೋಗವನ್ನು ಪ್ರಾಮಾಣಿಕವೆಂದು ಗ್ರಹಿಸುವಂತಿಲ್ಲ.

47 ಬಿಜ್ಜಳರಾಯ ಚರಿತೆಯ ೯೮, ೬೦, ೬೧ರ ಪ್ರಯೋಗಗಳನ್ನು ಪ್ರಾರಂಭದ ಖಚಿತ ಪ್ರಯೋಗಗಳೆಂದು ಗ್ರಹಿಸಬಹುದೆ ನೋ ?

ಬಿದ್ದಿನ = ಆತಿಥ್ಯಕ್ಕೆ ಅರ್ಹನಾದ ಸಂಭಾವಿತ, ಬೀಗ (?) (ಕುವ್ಯಾಭಾ-೩-೧೦, ೪೬; ೩-೧೯, ೨೫; ೮-೨೪,೫೭. ನೋಡಿ : ಬಿದ್ದಿಸರೆಸೆ ಬೀಗರ್ : ಭಾರನಿ. ೮.)

ದಿಬ್ಬಣ = ಬೀಗರ ಕಡೆಯ ಮದುವೆಯ ಮೆರೆವಣಿಗೆ (ಭರಚ. ೨೦-೮,೯.)

ನಿಬ್ಬಣ = ಅದೇ ಅರ್ಥ. (ತೊರರಾ. ೨೧-೧೬-೪೩, ೧೩-೪೩ ಇ.) ಭಾರತ ನಿಘಂಟಿನ ಅರ್ಥವನ್ನು ಆಧರಿಸಿ ಬಿದ್ದಿಸ-ದಿಬ್ಬಣಗಳಿಗೆ ಸಂಬಂಧವನ್ನು ಬೆಸೆಯುವುದು ಕಷ್ಟ. ಕುಮಾರವ್ಯಾಸಭಾರತದ ಯಾವ ಪ್ರಯೋಗವೂ 'ಬೀಗ' ಎಂಬರ್ಥದಲ್ಲಿ ಖಚಿತವಾದುದಲ್ಲ. 'ದಿಬ್ಬಣ' ಶಬ್ದದ ಪೂರ್ವ ಪ್ರಯೋಗಾಧಾರಗಳಿಂದ ಇದು ವಿಶದವಪಡಬಹುದೇನೋ ? ಆದರೆ ದಿಬ್ಬಣ—ನಿಬ್ಬಣಗಳು ಬೀಗರ ಕಡೆಯ ಮದುವೆಯ ಮೆರೆವಣಿಗೆ, ಮದುವೆಯ ಮೆರೆವಣಿಗೆ ಎಂಬ ಅರ್ಥದಲ್ಲಿ ಪರಸ್ಪರ ಸಂಬಂಧವುಳ್ಳ, ಬಿದ್ದಿಸದಿಂದ ಬೇರೆಯೇ ಆದ ಶಬ್ದಗಳೆಂದು ಕಾಣುತ್ತದೆ. ಈಯರ್ಥದಲ್ಲಿರುವ ನಿಬ್ಬಣ—ನಿಬ್ಬಣಿಗ ಎಂಬ ಶಬ್ದಗಳಿಗೆ ಪೂರ್ವ ಪ್ರಯೋಗಳು ಕಾಣುತ್ತವೆ. (ನೋಡಿ : ನಿಬ್ಬಣ : ವರ್ಧಪು. ೪೫-೫೦, ನಿಬ್ಬಣಿಗ : ನಂಬಿರ, ಪ್ರ. ೭೩.) ಇದಲ್ಲದೆ ಬಹುಮಾನ, ಕಾಣಿಕೆ ಎಂಬರ್ಥದ ನಿಬ್ಬಣವು (ತೆಲ್ಲಂಟಿಯೆಂದು ನಿಬ್ಬಣಂ : ಶಮದ. ೧೦-೧೧೦.) ಸಂಸ್ಕೃತ 'ನಿರ್ವಪಣಂ' ಶಬ್ದದ ತದ್ಭವವಾದ ಬೇರೆಯೇ ಶಬ್ದವಿರಬಹುದು. ಇಲ್ಲಿ ವರ್ಣಪಲ್ಲಟವೆಂದಂ ಒಪ್ಪಬೇಕಾದರೆ ಈಯೆಲ್ಲ ಅಂಶಗಳು ವಿಶದವಾಗಬೇಕು. *

---

* ಕೆಲವು ಸಂಕೇತಗಳು : ಖಮದ : ಖಗೇಂದ್ರಮಣಿ ದರ್ಪಣ, ಗದಾಸಂ : ಗದಾಯುದ್ಧ ಸಂಗ್ರಹ, ಮಂಗನಿ : ಅಭಿನವಾಭಿಧಾನಂ, ಭರಚ: ಭರತೇಶ್ವರ ಚರಿತೆ, ಕರ್ಣಾನಿ: ಕರ್ಣಾಟಕ ನಿಘಂಟು (ಕಬ್ಬಿಗರ ಕೈಪಿಡಿ), ಕಿ: ಕಿಟ್ಟೆಲ್ ನಿಘಂಟು, ಪ್ರ. ಕ: **ಪ್ರಬುದ್ಧ ಕರ್ಣಾಟಕ.**

ಮದನ ತಿಲಕಂ

೧. ಶೈಲಿ

ಮದನ ತಿಲಕದ ಕರ್ತೃ ಚಂದ್ರರಾಜ. ಈತನು ಸ್ವವಿಚಾರವಾಗಿ ಕೆಲವು ವಿವರಗಳನ್ನು ಗ್ರಂಥದ ಪೀಠಿಕಾ ಪ್ರಕರಣದಲ್ಲಿ ತಿಳಿಸಿದ್ದಾನೆ. ಆದುದರಿಂದ ಇಲ್ಲಿ ಅವುಗಳನ್ನು ಪ್ರಸ್ತಾಪಿಸದೆ, ಕೃತಿಯನ್ನು ಕುರಿತ ಇತರ ಕೆಲವಂಶಗಳನ್ನು ಸಮಾಲೋಚನೆ ಮಾಡಿದೆ.

ಮದನ ತಿಲಕವು ಹನ್ನೊಂದನೆಯ ಶತಕದಲ್ಲಿ ರಚಿತವಾದ, ಕಾಮಶಾಸ್ತ್ರವನ್ನು ಕುರಿತ, ಒಂದು ಚಂಪೂ ಗ್ರಂಥ. ಆದರೆ ಚಂಪೂ ಗ್ರಂಥಗಳಲ್ಲಿ ಸಾಮಾನ್ಯವಾಗಿ ಕಂಡುಬರುವಷ್ಟು ಗದ್ಯಭಾಗ ಇದರಲ್ಲಿ ಕಾಣುವುದಿಲ್ಲ. ಕವಿಯೇನೋ ಕೃತಿಯ ಮೊದಲಲ್ಲಿ 'ನಾನಾಛಂದದಿನ್ನೈನೂರು ಗದ್ಯಪದ್ಯಂಗಳಿಂ ವಿಶ್ರುತಂ ಮಾಡಿ' ಹೇಳಿದಂತೆ ತಿಳಿಸಿದ್ದರೂ, ಒಂದನೇ ಆಶ್ವಾಸದ ೫೮ನೆಯ ಪದ್ಯವಾದ ಮೇಲೆ ಬರುವ ಒಂದು ದೀರ್ಘವಾದ ಗದ್ಯವನ್ನು ಬಿಟ್ಟರೆ, ಇನ್ನು ಉಳಿದ ಗದ್ಯವೆಲ್ಲ ಚೂರುಪಾರು; ಬಹುಪಾಲು, ಕೃತಿಯ ಛಂದೋಬಂಧಗಳನ್ನು ಸೂಚಿಸಲು ಬಂದವು. ಒಂದನೇ ಆಶ್ವಾಸದ ದೀರ್ಘವಾದ ಗದ್ಯಭಾಗವು ಉಚಿತ ಪರಿಮಾಣದಲ್ಲಿದ್ದು, ನೇರವೂ ಸರಳವೂ ಆದ ಸಣ್ಣ ವಾಕ್ಯಗಳಿಂದ ಕೂಡಿ ದೇಸಿಗೂ ಮಾರ್ಗಕ್ಕೂ ಮಧ್ಯಶೈಲಿಯಲ್ಲಿ ನಡೆದು ಹೃದ್ಯವಾಗಿದೆ. ತಾರ್ಕಿಕವಾದ ಮಾತಿನ ಸರಣಿಯನ್ನು ಗಾದೆಮಾತುಗಳಿಂದ, ಆಪ್ತವಾಕ್ಯಗಳಿಂದ ಪುಷ್ಟಿಗೊಳಿಸುವ, ಸಮರ್ಥಿಸುವ ಜಾಣಿನ ಹವಣು ಇಲ್ಲಿ ಸುಳಿವುದೋರಿ ಅಲ್ಲಲ್ಲಿ ಹೊಳವುಗೊಂಡಿದೆ.

ಕೃತಿಯ ಈ ಸ್ವಲ್ಪ ಗದ್ಯಭಾಗವನ್ನು ತೆಗೆದರೂ ಕೃತಿಯ ಸ್ವಯಂಪೂರ್ಣತೆಗೆ ಕೊರತೆಯಿಲ್ಲ. ಈ ದೃಷ್ಟಿಯಿಂದ ಇದೊಂದು ವಿಶಿಷ್ಟ ರಚನೆ. ಪದ್ಯವು ಹಲವು ಜಾತಿ, ಹಲವು ರೀತಿ. ಅವುಗಳದೇ ಓಡಾಟ, ಹಾರಾಟ

ಮತ್ತೇಭ ಚಂಪಕಗಳನ್ನು ಬಿಟ್ಟರೆ ಉತ್ಪಲಾದಿ ಖ್ಯಾತ ಕರ್ಣಾಟಕಗಳು ಅಲಕ್ಷಿತ ವೆಂಬಷ್ಟು ಸ್ವಲ್ಪ; ಜಾತಿಯನ್ನು ಪ್ರತಿನಿಧಿಸುವಷ್ಟುಮಾತ್ರ; ಎಲ್ಲಾ ಸೇರಿ ಹತ್ತು, ಹದಿನೈದು ಎಂದರೆ ಹೆಚ್ಚು. ಕೃತಿಗೆ ಆಕಾರ ಬಂದಿರುವುದು ಕಂದಗಳಿಂದ. ಕೃತಿಯ ಆಕರ್ಷಣೆಯಿರುವುದು ಅಪೂರ್ವ ಛಂದೋಬಂಧಗಳಲ್ಲಿ. ಇವೆಲ್ಲ ಕವಿಯ ಪಾಂಡಿತ್ಯ ಕಿರೀಟದಲ್ಲಿ ಹೊಳೆಯುವ ರತ್ನಗಳು. ಇಂತಹ ಎಷ್ಟೋ ಪದ್ಯಗಳು ಇವುಗಳ ಛಂದಸ್ಸಿಗಾಗಿ, ಬಂಧವೈಚಿತ್ರ್ಯಕ್ಕಾಗಿ * ಮಾನ್ಯವೇ ಹೊರತು ಅವುಗಳಲ್ಲಿ ಭಾವರಸಗಳು ಶೂನ್ಯವೇ. ಇದಕ್ಕೆ ಕಾರಣ ಕವಿಗೂ ಇಂತಹ ಎಡೆಗಳಲ್ಲಿ ಭಾವರಸಗಳು ಮುಖ್ಯವೂ ಗಮ್ಯವೂ ಎನಿಸಿಲ್ಲದಿರುವುದೇ. ವಿವಿಧ ಛಂದೋಬಂಧಗಳಲ್ಲಿ ವೃತ್ತಗಳನ್ನು ಅಳವಡಿಸುವುದರ ಕಡೆಗೆ ಕವಿಯ ಕಣ್ಣು, ಗ್ರಥನ ಕೌಶಲ. ಛಂದೋಕೌಶಲವೂ ಭಾವ ಸೌಂದರ್ಯವೂ ಮೇಳ ಗೊಂಡಿದ್ದರೆ ಶಾಸ್ತ್ರಗ್ರಂಥವಾದ ಈ ಕೃತಿಯು ಸುರಸವಾಗಿ, ವಿಶಿಷ್ಟರಚನೆ ಯೆನ್ನಿಸಿ, ಗೌರವಾರ್ಹವಾಗುತ್ತಿತ್ತು. ಈಗಿರುವಂತೆ ಕೃತಿ ಚಿತ್ರಕವಿತಾ ಯುಕ್ತ ವಾಗಿ, ಛಂದೋವೈವಿಧ್ಯಪ್ರಧಾನವಾದ ಚಂಪೂವಾಗಿದೆ ಎನ್ನಬಹುದು. ಚಿತ್ರ ಕವಿತೆಗಿಂತಲೂ ಛಂದೋವೈವಿಧ್ಯಕ್ಕೆ ಪ್ರಾಧಾನ್ಯವೆಂಬುದನ್ನು ಒಪ್ಪಬೇಕು,

ಚಂದ್ರರಾಜನು ವಿವಿಧಕಲಾಸಂಪನ್ನ, ಶಾಸ್ತ್ರಜ್ಞ. ಪೂರ್ವ ಚಂಪೂ ಮಾರ್ಗವನ್ನೇ ಅನುಸರಿಸಿದರೂ 'ನಡೆದುದೆ ಮಾರ್ಗಂ, ಪದವಿಡಲೊಡರಿ ಸಿದುದೆ ಭಂಗಿ' ಎಂಬಂತೆ ಸ್ವತಂತ್ರ ಮಾರ್ಗದಲ್ಲಿ ಬರೆಯತೊಡಗಿದ ಸಾಹಸಿ. ಆರಿಸಿಕೊಂಡ ವಸ್ತು, ಬಿತ್ತರಿಸಿದ ಬಗೆ ಎರಡೂ ಅವನು ಜಾತಿರಸಿಕ ನೆಂಬುದನ್ನು ಸಾರುವಂಥವು. ಮದನಾರಿಯು ಪಾರ್ವತಿಗೆ ತಿಳಿಸಿದ ಮದನ ತತ್ವವನ್ನು ರೇಚಮಹೀಶನು ತನ್ನ ಮನೋಜ್ಞೆಗೆ ತಿಳಿಸಿದನಂತೆ. ಅದನ್ನೇ ಎತ್ತಿಕೊಂಡು ಇವನು ಲೋಕಕ್ಕೆ ಬಿತ್ತರಿಸಿದನಂತೆ. ರೇಚನು ತನ್ನ ಸತಿಗೆ

---

* ಮದನತಿಲಕದಲ್ಲಿ ಬಳಸಿರುವ ಚಿತ್ರಭೇದಗಳು ಇವು: ಚಕ್ರ, ಮುರಜ, ಗೋಮೂತ್ರಿಕೆ, ಪಣವ, ಫಣ, ಪಾದ, ಚಂಡಮೂಲ, ಕಿಜಿಯ ಸರ್ವತೋಭದ್ರ, ಮಕರವ್ಯೂಹ, ಶಂಖಾವರ್ತ, ಗತಪ್ರತ್ಯಾಗತ, ಅರ್ಧಪಾದ ಗತಪ್ರತ್ಯಾಗತ ವಿಷಮಚಕ್ರ, ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ, ನಿರೋಷ್ಠ್ಯ. ಇವುಗಳ ಬಗೆಗೆ ಪ್ರತ್ಯೇಕ ಉಲ್ಲೇಖ ಅಗತ್ಯ.

ಕಾಮತತ್ತ್ವವನ್ನು ಹೇಳಿದನೋ ಬಿಟ್ಟನೋ ಚಂದ್ರಕವಿಯಂತೂ ನಮಗಾಗಿ ಹೇಳಿದ್ದಾನೆ. ಬಹುಶಃ ದೊರೆಯ ಆಶಯದಂತೆ, ದೊರೆಯ ಹೆಸರಿನಲ್ಲಿ, ದೊರೆಯ ಕೀರ್ತಿಗಾಗಿ ಹೇಳಿರಬೇಕೆಂದು ತೋರುತ್ತದೆ. ಇವು ಪಂಪಾದಿಗಳ ಪಂಥಾನುಸರಣೆಯಿರಬೇಕು. ಮುನಿಮತವನ್ನು ಸಂಗ್ರಹಿಸಿ, ಸ್ವಾನುಭವವನ್ನು ಸೇರಿಸಿ, ಹಲವು ಅಧಿಕರಣಗಳಲ್ಲಿ ಈ ಕೃತಿಯನ್ನು ಕಟ್ಟಿದ್ದಾನೆ. ವಾತ್ಸ್ಯಾಯನನನ್ನು ಮಿಂಚಿದ 'ಚಂದ್ರರಾಜಂ ದ್ವಿಜಾಂಭೋಧಿರಾಜಂ'. ಶಾಸ್ತ್ರವನ್ನು ವಿಸ್ತಾರವಾಗಿ ನಿರೂಪಿಸುವುದು ಅವನ ಆಶಯವಲ್ಲ; 'ಸಾರಾಂಶಮಂ ಕೊಂಡು, ಪಲವು ಮತಂಗಳನೊಂದುಮಾಡಿ', 'ಧರಾತಳಕೆಲ್ಲಂ ಕಾಮಕಳಾಗಮ ಮೆಲ್ಲಮಂ ಕಿಱಿದಱಿಂದಱಿವಂತಿರೆ' ಹೇಳುವುದು ಅವನ ಸಂಕಲ್ಪ. ಇದನ್ನು 'ಲೌಕಿಕಮಂ ಸಂಧಿಸಿ ನೀತಿಗೊಡಂಬಡುವಂದದಿಂ' ಪೇಳುವುದು ಅವನ ಧ್ಯೇಯ. 'ತ್ರಿವರ್ಗಪರನಕ್ಕೆ ಬುಧಂ' ಎಂಬುದು ಅವನು ಸಾರುವ ಸಂದೇಶ.

ಪಂಪರನ್ನರ ಶೈಲಿಯ ಛಾಯೆ ಮದನತಿಲಕದಲ್ಲಿ ಕಾಣುವುದೆಂಬುದು ದಿಟ. ಕೃತಿಯ ಪ್ರಾರಂಭದಲ್ಲಿಯೆ ಇದನ್ನು ಕಾಣಬಹುದು. 'ಮುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ' ಎಂಬ ಮಾತು ಮದನ ತಿಲಕದಲ್ಲಿ 'ನೆರೆಯೆ ಮುನ್ನಿನವರ್ವಿದಿತಾರ್ಥಮಾಗಱಿಪಲೊಲ್ಲದೆ' ಎಂಬ ಮಾತಾಗಿ ಪ್ರತಿಬಿಂಬಿಸಿರುವಂತೆ ಕಂಡರೆ, ಇಲ್ಲಿಯ 'ಜಯಸಿಂಹದೇವನ ಮನುಚರಿತನ ತೊಡೆಯೆ ತೊಟ್ಟಿಲಾಗಿರೆ ಬಳೆದಂ' ಎಂಬ ಮಾತು ಅಲ್ಲಿಯ 'ಇಂದ್ರೇಂದ್ರನ ತೋಳೆ ತೊಟ್ಟಿಲಾಗಿರೆ ಬಳೆದಂ' ಎಂಬ ಮಾತನ್ನು ನೆನಪು ಮಾಡುವುದು. ಹೀಗೆಂದ ಮಾತ್ರಕ್ಕೆ ಕವಿಯದು ಅನುಕರಣಶೀಲ ರಚನೆಯಲ್ಲ. ಇರುವಷ್ಟು ಅವಕಾಶದಲ್ಲಿ ಸ್ವಪ್ರತಿಭೆಯ ಪ್ರಕಾಶ ಸ್ಫುಟಗೊಂಡಿದೆ. ಶಾಸ್ತ್ರ ನಿರೂಪಣೆಯಲ್ಲಿ ಕಾವ್ಯಶಕ್ತಿ ಸಹಜವಾಗಿ ಪ್ರಕಟಗೊಳ್ಳುವ ಪ್ರೋತ್ಸಾಹಕವಾದ ವಾತಾವರಣವಿರುವುದಿಲ್ಲವೆಂಬುದು ನಿಜ. ರಸೋತ್ಕರ್ಷವಾದ ಸನ್ನಿವೇಶ ಸೃಷ್ಟಿಯಾಗಲಿ ಪಾತ್ರಗಳ ವಿವಿಧ ಮನೋಧರ್ಮಗಳ ಚಿತ್ರಣವಾಗಲಿ ಈ ಶಾಸ್ತ್ರ ಕವಿಯ ಕರ್ಮವಲ್ಲ. ಅದರಿಂದ ಸಂಪ್ರದಾಯ ಶರಣರಾದ ಶಾಸ್ತ್ರಜ್ಞರಂತೆಯೇ ಎಂದು ಕಾಣುತ್ತದೆ—ಮನೋಭಾವನೆಗಳ ನಿರೂಪಣೆಗಳಿಗಿಂತ ತತ್ತ್ವಗಳ ಪ್ರಕ್ರಿಯಾಪೂರ್ವಕವಾದ ವಿವರವರ್ಣನೆಯಲ್ಲಿ ಕವಿಯ ಆಸಕ್ತಿ ಕಾಣುತ್ತದೆ,

ಈ ಕೃತಿಯಲ್ಲಿ. ಇಲ್ಲಿ ಬೇಸರ ತರುವಂಥ ವಿವರಣೆಗಳೂ ಇವೆ, ಕುತೂಹಲವನ್ನು ಎಬ್ಬಿಸುವಂಥವೂ ಇವೆ. ವಿವಿಧ ಜಾತಿರೀತಿಗಳ ಸ್ತ್ರೀಪುರುಷರ ಶಾರೀರಕ ಮಾನಸಿಕ ಪ್ರಕೃತಿಗಳ, ವೃತ್ತಿ ಮತ್ತು ವಯೋವಿಭೇದಗಳ ಸಂಬಂಧವಾದ ಕಾಮತತ್ತ್ವವನ್ನು 'ನಾನಾ ಛಂದಕ್ಕಧಿಕೃತಮಿದೆಂದು' ರಚಿಸುವುದು ಇಲ್ಲಿಯ ಉದ್ದೇಶ. ಈ ಉದ್ದೇಶವು ಸುರಸವಾಗಿ ಪೂರ್ಣಗೊಂಡಿದೆ ಯೆಂಬುದು ಹೆಚ್ಚಿನ ಮಾತಾದೀತು. ಸಜ್ಜನಶೀಲದ ವರ್ಣನೆಗಿಂತ ಸೂಳೆ ವಿನ್ನಣವು ಚಿತ್ರವತ್ತಾಗಿ ಸ್ವಾರಸ್ಯವಾಗಿ ವರ್ಣನೆಗೊಂಡಿದೆ. ಈ ಎರಡು ಪದ್ಯಗಳನ್ನು ಮಾದರಿಗಾಗಿ ನೋಡಿ.*

ಸ್ವರಮನಜಿಗೆ ತಾಂ ಭರತಜ್ಞನಂದದಿಂದಾಸನಮನಜಿಗೆ ಜಾತ್ಯಶ್ವದಂತೆ
ಪರಿಯನಜಿಗೆ ಮತ್ತದ್ವಿಪಪತಿಯಂತೆ ಬಗೆಯನಜಿಗಾಹಾರಕುಶಲನಂತೆ
ಕರಮುಖಚೇಷ್ಟೆಯನಜಿಗೆ ತಾಂ ಶಕುನಿಗನಂತಿರೆ ಎಜಕಮನಜಿಗೆ ತಂಬಟಿಗನಂತೆ
ಸ್ಮರಕಳಾಗಮಕಿದೆ ತತ್ತ್ವಂ ಸದ್ವಿಟಂ ಸೊಮ್ಮನಜಿಗೆ ಓಪಳಿಯಂತೆ (೧೦-೭೬)

ಅರಿಯನಪ್ಪಂಗಂ ಬೆಟ್ಟಿದನಪ್ಪಂಗಂ ನಖರೇಖೆಯ ಬೀಜಿ ಬೆಸೆವಂಗಂ
ಕರಮೆ ಪುಸಿವಂಗಂ ಕಂಡಲ್ಲಿ ಸಿಡಿವಂಗಂ ಕಳ್ಳೊತೆ ಯಿಡುವಂಗಂ ಮೆಳಿದಂಗಂ
ಪಿರಿದನೀವಂಗಂ ಮುನ್ನಮೆ ಕೂರ್ಪಂಗೆ ಪೆಟ್ಟಿಯುಂ ಸೈರಿಪಂಗಬಲಿಪಂಗಂ
ಕಡಯಿಮೆಂಬಂಗಂ ಕಿಸುಗುಳ್ಳನಪ್ಪಂಗಂ ಸೂಳೆಸುಖಂ ಸಲ್ವುದಲ್ತೇ (೧೦-೭೭)

ಉದ್ದೇಶಪಟ್ಟು ಆರಿಸಿ ತೆಗೆದರೆ ಹತ್ತು ಹದಿನೈದು ಪದ್ಯಗಳನ್ನು ಕವಿಯ ಉತ್ತಮ ಕಾವ್ಯಶಕ್ತಿಯ ಸಾಕ್ಷಿಯಾಗಿ ತೋರಿಸಬಹುದು.† ಪೂರ್ವಸೂರಿಗಳಿಂದ ಅನುವಾದಿಸಿದ ಭಾಗಗಳಿರಬಹುದಾದರೂ ಸ್ವಂತದವೂ ಇಲ್ಲವೆಂಬಂತಿಲ್ಲ. ಕಾವ್ಯಸೌಂದರ್ಯ ದೃಷ್ಟಿಯಿಂದ ಒಟ್ಟಿನಲ್ಲಿ ಕೃತಿ ಉತ್ತಮ

---

* ಇಲ್ಲಿ ಮುಂದೆ ಉದಾಹರಿಸುವ ಪದ್ಯಗಳಲ್ಲಿ ಅರ್ಥೋಚಿತವಾದ ಒಂದೆರಡು ಸಣ್ಣ ಮಾರ್ಪಾಟುಗಳನ್ನು ಮಾಡಿಕೊಂಡಿದೆ.

† ಬೇರೆ ಸಂದರ್ಭಗಳಲ್ಲಿ ಉದಾಹರಿಸುವ ಪದ್ಯಗಳನ್ನು ಇಲ್ಲಿಗೆ ನೋಡಿಕೊಳ್ಳಬಹುದು.

ವಾಗಿಲ್ಲದಿರಬಹುದು, ಕಾಂತಿಹೀನವಾಗಿ ತೋರಬಹುದು. ಇಲ್ಲಿ ಕವಿಶಕ್ತಿಯ ಕೊರತೆಯ ಕಾರಣವನ್ನು ಎತ್ತುವ ಬದಲು ಕವಿದೃಷ್ಟಿಯ ವ್ಯತ್ಯಾಸವನ್ನು ಕಾರಣವಾಗಿ ಗ್ರಹಿಸುವುದು ಸರಿ.

ಗುಣಲಕ್ಷಣಗಳನ್ನೂ ನೀತಿನಿಯಮಗಳನ್ನೂ ಪಟ್ಟಿ ಮಾಡುವುದು, ಪ್ರಥಮಾಂತವಾಗಿ ನಿಲ್ಲಿಸಿ ಇಲ್ಲವೆ ಸಮುಚ್ಚಯದ ಕೊಂಡಿಗಳನ್ನು ಬೆಸೆದು ತಾರ್ಕಿಕವಾದ ಮಾತಿನ ಸರಣಿಯನ್ನು ಹೆಣೆಯುವುದು ಈ ಬರವಣಿಗೆಯ ಸಾಧಾರಣ ಲಕ್ಷಣ. ಇದಕ್ಕೆ ಎರಡು ಉದಾಹರಣೆಗಳನ್ನಿಲ್ಲಿ ನೋಡಬಹುದು :

ಉಪ್ಪಡಂ ತುಡುಗೆ ಜವ್ವನವಾದಂ
ಕಪ್ಪುರಂ ಮೃಗಮದಂ ಸುಲಿಪಲ್ ಲೇ
ಸಪ್ಪ ಸಾದು ಬಿಡುದಂಬುಲಮೆಂದುಂ
ತಪ್ಪದುಳ್ಳವನೆ ಸಂದ ಭುಜಂಗಂ (೧೦-೧೨)

ಕುಲಟಾನಾರಿಯ ನಾಣುಮುನ್ನತಿಯುಮೊಳ್ಪುಂ ಶೌಚಮುಂ ಧರ್ಮಮುಂ
ಚಲಮುಂ ಮುನ್ನಮೆ ಕೆಟ್ಟು ಪೋದುದಜಿನಾರಾರೋಲೆಯಂ ತಾಂ ನಿರಂ
ತರಮುಂತುಂ ಕಡುಕೆಟ್ಟು ಪೋಕುಮುದಜಿಂದಂ ಯತ್ನದಿಂ ಕಾಪು ಮಾ
ಡಿ ಲಸತ್ಕಾಮ ಸುಖಂಗಳಂ ಸಲಿಸುಗುಂ ಚಂದ್ರಾಸ್ಯೆಯೊಂದಿಚ್ಛೆಯಿಂ (೯-೬)

ಮಾತಿನ ಚದುರು, ಹಾಸ್ಯದ ಹದಿರು ಅಲ್ಲಲ್ಲಿ ಅಪ್ರಯತ್ನವಾಗಿ ಸಮಯೋಚಿತವಾಗಿ ತಲೆಹಾಕಿವೆ. ಅವು ನವೀನವಾಗಿಯೂ ಆಕರ್ಷಕವಾಗಿಯೂ ಇದ್ದು ಕವಿಶಕ್ತಿಯನ್ನು ಮನಗಾಣಿಸುವುದಾದರೂ ಕವಿಯ ಸೃಷ್ಟಿಪೂರ್ವಕವಾದ ಲಕ್ಷ್ಯ ಅವುಗಳ ಕಡೆಗಿಲ್ಲ. ಕವಿಯ ಲೋಕಾನುಭವವನ್ನು ಬಿಂಬಿಸುವ ಕೈಗನ್ನಡಿಗಳಂತಿರುವ ನಾಡನುಡಿಗಳನ್ನು ಆಯುವಲ್ಲಿಯೋ ಕಟ್ಟುವಲ್ಲಿಯೋ, ಇಲ್ಲೊಂದು ಅರ್ಥಾಂತರನ್ಯಾಸ ಅಲ್ಲೊಂದು ಉಪಮೆ ಕೊಟ್ಟು ಪದ್ಯವನ್ನು ಆಕರ್ಷಕವಾಗಿ ಮುಗಿಸುವುದರಲ್ಲಿಯೋ, ಕವಿಯ ಜಾಣ್ಮೆ ಬಿತ್ತಿ ಬೆಳೆಗೊಂಡಿದೆ. ಇದಕ್ಕೆ ಕೆಲವು ನಿದರ್ಶಗಳನ್ನು ಕೊಡಬಹುದು :

ಕೂಡಿದ ನಾಲ್ವರ್ಗರ್ಾವಿಲರ್
ಆಡಂ ನಾಯ್ಕೂಡಿ ತಿಂದರೆಂದಡೆ ಚದುರರ್
ಕೂಡಿದಡೆ ಸತಿಯರಂ ಕೊಂ
ಡಾಡದೆ ಗೆಲ್ದಂದವರಿದೆ ಮದನಲತಾಂಗೀ॥ (೧೦-೪೨)

ಅರಸಂ ಸ್ತಬ್ಧಂ ಪೆರ್ಗಡೆ
ಮರುಳಂ ತದ್ವರ್ತಿ ಪಿಸುಣನಾಪ್ತಂ ಪುಸಿವಂ
ಪರದಂ ವ್ಯಾಳಂ ಪೆಂಡತಿ
ದುರಾತ್ಮೆ ವಿಟನೆಗ್ಗನಾದೊಡಬಿಸುವ ಪುರುಳೇಂ ? (೧೦-೫೧)

ಕಿಚ್ಚಂ ನೀರಂ ಪೊಕ್ಕುಂ
ನಿಚ್ಚಂ ಕಾಲ್ವಿಡಿದುಮಟ್ಟು ಲಲ್ಲೆಯಿಸಿ ಕರಂ
ಬೆಚ್ಚನೆ ಸುಯ್ದುಂ ನಂಬಿಸ
ಲಚ್ಚರಿಯೆ ವೇಶ್ಯೆಯರ್ಕಳೆಂತಪ್ಪರುಮಂ॥ (೧೦.೬೯)

ಅಸುರವೈರಿ ಬಗೆಯಿಂದೆ ಲಕ್ಷ್ಮಿಯಂ
ಮಿಸುಪ ಪೇರುರದೊಳೊಪ್ಪಿ ತಾಳ್ದಿಯುಂ
ಬಸವಿಯಾಗಿ ಪೆಱಗೋೞ್ತಳೆಂದಡೀ
ವಸುಧೆಯೊಳ್ವಧುವನೆಂತು ನಂಬುವರ್ ॥ (೧೦-೭೧)

ಇನ್ನೂ ಕೆಲವು ಮಾತುಗಳನ್ನು ಬಿಡಿಯಾಗಿ ಎತ್ತಿ ಬರೆದು ಆಮೇಲೆ ಗಾದೆಮಾತುಗಳನ್ನು ನೋಡಲು ಮುಂದವರಿಯಬಹುದು.

ತನ್ನಂ ತೇಱುವವು ಸೆಱೆಂಕಿತೆಂದಟ್ಟು ಜಾರೆ ತೆಜಪಂ ಪಡೆಗುಂ (೮-೩೮)
ನಾಡಾಡಿಯು ಪಾಣ್ಬೆಗೊಳವು ಕುಟಿಲವನೇಕಂ (೮-೫೧)
ಚದುರಂಗೆ ಬೇಱೆ ಕೋಡೆರಡೊಳವೇ ? ೯-೯
ಅಂಗನೆಯರ ಚೇಷ್ಟೆ ತಿಳಿಯಲಸಾಧ್ಯಂ (೧೦-೨೮)
ಮುನ್ನಿನ ವಿಭವಂ ಕೆಟೆಪ್ಪಡಂ ಪೆಸರ್ಕಿಡದು (೧೦-೩೭)
ಚಿತ್ತದ ಕಜ್ಜಂ ನಾಲಗೆಗೊತ್ತಂಬದಿ ಬಕ್ಕುಂ (೧೦-೬೮)
ಮುಗ್ಧಸ್ತ್ರೀ ಸುಸಾಧ್ಯಂ ಚದುರಯುವತಿ ಸಕ್ಲೇಶಸಾಧ್ಯಂ (೧೦-೭೮)

ಗಾದೆಗಳು; ಗಾದೆಗಳಂತಿರುವ ಚತುರೋಕ್ತಿಗಳು:

ಗೋಧರ್ಮಂ ಮನುಷ್ಯಧರ್ಮಮಾಗಲಱಿಯದು (ಪು. ೧೬). ನಾಳೆ ಬಪ್ಪ ಪೊನ್ನಿಂದಮಿಂದು ಬಪ್ಪ ಪಣಮೇ ಲೇಸು. (೧೬). ನಾಳೆ ತಿಂಬನ್ನಿಂದೆ ಇಂದು ತಿಂಬ ಲಾವಗೆ ಲೇಸು* (೧೬). ಬೀಜದುಂಪಕ್ಷಯಂ ಬಗೆದು ಬಿತ್ತುವುದಂ ಮಾಣಲಾಗದು (೧೭). ಭೈಕ್ಷಕ್ಕಂಜಿ ಅಟ್ಟುಂಬುದಂ ಮಾಣಬೇಡ (೧೭). ಪೆಣ್ಣಂಗಂಜಿ ಉಟ್ಟುಹನಿಕ್ಕವೇಡ (೧೭). ಘನಕುತ್ತಕಳ್ಕಿ ಕ್ರಿಪೆ ಮರ್ದುಂ ಬರಪೊಲ್ (೩೯). ಪುಣ್ ಕೆಟ್ಟಡೆ ಕಲೆ ಕೆಡದು (೭೦). ಕೂಡಿದ ನಾಲ್ವರ್ಗಾವಿಲರಾಡಂ ನಾಯ್ಮಾಡಿ ತಿಂದರ್ (೭೧). ಐವರ್ಕೂಡಿದಡೆತ್ತಂ ದೈವಂ ಮರುಳಾದುದು (೭೧). ಬಳರಿಗೆ ಪುಯ್ಯಲ್ವ ಬಂದ ಕುಱಿಯಂತಕ್ಕುಂ (೪೯).

ಕವಿಯ ಲೋಕಾನುಭವ ಆತನ ಆಳವಾದ ಶಾಸ್ತ್ರಜ್ಞಾನದಷ್ಟೆ ವಿಸ್ತಾರವಾದುದು. ಸರಳವಾದ ಸುಲಭವಾದ ಮಾತುಗಳಲ್ಲಿ ಲೋಕನೀತಿಯನ್ನು ಸಾರುವಂತೆ ಗಂಭೀರವಾದ ವಿಷಯಗರ್ಭಿತವಾದ ಮಾತುಗಳಲ್ಲಿ ಶಾಸ್ತ್ರವನ್ನು ಹೇಳಿದ್ದಾನೆ. ಸುಗಮವಾದ ರಸಾಭಿವ್ಯಂಜನೆಗೆ ಸಾಮಾನ್ಯವಾಗಿ ತೊಡಕಾಗುವಂತೆ ಪಂಡಿತಕವಿಗಳು ತಿಣುಕಿ ಹೆಣೆಯುವ ಶ್ಲೇಷೆ ವಿರೋಧಾಭಾಸಗಳು ಒಂದೆರಡು ಬಾರಿ ಕಂಡದ ಚೌಕಟ್ಟಿನಲ್ಲಿ ಇಣುಕಿನೋಡಿ ಹೊರಟ ಮೇಲೆ ಮತ್ತೆ ತಲೆಯಿಡುವುದಿಲ್ಲ. ಅರ್ಥಬೋಧೆಯ ದೃಷ್ಟಿಯಿಂದ, ಏಕಾಕ್ಷರಿ ದ್ವ್ಯಕ್ಷರಿ ಆದಿಗಳು ನಮಗೆ ಹೇಗೋ ಹಾಗೆ ಕವಿಗೂ ನಿಷ್ಪ್ರಯೋಜಕ. ಅವುಗಳ ಸಾರ್ಥಕತೆಯಿರುವುದು ಚಿತ್ರಬಂಧಗಳ ನಿರ್ದೇಶನದಲ್ಲಿ. ಇಂಥ ಶಬ್ದಾಲಂಕಾರಗಳನ್ನು ಕೃತಿಯಲ್ಲಿ ಪ್ರಾತಿನಿಧ್ಯಕ್ಕಾಗಿ ಪ್ರದರ್ಶನಕ್ಕಾಗಿ ಕವಿಯು ಆಯುತ್ತಾನೆಯೇ ವಿನಾ ಅವನ ಪ್ರೀತಿ ಸಾಮಾನ್ಯವಾಗಿ ಒಲೆಯುವುದು ಯಮಕಾನುಪ್ರಾಸಗಳನ್ನು ಸರಗೊಳಿಸುವುದರ ಕಡೆಗೇ. ಇಲ್ಲಿಯೂ ವೈವಿಧ್ಯರುಚಿ, ಔಚಿತ್ಯಪ್ರಜ್ಞೆ ಕವಿಗುಂಟು. ಎರಡು ಉದಾಹರಣೆಗಳನ್ನು ನೋಡಬಹುದು:

---

* ನಾಳೆ ತಿಂಬ ನವಿಲಿನಿಂದೆ ಇಂದು ತಿಂಬ ಲಾವಗೆ ಲೇಸು (ಪಾಠಾಂ); ಲಾವಣಿಗೆ ವಡ್ಡಾ ೭೩-೧೭)

ಶ್ರೀವಧುವಿಂಗಗಜೆಗೆ ವಾಕ್
ಶ್ರೀವಧುವಿಂಗಜನನಜನನಜನಂ ಕುಸುಮಾ
ಸ್ತ್ರಾವಳಿಯಿಂದೋಲೈಸಿದ
ಭಾವೋದ್ಭವನೀಗೆ ನಮಗೆ ಸುಖಸಂಪದಮಂ।। (೧-೧)

ಮುಳಿದು ತಿಳಿಪಿದಡೆ ತಿಳಿದಾ
ಗಳೆ ಮುಳಿಯಿಸಿ ತಿಳಿಪಿ ಮೃದುರತೋತ್ಸವದಿಂದಂ
ಮುಟಿಗಾಲದೊಳಿರುಳರ್ಧಂ
ಗಳೆದಿಂ ಬಟಿಕೆಳಸಿ ಕೂಡಿ ಗೆಲ್ಗ್ಗ ವಧುವಂ।। (೫-೧೦)

ಕವಿಯು ನೇರವಾಗಿ ಅಲ್ಲಲ್ಲಿ ಸೂಚಿಸಿರುವ ಯುಮಕ (೧೦–೨೪), ಆದಿ ಯುಮಕ (೧–೨೯), ಅರ್ಧಪದಾಂತಯುಮಕ (೧೦–೪), ಆದ್ಯಂತ ಪ್ರಾಸ ಯುಮಕ (೧–೪೩), ಮಹಾಯುಮಕ (೧೦–೮) ಮುಂತಾದವುಗಳಲ್ಲದೆ ಇನ್ನೂ ವೈವಿಧ್ಯಗಳುಂಟು. ಕಾವ್ಯಾವಲೋಕನದಲ್ಲಿ ಹೇಳಿರುವ ಯುಮಕ ಲಕ್ಷಣಕ್ಕೆ ಸಂವಾದಿಯಾದ ಹಾಗೂ ಸದೃಶವಾದ ಉದಾಹರಣೆಗಳನ್ನಿಲ್ಲಿ ಕಾಣಬಹುದು.

ಪ್ರಸಕ್ತ, ಅಪಪಾಠಗಳ ದೆಸೆಯಿಂದ ಅಲ್ಲಲ್ಲಿ ಓದಿಗೆ ತೊಡಕಾದರೂ, ಚಂದ್ರರಾಜನದು ಅರ್ಥಾಭಿವ್ಯಕ್ತಿಯಾಗುವಂತೆ ಬರೆಯುವ ಶಕ್ತಿ. ಮಾತು ಮಾರ್ಮಿಕವೂ ಹೌದು, ತಾರ್ಕಿಕವೂ ಹೌದು. ಇವೆರಡು ಪದ್ಯಗಳನ್ನು ನೋಡಿ:

ಪುಸಿವುದು ಸತ್ಯವಾದಿಯೆನೆ ಪೆರ್ಚಿ ಕರಂ ಪಿರಿದೀಯವೇಡೆ ಭಾ
ವಿಸೆ ಕಡು ಚಾಗಿ ತಾನೆಸೆಪುದೆಲ್ಲದೊಡಂ ಕರವೊಲ್ದ ಮಾಟ್ಕೆಯಿಂ
ದೆಸವುದು ಕೂರೆ ಕೂರ್ಪುದಣವೊಲ್ದೊಡಮಾತುರನಾಗದಿರ್ಪುದೀ
ವಸುಧೆಯೊಳಿಂತಿರಲ್ಬೆಱತು ಬಿನ್ನಣವಾವುದು ಸೂಳೆವಿನ್ನಣಂ ॥ (೧೦-೪೪)

ಪದನಱಿದೀವನನೊಲ್ವ
ಸುದತಿಯರೀಯದೊಡವಧಿಕಮಿತ್ತೊಡವೊಲ್ಲ
ರ್ಪದವಟಿಯಿಂ ಧಾರುಣಿ ಬೆಳೆ
ವುದು ಭರದಿಂದಧಿಕ ವೃಷ್ಟಿಯಿಂ ಬೆಳೆಯದವೊಲ್ ॥ (೧೦-೮೭)

ಒಂದೆರಡೆಡೆಗಳನ್ನು ಬಿಟ್ಟರೆ ಸಾಮಾನ್ಯವಾಗಿ ಅವನದು ಪ್ರೌಢಶೈಲಿಯ ನಿರರ್ಗಳ ಪದ್ಯಬಂಧ. ದೇಸಿಯಲ್ಲಿಯೂ ಮಾರ್ಗದಲ್ಲಿಯೂ ಬಿಡುಬೀಸಾಗಿ ನಡೆಯಬಲ್ಲ ಕೈ. ಒಂದೊದು ಉದಾಹರಣೆಯನ್ನು ಗಮನಿಸಹುದು :

ನುಡಿಯೊಳ್ಪುಸಿಮಾತಂ ಮೆ
ಳ್ಪಡಿಕುಂ ತಡಮಡಿಸಿಪ್ಪೊಂದನೊಂದಂ ನೆಗಟ್ಗಿಂ
ನುಡಿಗುಂದುಗುಂ ಪೆಮರ್ಕುಂ
ಮಡದಿ ಕರಂ ತಪ್ಪದಿರ್ದೊಡಂ ತಪ್ಪಿದೊಡಂ ॥ (೧೧–೩೪)

ಅಸತೀ ಸಂಕುಲದೂರನಂ ಮನುಮುನೀಂದ್ರಾಚಾರನಂ ಶ್ರೀವಧೂ
ಲಸಿತೋರಸ್ಥಳನಂ ವಿಶುದ್ಧಕುಲನಂ ದಿಕ್ಕಾಮಿನೀಗೇಯಮಾ
ನಸಮುದ್ಭಾಸಿತ ವರ್ಣನಂ ಬಹುಕಲಾಸಂಪೂರ್ಣನಂ ಧಾತ್ರಿ ಬ
ಣ್ಣಿಸುಗುಂ ಚಂದ್ರನನರ್ಥಿಕೀರ ಪರಪುಷ್ಟಾನಂದಮಾಕಂದನಂ ॥ (೧-೪೬)

ಅವನೊಲವು ಮಾರ್ಗದ ಕಡೆಗೇ, ಸಗರ್ವಗೀರ್ವಾಣಿಯ ಗೀರ್ಗುಂಫದ ಕಡೆಗೇ ಎಂದು ಮೊದಮೊದಲು ತೋರಿದರೂ ಬರುಬರುತ್ತ ಅದು ದೇಶ್ಯದ ಕಡೆಗೇ ಉಬ್ಬಿ ಉಕ್ಕಂದಗೊಂಡಿದೆ. ಅವನ ಪಿರಿಯಕ್ಕರಗಳು ಅವನ ಕನ್ನಡದ ಪಿರಿಯಕ್ಕರೆಗೆ ಸಾಕ್ಷಿ. ವೃತ್ತಗಳು ಸಂಸ್ಕೃತದ ವಾಗ್ವೈಭವಕ್ಕೆ ಸಾಕ್ಷಿ. ಎರಡರಲ್ಲಿಯೂ ಶಬ್ದಶಯ್ಯೆ, ಶಬ್ದಪಾಕ ಹಿತೋಚಿತಗಳಾಗಿಯೇ ಇವೆ. ಆದರೆ ಅಸಹಜ ಅಶ್ರಾವ್ಯ ರಚನೆಗಳೂ ಕ್ವಚಿತ್ತಾಗಿ ಕಾಣುತ್ತವೆ. ಇವಕ್ಕೆ ಒಂದೊಂದು ಉದಾಹರಣೆಯನ್ನು ಕೊಡಬಹುದು :

ಚಚ್ಚನೆ ಗುಜುಗುಜು ಲೋಗರೊ
ಳಚ್ಚೊತ್ತಿದ ತೆಜದಿನೆರವು ತೊಟ್ಟಿರೊಳಾಗಲ್
ಪಚ್ಚುವ ಕಾಮಿನಿ ತಪ್ಪಲೊ
ಡರ್ಚುವಳಟ್ಟಟ್ಟಿ ಪೆಜಿರೊಳಾದೊಡೆ ನಿರತಂ ॥ (೮–೩೭)

ಅಂಬೂದ್ಭೂತಾಸ್ಯಂ ಸನ್ಮಧ್ಯಂ
ಕಂಬುಗ್ರೀವಂ ಪ್ರಾಕುಶ್ರೋಣೀ
ಬಿಂಬಂ ಭೃಂಗಾಳೀವತ್ಕೇಶಂ
ಬಿಂಬೋಷ್ಠಂ ಶ್ರೇಷ್ಠ ಸ್ತ್ರೀಗಕ್ಕುಂ ॥ (೬–೨)

ಯಾವ ಕೃತಿಯೇ ಆಗಲಿ ಹಲಕೆಲವು ಪದಾರ್ಥದೋಷಗಳಿಂದ ಪೂರ್ತಿಯಾಗಿ ಮುಕ್ತವಾಗಿರುವುದು ಸಾಧ್ಯವಿಲ್ಲವಷ್ಟೆ. ಇದಕ್ಕೆ ಮದನ ತಿಲಕವೂ ಹೊರತೇನಲ್ಲ.

ಇನ್ನು ದೇಸಿಯನ್ನೂ ಮಾರ್ಗವನ್ನೂ ಹಿತವಾಗಿ ಬೆರಸಿ ಬರೆಯುವ ಬಲುಹು ಕವಿಗಿರುವುದನ್ನು ಒಂದು ಉದಾಹರಣೆಯಿಂದಲೆ ಮನಗಾಣಬಹುದು:

ಒಬ್ಬಳೆ ಸಾಲ್ಗುಂ ಸಜ್ಜನ
ಮಿಬ್ಬರ್ನಿರ್ಬುದ್ಧಿಗಕ್ಕುಮತ್ತಂ ತಾಂ ಪ
ನ್ನಿಬ್ಬರುಮಂ ಕುಲವಧುವಂ
ನೂರ್ಬರುಮಂ ಪಡೆದೊಡಕರಂ ಸುಖಿಂಬಡೆದಪನೇ ॥ (೮-೫೩)

ದಾಂಪತ್ಯಜೀವನದ ಯಮನಿಯಮಗಳನ್ನು ನಿರೂಪಿಸುವ ಈ ಕೃತಿಯ ಶೃಂಗಾರ ಶೀಲಶೃಂಗಾರ, ಶಾಂತಶೃಂಗಾರ. ಎಲ್ಲಿಯೂ ವರ್ಣನೆಗಳ ಅತಿರೇಕ ವಿಲ್ಲ, ಆಭಾಸವಿಲ್ಲ. ಶೃಂಗಾರಾನುಬಂಧಿಯಾದ ಕರುಣವೂ ಹಾಸ್ಯವೂ ಆಗೊಮ್ಮೆ ಈಗೊಮ್ಮೆ ಕಟಾಕ್ಷವನ್ನು ಚೆಲ್ಲಿ, ಮಂದಹಾಸವನ್ನು ಸೂಸಿ, ಮಾಯವಾಗುತ್ತವೆ.

೨. ಭಾಷೆ

ಮದನತಿಲಕದ ಮುದ್ರಿತ ಪ್ರತಿ ಮೈಸೂರು ಹಸ್ತ ಪ್ರತಿಯನ್ನು (ಕ) ಬಹುಮಟ್ಟಿಗೆ ಅನುಸರಿಸಿ ಅಚ್ಚಾಗಿದೆ. ಮದ್ರಾಸು ಹಸ್ತಪ್ರತಿ (ಗ) ಪಾಠಗಳನ್ನೂ ಇತರ ಪಾಠಗಳನ್ನೂ ಅಡಿಟಿಪ್ಪಣಿಯಲ್ಲಿ ಕೊಟ್ಟಿದೆ. ಮೈಸೂರು ಪ್ರತಿಗಿಂತ ಮದ್ರಾಸು ಪ್ರತಿಯೆ ಹೆಚ್ಚು ಸಮರ್ಪಕವಾದ ಪಾಠಗಳನ್ನು ಒದಗಿಸುವುದರಿಂದ ಅದನ್ನೇ ಅನುಸರಿಸಿದ್ದರೆ ಚೆನ್ನಾಗಿತ್ತೆಂದು ಕಾಣುವುದು. ಎಂಟನೆಯ ಆಶ್ವಾಸದ ಕೆಲವು ಪದ್ಯಗಳಿಗೆ ಈ ಎರಡು ಪ್ರತಿಗಳ ಪಾಠಕ್ಕಿಂತಲೂ ಸೂಕ್ತಿ ಸುಧಾರ್ಣವದ ಪಾಠಗಳು * ಉತ್ತಮವಾಗಿವೆ. ಒಟ್ಟಿನಲ್ಲಿ

---

* ಸೂಕ್ತಿಸುಧಾರ್ಣವದಲ್ಲಿ ಮದನತಿಲಕದ ೩೧ ಪದ್ಯಗಳು ಉದಾಹೃತವಾಗಿವೆ. ಸೂಕ್ತಿಸುಧಾರ್ಣವದ ೮ನೇ ಆಶ್ವಾಸದಲ್ಲಿ ಮದನತಿಲಕದ ೮ನೇ ಆಶ್ವಾಸದ ೩೦ ಪದ್ಯಗಳೂ, ೯ನೇ ಆಶ್ವಾಸದ ೧ ಪದ್ಯವೂ ಉದ್ಧರಿಸಲ್ಪಟ್ಟಿವೆ ; ೮–೧೧೫ರ ಅಡಿಟಿಪ್ಪಣಿಯ ಪದ್ಯವೂ ಕೂಡಿದರೆ ೩೨ ಪದ್ಯಗಳಾಗುವುವು.

ಸಂದೇಹ ಬಂದಾಗ ಸರಿಯಾದ ಪಾಠವನ್ನು ಇವುಗಳ ಸಹಾಯದಿಂದ ಕಂಡು ಕೊಳ್ಳಬಹುದು. ಆದಷ್ಟು ಮಟ್ಟಿಗೆ ಕೃತಿಗ್ರಥನಕಾಲದ ಭಾಷೆ ಮತ್ತು ಭಾವಗಳನ್ನು ಬಿಂಬಿಸುವಂಥ, ವಿಶ್ವಾಸಾರ್ಹವಾದ ಬೇರೊಂದು ಮದನ ತಿಲಕದ ಹಸ್ತಪ್ರತಿ ದೊರೆಯುವವರೆಗೆ ಮದನತಿಲಕದ ಅಭ್ಯಾಸಿಗೆ ಹಲವು ತೊಡಕುಗಳಂ ತಪ್ಪಿದ್ದಲ್ಲ. ಬೇರೆ ಬೇರೆ ಕಾಲದ, ಸಂಸ್ಕಾರದ ಪ್ರತಿಕಾರರ ಕೈವಾಡಗಳ ಪ್ರಭಾವದಿಂದ ಈಗ ಅಚ್ಚಾಗಿರುವ ಮದನತಿಲಕದಲ್ಲಿ ಹಲವು ಬಗೆಯ ತಪ್ಪುಗಳಿವೆ. ಪಳಗನ್ನಡದ ಲಕ್ಷಣಗಳಲ್ಲಿ ಹಲವು ವಿರೂಪಗೊಂಡು ಹೊಸಗನ್ನಡದ ಕಳ್ಳಹೊದಿಕೆಯಲ್ಲಿ ಮರೆಯಾಗಿವೆ. ಈ ಪ್ರಮಾದಗಳನ್ನು ಭಾಷೆಗೂ ಭಾವಕ್ಕೂ ಛಂದಕ್ಕೂ ಬಂಧಕ್ಕೂ ಬಾಧಕವಾಗದಂತೆ ನೇರ್ಪಡಿಸಿಕೊಳ್ಳುವುದು ಸಾಧ್ಯ, ಅಲ್ಲದೆ ಅಗತ್ಯ. ಈ ನೇರ್ಪಾಟಿನಲ್ಲಿ ಅಲ್ಲಲ್ಲಿ ಅಪರೂಪವಾಗಿ ಎಡೆ ವಾಯ್ದು ಬರುವ ತೊಡಕುಗಳಿರಬಹುದು. ಇವನ್ನು ಅನ್ಯಪ್ರಮಾಣಗಳಿಂದ ಸರಿಪಡಿಸಿಕೊಳ್ಳಬೇಕಲ್ಲದೆ ಮದನತಿಲಕದ ಭಾಷೆಗೇ ಹೊಸತನದ ಪಟ್ಟವನ್ನು ಕಟ್ಟಲಾಗದು. ಮದನತಿಲಕದ ಭಾಷೆ ನಿಸ್ಸಂದೇಹವಾಗಿ ಹಳಗನ್ನಡ. ಪಂಪಾದಿಗಳ ಕಾಲದ ಕನ್ನಡಕ್ಕಿಂತ ರೂಪ ವ್ಯತ್ಯಾಸಗೊಂಡು ಬೇರಾದುದಲ್ಲ. ಇಲ್ಲಿ ಬರುವ ಪ್ರಕೃತಿ ಪ್ರಯೋಗ, ವ್ಯಂಜನಾಂತಗಳು ಸ್ವರಾಂತಗಳಾಗುವಿಕೆ, ಶಕಟರೇಫ ರಳಕುಳ ಭೇದಗಳ ಉಪೇಕ್ಷೆ, ಶಿಥಿಲಪ್ರಯೋಗ, ಬಿಂದುಚ್ಯುತಿ, ವಿಜಾತೀಯ ಸಂಯುಕ್ತಾಕ್ಷರಗಳು ಸಜಾತೀಯಗಳಾಗುವಿಕೆ —ಇವುಗಳನ್ನೆಲ್ಲ ಪರೀಶೀಲಿಸಿದರೆ ಹಳಗನ್ನಡಕ್ಕೆ ಸಲ್ಲದ ಕೆಲವು ಲಕ್ಷಣಗಳು ಕಾಣುತ್ತಿವೆ ಯೆಂಬುದು ದಿಟ. ಇವುಗಳಲ್ಲಿ ಒಂದೋ ಎರಡೋ ಲಕ್ಷಣಗಳು ಪಂಪಾದಿ ಗಳಲ್ಲಿಯೂ ಕ್ವಚಿತ್ಪ್ರಯೋಗಗಳಲ್ಲಿ ಕಾಣುತ್ತವೆ. ಆದರೆ ಇಲ್ಲಿ ಅದು ಕ್ವಚಿತ್ಪ್ರಯೋಗವಲ್ಲ, ಸಾಮಾನ್ಯ ಪ ಯೋಗಗಳು. ಮದನ ತಿಲಕದಲ್ಲಿ ಕಂಡು ಬರುವ ಈ ಅಧಿಕ ಪ್ರಯೋಗಗಳನ್ನು ಪ್ರತಿಕಾರರ ಪ್ರಮಾದ ಜನ್ಯವೆಂದು ಭಾವಿಸದೆ, ೧೧ ನೆಯ ಶತಕದ ಪೂರ್ವಾರ್ಧದಷ್ಟು ಮುಂಚಿನ ಕಾಲದಲ್ಲಿಯೆ, ಈ ಪ್ರೌಢಶೈಲಿಯ ಚಂಪೂಗ್ರಂಥದಲ್ಲಿ ಹಳಗನ್ನಡವು ಹೊಸಗನ್ನಡವಾಗುವ ಮಟ್ಟಿಗೆ ಭಾಷೆಯು ಬದಲಾಯಿಸಿತ್ತೆಂದು ಭಾವಿಸುವುದು ಸರಿಯಾಗಲಾರದು.

ಹಾಗಾದರೆ ಮದನತಿಲಕದಲ್ಲಿ "ಪೇಟ್ದಿನೆಸೆಯೆ ಪೊಸ ಕನ್ನಡದಿಂ" ಎಂದು ಹೇಳಿರುವುದರ ಉಪಯುಕ್ತತೆಯೇನು? ಇದು ವಿಚಾರಣೀಯ.

ಬಹುಶಃ 'ಹೊಸಗನ್ನಡ' ಎಂಬ ಮಾತನ್ನು ಇವನೇ ಮೊದಲು ಎತ್ತಿದವನಿರಬೇಕು, ಈ ಗ್ರಂಥವನ್ನು "ಪೇೞ್ದಿನೆಸೆಯೆ ಪೊಸಗನ್ನಡದಿಂ ಎಂಬುದರಿಂದ ಈತನು ಆ ಕಾಲದ ಹಳಗನ್ನಡವನ್ನು ಬಿಟ್ಟು ಹೊಸಗನ್ನಡದಲ್ಲಿ ಬರೆದಿರಬಹುದು" ಎಂದಿರುವ ಕವಿಚರಿತೆಕಾರರ ಅಭಿಪ್ರಾಯ, ಚಂದ್ರರಾಜನು ಹಿಂದಿನ ಕನ್ನಡವನ್ನು ಬಿಟ್ಟು ಅಂದಿನ ಕನ್ನಡದಲ್ಲಿ ಬರೆದನೆಂದಿರಬಹುದು. "ಪೇೞ್ದಿನೆಸೆಯೆ ಪೊಸ ಕನ್ನಡದಿಂ" ಎಂದು ಹೇಳಿಕೊಳ್ಳುವುದರಿಂದ ಈತನ ಕಾಲದಲ್ಲಿ (ಕ್ರಿ.ಶ. ೧೧ನೇ ಶತಮಾನದ ಮಧ್ಯಭಾಗ) ಭಾಷೆಯು ಅದೇ ಆಗ ಹೊಸತಾಗಿ ರೂಪುಗೊಳ್ಳುತ್ತಿತ್ತೆಂದು ತಿಳಿಯಬಹುದು—ಎಂದಿರುವ ಮದನ ತಿಲಕದ ಸಂಪಾದಕರ ಅಭಿಪ್ರಾಯಕ್ಕೆ ಕೃತಿಯ ಈ ಒಂದು ಮಾತಿನ ಸಮರ್ಥನೆ ಸಾಲದೆನ್ನಬೇಕು. ಮದನತಿಲಕದ ಪ್ರಸಕ್ತ ಪ್ರತಿಯ ಪಾಠಗಳು ಈ ಮಾತನ್ನು ಪೋಷಿಸುವುದಾದರೂ ಸೂಕ್ತಿಸುಧಾರ್ಣವದಲ್ಲಿ ಉದ್ಧೃತವಾದ ಪದ್ಯಪಾಠಗಳನ್ನು ನೋಡಿದರೆ ಬೇರೊಂದು ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. "ಕಾಮಶಾಸ್ತ್ರವನ್ನೂ ಚಿತ್ರಕವಿತ್ವವನ್ನೂ ಕನ್ನಡ ನುಡಿಯಲ್ಲಿ ಹಾಗೂ ಕನ್ನಡ ಛಂದೋರೂಪಗಳಲ್ಲಿ ನಿರೂಪಿಸಿದ್ದಕ್ಕೆ ಪೊಸಗನ್ನಡ ಎಂದಿರಬಹುದೇ?" —ಎಂಬ ಪ್ರೊ|| ಮುಗಳಿಯವರ ಸೂಚನೆಯನ್ನು ಒಪ್ಪಬಹುದು; ಆದರೆ ಅದೇ ಕವಿಯ ಆ ಶ ಯ ವಿ ದ್ದೀ ತೆಂ ದು ದೃಢವಾಗಿ ಹೇಳಲಾದೀತೆ? "ಪೊಸಗನ್ನಡ ಎಂಬುದು ವ್ಯಾಕರಣ ರೂಪಗಳಿಗಿಂತ ಶಬ್ದಕೋಶಕ್ಕೆ ಸಂಬಂಧಪಟ್ಟಿದೆ" ಎಂಬ ಅವರ ಮಾತಿನ ಆಶಯ ಏನೆಂದು ಸ್ಪಷ್ಟಪಡುವುದಿಲ್ಲ. ಸಂಸ್ಕೃತ ಕಾಮಶಾಸ್ತ್ರಗಳಲ್ಲಿ ಅಭಿವ್ಯಕ್ತವಾದ ಮುನಿಮತವನ್ನು ಕನ್ನಡದಲ್ಲಿ—ಹೊಸದಾದ, ಸ್ವಾರಸ್ಯವಾದ, ಆಕರ್ಷಕವಾದ ಕನ್ನಡದಲ್ಲಿ ಚಂದ್ರನು ಹೇಳಿದನು ಎಂದು ಹೇಳಬಹುದೆ? ಇದನ್ನು ಅಲ್ಲವೆಂದರೂ "ಹೊಸಗನ್ನಡ ಭಾಷೆಯ ಅವಸ್ಥೆಯ ಪುರಸ್ಕರ್ತನಾಗಿ ಅವನು ತನ್ನ ಗ್ರಂಥವನ್ನು ಬರೆದಿಲ್ಲ" ವೆಂಬುದನ್ನಂತೂ ಒಪ್ಪಿಕೊಳ್ಳಬೇಕು.

ಮದನತಿಲಕದ ಮುದ್ರಿತ ಪ್ರತಿಯ ಕೆಲವು ಭಾಷಾರೂಪಗಳನ್ನು ಇಲ್ಲಿ ಪಟ್ಟಿಮಾಡಿ ಆವಶ್ಯಕವಿರುವೆಡೆ ಟಿಪ್ಪಣಿ ಬರೆದಿದೆ:

೧. ಸಾಧಾರಣವಾದ ಶಬ್ದಗಳಿಂದ ಹಿಡಿದು ಸಾಮಾನ್ಯವಾಗಿ ಎಲ್ಲ ೞಕಾರಾಂತ ಶಬ್ದಗಳೂ ಳಕಾರಾಂತವಾಗಿವೆ: ಪೇಳ್, ನೆಗಳ್, ಅಳಲ್, ಅಳಿ,

ಪಳಿ, ಇಳಿ, ಉಳಿ, ಏಳ್, ಸೂಳ್, ಪಾಳಿ, ಪೊಗಳ್, ಮೂಳ್ಕುಂ ಇ. ಕ್ವಚಿತ್ತಾಗಿ ಅಟ್ಕಿಜಿಟ್ (ಪು. ೪೧) ಎಂಬ ಪ್ರಯೋಗವಿದೆ. ಗ ಪ್ರತಿಯಲ್ಲಿಯೂ ಈ ರಳಕುಳ ಭೇದದ ಉಪೇಕ್ಷೆಯಿರುವುದಾದರೂ ಸೂಕ್ತಿಸುಧಾರ್ಣವದ ಪದ್ಯ ಪಾಠಗಳಲ್ಲಿ ಇವುಗಳ ನಿರ್ದಿಷ್ಟ ಪ್ರಯೋಗವಿದೆ.

೨. ಶಕಟರೇಫಯುಕ್ತ ಶಬ್ದಗಳು ಸಾಮಾನ್ಯ ರೇಫಯುಕ್ತಗಳಾಗಿವೆ : ಬೇರೆ, ಪೆರರ್, ಅರಿ, ಮೂರು, ಕುರಿ ಇ. ಕ್ವಚಿತ್ತಾಗಿ ಅಱಿ (ಪು.೪೧, ೪೨), ಪೆಱರ್ (೧೩) ಪ್ರಯೋಗವಿದೆ. ಮೇಲಿನ ಟಿಪ್ಪಣಿ ಇಲ್ಲಿಗೂ ಅನ್ವಯಿಸುತ್ತದೆ.

೩. ವಿಜಾತೀಯ ದ್ವಿತ್ವಗಳು ಸಜಾತೀಯಗಳಾಗಿವೆ : ಕೆಪ್ಪು, ನಿಮಿಕ್ಕೆ, ಬಪ್ಪ, ಪೊತ್ತು, ಪೊತ್ತರ್, ತೊತ್ತು, ಅತ್ತು, ಮನೆವಾರ್ತೆ, ಉಕ್ಕೆವ, ಕಿಚ್ಚು, ಸೊಕ್ಕು, ಕತ್ತಲೆ, ಇಕ್ಕೆ, ಇಪ್ಪುದು ಇ. ಇವುಗಳಲ್ಲಿ ಕಿಚ್ಚು, ಉಕ್ಕೆವ ಮುಂತಾದವು ಪೂರ್ವ ಪ್ರಯೋಗಗಳೇ ಆದರೂ ಹೊಸದಾಗಿ ಮಾರ್ಪಟ್ಟವೂ ಇವೆ.

೪. ಪ್ರಕೃತಿ ಪ್ರಯೋಗ : ಕೆಲವೆಡೆ ಪ್ರಮಾದವಶದಿಂದಾಗಿ ಶಬ್ದಗಳು ಪ್ರಕೃತಿಪ್ರಯೋಗಗಳಾಗಿ ನಿಂತಿದ್ದರೂ ಮತ್ತೆ ಕೆಲವೆಡೆ ಸಹಜವಾಗಿಯೇ ಆಗಿರುವುದುಂಟು. ಪ್ರಕೃತಿ ಪ್ರಯೋಗಗಳಾಗುವುದು ಇದೇ ಹೊಸದೇನಲ್ಲ; ಹಿಂದೆ ಆದ ಉದಾಹರಣೆಗಳಿವೆ. ಎಂದಮೇಲೆ ಭಾಷೆಯ ವ್ಯತ್ಯಾಸದ ದೃಷ್ಟಿಯಿಂದ ಇದನ್ನು ವಿಶೇಷವೆಂದು ಪರಿಗಣಿಸಲಾಗದು. ಉದಾ: ಸಂತತ (ಪು. ೭೦), ತೇರ್ಕು (೭೧) ವಾಯುಜ (೬೫) ಅಕ್ಕು (೫೫). ಹಾಗೆಯೇ ಸೂಕ್ತಿ ಸುಧಾರ್ಣವದಲ್ಲಿ ಉದ್ಧೃತವಾದ ಈ ಪದ್ಯಾರ್ಧವನ್ನು ನೋಡಿ:

ರತಿಹೀನ ಪೆಟಿವ ಕುಬ್ಜಂ
ಮತಿವಂತಂ ನಾಡೆ ವೃದ್ಧ ಕೃಶಗರ್ಹಿತನುಂ . . .

೫. ಉಬ್ಬಿಗಿಸು> ಉಬ್ಬುಗಿಸು* (ಪು. ೪೫) ಎಂಬ ಶಿಥಿಲ ಪ್ರಯೋಗ, ಚಾಳುಕ್ಯ > ಚಾಣುಕ್ಯ (ಪು. ೨) ಎಂಬ ಳ—ಣ ವ್ಯತ್ಯಯ, ಸಾಂದು> ಸಾದು† (ಪು.೬೫) ಎಂಬ ಬಿಂದುಚ್ಯುತಿ ಕ್ವಚಿತ್ಪ್ರಯೋಗಗಳಂ.

---

*ಶಬ್ದಮಣಿದರ್ಪಣದಲ್ಲಿ 'ಉಬ್ಬುಗು' 'ಉಬ್ಬುಗಿದಂ' ಎಂಬ (ಪು. ೧೯) ರೂಪಗಳೇ ಇವೆ. ಪಂಪಭಾ: ಉಬ್ಬ್ಗ. ೪-೪೨ವ.)ಉಬ್ಬುಗಿಸು(೩-೭೩.).

† ಮದನತಿಲಕದ ಪು. ೬೮ರಲ್ಲಿ ಸಬಿಂದುಕ ಪ್ರಯೋಗವಿದೆ (ಚಂದ್ರಿಕೆಯುಂ ಸಾಂದುಂ, . .)

೬. ಕೆಲವೆಡೆ ವ್ಯಂಜನಾಂತ ನಾಮಗಳೂ ಧಾತುಗಳೂ ಸ್ವರಾಂ
ಗಿವೆ. ಇದರಿಂದ ಭಾಷಾಸೌಷ್ಠವ ಶಿಥಿಲವೂ ವಕ್ರವೂ ಆಗಿ ಕಂ
ಇವುಗಳನ್ನು ಸರಿಪಡಿಸಿಕೊಳ್ಳುವುದು ಸಾಧ್ಯ, ಅಲ್ಲದೆ ಆವಶ್ಯಕ. ಇ
ಛಂದೋಬಂಧಗಳ ಅರ್ಥಾನ್ವಯಗಳ ಎಷ್ಟೋ ಕ್ಲೇಶಗಳು ಪರಿಹಾ
ಸ್ವಲ್ಪಮಟ್ಟಿಗೆ ಹಳೆಯ ಪ್ರತಿಯ ಹೊಳಹು ಮೂಡುತ್ತದೆ ಇಲ್ಲಿ
ಬರುವ ಎಷ್ಟೋ ಆಧುನಿಕವೂ ವಿಕೃತವೂ ಆದ ಶಬ್ದರೂಪಗಳನ್ನು ಕ
ತಲೆಗೆ ಕಟ್ಟುವುದು ಸರಿಯಾಗಲಾರದು. ಆಗೊಮ್ಮೆ ಈಗೊಮ್ಮೆ ಛಂ
ತೊಡಕಾಗುವ ನಿದರ್ಶನಗಳಿವೆಯೆಂಬುದು ನಿಶ್ಚಯ.* ಆದರೆ
ಅನ್ಯಪ್ರಮಾಣಗಳಿಂದ ಸರಿಪಡಿಸಿಕೊಳ್ಳಬೇಕು. ಆವಶ್ಯಕವದೆಡೆಗಳಲ್ಲಿ
ಸುಧಾರ್ಣವದ ಪದ್ಯಪಾಠಗಳ ಸಹಾಯವನ್ನು ಅಂಗೀಕರಿಸಬಹುದು.
ಪದ್ಯ ನೋಡಿ:

ಗುರುಗಳ ನಂಟರ ಕೆಳೆಯಂ
ಪೊರೆವಾಳ್ದನ ಮೆಚ್ಚದವರ ಸವತಿಯ ಕೆಲದೊಳು
ಪರಿಭವಿಸಲು ನರನೆತ್ತಲು
ಕರಮುಳಲಿಸಲಾಗದಾತ್ಮವಧುವಂ ಸತಿಯಂ (ಮುದತಿ ೮-೧೩)

ಈ ಪದ್ಯದ ಸೂಕ್ತಿ ಸುಧಾರ್ಣವದ ಪಾಠ ನೋಡಿ :

ಗುರುಗಳ ನಂಟರ ಕೆಳೆಯರ
ಪೊರೆವಾಳ್ದನ ಮೆಚ್ಚದವರ ಸವತಿಯ ಕೆಲದೊಳ್
ಪರಿಭವಿಸಲ್ ನೆಱನೆತ್ತಲ್
ಕರಮುೞಲಿಸಲಾಗದಾತ್ಮಸತಿಯಂ ಚದುರಂ

ಮೇಲಿನ ಟಿಪ್ಪಣಿಗೆ ಈ ಪದ್ಯವೇ ಟೀಕೆಯೆಂಬಂತಿದೆ

---

‡ ಮುದತಿ ; ೧೧-೫೧ ನೋಡಿ

*೧-೫೩ರಲ್ಲಿ ೨ನೇ ಪಾದದ ೩ನೇ ಗಣ ನೋಡಿ.

೭. ಹಲವಾರು ಪದಗಳು ತಪ್ಪಾಗಿ ಬರೆಯಲ್ಪಟ್ಟಿವೆ; ಅವುಗಳಲ್ಲಿ ವನ್ನು ಇಲ್ಲಿ ಕೊಟ್ಟಿದೆ: ಬದ್ಧ <ಬಟ್ಟಿ (೪೪) ಬೆಡಂಬೆ <ಬೆದಂಡೆ (೫೧) ರಿ <ಮೂರಿ (೫೩) ಸಾಗುರ್ಗಂ <ಸಾಲ್ಗುಂ (೫೫) ಮೆಡಲ್ಪಡಿಸು < ಟ್ಟಿಡಿಸು (೬೬)

೮. ಕೆಲವು ಗಮನಾರ್ಹವಾದ ಶಬ್ದಗಳನ್ನೂ ಶಬ್ದರೂಪಗಳನ್ನೂ ಈ ಂಥದಲ್ಲಿ ಕಾಣಬಹುದು: ಅನುಭವಣೆ, ಉಣ್ಣಲ್ಪಡು, ಕಲ್ಲನ್ (ಕಲ್. ಧಾ.), ವಡಿಸು, ಬರ್ಚಿಸು, ಕೈಮುತ, ತೇಂಕರಿಸು, ಜಲಜಕ್ಕಿ, ಕಿಟ್ಟಮೆ, ಮಿಟ್ಟನ್ನ, ಳಿಗ, ಗುಂಡನ್, ರಗಳೆಗೆಯ್. ಬಳರಿ, ವೆಮರ್ಕುಂ, ವಕ್ಕುಂ, ಹುರುಗಿಲಿ, ಟ್ಟುಗುಳಿ, ಪದಿರ್, ಹಾಯುಂ, ಮನಗುಡು.

೯. ಪ್ರಾಸಸ್ಥಾನದಲ್ಲಿ ಟ-ಳ ಮಿಶ್ರಣ (೫-೧೦, ೧೦-೮, ೧೧-೫೧), -ಳ ಮಿಶ್ರಣ (೧೧-೪೯). ಲ-ಳ ಮಿಶ್ರಣ (೯-೧, ೧೦-೭೮, ೧೦-೮೬), -ರ ಮಿಶ್ರಣ (೧-೫೪), ಅಲ್ಪಪ್ರಾಣಕ್ಕೆ ಮಹಾಪ್ರಾಣ (೧-೩೨), ಅಕಾರಕ್ಕೆ ರ್ತಿಯಾಗಿ ರಕಾರ (೮-೯, ೧೦-೯೮, ೪೯, ೧೧-೩೮, ೪೨) ಕಂಡು ರುವುದಲ್ಲದೆ ಕೆಲವೆಡೆಗಳಲ್ಲಿ ಪ್ರಾಸ ಕೆಟ್ಟಿರುವುದೂ ಕಾಣುತ್ತವೆ (೧-೪೫, -೪೯, ೧-೭೪, ೮-೧೦, ೮-೬೪, ೯-೭, ೧೧-೨೪.)

ಛಂದಸ್ಸು

ರಸದೃಷ್ಟಿಯಿಂದ ಅಷ್ಟೇನೂ ಗಣ್ಯವಲ್ಲವ ಮದನತಿಲಕ ಛಂದಸ್ಸಿನ ಷ್ಟಿಯಿಂದ, ಚಿತ್ರಕವಿತ್ವದ ದೃಷ್ಟಿಯಿಂದ* ಅಗ್ರಗಣ್ಯವಾಗಿದೆ. ವಿವಿಧ

* ಛಂದೋಂಬುದಿಯಲ್ಲಿ ಇಲ್ಲದ ಪದ್ಯಜಾತಿಗಳಂತೆ ಕಾವ್ಯಾವಲೋಕನದಲ್ಲಿ ಲ್ಲದ ಚಿತ್ರಕವಿತಾಭೇದಗಳೂ ಇಲ್ಲಿವೆ. ಕಾವ್ಯಾವಲೋಕನದ ಶಬ್ದಾಲಂಕಾರ ಪ್ರಕರಣದಲ್ಲಿ ೧ನೆಯ ಪದ್ಯವಾದ ವೇಳೆ "ಸರ್ವತೋಭದ್ರಂ ಲಕ್ಷ್ಯವನಜೆಸಿದಕೊಳ್ಳದು" ಬ ಮಾತಿಗೆ ಕೊಟ್ಟಿರುವ ಅಡಿಟಿಪ್ಪಣಿಯ ಪದ್ಯ ಮದನತಿಲಕದಿಂದ ಉದ್ಧೃತವಾದುದಿರ ಕು. ಇದು 'ಮದತಿ' ದಲ್ಲಿ 'ಕಿಜಿಯ ಸರ್ವತೋಭದ್ರ'ಕ್ಕೆ ಲಕ್ಷ್ಯವಾಗಿದೆ. ಮದನ ಕವಲ್ಲಿ 'ಕುಸುಮಾ ಮನೋಹರಂ' ಎಂದಿದ್ದರೆ, ಕಾವ್ಯಾವಲೋಕನದಲ್ಲಿ 'ಕುಸುಮ ನೋಹರಂ' ಎಂದು ಪ್ರತಿಪಾದದಲ್ಲಿಯೂ ಇದೆ.

ವೃತ್ತಜಾತಿಗಳನ್ನು ಉಪಯೋಗಿಸಿ ಶಾಸ್ತ್ರವೊಂದನ್ನು ಬರೆಯಬೇಕೆಂದು ಅವನ ಸಂಕಲ್ಪವಾಗಿರಬಹುದು. "ನಾನಾಛಂದದಿನೈಸೂರು ಗದ್ಯಪದ್ಯಂಗಳಿಂ ವಿಶ್ರುತಂ ಮಾಡಿ ಪೇಟ್ದಂ", "ಅಖಿಳ ನಾನಾ ಛಂದಕ್ಕಧಿಕೃತಮಿದೆಂದು ಪೇಟ್ವುದು ಬುಧಮಂಡಳಿ . . . " "ಪಲವು ಛಂದದೊಳೊಗೆದಂಭೋಜಾಸ್ಯ ಚಂದ್ರನಭಿವರ್ಣಿಸಿದಂ", "ಕಾವ್ಯಾಲಂಕಾರ ನೀತಿ ನಿಬಂಧನಮಂ ಛಂದೋಮಹಾರ್ಣವಮುಂ . . . " ಎನ್ನುವ ಮಾತುಗಳೆಲ್ಲ ಈ ಸಂಕಲ್ಪವನ್ನು ಎತ್ತಿ ಸಾರುತ್ತವೆ.

ಚಂದ್ರರಾಜನು ಕೃತಿಯಲ್ಲಿ ಪ್ರತ್ಯಕ್ಷವಾಗಿ ಸುಮಾರು ಐವತ್ತೆರಷ್ಟು ವೃತ್ತಜಾತಿಗಳನ್ನು ಬಳಸಿದ್ದಾನೆ. ಇವುಗಳಲ್ಲಿ ಚಂಪೂ ಗ್ರಂಥಗಳಲ್ಲಿ ವಿಶೇಷವಾಗಿ ಬಳಕೆಯಾಗುವ ಖ್ಯಾತ ಕರ್ಣಾಟಕಗಳಲ್ಲಿ ಮತ್ತೇಭವಿಕ್ರೀಡಿತ ಚಂಪಕಮಾಲೆಗಳು ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿದ್ದು ಉಳಿದ ಉತ್ಪಲಾದಿಗಳು ಕಡಿಮೆ ಸಂಖ್ಯೆಯಲ್ಲಿವೆ. ಇದು ಗಮನಾರ್ಹವಾದದ್ದು. ಕಂದಪದ್ಯಗಳು† ಎಲ್ಲಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬಂದಿವೆ. ಇವಲ್ಲದೆ ವಿರಳಪ್ರಯೋಗದ ವಿವಿಧ ವೃತ್ತಜಾತಿಗಳು ಪ್ರಾತಿನಿಧ್ಯ ದೃಷ್ಟಿಯಿಂದ ಒಂದೋ ಎರಡೋ ಬಂದಿವೆ. ಇಷ್ಟು ಸಣ್ಣ ಪ್ರಮಾಣದ ಗ್ರಂಥದಲ್ಲಿ ಇಷ್ಟು ಹೆಚ್ಚಿನ ವೃತ್ತಜಾತಿಗಳ ಬಳಕೆ ಗಮನಾರ್ಹವಾದದ್ದು. ಮೊದಲನೆಯದೆಂಬ ಕಾರಣದಿಂದ ಮಾನ್ಯವಾದದ್ದು.

ಚಂದ್ರರಾಜನು ಸಂಸ್ಕೃತ ಕನ್ನಡ ವೃತ್ತಜಾತಿಗಳೆರಡನ್ನೂ ಬಳಸಿದ್ದಾನೆ. ಇವುಗಳಲ್ಲಿ ಪೂರ್ವಕವಿ ಪ್ರಯುಕ್ತವಲ್ಲದವನ್ನೇ ಮಿಗಿಲಾಗಿ ಬಳಸಬೇಕೆಂಬ ಲಕ್ಷ್ಯ ಅವನಿಗಿರುವಂತೆ ಕಾಣುತ್ತದೆ. ಹಾಗಲ್ಲದಿದ್ದರೂ ಪೂರ್ವಕವಿ ಪ್ರಯುಕ್ತವಾದ ವಿರಳಛಂದಗಳನ್ನು ಒಗ್ಗೂಡಿಸಿ ಪ್ರದರ್ಶಿಸುವ ಬಗೆಯೂ ಇರಬಹುದು.

---

† ಕಂದಪದ್ಯಗಳಲ್ಲಿ ಕೆಲವೆಡೆ ಶಬ್ದಚಮತ್ಕಾರಗಳನ್ನು ತಂದು ಆದಿಯಮಕದ ಕಂದ, ಕಿರ್ಗೊತ್ತಿನ ಕಂದ, ಶ್ಲೇಷೆಯ ಕಂದ, ಏಕಾಕ್ಷರಿ ಕಂದ, ತ್ರ್ಯಕ್ಷರಿಕಂದ, ದ್ವ್ಯಕ್ಷರಿಕಂದ, ಅಕಾರಾಂತಕಂದ, ನಿರೋಷ್ಠ್ಯಕಂದ, ಓಕಾರಾಂತ ಕಂದ, ಓಕಾರಾಂತಮುಮೇಕಾರಾಂತಮುಮೊಡಗೂಡಿದ ಕಂದ, ಅರ್ಧಕಂದ-ಹೀಗೆ ವೈವಿಧ್ಯಗಳನ್ನು ಹೇಳಿದ್ದಾನೆ. ಕಂದಪದ್ಯಗಳಿಂದ ಬೇರೆ ಕೆಲವು ಜಾತಿಯ ವೃತ್ತಗಳನ್ನು ಉದ್ಧರಿಸಬಹುದೆಂಬ ಕವಿಯ ಛಂದಸ್ಸಿನ ಚಮತ್ಕಾರವೂ ಶ್ಲಾಘ್ಯವಾಗಿದೆ.

ಸಂಸ್ಕೃತ ವೃತ್ತಜಾತಿಗಳಲ್ಲಿ ಅವನು ವರ್ಣವೃತ್ತಗಳಲ್ಲಿ ಸಮಚತುಷ್ಪದೀ ವೃತ್ತಗಳನ್ನು ಹೆಚ್ಚಾಗಿಯೂ ವಿಷಮಚತುಷ್ಪದೀ ವೃತ್ತ, ಅರ್ಧಸಮಚತುಷ್ಪದೀವೃತ್ತ, ಮಾಲಾವೃತ್ತ, ಮಾತ್ರಾವೃತ್ತ ಜಾತಿಗಳನ್ನು ವಿರಳವಾಗಿಯೂ ಬಳಸಿದ್ದಾನೆ. ಕನ್ನಡ ಜಾತಿ ಛಂದಸ್ಸಿನಲ್ಲಿ ತ್ರಿಪದಿ, ಚೌಪದಿ, ಷಟ್ಪದಿ, ಎಡೆಯಕ್ಕರ, ನಡುವಣಕ್ಕರ, ಪಿರಿಯಕ್ಕರಗಳನ್ನು ನೇರವಾಗಿ ಕೊಟ್ಟು ಯಾವುದಾದರೊಂದು ವೃತ್ತಮೂಲದಿಂದ ಕಿಱಿಯಕ್ಕರ, ದೊರೆಯಕ್ಕರ, ಗೀತಿಕೆಗಳನ್ನು ಬಿಡಿಸಬಹುದೆಂದು ಸೂಚಿಸಿದ್ದಾನೆ.* ಈ ದೃಷ್ಟಿಯಿಂದ ಅವನ ಕೃತಿ ಕನ್ನಡ ಜಾತಿ ಛಂದಸ್ಸಿನ ಚರಿತ್ರೆಗೆ ಸಹಾಯಕ ಸಾಮಗ್ರಿಯನ್ನು ಒದಗಿಸುತ್ತದೆ. ಹಾಗೆಯೇ ನೇರವಾಗಿ ಹಲವು ಸಂಸ್ಕೃತ ವೃತ್ತ ಜಾತಿಗಳನ್ನು ಬಳಸಿರುವುದರ ಜತೆಗೆ ಯಾವುದಾದರೊಂದು ವೃತ್ತಮೂಲದಿಂದ ಮತ್ತೆ ಕೆಲವನ್ನು ಬಿಡಿಸಿ ತೆಗೆಯಬಹುದೆಂಬ ಸೂಚನೆಯಿದೆ. ಈ ಸೂಚನೆಗಳು ಪ್ರಯೋಗಪರೀಕ್ಷೆಯಿಂದ ಖಾತರಿಪಡುತ್ತದೆ. ಇದನ್ನು ಸ್ವಲ್ಪಮಟ್ಟಿಗೆ ಮುಂದೆ ಮಾಡಿ ತೋರಿಸಿದೆ. ಚಂದ್ರರಾಜನು ಸ್ವಂತವಾಗಿ ಇಂತಹ ಪ್ರಯೋಗಗಳನ್ನು ನಡೆಸಿ ಲಕ್ಷ್ಯಗಳನ್ನು ಕೊಟ್ಟಿದ್ದಾನೆಂಬುದನ್ನು ನಂಬಬಹುದು ಅವನ ಪರಿಶ್ರಮ, ಪ್ರಯೋಗಕೌಶಲ, ಪ್ರಾವೀಣ್ಯಗಳನ್ನು ತಿಳಿಯುವುದಕ್ಕೆ ಅವನ ೧–೨೨ರ 'ಅಂಗನ್ಯಪಾಯತಿ . . . ಎಂಬ ವನಮಂಜರೀವೃತ್ತವೇ ಸಾಕು. ಅಲ್ಲದೆ ವೃತ್ತಗಳನ್ನು ವಿವಿಧ ಛಂದೋಬಂದಗಳಲ್ಲಿ ಅನ್ವಯಿಸಲು ಸಾಧ್ಯವಾಗಿರುವಂತೆ ವಿವಿಧ ಚಿತ್ರಬಂಧಗಳಿಗೂ ಅನ್ವಯಿಸಬಹುದೆಂದು ಕವಿ ಕಂಡಿರುವ ಸಾಧ್ಯತೆ ಶ್ಲಾಘನೀಯ.

ಯಾವುದೇ ವೃತ್ತಜಾತಿಯ ಉದಾಹರಣೆಯನ್ನು ನಾವು ಪರೀಕ್ಷಿಸುವ ಮೊದಲು ಅವು ಬಹುಮಟ್ಟಿಗೆ ಅಪಪಾಠಗಳ ದೆಸೆಯಿಂದ ಲಕ್ಷಣಾನ್ವಿತವಾಗದಂತೆ ಕೆಟ್ಟಿರುವುದನ್ನು ಗಮನಿಸಬೇಕಾಗಿದೆ. ಇವುಗಳಲ್ಲಿ ಕೆಲವು ಅಪಪಾಠಗಳನ್ನು ಅಡಿಟಿಪ್ಪಣಿಯ ಪಾಠಗಳಿಂದ ಸರಿಪಡಿಸಿಕೊಳ್ಳಬಹುದು. ಆದರೆ ಉತ್ತಮ ಮಾತೃಕೆಗಳು ದೊರೆತು ಶುದ್ಧಪಾಠಗಳು ಕಾಣುವವರೆಗೆ

---

*ಚಂದ್ರರಾಜನು ನಾಗವರ್ಮನ ಛಂದೋಂಬುಧಿಯನ್ನೂ ಜಯಕೀರ್ತಿಯೇ ಮೊದಲಾದ ಸಂಸ್ಕೃತ ಲಾಕ್ಷಣಿಕರ ಗ್ರಂಥಗಳನ್ನೂ ನೋಡಿರಬಹುದೆಂದು ಹೇಳಲು ಅವಕಾಶವಿದೆ.

ಉದಾಹರಣೆಗಳು ಸರ್ವಸಮರ್ಪಕವೆಂದು ಹೇಳಲಾಗದು. ತಿದ್ದುಪಡಿ ಅನಗತ್ಯವಾದ ಉದಾಹರಣೆಗಳಿದ್ದರೆ, ಅರ್ಥದ ದೃಷ್ಟಿಯಿಂದ ಭಾಷಾದೃಷ್ಟಿಯಿಂದ ಅವುಗಳೂ ಪರಿಷ್ಕೃತವಾಗಬೇಕು.

ಕಾಲಮಾನ ಹಾಗೂ ಉಪಯುಕ್ತತೆ ದೃಷ್ಟಿಯಿಂದ ಇಲ್ಲಿಯ ಕನ್ನಡಜಾತಿ ಛಂದಸ್ಸಿನ ಉದಾಹರಣೆಗಳು ವಿರಳವಾದ, ವಿಶಿಷ್ಟವಾದ ರಚನೆಗಳು. ತ್ರಿಪದಿ ಪಿರಿಯಕ್ಕರಗಳಿಗೆ ಪೂರ್ವಪ್ರಯೋಗಗಳಿದ್ದರೂ ಇಲ್ಲಿ ಬಂದಿರುವ ಇವುಗಳ ಪ್ರಸಕ್ತಿ ಎಲ್ಲಿಯೂ ಬಂದಂತಿಲ್ಲ. ಸಾಮಾನ್ಯವಾಗಿ ಪಿರಿಯಕ್ಕರಗಳು ಚಂಪೂ ಕಾವ್ಯಗಳಲ್ಲಿ ಪ್ರಾತಿನಿಧ್ಯಕ್ಕೆಂಬಂತೆ ಕ್ವಚಿತ್ತಾಗಿ ಬಂದಿರುತ್ತವೆ; ಉತ್ಪಲಾದಿಗಳು ವಿಶೇಷವಾಗಿ ಬಂದಿರುತ್ತವೆ. ಇಲ್ಲಿ ಪಿರಿಯಕ್ಕರಗಳೇ ಸಂಖ್ಯೆಯಲ್ಲಿ ಅಧಿಕವಾಗಿದ್ದು, ಉತ್ಪಲಾದಿಗಳು ಕಡಿಮೆಯಾಗಿವೆ.† ಚಂದ್ರರಾಜನಿಗೆ ದೇಸಿ ಶೈಲಿಗಿಂತ ದೇಸಿ ಛಂದಸ್ಸುಗಳ ಬಳಕೆಯಲ್ಲಿ ಪ್ರೀತಿ ಹೆಚ್ಚಾಗಿರುವಂತೆ ಕಾಣುತ್ತದೆ. ಹಳೆಯ ಚಂಪೂಮಾರ್ಗದಲ್ಲಿ ಕವಿ ಕಾಣಿಸಿರುವ ಹೊಸತನ ಇದು. ಹಳಗನ್ನಡದಲ್ಲಿ ಇಷ್ಟು ಸಂಖ್ಯೆಯಲ್ಲಿ ಪಿರಿಯಕ್ಕರಗಳು ಬಳಕೆಯಾಗಿರುವ ಕಾವ್ಯಗಳು ಬೇರೆ ಇರಲಾರವು. ಈ ಚಿಕ್ಕ ಕೃತಿಯಲ್ಲಿ ಸು.೨೫ ಪಿರಿಯಕ್ಕರಗಳು ಬಳಕೆಯಾಗಿವೆ. ಅಪಪಾಠಗಳ ದೆಸೆಯಿಂದ ಗಣವಿನ್ಯಾಸವನ್ನು ಗುರುತಿಸುವುದಕ್ಕೆ ಅಲ್ಲಲ್ಲಿ ತೊಡಕಾಗುವುದಾದರೂ ರಚನೆಯ ದೃಷ್ಟಿಯಿಂದ, ವಿಷ್ಣುಗಣಗಳೆಡೆ ಬ್ರಹ್ಮಗಣಗಳು ಬರುವ ವಿನ್ಯಾಸವೈವಿಧ್ಯ ದೃಷ್ಟಿಯಿಂದ ಪಿರಿಯಕ್ಕರವು ಎಪ್ಪರಮಟ್ಟಿಗೆ ಜಾನಪದ ಶ್ರಾವ್ಯ ಛಂದವೆಂದು ತಿಳಿಯಬಹುದು.

ಇಲ್ಲಿ ಬಳಕೆಯಾಗಿರುವ ಒಂದೇ ತ್ರಿಪದಿ ಸ್ವಲ್ಪ ತಿದ್ದುಪಡಿಯಾದರೆ ಲಕ್ಷಣಾನ್ವಿತವೂ ಅಂಶಗಣ ಘಟಿತವೂ ಆಗಿದೆ. ೧೧ನೆಯ ಶತಕದ ಮಧ್ಯಕಾಲದವರೆಗೂ ತ್ರಿಪದಿ ಅಂಶಗಣಾತ್ಮಕವಾಗಿತ್ತೆಂಬುದಕ್ಕೆ ಇದೊಂದು ಸಾಕ್ಷಿ.

"ಹಳಗನ್ನಡದಲ್ಲಿ ಎಲ್ಲಿಯೂ ಈ ಚೌಪದಿಯು ಹೆಜ್ಜೆ ಮೂಡಿಲ್ಲ"— ಎಂದಿರುವ ಕನ್ನಡ ಛಂದೋವಿಕಾಸದ ಮಾತನ್ನು ಇಲ್ಲಿ ಸ್ಮರಿಸಿದರೆ ಇಲ್ಲಿಯ

---

† ಮತ್ತೇಭ ಚಂಪಕಗಳನ್ನು ಬಿಟ್ಟು

ಚೌಪದಿ ರಚನೆಗಿರುವ ಬೆಲೆಯೆಷ್ಟೆಂದು ತಿಳಿಯುವುದು. ಕನ್ನಡ ಕೈಪಿಡಿಯಲ್ಲಿ "ನಾಗವರ್ಮನ ಹೊರಗೆ ಈ ವೃತ್ತಗಳು(. . . ಚೌಪದಿ, ಗೀತಿಕೆ . . .) ಸಿಕ್ಕದಿರುವುದರಿಂದ . . ." ಎಂದಿರುವ ಮಾತನ್ನೂ ಲೆಕ್ಕಿಸಬಹುದು. ೮-೩೪ರ ಒಂದು ನೇರವಾದ ಉದಾಹರಣೆಯಲ್ಲದೆ, ೧-೧೫ರ ವನಮಂಜರೀ ವೃತ್ತದಿಂದ ಉದ್ಧರಿಸಬಹುದಾದ ಒಂದು ಉದಾಹರಣೆಯನ್ನೂ ಕಾಣಬಹುದು. ಇದರಲ್ಲಿ ಎರಡನೆಯ, ಉದ್ಧೃತ ಚೌಪದಿಯು "೪ ಮಾತ್ರೆಯ ಗಣದ ಮುಂದೆ ೬ ಮಾತ್ರೆಯ ಗಣ ಬಂದರೆ ನಡೆಯುವುದೇನೋ" ಎಂಬ ಶಂಕೆಗೆ ಆಸ್ಪದವೀಯುವಂತೆ, ಮೊದಲನೆಯ ನೇರವಾದ ಉದಾಹರಣೆ ೬, ೪, ೪ರ (೪, ೪, ೪, ಗು) ಮಾತ್ರಾ ವಿನ್ಯಾಸವನ್ನು ಮನಗಾಣಿಸುತ್ತದೆ. ಮಾತ್ರಾವೃತ್ತದಲ್ಲಿ ಖಚಿತವಾದ ಮಾತ್ರಾಗಣ ವಿನ್ಯಾಸವಿರಬೇಕೆಂಬ ದೃಷ್ಟಿಯಿಂದ ಚೌಪದಿಯು ಅಂಶಗಣ ಘಟಿತವೆಂದು ಹೇಳಬಹುದಲ್ಲವೆ? ಅಂಶವೃತ್ತಗಳಲ್ಲಿ ಹಾಗೂ ವರ್ಣವೃತ್ತಗಳಲ್ಲಿ ಹೀಗೆ ಮಾತ್ರಾವೃತ್ತಗಳ ಧಾಟಿ ಕಾಣುವುದು ಸಾಮಾನ್ಯ. ಆದುದರಿಂದ ಛಂದೋಂಬುಧಿಯ ಲಕ್ಷಣಕ್ಕೆ ಅನ್ವಯಿಸುವ ಅಂಶಗಣನಿಷ್ಠವಾದ ಚೌಪದಿಯೇ ಮದನತಿಲಕದ ಚೌಪದಿಯೆಂದಿಟ್ಟುಕೊಳ್ಳಬೇಕು.

ಇನ್ನು ಎಡೆಯಕ್ಕರ, ನಡುವಣಕ್ಕರಗಳ ವಿಚಾರ. ಕನ್ನಡ ಕೈಪಿಡಿಯಲ್ಲಿಯೂ ಕನ್ನಡ ಛಂದೋವಿಕಾಸದಲ್ಲಿಯೂ "ಪಿರಿಯಕ್ಕರವನ್ನುಳಿದು ಉಳಿದಾವ ಅಕ್ಕರವೂ ಉಪಲಬ್ಧವಾದ ಕನ್ನಡ ಕಾವ್ಯಗಳಲ್ಲಿ ದೊರೆತಿಲ್ಲ" ಎಂದು ಅಭಿಪ್ರಾಯ ಬರುವಂತೆ ಬರೆದಿರುವ ಮಾತುಗಳನ್ನು ಗಮನಿಸಿದರೆ ಈ ಕೃತಿಯ ಲಾಭದಿಂದಾಗಿರುವ ಪ್ರಯೋಜನವೆಷ್ಟೆಂದು ಮನವರಿಕೆಯಾಗುತ್ತದೆ. ಮದನತಿಲಕದಿಂದ ಪಿರಿಯಕ್ಕರದ ಪ್ರಸಿದ್ಧಿ ಇನ್ನೂ ಒಂದು ಹೆಜ್ಜೆ ಮುಂದುವರಿಯುವುದಲ್ಲದೆ ಮೊದಲಬಾರಿಗೆ ನಡುವಣಕ್ಕರ ಎಡೆಯಕ್ಕರಗಳಿಗೆ ಬಾನೆ ಎರಡು ನೇರವಾದ ಉದಾಹರಣೆಗಳು ದೊರೆತಿವೆ. ಕೊಂಚ ತಿದ್ದುಪಡಿ ಮಾಡಿದರೆ ಇವು ಲಕ್ಷಣಾನ್ವಿತವಾದವು. ಅಲ್ಲದೆ ಕವಿಯ ಸೂಚನೆಯನ್ನನುಸರಿಸಿ ೧-೧೫ರ ವನಮಂಜರೀ ವೃತ್ತದಿಂದ. ೧೦-೧೪, ೧೫ರ ಕಂದಪದ್ಯಗಳಿಂದ ಬಹುವಟ್ಟಿಗೆ ಲಕ್ಷಣಾನ್ವಿತವಾದ ಐವಕ್ಕರಗಳನ್ನೂ ಹೊರಡಿಸಲು ಸಾಧ್ಯವಿದೆ. ಇದರಿಂದ ನಮಗೆ ಕಿಱಿಯಕ್ಕರ ದೊರೆಯಕ್ಕರಗಳಿಗೂ ಲಕ್ಷ್ಯಗಳು ಲಭ್ಯವಾದಂತಾಗುವುದು.

ಇವುಗಳಲ್ಲಿ ನಾಗವರ್ಮನು ಹೇಳದಿದ್ದರೂ ಕ್ವಚಿತ್ತಾಗಿ ವಿಷ್ಣುವಿಗೆ ಬ್ರಹ್ಮ, ಬ್ರಹ್ಮಕ್ಕೆ ವಿಷ್ಣುವನ್ನು ಪರ್ಯಾಯವಾಗಿ ಅಂಗೀಕರಿಸಿದರೆ ಸಾಮಾನ್ಯವಾಗಿ ಇವೆಲ್ಲ ಲಕ್ಷಣಾನ್ವಿತವಾದವು.

ಆಗೀಗ ಷಟ್ಪದಿಯ ಪ್ರಸಕ್ತಿ ಬಂದಾಗ ಇಲ್ಲಿಯ ೧–೧೫ರ ವನಮಂಜರೀ ವೃತ್ತದಿಂದ ಉದ್ಧರಿಸಬಹುದಾದ ಅಂಶಗಣ (ಹಾಗೂ ಮಾತ್ರಾಗಣ ಘಟಿತ ವಾದ ಎರಡು ಷಟ್ಪದಿಗಳನ್ನು ಉಲ್ಲೇಖಿಸುತ್ತಿದ್ದರೂ ಇಲ್ಲಿ ಒಂದು ನೇರವಾದ ಷಟ್ಪದಿಯ ಉದಾಹರಣೆಯನ್ನು ಕಾಣಬಹುದಾಗಿದೆ. ಇದು ಮಾತ್ರಾಗಣಕ್ಕೆ ಅನ್ವಯಿಸದ, ಛಂದೋಂಬುಧಿಯ ಲಕ್ಷಣಕ್ಕೆ ಅನ್ವಯಿಸುವ, ಅಂಶಗಣನಿಷ್ಠ ವಾದ, ಪ್ರಾಚೀನವಾದ ಒಂದು ಷಟ್ಪದಿಯೆಂದು ತಿಳಿಯುವುದು. ಪಾಠವು ಅಶುದ್ಧವಾಗಿರುವುದರಿಂದ ಸ್ವಲ್ಪ ತಿದ್ದುಪಡಿಯ ಅಗತ್ಯವಿದೆ.

ಇನು ಗೀತಿಕೆಯ ಸಂಗತಿ: ೧೦–೧೪,೧೫ರಿಂದ ಗೀತಿಕೆಯನ್ನೂ ಉದ್ಧರಿಸಬಹುದೆಂದು ಕವಿಯ ಸೂಚನೆಯಿದೆ. ಇದು ಸಂಸ್ಕೃತದ ಮಾತ್ರಾ ವೃತ್ತದ ಆರ್ಯಾಭೇದವಾದ ಗೀತಿಕೆಯೋ ಇಲ್ಲವೆ ಕನ್ನಡ ಜಾತಿ ಛಂದಸ್ಸಿನ ಗೀತಿಕೆಯೋ ಸ್ಪಷ್ಟವಿಲ್ಲ. ಆ ಎರಡು ಕಂದಪದ್ಯಗಳೇನೋ ಈ ಎರಡು ಬಗೆಗಳಿಗೂ ಹೊಂದಿಕೊಳ್ಳುವುದು ಸಾಧ್ಯವಿದೆ. ಕನ್ನಡ ಛಂದಸ್ಸಿನ ಗೀತಿಕೆಯ ಲಕ್ಷಣವನ್ನು ನಾಗವರ್ಮನು ನಿರ್ದಿಷ್ಟವಾಗಿ ನಿರೂಪಿಸಿಲ್ಲವೆಂಬ ಕಾರಣದಿಂದ ಕ್ಲೇಶವಿಲ್ಲದೆ ಚಂದ್ರರಾಜನ ಪದ್ಯಗಳನ್ನು ಗೀತಿಕೆಯಾಗಿ ಮಾರ್ಪಡಿಸಬಹುದು. ಆದರೆ ಜಯಕೀರ್ತಿಯು ಪ್ರತಿ ಪದ್ಯಾರ್ಧದಲ್ಲಿಯೂ ೨. ೬ರ ಸ್ಥಾನದಲ್ಲಿ ಬ್ರಹ್ಮ ಗಣಗಳು ಬಂದು, ಉಳಿದ ಗಣಗಳು ವಿಷ್ಣುವೋ ರುದ್ರವೋ ಬರಬಹುದೆಂದು ನಿರೂಪಿಸುವಲ್ಲಿ ಚಂದ್ರರಾಜನ ಈ ಕಂದಪದ್ಯಗಳು ಸಂಸ್ಕೃತದ ಆರ್ಯಾಭೇದ ವಾದ ಗೀತಿಕೆಗೇ ಅನ್ವಯಿಸುವುವೆಂದು ಹೇಳಬೇಕಾಗುತ್ತದೆ. ೧೨–೨೪ರ ಕಂದ ಪದ್ಯದಲ್ಲಿ ಇಂತಹ ಗೀತಿಕೆಯಲ್ಲದೆ ಬೇರೆ ಆರ್ಯಾ ಭೇದಗಳನ್ನೂ ಬಿಡಿಸಿ ತೋರಿಸಬಹುದು. ಅಂತೂ ಕನ್ನಡ ಸಂಸ್ಕೃತ ಗೀತಿಕೆಗಳೆರಡಕ್ಕೂ ಮದನ ತಿಲಕದಲ್ಲಿ ಪರೋಕ್ಷವಾಗಿ ಉದಾಹರಣೆಗಳಿವೆಯೆಂದಂತಾಯಿತು.

ಕನ್ನಡ ಜಾತಿ ಛಂದಸ್ಸಿಗೆ ಮದನತಿಲಕದಲ್ಲಿರುವ ಪ್ರಾಧಾನ್ಯವನ್ನು ನೋಡಿದರೆ ಛಂದೋಂಬುಧಿಯ ಲಕ್ಷಣಪದ್ಯಗಳಿಗೆ ಲಕ್ಷ್ಯಪದ್ಯಗಳನ್ನು ಒದಗಿಸ ಲೆಂಬಂತೆ ಕೃತಿ ರಚನೆಯಾಗಿದೆಯೋ ಎನಿಸಿದರೂ ಅದನ್ನು ಹಾಗೆಯೇ ಒಪ್ಪುವುದು ಹೆಚ್ಚಿನ ಮಾತಾದೀತು.

ಮದನ ತಿಲಕದ ಕೆಲವು ವೃತ್ತಜಾತಿಗಳು ಛಂದೋಂಬುಧಿಯಲ್ಲಿಲ್ಲ. ಅಲ್ಲದೆ ಸಂಸ್ಕೃತ ಛಂದೋಲಕ್ಷಣ ಗ್ರಂಥಗಳಲ್ಲಿಯೂ ಇದ್ದಂತಿಲ್ಲ. ಆದರೆ ಇಂಥವು ಕ್ವಚಿತ್ತಾಗಿ ಬಂದವು. ಉಳಿದವು ತಕ್ಕಮಟ್ಟಿಗೆ ಕನ್ನಡ ಕಾವ್ಯ ಪ್ರಪಂಚದಲ್ಲಿ ಪರಿಚಯವಾದವೇ, ವಿರಳವಾಗಿ ವಿಶೇಷವಾಗಿ ಪ್ರಯುಕ್ತ ವಾದವೇ. ಅಲ್ಲೊಬ್ಬ ಇಲ್ಲೊಬ್ಬ ಕವಿಯಲ್ಲಿ ಒಂಟೊಂಟಿಯಾಗಿ ಕಾಣಬಹು ದಾದ ವಿರಳವಾದ ವೃತ್ತಜಾತಿಗಳಿಗೆ ಮದನ ತಿಲಕವು ಸಮುಚ್ಚಯ ಗ್ರಂಥ ವಾಗಿದೆಯೆಂಬುದೇ ಅದಕ್ಕಿರುವ ಬೆಲೆ; ಕೆಲವನ್ನು ಕರ್ತೃವೇ ಮೊದಲು ಉಪ ಯೋಗಿಸಿರಬಹುದು, ಅದೊಂದು ವಿಶೇಷ. ಇವುಗಳನ್ನೆಲ್ಲ ಒಟ್ಟಿಗೆ ಒಂದೆಡೆಯೇ ನೋಡಬಹುದು ಎಂಬುದು ಇಲ್ಲಿಯ ಪ್ರಯೋಜನ. ಲಕ್ಷಣಗ್ರಂಥಗಳಲ್ಲಿ ಪೂರ್ವಪರಿಚಿತವಾದ ವೃತ್ತಜಾತಿಗಳಲ್ಲಿ ಕೆಲವನ್ನು ಕೃತಿಯಲ್ಲಿ ತಂದುಕೊಂಡು, ಅವುಗಳಿಗೆ ಸ್ವಂತ ಹೆಸರುಗಳನ್ನು ಕೊಟ್ಟಿರುವುದು ಕಾಣುತ್ತದೆ. ಇವೆಲ್ಲ ಕವಿಯ ಕೌಶಲ, ಪರಿಶ್ರಮ, ಪರಿಣತಿಗಳನ್ನು ಸೂಚಿಸುವಂಥವು.

ವರ್ಣವೃತ್ತಗಳಲ್ಲಿಯೂ ಅಂಶವೃತ್ತಗಳಲ್ಲಿಯೂ ಮಾತ್ರಾವೃತ್ತಗಳ ನಡೆಯನ್ನೂ ಕಾಣಬಹುದೆಂಬುದು ತರಳ ಮಲ್ಲಿಕಾಮಾಲೆ, ತ್ರಿಪದಿ ಷಟ್ಪದಿ ಮುಂತಾದ ವೃತ್ತಜಾತಿಗಳ ಉದಾಹರಣೆಗಳಿಂದ ತಿಳಿಯುವುದು. ಈ ಮದನ ತಿಲಕದಲ್ಲಿಯೂ ಇದಕ್ಕೆ ಬೇಕಾದಷ್ಟು ಉದಾಹರಣೆಗಳನ್ನೆತ್ತಿ ಕೊಡಬಹುದು. ಇಲ್ಲಿಯ ಲಲಿತಪದ, ಲುಳಿತ, ಚಿತ್ರಲತೆ ಮುಂತಾದ ವೃತ್ತಜಾತಿಗಳಲ್ಲಿ ಅವನ್ನು ಕಾಣಬಹುದು. ಇವನ್ನು ಪ್ರಯೋಗಭಾಗದಲ್ಲಿ ವಿಶದೀಕರಿಸಿದೆ. ಇವು ಗಳನ್ನು ಆಕಸ್ಮಿಕ ಸಂಯೋಜನೆಯೆನ್ನುವುದಕ್ಕಿಂತ, ಅಕ್ಷರವೃತ್ತಗಳ ಅಕ್ಷರಗಣ ವಿನ್ಯಾಸದ ಅಸಹಜತೆಯಿಂದಾಗಿ ಮಾತ್ರಾಗಣವಿನ್ಯಾಸದ ನಿರ್ದಿಷ್ಟವಾದ ಲಯದ ಕಡೆಗೆ ಕವಿಯ ಸೃಷ್ಟಿಪೂರ್ವಕವಾದ ಲಕ್ಷ್ಯವಿರುವುದೆಂಬುದನ್ನು ಇಂಥವು ನಿರ್ದೇಶಿಸುತ್ತವೆ.

ಕೆಲವು ಹೆಚ್ಚಿನ ವೈಲಕ್ಷಣ್ಯಗಳನ್ನು ಪ್ರಯೋಗಭಾಗದಲ್ಲಿ ತಿಳಿಸಿದೆ. ಇಷ್ಟಾದರೂ ಮದನ ತಿಲಕದ ಛಂದೋಪ್ರಪಂಚ ಇನ್ನೂ ವಿಸ್ತಾರವಾದುದೆಂದೂ ಇನ್ನೂ ಹಲವಂಶಗಳು ವಿಶದಪಡಬೇಕಾಗಿವೆಯೆಂದೂ ತಿಳಿಯಲು ಅವಕಾಶವಿದೆ.

ಪ್ರಯೋಗಭಾಗ :

— ಇಲ್ಲಿ ಮೊದಲು ವೃತ್ತಜಾತಿಯ ಹೆಸರನ್ನು ಸೂಚಿಸಿದೆ. ಆಮೇಲಿನ ಕನ್ನಡ ಅಂಕಿಗಳು ಆ ವೃತ್ತವು ಇಷ್ಟನೆಯ ಆಶ್ವಾಸದಲ್ಲಿ ಇಷ್ಟನೆಯ ಪದ್ಯವೆಂಬುದನ್ನು ಸೂಚಿಸುವುದು. ಆವರಣಗಳಲ್ಲಿ ಕೊಟ್ಟಿರುವ ಅಂಕಿಗಳು ಆ ಪದ್ಯದ ಇಷ್ಟನೆಯ ಪಾದದಲ್ಲಿ ಇಷ್ಟನೆಯ ಗಣವೆಂಬುದನ್ನು ತಿಳಿಸುತ್ತವೆ. ಆವರಣದ ಪದ, ಪದಭಾಗಗಳು ಮುದ್ರಿತಪ್ರತಿಯ ಪ್ರಸಕ್ತ ಪಾಠಕ್ಕೆ ಬದಲಾಗಿ ಸೂಚಿಸಿರುವ ಪಾಠ. ಇದು ಅಡಿಟಿಪ್ಪಣಿಯ ಯಾವುದೇ ಪಾಠವಾಗಿರಬಹುದು. ಇಲ್ಲವೆ ಸ್ವಕೀಯವಾಗಿ ಊಹಿಸಿದ ಪಾಠವಾಗಿರಬಹುದು. ಕೃತಿಯ ಅನೇಕ ಪದ್ಯಗಳಿಗೆ ಅರ್ಥಾನ್ವಯಗಳ ದೃಷ್ಟಿಯಿಂದ ಮಾತ್ರ ಸೂಕ್ತ ತೋರಿದಂತೆ ಸ್ವತಂತ್ರಿಸಿ ಕೆಲವು ತಿದ್ದುಪಡಿಗಳನ್ನು ಕೊಟ್ಟಿದೆ. ಸಾಧ್ಯವಾದಷ್ಟು ಸಣ್ಣಪುಟ್ಟ ಮಾರ್ಪಾಟುಗಳನ್ನು ಮಾತ್ರ, ಸುಲಭವಾಗಿ ಸಮರ್ಪಕವಾಗಿ ತಿದ್ದುಪಡಿ ಮಾಡಬಹುದಾದ ಎಡೆಗಳಲ್ಲಿ, ಅನಾವಶ್ಯಕವಾಗಿ ಎಲ್ಲಿಯೂ ಸ್ವಾತಂತ್ರ್ಯ ವಹಿಸದೆ, ಪದ್ಯಗಳ ಅಭಿಪ್ರಾಯ ಸ್ವಲ್ಪಮಟ್ಟಿಗಾದರೂ ವಿಶದಪಡಲೆಂದು ಮಾಡಿತೋರಿಸಿದೆ. ಇವುಗಳಲ್ಲಿ ಎಲ್ಲವೂ ಸರಿಯೆಂದೂ ಎಲ್ಲರಿಗೂ ಗ್ರಾಹ್ಯವೆಂದೂ ನಾನು ಹೇಳುವುದಿಲ್ಲ. ಆವರಣದಲ್ಲಿ 'ಸ' ಎಂದಿರುವುದು ಪದ್ಯವು ಲಕ್ಷಣ ಸಮನ್ವಿತವಾಗಿದೆಯೆಂಬುದರ ಸೂಚನೆ. ಹಾಗೆಯೇ ಪ್ರತಿ ವೃತ್ತಜಾತಿಗೂ ಛಂದೋಂಬುಧಿಯ ಲಕ್ಷಣಪದ್ಯದ ಆಕರವನ್ನೂ ಛಂದೋಂಬುಧಿಯಲ್ಲಿ ಬಾರದ ಒಂದೆರಡು ವೃತ್ತಜಾತಿಗಳಿಗೆ ಸಂಸ್ಕೃತ ಲಕ್ಷಣ ಗ್ರಂಥಗಳ ಆಕರವನ್ನೂ ಹೋಲಿಕೆಗಳ ಸಲುವಾಗಿ ಕೊಟ್ಟಿದೆ. ಅಗತ್ಯವಿರುವೆಡೆ ಹೆಚ್ಚಿನ ವಿವರಣೆಗಳನ್ನು ಎಡೆಯೆಡೆಗಳಲ್ಲಿ ಬರೆದಿದೆ. ಹಾಗೆಯೇ [illegible]ದಾದರೆಂದು ವೃತ್ತಮೂಲದಿಂದ ಇತರ ಹೊಸ ಹೊಸ ವೃತ್ತಗಳನ್ನು ಉದ್ಧರಿಸುವ ಪ್ರಯತ್ನದಲ್ಲಿಯೂ ಮೇಲೆ ಹೇಳಿದ ಮಾತು ಅನ್ವಯಿಸುತ್ತದೆ.

ಮೂಲವೃತ್ತದ ಪಾಠಿನ ಸರಣಿಗೆ ಭಂಗ ತರದಂತೆ, ಸೂಕ್ತ ತೋರಿದಂತೆ. ಸಾಧ್ಯತೆಗೊಪ್ಪುವಂತೆ ಈ ಪ್ರಯತ್ನಮಾಡಿದೆ. ಬೇರೆಯವರು ಬೇರೆ ಬಗೆಯಲ್ಲಿಯೂ ವೃತ್ತಗಳನ್ನು ಉದ್ಧರಿಸಲು ಸಾಧ್ಯವಿದೆಯೆಂಬುದು ಸ್ಪಷ್ಟ.*

†೧. ಕಂದ (ಛಂದೋ-೬೫-೫.)

ಕಂದಪದ್ಯಗಳಲ್ಲಿ ಪ್ರತಿ ಆಶ್ವಾಸದಲ್ಲಿಯೂ ಇರುವ ಲಕ್ಷಣಾನ್ವಿತವಾದ ಹಾಗೂ ಲಕ್ಷಣಾನ್ವಿತವಲ್ಲದ ಪದ್ಯಗಳ ಸಂಖ್ಯೆ :

೨೫-೨೦, ೧-೦, ೦-೨, ೦-೪, ೪-೨, ೪-೭, ೧-೪, ೨೪-೨೧, ೪-೧, ೨೭-೨೭, ೪-೩೧.

೨. ಉತ್ಪಲಮಾಲೆ (ಛಂದೋ-೪೬-೧೨೭.)

೬-೭ (1:5 ದೂಷಿಯು 1:6 ದಾರಚಿ 1:7 ತ್ತ್ರಾಣಂ; 3ನೇ ಸಾಲು ಅಶುದ್ಧ; 4:1 ಸೋಲ್ಗುಮೋ) ೫-೯ (2,3 ನೇ ಸಾಲಿಗೆ ಗ. ಪಾಠ, 3:6 ತೋಣ್ಣುಪಂ 3 7 ಗದಂ) ೧೦-೩೩ (1:1 ನಾಗರಿ 1:2 ಕಂ ಕರಂ; 2:2 ಪಾಜನ) ೧೦-೬೨ (ಸು) ೧೧-೨೩ (1:3 ಸೆ ಬಿಸು 1:4 ಪೇರಿದ 1:5 ? 1:6 ಮೊಯ್ಮರು 2:7 ಪಪ್ರೋ 4:7 ಜೆಯಿಂ

೩. ಶಾರ್ದೂಲವಿಕ್ರೀಡಿತ (ಛಂದೋ-೪೫-೧೨೩.)

---

* ಚಿನ್ನಚಿತ್ರದಲ್ಲಿ ಮೊದಲು ಚಮತ್ಕಾರವಾಗಿ ಅಕ್ಷರಗಳು ಸಂಯೋಜನೆಗೊಂಡು ಪದಗಳಾಗುವಂತೆ, ಆ ಬಳಿಕ ಸಾಧಾರಣವಾದ ಕರ್ತೃಪದಗಳು ಅಷ್ಟಾಗಿ ಕರ್ಮ ಕ್ರಿಯಾಪದಗಳ, ಕೆಲ ಪ್ರಾಸ್ತ ಪ್ರತ್ಯಯೋಪಸರ್ಗಗಳ ಆವಶ್ಯಕತೆಯಿಲ್ಲದೆ, ಅನುಕೂಲವಾಗಿ ಹೊಂದಿಕೊಂಡು ಬೇರೆಬೇರೆ ವೃತ್ತಬಂಧಗಳಾಗಿ ರೂಪುಗೊಳ್ಳಲು ಅನುವಾಗುವಂತೆ ಪದ್ಯಗಳನ್ನು ಕಟ್ಟಿರುವುದೇ ಈ ಪ್ರಯೋಗ ಕೌಶಲದ ರಹಸ್ಯವೆನ್ನಬಹುದು.

† ಈ ಛಂದಸ್ಸನ್ನು ಪರಿಶೀಲಿಸುವ ಮೊದಲು ಮುದ್ರಿತದ ಕೊನೆಯ 'ಶೋಧನ ಪತ್ರಿಕೆ'ಯ ಸಹಾಯದಿಂದ ಪದ್ಯಪಾಠದ ತಪ್ಪುಗಳನ್ನೆಲ್ಲ ತಿದ್ದಿಕೊಂಡಿರಬೇಕು. ಕಂದ ಪದ್ಯಗಳ ವಿವರವಾದ ಪಾಠಪರಿಶೀಲನೆಗೆ ಕ. ಸಾ. ಪ. ಯಲ್ಲಿಯೇ ಇದೇ ಲೇಖನವನ್ನು ನೋಡಬಹುದು (೪೭-೨, ಪು. ೩೦-೩೨).

೧–೧೪ (ಸರಿ) ೬–೫ (2:6 ನುಣ್ಮಾತಿ) ೧೧-೨೫ (1:6 ಹೃದ್ಬೇದ 1:7 ಸಂ 2:4 ವದ ನಾ 2:5 ಗೋತ್ಸಾಹ 3:2 ತ್ರಜಸಂ 3:3 ಗವಾರಿ 3:4 ವಲವು 3:5 ತ್ಯಂತಾಧಿ 3:6 ಕಂ ನಾಕ 3:7 ದಿಂ.)

೪. **ಸ್ರಗ್ಧರೆ** (ಛಂದೋ–೪೭–೧೩೧.)

೬–೧೪ (1, 2, 3ನೇ ಸಾಲು ಅಶುದ್ಧ)

೫. **ಮತ್ತೇಭವಿಕ್ರೀಡಿತ** (ಛಂದೋ–೪೫–೧೨೫.)

೧–೩ (3:2 ದ್ಯಂ ವಿಳ 3:3 ಯಾತಿವ) ೧–೪ (ಸರಿ) ೧–೧೧ (ಸರಿ) ೧–೨೨ (1:5 ಮಗಣವಾಗದು; 3 ನೇ ಸಾಲಿಗೆ ಗ. ಪಾಠ 4:3 ವಿದ್ಯೆಗೋ 4:4 ಜನಿಳೆ) ೧–೨೪ (ಸರಿ) ೧–೪೫, ೪೬, ೫೧, ೫೨, ೨–೧, ೨ (ಸರಿ) ೨–೩ 4:7 ಸತೀ) ೨–೪ (ಸರಿ) ೩–೨ (1, 2 ಸರಿ) ೪–೩ (ತ್ರುಟಿತ) ೫–೨ (3:6 ಕ್ತೆ ಸೀವಮಂ 3:7 ತಿನೀ) ೫–೬ (2:3 ರಗಣವಾಗದಂ, 4:2 ತುಸ್ಥಿತಿ 4:3 ಯಪ್ಪಳಂ) ೮–೧೯ (1:6 ಗ್ಯಮುಂ ಭಾ 1:7 ಗ್ಯಲ 4ನೇ ಸಾಲಿಗೆ ಅಡಿ. ಪಾಠ ಗ್ರಾಹ್ಯ) ೮–೫೨ (2:2 ಮಲ್ಲಿನಿ 2:3 ನಿಂಬುಗೆ) ೮–೬೨ (ಸರಿ) ೯–೧ (4:7 ಮಿನೀ) ೯–೫ (4:7ನನೇ) ೯–೬ (3ನೇ ಸಾಲಿನಲ್ಲಿ ಪ್ರಾಸ ತಪ್ಪಿದೆ) ೯–೭ (3ನೇ ಸಾಲಿನಲ್ಲಿ ಪ್ರಾಸವೂ ಪ್ರಸ್ತಾರವೂ ತಪ್ಪಿದೆ) ೧೦–೧, ೩೯ (ಸರಿ) ೧೦–೫೬ (2:5, 2:7 ಗ. ಪಾಠ 4:7 ಕ್ಷಣೇ) ೧೧–೧೫ (4:7 ಸತೀ) ೧೧–೪೮ (4:2 ಲ್ವೇಳ್ಪುದು)

೬. **ಮಹಾಸ್ರಗ್ಧರೆ** (ಛಂದೋ–೪೭–೧೩೩.)

೧–೧೦ (ಸರಿ) ೧–೧೨ (1ನೇ ಸಾಲು ಅಶುದ್ಧ) ೧–೫೦ (ಸರಿ) ೫–೮ (3:2 ತ್ರಿಪರ್ಣಳ್ ನಿ) ೧೦–೭೮ (ಸರಿ)

೭. **ಚಂಪಕಮಾಲೆ** (ಛಂದೋ–೪೬–೧೨೯.)

೧–೨೦ (1:6 ಡರಂದೆ 3:6 ಬೆರೊಟ್ಟು) ೧–೪೭, ೬೯ (ಸರಿ) ೩–೧ (4:7 ಳೋದರೀ) ೪–೨ (4ನೇ ಸಾಲು ಸರಿ) ೫–೩ (2:5 ಕರಂ ನ) ೫–೫, ೮–೬, ೭(ಸರಿ) ೮–೮ (ಅಶುದ್ಧ) ೮–೩೦ (2:6 ಡೆ ಮುಂದೆ 3:6 ಳು ಮೃಗ್ಯ)

೯–೨, ೧೦–೪೪ (ಸರಿ) ೧೦–೪೫ (4:7 ಗಾಮಿನೀ) ೧೧–೫ (ಸರಿ) ೧೧–೨೭ (3:4 ವಿನಿಂಬ 4ನೇ ಸಾಲಿಗೆ ಗ. ಪಾಠ) ೧೧–೬೦ (ತ್ರುಟಿತ) ೧೧–೬೧ (ಗ.ಪಾಠ ಗ್ರಾಹ್ಯ, 1, 3ನೇ ಸಾಲು ತ್ರುಟಿತ, 2. 4ನೇ ಸಾಲು ಸರಿ)

೮. **ಉಜ್ವಳೆ** (ಛಂದೋ–೪೫–೧೨೫; ಇಲ್ಲಿ ಇದನ್ನು : 'ಅನವದ್ಯ' ವೃತ್ತವೆಂದಿದೆ. ಇದಕ್ಕೆ 'ಮುದಾ' ಎಂದೂ ಇದೆ–ಜಯ. ೨–೨೩೬.)

೧–೩೭ 2:7 ತೆನಿ 3:1 ರ್ಮದಸ 3:2 ಮಾನಗು) ೧–೫೪ (ಸರಿ) ೬–೧೯ (3:4 ನಿಪ್ಪಂಗೊ 4:2,4 ?) ೮–೧೧ (4:7 ನನೇ) ೮–೨೩ (1:4 ೪೦ ಕೇರೋ 1:5 ವರಿಯೊ 3:2 ಪೋಬಿಲೋ 3:4, 6 ? 4 ನೇ ಸಾಲು ಅಶುದ್ಧ)

೯. **ಊರ್ಜಿತ** (ಛಂದೋ–೪೫–೧೨೪; ಇಲ್ಲಿ ಇದನ್ನು 'ಖಚರಪ್ಲುತ' ವೆಂದಿದೆ. ಇದಕ್ಕೆ ಶಾರ್ಙ್ಗೀ ಎಂದೂ ಹೆಸರುಂಟು– ಜಯ. ೨–೨೨೯.)

೧೧–೧೮ (1;4 ಲ್ಲಳ್ ನೋಟ; 2 3ನೇ ಸಾಲು ಅಶುದ್ಧ)

೧೦. **ಕರ್ಕೋಟಕ** (ಛಂದೋ ೪೨–೧೧೫ ಇಲ್ಲಿ ಇದನ್ನು 'ಕನಕಾಬ್ಜಿನೀ' ವೃತ್ತವೆಂದಿದೆ. ಇದಕ್ಕೆ ಅವಿತಥ, ಕುಟುಕ, ನರ್ಕುಟಕ, ನರ್ದಟಕ, ಕೋಕಿಲಕ ಎಂದೂ ಹೆಸರಿವೆ.* ಈ 'ಕರ್ಕೋಟಕ' ಎಂಬ ಹೆಸರು ಕವಿಯೇ ಕೊಟ್ಟಿದ್ದಿರಬಹುದು.)

೧೦–೩೪ (2:5 ಲಿಪಾ ಸು 2:6 ವಿಟಂ 3:3 ? 3:4 ದರೊಳ್ಳಿ 3:5 ದ ದೂತ 3:6 ರನೊ 4:1 ಲ್ದೊಲಿಸು ಇಲ್ಲವೆ ಲ್ದಿರಿಸು) ೧೧–೧೬ (ಸರಿ)

೧೧. **ಕಲ್ಪಲತೆ†** (ಛಂದೋ–೩೦–೬೭ ಇಲ್ಲಿ ಇದನ್ನು 'ರಥೋದ್ಧತಾ' ವೃತ್ತವೆಂದಿದೆ. ಈ 'ಕಲ್ಪಲತೆ' ಎಂಬ ಹೆಸರು ಕವಿಯೇ ಕೊಟ್ಟಿದ್ದಿರಬಹುದು.)

---

*ಕನ್ನಡ ಕೈಪಿಡಿಯಲ್ಲಿ ಇದನ್ನು 'ಸುವಂಗಲಿ' ಎಂದು ಕರೆದಿದೆ (ಪು ೮೫)

† ಇದರ 1, 3ನೇ ಸಾಲುಗಳ ಲಕ್ಷಣ ಛಂದೋಯು ಅರ್ಧಸಮವೃತ್ತವಾದ "ದಿವಿಜಕಲ್ಪಲತಾ" ವೃತ್ತದ 1,3ನೇ ಸಾಲುಗಳ ಲಕ್ಷಣಕ್ಕೆ ಅನ್ವಿತವಾಗಿದೆ. ಹೆಸರಿನಲ್ಲಿರುವ ಸಾಮ್ಯ ಗಮನಾರ್ಹವಾಗಿದೆ.

೧–೭೪ (1:3 ಗಿಟ್ಟಳಿಂ, 4:3 ದಂ ವಿನೂ, 4ನೇ ಸಾಲಿನಲ್ಲಿ ಪ್ರಾಸ ಕೆಟ್ಟಿದೆ. 3:3 ತಾಯುವಾ.)

೧೨. **ಕಳಕಂಠ** (ಛಂದೋ–೨೧–೨೫ ಇಲ್ಲಿ ಇದನ್ನು 'ಉದಾತ್ತ'ವೆಂದಿದೆ. ಇದಕ್ಕೆ ಕನಕಲತಾ, ಚತುರಂಶಾ, ಮಕರಶೀರ್ಷಾ, ಮುಕುಲಿತಾ. ಶಶಿವದನಾ ಎಂಬ ಹೆಸರುಗಳೂ ಇವೆ. ಈ ಕಳಕಂಠ ಎಂಬ ಹೆಸರು ಕವಿಯೇ ಕೊಟ್ಟಿದ್ದಿರಬಹುದು.) ೬–೩(ಸರಿ)

೧೩. **ಕಳಹಂಸ** (ಛಂದೋ–೩೪–೮೨ ಇಲ್ಲಿ ಇದನ್ನು 'ದ್ರುತಪದ' ವೃತ್ತವೆಂದಿದೆ. ಇದಕ್ಕೆ 'ಮುಖರ' ಎಂದೂ ಹೆಸರುಂಟು. ಜಯ–೨–೧೩೨) ೧೦–೮೩ (ಸರಿ)

೧೪. **ಕುಂತಳೆ*** (ಛಂದೋ. ಯಲ್ಲಿ ಇದು ಉಕ್ತವಾಗಿಲ್ಲ. ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿಯೂ ಇದ್ದಂತಿಲ್ಲ.)
೧–೩೩ (4 ಪಾದಗಳಲ್ಲಿಯೂ ರನಲಲ.) ೬–೮ (ಇದು ಕುಂತಳೆಯಲ್ಲ, ಚಂಪಕಮಾಲೆ. ಇದರಲ್ಲಿ 1:6,7 ?)

೧೫. **ಕೋಕಿಳೆ** (ಇದು ಮತ್ತಕೋಕಿಳವೆ. ಛಂದೋ–೩೩–೮೧. ಇಲ್ಲಿ ಇದನ್ನು 'ನಿರುಪಮ' ವೃತ್ತವೆಂದಿದೆ. ಇದಕ್ಕೆ 'ಪ್ರಿಯಂವದಾ' ಎಂದೂ ಹೆಸರುಂಟು–ಗಂಗ ೨–೮೨. ಈ ಪದ್ಯವು ಮವತಿ. ದಲ್ಲಿ ೧೦–೨ರಲ್ಲಿ ತೋರಿಸಿರುವಂತೆ ಒಂದಲ್ಲ, ಎರಡು. ಮೊದಲೆರಡು ಸಾಲುಗಳು ಮತ್ತ ಕೋಕಿಳದ ಛಂದಸ್ಸಿಗೂ, ಮತ್ತೆರಡು ಸಾಲುಗಳು ಕಂದಪದ್ಯದ ಛಂದಸ್ಸಿಗೂ ಸರಿಹೋಗುತ್ತವೆ. ಇವುಗಳ ಪದ್ಯಪಾದಗಳನ್ನು ಆಯಾ ಛಂದಸ್ಸಿಗನುಗುಣವಾಗಿ ಕ್ರಮಪಡಿಸಿ ಬರೆಯಬೇಕು. ೧೦–೨ (ಸರಿ) ೧೦–೭೩ (1:3 ಗೆಯಿಂದೆ, 2:3 ದೋಳೊಪ್ಪಿ 3:3 'ಶಿಥಿಲ' ?)

---

* ಇದರ ಲಕ್ಷಣ ರನಲಗ ಎಂದಿಟ್ಟುಕೊಂಡರೆ ಉತ್ಸಾಹ ರಗಳೆಯ ಎರಡನೆಯ ರೀತಿಯನ್ನು ಮಾತ್ರಾಗಣದೃಷ್ಟಿಯಿಂದ ಹೋಲುತ್ತದೆ.

೧೬. **ಕೌಮುದಿ** (ಛಂದೋ. ಯಲ್ಲಿ ಇದು ಉಕ್ತವಾಗಿಲ್ಲ. ಇದಕ್ಕೆ 'ಉರ್ವಶೀ' ಎಂಬ ಹೆಸರಿದೆ. ಜಯ-೨.೧೪೯.)

೧೧-೩ (1:5 ಪ... 2:1 ಕ್ಕುನಿಗ 3ನೇ ಸಾಲು : ಪೆಡೆಯು ಮುಟ್ಟಲ್ಕ ಮೇನಕ್ಕುಗುಂ ಕೂರ್ಗಪ್ರೊಲ್. 4:2 ಲಕ್ಷ್ಮ್ಯಸು)

೧೭. **ಕ್ರೌಂಚಪದ** (ಛಂದೋ-೫೧-೧೪೪,

೧೧-೪ (1:3 ಗಮೋಳಿಂ 1:4 ತುಂ ಬಗೆ 1:8 ಡಿಗಳು 2:2 ಪೆಂಪಂ ಸಂ 2:6 ಮನಬ 2:7 ಳಿಂಜೊ 2;8 ಳಿಮೊತೆ 3:1 ಅಂಗನೆ 3:4 ಜೇ ಬೆಮು)

೧೮. **ಚಿತ್ರಲತೆ** (ಛಂದೋ-೨೯-೬೦ ಇಲ್ಲಿ ಇದನ್ನು 'ಚಿತ್ರಪದ'ವೆಂದಿದೆ. ಇದಕ್ಕೆ ಚಿತ್ರಗತಿ, ದೋಧಕ, ವೃತ್ತ, ಸಾರವತೀ ಎಂಬ ಹೆಸರುಗಳೂ ಇವೆ. ಇದಕ್ಕೆ 'ಚಿತ್ರಲತೆ' ಎಂಬ ಹೆಸರು ಕವಿಯೇ ಕೊಟ್ಟಿದ್ದಿರಬಹುದು.)

೧೦-೭೧ (4.4 ದೇ)

೧೯. **ತರಳೆ** (ಛಂದೋ ೪೪-೧೨೧.)

೧೧-೧೭ (2:5 ? 4:2 ಪಪ್ಪುದೆ ಇಲ್ಲನೆ ತಪ್ಪದೆ; ಉಳಿದ ಭಾಗಕ್ಕೆ ಗ. ಪಾಠ)

೨೦. **ತ್ರಿಪದೋನ್ನತಿ** (ಛಂದೋ-೫೮-೧೩. ಇದು ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಇದ್ದಂತಿಲ್ಲ. ಇದು ಪಿಮಾಂವೃತ್ತವೆಂದು ಕೊಟ್ಟಿದ್ದರೂ ಇಲ್ಲಿ 1, 2, 4ನೇ ಸಾಲುಗಳ ಛಂದಸ್ಸು ಒಂದೇ ಆಗಿದ್ದು 3ನೇ ಸಾಲಿನ ಕಡೆಯ ಗಣದಲ್ಲಿ ಎರಡು ಲಘುಗಳು ಹೆಚ್ಚಾಗಿರುವುದಷ್ಟೇ ವ್ಯತ್ಯಾಸ. ಈ ವೃತ್ತಜಾತಿ ಛಂದೋನುಶಾಸನದ್ದೇ? ಚಂದ್ರರಾಜನ ಪದ್ಯ ಇದಕ್ಕೆಂದು ಬರೆದ ಲಕ್ಷ್ಯವೇ? ವಿಚಾರಾರ್ಹ.)

೫-೧ (ಪದ್ಯಪಾಠ ಅಶುದ್ಧವಾಗಿದೆ. ಅಡಿಟಿಪ್ಪಣಿಯ 'ಪಾತೆಜಿನಾಳಾಪಮೊಳೆಂ . . . .' ಎಂಬ ಗ. ಪ್ರತಿಯ ಪ್ರತ್ಯೇಕವಾದ ಕಂದ ಪದ್ಯದ ಕಡೆಯ ಪಾದಭಾಗವಾದ, ಪ್ರಸ್ತುತ ಪದ್ಯಪಾಠಕ್ಕೆ ಹೇಗೋ ಸೇರಿರುವ,

'ಮನೋಜಾತನೇಂ ಸಮಂ ಬಾದಪನೇ' ಎಂಬುದನ್ನು ಕಳಚಿ, ಅದರ ಸ್ಥಾನದಲ್ಲಿ, ಅದೇ ಅಡಿಟಿಪ್ಪಣಿಯು, ಮೊದಲು ಕೊಟ್ಟಿರುವ ಗ. ಪ್ರತಿಯ ಪೂರ್ತಾಪಾಠವನ್ನು, ಪ್ರಸಕ್ತ ಪದ್ಯಕ್ಕೆ ಛಂದೋಂಬುಧಿಯ ಆ ಪದ್ಯಲಕ್ಷಣಕ್ಕೆ ಸಮನ್ವಿತವಾಗುವಂತೆ ಜೋಡಿಸಿದರೆ ತ್ರಿಪದೋನ್ನತಿಯಾಗುತ್ತದೆ. **1:3** ಭಗಣವಾಗದು. ಪರಿಶಿಷ್ಟ ೨ರ ಸಹಾಯದಿಂದ **'ಕವಿಕಾಲ'** **(?)** ಎಂದಿಟ್ಟುಕೊಂಡರೆ ಸರಿಯಾಗುವುದು.)

ಈ ಪದ್ಯ ಹೀಗಿರಬಹುದು:

ಖ್ಯಾತಯಶಂ ಕವಿಕಾಲ ಮನೋ
ಜಾತನಜೇಯಗುಣಂ ವಿತತಂ
ಧಾತುಗಳುಂ ನುಡಿಗುಂ ನಿಜಕಾಂತೆಗೆ
ನೀತಿವಿದಂ ಸತತಂ ಪ್ರಿಯಳೇ ॥*

೨೧. **ತ್ರೋಟಕ†** (ಛಂದೋ. ಯಲ್ಲಿ ಇದು ಉಕ್ತವಾಗಿಲ್ಲ. ಇದಕ್ಕೆ ಮೋಟಕ, ಮೋಟನಕ ಎಂದೂ ಹೆಸರಿವೆ.—ಪಿಂಗ. ೬–೧೫. 'ತ್ರೋಟಕ' ಎಂಬ ಹೆಸರು ಕವಿಯು ಕೊಟ್ಟಿದ್ದಿರಬಹುದು)
೨–೫ (ಸರಿ.)

೨೨. **ದ್ರುತವಿಳಂಬಿತ** (ಛಂದೋ ೩೨–೭೫.)
೧೦–೭೪ (2:3 ಬೇ ದಯೆ 3:3 ಶೌಚದೆ 4:3 ಜಂ ವಧು.)

೨೩. **ಚೌತಿಕೆ** (ಛಂದೋ. ೩೦–೬೬. ಇದು ದೋಧಕವೆ. ಇದಕ್ಕೆ 'ಚೌತಿಕೆ' ಎಂಬುದು ಕವಿ ಕೊಟ್ಟ ಹೆಸರಿರಬಹುದು. ಇದಕ್ಕೆ 'ಭಿತ್ತಕ' ಎಂದೂ ಹೆಸರಿದೆ.)
೮–೬೦ (ಸರಿ.)

---

* ವದತಿದ ೧–೧೫ರ ವನಮಂಜರೀವೃತ್ತದಿಂದಲೂ ೨ ತ್ರಿಪದೋನ್ನತಿಗಳು ಉದ್ಧೃತವಾಗುತ್ತವೆ.

† ಕನ್ನಡ ಕೈಪಿಡಿಯಲ್ಲಿ ಇದನ್ನು 'ಕುಸುಮ' ವೃತ್ತವೆಂದಿದೆ.

೨೪. **ಪುಟನಿಕರ** (ಛಂದೋ. ಯಲ್ಲಿ ಇದು ಉಕ್ತವಾಗಿಲ್ಲ. ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿಯೂ ಇದ್ದಂತಿಲ್ಲ. ಈ ಹೆಸರು ಕವಿಯದೇ ಇರಬಹುದು. ಅತಿಧೃತಿ ಛಂದಸ್ಸಿನಲ್ಲಿ ಭಗಣದಿಂದ ಪ್ರಾರಂಭವಾಗುವ ವೃತ್ತವನ್ನು ನಿರ್ದೇಶಿಸಿಲ್ಲ.)
೧೧–೯ (ಅಶುದ್ಧ.)

೨೫. **ಪೃಥ್ವಿ** (ಛಂದೋ ೪೨–೧೧೪)
೧-೩೮ (2, 3ನೇ ಸಾಲು ಅಶುದ್ಧ, 4ನೇ ಸಾಲು : ನದೇವ ಚರಿತಂ ಚರೇತೆನಿಪ ವಾಕ್ಯಮಂ ಕೇಳಿರೇ ?) ೧೦–೩೬ (ಅಶುದ್ಧ) ೧೧–೨೯ (2:5 ? 4:1 ಸ್ಮರೇಂಗಿ 4:2 ತಮಿದೆಂ 4:6 ನನೇ) ೧೧–೫೦ (3:5ವೊಡಂ ರಾ 4:1 ?)

೨೬. **ಭುಜಂಗ ಪ್ರಯಾತ** (ಛಂದೋ ೩೨–೭೭)
೧೦–೫೪ (4ನೇ ಪಾದವಲ್ಲದೆ ಉಳಿದವು ಲಕ್ಷಣಾನ್ವಿತವಾಗಿಲ್ಲ.)

೨೭. **ಮಣಿರಂಗ** (ಛಂದೋ ೨೯–೬೧)
೧೧–೨೨ (2:2 ಸಲೆ ವೇ 4:4 ಸ್ಯೇ.)

೨೮. **ಮಲ್ಲಿಕಾಮಾಲೆ** (ಛಂದೋ ೪೩–೧೧೮)
೩–೪ (ತ್ರುಟಿತ) ೬–೪, ೮–೨೪, ೧೦–೪೬ (ಸರಿ.)

೨೯. **ಮಾಲಿನೀ** (ಛಂದೋ ೩೯–೧೦೩)
೧–೧೩ (ಸರಿ) ೧೧–೧೪ (1ನೇ ಸಾಲು: ಗ. ಪಾಠ, 4:5 ಜನೇತ್ರೇ.)

೩೦. **ರಥೋದ್ಧತ** (ಛಂದೋ ೩೦–೬೭)
೭–೩(ಸರಿ) ೮–೩೧ (3:1 ರಗಣ ಬಂದಿಲ್ಲ.)

೩೧. **ಲಯಗ್ರಾಹಿ** (ಛಂದೋ ೩೨–೩೪)
೧೦–೭೨ (2:4 ಳಿರ್ದುಂ 4:2 ನೇ ಕೇಳ್ಮ 3:2 ?)

೩೨. ಲಲಿತಪದ (ಛಂದೋ ೩೪–೮೩)

೧೧–೨ (3:2 ಆಲಂಪ 3:3 ಣಮಿಲ್ಲ.)

೩೩. ಲಲಿತವೃತ್ತ (ಛಂದೋ ೫೫–೩.)

೧೦–೮೯, ೯೦ (ಇಲ್ಲಿ ಕೊಟ್ಟಿರುವ ಎರಡು ಪದ್ಯಗಳು ಎರಡಲ್ಲ, ಒಂದೆ. ಎರಡೆರಡು ಪಾದಗಳನ್ನು ಒಂದೊಂದಾಗಿ ಬರೆದು ಒಟ್ಟು ೪ ಪಾದಗಳ ಒಂದು ವೃತ್ತವನ್ನು ಮಾಡಿಕೊಳ್ಳಬೇಕು.)

ಇದರಲ್ಲಿ (1:5 ಳಾಗಲೆ 1:6 ನಸುಂ ಬ 2:7 ದನನು 3:10 ರೊಷಂಬ 4:1 ಟ್ಟಂ ಬಳಿ 4:6 ಯರೆಂಬು 4:7 ದಿದು ತ 4:8 ತ್ಪಮರಿ 4:9 ನೀರರು 4:10 ಹನೇತ್ರೇ.)

೩೪. ಲುಳಿತ (ಛಂದೋ–ಯಲ್ಲಿ ಇದು ಉಕ್ತವಾಗಿಲ್ಲ. ಈ ವೃತ್ತಕ್ಕೆ 'ಸೌಮ್ಯಾ' ಎಂದು ಹೇಳಿದೆ–ಹೇಮ ೨–೮೯ ; ಈ ಹೆಸರು 'ಲುಳಿತ' ಎಂದು ಕವಿಯೇ ಕೊಟ್ಟಿದ್ದಿರಬಹುದು.)

೧೧-೮ (ಸರಿ.)

೩೫. ವನಮಯೂರ (ಛಂದೋ ೩೮–೮೯)

೧೧–೧೩ (1ನೇ ಸಾಲು ಅಶುದ್ಧ, 3 ನೇ ಸಾಲಿಗೆ ಗ. ಪಾಠ)

೩೬. (೧) ವಸಂತ ತಿಲಕ (ಛಂದೋ ೩೮ ೯೬)

೧–೬೮ (ಸರಿ) ೧೧–೧೧ (1:1 ಮುಪ್ಪಿಂ ಭ 4:1 ತಪ್ಪೇನ.)

(೨) ವಿನುತೆ ಇದು ವಸಂತ ತಿಲಕವೆ. ಇವಕ್ಕೆ ಇಂದುಮುಖೀ, ಉದ್ಧರ್ಷಿಣೀ, ಕರ್ಣೋತ್ಪಲಾ, ಮಧುಮಾಧವೀ, ಶೋಭಾವತಿ, ಸಿಂಹೋದ್ಧತಾ, ಸಿಂಹೋನ್ನತಾ ಎಂದೂ ಹೆಸರುಗಳಿವೆ. ಈ ವಿನುತೆಯೆಂಬ ಹೆಸರು ಕವಿಯದೇ ಇರಬಹುದು)

೮–೩೫ (4:2 ಮಾಳಜ 4:3 ?)

೩೭. ವಿದ್ಯುನ್ಮಾಲೆ (ಛಂದೋ: ೨೪-೪೨)
೬-೨ (ಸರಿ.)

೩೮. ಸ್ವಾಗತೆ (ಛಂದೋ ೩೧-೬೯)
೧೦-೧೨ (ಸರಿ.)

೩೯. **ದಂಡಕ** (ಛಂದೋ. ಯಲ್ಲಿ ಹೇಳಿರುವ ೬೨-೭೪ರ ದಂಡಕ ಲಕ್ಷಣಕ್ಕೆ ಇದು ಹೊಂದುವಂತೆ ಕಾಣುವುದಿಲ್ಲ. ಪ್ರಾಸದ ಪ್ರಸಕ್ತಿಯನ್ನಿಟ್ಟು ಕೊಳ್ಳದಿದ್ದರೆ ಅಬ್ಜ (4 ಲ+ಯಾವುದೇ ಗಣಗಳು), ಸಿಂಹ (೩ ಲ+ಯಾವುದೇ ಗಣಗಳು), ಚಂಡ (೫ ಲ+ಯಾವುದೇ ಗಣಗಳು), ವಾತ (೭ ಲ+ಯಾವುದೇ ಗಣಗಳು) ಎಂಬ ದಂಡಕ ಭೇದಗಳಲ್ಲಿ (ಜಯ. ೬-೩೩) ಯಾವುದಕ್ಕಾದರೂ ಹೊಂದಬಹುದೇನೊ? ಅಥವಾ ಒಳರಚನೆಯಲ್ಲಿ ಏನಾದರೂ ಮಾರ್ಪಾಟು ಮಾಡಿದರೆ ಆಗ ಬಹುದೇನೋ? ಪದ್ಯದ ಪಾಠದಲ್ಲಿ ದೋಷಗಳಿವೆ. 'ಇದುವೆ ದಂಡಕಮುಮಕ್ಕುಂ' ಎಂದು ಸಮುಚ್ಚಯವಿಟ್ಟು ಹೇಳಿರುವುದರಿಂದ ಬೇರೆ ವೃತ್ತ ಭೇದಗಳನ್ನೂ ಇದರಿಂದ ಉದ್ಧರಿಸಬಹುದೆಂದು ತೋರುತ್ತದೆ)

೮-೪ (*ದ್ವಿಪದಿಯಾಗಿ ಉದ್ಧರಿಸಿದರೆ :
ತೋರಳ್ಪಡ ಮಡಿಸಿದೆ:ಡಣಮರಿದಿನಿಸಂ ದೂರುತ್ತಿರ್ಪಳವಳ್
ಬೇರೊಂದಣಕದಿಂ ಸೆಣಸುವಳೊಡನೆ ಕಿನಿಸುವಳ್ ಬೈವಳ್ಮಾಂ।।)

---

*ಛಂದೋ:ಯ ೬೭ ೧೧ರಲ್ಲಿ 'ದುವಯಿ' ಗೆ ಲಕ್ಷ್ಯವಾಗಿ ಕೊಟ್ಟಿರುವ ಪದ್ಯದಲ್ಲಿರು ವಂತೆ ಪ್ರಾಸವನ್ನು ಇಲ್ಲಿ ತೋರಿಸಿಲ್ಲ. ಬಹುಶಃ ಮೊದಲ ಆರು ಮಾತ್ರೆಗಳಾದಮೇಲೆ ಮತ್ತೆ ಪ್ರಾಸವಿಡುವುದು ಲಕ್ಷಣ ಪದ್ಯದಲ್ಲಿ ಸೂಚ್ಯವಾದಂತಿಲ್ಲ.

(* ಆರ್ಯಾಭೇದವಾದ ಗೀತಿಕೆಯಾಗಿ ಉದ್ಧರಿಸಿದರೆ:

ದೂರುತ್ತಿರ್ಪಳ್ ಪೆಂಪಂ
ತೋರಳ್ತ್ರಿಶಮಡಿಸಿದೊಡಣಮಾರಿದಿನಿಸಂ ತಾಂ
ನೂರೆಂಟಂ ಬೈವಳ್ ತಾಂ
ಜೇರೊಂದಣಕದೆ ಸೆಣಸುವೊಡೆ ಕಿನಿಸುವಳ್ ||)

೪೦. **ವಸುಮತಿ†** ೧೦–೯ (ಛಂದೋ. ಯಲ್ಲಿ ಇದು ಉಕ್ತವಾಗಿಲ್ಲ. ಇದುವೆ 'ತ್ರಿಸಮಯ ಮಕ್ಕುಂ' ಎಂಬುದು ವೃತ್ತಭೇದವೋ, ಆವೃತ್ತಿ ಸೂಚಕವೋ ತಿಳಿಯದು. ಆದರಡಿ ಕೊಟ್ಟ 'ದತಪನೆನೆ. . . . ' ಎಂಬುದು ಗೂಢಲೇಖ್ಯವಿರುವಂತೆ ಕಾಣುವುದಲ್ಲದೆ ಶಬ್ದಾರ್ಥಗಳು ಸ್ಪಷ್ಟವಿಲ್ಲ. ಇನ್ನು 'ವಸುಮತಿ ರಾಜಿತಂ' ಎಂದು ಪ್ರಾರಂಭವಾಗುವ ಭಾಗ. ಕಡೆಯಪಾದವನ್ನುಳಿದರೆ ಇದು 'ನಜಗ'. ಆದರೆ ಈ ಗಣ ವಿನ್ಯಾಸ ನಿರ್ದೇಶಿತವಾಗಿಲ್ಲ. ಇಲ್ಲವೆ 'ವಸುಮತೀ ರಾಜಿತಂ' ಆದರೆ 'ನತಗ'. ಈ ವೃತ್ತ ಹಾಗೂ ಹೆಸರು ಕವಿಯದೇ ಇರಬಹುದು.)

೪೧. **ವೃತ್ತಬಂಧಮುಂ** . . . ೧೦–೧೦. ಇದು ವಿಷಮಚತುಷ್ಪದಿ ಯಿರಬೇಕೆಂದು ತೋರುತ್ತದೆ. ಇರುವಂತೆ ಇದರಲ್ಲಿ ಪ್ರತಿ ಪದ್ಯಾರ್ಧ ದಲ್ಲಿಯೂ ೧೨, ೧೭ರಂತೆ ಮಾತ್ರೆಗಳಿವೆ. ಪದ್ಯಪಾಠವೇನೋ ಎಂದಿ ನಂತೆ ಅಶುದ್ಧವಿದೆ. ಇದನ್ನು ಅಲ್ಪ ಸ್ವಲ್ಪ ಮಾರ್ಪಾಟುಗಳೊಡನೆ ಕಂದಪದ್ಯವಾಗಿಯೂ ಆರ್ಯಾಭೇದಗಳಾಗಿಯೂ ಮಾಡುವುದು ಸಾಧ್ಯ. ಪದ್ಯರಚನೆಯಲ್ಲಿ ಜಗಣ ಸರ್ವಲಘು ನಿಯುಕ್ತಸ್ಥಾನದಲ್ಲಿ ಬರುವುದನ್ನು ನೋಡಿದರೆ ಇದು ಸಹಜವಾಗಿಯೇ ಕಾಣುತ್ತದೆ. ಪದ್ಯಾರ್ಧಗಳ ಪಾದಾಂತಗಳಲ್ಲಿ ಈ ಮಾರ್ಪಾಟು ಆವಶ್ಯಕ. ಆದರೆ ಬೇರೆ ಎರಡು ಬಂಧಕ್ಕೂ ಇದು ಹೊಂದಬೇಕೆಂದು ಕವಿಯ ಸೂಚನೆ ಯಿರುವುದರಿಂದ ಈ ವಿಚಾರ ಹೀಗೇ ಎಂದು ಹೇಳುವಂತಿಲ್ಲ. ಇಲ್ಲಿ ಅನುಪ್ರಾಸವೂ ಉಂಟು.

* ದ್ವಿಪದಿಯಲ್ಲಿಯೂ ಗೀತಿಕೆಯಲ್ಲಿಯೂ ಕೊಂಚ ಮಾರ್ಪಾಟು ಮಾಡಿದೆ.
† ಪದ್ಯಪಾಠದ ೨ ಪಾದಗಳನ್ನು ೪ ಪಾದಗಳನ್ನಾಗಿ ಗ್ರಹಿಸಿದೆ.

೪೨. ವಿಮಲಾ (ಹೇಮ ೨-೬೬)

೧೦-೮ (ಬಿ) 'ಇದುವೆ ಗತಪ್ರತ್ಯಾಗತಮುಂ . . .' ಎಂದಿತ್ಯಾದಿಯಾಗಿ ಕೊಟ್ಟಿರುವ 'ಕುಸುಮಾ ಮನೋಹರಂ' ಎಂದು ನಾಲ್ಕೂ ಪಾದಗಳಲ್ಲಿ ಬರುವ ವೃತ್ತ. ವೃತ್ತನಾಮವನ್ನು ಹೇಳಿಲ್ಲ. ಛಂದೋ. ಯಲ್ಲಿ ಇದೂ ಉಕ್ತವಾಗಿಲ್ಲ. ಇರುವಂತೆ ಇದು 'ಸಜಗ'. ಕಾವ್ಯಾವಲೋಕನದಲ್ಲಿ 'ಕುಸುಮ ಮನೋಹರಂ' ಎಂದು ಹೇಳಿದೆ. ಆಗ ಇದು 'ನಜಗ')‡

೪೩. ಏಕಾರಾಂತಮುಕ್ಕಂ (?)

ಹಿಂದಿನ ೬-೧೫, ೬-೧೬ರ ಹಾಗೆ ಆಗಬಹುದಾದ ಏಕಾರಾಂತ ಕಂದವೋ ಏನೋ ಇದು. ಆದರೆ ಕಂದಕ್ಕೆ ಸಾಕಾಗುವಷ್ಟು ಮಾತ್ರೆಗಳಿಲ್ಲ, ಪ್ರಾಸಸ್ಥಾನದಲ್ಲಿ ಹೊಂದಿಕೆಯಿಲ್ಲ. ಗ. ಪ್ರತಿಯು ಪಾಠದ ಸಹಾಯದಿಂದ ಅರ್ಥಾನುಕೂಲತೆಗಾಗಿ ಪಾಠವನ್ನು ಹೀಗೆ ಭಾವಿಸಬಹುದೆ? : "ಎಲೆಯೇಕೆಲೆಗೆ ಕೇಳೆನೆ; ಕೇಳೆಂ ; ನೆನೆಯೆನೆ, ನೆನೆಯೆಂ ; ಏಕೆಂಬೆನೆ, ನೆನೆವೇವೆಂ ? ಕೇಳಿಡೆಗೆಯ್ದೆಂ, ನೆರೆಯೆಂ ; ನೆರೆಯೆಂ ; ನೆರೆವೇಳ್ವೆಂ."

೪೪. ಇದುವೆಯೆರ್ಥಪದಾಂತ ಯಮಕಮುಕ್ಕಂ

೧೦-೪ (ಬಿ) ಇದು ವರ್ಣವೃತ್ತದ ಅರ್ಧಸಮಚತುಷ್ಪದೀ ಜಾತಿಗೆ ಸೇರಿದ ಶಂಖನಿಧಿ ಅಥವಾ ಸುನಂದಿನೀ ಎಂಬ ವೃತ್ತವಿರಬೇಕೆಂದು ತೋರುವುದು. ಪ್ರಸ್ತಾರಕ್ರಮ : ಜತಜರ-ತತಜರ (ಜಯ ೩-೨೧). ಆದರೆ ಪ್ರತಿ ಪಾದದಲ್ಲಿಯೂ ೧೨ ಅಕ್ಷರಗಳು ಇರಬೇಕಾದಲ್ಲಿ, ಇಲ್ಲಿ ೨ನೇ ಪಾದದಲ್ಲಿ ೧೧ ಅಕ್ಷರಗಳಿವೆ. ಈ ಪದ್ಯವು ಹೀಗಿರಬೇಕೆಂದು ಕಾಣುತ್ತದೆ:

ಕನಿಷ್ಠೆಯಂ ನಿಷ್ಠುರೆಯಂ ಸಕೋಪೆಯುಂ
ನ್ಯೂನಾಂಗಿಯುಂ ಪೋಪುದೆ ಬುದ್ಧಿವಂತನುಂ॥

೪೫. ಇದುವೆ ಪಯೊಪಪ ಸಂಪುಟ (?) ವರ್ಗ ತ್ರಿಯಕ್ಷರಂ

೧೦-೬೧ (ಇದು ಪ, ಬ, ಮ ಎಂಬ ಒಂದೇ ವರ್ಗಾಕ್ಷರಗಳನ್ನು ಬಳಸಿ ಕಟ್ಟಿದ ಒಂದು ವೃತ್ತಬಂಧ. ಇಲ್ಲಿ ಅಕ್ಷರ ಸಂಖ್ಯೆ ಕಡಿಮೆ ಬಿದ್ದಿರಬೇಕು; ಯಾವ ವೃತ್ತಬಂಧವೆಂಬುದು ಸ್ಪಷ್ಟವಿಲ್ಲ.)

---

‡ ಹಿಂದೆ ಇದರ ಬಗೆಗೆ ಕೊಟ್ಟ ಅಡಿಟಿಪ್ಪಣಿ ನೋಡಿ.

(?) ಬಾ ಪೋಪಂ, ಪೋಪಪೆಂಬಾ ಪಾಪಿ, ಪಾಸಃಂ (?) ಪೋಪಿ. ಪೋ ಪಾಂಬ, ಪೋ, ಪೋಪ್ಪೈ ॥

೪೬. ಅನುಷ್ಟುಪ್ (ಛಂದೋ. ೫೯–೧೬.)

೧–೪೧, ೭೬, ೭೭ (ಸರಿ) ೧–೪೩, ೬೩ (ಗ ಪಾಠ) ೧–೪೨ (ಕವಿಚ. ಪಾಠ) ೧–೭೯, ೮೦ (ಅಶುದ್ಧ.)

೪೭. ಉಪಜಾತಿ

೧–೭೩ (ಇದು ಇಂದ್ರವಜ್ರ ಉಪೇಂದ್ರವಜ್ರಗಳನ್ನು ಸೇರಿಸಿ ಮಾಡಿದ ಉಪಜಾತಿ ವೃತ್ತ. ಇದರ ಪ್ರಸ್ತಾರದಲ್ಲಿ ೧, ೪ನೇ ಪಾದ ಇಂದ್ರವಜ್ರದ, ೨, ೩ನೇ ಪಾದ ಉಪೇಂದ್ರವಜ್ರದ ಲಕ್ಷಣವನ್ನು ಪಡೆದಿವೆ ; ಸರಿ.)

೪೮. ನಾಲ್ಕು ವೃತ್ತಮುಂ . . .

೧೦–೨೪ (ಮೇಲುನೋಟದಲ್ಲೆ ಕಾಣುವಂತೆ ಇದು ಕಂದಪದ್ಯ. ಇದರಲ್ಲಿ ೪ನೇ ಪಾದವನ್ನು ಬಿಟ್ಟು ೫ನೆಯ ಪಾದವನ್ನುಪಯೋಗಿಸಿಕೊಂಡರೆ ಕಂದಕ್ಕೆ ಸರಿ ಹೋಗುವುದು. ೨ನೆಯ ಪಾದದಲ್ಲಿ ೨ಮಾತ್ರೆ ಕಡಿಮೆಯಿದೆ. '2:2 ಖಚರಂ 2:4 ಪರನುಂ 4:3 ರ್ಮಗುಣಶಿ' ಎಂದಿಟ್ಟುಕೊಳ್ಳಬಹುದು. ಈ ಕಂದಪದ್ಯ ಬೇರೆ ಚಿತ್ರಬಂಧಗಳಿಗೂ ಅನುವಾಗಿ, ೪ ವೃತ್ತಭೇದವನ್ನೂ ಕೊಡುವುದು.*

(೧) **ಗೀತಿಕೆ:**

ಹರಿಯುಂ ಹರಿಯುಂ ಹರಿಯುಂ
ಹರಿಯುಂ ಖಚರಂ ಸಮಾಧಿಪರನುಂ ತಾಂ
ಹರಿಸುತನುಂ ಮಾರುತಿಯುಂ
ಮಾರುತಿಯುಂ ಧರ್ಮಗುಣ ಶಿಲೀಮುಖನುಂ

---

* ಮಧ್ಯ ಛಂದಸ್ಸಿನ ಪ್ರವರ ವೃತ್ತ : ಹರಿಯುಂ । ಹರಿಯುಂ । ಹರಿಯುಂ । ಹರಿಯುಂ ॥ ಹಾಗೆಯೇ ಕುಮುದ ವೃತ್ತ : ಹರಿಯುಂ ಖಚರಂ । ಹರಿಯುಂ ರತಿಯುಂ । ಹರಿಯುಂ ರತಿಯುಂ । ಹರಿಯುಂ ಸುತನುಂ ॥—ಇದೇ ರೀತಿ ಇನ್ನೂ ವೃತ್ತಗಳನ್ನು ಹೊರಡಿಸಬಹುದೆಂದು ಕಾಣುವುದು.

(೨) ಉಪಗೀತಿ : 1, 3ನೇ ಪಾದಗಳನ್ನು ಹಾಗೇ ಇಟ್ಟು 2, 4ನೇ ಪಾದಗಳನ್ನು

ಹರಿಯುಂ ಖಚರಂ ಸಮಾಧಿಪನುಂ (2)
ಮಾರುತಿಯುಂ ಧರ್ಮಗುಣ ತತಿಯುಂ (4)

ಎಂದಿಡಬೇಕು.

(೩) ಉದ್ಗೀತಿ : 1, 3ನೇ ಪಾದಗಳನ್ನು ಹಾಗೇ ಇಟ್ಟು 2, 4ನೇ ಪಾದಗಳನ್ನು

ಹರಿಯುಂ ಖಚರಂ ಸಮಾಧಿಪನುಂ
ಮಾರುತಿಯುಂ ಧರ್ಮಗುಣ ಶಿಳೀಮುಖನುಂ

ಎಂದಿಡಬೇಕು.

(೪) ಆರ್ಯಾ : 1, 3ನೇ ಪಾದಗಳನ್ನು ಹಾಗೆ ಇಟ್ಟು 2, 4ನೇ ಪಾದಗಳನ್ನು

ಹರಿಯುಂ ಖಚರಂ ಸಮಾಧಿಪರನುಂ ತಾಂ
ಮಾರುತಿಯುಂ ಧರ್ಮಗುಣ ತತಿಯುಂ

ಎಂದಿಡಬೇಕು.

೪೯. ಮಯೂರ ಕ್ರೀಡೆ

೧೦-೧೪, ೧೫. (ಇವು ೨ ಕಂದಪದ್ಯಗಳು. ಇದರಲ್ಲಿ ೧೦-೧೪—1:3 ತನೆಸಲ್. ಇದನ್ನು ಕವಿ 'ಮಯೂರಕ್ರೀಡೆ' ಎಂದಿರುವುದರ ಉದ್ದೇಶ ವೇನೋ ತಿಳಿಯದು. ಈ ಪದ್ಯಗಳಿಂದ ದ್ವಿಪದಿಕೆ, ಗೀತಿಕೆ, †ಐದು ಅಕ್ಕರ ಗಳನ್ನೂ ಉದ್ಧರಿಸಬಹುದೆಂದು ಕವಿಯ ಸೂಚನೆಯಿದೆ,

‡ ದ್ವಿಪದಿಕೆ :

ಧುರದೊಳಿಂದ್ರಸುತನೆನಲ್ಪರನಾರಿಗೆ ವಾಯುಜನಿವನೆನಲು
ವರ್ರೆಗೆ ಕರಮೆಯ್ತಿರುಚಿ ಹರಿ ಸಾಹಸನೀಶ್ವರನೂರ್ಜಿತಂ ಸ್ಮರಂ.

---

† ಇವರ ಬಗೆಗೆ ಕೊಟ್ಟ ಹಿಂದಿನ ಅಡಿ ಟಿಪ್ಪಣಿ ನೋಡಿ.

‡ ಇವುಗಳ ಲಕ್ಷಣಗಳಿಗೆ ಛಂದೋ,-೭೦-೪, ೫, ೬, ೭, ೮ ನೋಡಿ ಕ್ರಮವಾಗಿ ಇವರ ಲಕ್ಷಣ : (1) 1 ಬ್ರ, 5 ವಿ, 1 ರು. (2) 2 ವಿ. 1 ಬ್ರ 2 ವಿ. 1 ಬ್ರ (3) 1 ಬ್ರ 3 ವಿ, 1 ರು. (4) 1 ಬ್ರ. 2 ವಿ, 1 ರು. (5) 2 ವಿ, 1 ರು.

ಗೀತಿಕೆ (ಆರ್ಯಾಭೇದ) :

ಧುರದೊಳಗಿಂದ್ರಸುತನೆನಲ್
ಪರನಾರಿಗೆ ವಾಯುಜ ಸ್ವಯಂ ತಾನು
ರ್ವರೆಗೆ ಗಿರಿಜಾತ್ಮಭವನೆನೆ
ವರವಿಕ್ರಮನುನ್ನತೋನ್ನತಂ ಸುಭಟಂ ॥

*ಗೀತಿಕೆ (ಅಂಶಗಣ) :

ಧುರದೊಳಗಿಂದ್ರಸುತನೆನ
ಲ್ಪರನಾರಿಗೆ ವಾಯುಜನೆನೆ ತಾಂ ಸ್ವಯಂ ।
ಗಿರಿಜಾತ್ಮಭವನುರ್ವರೆಗೆ ತಾಂ
ವರ ವಿಕ್ರಮನುನ್ನತೋನ್ನತನೆನಿಕುಂ ॥

ಪಿರಿಯಕ್ಕರ : ಪ್ರತಿಯೆರಡು ಪಾದಗಳನ್ನು ಒಂದಾಗಿ ಬರೆದು, ನಾಲ್ಕು ಪಾದಗಳನ್ನಾಗಿ ಮಾಡಿ, ಈ ವ್ಯತ್ಯಾಸವನ್ನು ಮಾಡಿದಲ್ಲಿ ಗಣ ವಿನ್ಯಾಸ ಲಕ್ಷಣಾನ್ವಿತವಾಗುವುದು.

1:1 ವಿ. 1:2 ಬ್ರ. 1:4 ಬ್ರ. 2:4 ಬ್ರ. 4:4 ಬ್ರ.

ದೊರೆಯಕ್ಕರ :

ಧುರದೊಳಗಿಂದ್ರ ಸುತನೆನಲ್ ವಾಯುಜಂ ತಾನುರ್ವರೆಗೆನೆ
ಗಿರಿಜಾತ್ಮಭವನೆನೆ ವರ ವಿಕ್ರಮನುನ್ನತೋನ್ನತಂ ಪರಮ ।
ಹರಭಕ್ತನಿವನೆನೆ ದೊರೆಯುಂ ಗುಣಿಯೂರ್ಜಿತಂ ನಯಜ್ಞಂ ತಾಂ
ಸ್ಮರನತಿರುಚಿ ಚರಿತಾರ್ಥಂ ಹರಿಸಾಹಸಂ ಸಚ್ಚರಿತನುಂ ॥

ನಡುವಣಕ್ಕರ :

ಪರನಾರಿಗೆ ವಾಯುಜ ಸ್ವಯಂ ತಾನೆನಲುರ್ವರೆಗೆ
ಗಿರಿಜಾತ್ಮಭವನೆನೆ ವರ ವಿಕ್ರಮನುನ್ನತೋನ್ನತಂ ತಾಂ ।
ಪರಮ ಹರಭಕ್ತನಿವನೆನೆ ದೊರೆಯುಂ ಗುಣಿಯೂರ್ಜಿತಂ
ಕರಮೆ ಚರಿತಾರ್ಥನತಿರುಚಿ ಹರಿಸಾಹಸನೀಶ್ವರಂ ॥

---

*ಛಂದೋ. ಯಲ್ಲಿ ೭೪-೧೮ ನೋಡಿ. ಇಲ್ಲಿ ಇದರ ಲಕ್ಷಣ ನಿಶ್ಚಿತವಾಗಿಲ್ಲ ವಾದ್ದರಿಂದ ಪ್ರಸಕ್ತ ನಾವು ಗೀತಿಕೆಯಾಗಿ ಅಳವಡಿಸಿರುವ ಪದ್ಯದ ಛಂದಸ್ಸು ಹೀಗಿದೆ ; ವಿ. ಬ್ರ. ವಿ. । ಬ್ರ. ವಿ. ಬ್ರ. ವಿ. । ವಿ. ಬ್ರ. ವಿ. । ಬ್ರ. ವಿ. ಬ್ರ. ವಿ. ।

ಎಡೆಯಕ್ಕರ : ೧೪ನೇ ಪದ್ಯದ ೨, ೪ನೇ ಪಾದಗಳನ್ನೂ ೧೫ನೇ ಪದ್ಯದ ೨, ೪ನೇ ಪಾದಗಳನ್ನೂ ಕ್ರಮವಾಗಿ ಒಟ್ಟಿಗೆ ೪ ಪಾದಗಳಾಗಿ ಬರೆದು ಪ್ರಸ್ತಾರಿಸಿದರೆ ಗಣವಿಭಜನೆ ಸರಿಯಾಗಿ ಆಗುತ್ತದೆ. ಇದರಲ್ಲಿ 1:4 ತಾನೆನಲುಂ

ಕಿಱಿಯಕ್ಕರ :

ಧುರದೊಳಗಿಂದ್ರಸುತನೆನಲ್ಲರ
ನಾರಿಗೆ ವಾಯುಜ ತಾನೆನಲುಂ
ಹರಭಕ್ತಂ ಗುಣೆಯೂರ್ಜಿತಂ ನಯಜ್ಞಂ
ಚರಿತಾರ್ಥನತಿರುಚಿ ಹರಿಸಾಹಸಂ ॥

೫೦. ಎಡೆಯಕ್ಕರ (ಛಂದೋ ೭೧–೭)

೭–೫ (1:4 ಯ್ದ್ವಾ ಪಾಂಗಿನಿಂ 2:3 ಲೊತ್ತು ಗು 3:3 ಲಮನೆ ಚುಂ)

೫೧. ನಡುವಣಕ್ಕರ (ಛಂದೋ ೭೧–೬)

೧೧–೪೭ 2:2 ಬ್ರ. 3:4 ದಂತೆ ರ 3:5 ಹಸ್ಯಂಗಳಂ 4:3 ಲ್ಲ ಬೆಸೆಗೊ 4:5 ಯಿಂಗಿತಂಗಳ್.

೫೨. ತ್ರಿಪದಿ (ಛಂದೋ ೭೨–೧೦.)

೮–೯ (1:4 ಸುರತಮೋ 2:3 ಮಹಿವಳ.)

೫೩. ಚೌಪದಿ (ಛಂದೋ ೭೩–೧೪.)

೮–೩೪ (ಇವನ್ನು 'ಸರೋಜ ಚೌಪದಿಗೆ* ಎಂದು ಹೇಳಿರುವುದೇಕೆಂದು ತಿಳಿಯದು. ಸಮುಚ್ಚಯಾರ್ಥದಲ್ಲಿ ಹೇಳಿರುವುದರಿಂದ ಇದರಿಂದ ಬೇರೆ ವೃತ್ತಭೇದಗಳೂ ಉದ್ಧಾರವಾಗಬಹುದು. ಇದನ್ನೇ ಸ್ವಲ್ಪ ಮಾರ್ಪಾಡು ಮಾಡಿ ಸೂಕ್ತಿಸು. ದಲ್ಲಿ ಕಂದಪದ್ಯವಾಗಿ ಕೊಟ್ಟಿದೆ. ಇರುವಂತೆ ಛಂದೋ. ಯ ಲಕ್ಷಣಾನುಸಾರವಾಗಿ ಸರಿಯಾಗಿದೆ. ಕಂದಪದ್ಯವೂ ಸರಿಯಾಗಿದೆ. ಈ

* ಕ. ಪ್ರತಿ : ಸರೋಜ ಚೌಪದಿಗೆ,

ಚೌಪದಿಯನ್ನು ಅಕ್ಷರಗಣಕ್ಕೆ ವಿಭಜಿಸಿದರೆ 'ಸಭಮ' ಎಂದಾಗುವ ಗಣವಿನ್ಯಾಸ ಪೂರ್ವ ನಿರ್ದೇಶಿತವಲ್ಲ. ಆದರೆ ಇದು ಪ್ರತಿಷ್ಠೆ ಛಂದಸ್ಸಿನ ಮೃಗನೇತ್ರ ವೃತ್ತವಾಗಿ ಹೀಗೆ ಮಾರ್ಪಡಬಹುದು : ರತಿಹೀನಂ | ಮತಿವಂತಂ | ಖತ ವಾಕ್ಯಂ । ಅತಿಶಿಷ್ಟಂ||)

೫೪. ಷಟ್ಪದಿ (ಛಂದೋ ೭೫-೨೧)

೧೧-೧೦ (ಪದ್ಯಪಾಠ ಅಶುದ್ಧವಾಗಿದೆ. ಅರ್ಥದಲ್ಲಿ ಕ್ಲೇಶವಿದೆ. ಇರುವಂತೆ ಇದರಲ್ಲಿ 2ನೇ ಪಾದದಲ್ಲಿ 2 ಅಕ್ಷರಗಳು (ತಾಂ ಕ್ಷು) ಹೆಚ್ಚಾಗಿಯೂ, 5, 6ನೇ ಪಾದಗಳಲ್ಲಿ ಒಂದೊಂದು ಅಕ್ಷರ ಕಡಿಮೆಯಾಗಿಯೂ ಇದೆ. ಇದನ್ನು ಹೀಗಿಟ್ಟುಕೊಳ್ಳಬಹುದೇ? : 2ನೇ ಸಾಲಿನಲ್ಲಿ ಹೆಚ್ಚಾಗಿರುವ ಅಕ್ಷರಗಳನ್ನು ತೆಗೆದು 3:1 ತಾಂ ಸತಿ 5·2 ಗಂ ತಾಂ ಕಾ 6:1 ಮಸುಖಿಮುಂ 6:3 ತತ್ಕಾಲವೋ.)

೫೫. ಪಿರಿಯಕ್ಕರ (ಛಂದೋ ೭೦-೪)

ಇತರತ್ರ ಪಾಠಗಳು ಕೆಟ್ಟಿರುವಂತೆ ಇಲ್ಲಿಯೂ ಹಲವಗೆಯಲ್ಲಿ ಪಾಠಗಳು ಕೆಟ್ಟಿವೆ. ಇಲ್ಲಿಯ ಸು. ೨೫ ಪಿರಿಯಕ್ಕರಗಳಲ್ಲಿ ಯಾವುದೊಂದೂ ಪೂರ್ತಿಯಾಗಿ ಲಕ್ಷಣಸಮನ್ವಿತವಾಗಿಲ್ಲ. ಅಲ್ಲೊಂದು ಇಲ್ಲೊಂದು ಪಾದ ಲಕ್ಷಣಕ್ಕೆ ಒಪ್ಪುತ್ತದೆ, ಅಷ್ಟೆ. ಉಳಿದೆಡೆಗಳಲ್ಲಿ ಪಾದಕ್ಕೆ ಆವಶ್ಯಕವಾದ ಗಣಗಳಿಗಿಂತ ಹೆಚ್ಚೋ ಕಡಿಮೆಯೋ ಇರುತ್ತದೆ. ಇಲ್ಲವೆ ಗಣಸಂಖ್ಯೆ ಸರಿಯಾಗಿದ್ದರೆ ವಿಷ್ಣುಗಳಿಗೆ ಬದಲಾಗಿ ಬ್ರಹ್ಮಗಳು ಅನಿಯತವಾಗಿ ಬರುವುದೂ ಕಾಣುತ್ತದೆ. ಶುದ್ಧ ಪಾಠಗಳು ಗೋಚರವಾಗದವರೆಗೆ ಗಣವಿನ್ಯಾಸವನ್ನು ಗುರುತಿಸುವುದು ಅಷ್ಟು ಉಪಯುಕ್ತವಾಗದು.

೫೬. ವನಮಂಜರೀ (ಛಂದೋ ೪೮-೧೩೫)

೧-೧೫ (ಕರ್ಣಾಟಕ ಕವಿಚರಿತೆಕಾರರು ಕವಿಚರಿತೆಯ ಮೊದಲಭಾಗದ ೯೩ನೇ ಪುಟದಲ್ಲಿ ಈ ವೃತ್ತವನ್ನು ಉದ್ಧರಿಸಿದ್ದಾರೆ. ಇಲ್ಲಿ ಕೊಟ್ಟಿರುವ ಪದ್ಯಪಾಠವನ್ನೇ 'ಕನ್ನಡ ಕೈಪಿಡಿ'ಯಲ್ಲಿಟ್ಟುಕೊಂಡಿದೆ. ಮದನತಿಲಕದ ಮುದ್ರಿತ ಪ್ರತಿಯ ಪಾಠ ಕವಿಚರಿತೆಯ ಪಾಠಕ್ಕಿಂತ ಅಲ್ಲಲ್ಲಿ ಸ್ವಲ್ಪ

ಬೇರೆಯಾಗಿವೆ. ಪ್ರಯೋಗಾನುಕೂಲ್ಯದ ದೃಷ್ಟಿಯಿಂದ, ಸಾಮಾನ್ಯವಾಗಿ ಅಂಗೀಕೃತವಾಗಿರುವ ಕವಿಚರಿತೆಯ ಪಾಠವನ್ನೇ ಇಲ್ಲಿಗೆ ಎಂದರೆ ಈ ಪ್ರಯೋಗ ಭಾಗವಲ್ಲಿ ಇಟ್ಟುಕೊಳ್ಳಲಾಗಿದೆ.† 'ಈ ಶ್ಲೋಕದಲ್ಲಿ ಅಲ್ಲಲ್ಲಿ ತಪ್ಪುಗಳಿವೆ' ಎಂದು ಕವಿಚರಿತೆಕಾರರು ಬರೆದಿದ್ದಾರೆ.‡ ಸದ್ಯಕ್ಕೆ, ನಾವು ಉದ್ಧರಿಸುವಷ್ಟು ವೃತ್ತಭೇದಗಳಿಗೆ ಇವು ಬಾಧಕವಾಗಿಲ್ಲ.

ಈ ವೃತ್ತಮೂಲದಿಂದ ಏಳ ವೃತ್ತಗಳೂ ಕೆಲವು ಬಂಧಗಳೂ ಉಂಟಾಗ ಬಹುದೆಂದು ಕವಿಯೂ ಸೂಚಿಸಿದ್ದಾನೆ. ಇಲ್ಲಿ ನಾವು ಅವನ ಸೂಚನೆಯ ಕೆಲವು ವೃತ್ತಗಳನ್ನೂ ಬೇರೆಯಾಗಿ ಕೆಲವನ್ನೂ ಒಟ್ಟು ೨೫ರಷ್ಟು ಮಾತ್ರ ಬಿಡಿಸಿ ತೋರಿಸಿದ್ದೇವೆ. ಕವಿಯು ಸ್ವತಃ ಪ್ರಯೋಗ ನಡಸಿ, ಎಣಿಸಿ, ಗುಣಿಸಿ, ಕೊಟ್ಟಿರುವ ಆ ಸಂಖ್ಯೆ, ಸಾಧ್ಯತೆಯೆದುರು ಈ ಸಂಖ್ಯೆ, ಈ ಸಾಧ್ಯತೆ ಚಿಕ್ಕದು. ಹೆಚ್ಚಿನ ಶ್ರಮ, ಪರಿಶ್ರಮ, ಸಲಹೆಗಳು ವಿನಿಯೋಗವಾದರೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವೃತ್ತಗಳನ್ನು ಹೊರಡಿಸುವುದು ಸಾಧ್ಯ; ಅಲ್ಲದೆ ಕವಿಶಕ್ತಿಯ ಅಳವನ್ನಳೆಯಲು ಅದು ಅಗತ್ಯ.

ಈ ವೃತ್ತವು ವರ್ಣ, ಅಂಶ, ಮಾತ್ರಾ ಗಣಗಳಿಗೆ ಸಂಬಂಧಪಟ್ಟ ಇತರ ವೃತ್ತಗಳಾಗಿ ಹೊಂದಿಕೊಳ್ಳಬಲ್ಲದು. ಹಾಗೆ ಹೊಂದಿಕೊಳ್ಳಲು ಅನುವಾದ ಶಬ್ದರಚನೆ ಈ ಪದ್ಯದಲ್ಲಿದೆ. ಪ್ರತ್ಯಯೋಪಸರ್ಗಗಳ ಗಂಟಿಲ್ಲದೆ ಮಾತುಗಳು ಬಿಡಿ ಬಿಡಿಯಾಗಿವೆ. ಇದರಿಂದ ಮಾತುಗಳನ್ನು ಜೋಡಿಸುವಾಗ ಅನ್ವಯಕ್ಲೇಶವಿರುವುದಿಲ್ಲ. ಮೂರು ಬಗೆಯಲ್ಲಿ ಪ್ರಾಸವಿಡುವ ಸೌಲಭ್ಯವಿದೆ. ಅಕ್ಷರಗಣವಾದರೆ ಭಗಣ ಸಗಣ ಹಾಗೂ ಒಂದು ಗುರುವಿನ ವಹಿವಾಟು; ಅಂಶಗಣವಾದರೆ ವಿಷ್ಣು, ರುದ್ರ ;ಮಾತ್ರಾಗಣವಾದರೆ ಚತುರ್ಮಾತ್ರಾಗಣ— ಹೀಗೆ ವಚನರಚನೆಯ ವೈಚಿತ್ರ್ಯದಿಂದ ಈ ವನಮಂಜರೀವೃತ್ತ ವಿವಿಧ ವೃತ್ತ ವಿಲಾಸನನ್ನು ಮೆರೆಯುವ ಒಂದು ಅಪೂರ್ವ ಮಾದರಿಯಾಗಿದೆ.

---

† 'ಮಾಚನೃಪಂ' ಎಂಬುದನ್ನು ಪ್ರಸಕ್ತ ಗ್ರಂಥದಲ್ಲಿರುವಂತೆ 'ರೇಚನೃಪಂ' ಎಂದಿರಿಸಿಕೊಂಡಿದೆ.

‡ ಇತರತ್ರ ಹೇಗೋ ಇಲ್ಲಿಯೂ ಅರ್ಥದೃಷ್ಟಿಯಿಂದ ಪರಿಷ್ಕಾರ ಅಗತ್ಯ.

೧. ವನಮಂಜರೀ (ಛಂದೋ ೪೮-೧೩೫)

ಅಂಗನೃಪಾಯುತಿ ತುಂಗಭುಜಂ ಕಲಿಯಿಂಗಿತ್ಸ ಶಿಕ್ಷಿತನಿಂದುಯುಶಂ
ಪಿಂಗಜದೊಂಗತ ಭೃಂಗಕಚಂ ಕಲಿ ಮಂಗಳಲಕ್ಷಣಯುಕ್ತನಿವಂ
ಸಂಗರ ಕೇಸರಿ ಸಂಗಗುಣಂ ಬಲಿ ಭೃಂಗರದಕ್ಷನುವಾಯತನುಂ
ಸಂಗದ ಸನ್ಮತಿ ರಂಗವಹಂ ಸಲೆ ಭಂಗಿಯನೀಕ್ಷಿಸಿ ರೇಚನೃಪಂ.

(೭ ಭಗಣ + ೧ ಗುರು)

೨. ಎಡೆಯಕ್ಕರ (ಛಂದೋ ೭೧-೭)

ಕಲಿಯುಂ ಅಂಗನೃಪಾಯುತಿ ತುಂಗಭುಜಂ
ಕಲಿಯುಂ ಪಿಂಗಜ ದೊಂಗತ ಭೃಂಗಕಚಂ
ಬಲಿಯುಂ ಸಂಗರ ಕೇಸರಿ ಸಂಗಗುಣಂ
ಸಲೆ ತಾಂ ಸಂಗದ ಸನ್ಮತಿ ರಂಗವಹಂ. (೧ ಬ್ರ, ೨ ವಿ, ೧ರು.)

೩. ಕಿಱಿಯಕ್ಕರ (ಛಂದೋ ೭೧-೮)

(i) ಅಂಗನೃಪಾಯುತಿ ತುಂಗಭುಜಂ
ಇಂಗಿತ ಶಿಕ್ಷಿತನಿಂದುಯುಶಂ
ಪಿಂಗಜ ದೊಂಗತ ಭೃಂಗಕಚಂ
ಮಂಗಳ ಲಕ್ಷಣಯುಕ್ತನಿವಂ

(ii) ಉಳಿದೆರಡು ಸಾಲುಗಳಿಗೂ ಹೀಗೆಯೇ. (೨ ವಿ, ೧ ರು.)

೪. ಚೌಪದಿಗೆ (ಛಂದೋ ೭೩-೧೪)

ಶಿಕ್ಷಿತನಿಂದುಯುಶಂ
ಲಕ್ಷಣಯುಕ್ತನಿವಂ
ದಕ್ಷನುವಾಯತನುಂ
ಈಕ್ಷಿಸಿ ರೇಚನೃಪ (೧ ವಿ, ೧ರು.)

---

s 'ಕಲಿಯುಂಗಿತ' ಎಂಬುದು ಕವಿಚರಿತೆ ಪಾಠ

೫. * ಷಟ್ಪದಿ (ಛಂದೋ ೭೫—೨೧)

(i) ಅಂಗನೃಪಾಯುತಿ
ತುಂಗಭುಜಂ ಕಲಿ
ಯಿಂಗಿತ ಶಿಕ್ಷಿತನಿಂದುಯಶಂ
ಪಿಂಗಜದೊಂಗತ
ಭೃಂಗಕಚಂ ಕಲಿ
ಮಂಗಳಲಕ್ಷಣಯುಕ್ತನಿವಂ

(ii) ಉಳಿದೆರಡು ಸಾಲುಗಳಿಗೂ ಹೀಗೆಯೇ (೬ ವಿ, ೧ ರು; ೬ ವಿ, ೧ ರು,)

೬. ತ್ರಿಪದೋನ್ನತಿ (ಛಂದೋ ೫೮—೧೩)

(i) ಅಂಗನೃಪಾಯುತಿ ತುಂಗಭುಜಂ
ಇಂಗಿತಶಿಕ್ಷಿತನಿಂದುಯಶಂ
ಪಿಂಗಜದೊಂಗತ ಭೃಂಗಕಚಂ ಕಲಿ
ಮಂಗಳಲಕ್ಷಣಯುಕ್ತನಿವಂ

(ii) ಉಳಿದೆರಡು ಸಾಲುಗಳಿಗೂ ಹೀಗೆಯೇ (೧, ೨, ೪ನೇ ಪಾದ : ೩ ಭಗಣ + ೧ ಗುರು. ೩ನೇ ಪಾದ : ೪ ಭಗಣ.)

೭. *ಪದ್ಮಮುಖೀ (ಛಂದೋ ೪೧—೧೧೧)

ಅಂಗನೃಪಾಯುತಿ, ಪಿಂಗಜದೊಂಗತ, ಸಂಗರಕೇಸರಿ, ಸಂಗದ ಸನ್ಮತಿ— ಎಂಬಿವುಗಳನ್ನು ತೆಗೆದು ಇರುವಂತೆ ಓದಬೇಕು. (೫ ಭಗ·೨ ೧ ಗುರು)

---

*ಇದು ಮೂಲತಃ ಅಂಶಗಣದ ಷಟ್ಪದಿ. ನಿಶ್ಚಿತವಾದ ಮಾತ್ರಾಗಣವಿನ್ಯಾಸವಿರುವ ಕಾರಣ ಶರಷಟ್ಪದಿಗೂ ಒಪ್ಪುತ್ತದೆ. ಶ್ರೀ ತೀ. ನಂ. ಶ್ರೀ ಯವರ 'ಅಪೂರ್ವ ಷಟ್ಪದಿಯ ಲಕ್ಷಣ' ನೋಡಿ.

*ಕವಿಚರಿತೆಯಲ್ಲಿ ಇದನ್ನು 'ಜಗದ್ವಂದಿತ' ಎಂದೂ ಕೈಪಿಡಿಯಲ್ಲಿ 'ಅಂಗರುಚಂ' ಎಂದೂ ಹೇಳಿದೆ. ಮದನ ತಿಲಕದಲ್ಲಿ ತ್ರಿಪದೋನ್ನತಿಯನ್ನು ಹೇಳಿದಮೇಲೆ ಹೇಳಿರುವ ವಲ್ಲಮುಖಿ (ವನಜಮುಖಿ?) ಇದೇ ಇರಬಹುದೆ? ಇದರೊಂದಿಗೆ ಪದ್ಯ ೨೨ ರ ಅಡಿ ಟಿಪ್ಪಣಿ ನೋಡಿ.

೮. †ತೋಟಕ (ಛಂದೋ ೩೨–೭೬)

ಪದ್ಯ ೧ ರಲ್ಲಿ ಕಲಿ, ಕಲಿ, ಬಲಿ, ಸಲೆಯಿಂದ ಕೂಡಿದ ಮುಂದಿನ ೪ ಪಾದಗಳನ್ನು ಕ್ರಮವಾಗಿ ಬರೆಯಬೇಕು (೪ ಸಗಣ).

೯. ‡ಚಿತ್ರಪದ (ಛಂದೋ ೨೯–೬೦)

(i) ಅಂಗನೃಪಾಯತಿ ತುಂಗಭುಜಂ
ಇಂಗಿತ ಶಿಕ್ಷಿತನಿಂದುಯಶಂ
ಪಿಂಗಜ ದೊಂಗತ ಭೃಂಗಕಚಂ
ಮಂಗಳ ಲಕ್ಷಣಯುಕ್ತನಿವಂ

(ii) ಉಳಿದೆರಡು ಸಾಲುಗಳಿಗೂ ಹೀಗೆಯೇ (೩ ಭಗಣ + ೧ ಗುರು)

೧೦. §ಅಮಳ (ಛಂದೋ ೨೩–೩೩)

ಪದ್ಯ ೪.ಇಲ್ಲಿಗೆ ಲಕ್ಷ್ಯವಾಗುತ್ತದೆ (೨ ಭಗಣ+೧ ಗುರು.)

೧೧. ಸೌಂದರ (ಛಂದೋ ೧೮–೧೧)

ತುಂಗಭುಜಂ
ಭೃಂಗಕಚಂ
ಸಂಗಗುಣಂ
ರಂಗವಹಂ ॥ (೧ ಭಗಣ + ೧ ಗುರು)

೧೨. ಕುಮುದ (ಛಂದೋ ೨೨–೨೯)

ಪದ್ಯ ೧೧ರ ಮೊದಲಿಗೆ ಕ್ರಮವಾಗಿ ಕಲಿ ಕಲಿ ಬಲಿ ಸಲೆ–ಸೇರಿಸಬೇಕು. (೨ ಸಗಣ.)

---

†ಕ. ದಲ್ಲಿ 'ರಾಟಮುಂ', ಗ. ಪ್ರತಿಯಲ್ಲಿ ತ್ರಾಟ [ಕ] ಮುಂ ಎಂದಿರುವುದು ಇದೇ ಇರಬಹುದೆ?

‡ಕ. ದಲ್ಲಿ 'ಚಿತ್ರಪದಕ' ಎಂದಿದೆ.

§ಾವಿಚರಿತೆಯಲ್ಲಿ 'ಕಮಳ' ಎಂದೂ, ಕೈಪಿಡಿಯಲ್ಲಿ 'ಕಮಲ' ಎಂದೂ ಇದೆ. ಛಂದೋ. ಯ ಮದ್ರಾಸು ಮುದ್ರಣದಲ್ಲಿ 'ಅಮಳ' ವೆಂದು ಕೊಟ್ಟು, ಪಾಠಾಂತರದಲ್ಲಿ ಕಮಳ' ಇರಿಸಿದೆ; "ಕಮಳವೆಂದು ವೃತ್ತದ ಹೆಸರು" ಎಂದು ಅಲ್ಲಿ ಹೇಳಿದೆ. ಮದತಿ. ದ ಈ ಪ್ರತಿಯಲ್ಲಿ 'ಕಮಳ' ಎಂದಿದೆ. ಆದ್ದರಿಂದ ವೃತ್ತನಾಮ 'ಕಮಳ'ವೇ ಇರಬೇಕು.

೧೩. ಸೌಮ್ಯಾ (ಹೇಮ ೨–೯೯)

ಪದ್ಯ ೪ರ ಮೊದಲಿಗೆ ಕ್ರಮವಾಗಿ ಕಲಿ, ಕಲಿ, ಬಲಿ, ಸಲೆ–ಸೇರಿಸಬೇಕು (೩ ಸಗಣ.).

೧೪. ಗಿರಿಧರ (ಛಂದೋ ೧೬–೩)

ಕಲಿ। ಸಲೆ। ಬಲಿ। ಕಲಿ (೨ ಲ.).

೧೫. *ಕೋಮಲ ರುಚಿರ (ಛಂದೋ ೩೬–೯೧)

ಪದ್ಯ ೪ರ ಪ್ರತಿಪಾದದ ಮುಂದೆ ಕಲಿ ತುಂಗಭುಜಂ, ಕಲಿ ಭೃಂಗಕಚಂ, ಬಲಿ ಸಂದ ಗುಣಂ, ಸಲೆ ರಂಗವಹಂ—ಎಂಬುದನ್ನು ಕ್ರಮವಾಗಿ ಒಂದೊಂದೇ ಸೇರಿಸಬೇಕು (೪ ಭಗಣ+೧ಗುರು.).

೧೬. ನಲಿನೀ (ಪಿಂಗ ೭-೧೧-೧೨)

ಕಲಿಯುಂಗನೃಪಾಯುತಿ ಶಿಕ್ಷಿತನಿಂದುಯುಶಂ
ಕಲಿ ಪಿಂಗಜದೊಂಗತ ಲಕ್ಷಣಯುಕ್ತನಿವಂ
ಬಲಿ ಸಂಗರ ಕೇಸರಿ ದಕ್ಷನುವಾಯತನುಂ
ಸಲೆ ಸಂಗದ ಸನ್ಮತಿ ಈಕ್ಷಿಸೆ ರೇಚನೃಪಂ (೫ ಸಗಣ.)

೧೭. ದುರ್ಮಿಲ (ಗಂಗ ೨–೨೨)

ಪದ್ಯ ೧ರ ಮೊದಲಿಗೆ ಕಲಿ, ಕಲಿ, ಬಲಿ, ಸಲೆ –ಸೇರಿಸಬೇಕು(೮ ಸಗಣ.)

೧೮. ಮಾಣವಕ (ಛಂದೋ ೨೫–೪೩)

ತುಂಗಭುಜಂ ಇಂದುಯುಶಂ
ಭೃಂಗಕಚಂ ಯುಕ್ತನಿವಂ
ಸಂಗಗುಣಂ ಆಯುತನುಂ†
ರಂಗವಹಂ ರೇಚನೃಪಂ (ಭತಲಗ.)

---

*ಅಂಗರುಚಿ (ಜಯ ೨–೧೬೧.)

†'ದಕ್ಷನುವಾಯುತನುಂ' ಎಂದು ಬರೆದಿರುವುದು ನ್ಯಾಯವಾಗಿ 'ದಕ್ಷನುವಾಯತನುಂ' ಎಂದಿರಬಹುದೆ?–ಎಂದು ಊಹಿಸಿ ಹೀಗೆ ಪದಚ್ಛೇದ ಮಾಡಿದೆ,

೧೯. ಏಳೆ (ಛಂದೋ ೭೩–೧೩)

ಅಂಗನೃಪಾಯುತಿ ತುಂಗಭುಜಂ ಕಲಿ
ಭೃಂಗಕಚಂ ಲಕ್ಷಣಯುಕ್ತಂ. (೫ ವಿ, ೧ ಬ್ರ, ೧ ವಿ.)

೨೦. ದ್ವಿಪದಿ‡ (ಛಂದೋ ೬೭–೧೧)

ಸಂಗಗುಣಂ ತುಂಗಭುಜಂ ಕಲಿಯಿಂಗಿತ ಶಿಕ್ಷಿತನಿಂದುಯಶಂ
ರಂಗವಹಂ ಭೃಂಗಕಚಂ ಕಲಿ ಮಂಗಳ ಲಕ್ಷಣಯುಕ್ತನಿವಂ
(೬+೨೦+೨ ಪಾದಕ್ಕೆ)

೨೧. ಉತ್ಸಾಹ (ಛಂದೋ ೭೪–೧೯)

ಕಲಿಯಂಗನೃಪಾಯತಿ ತುಂಗಭುಜಂ ಕಲಿಯಿಂಗಿತ ಶಿಕ್ಷಿತನುಂ ತಾಂ
ಕಲಿ ಪಿಂಗಜದೊಂಗತ ಭೃಂಗಕಚಂ ಕಲಿ ಮಂಗಳ ಲಕ್ಷಣಯುಕ್ತಂ
ಬಲಿ ಸಂಗರಕೇಸರಿ ಸಂಗಗುಣಂ ಬಲಿ ಭೃಂಗರದಕ್ಷನಿವಂ ತಾಂ
ಸಲೆ ಸಂಗದ ಸನ್ಮತಿ ರಂಗವಹಂ ಸಲೆ ಭಂಗಿಯನೀಕ್ಷಿಸಿ ರೇಚಂ (೭ ಬ್ರ+
೧ ಗು.)

೨೨. ಮದನವತಿ* (ಛಂದೋ ೭೪–೧೭)

ಇಂಗಿತ ಶಿಕ್ಷಿತನಿಂದುಯಶಂ ಕಲಿತುಂಗಭುಜಂ
ಮಂಗಳ ಲಕ್ಷಣಯುಕ್ತನಿವಂ ಕಲಿ ಭೃಂಗಕಚಂ
ಭೃಂಗರ ದಕ್ಷನುಪಾಯುತನುಂ ಬಲಿ ಸಂಗಗುಣಂ
ಭಂಗಿಯನೀಕ್ಷಿಸಿ ರೇಚನೃಪಂ ಸಲೆ ರಂಗವಹಂ. (೪ ವಿ+೧ ರು.)

---

‡ಛಂದೋ. ಯ 'ದ್ವಿಪದಿ'ಯ ಲಕ್ಷ್ಯ ನೋಡಿ.

*ಪದ್ಯ ಏಳನ್ನೇ ಇನ್ನೊಂದು ಕ್ರಮದಲ್ಲಿ 'ಮದನವತಿ' ಯ ಲಕ್ಷ್ಯವಾಗಿ ಗ್ರಹಿಸಬಹುದು. ಹಾಗೆಯೇ ಈ ಪದ್ಯ ೨೨ನ್ನು 'ಪದ್ಮಮುಖಿ' ಯಾಗಿ ಗ್ರಹಿಸಬಹುದು,

೨೩. ತೋಟಕ (ಗಂಗ ೨_೯೩)

ಪದ್ಯ ೧೮ರಲ್ಲಿ ಕಲಿ, ಕಲಿ, ಬಲಿ, ಸಲೆ—ಎಂದು ಕೊನೆಯಾಗುವ ಭಾಗದ ವರೆಗೆ ಗ್ರಹಿಸಿ ಕ್ರಮವಾಗಿ ಬರೆಯಬೇಕು (೪ ಭಗಣ.).

೨೪. ದೋಧಕ (ಛಂದೋ ೩೦_೬೬)

ಪದ್ಯ ೯ರ ಪ್ರತಿಪಾದದ ಕೊನೆಗೂ 'ತಾಂ' ಎಂಬುದನ್ನು ಸೇರಿಸಬೇಕು. (೩ ಭಗಣ + ೨ ಗು.) ಉಳಿದೆರಡು ಸಾಲುಗಳಿಗೂ (ಚಿತ್ರಪದ_೯–ii) ಹೀಗೆಯೇ ಮಾಡಿದರೆ ಇನ್ನೊಂದು ದೋಧಕವಾಗುವುದು.

ಇಲ್ಲಿಯ ವರ್ಣಗಣಗಳಲ್ಲಿ, ಕೆಲವೆಡೆ, ಮಾತ್ರಾಗಣದ ನಡೆಯನ್ನು ಗುರುತಿಸಬಹುದು.‡ ಕೆಲವಲ್ಲಿ ಲಯಗತಿ ಖಚಿತ. ಕರ್ತೃವಿನಿಷ್ಟದಂತೆ ಗಣ ವಿನ್ಯಾಸ ಬೇರೆ ಬಗೆಯಲ್ಲಿಯೂ ಇರಬಹುದು :

ಕಲ್ಪಲತೆ ೩, ೩, ೪, ೩, ೩ (೩, ೩, ೪, ೪+ಗು.) ಕಳಕಂಠ (೪, ೪) ಕಳಹಂಸ (೩, ೩, ೪, ೪+ಗು.) ಕುಂತಳೆ (೩, ೪, ೩.) ಮತ್ತಕೋಕಿಲ (೩, ೩, ೫, ೫ ಇಲ್ಲವೆ ೩, ೩, ೪, ೪+ಗು) ಚಿತ್ರಲತೆ (೪, ೪, ೪+ಗು.) ತ್ರಿಪದೋನ್ನತಿ (೧, ೨, ೪ನೇ ಪಾದ : ೪ರ ೩ ಗಣ+ಗು ; ೩ನೇ ಪಾದ ೪ರ ೪ ಗಣ.) ತೋಟಕ (೪ರ ೪ ಗಣ.) ದ್ರುತವಿಳಂಬಿತ (೩ ೪, ೪, ೫.) ದೋಧಕ (೪ರ ೪ ಗಣ.) ಮಣಿರಂಗ (೫, ೪, ೪+ಗು.) ರಥೋದ್ಧತ (೩ ೩, ೪, ೩, ೩.) ಲಯಗ್ರಾಹಿ (೫, ೫, ೫, ೪.) ಲಲಿತಪದ (೪ರ ೪ ಗಣ.) ಲುಳಿತ (೪ರ ೩ ಗಣ.) ಮದಮಯಂದ (೫, ೫, ೫, ೪.) ವಸಂತತಿಲಕ (೪, ೪, ೪, ೪, ೫.) ವಸುಮತಿ (೪, ೫.) ವಿದ್ಯುನ್ಮಾಲೆ (೪ರ ೪ ಗಣ.) ಸ್ವಾಗತ (೩, ೫, ೩, ೫.) *ಚೌಪದಿಗೆ ೪, ೪, ೪ + ಗು. ಇಲ್ಲವೆ ೬, ೪, ೪.)

---

‡ ಇಲ್ಲಿ ಪೂರ್ವಪರಿಚಿತವಾದ ತರಳ, ಮಲ್ಲಿಕಾಮಾಲೆ, ಕ್ರೌಂಚಪದಗಳನ್ನು ಬಿಟ್ಟಿದೆ.

* ಇದು ಮಾತ್ರಗಣಾತ್ಮಕವಾದರೂ ಸೌಕರ್ಯಕ್ಕಾಗಿ ವರ್ಣಗಣಗಳೊಂದಿಗೆ ಕೂಡಿಸಿ ಹೇಳಿದೆ.

ಸಂಕೇತಗಳು :

ವಡ್ಡಾ–ವಡ್ಡಾರಾಧನೆ, ಛಂದೋ–ಛಂದೋಂಬುಧಿ (೧೯೪೬ ರ ಮದ್ರಾಸು ಮುದ್ರಣ), ಮದತಿ–ಮದನತಿಲಕ, ಸೂಕ್ತಿಸು–ಸೂಕ್ತಿ ಸುಧಾರ್ಣವ, ಜಯ–ಛಂದೋನುಶಾಸನ, ಪಿಂಗ–ಛಂದಶ್ಶಾಸ್ತ್ರ, ಗಂಗ–ಛಂದೋಮಂಜರಿ, ಹೇಮ–ಛಂದೋನುಶಾಸನ.

೧೯೬೧]

ಅನುಭವ ಮುಕುರಂ

(ಕರ್ತೃತ್ವ, ಶೈಲಿ, ಜೀವನದೃಷ್ಟಿ, ಛಂದಸ್ಸು)

೧೯೫೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಯಾಗಿ ಅಚ್ಚಾಗಿರುವ 'ಅನುಭವ ಮುಕುರಂ' ಎಂಬುದು ಸ್ಮರತಂತ್ರವನ್ನು ಕುರಿತ ಒಂದು ಲಘು ಕೃತಿ. ಇದರಲ್ಲಿ ನೂರೊಂಬತ್ತು ಪದ್ಯಗಳಿವೆ. ಕೆಲವು ಪದ್ಯಭಾಗಗಳು ತ್ರುಟಿತವಾಗಿವೆ. ಒಂದು ಲಿಖಿತ ಪ್ರತಿಯ ಮುದ್ರಿತ ಪ್ರತಿ ಇದು. ಬೇರೆ ಹಳೆಯ ಪ್ರತಿಗಳು ಉಪಲಬ್ಧವಿಲ್ಲದ ಕಾರಣ ಇಲ್ಲಿ ಪಾಠಾಂತರಗಳ ಪ್ರಸಕ್ತಿಯಿಲ್ಲ.* ಇರುವಂತೆ ಪದ್ಯಪಾಠ ಬಹುಮಟ್ಟಿಗೆ ಶುದ್ಧವಾಗಿದೆ. ಸಂಪಾದಕರು ಕೆಲವೆಡೆ ಪಾಠಗಳನ್ನು ಪರಿಷ್ಕರಿಸಿದ್ದಾರೆ. ಆದರೂ ಕ್ರಮವಲ್ಲದ, ಕ್ರಮಗೊಳಿಸಬೇಕಾದ, ಇನ್ನೂ ಕೆಲವು ಪಾಠಗಳು ಉಳಿದುಕೊಂಡಿವೆ. ಇವು ಸರಿಯಾಗಬೇಕಾದರೆ, ತ್ರುಟಿತ ಪದ್ಯಭಾಗಗಳ ಕೊರೆ ತುಂಬಬೇಕಾದರೆ ಬೇರೆ ಪ್ರತಿಗಳ ನೆರವು ಬೇಕು. ಪಾಠಗಳ ದೋಷದಿಂದ ಅರ್ಥಕ್ಕೂ ಛಂದಸ್ಸಿಗೂ ಬಾಧೆಯಾಗಿರುವುದುಂಟು. ಅರ್ಥಕ್ಕೆ ಸರಿಯಾದರೂ ಛಂದಸ್ಸಿಗೆ ಸರಿಯಾಗದ ಪಾಠಗಳು (ಉದಾ: ಪ. ೯೧–ಸಾ. ೩), ಛಂದಸ್ಸಿಗೆ ಅನುಮಾದರೂ ಅರ್ಥಕ್ಕೆ ಅನುವಾಗದ ಪಾಠಗಳೂ (ಉದಾ: ಪ. ೮೩–ಸಾ. ೩) ವಿರಳವಾಗಿ ಇಣುಕುತ್ತವೆ. ಕೃತಿಯು ಮಂಗಳ ಪದ್ಯದಿಂದ ಮೊದಲುಗೊಂಡು ಕರ್ತೃವಿನ ಹೆಸರಿನ ಪದ್ಯದಿಂದ ಕೊನೆಗೊಂಡರೂ, ಮೊದಲು ಮುಗಿವು ಎರಡೂ, ಸಕ್ರಮವಾಗಿ ಸಂಬದ್ಧವಾಗಿ ತೋರದೆ, ಅನಿರೀಕ್ಷಿತವೆಂಬಂತೆ ಇವೆ.

---

*ಮೈಸೂರು ಪ್ರಾಚ್ಯ ಕೋಶಗಾರದಲ್ಲಿ ಈ ಗ್ರಂಥದ ಇನ್ನೊಂದು ಕೈಬರಹದ ಪ್ರತಿಯಿರುವಂತೆ ತಿಳಿಯುವುದು ಇದರಲ್ಲಿ ನೂರ ಹದಿನಾಲ್ಕು ಪದ್ಯಗಳಿವೆಯೆಂದು ಕಾಣುತ್ತದೆ. ಈ ಎರಡು ಪ್ರತಿಗಳಲ್ಲೂ ಐದು ಪದ್ಯಗಳ ಹೆಚ್ಚು ಕಡಿಮೆಯಿದೆ. ಈ ಹೆಚ್ಚಿನ ಪದ್ಯಗಳಲ್ಲಿ (ಕೊನೆಯದನ್ನು ಬಿಟ್ಟು), ಕೃತಿಕಾರನ ಬಗೆಗೆ ಪ್ರಸ್ತಾಪವೇನೂ ಇಲ್ಲವೆಂದು ಕಾಣುತ್ತದೆ. (ನೋಡಿ: ತೀ. ನಂ. ಶ್ರೀ—ಕಾವ್ಯ ಸಮೀಕ್ಷೆ, ಪು. ೫೬.).

ಕರ್ತೃತ್ವ

†ಅನುಭವ ಮುಕುರದ ಕರ್ತೃತ್ವವು ವಿಚಾರಣೀಯವಾದ ಪ್ರಶ್ನೆಯೆಂದು ಅಚ್ಚಾಗಿರುವ ಅನುಭವ ಮುಕುರದ ಅರಿಕೆಯಲ್ಲಿ ಅದರ ಸಂಪಾದಕರು ಸೂಚಿಸಿದ್ದಾರೆ. ಈ ಸಂದೇಹಕ್ಕೆ ಕಾರಣ ಕವಿಚರಿತೆಕಾರರ ಉಲ್ಲೇಖ. ಕವಿಚರಿತೆಕಾರರು ಜನ್ನನ ವಿಷಯವಾಗಿ ಬರೆಯುತ್ತ "ಅಲ್ಲದೆ ಸ್ಮರತಂತ್ರವೆಂಬ ಗ್ರಂಥವನ್ನು ಬರೆದಿರುವಂತೆ ಮೋಹಾನುಭವ ಮುಕುರ (ಸು. ೧೪೦೦) ಎಂಬ ಗ್ರಂಥದಿಂದ ಊಹಿಸಬಹುದಾಗಿದೆ. ಈ ಗ್ರಂಥವು ನಮಗೆ ದೊರೆತಿಲ್ಲ" ಎಂಬ ಮಾತನ್ನು ಬರೆದಿದ್ದಾರೆ. ಹಾಗೆ ದೊರೆಯದಿರುವುದು ಸ್ಮರತಂತ್ರವೇ, ಮೋಹಾನುಭವ ಮುಕುರವೇ? ಸ್ಮರತಂತ್ರವೆಂದು ಇಟ್ಟುಕೊಂಡರೆ ಮೋಹಾನುಭವ ಮುಕುರವನ್ನು ಅವರು ಕಂಡಿದ್ದರೆನ್ನಬೇಕು. ಪ್ರಸಕ್ತ ಕೃತಿಯೋ ಅದಾದ್ದರಿಂದ, ಇವರ ಕೊನೆಯ ಪದ್ಯದಲ್ಲಿ ಈ ಕೃತಿ, ಸ್ಮರತಂತ್ರವು, ಅನುಭವ ಮುಕುರವೆಂಬ ಹೆಸರಿನದೆಂದು ಹೇಳಿರುವುದರಿಂದ, ಕವಿಚರಿತೆಕಾರರು ಏಕೆ, ಹೇಗೆ, ಈ ಊಹೆಯನ್ನು ಮಾಡಿದರೆಂದು ತಿಳಿಯುವುದಿಲ್ಲ. ಅನುಭವ ಮುಕುರವೇ ಅವರಿಗೆ ದೊರಕಿಲ್ಲವೆಂದುಕೊಂಡರೆ, ಜನ್ನನು ಸ್ಮರತಂತ್ರವೆಂಬ ಗ್ರಂಥವನ್ನು ರಚಿಸಿರುವಂತೆ ಯಾವ ಆಧಾರದಿಂದ ತಿಳಿಯಲಾಯಿತು ಎಂಬ ಸಂದೇಹವೇಳುತ್ತದೆ. ಬೇರಾವ ಕವಿಯೂ ಜನ್ನನು ಸ್ಮರತಂತ್ರವನ್ನು ಬರೆದನೆಂದು ಹೇಳಿರುವಂತಿಲ್ಲ. ಒಂದು ವೇಳೆ ಅವರಿಗೆ ದೊರೆತ ಪ್ರತಿಯಲ್ಲಿ ಕರ್ತೃಪರವಾದ ಕೊನೆಯ ಪದ್ಯವಿರಲ್ಲಿಲ್ಲವೆಂದುಕೊಂಡರೆ ಜನ್ನನಿರಲಿ, ಅದರ ಕರ್ತೃ ಯಾರೆಂದು ಕೃತಿಯ ಆಧಾರದಿಂದ ಯಾರಿಗೂ ಹೇಳಲು ಸಾಧ್ಯವಾಗುತ್ತಿರಲಿಲ್ಲ.

ಅಲ್ಲದೆ ಅನುಭವ ಮುಕುರದ ಕಾಲವನ್ನು ಸು. ೧೪೦೦ ಎಂದು ಊಹಿಸಿ ಕೊಟ್ಟಿರುವುದು ವಿಚಾರಾಸ್ಪದವಾದ್ದು. ಜನ್ನನ ಕಾಲಕ್ಕೂ ಇದಕ್ಕೂ ೧೫೦ ವರ್ಷಗಳಿಗೂ ಮಿಕ್ಕು ಅಂತರವಿರುತ್ತದೆ.

---

† ಇದನ್ನು ಮೋಹಾನುಭವ ಮುಕುರವೆಂಬ ಹೆಸರಿಂದಲೂ ಪ್ರಸ್ತಾವಿಸುತ್ತಾರೆ, ಆದರೆ ಕೃತಿಯಲ್ಲಿ ಅನುಭವ ಮುಕುರವೆಂದು ಹೇಳಿದೆ. (ಅ. ಮು., ಪ. ೧೦೭, ೧೮೯)

ಕವಿಚರಿತೆಕಾರರ ಹೇಳಿಕೆ ಹೀಗೆ ಸಂದಿಗ್ಧವಾದ್ದು. ಇದಾದಮೇಲೆ ಇದರ ಬಗೆಗೆ ಅಲ್ಲಲ್ಲಿ ಪ್ರಸಂಗೋಚಿತವಾಗಿ ಮಾತು ಬಂದಿದ್ದರೂ ತೀ. ನಂ. ಶ್ರೀ ಅವರ ಕಾವ್ಯ ಸಮೀಕ್ಷೆಯಲ್ಲಿ (ಪು. ೫೭) ಸ್ವಲ್ಪ ವಿವರಣೆ ದೊರೆಯುತ್ತದೆ. ಅವರು ಅನುಭವ ಮುಕುರವೇ ಸ್ಮರತಂತ್ರವೆಂದೂ ಇದು 'ಜನ್ನ ಕವಿ ರಚಿಸಿದ ಕಾವ್ಯವೇ' ಎಂದೂ ಸ್ಥೂಲವಾಗಿ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಮುಂದುವರಿದು 'ಈ ಗ್ರಂಥವು ಜನ್ನನಿಂದ ರಚಿತ ವಾದದ್ದೆಂದು ಒಪ್ಪಿಕೊಂಡರೆ . . .' ಎನ್ನುವಲ್ಲಿ ಸಂದೇಹದ ಕೊಂಡಿ ಕುಟುಕುವಂತೆ ಕಾಣುತ್ತದೆ.

ಇದಕ್ಕೆ ಕಾರಣವೇನು? ಈ ಕೃತಿ ಜನ್ನ ಕರ್ತೃಕವಾದ್ದೆಂದು ಹೇಳು ವುದಕ್ಕೆ ಸಾಧಕ ಬಾಧಕವಾದ ಅಂಶಗಳೇನು ? ಎಂಬುದು ವಿಚಾರಾರ್ಹವಾದ ವಿಷಯ. ಈ ಕೃತಿಯು ಜನ್ನ ಕರ್ತೃಕವೆಂಬುದಕ್ಕೆ ಪ್ರಮಾಣಗಳಾಗುವ ಬಾಹ್ಯಾಧಾರಗಳೇನೂ ಈವರೆಗೆ ಲಭ್ಯವಾದಂತಿಲ್ಲ. ಜನ್ನನ ಅನ್ಯಕೃತಿಗಳಲ್ಲಿ ಇದರ ಪ್ರಸ್ತಾಪವಿಲ್ಲ. ಇನ್ನು ಆಂತರ ಪ್ರಮಾಣಗಳನ್ನೂ ಶೈಲಿಯ ಸಾಮ್ಯ ವನ್ನೂ ವಿಚಾರಿಸಿ, ಹೋಲಿಸಿ, ನೋಡಿದರೆ ಹೊರಪಡುವ ಅಂಶಗಳು ಯಾವ ಖಚಿತ ನಿರ್ಣಯಕ್ಕೂ ನೆರವಾಗುವುದಿಲ್ಲ. ಈ ಬಗೆಗೆ ಒಂದೆರಡು ಅಂಶ ಗಳನ್ನು ಇಲ್ಲಿ ಹೇಳಿದೆ.

ಈ ಕೃತಿಯ ಕೊನೆಯ ಪದ್ಯದಲ್ಲಿ ಇದು ಜನ್ನಕೃತವೆಂದು ಸ್ಪಷ್ಟವಾಗಿ ಹೇಳಿದೆ. ಆ ಪದ್ಯವನ್ನು "ವರಜನ್ನ ಕವೀಶ್ವರನಿಂ ಪ್ರೌಢಿಗೊರೆ ಮಿಗಿಲ್ ತಾನೆನೆ ಸಂದ ಸ್ಮರತಂತ್ರಂ, ಉರುತರದನುಭವ ಮುಕುರಂ, ಚಂದ್ರತಾರೆಯುಳ್ಳ ನ್ನೆವರಂ ಸ್ಥಿರಮಿರಿಸುಗೆ" ಎಂದು ಅನ್ವಯಿಸುವುದು ಉಚಿತವಾದೀತು. ಸ್ಮರ ತಂತ್ರವಾದ ಅನುಭವ ಮುಕುರವೆಂಬರ್ಥ ಗ್ರಾಹ್ಯ. ಇದು ಬಲವಾದ ಆಧಾರ; ನಿಜ. ತನ್ನ ಮತ್ತು ತನ್ನ ಕೃತಿಗಳ ಬಗೆಗೆ ಕೃತಿಯ ಮೊದಲಲ್ಲೆ, ಸ್ವಲ್ಪ ವಿವರವಾಗಿಯೆ ಹೇಳಿಕೊಳ್ಳುವ ಕವಿ, ಇಲ್ಲಿ, ಕೊನೆಯಲ್ಲಿ, ಒಂದು ಪದ್ಯ ದಲ್ಲೆ ಎಲ್ಲವನ್ನೂ ಮುಗಿಸಿಬಿಡಬೇಕೆ? ಪ್ರಣಯ ನಿರೂಪಣೆಯಲ್ಲಿ ಜನ್ನನ ಜಗನ್ನುತಿಯನ್ನು ಅರಿತಿದ್ದ ಯಾರೋ ಇದನ್ನು ಅವನ ಹೆಸರಿಗೆ ಬರೆದು ಸೇರಿಸಿರಬಾರದೇಕೆ? ಈ ಪದ್ಯದ ಪ್ರಸ್ತಾಪ ಹಿಂದೆ ಸ್ವಲ್ಪ ಮಾಡಿದೆ. ಈ

ಖಚಿತವಾದ ಹೇಳಿಕೆಯನ್ನು ಒಪ್ಪಿಬಿಟ್ಟರೆ, ಸಮಸ್ಯೆಯಿರುವುದಿಲ್ಲವೆಂಬುದು ನಿಜ; ಹಾಗಿದ್ದರೆ ವಿದ್ವಾಂಸರು ಖಚಿತವಾಗಿ ಏಕೆ ಇದನ್ನು ಜನ್ನಕೃತವೆಂದು ಹೇಳಲಾಗಿಲ್ಲ ?—ಎಂಬ ಪ್ರಶ್ನೆ ಏಳುತ್ತದೆ.

ಜನ್ನನ ಯಶೋಧರ ಚರಿತೆಯಲ್ಲಿ 'ಭರತ ಸುರತ ಶಾಸ್ತ್ರ ವಿಳಾಸಂ' ಎಂಬ ಮಾತು ಬರುತ್ತದೆ.

ಅನಂತನಾಥ ಪುರಾಣದಲ್ಲಿ 'ಅಭಿನವ ಮದನನ್', 'ಸುರತ ವಿಳಾಸನ್' ಎಂದು ಜನ್ನ ತನ್ನನ್ನು ಕರೆದುಕೊಂಡಿದ್ದಾನೆ. ನಮ್ಮ ಹಳೆಯ ಕವಿಗಳು ತಮ್ಮ ವಿವಿಧ ಕಳಾಭಿಜ್ಞತೆಯನ್ನೂ ರೂಪಾತಿಶಯವನ್ನೂ ಹೇಳಿಕೊಂಡಿದ್ದಾರೆ. ಆದ್ದರಿಂದ ಕವಿಯ ಶೃಂಗಾರ ಪ್ರಿಯತೆಯನ್ನು ಇದು ಸೂಚಿಸುವು ದೆನ್ನಲಾದೀತೆ ? ಅವನ ಅನನ್ಯ ಸಾಧಾರಣವಾದ ಶೃಂಗಾರ ಪ್ರಿಯತೆಗೆ ಅವನೆರಡು ಕೃತಿಗಳೂ ಎಡೆಮಾಡಿವೆ. ಆದರೆ ಅಲ್ಲಿಯ ಶೃಂಗಾರಕ್ಕೂ ಇಲ್ಲಿಯ ಶೃಂಗಾರಕ್ಕೂ ಸಾಮ್ಯಕ್ಕಿಂತ ವೈಷಮ್ಯವೇ ಹೆಚ್ಚು. ಹೀಗೆಂದರೆ ಪ್ರಣಯದಲ್ಲಿ ಈ ಎರಡೂ ಮುಖಗಳ ಮುದ್ರೆಯುಂಟು ಎಂಬ ಪ್ರತ್ಯುಕ್ತಿಯೋ ?

ಸ್ಪಷ್ಟವಾದ ಅಭಿಪ್ರಾಯಗಳು, ನಿರ್ದಿಷ್ಟ ಸಾಮ್ಯವಿರುವ ಅಲಂಕಾರ ಗಳು, ಕಾಣದ ಹೊರತು ಶೈಲಿಯ ಪ್ರಮಾಣವನ್ನು ಆಧಾರವಾಗಿ ಗ್ರಹಿಸುವುದು ಕಷ್ಟ. ಉಳಿದ ಕೃತಿಗಳ ಮಾತಿರಲಿ, ಅನಂತನಾಥ ಪುರಾಣ ಯಶೋಧರ ಚರಿತೆಗಳ ಶೈಲಿಯಲ್ಲೇ ಎಷ್ಟು ಪ್ರತ್ಯೇಕತೆಯಿಲ್ಲ! ಹೀಗಿದ್ದರೂ ಇವೆರಡಕ್ಕೂ ಮಾತುಗಾರಿಕೆಯ ಹೃದ್ಯತೆಯಲ್ಲಿ, ಉಪಮಾದಿ ಅಲಂಕಾರಗಳ ಸ್ವಾರಸ್ಯದಲ್ಲಿ ಹೋಲಿಕೆಯಿದೆ. ಆ ಹೋಲಿಕೆಯೂ ಅನುಭವ ಮುಕುರದಲ್ಲಿ ಅತ್ತತ್ತ ! ಪದ್ಯ ೬೦ರ 'ಗೀತಕ್ಕೆ ಕೆಲವು ಕೋವಿದೆಯರ್ಕಳೆಳಪರ್' ಎಂಬುದು ಯಶೋಧರ ಚರಿತೆಯನ್ನೂ, ಪದ್ಯ ೧೦೫ರ 'ತನುವಟಿದೊಂದುವ ಸಾಯುಜ್ಯಂ ಜಗದೊಳುಂಟೆ' ಎಂಬುದು ಅನಂತನಾಥ ಪುರಾಣವನ್ನೂ ಪ್ರಸಂಗ ದೃಷ್ಟಿಯಿಂದ ನೆನಪು ಮಾಡಬಹುದು ; ಆದರೆ ಆಧಾರ ಸಾಮಗ್ರಿ ಯಾಗದು.

ಶೈಲಿಯ ಸಾಮ್ಯವನ್ನು ನೋಡದೆ, ಜಿನಾಕ್ಷರ ಮಾಲಿಕೆಯ ಪೊನ್ನನಂತೆ, ರನ್ನಕಂದದ ರನ್ನನಂತೆ. ಅನುಭವ ಮುಕುರದ ಜನ್ನನನ್ನೂ ಒಪ್ಪಬಹುದೆ? ಆತನೇ 'ತನ್ನ ತಾರುಣ್ಯದಲ್ಲಿ ವಿವಿಧ ವೃತ್ತ ರಚನೆಯಲ್ಲಿ ಕೈಯನ್ನು ಪಳಗಿಸಿ ಕೊಳ್ಳುವುದಕೋಸ್ಕರ' ಬರೆದನೆನ್ನಬಹುದೆ? ಸ್ಪಷ್ಟವಾದ ಆಧಾರಗಳಿಂದ ಕರ್ತೃತ್ವದ ಸಂದೇಹ ಪರಿಹಾರವಾಗಬೇಕಾಗಿದೆಯೆಂದು ಇಟ್ಟುಕೊಂಡು ಸದ್ಯಕ್ಕೆ ಅನುಭವ ಮುಕುರವನ್ನು ಜನ್ನ ಕರ್ತೃಕವಾಗಿ ಭಾವಿಸಬಹುದೆಂದು ಕಾಣುತ್ತದೆ.

ಶೈಲಿ

ಬದುಕಿನಲ್ಲಿ ಹೆಣ್ಣ ಹೆಗ್ಗಳಿಕೆ, ಗಂಡು ಹೆಣ್ಣುಗಳ ಒಲವು ಚೆಲುವು, ಸೇರಿಕೆ ಅಗಲಿಕೆ, ಕುಲವಧುವಿನ ಗುಣಶೀಲ, ವನಿತೆಯ ಪಾದಾದಿ ಕೇಶಾಂತದ ಬಣ್ಣನೆ, ವಶೀಕರಣ, ರತಿ, ದಶಾವಸ್ಥೆ, ರಸಪ್ರಸಕ್ತಿ—ಇವು ಇಲ್ಲಿ ನಿರೂಪಿತ ವಾಗಿರುವ ವಿಷಯಗಳು. 'ಕಾಮ ತಂತ್ರದೊಳ್ ನಾಯಕ ನಾಯಕೀ ಭೇದ ಭಿನ್ನ ಕಲಾ ಕೌಶಲ'ದಂಥ, ವಿಟಚರ್ಯೆಯಂಥ ವಿಷಯಕ್ಕೆ ಎಡೆ ದೊರೆಯದೆ, ಗುಣಾವಗುಣ ವಿಮರ್ಶೆಯಂತಹ ಅಷ್ಟು ಆವಶ್ಯಕವಲ್ಲದ ವಿಷಯಕ್ಕೆ ಎಡೆ ದೊರೆತಿರುವುದು ಹೋಗಲಿ, ವರ್ಣನೆಗೊಂಡಿರುವ ಸ್ವಲ್ಪ ಸಂಗತಿಗಳಲ್ಲೆ ಪ್ರಮಾಣ ಪರಿಜ್ಞಾನ, ಪ್ರಶ್ನಾರ್ಹವಾಗಿದೆ. ವಿಷಯ ಪೋಷಣೆ, ಕ್ರಮಾನು ಗತವಾದ ವಿವರಣೆ, ಕುಶಲ ನಿರೂಪಣೆ–ಇವುಗಳಿಗೆ ಲಕ್ಷ್ಯ ಕಡಿಮೆ. ವಿಷಯ ವಿವೇಚನೆಯನ್ನು ಗೌಣವಾಗಿ ಭಾವಿಸಿ ವಿಷಯವನ್ನು ವಿವಿಧ ಛಂದಸ್ಸಿನಲ್ಲಿ ಅಳವಡಿಸಬೇಕೆಂಬ ಪ್ರಯೋಗ ಕುತೂಹಲಿಯ ಹವಣಿಕೆ ಮುಖ್ಯವಾಗಿರುವಂತೆ ತೋರಿಬರುವುದು ಸಹಜ. ಅಲಂಕಾರ ವೈಚಿತ್ರ್ಯಗಳನ್ನು ತರುವುದರಲ್ಲಿ ಕವಿಗೆ ಒಲವಿಲ್ಲ; ಛಂದೋವೈವಿಧ್ಯಗಳನ್ನು ನಿರ್ಮಿಸುವುದರಲ್ಲಿ ಅವನು ಉತ್ಸಾಹಿ ಯಾಗಿರುವುದು ಕಾಣುತ್ತದೆ. 'ರಸತೋಯ'ದಿಂದ ಕಾವ್ಯಶ್ರೀಯನ್ನು ಅಭಿಷಿಕ್ತಳಾಗಿ ಮಾಡದೆ, 'ವೃತ್ತಪ್ರದೀಪ'ದಿಂದ ಆರಾಧಿತಳಾಗಿ ಮಾಡಿದ್ದಾನೆ. ಆದರೆ ಮದನತಿಲಕದ ಕರ್ತೃವಿನಂತೆ ದೇಶಿ ಶೈಲಿಯಲ್ಲಾಗಲಿ, ದೇಶಿ ಛಂದಸ್ಸಿನಲ್ಲಾಗಲಿ ಅವನ ಅಭಿರುಚಿ ಆಸಕ್ತಿಗಳು ಕಂಡು ಬರುವುದಿಲ್ಲ. ಗಾತ್ರದಲ್ಲೂ ಸತ್ವದಲ್ಲೂ ಇದು ಅದಕ್ಕೆ ಕೆಳಗೈ. ವಸ್ತುವಿನಲ್ಲಾಗಲಿ ಶೈಲಿ

ಯಲ್ಲಾಗಲಿ ಇದು ಅದನ್ನು ಅನುಸರಿಸಿದಂತಿಲ್ಲ. ಸಂಸ್ಕೃತದ ಪ್ರೌಢ ಶೈಲಿಯಲ್ಲಿ ಸ್ಮರತಂತ್ರವನ್ನು ರಚಿಸಬೇಕೆಂಬ ಪ್ರಯತ್ನ ಕಾಣುತ್ತದೆ. ಯಶೋಧರ ಚರಿತೆಯ ಮುಗ್ಧ ಮಾಧುರ್ಯವಾಗಲಿ ಹೃದ್ಯತೆಯಾಗಲಿ, ಅನಂತನಾಥ ಪುರಾಣದ ವಿದಗ್ಧ ಗಾಂಭೀರ್ಯವಾಗಲಿ ವ್ಯುತ್ಪತ್ತಿಯಾಗಲಿ ಇಲ್ಲಿ ಕಾಣುವುದಿಲ್ಲ. ಇದು ಶಾಸ್ತ್ರಗ್ರಂಥವೆಂದು ಹೇಳಿ ಸಮಾಧಾನ ಕೊಡುವುದು ಸುಲಭವಾದರೂ, ಸರಿಯಲ್ಲ. ಏಕೆಂದರೆ ಇದು ನಿಘಂಟಲ್ಲ, ವ್ಯಾಕರಣವಲ್ಲ, ಸ್ಮರತಂತ್ರ! ಕರ್ತೃವೋ, 'ಅಭಿನವ ಮದನನ್', 'ಸುರತ ವಿಳಾಸನ್ !'.

ಅಧಿಕಪದ, ಪುನರುಕ್ತಿ ಮೊದಲಾದ ಪದಾರ್ಥ ದೋಷಗಳು ಹಾಗಿರಲಿ, ಶ್ರಾವ್ಯವೂ ಸಹಜವೂ ಅಲ್ಲದ ಕೆಲವು ಉದಾಹರಣೆಗಳು ಅಲ್ಲಲ್ಲಿ ಇಣಿಕುತ್ತವೆ. ಅಂಥವಲ್ಲಿ ಮಂದವಾದ ಮಾತಿನ ಸಿಪ್ಪೆಯನ್ನು ಬಿಡಿಸಿ ಹಿಳಿದರೆ ದೊರೆಯುವ ರಸದ ತಿರುಳು ಸ್ವಲ್ಪ (ಪ. ೫೮, ೬೭); ಸಣ್ಣ ಸಂಗತಿಯನ್ನು ತಿಳಿಸಲು ಬಣ್ಣನೆಯ ಬಲು ಮಾತು (ಪ. ೨೨, ೪೫.); ನಿರೂಪಣೆ ಇಲ್ಲಿ ನೇರ, ಅಲ್ಲಿ ವಕ್ರ; ಅರ್ಥವ್ಯಕ್ತಿ ಇಲ್ಲಿ ಸ್ಪಷ್ಟ, ಅಲ್ಲಿ ಕ್ಲಿಷ್ಟ (ಪ. ೮೬, ೮೮); ಕೆಲವೆಡೆ ಮಾತು ಪೆಡಸು, ಅರ್ಥ ಬಳಸು. —ಹೀಗಾಗಿ ಶ್ರಾವ್ಯವಲ್ಲದ ಶಯ್ಯೆ, ರೋಚಕವಲ್ಲದ ಪಾಕ ಸಾಮಾನ್ಯ. ಇರುವ ಒಂದೆರಡು ಉಪಮೆಗಳು (೧೭, ೪೩, ೮೪, ೯೫.) ಜನ್ನನ ತಕ್ಕುಮೆಗೆ ತಕ್ಕವಲ್ಲ. ತಿಂತಿಣಿಯಾಗಿ ಇಕ್ಕಿಲ್ಲವರಿದರೂ ಒಂದೊಂದೂ ಆಣಿಮುತ್ತಾಗಿ ಹೊಳೆಯುವ ಜನ್ನನ ಉಪಮೆಗಳಿಗೆ ನಾವು ಅವನ ಉಳಿದೆರಡು ಗ್ರಂಥಗಳನ್ನು ನೋಡಬೇಕು. ಅನುಭವ ಮುಕುರದ ವಿಷಯನಿರೂಪಣೆಯಲ್ಲಿ ಹೇಗೆ ಒಂದು ಕ್ರಮವಿಲ್ಲವೋ ಮಾತುಗಾರಿಕೆಯಲ್ಲಿಯೂ ಒಂದು ಅಚ್ಚುಕಟ್ಟಿಲ್ಲ. ಯಾವುದೇ ವಿಷಯದ ಬಣ್ಣನೆಯಲ್ಲಿ ಸಂಗತಿಯನ್ನು ಸಮರ್ಪಕವಾಗಿ ಪೋಷಿಸುವಂಥ, ಅದನ್ನು ಮುಂದೆ ತಾರ್ಕಿಕವಾಗಿ ನಡೆಸುವಂಥ, ಪರಿಣಾಮಕಾರಿಯಾದ ಮುಗಿವನ್ನು ಕೊಡುವಂಥ, ಶಬ್ದಸಿದ್ಧಿಯ ಕೌಶಲ ಸಾಲದೆನ್ನಬೇಕು.

ಹೀಗೆ ಕೆಲವು ಲೋಪದೋಷಗಳನ್ನೆಣಿಸಿದರೂ ಅಲ್ಲಲ್ಲೆ ಒಂದು ಒಳ್ಳೆಯ ಭಾವ, ಬಂಧ, ಸುಳಿವುದೋರಿ, ಹೊಳವು ಬೀರಿ, ನೆನಪಿನಲ್ಲಿ ನಿಲ್ಲುತ್ತವೆ (ಪ. ೧೨, ೮೬, ೪೪). ಯಶೋಧರ ಚರಿತೆಯಲ್ಲಿಯೂ

ಅನಂತನಾಥ ಪುರಾಣದ ಕೆಲವು ಭಾಗಗಳಲ್ಲಿಯೂ ಜನ್ನನ "ಕವಿತಾ ಪ್ರೌಢತ್ವ ತುಂಗ ಸಂಪತ್ತಿ ಮೇರುವಿನಂತಿರ್ಪುದು" ಎಂದು ಸ್ವಲ್ಪ ಹೆಚ್ಚಾದರೂ, ಮೆಚ್ಚೋಣ. ಆದರೆ ಅನುಭವ ಮುಕುರವೋ ಎಂದರೆ, "ಪರಿಣತನಲ್ಲದನ ಕವಿತೆ" ಎಂದು ಯಾರಾದರೂ ಹೇಳಬೇಕಾಗುತ್ತದೆ. ಹೀಗೆ ಹೇಳಿದರೆ ಜನ್ನ ಪಕ್ಷಪಾತಿಗಳಿಗೆ ಇದು ಗುಣಗ್ರಾಹಿಯಾದ ವಿಮರ್ಶೆಯಲ್ಲವೆಂದು ತೋರ ಬಹುದು. ಆ ಪಕ್ಷಕ್ಕೆ, 'ಆ ಪಟಿರಿಯೆ ಪೊಗಟಿತ್ತಿಯಲ್ತೆ' ಎಂದು, "ಬಾಟ್ವಿ ಮನೆಗೊಂದು ಬಗುಳ್ವುದು ಬೇಟ್ಕುಮೆನ್ನಿರೇ" ಎಂದು ಜನ್ನನ ಮಾತಿನಿಂದಲೇ ಅವರು ಸಮಾಧಾನ ತಂದುಕೊಳ್ಳಬಹುದು.

ಜೀವನ ದೃಷ್ಟಿ

ಸ್ಮರತಂತ್ರವು ದಾಂಪತ್ಯಜೀವನ ಸುಖವನ್ನು ಕುರಿತುದಷ್ಟೆ. ಈ ಲಘುಕೃತಿಯಲ್ಲಿ ಕವಿ ಪ್ರತಿಪಾದಿಸುವ ದಾಂಪತ್ಯಜೀವನ ಸ್ವರೂಪವನ್ನು ಸೂಕ್ಷ್ಮವಾಗಿ ಇಲ್ಲಿ ಸಂಗ್ರಹಿಸಿದೆ.

'ಪೂರ್ವಕರ್ಮವಶದಿಂದಾಗಿ ನಾವು ಹುಟ್ಟಿದ್ದೇವೆ, ಹುಟ್ಟಿದ ಮೇಲೆ ಸಾಯುವವರೆಗೆ ಸಂಸಾರದ ದಂದುಗ ತಪ್ಪಿದ್ದಲ್ಲ, ಸಾವು ಬಿಟ್ಟಿದ್ದಲ್ಲ'—ಎಂದು ಕೊರಗದೆ ಜೀವನದಲ್ಲಿ ಸುಖ–ಸಂತೋಷಗಳುಂಟೆಂದು ನಂಬಿ ನಡೆಯಬೇಕು. ಸತ್ತು ಎಲ್ಲೋ ಏನೋ ಕಾಣುವುದೇನು ? ಮೋಕ್ಷವೇ ? ಅದು ಬಯಲಾ ಕ್ಷೇಪ. ಬಾಳ್ವೆಯ ಉದ್ದೇಶ ಆನಂದ. ಅದೇ ಸರ್ವಸ್ವ, ಸಾಧನೀಯ, ಇದರ ಪ್ರಾಪ್ತಿಗಾಗಿ ಪರಮಾತ್ಮನು ನಿರಾಕೃತಿಯನ್ನು ಕರುವಿಟ್ಟು ನಿರವಧಿಕ ಗುಣ ಪ್ರಧಾನವಾದ ಸ್ತ್ರೀರತ್ನವನ್ನು ಸೃಷ್ಟಿಸಿದ್ದಾನೆ. ಈ ಅನಂತ ಗುಣಾನ್ವಿತವಾದ ಜೀವನ ಪತ್ನಿಯ ಪ್ರೇಮಲಾಭದಿಂದ ಸಾರ್ಥಕವಾಗುವುದು, ಸಂಪದ್ಯುಕ್ತ ವಾಗುವುದು; ಚಿನ್ನಕ್ಕೆ ಕಂಪು, ರನ್ನಕ್ಕೆ ಇಂಪು ಬಂದಂತಾಗುವುದು. 'ಸಂಸಾರ ದಿಂದ ಸುಖವಿಲ್ಲ. ಹೆಂಗುಸಿನಿಂದ ಜುಗುಪ್ಸೆ, ದೇಹಪ್ರಕೃತಿ ಮಾಯಾಮೋಹ ನಿಷ್ಠವಾದ್ದು' ಎಂದು ಕೆಲವರೆನ್ನಬಹುದು. ಆದರೆ ಇದನ್ನು ಹೀಗೆ ಭಾವಿಸ ಲಾಗದು. ಸ್ತ್ರೀ ಸುಖಪ್ರದಳು, ಹಿತಕರವಾದ ವಾಂಛಾ ವಿಷಯ. ಆಸೆ ಆಲಸ್ಯಗಳನ್ನು ಗೆಲ್ಲಲು ಸುಂದರಿಯೂ ಗುಣವತಿಯೂ ಆದ ಸ್ತ್ರೀಯೊಬ್ಬಳಿಂದ ಸಿದ್ಧ. ಕಲಾಪ್ರೌಢಿಮೆ, ಸಿರಿಸಂಪತ್ತು, ಗುಣಶೀಲಗಳೇನಿದ್ದರೂ ಸಲ್ಲೆಯ

ಒಲ್ಮೆ ಸಂಗಸುಖಗಳೇ ಸುಖಪ್ರದ. ಅವಳ ಪ್ರೀತಿ ಬದುಕನ್ನು ಕುರಿತು ಆಲೋಚಿಸುವಂತೆ ಮಾಡುವುದು; ಹರಿಯುವ ಮನಸ್ಸನ್ನು ಹಿಡಿದು ಹದ ಗೊಳಿಸುವುದು. ದಿವ್ಯ ಸುಖ ಸಂತೋಷಗಳನ್ನು ಕೊಡುವುದು. ಸೇರಿಕೆ ಯಲ್ಲಿ ಹೇಗೆ ಸುಖವೊ ಅಗಲಿಕೆಯಲ್ಲಿ ಹಾಗೆ ದುಃಖವಿರುವುದು ನಿಜ. ಆದರೆ ಈ ಅಗಲಿಕೆಯ ಅಳಲಿಕೆ ನಲ್ಲರ ಅನನ್ಯ ಪ್ರೀತಿಗೆ ಸಾಕ್ಷಿ. ಪತಿಯ ಪ್ರೀತಿ ಸತಿಗೆ ಮೀಸಲು ಪತ್ನಿಯನ್ನುಳಿದು ಪರಸ್ತ್ರೀಯಲ್ಲಿ ಸುಖವಿಲ್ಲ. ಇಂತಹ ಸುಖ ಸಲ್ಲ. ಪತ್ನಿಯ ಪ್ರೀತಿಯೂ ಇಂಥದೆ. ಇಂತಹ ಪ್ರಣಯ ಸುಖಕ್ಕೆ ಮಧುರ ಸ್ನೇಹಕ್ಕೆ ಬೆಲೆ ಬರುವುದು ಸದ್ಗುಣದಿಂದ, ಸೌಶೀಲ್ಯದಿಂದ. ಪ್ರೀತಿಗೆ ಪರಸ್ಪರ ಪೋಷಣೆ ಬೇಕು. ಇದು ಸುಖಕ್ಕೆ ದಾರಿ. ಹೆಣ್ಣಿನ ಪ್ರಕೃತಿ ವಿಕೃತಿಗಳನ್ನರಿತು ಒಲಿಯುವುದು ಗಂಡಿಗೆ ಜಾಣ್ಮೆ. ಗುಣಶೀಲಗಳಿಂದ ಗಂಡನ್ನು ಒಲಿಸುವುದು ಹೆಣ್ಣಿಗೆ ಜಾಣ್ಮೆ. ಕವಿಯ ಲಕ್ಷ್ಯ ಜೀವನಸುಖದ ಕಡೆಗೆ. ನೆಮ್ಮದಿಯ ಸರಳ ಸಾಧಾರಣ ದಾಂಪತ್ಯದ ಕಡೆಗೆ. 'ನೀತಿ ಸಂಪನ್ನ ವಾದ ಗೃಹಾಶ್ರಮವೃತ'ದ ನಿರೂಪಣೆ ಅವನ ಗುರಿ. ಲೌಕಿಕವೆಂಬುದು ತ್ಯಾಜ್ಯ ವಲ್ಲ, ತಿರಸ್ಕಾರ್ಯವಲ್ಲ; ಗ್ರಾಹ್ಯ, ಮಾನ್ಯ. ನಲ್ಲೆಯ ಲಜ್ಜಾನ್ವಿತವೂ ನಿರ್ವ್ಯಾಜವೂ ನಿರ್ಮಲವೂ ಆದ ಪ್ರೇಮವೇ ದೊಡ್ಡದು. ಅದೇ ಬದುಕಿನ ಸಾರಸರ್ವಸ್ವ. ಅದನ್ನು ಪೋಷಿಸಿದರೇ ಸುಖವೆಂಬ ಸೂಚನೆ, ಲೌಕಿಕ ವಾದರೂ ಶೀಲಸಮ್ಮತವಾದ, ವ್ಯಕ್ತಮಧುರವಾದ, ಸಜ್ಜನವಧುವಿನ ಪ್ರೇಮವೇ ಸತ್ಯವೆಂಬ ನಂಬುಗೆ—ಇಲ್ಲಿ ಪ್ರಕಟಗೊಂಡಿವೆ.

ಜೀವನಾನುಭವ ಪಕ್ವಗೊಂಡ ಮನೋಧರ್ಮದಿಂದ ಮೂಡಿರಬಹು ದಾದ ಜನ್ನನ ಎರಡು ಕೃತಿಗಳಲ್ಲಿ ಪ್ರಣಯದ ಸಂಕಷ್ಟಗಳೂ ಸಮಸ್ಯೆಗಳೂ ಮೆಳೆಮೆರಕೊಳ್ಳುವ ಮನೋಜ್ಞವಾದ ಚಿತ್ರಣವಿದೆ. ಆದರ್ಶದ ಹೊಂಗನಸಂ ಕಟ್ಟಿ ಕಲಿಯುವ ಹರೆಯದ ಮೊದಲಲ್ಲಿ ಬರೆದಿರಬಹುದಾದ ಅನುಭವ ಮುಕುರದ ಪ್ರಣಯವು ಸುಖಸಂತೋಷಪ್ರದವೂ ಋಜುಗಂಭೀರವೂ ಆಗಿ ಬಂದಿದೆ.

ಇಲ್ಲಿ 'ರತಿರಹಸ್ಯ'ವನ್ನು ಬಣ್ಣಿಸಲು ಅಭ್ಯಾಸ ಮಾಡಿದ ಕೈ ಅಲ್ಲಿ 'ಪ್ರಣಯಸಮಸ್ಯೆ'ಯನ್ನು ಚಿತ್ರಿಸಲು ಪರಿಣತವಾಯಿತು.

ಛಂದಸ್ಸು

ಅನುಭವ ಮುಕುರದ ಆಕರ್ಷಣೆ, ಶೈಲಿ, ವೈಶಿಷ್ಟ್ಯ ಎಂದರೆ ಅದರ ಛಂದಸ್ಸು. ಜನ್ನಕವಿಯ ಕೃತಿಯೆಂದಾಗಲಿ, ಕಾವ್ಯಶಾಸ್ತ್ರೀಯವಾಗಲಿ ಅಲ್ಲ. ಈ ಲಘು ಕೃತಿಯಲ್ಲಿ ಬಂದಿರುವ ಬಹುಪಾಲು ಛಂದಸ್ಸು ಪೂರ್ವ ಪ್ರಚುರ ವಾದುದಲ್ಲ. ನಮ್ಮ ಸಾಹಿತ್ಯರಾಶಿಯಲ್ಲಿ ಕಾವ್ಯವಾಗಲಿ ಶಾಸ್ತ್ರವಾಗಲಿ, ಚಿಕ್ಕದಾಗಲಿ ದೊಡ್ಡದಾಗಲಿ ಈ ಸಂಖ್ಯೆಯ ವಿವಿಧ ಛಂದಸ್ಸನ್ನು ಬಳಸಿಲ್ಲ ವೆಂದು ಹೇಳಿದರೂ ತಡೆದೀತು! ಇಲ್ಲಿ ಪ್ರಯುಕ್ತವಾಗಿರುವುದು ಸಂಸ್ಕೃತ ವರ್ಣಛಂದಸ್ಸು ಮಾತ್ರ. ಇದರಲ್ಲಿ ೪೫ ಸಮವೃತ್ತ ಭೇದಗಳು, ೩ ಅರ್ಧಸಮವೃತ್ತಗಳಂತೆ ಕಾಣುವ ವೃತ್ತಭೇದಗಳು.* ಕಂದವೂ ಸೇರಿ ಒಟ್ಟು ೪೯ ಛಂದೋಭೇದಗಳಿವೆ. ಇವುಗಳಲ್ಲಿ ಹೆಚ್ಚಿನ ಪಾಲು ಕವಿಯ ಸ್ವಂತ ಪ್ರಯೋಗಗಳೆಂದು ಹೇಳಲು ಅವಕಾಶವಿದೆ. ಅನುಭವ ಮುಕುರ ಜನ್ನನದೇ ಆಗಿದ್ದರೆ, ಕಂದ ಪದ್ಯಗಳಲ್ಲಿ ಒಂದು ಅಮಂದಕೃತಿಯನ್ನು ಕಂಡರಿಸಿದ್ದು ಹೇಗೆ ಒಂದು ವೈಶಿಷ್ಟ್ಯವೊ ವಿವಿಧ ಛಂದಸ್ಸಿನಲ್ಲಿ ಈ ಲಘು ಕೃತಿಯನ್ನು ಅಳವಡಿಸಿರುವುದೂ ಒಂದು ವೈಶಿಷ್ಟ್ಯವೆ ಎನ್ನಬೇಕು. ಇವರ ಆಧಾರದಿಂದ ಜನ್ನನು ಛಂದಸ್ಸಿನಲ್ಲಿ ಪ್ರಯೋಗ ಕುತೂಹಲಿಯಾಗಿದ್ದನೆಂದು ಹೇಳಬಹುದು. ಅನಂತನಾಥ ಪುರಾಣದಲ್ಲಿ ಮಾತ್ರ ಪೂರ್ವಪ್ರಚುರವಾದ ರೂಢವೃತ್ತಗಳನ್ನೇ ಕಾಣುತ್ತೇವೆ. ಅದು ಶೈಲಿ, ಛಂದಸ್ಸಿನ ದೃಷ್ಟಿಯಿಂದ ಸಂಪ್ರದಾಯಬದ್ಧವಾದ ಪ್ರೌಢ ಚಂಪೂಗ್ರಂಥವೇ ಸರಿ. ಒಂದು ವೇಳೆ ತ್ರಿಪದಿಯೊ ರಗಳೆಯೊ, ಅಕ್ಕರವೊ ಉತ್ಸಾಹವೊ ಬಂದಿದ್ದರೆ ಇವು ಪೂರ್ವ ಕ್ರಮವನ್ನು ಹಿಡಿದು ವೈವಿಧ್ಯದೃಷ್ಟಿಗಾಗಿ ಬಂದವು. ಜನ್ನ ಕವಿಗೆ ದೇಶಿ ಛಂದಸ್ಸಿನಲ್ಲಿ ಒಲವಿರಲಿಲ್ಲವೆಂಬುದಕ್ಕೆ ಅನುಭವ ಮುಕುರ ಕನ್ನಡಿ ಹಿಡಿದಿದೆ. ಇದನ್ನು ಆತನು ತನ್ನ ತಾರುಣ್ಯದಲ್ಲಿ ವಿವಿಧ ವೃತ್ತ ರಚನೆಯಲ್ಲಿ ಕೈಯನ್ನು ಪಳಗಿಸಿಕೊಳ್ಳುವುದಕ್ಕೋಸ್ಕರ ಬರೆದನೆನ್ನಬಹುದು (ತೀ. ನಂ. ಶ್ರೀ: ಕಾವ್ಯ

---

*ಹೀಗೆ ಹೇಳಲು ಕಾರಣವೇನೆಂದರೆ ಅರ್ಧಸಮವೃತ್ತಗಳಲ್ಲಿ ವಿಷಮಪಾದಗಳು ಒಂದು ಸಮವಾಗಿಯೂ, ಸಮಪಾದಗಳು ಒಂದು ಸಮವಾಗಿಯೂ ಇರುವುದು ಕ್ರಮ. ಇಲ್ಲಿ ಹಾಗಿಲ್ಲ. ಇದನ್ನು ಪ್ರಯೋಗತತ್ಪರನಾದ ಕವಿಯ ರಚನಾಕೌಶಲವೆನ್ನಬಹುದೆ?

ಸಮೀಕ್ಷೆ, ಪು. ೫೬.). ಇಲ್ಲವೆ ಯುವೋತ್ಸಾಹ ಸಹಜವಾದ ಪ್ರಯೋಗ ಕುತೂಹಲ, ಪಾಂಡಿತ್ಯ ಪ್ರದರ್ಶನ ಬುದ್ಧಿಯಿಂದ, ವಿವಿಧ ವೃತ್ತ ರಚನೆಯಲ್ಲಿ ತನ್ನ ಕೌಶಲವನ್ನೂ ಪರಿಣತಿಯನ್ನೂ ಮನಗಾಣಿಸುವ ಸಲುವಾಗಿ ಬರೆದನೆನ್ನಬಹುದು.

ಕವಿಯು ಅನುಭವ ಮುಕುರದಲ್ಲಿ ಕಂದ ಪದ್ಯಗಳನ್ನೂ ಉತ್ಪಲಾದಿ ಆರುವೃತ್ತಗಳನ್ನೂ ಬಿಟ್ಟರೆ, ಪಙ್ಕ್ತಿ ಛಂದಸ್ಸಿನಿಂದ ಅತ್ಯಷ್ಟಿ ಛಂದಸ್ಸಿನ ವರೆಗೆ† ವೃತ್ತ ಪ್ರಯೋಗಗಳನ್ನು ನಡೆಸಿದ್ದರೂ ಸಾಮಾನ್ಯವಾಗಿ ಅವಿಲಂಬವಾದ ವೃತ್ತಜಾತಿಗಳಲ್ಲಿಯೆ ಹೆಚ್ಚಾಗಿ ಅವನ ಕೈ ನಡೆದಿರುವುದು ಕಾಣುತ್ತದೆ. ಈ ಪ್ರಯೋಗಗಳು ಪೂರ್ವಪ್ರಯುಕ್ತವೆ, ಸ್ವಕಲ್ಪಿತವೆ ಎಂಬುದು ಮುಖ್ಯ ಪ್ರಶ್ನೆ, ಅಭ್ಯಾಸಕ್ಕೆ ವಿಷಯ. ಹೇಗೂ ಕೃತಿಯ ವಿಶಿಷ್ಟತೆಗೆ ಕೊರತೆಯಿಲ್ಲ. ಒಂದೆರಡನ್ನು ಬಿಟ್ಟು ಇವು ಛಂದೋಂಬುಧಿಯಲ್ಲಿ ಕಾಣುವುದಿಲ್ಲ. ಇದು ಗಮನಾರ್ಹವಾದ ಅಂಶ. ಸಂಸ್ಕೃತದ ಹಲವು ಛಂದೋಗ್ರಂಥಗಳಲ್ಲಿ ಕಾಣುವುದಿಲ್ಲ. ಎಲ್ಲಿಯೂ ದೊರಕುವುದೆ ಇಲ್ಲವೆಂದು ದೃಢವಾಗಿ ಹೇಳುವಂತಿಲ್ಲ. ಇವುಗಳಲ್ಲಿ ಕೆಲವಾದರೂ, ಮುಂದೆ ಎಲ್ಲಿಯಾದರೂ, ಅಭ್ಯಾಸಿಗಳಿಗೆ ದೊರೆತಾವು! ಅಲ್ಲಿಯವರೆಗೆ ಇವು ಕವಿಕಲ್ಪಿತವಾದ ಸ್ವಂತ ಪ್ರಯೋಗಗಳೆಂದು ಇಟ್ಟುಕೊಂಡರೆ ತಪ್ಪಾಗಲಾರದು.

ಇಲ್ಲಿಯ ವರ್ಣವೃತ್ತಗಳಲ್ಲಿ ಮಾತ್ರಾವೃತ್ತಗಳ ನಡೆ ಎದ್ದು ಕಾಣುವುದರಿಂದ ಕವಿ ಲಕ್ಷ್ಯಪೂರ್ವಕವಾಗಿ ಮಾತ್ರಾಲಯವನ್ನು ಹಿಡಿದೇ ಇವನ್ನು ಕಟ್ಟಿರುವನೇನೋ ಎನಿಸುವುದು. ಹಾಗಲ್ಲದಿದ್ದರೂ ಶ್ರವ್ಯತೆಯ ದೃಷ್ಟಿಯಿಂದ ವರ್ಣವೃತ್ತಗಳಲ್ಲಿ ಮಾತ್ರಾಗಣವಿನ್ಯಾಸದ ಪ್ರಭಾವ ಪರಿಣಾಮಗಳನ್ನು ಅಳೆಯಲಾದರೂ ಇವು ಸಹಕಾರಿಯಾಗಿವೆಯೆನ್ನಬಹುದು.

ಇನ್ನು ಇವುಗಳಿಗೆ ಕೊಟ್ಟಿರುವ ಹೆಸರುಗಳ ಸಂಗತಿ. ಅಚ್ಚಿನ ಪುಸ್ತಕದಲ್ಲಿ ಹಲವಕ್ಕೆ ಹೆಸರುಗಳನ್ನು ಕೊಟ್ಟಿದೆ. ಕೆಲವಕ್ಕೆ ಹೆಸರು ಕೊಡದೆ ಅಲ್ಲಲ್ಲಿ

---

†ರೂಢಿಯ ಮಲ್ಲಿಕಾಮಾಲೆ, ತರಳ ವೃತ್ತಗಳನ್ನು ಇಲ್ಲಿ ಗಮನಿಸಿಲ್ಲ.

ಬೇರೆ ಜಾತಿಯ ಕೆಳಗೆ ಸೇರಿಸಿದೆ. ಉತ್ಪಲಾದಿ ವೃತ್ತ ಕಂದಗಳ ಸೂಚನೆ ಯಲ್ಲಿಯೂ ಹೀಗೆಯೆ. ಒಂದೆರಡಕ್ಕೆ ಕೊಟ್ಟಿರುವ ಹೆಸರುಗಳು ಸರಿಯಲ್ಲ. ಒಂದೇ ಗಣವಿನ್ಯಾಸವಿರುವ ಕೆಲವು ವೃತ್ತಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿದೆ. ಕೆಲವಕ್ಕೆ ರೂಢಿಯ ಹೆಸರುಗಳನ್ನು ಬಿಟ್ಟು ಬೇರೆ ಹೆಸರುಗಳನ್ನು ಕೊಟ್ಟಿದೆ. ಉಳಿದವು ಪೂರ್ವೋಕ್ತವೊ ಕವಿದತ್ತವೊ ಈಗಲೆ ಹೇಳುವಂತಿಲ್ಲ. ಅಲ್ಲದೆ ಈ ವೈಶಿಷ್ಟ್ಯ ವೈಲಕ್ಷಣ್ಯ ತಪ್ಪು ನೆಪ್ಪುಗಳಲ್ಲಿ, ಕವಿಯ ಕೈವಾಡ ವೆಷ್ಟೋ ? ಪ್ರತಿಕಾರರ ಕೈವಾಡವೆಷ್ಟೋ ? ರೂಢಿಯ ವೃತ್ತಗಳ ನಾಮ ನಿರ್ದೇಶನದಲ್ಲಿ ಕವಿಯು ವಹಿಸಿರುವ ಸ್ವಾತಂತ್ರ್ಯವನ್ನು ಗಮನಿಸಿದರೆ, ಉಳಿದ ವೃತ್ತಗಳ ಹೆಸರಿನಲ್ಲಿಯೂ ಅವನದೆ ಕೈವಾಡವಿರುವುದು ಸಹಜ. ವೃತ್ತಗಳೆ ಕವಿಕಲ್ಪನೆಯಾಗಿದ್ದರೆ ಹೆಸರುಗಳೂ ಕವಿಕಲ್ಪನೆಯಾಗಿರಬಹುದು. ಇಲ್ಲವೆ ಬೇರೆ ವೃತ್ತನಾಮಗಳು ಕವಿಯ ಇಷ್ಟಾನುಸಾರ ಇಲ್ಲಿಗೆ ಉಪಯುಕ್ತವಾಗಿರಬಹುದು. ಅಲ್ಲದೆ ಕೆಲವು ಪದ್ಯಗಳ ಭಾವನಿರ್ದೇಶನ ಮಾಡುವಂಥ, ಭಾವಸ್ವಾರಸ್ಯಕ್ಕೆ ಒಪ್ಪುವಂಥ ಹೆಸರುಗಳನ್ನು ಉಚಿತವರಿತು ಕೊಟ್ಟಿರುವಂತೆಯೂ ಊಹಿಸ ಬಹುದು. ಹೇಗೂ ಇವು ಕವಿಯ ಪ್ರಯೋಗಶೀಲತೆ, ರಸಿಕತೆಗಳ ದ್ಯೋತಕ ವಾಗಿವೆ. ಪ್ರಯೋಗಭಾಗದಲ್ಲಿ ಇವಕ್ಕೆ ನಿದರ್ಶನಗಳನ್ನು ಕಾಣಬಹುದು.

ಪ್ರಯೋಗ ಭಾಗ

ಇಲ್ಲಿ ಮೊದಲು ಅನುಭವ ಮುಕುರದ ವೃತ್ತನಾಮ, ಆಮೇಲೆ ಪದ್ಯ ಸಂಖ್ಯೆ, ಗಣವಿನ್ಯಾಸ, ಪದ್ಯವು ಲಕ್ಷಣಾನ್ವಿತವೆ (ಸರಿ), ಅಲ್ಲದಿದ್ದರೆ ಊಹಿಸಿದ ಪಾಠ (ಇದರಲ್ಲಿ ಮೊದಲ ಸಂಖ್ಯೆ ಸಾಲನ್ನೂ, ಎರಡನೆಯದು ಗಣವನ್ನೂ ಸೂಚಿಸುವುದು), ವೃತ್ತದ ಪರ್ಯಾಯನಾಮ ಮತ್ತು ಅದರ ಆಕರ್ಷ ಮಾತ್ರಾವೃತ್ತದ ನಡೆ—ಇವುಗಳನ್ನು ಆವಶ್ಯಕವಿದ್ದಂತೆ, ಆಧಾರ ದೊರೆತಂತೆ, ತೋರಿಸಿದೆ.

ಆರು ವೃತ್ತಗಳು: ಉತ್ಪಲ ಮಾಲೆ: ಪ ೧, ೧೦, ೬೨ (ಸರಿ.) ಶಾರ್ದೂಲ ವಿಕ್ರೀಡಿತ: ಪ. ೨೩ (ಸರಿ.) ಸ್ರಗ್ಧರ: ೧೧ (ಸರಿ) ೨೨ (೩ : ೫ ನಿದಂ ಬ) ಮತ್ತೇಭ ವಿಕ್ರೀಡಿತ: ೩, ೧೬, ೪೫, ೪೮, ೪೯, ೬೯, ೮೬, ೯೪

(ಸರಿ) ೭೨ (೨ನೇ ಸಾಲು ತ್ರುಟಿತ.) ೭೩ (೪ನೇ ಸಾಲು ತ್ರುಟಿತ.) ಮಹಾಸ್ರಗ್ಧರೆ: ೬೩ (೩, ೪ನೇ ಸಾಲು ತ್ರುಟಿತ.) ೭೬ (೩ನೇ ಸಾಲು ತ್ರುಟಿತ.) ಚಂಪಕಮಾಲೆ: ೬, ೧೭, ೪೩, ೪೭, ೮೫, ೧೦೦ (ಸರಿ.) ೪೧ (೧ : ೬ ?) ೧೦೮ (ಅಶುದ್ಧ, ತ್ರುಟಿತ)

ಕಂದ : ೪, ೮, ೧೫, ೧೮, ೧೯, ೨೧, ೨೫, ೩೦, ೩೧, ೩೩, ೩೪, ೫೩, ೫೬, ೬೧, ೮೩, ೮೪, ೮೭, ೮೯, ೯೯, ೧೦೯ (ಸರಿ) ೩೨, ೩೬, ೧೦೩, ೧೦೪, (ಕ್ರಮವಾಗಿ ೨, ೨, ೪, ೧ನೇ ಸಾಲು ತ್ರುಟಿತ.) ೧೦೫ (೨ನೇ ಸಾಲು ಅಶುದ್ಧ, ೨:೩ ತಿಳಿಯದು)

ಮಲ್ಲಿಕಾಮಾಲೆ: ೧೩, ೪೪, ೬೭ (ಸರಿ) ತರಳ: ೧೨, ೨೪, ೮೧ (ಸರಿ) ೨೯ (ಇದು ರೂಢಿಯ ತರಳ ವೃತ್ತವಲ್ಲ; ಅಷ್ಟಿ ಛಂದಸ್ಸಿಗೆ ಸೇರಿದ್ದು ; ಗಣವಿನ್ಯಾಸ : ನರಜರಜಗ. ಛಂದೋಂಬುಧಿಯಲ್ಲಾಗಲಿ, ಬೇರೆಡೆಗಳಲ್ಲಾಗಲಿ ಈ ವೃತ್ತ ಕಾಣಲಿಲ್ಲ.)

೧೦ನೆಯ ಪಙ್ಕ್ತಿಯಲ್ಲಿ :

1. ಮಣಿರಂಗಂ–೪೨–ಮಸಸಗ–ಸರಿ–ಉದ್ಧತ : ಹೇಮ 2–124–4ರ 4ಗಣ.
2. ದರಹಾಸಂ[1] – ೯೫ – ಸತಯಗ – ಸರಿ – ಕಲಗೀತ : ಮಂದಾ 13–7–4ರ 4ಗಣ.

೧೧ನೆಯ ತ್ರಿಷ್ಟುಪ್ಪಿನಲ್ಲಿ :

1. ಮೌಕ್ತಿಕ ದಂತಿ–೪೦–ಸಸಭಗಗ–ಸರಿ–4ರ 4ಗಣ.
2. ಉಪಜಾತಿ[2]–೯–ತಜಜಲಗ–ಸರಿ–ಮೋಟನಕ : ಪಿಂಗ 6–15, ಕುಸುಮಂ : ಕೈಪಿಡಿ–ಮೋಟಕ ಎಂದೂ ಹೆಸರಿದೆ–4ರ 4 ಗಣ.

---

1 ಈ ವೃತ್ತ 'ದರಹಾಸಂ' ಎಂಬ ಪದದಿಂದಲೇ ಮೊದಲಾಗುತ್ತದೆ.

2 ಉಪಜಾತಿಯೆಂಬುದು ಒಂದೇ ಛಂದಸ್ಸಿನ ಭಿನ್ನವೃತ್ತ ಜಾತಿಗಳ ಒಂದು ಮಿಶ್ರ ಪ್ರಯೋಗ. ಆದ್ದರಿಂದ ಇದಕ್ಕೆ 'ಉಪಜಾತಿ' ಎಂಬ ಹೆಸರು ಸರಿಯಾಗಲಾರದು.

3. ತೋಟಕ[3]–೨೮–ಸಸಭಗಗ–ಸರಿ–4ರ 4ಗಣ.
4. ಸಂಪೂರ್ಣಚಂದ್ರ–೩೭–ತತತಗಗ–ಸರಿ–ಲಯಗ್ರಾಹಿ : ಛಂದೋ 32–34, ವಿಧ್ವಂಕಮಾಲಾ ವೃ. ರ. ೧೧–೨೯೩–5, 5, 5, 4.
5. ವಂಶಸ್ಥ[4]–೫೪–ಜತಜಗಗ–ಸರಿ–ಉಪೇಂದ್ರವಜ್ರ ; ಛಂದೋ ೩೦–೬೪, ಜಯ 2–116–4, 4, 4, 5.
6. ಮಂದಾನಿಲ–೧೦೧–ತತಜಗಗ–ಸರಿ–ಇಂದ್ರವಜ್ರ : ಛಂದೋ 29–63 ಗಂಗಾ 2–41–5, 4, 5, 4.
7. ಉದಾತ್ತವಂಶ–೮೦–ಜತಜಗಗ–ಸರಿ–ಉಪೇಂದ್ರವಜ್ರ (ಉದಾ॥ 5 ನೋಡಿ.)
8. ಉದಾತ್ತಂ[5]–೭೫–ಸಭತಲಗ–ಸರಿ–4ರ 4ಗಣ.
9. ಪೂರ್ಣಚಂದ್ರಂ[6] – ೭೦–ತತತಗಗ–ಸರಿ–ಲಯಗ್ರಾಹಿ (ಉದಾ॥ 4 ನೋಡಿ.)
10. ರತಿಕ್ರೀಡಾ[7]–೯೮–ಭಭತಲಗ–ಸರಿ–4ರ 4 ಗಣ.

---

3 ತೋಟಕವು 'ನಾಲ್ಕಸಗಣ'ದಿಂದ ಕೂಡಿದ್ದು. ಅ. ಮು. ದ ಪ ೫, ೧೪ಕ್ಕೆ ತೋಟಕವೆಂದೆ ಹೆಸರಿದ್ದು ಅವು ಲಕ್ಷಣಾನ್ವಿತವಾಗಿವೆ. ಇದೇ ಛಂದಸ್ಸಿನ ೧ನೇ ಉದಾ॥ಯ ಗಣವಿನ್ಯಾಸವೂ ಇದೇ ಆದ್ದರಿಂದ ಇದನ್ನೂ 'ಮೌಕ್ತಿಕದಂತಿ' ಎಂಬ ಹೆಸರಿನಿಂದಲೇ ಕರೆಯುವುದು ಸದ್ಯಕ್ಕೆ ಸರಿಯಾದೀತು. (ಛಂದೋರಚನಾ : ವರ್ಣಬಲಾಕಾ.) ಪು. ೨೫೪.

4 ಉದಾ॥ ೫ ಹಾಗೂ ೭ರಲ್ಲಿ ಒಂದೇ ಗಣವಿನ್ಯಾಸವಿದೆ. ಇವು ಉಪೇಂದ್ರವಜ್ರ ವೃತ್ತದ ಉದಾಹರಣೆಗಳು. ವಂಶಸ್ಥವು ಮೊದಲ ೩ ಗಣಗಳಲ್ಲಿ ಉಪೇಂದ್ರವಜ್ರವನ್ನು ಹೋಲುವುದರಿಂದ ಈ ಹೆಸರು ಭ್ರಮಾಜನ್ಯವಿರಬೇಕು.

5 ಇದೇ ಗಣವಿನ್ಯಾಸದ ಒಂದು ಪದ್ಯ 'ಅಶ್ವಹರಂ' ಎಂಬ ಹೆಸರಿನಿಂದ ಶ್ರೀ ಎಂ. ಎಸ್. ಎಸ್. ಭಟ್ಟರ 'ಕುಂದಮಾಲೆ'ಯಲ್ಲಿ ಬಳಕೆಯಾಗಿದೆ (ಪು ೪೪)

6 ಉದಾ॥ ೪ ಹಾಗೂ ೯ರಲ್ಲಿ ಒಂದೇ ಗಣ ವಿನ್ಯಾಸವಿದೆ. ಹೆಸರಿನಲ್ಲಿಯೂ ಹೋಲಿಕೆಯಿದೆ. ೪ನೇ ಉದಾ॥ ಯಲ್ಲಿ 'ಪೂರ್ಣರಾಕಾಬ್ಜವಕ್ತ್ರೇ' ಎಂಬ ಮಾತನ್ನು ಗಮನಿಸಬಹುದು.

7 ಈ ಹೆಸರು ಈ ಪದ್ಯದ ಭಾವಕ್ಕೆ ಸ್ಪಷ್ಟ ಹೊಂದುವಂತಿದೆ. (ಛಂದೋರಚನಾ ; ಕಲಸ್ವನ) ಪು. ೧೪೬,

11. ಮಂಜುಳಂ_೯೯_ಭತನಗಗ_ಸರಿ_ಸಾಂದ್ರ : ಛಂದೋ 31–73, ಅನುಕೂಲಾ: ಗಂಗಾ ೨_೧೧_೮ ; ಪ್ರತ್ಯಬೋಧ, ಮೌಕ್ತಿಕ ಮಾಲಾ, ಶ್ರೀ, ಕುಟ್ಮಲದಂತೀ, ರುಚಿರಾ, ಸಾಂದ್ರಪದ, ಭದ್ರ ಪದ ಎಂಬ ಹೆಸರುಗಳೂ ಉಂಟು–4ರ 4 ಗಣ.

೧೨ನೆಯ ಜಗತಿಯಲ್ಲಿ :

1. ತೋಟಕ-೫, ೧೪–ಸಸಸಸ_ಸರಿ_ತೋಟಕ : ಛಂದೋ 32–76, ಜಯ 2–121 ; ಚಿತ್ರಕ, ನಂದಿನೀ, ಭ್ರಮರಾವಲಿ_ಎಂಬ ಹೆಸರುಗಳೂ ಇವೆ_4ರ 4 ಗಣ.
2. ಭುಜಗೇಂದ್ರ ಭೂಷಣ[8]–೩೯_ಭಭಭಸ_ಸರಿ_4ರ 4ಗಣ.
3. ಉಪಜಾತಿ[9]_೪೬_ಸಸಭಸ_ಸರಿ–4ರ 4 ಗಣ.
4. ವಜ್ರಕಟಕಂ[10]_೯೫_ಸಯಯಯ_ಸರಿ_5, 5, 5, 4.
5. ಲಲಿತಂ_೭೮_ಭಭಭಸ_ಸರಿ_4ರ 4 ಗಣ.
6. ಮಲಯಾನಿಲಂ_೯೦_ಸಸನಯ_ಸರಿ_4ರ 4ಗಣ.
7. ಮತ್ತಗಜಂ_೫೭_ತನಸಸ_ಸರಿ–4ರ 4ಗಣ.
8. ಉತ್ಸಾಹ–೬೪–ನಯಸಸ_೧ನೇ ಸಾಲು ಅಶುದ್ಧ_4ರ 4ಗಣ.
9. ಮಾಲತೀ_೭೯_ತಜನಸ_ಉತ್ತರಾರ್ಧ ಅಶುದ್ಧ_4ರ 4 ಗಣ.

೧೩ನೆಯ ಅತಿಜಗತಿಯಲ್ಲಿ :

1. ಅಸಂಗಕ್ರಮ[11]_೩೫_ಸಜತಸಗ_ಸರಿ_5, 5, 5, 4.

---

8 ಉದಾ॥ ೨ ಹಾಗೂ ೫ರಲ್ಲಿ ಒಂದೇ ಗಣವಿನ್ಯಾಸವಿದೆ. ಉದಾ॥ ೫ರಲ್ಲಿ 4:4 'ತರಳಂ' ಪ್ರತಿಯಾಗಿ 'ಲಲಿತಂ' ಇರಬಹುದೆ ? (ಛಂದೋರಚನಾ, ಪು. ೨೫೭, ಸಮ್ಮದ ವದನಾ.)

9 ೧೮ನೇ ತ್ರಿಷ್ಟುಪ್ಪಿನ ಕೆಳಗೆ ೭ನೇ ಉದಾ॥ಗೆ ಕೊಟ್ಟಿರುವ ಅಡಿಟಿಪ್ಪಣಿ ನೋಡಿ.

10 ಈ ಪದ್ಯವು 'ವರ ವಜ್ರಮುಂ ವಜ್ರದಿಂ ... 'ಎಂದು ಮೊದಲಾಗುವುದು ಗಮನಾರ್ಹ.

11 ಈ ಹೆಸರು ಈ ಪದ್ಯದ ಭಾವಕ್ಕೆ ಸ್ವಲ್ಪ ಹೊಂದುವಂತಿದೆ,

2. ನಿಃಕಳಂಕಂ–೭೭–ಭನಯುರಗ–ಸರಿ–5, 5, 5, 4.
3. ಬಹಿರಂಗಂ[12]–೫೯–ಸನಸಸಗ–ಸರಿ–4ರ 4ಗಣ.
4. ಕಳಕಂಠ–೭–ಸಭನನಗ–೪ನೇ ಸಾಲು ಅಶುದ್ಧ–4ರ 4 ಗಣ.
5. ಸೌಂದರ್ಯ[13]–೫೧–ಭಯಜಸಗ–೨ನೇ ಸಾಲು ಅಶುದ್ಧ–5, 5, 5, 4.
6. ಭುಜಂಗ ಪ್ರಯಾಗಂ–೭೧–ನನಭಭಗ–1ನೇ ಸಾಲು ತ್ರುಟಿತ–4ರ 4 ಗಣ.
7. ಚಟುಲ–೯೦–ಭಯಜಸಗ–3:4 ೪ನಿತಂ–5. 5, 5, 4.

೧೪ನೆಯ ಶಕ್ವರಿಯಲ್ಲಿ :

1. ಮತ್ತಭೃಂಗಂ–೩೮–ಭಜತಸಲಗ–ಸರಿ–5ರ 4 ಗಣ.
2. ರಜನೀಕರ[14]–೮೮–ಸಜಸನಗಗ–ಸರಿ–5, 5, 5, 4.
3. ಹಾರಲತಿಕೆ–೯೬–ತನಭಭಲಗ–1:4 ರೋವರ 4:1 ಪ್ರೇಮಕ್ಕೆ–4ರ 4, 3ರ 1.

೧೫ನೆಯ ಅತಿಶಕ್ವರಿಯಲ್ಲಿ :

1. ಚಂದ್ರಲೇಖಾ[15]–೨೦–ರಜರಜರ–ಸರಿ–ಉತ್ಸವ : ಜಯ 2–190, ಉತ್ಸವಂ : ಕೈಪಿಡಿ; ಉತ್ಸಾಹ, ತೂಣಕ, ಮಹೋತ್ಸವ ಎಂಬ ಹೆಸರುಗಳೂ ಉಂಟು–3ರ 7 + ಗು.
2. ವಸಂತ ಕುಸುಮಂ – ೫೫ – ರಜರಜರ – ಸರಿ – ಒಂದನೇ ಉದಾ॥ ನೋಡಿ.

---

12 ೩ನೇ ಪಾದ ‘ಬಹಿರಂಗ’ ಎಂಬ ಪದದಿಂದಲೇ ಮುಗಿಯುತ್ತದೆ.

13 ಉದಾ॥ ೫ ಹಾಗೂ ೭ರ ಗಣವಿನ್ಯಾಸ ಒಂದೇ ಆಗಿದೆ. ಉದಾ॥ ೫ರ ಹೆಸರು ಆ ಪದ್ಯದ ಭಾವಕ್ಕೆ ಸ್ವಲ್ಪ ಹೊಂದುವಂತಿದೆ.

14 ಈ ಪದ್ಯದ ೪ನೇ ಪಾದ ‘ರಜನೀಶವಕ್ತ್ರೆ’ ಎಂದು ಮೊದಲಾಗುತ್ತದೆ.

15 ಉದಾ॥ 1 ಹಾಗೂ 2ರ ಗಣವಿನ್ಯಾಸ ಒಂದೇ ಆಗಿದೆ. ಕನ್ನಡ ಕೈಪಿಡಿಯ ‘ಉತ್ಸವ’ ಎಂಬ ಪೆಸರಿನಿಂದ ಈ ವೃತ್ತವನ್ನು ಗುರುತಿಸಬಹುದು. ಛಂದಸ್ಸಾರದಲ್ಲಿ ಇವನ್ನು ‘ಚಾಮರಂ’ ಎಂದಿದೆ.

3. ಮದನವತಿ–೨೬–ನಸಜನಯ–3:4 ಪೆನಬು–5, 5, 5, 4.
4. ಮ[illegible]ಷಮಂ–೨೭ ಭಮನಸಯ–ಉತ್ತರಾರ್ಧ ಅಶುದ್ಧ–3, 4, 3, 4, 5.

೧೬ನೆಯ ಅಷ್ಟಿಯಲ್ಲಿ :

1. ಜಲಧರಮಾಲಾ–೫೦–ನಸಜನಜಗ–೨ನೇ ಸಾಲು ಅಶುದ್ಧ–5ರ 4 ಗಣ.

೧೭ನೆಯ ಅತ್ಯಷ್ಟಿಯಲ್ಲಿ :

1. ಮತ್ತಕೋಕಿಲ–೫೨–ನನರಜರಲಗ–ಸರಿ–3ರ 7 ಗಣ + ಗು.

ವಿಶೇಷ :

1. ಮಂದಾಕ್ರಾಂತ[16]–೫೮–೧ನೇ ಪಾದಃ ಭಯನರಲಗ, ೨ನೇ ಪಾದ : ಅದೇ, ೩ನೇ ಪಾದ : ಭತಸರಲಗ, ೪ನೇ ಪಾದ : ಭಯನಭಲಗ. ಇದು ಸಮವೃತ್ತವೇ ಆಗಿದ್ದು ೩, ೪ನೇ ಪಾದಗಳಲ್ಲಿ ತಪ್ಪಾಗಿರುವ ಸಂಭವವಿದೆ.
2. ಲಲಿತೇ–೬೨–೧, ೪ನೇ ಪಾದ : ತಭನಸಗಗ (14 ಅಕ್ಷರಗಳು) ೨, ೩ನೇ ಪಾದ : ತಭಜಸಗ (13 ಅಕ್ಷರಗಳು)–ಸರಿ–ಇದು ಅರ್ಧ ಸಮ ವೃತ್ತದಂತೆ ಕಂಡರೂ ಪಾದ ವಿನ್ಯಾಸ ಬೇರೆ ಕ್ರಮದಲ್ಲಿದೆ.

ವೃತ್ತನಾಮವನ್ನು ನಿರ್ದೇಶಿಸದೆ ಬೇರೆ ವೃತ್ತಭೇದಗಳ ಕೆಳಗೆ ಬಂದವು

(i) ಸಮವೃತ್ತಗಳು :

1. ಪದ್ಯ ೨[17]–ರಜರಜರ–ಹಿಂದೆ ಕೊಟ್ಟಿರುವ ಅತಿಶಕ್ವರಿ ಛಂದಸ್ಸಿನ ಕೆಳಗೆ ೧ನೇ ಉದಾ|| ನೋಡಿ–ಸರಿ.

---

16 ರ ಭಿನ್ನ ಮಂದಾಕ್ರಾಂತ ವೃತ್ತದ ಲಕ್ಷಣ: 'ಮಭನಂ ದ್ವಯಂ ಗದ್ವಯಂ' (ಕನ್ನಡ ಕೈಪಿಡಿ, ೮೫; ಛಂದೋ ೪೨–೧೧೩)

17 ಕನ್ನಡ ಕೈಪಿಡಿ : 'ಉತ್ಸವಂ' (ಪು. ೮೪.)

2. ಪ. ೯೧ – ಭಜಸನಗಗ (ಶಕ್ವರಿ) – ವಸಮಯೂರ : ಛಂದೋ 38–99, ಇಂದುವದನಾ : ಗಂಗಾ 2–118 ; ಇದಕ್ಕೆ ಕಾಂತಾ ಮಹಿತಾ, ವರ ಸುಂದರೀ, ವಿಲಾಸಿನೀ, ಸ್ಖಲಿತಾ–ಎಂಬ ಹೆಸರುಗಳೂ ಉಂಟು–೩ನೇ ಸಾಲು ಅಶುದ್ಧ, 3:4 ಕಳಿವು–5, 5, 5.

3. ಪ. ೯೮–ಸಯುಸನಗಗ (ಶಕ್ವರಿ)–೪ನೇ ಸಾಲು ಅಶುದ್ಧ, 4:2 ಪ್ವದೇ ಚಂ–5, 5, 5, 4.

4. ಪ. ೮೨–ತಭಜಸಗ (ಅತಿಜಗತಿ)–೧ನೇ ಸಾಲು ಅಶುದ್ಧ, 1:3 ದು ತನ್ನ 1:4 ಮನ ಮೇ–4, 4, 4, 5+ಗು.

5. ಪ. ೯೩–ಸಸಸಸ (ಜಗತಿ)–ಹಿಂದೆ ಕೊಟ್ಟಿರುವ ಜಗತಿ ಛಂದಸ್ಸಿನ ಕೆಳಗೆ ಒಂದನೇ ಉದಾ॥ ನೋಡಿ–ಸರಿ.

6. ಪ. ೯೭–ತತಜಗಗ (ತ್ರಿಷ್ಟುಪ್ಪು)–ಹಿಂದೆ ಕೊಟ್ಟಿರುವ ತ್ರಿಷ್ಟುಪ್ಪು ಛಂದಸ್ಸಿನ ಕೆಳಗೆ ಆರನೇ ಉದಾ॥ ನೋಡಿ ಸರಿ.

7. ಪ. ೧೦೬–ಸಯಯಯ (ಜಗತಿ)–ಆ ಛಂದಸ್ಸಿನ ಕೆಳಗೆ ನಾಲ್ಕನೇ ಉದಾ॥ ನೋಡಿ–2, 3, 4ನೇ ಸಾಲುಗಳು ತ್ರುಟಿತ, 3ನೇ ಸಾಲು ಅಶುದ್ಧ (?).

8. ೧೦೭–ಅಶುದ್ಧ.

(ii) 1. ಪ. ೭೪–೧ನೇ ಪಾದದ ಮೊದಲೆರಡು ಗಣಗಳು (ಸಭಗಣ?) ತ್ರುಟಿತವಾಗಿವೆ. ಇದರ ಗಣ ವಿನ್ಯಾಸ: ೧, ೨ನೇ ಪಾದ: ಸಭಭಗ (10 ಅಕ್ಷರಗಳು) ೩, ೪ನೇ ಪಾದ: ಸಸಸಸ (12 ಅಕ್ಷರಗಳು); ಅರ್ಧಸಮವೃತ್ತದಂತೆ ಕಂಡರೂ ಪಾದವಿನ್ಯಾಸ ಬೇರೆ ಕ್ರಮದಲ್ಲಿದೆ.

2. ಪ. ೧೦೨–೧ನೇ ಪಾದ ತ್ರುಟಿತ, ೨ನೇ ಪಾದ ಸ್ವಲ್ಪಭಾಗ ತ್ರುಟಿತ, ೩ನೇ ಪಾದ ತಭಜಸಗ (13 ಅಕ್ಷರಗಳು), ೪ನೇ ಪಾದ ಭನನಭನಗ (16 ಅಕ್ಷರಗಳು); ೨ನೇ ಪಾದದ ಉಳಿಕೆಯ ಆಧಾರದ ಮೇಲೆ ಇದರ ಗಣವಿನ್ಯಾಸಕ್ರಮ ೧, ೪ನೇ ಪಾದಗಳಲ್ಲಿ

ಒಂದು ರೀತಿಯೂ, ೨, ೩ನೇ ಪಾದಗಳಲ್ಲಿ ಇನ್ನೊಂದು ರೀತಿಯೂ ಇರಬಹುದೆಂದು ಊಹಿಸಬಹುದು. ಇಲ್ಲಿಯೂ ಅರ್ಧಸಮ ವೃತ್ತದಂತೆ ಕಂಡರೂ ಪಾದವಿನ್ಯಾಸ ಬೇರೆ ಕ್ರಮದಲ್ಲಿದೆ.[18]

---

18 ಸಂಕೇತಗಳು :

ಗಂಗಾ : ಗಂಗಾದಾಸನ ಛಂದೋಮಂಜರಿ.
ಜಯ : ಜಯಕೀರ್ತಿಯ ಛಂದೋನುಶಾಸನ.
ಹೇಮ : ಹೇಮಚಂದ್ರನ ಛಂದೋನುಶಾಸನ.
ಮಂದಾ : ಮಂದಾರ ಮರಂದಚಂಪೂ.
ಪಿಂಗ : ಪಿಂಗಳನ ಛಂದಶ್ಶಾಸ್ತ್ರ.
ವೃ. ರ. : ಕೇದಾರನ ವೃತ್ತರತ್ನಾಕರ.
ಛಂದೋ : ನಾಗವರ್ಮನ ಛಂದೋಂಬುಧಿ.

ಚ(ಛ)ಪ್ಪನ್ನ ದೇಶಗಳು

ಮಹಾಭಾರತದ ಭೀಷ್ಮಪರ್ವದಲ್ಲಿಯೂ (ಅ. ೯), ಬೃಹತ್ಸಂಹಿತೆಯಲ್ಲಿಯೂ (ಅ. ೧೪, ೧೬) ಬ್ರಹ್ಮಾಂಡ ಮತ್ಸ್ಯ ವಿಷ್ಣು ವಾಯು ಮಾರ್ಕಂಡೇಯ ಬ್ರಹ್ಮ ಮುಂತಾದ ಪುರಾಣಗಳಲ್ಲಿಯೂ ದಿಗ್ಭಾಗಗಳ ಅನೇಕ ದೇಶಗಳನ್ನು ಪ್ರತ್ಯೇಕವಾಗಿ ಹೆಸರಿಸಿದೆ. ಇವುಗಳ ಚಾರಿತ್ರಿಕ ಸ್ಥಾನನಿರ್ದೇಶ ಸುಲಭಸಾಧ್ಯವಲ್ಲ. ಅಂಗುತ್ತರನಿಕಾಯ (i, ೨೧೩ ; iv, ೨೫೨, ೨೫೬, ೨೬೦), ಮಹಾವಸ್ತು (i, ೩೪; ii, ೩), ನಿದ್ದೇಸ (ii, ೩೭)—ಈ ಗ್ರಂಥಾಧಾರಗಳ ಪ್ರಕಾರ ಕ್ರಿ. ಪೂ. ಸು. ಆರನೆಯ ಶತಾಬ್ದದಲ್ಲಿ, ಬುದ್ಧೋದಯದ ಸ್ವಲ್ಪ ಮೊದಲು ಅಂಗ, ಮಗಧ, ಕಾಶಿ, ಕೋಸಲ, ವೃಜಿ (ವಜ್ಜಿ), ಚೇದಿ, ವತ್ಸ (ವಂಶ), ಕುರು, ಪಾಂಚಾಲ, ಮತ್ಸ (ಮಚ್ಛ), ಶೂರಸೇನ, ಅಶ್ವಕ ಅಥವಾ ಅಶ್ಮಕ (ಅಸ್ಸಕ), ಅವಂತಿ, ಗಾಂಧಾರ, ಕಾಂಭೋಜ ಎಂಬ 'ಸೋಳಸ ಮಹಾಜನಪದಗಳು' ಎಂದರೆ ೧೬ ದೇಶಗಳು ಬಾಳಿದುವೆಂದು ತಿಳಿದು ಬರುತ್ತದೆ. ಕೆಲವು ಬೌದ್ಧಗ್ರಂಥಗಳಲ್ಲಿ ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದರೂ ಒಟ್ಟಿನಲ್ಲಿ ಇವೆಲ್ಲ ಒಂದು ಪಡಿಯಚ್ಚಿನವು. ಜೈನಧರ್ಮದ ಭಗವತೀ ಸೂತ್ರ (ವ್ಯಾಖ್ಯಾಪ್ರಜ್ಞಪ್ತಿ) ಕೂಡ ಅಂಗ, ವಂಗ, ಮಗಹ, ಮಲಯ, ಮಾಲವ, ಅಚ್ಛ, ವಚ್ಛ, ಕೊಚ್ಛ, ಪಢ, ಲಾಢ (ರಾಢ), ಬಜ್ಜಿ (ವಜ್ಜಿ), ಮೋಲೀ, ಕಾಶೀ, ಕೋಸಲ, ಅವಾಹ, ಸಂಭುತ್ತರ (ಸಯ xv, ಉದ್ದೇಸ್ಸ i) ಎಂಬ ೧೬ ದೇಶಗಳನ್ನು ಉಲ್ಲೇಖಿಸಿದೆ.[1] ಇವೆಲ್ಲ ಭರತ ವರ್ಷದ ಉತ್ತರ ದೇಶಗಳೆಂದು ತೋರುತ್ತದೆ.

ವಿನಯಚಂದ್ರನು ತನ್ನ ಕಾವ್ಯಶಿಕ್ಷಾಗ್ರಂಥದಲ್ಲಿ 'ಚತುರಶೀತಿರ್ದೇಶಾಃ' ಎಂದು ನಿರುಕಾಗಿ ೮೪ ದೇಶಗಳನ್ನು ಪಟ್ಟಿಮಾಡುತ್ತಾನೆ. ಮುಂದುವರಿದು

[1] The Age of Imperial Unity (P. 1): Bombay, Bharatiya Vidya Bhavan.

ದೇಶ ಸಮುದಾಯುಗಳ ಶ್ರೇಣಿಯನ್ನು ಕೊಡುತ್ತ 'ಶ್ರೀ ನಾರಪ್ರಭೃತಿ ಷಟ್ ಪಂಚಾಶತ್' ಎಂದಿರುವನಾದರೂ ವಿವರವಿಲ್ಲ; ಅಲ್ಲದೆ ಸಾಮಾನ್ಯವಾಗಿ ತಿಳಿದಿರುವ ಚಪ್ಪನ್ನ ದೇಶಗಳಿಗೂ ಅದಕ್ಕೂ ಸಂಬಂಧವಿರುವಂತಿಲ್ಲ. (ನೋಡಿ: ರಾಜಶೇಖರನ ಕಾವ್ಯ ಮೀಮಾಂಸಾ, ೧೯೩೪ರ ಬರೋಡ, ಮುದ್ರಣ, ಟಿಪ್ಪಣಿಗಳು, ಪು. ೨೪೮.).

ನಾಗವರ್ಮನ 'ಛಂದೋಂಬುಧಿ'ಯಲ್ಲಿ (ಕ್ರಿ.ಶ. ೯೯೦) ಸಂಜ್ಞಾ ಪ್ರಕರಣದ ೫೫ ವ. ದಲ್ಲಿ ಛಂದೋಜಾತಿಗಳ ಉಗಮವನ್ನು ಹೇಳುವಾಗ, "ಸಂಸ್ಕೃತಂ ಪ್ರಾಕೃತಂ ಅಪಭ್ರಂಶಿಕಂ ಪೈಶಾಚಿಕಂ ಎಂಬ ಮೂಱುವರೆ ಭಾಷೆಗಳೊಳ್ ಪುಟ್ಟುವುವೆಲ್ಲಂ ದ್ರಮಿಡಾಂಧ್ರಕರ್ಣಾಟಕಾದಿ ಷಟ್ಪಂಚಾಶತ್ಸರ್ವವಿಷಯ ಭಾಷಾ ಜಾತಿಗಳಕ್ಕುಂ[2] (ಮದ್ರಾಸ್ ಪ್ರತಿ, ೧೯೪೬)" ಎಂದೂ, "ಮತ್ತಂ ಕರ್ಣಾಟಾಂಧ್ರದ್ರವಿಡ ವರಾಟ ಲಾಟ ಮಾಳವ ಗೌಳ ಘೂರ್ಜರ ಕಳಿಂಗಾಂಗ ವಂಗ ಕೇರಳ ಬಾಹ್ಲಿಕ ಮಗಧ ಚೇದಿ ವಾಚಾಲ? ಪಾಂಚಾಲ ವೆಂಗಿ ತೌಳವಾದಿ ದೇಶಭಾಷೆಗಳೊಳ್ ಪುಟ್ಟುವುವೆಲ್ಲಂ ಸರ್ವವಿಷಯ ಭಾಷಾ ಜಾತಿಗಳಕ್ಕುಂ...." ಎಂದೂ ಹೇಳಿದೆ (ಮದ್ರಾಸ್ ಪ್ರತಿ, ೧೯೪೬). ವಿಪುಲಪಾಠ

---

[2] ಕೊಡಗಿನ ಮಾದೇವಪುರದ ಲಿಂಗಾಯಿತಮಠದಲ್ಲಿನ 'ಛಂದೋಂಬುಧಿ'ಯ ಒಂದು ಓಲೆಯ ಪ್ರತಿಯ ವ್ಯಾಖ್ಯಾನದಲ್ಲಿ ಕೊಡುವ ೫೬ ದೇಶಗಳ ಪಟ್ಟಿಯನ್ನು ಕಿಟ್ಟೆಲ್ ಅಕಾರಾದಿಯಾಗಿ ಜೋಡಿಸಿ ಕೆಳಕಂಡಂತೆ ಕೊಟ್ಟಿದ್ದಾರೆ (ಮೂಲವೂ ವ್ಯಾಖ್ಯಾನವೂ ಅತಿ ಅಶುದ್ಧವಾಗಿವೆಯೆಂದು ಅವರು ಬರೆದಿದ್ದಾರೆ.): ಅಂಗ, ಆಂಧ್ರ, ಆರ್ಯ, ಏಕಪಾದ, ಒಡ್ರ (ಒಡ್ಡರದೇಶ), ಕರ್ಣಾಟ, ಕಳಿಂಗ, ಕಾಂಭೋಜ, ಕಾಶ್ಮೀರ, ಕಾಳವ, ಕುಂತ್ರಳ, ಕುಕುರ, ಕುರಂಗ, ಕೇರಳ, ಕೊಂಕಣ, ಕೊಂಗು (ಕೊಂಗ), ಕೊರಹ (ಮಹಾಕೊರವ), ಕೊಲ್ಲಾಳ, ಗಾಂಧಾರ, ಗುರ್ಜರ, ಗೌಳ, ಘೋಡಮುಖ, ಚೋಳ, ಚೀನ, ತುರುಷ್ಕ, ತುಳುವ, ತೆಲುಗ (ತೆಲುಂಗ), ದ್ರಾವಿಡ (ದ್ರವಿಳ), ನೇಪಾಳ, ಪಲ್ಲವಕ, ಪಾಂಚಾಳ, ಪಾಂಡ್ಯ, ಪಾರಿಯಾತ್ರಕ, ಬಂಗಾಳ, ಬರ್ಬರ, ಬಾಹ್ಲಿಕ, ಬೆಳವ, ಭೋಟ, ಮಗಧ, ಮಧ್ಯ, ಮಲಹ (ಮಲೆಯ), ಮಳೆಯಾಳ, ಮಹಾರಾಷ್ಟ್ರ, ಮಾಡವ, ಮಾಳವ, ಲಂಬಕರ್ನ, ಲಾಳ, ಲುಬ್ಧಕ, ವಂಗ, ಸಿಂಗಳ (ಸಿಂಹಳ), ಸಿಂಧು (ಸೈಂಧವ), ಸುಹ್ವಾಣ (ಸಿಂಹ್ವಣ), ಸಂಕರ, ಸ್ತ್ರೀದೇಶ, ಹಂಮೀರ, ಹೈವ (ನಾಗವರ್ಮನ ಕನ್ನಡ ಛಂದಸ್ಸು. ಸಂ॥ರೆ। ಎಫ್. ಕಿಟ್ಟೆಲ್, ಮಂಗಳೂರು, ೧೮೭೫.).

ಸಮಸ್ಯೆಗಳ ಗೊಂಡಾರಣ್ಯವಾಗಿರುವ ಛಂದೋಂಬುಧಿಯಲ್ಲಿ ಈಯೆಡೆಯಲ್ಲಿಯೂ ಪಾಠಸಂದಿಗ್ಧತೆಯಿದೆ. ಪ್ರಸಕ್ತ ಮಂಗಳೂರು ಮತ್ತು ಮದ್ರಾಸು ಛಂದೋಂಬುಧಿಯ ಪ್ರತಿಗಳನ್ನು ಲಕ್ಷಿಸಿದರೆ, ದ್ರವಿಡಾಂಧ್ರ ಕರ್ಣಾಟಕಾದಿ ಷಟ್ಪಂಚಾಶತ್' ಎಂಬ ವಚನಭಾಗವೂ, 'ಮತ್ತಂ' ಎಂದಾರಂಭವಾಗುವ ವಚನವೂ ಪ್ರಾಯಶಃ ಮೂಲಪಾಠವಾಗಿರಲಾರದೆಂದು ಭಾವಿಸಲು ಅವಕಾಶವಿದೆ. ಆದುದರಿಂದ ಸದ್ಯಃ ಇಲ್ಲಿಯ 'ಷಟ್ಪಂಚಾಶತ್ಸರ್ವವಿಷಯ'ದ ಪ್ರಸಕ್ತಿಯನ್ನು ನಿಶ್ಚಿತವಾಗಿ ಅಂಗೀಕರಿಸುವಂತಿಲ್ಲ.

ಭೀಮಕವಿಯ ಬಸವಪುರಾಣದಲ್ಲಿ (ಕ್ರಿ. ಶ. ೧೩೬೯) ಲಾಳ, ಮಾಳವ, ಸಿಂಧು, ಸಿಂಹಳ, ಗೌಳ, ಗುರ್ಜರ, ಮುರು, ಮಗಧ, ಪಾಂಚಾಳ, ಮತ್ಸ್ಯ, ಕುರಂಗ, ವಂಗ, ಕಳಿಂಗ, ಬಂಗಾಳ, ಕಾಳವ, ಆಂಧ್ರ, ತುರುಷ್ಕ, ಕುರು, ನೇಪಾಳ, ಕುಂತಳ, ಕುಕುರ, ಬರ್ಬರ, ಚೋಳ, ಪಾಂಡ್ಯ, ತುಳುವ, ಮಲೆಯ, ಮಲೆಯಾಳ, ಕರ್ಣಾಟ, ಚಾರು, ಕೊಂಕಣ. ಪಲ್ಲವಕ, ಹಂಮೀರ, ಜಾಳಾಂಧ್ರ, ದ್ರವಿಳ, ಕಾಶ್ಮೀರ, ಬಾಹ್ಲಿಕ, ಭೋಟ, ಭೂ, ಕಾಂಭೋಜ, ಕನ್ನೋಜ, ಸೂರಸೇನ, ವರಾಳ, ಖರ್ಪರ, ಪಾರಿಯಾತ್ರಕ, ಕೇರಳ–ಎಂಬ ಈ ೪೫ ದೇಶಗಳನ್ನು ಹೇಳಿದೆ (ಸಂ. ೬–೧೮, ೧೯–೨೦). ಛಪ್ಪನ್ನ ದೇಶಗಳೆಂದು ವ್ಯಕ್ತವಾಗಿ ಸೂಚಿಸಿಲ್ಲವಾದರೂ ಅದೇ ಸರಣಿಯೆಂಬುದರಲ್ಲಿ ಸಂಶಯವಿಲ್ಲ.[3]

---

3 ಇದೇ ಸುಮಾರಿನ ಎಂದರೆ ೧೪ನೆಯ ಶತಮಾನದ ಮೊಲ್ಲ ಎಂಬ ವೀರಶೈವ ಮತೀಯಳಾದ ತೆಲುಗು ಕಬ್ಬಿಗಿತಿ ತನ್ನ 'ಮೊಲ್ಲರಾಮಾಯಣ'ದಲ್ಲಿ ಸೀತಾಸ್ವಯಂವರಕ್ಕೆ ದೇಶದೇಶಗಳಿಂದ ರಾಜಮಹಾರಾಜರು ಆಗಮಿಸಿದರೆಂದು ತಿಳಿಸುವಾಗ—ದ್ರವಿಡ, ಕರ್ಣಾಟ, ಆಂಧ್ರ, ಯವನ, ಮಹಾರಾಷ್ಟ್ರ, ಪಾಂಡ್ಯ, ಘೂರ್ಜರ, ಲಾಟ, ಬರ್ಬರ, ಮಳಯಾಳ, ಗೌಳ, ಕೇರಳ, ಸಿಂಧು, ಕಾಶ, ಕೋಶಲ, ಸಾಳ್ವ, ಮಗಧ, ಮತ್ಸ್ಯ, ಕಳಿಂಗ, ಮಾಳವ, ನೇಪಾಳ, ಉತ್ಕಳ, ಕೊಂಕಣ, ಮದ್ರ, ಪೌಂಡ್ರ, ವತ್ಸ, ಗಾಂಧಾರ, ಸೌರಾಷ್ಟ್ರ, ವಂಗ ಚೋಳ 'ರಾಜ್ಯಮುಲನೊಪ್ಪು ಛಪ್ಪನ್ನ ರಾಜಸುತಲು । ವಚ್ಚಿರಕ್ಕಾವಿಸೀ ಸ್ವಯಂವರವು ನಕುಮು' ಎಂದಿದ್ದಾಳೆ. ಇಲ್ಲಿ ೩೦ ದೇಶಗಳ ಹೆಸರಷ್ಟೇ ಇವೆ. ಈ ಎಲ್ಲ ಕಾಲಗಳಲ್ಲೇ ಛಪ್ಪನ್ನ ಶಬ್ದವು ಸಾಂಕೇತಿಕವೂ ಸಂಪ್ರದಾಯಿಕವೂ ಆಗಿದ್ದಂತೆ ಈ ಪ್ರಯೋಗದಿಂದಲೇ ಸ್ಪಷ್ಟವಿದೆ (ಶ್ರೀ ಎಸ್. ಶಿವಣ್ಣನವರು ಈ ಪ್ರಯೋಗದ ಕಡೆಗೆ ನನ್ನ ಲಕ್ಷ್ಯವನ್ನು ಸೆಳೆದು ಉಪಕರಿಸಿದ್ದಾರೆ.).

ಲಕ್ಕಣ್ಣದಂಡೇಶನ ಶಿವತತ್ತ್ವ ಚಿಂತಾಮಣಿಯಲ್ಲಿ (ಕ್ರಿ ಶ. ೧೪೩೦) 'ಚಪ್ಪನ್ನ ಭಾಷೆಯಱಿವ ಧೀರರೀಗಳೆ ನೋಡಿಯೆಂದು ಬಿಜ್ಜಳನೃಪಂ ಸಾರಿಸಿದ (೩೧-೪೯)' ಎಂಬೊಂದು ಪ್ರಯೋಗವಿದೆ.[4]

ನಿಜಗುಣಶಿವಯೋಗಿಯ ವಿವೇಕಚಿಂತಾಮಣಿಯಲ್ಲಿ (ಕ್ರಿ. ಶ. ೧೫೦೦) 'ಮತ್ತಮಾ ಭರತವರುಷದಲ್ಲಿಯೇ ಅಂಗ, ವಂಗ, ಕಳಿಂಗ, ತೆಲುಂಗ, ಕೊಂಗ, ಲಾಟ, ಬಂಗಾಳ, ಚೋಳ, ಕೇರಳ, ಗೌಳ, ಪಾಂಚಾಳ, ಸಿಂಹಳ, ಕುಂತಳ, ನೇಪಾಳ, ಮಳಯಾಳ, ತುಳುವ, ಸೈಂಧವ, ಕೊಂಕಣ, ಕುರು, ಮಗಧ, ಮತ್ಸ್ಯ, ವಿದರ್ಭ, ಕೋಸಲ, ಶೂರಸೇನ, ಕಾಶ್ಮೀರ, ಮಹಾರಾಷ್ಟ್ರ, ಕರ್ಣಾಟ, ಕಿರಾತ, ತುರುಷ್ಕ, ಶಂಕರ, ಬರಮ, ತಿಗರ್ತ, ನಿಷದ, ಮಧ್ಯ, ಜೈನ, ಬರ್ಬರ, ಬಾಹ್ಲೀಕ, ಲಾಟ, ಚೈನ, ಕರಾಳ, ಓಢ್ರ, ಘೂರ್ಜರ, ಕಾಂಭೋಜ, ಸೌರಾಷ್ಟ್ರ, ಸೌವೀರ, ಪಾಂಡ್ಯ, ಹೂಣ, ಯವನ, ಮ್ಲೇಚ್ಛ, ಹೈಹಯ, ಆರ್ಯಾವರ್ತ, ಭೋಜ, ದ್ವೈಪ, ಅಮರಕ, ಉತ್ತರಕುರು, ಗ್ರೈವಟಿಗಳೆಂಬೈವತ್ತಾರು ಬಗೆಯ ಜನರಿಂದಾಯಾ ಸನ್ನಿವೇಶಕ್ರಿಯಾದಿನಿಬದ್ಧಸಂಕೇತಗಳಿಂ ನಿರೂಢಮಾದೈವತ್ತಾರು ಪ್ರಾಂತಗಳಿರ್ಪುವಾದೇಶಗಳಲ್ಲಿ-(೪-೪೦೪)' ಎಂಬ ವಿವರವಿದೆ. (ಈ ಪಟ್ಟಿಯಲ್ಲಿ 'ಲಾಟ' ಪುನರುಕ್ತವಾಗಿದೆ.).

ನಂಜುಂಡಕವಿಯ ಕುಮಾರರಾಮನ ಸಾಂಗತ್ಯ ಅಥವಾ ರಾಮನಾಥ ಚರಿತದಲ್ಲಿ (ಕ್ರಿ.ಶ ೧೫೨೫) 'ಚಪ್ಪನ್ನದೇಶದ ರಾಯರೆಲ್ಲರ ಕಯ್ಯ ಕಪ್ಪವ ಕೊಂಡು ರಾಯನಿಗೆ ಒಪ್ಪಿಸುವ....' ಎಂದೂ, 'ವಸುಧೆಯೊಳುಳ್ಳೈವತ್ತಾಱು ದೇಶದ ಹೊಸ ಹರೆಯದ ರಾಜಸುತರ....' ಎಂದೂ, 'ಚಪ್ಪನ್ನದೇಶದ ಶೃಂಗಾರವಿದಱ ಮುಂದೊಪ್ಪಲಱಿಯದೆಂದವಳು....' ಎಂದೂ (ರಾಮನಾಥ ಚರಿತೆ ೫-೧-೩೦ ; ೫-೧-೯೦ ; ಕುಮಾರರಾಮ ಸಾಂಗತ್ಯ ಸಂಗ್ರಹ, ೧೬-೪೧.) ಪ್ರಯೋಗಗಳಿರುವುದರ ಜತೆಗೆ ಅಲ್ಲಲ್ಲಿ ಸಾಮಾನ್ಯವಾಗಿ ರೂಢಿಯ ಅಂಗ ವಂಗ ಕಳಿಂಗಾದಿ ದೇಶಾಭಿಧಾನಗಳು ಸಾಂಪ್ರದಾಯಿಕವಾಗಿ ಕಾಣಿಸಿ

4, 5, 6, 7. ಈ ಪ್ರಯೋಗಗಳನ್ನು ನನಗೆ ಒದಗಿಸಿಕೊಟ್ಟು ಉಪಕಾರಮಾಡಿರುವ ಮಾನ್ಯಮಿತ್ರರು ಶ್ರೀ ಎನ್. ಬಸವಾರಾಧ್ಯ ಎಂ. ಎ., ಅವರು.

ಕೊಳ್ಳುತ್ತವೆ (೧–೫–೪೬ ; ೪–೧–೧೩೨೮. ; ೫–೧–೪೮, ೮೯ ; ೫–೨–೨೮, ೨೯ ; ೫–೨–೪೬ ; ೫–೪–೧೮ ಇ.).

ಕನಕದಾಸನ ಮೋಹನತರಂಗಿಣಿಯಲ್ಲಿ (ಕ್ರಿ.ಶ. ೧೫೫೦) 'ಸಂವಣಿಸಿದರು ಛಪ್ಪನ್ನದೇಶದ ಜನವೃಂದ ಜೂದಿನ ವಿಷಯದಲಿ (೨೦–೨೦)' ಎಂದೂ, 'ಬೇಸಱದೊಂದೊಂದ ತೋಱಿದು ಚಪ್ಪನ್ನ ದೇಶಾಧಿಪರ ಚಿತ್ರಗಳ (೩೦–೧೯)' ಎಂದೂ ಪ್ರಯೋಗಗಳಿವೆ.[5] 'ಛಪ್ಪನ್ನದೇಶದ ನೃಪರಂ ಖೇಚರರಿಹರೊಪ್ಪವ ಮಾಡಂ ಹೋಗೆಂದ (೫೫–೬೦)' ಎಂದು ರತ್ನಾಕರನ ಭರತೇಶವೈಭವದ (ಕ್ರಿ.ಶ. ೧೫೫೭) ಒಂದು ಪ್ರಯೋಗ.[6]

ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣದಲ್ಲಿ (ಕ್ರಿ.ಶ. ೧೫೮೪) ದೊರೆಯುವ ೫೬ ದೇಶಗಳ ಪೂರ್ತಿ ವಿವರ ಹೀಗಿದೆ: ಅಂಗ, ಮಲೆಯಾಳ, ಮಾಳವ, ಮಗಧ, ಬರ್ಬರ, ಕಳಿಂಗ, ಕಾಶ್ಮೀರ, ಕೊಂಕಣ, ಸಿಂಧು, ಹಮ್ಮೀರ, ವಂಗ, ಹೊಯಿಸಳ, ತುಳುವ, ಚೋಳ, ಚೇರಮ, ಪಾಂಡ್ಯ, ಯವನ, ಸೌವೀರ, ಮಚ್ಚ, ಬಂಗಾಳ, ಜೈನ, ಜೋನೆಗ, ಸಗರ, ಹೈವಿಗ, ತೆಲುಂಗ, ಗುರ್ಜರ, ಗೌಳ, ನೇಪಾಳ, ಸೌರಾಷ್ಟ್ರ, ಸಿಂಗಳ, ದ್ರವಿಡ, ಕಾಂಭೋಜ + ಲಾಟ, ಪಾಂಚಾಳ, ವೈದರ್ಭ, ಕುರು, ಕುಕುರ, ಕರಹಾಟ, ಕರ್ಪರ, ಅವಂತಿಕ, ಪಾರಿಯಾತ್ರ, ಕರ್ಣಾಟ, ಕೋಶಲ, ಮಂದಭದ್ರ, ಕುಂತಳ, ಮಹಾಚೀನಕ, ವಿದೇಹ, ಭೋಟಕ, ತುರುಷ್ಕ, ಒಡ್ಡಿಯ, ಪಾರಸಿಕ, ಮಹಾಘೋಟಕ, ಪುಳಿಂದಕ, ಸ್ತ್ರೀರಾಜ್ಯ, ಕೊಂಗು, ಮಾರಾಟ (ಕಾಂಡ ೧–ಸಂಧಿ ೬–ಪದ್ಯ ೪೯–೫೧).

ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯದಲ್ಲಿ (ಕ್ರಿ.ಶ. ೧೬೪೮) 'ಮೆಱೆವ ಚಪ್ಪನ್ನದೇಶದ ರಾಜಪುತ್ರರ ಪಿರಿದು ಚೆಲ್ವಿಕೆಯ ಪ್ರೌಢತೆಯ ಸಿರಿಯ ಸಂಭ್ರಮವ ನೀನರಿದಿರೆನಗೆ ಮನೋಹರುಪದೊಳು ಸಿರಬ್ಜನೇತ್ರೆ (೯–೪೪)' ಎಂಬ ಒಂದು ಪ್ರಯೋಗವಿದೆ.[7]

ಷಡಕ್ಷರದೇವನ ರಾಜಶೇಖರವಿಲಾಸದಲ್ಲಿ (ಕ್ರಿ. ಶ. ೧೬೫೫) ರಾಜಶೇಖರನ ಸಭೆಯ ವರ್ಣನಾವಸರದಲ್ಲಿ ಆತನ ಸಭೆ 'ಅಂಗ, ವಂಗ, ಕಳಿಂಗ,

ತ್ರಿಲಿಂಗ, ಮಗಧ, ಮಾಳವ, ಗೌಳ, ಪಾಂಚಾಳ, ನೇಪಾಳ, ಹಿಂದೂಳ, ಕೇರಳ, ಕಾಶ್ಮೀರ, ಸೌವೀರ, ವಿದರ್ಭ, ಬರ್ಬರ, ಗುರ್ಜರಾದಿ ದೇಶಾಧೀಶ್ವರರಿಂ' ಕೂಡಿದ್ದುದಾಗಿಯೂ, ಅಲ್ಲಿಯ ಕಂಚುಕಿಗಳು ಗುರ್ಜರ ಮಗಧಾದಿ ಅರಸರಿಗೆ ಸಭಾಮರ್ಯಾದೆಯ ಸೂಚನೆಗಳನ್ನು ನೀಡುತ್ತಿದ್ದುದಾಗಿಯೂ, ಕಾಶ್ಮೀರ, ಕಾಂಭೋಜ, ಪಾಂಚಾಲ, ನೇಪಾಳ ರಾಜರನ್ನೊಳಗೊಂಡು 'ಬೇಱಿ ಬೇಱಿ ಚಪ್ಪನ್ನದೇಶದರಸರ್ ಕಳುಪಿದ ಕಪ್ಪಂಗಳನ್' ದೂತರು ಒಪ್ಪಿಸುತ್ತಿದ್ದುದಾಗಿಯೂ (೫–೧೯ವ ಮತ್ತು ೨೧–೨೨ವ.) ವರ್ಣನೆಯಿದೆ. ಅಲ್ಲದೆ 'ದೇವರಡಿಗಂಡು ಕಪ್ಪಮನೀವರ್ ಚಪ್ಪನ್ನದೇಶದರಸರ್ – (೫-೧೨೭)' ಎಂಬುದೂ ಅಲ್ಲಿಯ ಪ್ರಯೋಗವೇ.

ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ (ಕ್ರಿ. ಶ ೧೬೦೦) 'ಛಪ್ಪನ್ನದೇಶದೊಳ್ಳಿನಗೆ ಮಲೆತಿದಿರಾಗಿ (೨೫–೧೨)' ಎಂಬ ಒಂದು ಪ್ರಯೋಗವುಂಟು; ಇವರೊಂದಿಗೆ ಮುದ್ದಣಕವಿಯ ರಾಮಾಶ್ವಮೇಧದಲ್ಲಿ (ಕ್ರಿ. ಶ. ೧೯೦೧) ಬರುವ 'ಐವತ್ತಾಱಱೊಳಂ ನೀಂ ಸೋಡದ ನಾಡಿಲ್ಲಿಕ್ಕುಂ (೧೪–೧೨೭)' ಎಂಬ ಮಾತನ್ನೂ ನೆನೆಯಬಹುದು.

ಇನ್ನು ಸಂಸ್ಕೃತ ಭಾಷೆಯ ಕೆಲವು ಆಧಾರಗಳನ್ನು ನೋಡಬಹುದು. ಕಾಲ ನಿಶ್ಚಯ ಮಾಡಲಾಗದಿದ್ದರೂ ಪ್ರಾಯಶಃ ಆಧುನಿಕವೆಂದು ಊಹಿಸಲು ಸಾಧ್ಯವಿರುವ ದೇಶಭೇದಕ್ರಮದ ನಿರೂಪಣೆ ವಿವಾಹಮಂಗಳದ 'ಮಹಾ ಸಂಕಲ್ಪ'ದಲ್ಲಿ ರೂಢಿಯಾಗಿ ಬರುತ್ತದೆ. ಯಾಜುಷ ಪೂರ್ವ ಪ್ರಯೋಗ ರತ್ನಾಕರದಲ್ಲಿ (೧೯೩೪, ಶ್ರೀ ಕೆ. ವೆಂಕಟರಾಮಾವಧಾನಿಗಳು ಕೊಡುವ ವಿವರ ಹೀಗಿದೆ: "ಅಂಗ, ವಂಗ, ಕಳಿಂಗ, ಕಾಶ್ಮೀರ, ಕಾಂಭೋಜ, ಕಾಮರೂಪ, ಕೇರಳ, ಕೇಕಯ, ಕೋಸಲ, ಮೈಥಿಲ, ಕುಂತಲ, ಕುರಂಗ, ಕುರವಕ, ಸೌವೀರ, ಸೌರಾಷ್ಟ್ರ, ಮಹಾರಾಷ್ಟ್ರ, ಮತ್ಸ್ಯ, ಮಾಗಧ, ಮಾಳವ, ಮರಾಳ, ಸಿಂಹಳ, ಮಳಯಾಳ, ಚೋಳ, ಬಂಗಾಳ, ಪಾಂಚಾಲ, ಸಾಳ್ವ, ಪುಳಿಂಧ್ರ, ಕರ್ಣಾಟಕ, ವರಾಟಕ, ಮರಾಟಕ, ಶಿಕ್ಕ, ಸಿಂಧ, ಪಂಜಾವಿಕಾ, ಪ ವಕಾ, ಪಾಂಡ್ಯ, ದ್ರವಿಡ, ಯವನ, ಶೂರಸೇನ, ಘೂರ್ಜರ, ಕುಕ್ಕುರ, ಪರಾಶರ, ಗಾಂಧಾರ, ವಿದರ್ಭ, ಬರ್ಬರ, ಬರಮಾ, ಭೋಜ, ಬಾಹ್ಲೀಕ, ಕೊಂಕಣ, ಟೇಂಕಣ

ಚೀಣಾ, ಹೂಣ, ದಶಾರ್ಣಾದಿ ಷಟ್ಪಂಚಾಶದ್ದೇಶಭೇದೈಃ—". ಈ ಪಟ್ಟಿಯಲ್ಲಿ ೫೨ ಹೆಸರುಗಳಿದ್ದು 'ಆದಿ' ಶಬ್ದದಿಂದ ಉಳಿದುವನ್ನು ಅಧ್ಯಾಹಾರ ಮಾಡಿವೆ. ಸಾಮಾನ್ಯವಾಗಿ ಬಾಯಿಪಾಠವಾಗಿದ್ದು ರೂಢಿಯಾಗಿ ಹೇಳುವಾಗ ಸೌರ, ನೇಪಾಳ, ಆಂಧ್ರ, ಅವಂತಿ ಎಂಬ ನಾಲ್ಕನ್ನು ಸೇರಿಸಿ ಹೇಳುವುದುಂಟು.[8] ಅಲ್ಲಿಗೆ ೫೬ ದೇಶಭೇದಗಳು ಪೂರ್ತಿಯಾದವು.[9]

ಕೆಳದಿ ಬಸವರಾಜನ ಸಂಸ್ಕೃತ ಶಿವತತ್ತ್ವ ರತ್ನಾಕರದಲ್ಲಿ (ಕ್ರಿ. ಶ. ೧೭೦೯) ಕೊಡುವ ಷಟ್ಪಂಚಾಶದ್ದೇಶಭೇದಗಳ ವಿವರ ಹೀಗಿದೆ: ಅಂಗ, ವಂಗ, ಕಳಿಂಗ, ಕರ್ಣಾಟ, ಕೇರಳ, ಕಾಮರೂಪ, ಗೌಡ, ವನವಾಸ, ಕುಂತಲ, ಕೊಂಕಣ, ಮಗಧ, ಸುರಾಷ್ಟ್ರ, ಮಾಳವ, ಲಾಟ, ಭೋಟ, ವರಾಟ, ಶಬರ, ಕುಕರ, ಕುರು, ಅವಂತಿ, ಪಾಂಡ್ಯ, ಮದ್ರ, ಸಿಂಹಳ, ಘೂರ್ಜರ, ಪಾರಶೀಕ, ಮಿಥಿಲ, ಪಾಂಚಾಲ, ಶೂರಸೇನಿ, ಗಾಂಧಾರ, ಬಾಹ್ಲಿಕ, ಹೈಹಯ, ತೌಳವ, ಸಾಲ್ವ, ಪುಂಡ್ರಕ, ಪ್ರಾಗ್ಜ್ಯೋತಿಷ, ಮತ್ಸ್ಯ, ಚೇದಿ, ಬರ್ಬರ, ನೇಪಾಳ, ಗೌಳ, ಕಾಶ್ಮೀರ, ಕನ್ಯಾಕುಬ್ಜ, ಮಾಗಧ, ಖುರಾಸಾಣ, ಮಹಾರಾಷ್ಟ್ರ, ಕೋಸಲ, ಕೇಕಯ, ಅಹಿಚ್ಛತ್ರ, ತ್ರಿಲಿಂಗ, ಪ್ರಯಾಗ, ಕರಹಾಟಕ, ಕಾಂಭೋಜ, ಭೋಜ, ಚೋಳ, ಹೂಣ, ಕಾಶಿ (೪-೨-೫-೧೧) (ಈ ಪಟ್ಟಿಯಲ್ಲಿ ಮಗಧದೇಶವು ಪುನರುಕ್ತವಾಗಿದೆ.)[10]

8. ಈ ಸಂಗತಿಯನ್ನು ನನಗೆ ಬರೆದು ತಿಳಿಸಿ ಉಪಕರಿಸಿದವರು ವೇ॥ಬ್ರ ಶ್ರೀ ವಿದ್ವಾನ್ ಬಿ ಎಸ್. ರಾಮ ಕೃಷ್ಣಶಾಸ್ತ್ರಿಗಳು, ಬೆಂಗಳೂರು—ಇವರು.

9. ಯಾಜುಷ ಪ್ರಯೋಗ ಪಾರಿಜಾತ (೧೯-೨೪) ದಲ್ಲಿ 'ಮಹಾರಾಷ್ಟ್ರ' ಉಕ್ತವಾಗಿಲ್ಲ. ಇದು ಪ್ರಾಯಶಃ ಬರೆಯುವಾಗ ಬಿಟ್ಟು ಹೋಗಿರಬಹುದು.

10. ತೆಲುಗಿನ 'ಶಬ್ದರತ್ನಾಕರಮು (೧೯೧೨)' ನಿಘಂಟು (ಪು. ೪೭೦, ಈ ಶಿವತತ್ತ್ವ ರತ್ನಾಕರವನ್ನು ಅನುಸರಿಸಿ ಛಪ್ಪನ್ನ) ದೇಶಗಳನ್ನು ನಿರೂಪಿಸಿರುವಂತೆ ತೋರುತ್ತದೆ. ಸೂರ್ಯರಾಯಾಂಧ್ರ ನಿಘಂಟುವು (iv-೩೯೮), ಆಂಧ್ರವಾಚಸ್ಪತ್ಯ (ಸಂ. ೨), ವಾವಿಳ್ಳ ನಿಘಂಟುವು (ಸಂ. ೩), ವಿದ್ಯಾರ್ಥಿ ಕಲ್ಪತರುವು (ಪು ೩೬, ೩೭)—ಇವುಗಳು 'ಶಬ್ದ ರತ್ನಾಕರ'ದ ನಿರೂಪಣೆಯನ್ನೇ ಅನುವಾದಿಸಿರುವುದು ಕಾಣುತ್ತದೆ 'ಶಬ್ದರತ್ನಾಕರ'ದಲ್ಲಿಯೂ ಉಳಿದೆಡೆಗಳಲ್ಲಿಯೂ 'ಮಾಗಧ' ಎಂಬೆಡೆಗೆ 'ವಿದರ್ಭ'ವನ್ನು ಹೇಳಿ ಮೂಲದ ಪುನರುಕ್ತಿಯನ್ನು ನಿವಾರಿಸಿದೆಯಾದರೂ ಇದಕ್ಕೆ ಆಧಾರವೇನೋ ತಿಳಿಯದು.

ಕ್ರಿ. ಶ. ೧೮೪೫ರಲ್ಲಿ ರಚಿತವಾದ ಮುಮ್ಮಡಿ ಕೃಷ್ಣರಾಜ ಒಡೆಯರ 'ಸಂಖ್ಯಾ ರತ್ನಮಾಲಾ ಟೀಕೆ'(ಸಂಖ್ಯಾಭಿಧಾನ ರತ್ನಕೋಶ)ಯಲ್ಲಿ 'ದೇಶಶಬ್ದ ಸ್ತಥಾಚೈಕಷ್ಷಟ್ ಪಂಚಾಶತ್ ಪ್ರಬೋಧಕಃ' ಎಂದು ಹೇಳಿದ್ದು ಅದರ ವಿವರ ಹೀಗಿದೆ: ಅಂಗ, ವಂಗ, ಕಳಿಂಗ, ಕಾಶ್ಮೀರ, ಕಾಮರೂಪ, ಸೌರಾಷ್ಟ್ರ, ಗಾಂಧಾರ, ಕೇರಳ, ಚೋಳ, ಕೋಸಲ, ಮತ್ಸ್ಯ, ಮಾಳವ, ನೇಪಾಳ, ಪಾಂಚಾಲ, ಸಿಂಹಳ, ಕಾಂಭೋಜ, ಸೌವೀರ, ಬಂಗಾಳ, ಮಾಗಧ, ಕುಂತಳ, ಮಲಯಾಳ, ಮಗಧ, ವತ್ಸ, ಸೈಂಧವ, ಜ್ವಾಲ, ಸಾಲ್ವ ಮದ್ರ, ವೈಂದ, ಸಿಂಧು, ಆಂಧ್ರ, ದ್ರಾವಿಡ, ದ್ರವಿಡ, ಲಾಟ, ಮರಾಟ, ದಶಾರ್ಣ, ಪಾಂಡ್ಯ, ವರಾಟ, ಬಾಹ್ಲೀಕ, ಪುಳಿಂದ, ವಿದರ್ಭ, ಪಾರಸೀಕ, ಬರ್ಬರ, ಹೂಣ, ಘೂರ್ಜರ, ಕೇಕಯ, ಕಿರಾತ, ಟಂಕಣ, ಕೊಂಕಣ, ಕುರು, ಶೂರಸೇನ, ಯವನ, ವಿದೇಹ, ಚೇದಿ, ಭೋಜ, ಅವಂತಿ, ಕರ್ನಾಟ.[11]

(ಈ ಪಟ್ಟಿಯಲ್ಲಿ ವಂಗ-ಬಂಗಾಳಗಳನ್ನು, ಮಾಗಧ-ಮಗಧಗಳನ್ನು, ಸೈಂಧವ-ಸಿಂಧುಗಳನ್ನು, ದ್ರಾವಿಡ-ದ್ರವಿಡಗಳನ್ನು ಪ್ರತ್ಯೇಕವಾಗಿ ಹೇಳಿರುವುದು ವಿಚಾರಣೀಯವಾಗಿದೆ.)

ತಮಿಳಿನ ಚತುರಕಾರಾದಿ ನಿಘಂಟು (ಸು. ಕ್ರಿ. ಶ. ೧೭೨೫) ಸ್ವಲ್ಪ ಭಿನ್ನ ರೀತಿಯಲ್ಲಿ ೫೬ ದೇಶಗಳ ಸಮಗ್ರ ವಿವರಣೆಯನ್ನು ಹೀಗೆ ಒದಗಿಸುತ್ತದೆ: ಅಂಗ, ಅರುಣ, ಅವಂತಿ, ಆಂಧ್ರ, ಲಾಟ, ಒಡ್ಡಿಯ, ಕರುಸ, ಕಳಿಂಗ, ಕಣಡ, ಕಂನಾಡ, ಕಾಸ, ಕಾಶ್ಮೀರ, ಗಾಂಧಾರ, ಕಾಂಭೋಜ, ಕಿರಾತ, ಕುರುಗು, ಕುಡಗ, ಕುಂತಳ, ಕುರು, ಕುಲಿಂದ, ಗೂರ್ಜರ, ಕೇಕಯ, ಕೇರಳ, ಕೊಂಕಣ, ಕೊಲ್ಲ, ಕೋಸಲ, ಶಕ, ಸೌವೀರ, ಶಾಲ್ವ, ಸಿಂಗಳ, ಸಿಂಧು, ಚೀನ, ಶೂರಸೇನ, ಚೋಟಿ, ಚೋನಗ, ದ್ರಾವಿಡ, ತುಳುವ, ತೆಂಗಣ, ನಿಡದ, ನೇಪಾಳ, ಬಬ್ಬರ, ಪಲ್ಲವ, ಪಾಂಚಾಲ, ಪಾಂಡಿಯ, ಪುಲಿಂದ, ಪೋಡ (ಬೋಡ), ಮಗಧ,

---

11 ಈ ವಿವರವನ್ನು ಕೃಪೆಯಿಟ್ಟು ಒದಗಿಸಿದವರು ವೇ॥ಬ್ರ॥ಶ್ರೀ॥ ವಿದ್ವಾನ್ ಅಳ್ವೆಯರ್ ಶ್ರೀರಾಮಶರ್ಮಾ, ಮೈಸೂರು-ಇವರು.

ಮತ್ಸ್ಯ, ಮರಾಡ, ಮಲಿಯಾಳ, ಮಾಳವ, ಯವನ, ಯುಗಂದರ, ವಂಗ, ಬಂಗಾಳ, ವಿದರ್ಭ.[12]

ಸಾಹಿತ್ಯಿಕ ಸಾಮಗ್ರಿಗಳಿಂದ ಸ್ವಲ್ಪಮಟ್ಟಿಗೆ ಸಂಗ್ರಹಿಸಿರುವ ಈ ದೇಶ ಭೇದ ವಿವರಗಳಲ್ಲಿ ಯಾವ ಪ್ರಯೋಗ ಪ್ರಮಾಣಭೂತವಾದುದು, ಅಂಗೀಕಾರ ಯೋಗ್ಯವಾದುದು ಎಂಬುದನ್ನು ನಿರ್ಧರಿಸಿ ಹೇಳುವುದು ಸಾಧ್ಯವಿಲ್ಲ; ಅಲ್ಲದೆ ಅದು ಆವಶ್ಯಕವೂ ಅಲ್ಲ. ಏಕೆಂದರೆ ಇಲ್ಲಿಯ ಪ್ರಯೋಗಗಳೆಲ್ಲ ಬಹು ಮಟ್ಟಿಗೆ ಸಂಪ್ರದಾಯ ಶರಣ್ಯವೂ ಸಾಂಕೇತಿಕವೂ ಆದ ಈಚಿನ ಕಾಲದವು. ನಿಜವಾದ ಸಮಸ್ಯೆಯೆಂದರೆ ರಾಜಕೀಯವಾದ ಯಾವ ಸ್ಥಾನಮಾನಗಳನ್ನು ಹೊಂದಿ ಯಾವ ೫೬ ದೇಶಗಳು ಏಕಕಾಲದಲ್ಲಿ ಎಂದು ಭರತವರ್ಷದಲ್ಲಿ

---

12. ಈ ಪಟ್ಟಿಯನ್ನು 'ನಾಗವರ್ಮನ ಕನ್ನಡ ಛಂದಸ್ಸು : ರೆ॥ ಎಫ್. ಕಿಟ್ಟೆಲ್, ಮಂಗಳೂರು ೧೮೭೫, ಆ. ೧–೬೭–೨೨, ೨೩೮' ಅಡಿ ಟಿಪ್ಪಣಿಯಿಂದ ಉದ್ಧರಿಸಿದೆಯಲ್ಲದೆ ನೇರವಾಗಿ ಮೂಲದಿಂದ ಉದ್ಧರಿಸಿಲ್ಲ. ಮೇಲಿನ ಪಟ್ಟಿಯಲ್ಲಿ ಅಕಾರಾದಿ ಕ್ರಮ ಸಂಯೋಜನೆ ಕಿಟ್ಟೆಲ್ ಅವರದೇ.

ಪಂಡಿತ ಎಸ್. ಎಮ್. ನಟೇಶಶಾಸ್ತ್ರಿಗಳು ಪ್ರಾಯಶಃ ಇದೇ ಸರಣಿಯನ್ನು ಅನು ಸರಿಸಿ 'ದಿ ಇಂಡಿಯನ್ ಆಂಟಿಕ್ವೆರಿ'ಯಲ್ಲಿ (ಸಂ. ೧೬) ಪ್ರಾಸಂಗಿಕವಾಗಿ ಈ ಚಪ್ಪನ್ನದೇಶ ಗಳನ್ನು ಪ್ರಸ್ತಾವಿಸಿರುವಂತೆ ತೋರುತ್ತದೆ: ಅಂಗ, ಅರುಣ, ಅವಂತಿ, ಆಂದಿರ, ಇಲಾಡ (ಲಾಟ), ಒಟ್ಟಿಯ, ಕರುಷ, ಕಲಿಂಗ, ಕನ್ನಡ, ಕನ್ನಾಡ, ಕಾಶ, ಕಾಶುಮೀರ (ಕಾಶ್ಮೀರ), ಕಂಧಾರ, ಕಂಭೋಜ, ಕಿಡಾರ, ಕುರುಕು, ಕುಡಕ, ಕುಂತಳ, ಕುರು, ಕುಲಿಂದ, ಕೂರ್ಜ್ಜರ, ಕೇಕಯ, ಕೇರಲ, ಕೊಂಗನ, ಕೊಲ್ಲ, ಕೋಸಲ, ಶಕ, ಶವ್ವೀರ, ಶಾಲವ, ಸಿಂಗಲ, ಸಿಂಧು, ಶೀನ, ಶೂರಸೇನ, ಶೋಲ, ಶೋನಕ, ದಿರಾವಿಡ, ತುಲುವ, ತೆಂಗನ, ನಿದದ, ನೇಪಾಲ, ಪಪ್ಪರ, ಪಲ್ಲವ, ಪಾಂಚಾಲ, ಪಾಂಡಿಯ, ಪುಲಿಂದ, ಪೊಡ, ಮಘದ, ಮಚ್ಚ, ಮರಾತ, ಮಲ್ಲೈಯಾಲ, ಮಾಲಪ, ಯವನ, ಯುಗಂದ, ವಜ್ಗ, ವಜ್ಗಾಲ, ವಿದರ್ಭ (The Indian Antiquary, August 1887, vol. XIV, P. 231, Foot-note.) ಕೃಷ್ಣಸಿಂಗ್ ಎಂಬಾತನು ಕಷ್ಟಕ್ಲೇಶಗಳಿಂದ ಪಯಣಿಸಿ ವಿಶ್ವದ ಎಲ್ಲ ೫೬ ದೇಶಾ ಧಿಪರೂ ಗೌರವಿಸಿದ ಏಕಚಕ್ರಾಧಿಪತಿಯ ರಾಜಧಾನಿ ಧಾರಾಪುರಕ್ಕೆ ಬಂದನೆಂದು ಉಕ್ತ ವಾಗಿರುವ ಕತೆಯೊಂದನ್ನು ಅನುವಾದಿಸುವಾಗ ಈ ಅಡಿಟಿಪ್ಪಣಿ ಬರೆಯಲಾಗಿದೆ. ಮಹಾರಾಷ್ಟ್ರೀಯ ಜ್ಞಾನಕೋಶದಲ್ಲಿ (೧೩ನೆಯ ವಿಭಾಗ, ಥ. ೫.) IA. ಯನ್ನು ಅನುಸರಿಸಿಯೇ ದೇಶಭೇದಗಳನ್ನು ಹೇಳಿದೆ.

ಪ್ರಸಿದ್ಧವಾಗಿದ್ದವು ಎಂಬುದು. ಚರಿತ್ರಕಾರರು ಚಪ್ಪನ್ನದೇಶಗಳನ್ನು ಕುರಿತು ಏನನ್ನಾದರೂ ಹೇಳಿರುವಂತೆ ಸದ್ಯಃ ನನಗೆ ಕಂಡುಬಂದಿಲ್ಲ. ಇದು ಗಮನಾರ್ಹವಾದ ವಿಷಯ. ಇತಿಹಾಸ, ಶಾಸನ ಮತ್ತು ಸಾಹಿತ್ಯದ ಆಧಾರಗಳ ಸಮನ್ವಯದಿಂದ ಹೊಸ ಅಂಶಗಳು ಗೋಚರವಾಗಬಹುದು. ಸದ್ಯಃ ನಿಜಗುಣಶಿವಯೋಗಿಯ ವಿವೇಕಚಿಂತಾಮಣಿಯ (ಕ್ರಿ. ಶ. ೧೫೦೦), ಆಧಾರವೇ ಕನ್ನಡದಲ್ಲಿ ವಿವರಪೂರ್ಣವೂ ಪ್ರಾಚೀನವೂ ಆಗಿದ್ದಂತೆ ತಿಳಿಯ ಬರುತ್ತದೆ, ಅಂಗ ವಂಗ ಕಳಿಂಗಾದಿ ದೇಶಗಳಲ್ಲಿ ಕೆಲಕೆಲವು ಇತಿಹಾಸ ಪುರಾಣಾದಿಗಳ ಕಾಲದಿಂದಲೂ ಭರತವರ್ಷದ ವಿಖ್ಯಾತವಾದ ರಾಜಕೀಯ ಸಾಮಾಜಿಕ ಧಾರ್ಮಿಕ ಕೇಂದ್ರಗಳಾಗಿದ್ದುದು ಸ್ಪಷ್ಟ; ಆದರೆ ಇವು ಹೇಗೆ ಚಪ್ಪನ್ನದೇಶಗಳಲ್ಲಿ ಸಮಾವೇಶಗೊಂಡವು, ರಾಜಕೀಯ ಸ್ಥಿತ್ಯಂತರ ಗಳಲ್ಲಿ ಅಷ್ಟೇನೂ ಬದಲುಗೊಳ್ಳದೆ ಆಧುನಿಕ ಕಾಲದವರೆಗೆ ಜನಪ್ರಿಯವಾಗಿ ಉಳಿದು ಬೆಳೆದು ಬಂದುವು ಎಂಬುದು ವಿಚಾರಾರ್ಹವಾದ ವಿಷಯ. ಪ್ರಾಯಶಃ ಪ್ರಭುತ್ವ ಮತ್ತು ಜನಜೀವನದ ಮೇಲೆ, ಅದರಲ್ಲಿಯೂ ದಕ್ಷಿಣ ದೇಶದ ಮೇಲೆ, ಮಹಮ್ಮದೀಯರ ಪ್ರವೇಶವೂ ಪ್ರಭಾವವೂ ಗಾಢಮುದ್ರೆ ಯನ್ನು ಒತ್ತಿದಾಗ ಎಂದರೆ ೧೧, ೧೨ನೆಯ ಶತಾಬ್ದದೀಚೆ ಚ(ಛ)ಪ್ಪನ್ನ ದೇಶಗಳ ಗಣನೆ ವ್ಯಾಪ್ತವಾಗಿರಬೇಕೆಂದು ತೋರುತ್ತದೆ. ಯಾವುದೋ ಇಸ್ಲಾಂ ಪ್ರಭುವಿನ ಆಳ್ವಿಕೆಯಲ್ಲಿ ರಾಜಕೀಯ ವ್ಯವಹಾರಕ್ಕಾಗಿ ಹುಟ್ಟುವಡೆದು, ಅನಿವಾರ್ಯವಾಗಿ ಜನಜೀವನವನ್ನೂ ಅನಂತರ ಸಾಹಿತ್ಯವನ್ನೂ ಪ್ರವೇಶಿಸಿ ಬಹುಪ್ರಚುರವಾಗಿರಬಹುದು[13]. ಸಾಹಿತ್ಯಿಕ ಆಧಾರಗಳನ್ನು ಗಮನಿಸಿದರೆ ಪ್ರಚಲಿತವೂ ಪ್ರಸಿದ್ಧವೂ ಆದ ೫೬ ದೇಶಗಳು ಪೂರ್ವಸ್ಥಿತವಾಗಿದ್ದುದು ಬರುಬರುತ್ತ ರಾಜಕೀಯ ಸ್ಥಿತ್ಯಂತರಗಳಿಂದ ಬದಲಾವಣೆಗಳಿಗೆ ಒಳಗಾಗಿರ ಬಹುದಾದರೂ, ಛಪ್ಪನ್ನದೇಶಗಳ ಗಣನೆ, ಕಲ್ಪನೆ, ಉಕ್ತಿ ಬೌದ್ಧಕಾಲೀನ ಸಾಂಪ್ರದಾಯಿಕ ಸೋಳಸಮಹಾಜನಪದಗಳಂತೆ ಮುಂದೆ ಒಂದು ಸಾಂಪ್ರ ದಾಯಿಕ ಸರಣಿಯಾಗಿ ಪರಿಣಮಿಸಿದಂತೆ ತೋರುತ್ತದೆ. ವಿಶಾಲ ಭಾರತ

13. ಡಾ॥ ಜಿ ಎಸ್. ಶಿವರುದ್ರಪ್ಪನವರು ವಿಶ್ವಾಸವಿಟ್ಟು ಈ ಅಂಶವನ್ನು ಸೂಚಿಸಿದ್ದಾರೆ.

ಖಂಡದ ಸಮಗ್ರ ಭೂಭಾಗದಲ್ಲಿ ಕಾಲಾನುಕ್ರಮದಲ್ಲಿ ಬದುಕಿ ಬಾಳಿದವೂ, ಇತಿಹಾಸ ಪುರಾಣಕಾಲೀನವೂ, ತತ್ಕಾಲೀನ ಪ್ರಸಿದ್ಧವೂ, ಪರಕೀಯವೂ ಸ್ವಕೀಯವೂ ಆದ ರಾಜವಂಶಗಳ ಹಾಗೂ ಭಾಷಾವರ್ಗಗಳ ದೇಶ ಮತ್ತು ಪ್ರಾಂತ ಭೇದಗಳನ್ನು ಒಗ್ಗೂಡಿಸಿ ಒಂದೇ ಚೌಕಟ್ಟಿನಲ್ಲಿ ಅಳವಡಿಸಿದಂತಿರುವ ರೂಢಿಯ ದೇಶಗಣನೆಯನ್ನು ಸಾಹಿತ್ಯಗ್ರಂಥಗಳು ಗತಾನುಗತಿಕವಾಗಿ ಅನುಸರಿಸಿದುವು. ಸ್ವಾತಂತ್ರ್ಯವಹಿಸಿ ಕಾಲಾನುಗುಣವಾಗಿ ಅಲ್ಲಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿರುವುದರಿಂದ, ಬೇಡವಾದ ಕೆಲವನ್ನು ಬಿಟ್ಟು ಬೇಕಾದ ಕೆಲವನ್ನು ಯೋಜಿಸುವ ಸ್ವಾತಂತ್ರ್ಯವಹಿಸಿದ್ದರಿಂದ ಒಂದು ನಿರೂಪಣೆ ಇನ್ನೊಂದರಿಂದ ಭಿನ್ನವಾಗಿಯೇ ಸಾಮಾನ್ಯವಾಗಿ ಇರುತ್ತದೆ.[14] ಅಲ್ಲದೆ ಪಾಠ ಭೇದಗಳೂ ಸ್ಖಾಲಿತ್ಯಗಳೂ ಇಲ್ಲದಿಲ್ಲ. ಪ್ರಾಯಶಃ ಕೆಲವೆಡೆ ಒಂದೇ ಹೆಸರಿನ ಪರ್ಯಾಯನಾಮವನ್ನೂ ವ್ಯತ್ಯಸ್ತರೂಪವನ್ನೂ ಪುನರುಕ್ತಿಯನ್ನೂ ಎದುರುಗೊಂಡರೆ, ಇನ್ನು ಕೆಲವೆಡೆ ಶಬ್ದಮೈತ್ರಿಯನ್ನು ಸಾಧಿಸುವ ಚಾಪಲ್ಯಕ್ಕೆ ಒಳಗಾಗಿ ಹೊಸ ಹೆಸರುಗಳನ್ನು ಹೆಣೆದಿರುವ ಸಂಭವವೂ ಇದೆ. ಇವುಗಳನ್ನು ಗಮನಿಸಿಯೇ ಕಿಟ್ಟೆಲ್ "Great arbitrariness is shown in, enumerating the Cappaana desas or Shatpancasadd Vishayas (56 Countries)..." ಎಂದು ಅಭಿಪ್ರಾಯಪಟ್ಟಿರಬಹುದು; (ನಾಗವರ್ಮನ ಕನ್ನಡ ಛಂದಸ್ಸು ಪು. ೨೨ ಅ.ಟಿ.)

ಕಾವ್ಯಗಳಲ್ಲಿಯೂ ಯಕ್ಷಗಾನ ಬಯಲಾಟಗಳಂತಹ ಜಾನಪದ ನಾಟಕಗಳಲ್ಲಿಯೂ ಮೇಲಿಂದ ಮೇಲೆ ಕಾಣಿಸಿಕೊಳ್ಳುವ ಚ(ಛ)ಪ್ಪನ್ನ ದೇಶಗಳು ಛಪ್ಪನ್ನೈವತ್ತಾರು ದೇಶಗಳು, ಛಪ್ಪನ್ನಾರು ದೇಶಗಳು ಮೊದಲಾದ

---

14. ಕೆಲವು ದೇಶಗಳಿಗೆ ಪ್ರತಿಯಾಗಿ ಹೇಳಿರುವ ದೇಶಾಭಿಧಾನಗಳ ಪಟ್ಟಿಯನ್ನು ಕಿಟ್ಟೆಲ್ ಹೀಗೆ ಕೊಟ್ಟಿದ್ದಾರೆ: ಅಮರಕ, ಕಂಬೋಜ, ಕರಾಳ, ಕಿರಾತ, ಕುರು, ಕೊಡಗು, ಕೋಶಲ, ಕಾರ್ಪೂರ, ಖರ್ಪರ, ಘೈಟಿ, ಚೇರಿ, ಜಾಲಾಂಧ್ರ, ತುರುಕಾಣ್ಯ, ತ್ರಿಗರ್ತ, ದ್ವೈಪ, ನಿಷದ, ಪಾಟಾಲ, ಬರಮ, ಬಲ್ಲಾಳ, ಬೋರಟ, ವತ್ಸ್ಯ, ಮಾಟ, ಮುರು, ಮ್ಲೇಚ್ಛ, ಯವನ, ವರಾಳ, ವಾಚಾಲ, ವಿದರ್ಭ, ಶೂರಸೇನ, ಸೌರಾಷ್ಟ್ರ, ಸೌವೀರ, ಹೂಣ ಹೈಹಯ. (ನಾಗವರ್ಮನ ಕನ್ನಡ ಛಂದಸ್ಸು, ಪು. ೨೨ ಅ. ಟಿ.)

ಮಾತುಗಳು ಅಪೂರ್ವವಾಗಿ ಸಮಗ್ರ ವಿವರವನ್ನು ಒಳಗೊಂಡು ಗೋಚರ ವಾಗುತ್ತವೆ; ಸಾಮಾನ್ಯವಾಗಿ ಅಸಮಗ್ರವಾಗಿಯೇ ಕೊನೆಗೊಳ್ಳುತ್ತವೆ. '...complete enumerations are also seldom to be met with in Canarese; Generally books mention some above forty, and then conclude with ಮೊದಲಾದ (etc.,) (ನಾ. ಕ. ಛಂ. ಪು. ೨೨ ಅ.ಟಿ.)' ಎಂದು ಕಿಟ್ಟೆಲ್ ಗಮನಿಸಿದ್ದಾರೆ. ಹೀಗೆ ಕಾವ್ಯಗಳು ನಾಟಕಗಳು ಮತ್ತು ಆಡುಮಾತಿನಲ್ಲಿ ಈ ಶಬ್ದ ಹೆಚ್ಚು ವ್ಯಾಪಕವಾದಂತೆ ಛಪ್ಪನ್ನ ದೇಶಗಳೆಂದರೆ ಭಾರತದ ೫೬ ದೇಶ ವಿಶೇಷಗಳೆಂಬ ಭಾವನೆ ಮಸು ಕಾಗಿ, ಸಮಗ್ರ ಭರತವರ್ಷ, ವಿಶ್ವ, ವಿಶ್ವದ ೫೬ ದೇಶಗಳು—ಎಂಬ ಅರ್ಥದಲ್ಲಿ ಸಾಂಕೇತಿಕವಾಗಿ ಪರಿಣಮಿಸಿತು.

ಪ್ರಸಿದ್ಧ ಸಂಸ್ಕೃತ ಶಬ್ದಕೋಶಗಳು ೫೬ ದೇಶಭೇದಗಳನ್ನು ಗುರುತಿಸಿಲ್ಲ ದಿರುವುದನ್ನು ನೋಡಿದರೆ, ವಿಶೇಷವಾಗಿ ದಾಕ್ಷಿಣಾತ್ಯ ದೇಶಭಾಷೆಯ ಗ್ರಂಥ ಗಳಲ್ಲಿ ಉದಾಹರಿಸಿರುವುದನ್ನು ಗಮನಿಸಿದರೆ, ಈ ಛಪ್ಪನ್ನ ದೇಶಗಣನೆಯ ರೂಢಿಯನ್ನು ತಂದವರು ದಾಕ್ಷಿಣಾತ್ಯರೇ ಆಗಿದ್ದು, ಅದರಲ್ಲಿಯೂ ಕನ್ನಡಿಗರೇ ಅಧಿಕತಃ ಅದರ ಪ್ರಸಾರಕರಾದರೆಂದು ಭಾವಿಸುವುದು ಯುಕ್ತವಾಗಿದೆ.[15]

[೧೯೬೪]

15. ಸಿದ್ಧಗಂಗಾಕ್ಷೇತ್ರದಲ್ಲಿ ನಡೆದ ೪೪ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಸಾಹಿತ್ಯಗೋಷ್ಠಿಯಲ್ಲಿ ಓದಿದ ಪ್ರಬಂಧ.

ಪಂಪಭಾರತ ಕೆಲವು ಪದಪಾಠಗಳು

೧. ರಾಜಸೂಯಯಾಗದ ಕೊನೆಗೆ ಯಾಗಾಂಗವಾಗಿ ಅಗ್ರಪೂಜೆಯ ಗೌರವವನ್ನು ಕೃಷ್ಣನಿಗೆ ಒಪ್ಪಿಸಿದಾಗ ಅದಕ್ಕೆ ಅರ್ಹತೆಯಿಲ್ಲದ ಕೃಷ್ಣನು ಅದನ್ನು ಒಪ್ಪಿಕೊಂಡದ್ದು ಅನುಚಿತವಾಯಿತೆಂದು ಶಿಶುಪಾಲನು ಆತನ ಮೇಲೆ ಉಗ್ರವಾಗಿ ಕೋಪಿಸಿ ಆತನನ್ನು ಕಟೂಕ್ತಿಗಳಿಂದ ನಿಂದಿಸಿದನು. ಆತನ ಕ್ರೋಧೋದ್ರೇಕದ ಆರ್ಭಟವನ್ನು ಕೇಳಿ ಆ ಸಮಾರಂಭದ ಸಭಾಸದರೆಲ್ಲ ಬೆವರಿ ಬೆಪ್ಪಾದರೆಂದು ತಿಳಿಸಲು "ಆಗಳ್ ಸಭಾಸದರೆಲ್ಲಮೆವೆಮಿಡುಕದೆ ಪಂದೆಯುಂ ಪಾವಡರ್ದವೊಲುಸಿರದಿರೆ...." (೬–೫೯ ವ.) ಎಂಬ ಮಾತು ಬಂದಿದೆ. ಇಲ್ಲಿ 'ಲ್ಲಮೆವೆಮಿಡುಕದೆ' ಎಂಬುದಕ್ಕೆ ಕ. ಮತ್ತು ಗ. ಪ್ರತಿಗಳಲ್ಲಿ 'ಲ್ಲಾಂ ಮೇರೆ' ಎಂದೂ ಖ. ಪ್ರತಿಯಲ್ಲಿ 'ಲಂ ಮೆಲೆ' ಎಂದೂ ಪಾಠಾಂತರಗಳಿವೆ. ಅಂಗೀಕೃತವಾಗಿರುವ ಪಾಠದ ಪ್ರಕಾರ 'ಆಗ ಸಭಾಸದರೆಲ್ಲರೂ ರೆಪ್ಪೆಹೊಯ್ಯದೆ (= ಅನಿಮಿಷನೇತ್ರರಾಗಿ), ಹೆಡಿಯ ಮೇಲೆ ಹಾವು ಹತ್ತಿಕೊಂಡಂತೆ (=ಹೆದರಿ ಬೆಪ್ಪಾಗಿ) ಮಾತಾಡದಿರಲು–' ಎಂದು ಅರ್ಥವಾಗುತ್ತದೆ. ಅರ್ಥ ಸುಕರವಾಗಿಯೇ ಇದೆ. ಆದರೆ ಕನ್ನಡ ಕಾವ್ಯಾಂಜಲಿ–ಸಂ. ೨ರಲ್ಲಿ 'ಶಿಶುಪಾಲವಧೆ' ಎಂಬ ಕಾವ್ಯಭಾಗದಲ್ಲಿ ಅಲ್ಪ ಪರಿಷ್ಕಾರದೊಡನೆ ಖ. ಪ್ರತಿಯ ಪಾಠವನ್ನು ಸಂಪಾದಕರು ಯೋಜಿಸಿದ್ದಾರೆ. ಈ ಪರಿಷ್ಕರಣದಿಂದ ಇಲ್ಲಿ ಪ್ರಸ್ತುತ ವಾಕ್ಯಭಾಗವು "ಆಗಳ್ ಸಭಾಸದರೆಲ್ಲಮೆಲೆಮಿಡುಕದೆ ಪಂದೆಯುಂ ಪಾವಡರ್ದವೊಲಿರೆ...." ಎಂದಾಗಿದೆ. 'ಎಲೆ ಮಿಡುಕದೆ–ಎಲೆಯಷ್ಟು ಕೂಡ ಅಲುಗಾಡದೆ, ಸ್ತಬ್ಧರಾಗಿ' ಎಂದು 'ಟಿಪ್ಪಣಿಗಳು' ಭಾಗದಲ್ಲಿ ಅರ್ಥಬರೆದಿದೆ. ಎರಡು ನುಡಿಗಟ್ಟುಗಳೂ ಬಹುಮಟ್ಟಿಗೆ ಬೆರಗು ಮತ್ತು ಉತ್ಕಟ ಭೀತಿಯ ಪರಿಣಾಮವನ್ನೇ ಹೇಳುವುದೆಂದರೂ ಎರಡನೆಯ ನುಡಿಗಟ್ಟು ಸ್ತಬ್ಧತೆಯನ್ನೂ ತುಂಬ ಸೊಗಸಾಗಿ ಧ್ವನಿಸುವಂತೆ ತೋರುವುದರಿಂದ ಅರ್ಥದೃಷ್ಟಿಯಿಂದ ಇದನ್ನೇ ಮೂಲಪಾಠವಾಗಿ ಭಾವಿಸುವುದು ಅಸಹಜವಾಗದು. ಈ ಅರ್ಥದಲ್ಲಿ ಈ ನುಡಿಗಟ್ಟು ಲೋಕರೂಢಿಯಲ್ಲಿ ತಕ್ಕಮಟ್ಟಿಗೆ ಬಳಕೆಯಲ್ಲಿರಬೇಕು ಎಂಬುದಕ್ಕೆ ಜನ್ನ ಮತ್ತು ಕುಮಾರವ್ಯಾಸರ

ಕೃತಿಗಳಲ್ಲಿ ಇದು ದೊರೆಯುವುದೂ ಒಂದು ನಿದರ್ಶನ. ಜನ್ನನ 'ಯಶೋಧರ ಚರಿತೆ'ಯಲ್ಲಿ ತಳವಾರನಾದ ಚಂಡಕರ್ಮನು ಧ್ಯಾನಯೋಗದಲ್ಲಿದ್ದ ಅಕಂಪನಯತಿಯನ್ನು ಕಂಡು ತನ್ನ ಸಂಸ್ಕಾರಕ್ಕೆ ಅನುಗುಣವಾಗಿ ಅವರನ್ನು ನುಡಿಸುವಾಗ "ಎಲೆ ದೇವರೆ ಪೃಷ್ಟಂ ಬಾತ್ತಲೆಯುಂ ಬಱಿದಿಲ್ಲದೆಂಬರದು ಕಾರಣದಿಂ ॥ ನೆಲೆಯಾಂದೆಯನಚ್ಚಿದವೋ । ಲೆಲೆಮಿಡುಕದೆ ನೆನೆಯಂ ತಿರ್ದಿರೇನಂ ಮನದೊಳ್ ॥" (೪-೭, ಯಶೋಧ, ಸಂಗ್ರಹ) ಎನ್ನುತ್ತಾನೆ; 'ಎರಕವಿಕ್ಕಿದ ಗೊಂಬೆಯ ಗೊಂಬೆಯಹಾಗೆ, ಎಲೆಯಷ್ಟು ಕೂಡ ಅಲುಗಾಡದೆ, (ಇಲ್ಲಿ ಕುಳಿತು) ಏನು ನೆನೆಯುತ್ತಿದ್ದೀರಿ?'—ಎಂಬುದಾಗಿ ತಳವಾರನು ಯತಿಯನ್ನು ಪ್ರಶ್ನಿಸಿದನೆಂಬುದು ಪದ್ಯದ ಉತ್ತರಾರ್ಧದ ಆಶಯವಿರಬಹುದು. ಎರಡನೆಯದಾಗಿ, ಕುಮಾರವ್ಯಾಸನ ಭಾರತದಲ್ಲಿ ಈ ಪದ ಗದಾಪರ್ವದಲ್ಲಿ ಇದೇ ಅರ್ಥವ್ಯಾಪ್ತಿಯುಳ್ಳದ್ದಾಗಿ ಬಂದಿರುವುದನ್ನು ನೋಡಬಹುದು. ಪಾಂಡವರ ಉಪಾಂಶುವಧೆಗೆಂದು ಕುರುಕ್ಷೇತ್ರದಲ್ಲಿ ಪಾಂಡವರ ಪಾಳೆಯದ ಬಳಿಗೆ ಬಂದ ಅಶ್ವತ್ಥಾಮನೂ ಕೃಪ ಕೃತವರ್ಮರೂ ಒಂದು ದೊಡ್ಡ ಆಲದ ಮರದ ಬಳಿಯಲ್ಲಿ ಇಳಿದುಕೊಳ್ಳುತ್ತಾರೆ. ರಥಾಶ್ವಗಳನ್ನು ದೂತರಿಗೊಪ್ಪಿಸಿ ಮೆಲ್ಲಗೆ ಮರದತ್ತ ಸಾಗುವಾಗ ಅವರ ಚರ್ಯೆಯನ್ನು ಕವಿಯು "ಒಳಗೆ ತೊಳಲಿಕೆಯುಕ್ಕಡಕೆ ಕಳ।ವಳಿಸಿ ಹಾಯಿದರೊಮ್ಮೆ ಮತ್ತಂ । ತೆಲೆಮಿಡುಕದಾಲಿಸಿ ನಿಧಾನಿಸಿ ಸಾರಿದರು ಮರನ॥' (ಗದಾ. ಸಂ ೯-ಪ ೩) ಎಂದು ವರ್ಣಿಸಿದ್ದಾನೆ. ಈ ಪೋಷಕ ಆಧಾರಗಳನ್ನು ಹಿಡಿದು, ಪಂಪಭಾ.ದಲ್ಲಿಯೂ 'ಆಗಳ್ ಸಭಾಸದರೆಲ್ಲಮೆಲೆಮಿಡುಕದೆ....'' ಎಂಬ ಖ. ಪ್ರತಿಯ ಪಾಠವೇ ಮೂಲಪಾಠವಾಗಿದ್ದಿರಬೇಕು ಎಂದು ತಿಳಿದರೆ ತಪ್ಪಾಗಲಾರದೆಂದು ತೋರುತ್ತದೆ.

೨. ಪಾಂಡವರಿಗೆ ಅನ್ವಯಾಗತವಾದ ರಾಜ್ಯದಾಯವನ್ನು ಕೊಡಿಸಲೆಂದು ಹಸ್ತಿನಾಪತಿಗೆ ದೂತಕಾರ್ಯದ ಮೇಲೆ ಬಂದ ಕೃಷ್ಣನು ಪಾಂಡವ ಪಕ್ಷಪಾತಿಯಾದ ವಿದುರನ ಮನೆಯಲ್ಲಿ ಬಿಡಾರ ಮಾಡುತ್ತಾನೆ. ಕುಂತಿಗೂ ವಿದುರನಿಗೂ ಪಾಂಡವರ ಕುಶಲವಾರ್ತೆಯನ್ನು ತಿಳಿಸಿದ ಮೇಲೆ ''ವಿದುರ ನಜನನೇಗೆಯ್ದು ತೆಱನುಮಱಿಯದೆ'' (೯-೨೭ವ.) ಮಜ್ಜನ ಭೋಜನಾದಿ

ಗಳಿಂದ ಸತ್ಕರಿಸುತ್ತಾನೆ. ಕೃಷ್ಣನ ಪಥಪರಿಶ್ರಮವೆಲ್ಲಾ ತೊಲಗುತ್ತದೆ. "ಅಂತು ವಿದುರನಜನನುಚಿತ ಪ್ರತಿಪತ್ತಿಗಳಿಂ" (೯-೨೮ವ.) ಸಂತೋಷ ಪಡಿಸಿದ ಮೇಲೆ ಆತನ ಆಗಮನ ವೃತ್ತಾಂತವನ್ನು ಸುಯೋಧನನಿಗೆ ಅರಿಕೆ ಮಾಡುತ್ತಾನೆ. ಈಯೆರಡು ವಚನಭಾಗಗಳಲ್ಲಿಯೂ 'ಅಜನನ್' ಎಂಬೆಡೆಗೆ 'ಅಜರನನ್' ಎಂಬ ಪಾಠಾಂತರವು ಖ. ಗ. ಘ. ಎಂಬ ಮೂರು ಪ್ರತಿಗಳಲ್ಲಿ ದೊರೆಯುತ್ತದೆ. 'ಅಭವ' ಎಂಬ ಅರ್ಥದಲ್ಲಿ 'ಅಜಾತ' (೯-೨೧) ಎಂಬು ದನ್ನು ನೋಡಿ ಸಮಾನಾರ್ಥಕವಾದ 'ಅಜನನ್' ಎಂಬುದನ್ನು ಅಂಗೀಕರಿಸಲು ಅಡ್ಡಿಯಿಲ್ಲವಾದರೂ 'ನಿರ್ಜರ' (=ದೇವ) ಶಬ್ದದ ಪರ್ಯಾಯವಾದ ಅಜರನ್+ಅನ್='ಅಜರನನ್' ಎಂಬ ಪಾಠಾಂತರವನ್ನು ಏಕೆ ಒಪ್ಪ ಬಾರದು ಎಂಬ ಪ್ರಶ್ನೆಗೂ ಅವಕಾಶವಿದೆ. ವಚನ ಭಾಗದಲ್ಲಿ ಈ ಪಾಠವೂ ಪಾಠಾಂತರವೂ ಸೇರುವುದರಿಂದಾಗಿ ಇಲ್ಲಿ ಮಾತ್ರಾಪ್ರಮಾಣದ ಲೋಪಾಧಿಕ್ಯಗಳ ಸಮಸ್ಯೆಯಿಲ್ಲ. ಆದರೆ ಅರ್ಜುನನ ಸಮರಸಂರಂಭವನ್ನು ತಡೆಯಲು ಭಗದತ್ತನು ಮುಳಿದು ಭೂದತ್ತವಾದ ದಿವ್ಯಾಂಕುಶವನ್ನು ಆತನ ಮೇಲೆ ಪ್ರಯೋಗಿಸಿದಾಗ ಅದನ್ನು ಕೃಷ್ಣನು ಎದೆಯೊಡ್ಡಿ ತಡೆದ ನೆಂದು ವರ್ಣಿಸುವ 'ಇಡುವುದುಮದು ವಿಲಯಾಗ್ನಿಯ। ಕಿಡಿಗಳನುಗುಟುತ್ತು ಮೆಯ್ದೆವರ್ಪುದುಮಿದಿರಂ ॥ ನಡೆವಜರನುರ [ದಿ] ನಾಂತೊಡೆ। ತುಡುಗೆ ವೊಲೆಸೆದಿರ್ದುದಂಕುಶಂ ಕಂಧರದೊಳ್॥" (೧೧-೭೭) ಎಂಬ ಪದ್ಯದಲ್ಲಿ ಪ್ರಯೋಗವಾಗಿರುವ ಕೃಷ್ಣವಾಚಕ ಶಬ್ದವಾದ 'ಅಜರನ್' ಎಂಬ ಪದವನ್ನು ಪರಿಶೀಲಿಸಿದಾಗ, 'ಅಜನ್' ಎಂಬುದು ಪ್ರಾಯಃ ಬ್ರಹ್ಮವಾಚಕ ಶಬ್ದವಾಗಿಯೇ ರೂಢಿಯಲ್ಲಿರುವಂತೆ ತೋರುವುದರಿಂದ, ಈ ಹಿಂದಿನ ಎರಡು ವಚನಭಾಗಗಳಲ್ಲಿಯೂ ಖ. ಗ. ಘ. ಪ್ರತಿಗಳ ಪಾಠವಾದ 'ಅಜರನನ್' ಎಂಬುದೇ ಮೂಲಪಾಠವಾಗಿ ಇದ್ದಿರಬೇಕೆಂದು ತೋರುತ್ತದೆ. "ತದನಂತರಂ ವಿದುರನಜನನೇಗೆಯ್ವ ತೆಱನುಮನಱಿಯದೆ" ಎನ್ನುವೆಡೆಯಲ್ಲಿಯೂ "ಅಂತು ವಿದುರನಜನನುಚಿತ ಪ್ರತಿಪತ್ತಿಗಳಿಂ ಸಂತಸಂಬಡಿಸಿ ಬಂದ ಬರವನಾಗಳೆ ಸುಯೋಧನಂಗಱಿಪುವುದುಂ ರಾಜರಾಜನುಱಿದೆ ಕಿಱಿನಗೆ ನಕ್ಕು..." ಎನ್ನು ವೆಡೆಯಲ್ಲಿಯೂ ಗಮನಕ್ಕೆ ಬರುವಂತೆ ರಕಾರ। ಱಕಾರದ ವೃತ್ತ್ಯನುಪ್ರಾಸ

ವಿರುವುದರಿಂದಾಗಿ ಇದಕ್ಕೆ ಅನುಗುಣವಾಗಿ 'ವಿದುರನಜರನಸ್' ಎಂದೇ ಇದ್ದಿರುವುದು ಅಸಂಭವವಲ್ಲವೆನ್ನಬಹುದು.

೩. ಅಪೂರ್ವ ವಿಲೇಪನಗಳನ್ನು ತರಿಸುವ ನೆಪದಲ್ಲಿ ದುರಾಶಯದಿಂದ ತನ್ನಲ್ಲಿಗೆ ಬರಮಾಡಿಕೊಂಡ ಸೈರಂಧ್ರಿಯನ್ನು ಕಾಣುತ್ತಲೂ ಕೀಚಕನು ಕಾಮ ಪರವಶನಾಗುತ್ತಾನೆ. ಅವಳನ್ನು ಉದ್ದೇಶಿಸಿ ಸ್ವಚ್ಛಂದವಾಗಿ ಮಾತನಾಡಲು ತೊಡಗುತ್ತಾನೆ. ಆ ಸ್ವಚ್ಛಂದಜಲ್ಪನದ ಒಂದು ಘಟ್ಟದಲ್ಲಿ "ಮದನಾಸ್ತ್ರಂ [ಕ]ರಸಾಣೆಗಾಣಿಸಿದುದೆಂಬಂತಾಗೆ ನಿನ್ನೊಂದು ಕಂದಿದ ಮೆಯ್ಯೆನ್ನಯ ತೋಳೊಳೊಂದೆ..." (೮-೬೬) ಎಂದು ಮುಂತಾಗಿ ನುಡಿಯುವ ಒಂದು ವೃತ್ತವಿದೆ. ಕೀಚಕವಧೋಪಾಖ್ಯಾನವು ಉಪಲಬ್ಧವಾದ ಪಂಪಭಾರತದ ಪ್ರತಿಗಳಲ್ಲಿ ಘ. ಪ್ರತಿಯೊಂದರಲ್ಲಿ ಮಾತ್ರವೇ ಇದ್ದುದಾಗಿ ತಿಳಿದು ಬರುವುದರಿಂದ (೫-೫೮ ವ. ಅಡಿ ಟಿಪ್ಪಣಿ) ಅಡಿಟಿಪ್ಪಣಿಯಲ್ಲಿ ಕೊಟ್ಟಿರು ವುದು ಅಸಮರ್ಪಕವೆಂದು ತೋರಿದ ಘ. ಪ್ರತಿಯ ಪಾಠಗಳಿಂದು ಗೊತ್ತಾಗುತ್ತದೆ. '[ಕ]ರಸಾಣೆ' ಎಂಬುದಕ್ಕೆ ಘ. ಪ್ರತಿಯಲ್ಲಿ 'ಖರಸಾಣೆ' ಎಂದಿದ್ದಿತೆಂದು ಇದರಿಂದ ಸ್ಪಷ್ಟವಾಗುತ್ತದೆ. 'ಖರಸಾಣೆ' ಎಂಬುದನ್ನು ಮೂಲಪಾಠವಾಗಿ ಗುರುತಿಸದಿರಲು ಕಾರಣವೇನು-ಎಂಬುದು ವಿಚಾರಣೀಯ ವಾಗಿದೆ. 'ಖರತನ'ದ ತದ್ಭವವಾಗಿರುವ 'ಕರತನ' ಎಂಬುದನ್ನು (ಪಂಪಭಾ. ೧೧-೧೨೪) ನೋಡಿಯೋ 'ಖರಶಾಣಾ' ಎಂಬುದರ ತದ್ಭವವಾಗಿರುವ 'ಕರಸಾಣೆ' ಎಂಬುದನ್ನು (ಶಮುದ. ಸೂ ೩೦೪, ಪ್ರ.) ನೋಡಿಯೋ ಹೀಗೆ ಮಾಡಿರಬಹುದು. ಇದು ಹೇಗಾದರು ಇರಲಿ. ಸ್ವಕೀಯ ಪಾಠವನ್ನಿರಿಸಿಕೊಂಡು ಮಾತೃಕೆಯ ಪಾಠವನ್ನು ದೂರೀಕರಿಸುವ ಮಟ್ಟಿಗೆ 'ಖರಸಾಣೆ' ಎಂಬ ಮಾತು ವಿಲಕ್ಷಣವಾಗಿಲ್ಲ ಎಂಬುದಕ್ಕೆ ಕರ್ಣಪಾರ್ಯನ 'ನೇಮಿನಾಥ ಪುರಾಣ'ದಿಂದ ಒಂದು ಆಧಾರವನ್ನು ಕೊಡಬಹುದು. ಇಲ್ಲಿ ಪೌದನಪುರಾಧೀಶನಾದ ಸಿಂಹರಥನ ಶೌರ್ಯಾತಿಶಯವನ್ನು ವರ್ಣಿಸುವ "ಅಂತಾ ಧರಾಧಿಪಂ ನಿಖಿಳ ಧರಾಧೀಶ ಸಮಾಜಕ್ಕಜಯ್ಯನಾಗಿ ವಜ್ರಮಂ ಖರಸಾಣೆಯಿಟ್ಟಂತೆ ಕೂರಿದನುಂ ಬಲ್ಲಿದನುಮಾಗಿರ್ದಾತಂ ಜರಾಸಂಧಚಕ್ರಿಗ್ರ ವಿಧೇಯನಾಗೆ..." (೫-೭೮ವ.) ಎಂಬ ವಚನ ಭಾಗದಲ್ಲಿ 'ಖರಸಾಣೆ' ಎಂಬ ಮಾತು ಪ್ರಯೋಗವಾಗಿರುವುದನ್ನು ಗಮನಿಸಬಹುದು. ಪಂಪನ ಉಕ್ತಿ

ಗಳನ್ನೂ ಭಾವಗಳನ್ನೂ ಆಗಾಗ ಬಳಸಿಕೊಂಡಿರುವ ಕರ್ಣಪಾರ್ಯನು ಈ ಶಬ್ದವನ್ನೂ ಆತನಿಂದ ಎತ್ತಿಕೊಂಡಿರಬಹುದು; ಇಲ್ಲವೆ ತಾನೇ ಸ್ವತಂತ್ರವಾಗಿಯೂ ಬಳಸಿರಬಹುದು. ಈ ಎರಡು ಕಡೆಗಳಲ್ಲಿಯೂ 'ಕರಸಾಣೆ' ಎಂದು ಇದ್ದು ಲಿಪಿಕಾರರ ಕೈವಾಡದಿಂದ 'ಖರಸಾಣೆ' ಎಂದಾಗಿರಬಹುದು ಎನ್ನುವುದು ಸರಿಯಾಗಲಾರದು. 'ಖರಸಾಣಂ' (ಸಂ)–'ಕರಸಾಣೆ' (ದ್ಭ) ಆಗುವಂತೆ 'ಖರಸಾಣೆ' ಎಂದಾಗುವುದೂ ಶಾಸ್ತ್ರಸಮ್ಮತವೇ. ಪರಿಶೀಲನೆಗೆ ಎತ್ತಿಕೊಂಡ ಪಂಪಭಾ. ದ ವೃತ್ತಭಾಗದ (೮–೬೬) ತಾತ್ಪರ್ಯ "ನೀನು ನನ್ನನ್ನು ಒಡಗೂಡಿದರೆ ನಿನ್ನ ಬಾಡಿದ ದೇಹವು ಹರಿತವಾಗಿ ಸಾಣೆ ಹಿಡಿದ ಮದನಾಸ್ತ್ರದಂತೆ ಕಳೆಗೊಳ್ಳುವುದು ಅಥವಾ ಮೋಹಕವಾಗುವುದು" ಎಂದು ಸ್ಥೂಲವಾಗಿ ಗ್ರಹಿಸಬಹುದು. ಒಟ್ಟಿನಲ್ಲಿ ಕರ್ಣಪಾರ್ಯನ ನೇಮಿಪು.ದ ಅಸಂದಿಗ್ಧ ಪಾಠದ ಆಧಾರದ ಮೇಲೆ "ಮದನಾಸ್ತ್ರಂ ಖರಸಾಣೆಗಾಣಿಸಿದುದೆಂಬಂತಾಗೆ..." ಎಂಬ ಫ. ಪ್ರತಿಯ ಪಾಠವನ್ನು ಯಥಾವತ್ತಾಗಿ ಒಪ್ಪಿಕೊಳ್ಳಬಹುದೆಂದು ತೋರುತ್ತದೆ.

೪. ಯುದ್ಧೋದ್ಯೋಗವನ್ನು ಕೈಕೊಂಡು ಧರ್ಮಪುತ್ರನು ಕುರುಕ್ಷೇತ್ರಾಭಿಮುಖನಾದಾಗ ಆತನ ಚತುರಂಗಬಲದ ಅನುಬಂಧವೆಂಬಂತೆ 'ನರೇಂದ್ರಕಾಂತೆ'ಯರೂ 'ಭೋಗಿ'ಯರೂ 'ಪೆಂಡವಾಸದ ವಿಳಾಸದ ಸೂಳೆ'ಯರೂ ಕೂಡಿ ಹಿಂಬಾಲಿಸಿದರು. "ಬಂಗಾರದ ನಡವೆ ವಸ್ತುಗಳಿಂದ ಅಲಂಕರಿಸಿ ಸಜ್ಜುಗೊಳಿಸಿದ ದೊಡ್ಡ ಹೆಣ್ಣಾನೆಯ ಮೇಲೆ ಕುಳಿತು,–ಒಡನೇರಿದ ಚೆನ್ನಗನ್ನಡಿಯ ಚೇಟಿಕೆ, ಬೀಸುವ ಕುಂಚ, ಎದ್ದು ತೋರುವಂಥ ಸೊಬಗು, ಚಿನ್ನದ ಕೋಲಿನ ಸೂರೆಪಾನ–ಇವೆಲ್ಲ ನೋಡುವವರ ಮನಸೆಳೆಯುತ್ತಿರಲು, ಅಗ್ರಗಾಮಿಗಳಾಗಿ ಸಾಗಿದಂಥ ನರೇಂದ್ರ ಕಾಂತೆಯರು ಮನ್ಮಥನ ಸೇಸೆಯೆಸುವಂತಿದ್ದರು" (೯–೧೦೦). "ಹಾಗೆಯೇ ಕೆಲವರು 'ಭೋಗಿ'ಗಳು ಚಿನ್ನದ ಕಳಸವಿದ್ದ ದಂತದ ಪಾಲಕಿಗಳನ್ನೇರಿ ಹೆದೆಯಿಂದ ನುಸುಳಿದ ಮನ್ಮಥನ ಪುಷ್ಪಾಸ್ತ್ರಗಳ ಹಾಗೆ ಹೊರಟು ಬಂದರು" (೯–೧೦೧). "ಮತ್ತೆ ಕೆಲವರು 'ಭೋಗಿ'ಗಳು, ಹೊನ್ನಾಯೋಗಗಳಿಂದ ಕೂಡಿದ ಕುದುರೆಗಳು ಉತ್ಸಾಹದಿಂದ ನಡೆಯಲು, ಎತ್ತ ನೋಡಿದರೂ ತಮ್ಮನ್ನು ಅನುಸರಿಸಿಕೊಂಡು ಬಂದಂಥ ಹತ್ತೆಂಟು ಸೊಗಸುಗಳು ರಮಣೀಯವಾಗಿ ತೋರು

ತ್ತಿರಲು, ನವಿಲುಗರಿಯ ಕೊಡೆಗಳ ನೆರಳಲ್ಲಿ ಸೊಬಗಿನಿಂದ ನಡೆದು ಬಂದರು" (೯–೧೦೨). ಇಲ್ಲಿಂದ ಮುಂದೆ "ಸಡಹುಡನಪ್ಪ ಕಟಿತ್ತಿಕೊಡೆ ಸಂತಸದಿಂ ಪೆಜಗೇಜಿ ಬರ್ಪ..." ಎಂದು ಮೊದಲಾಗುವ, 'ಪೆಂಡವಾಸದ ವಿಳಾಸದ ಸೂಳೆಯರು' ಪ್ರಯಾಣಮಾಡಿದ ಚಿತ್ರವನ್ನು ಕೊಡುವ, ಪದ್ಯ ಬಂದಿದೆ (೯–೧೦೩). ಈ ೧೦೩ನೆಯ ಪದ್ಯದ ಶಬ್ದಾರ್ಥಗಳ ಮತ್ತು ಪದಪಾಠಗಳ ಬಗೆಗೆ ಪ್ರ. ಕ. ದಲ್ಲಿ ಹಿಂದೊಮ್ಮೆ ವಿಸ್ತಾರವಾದ ಚರ್ಚೆ ನಡೆದಿದೆ (ಹಂಪ. ನಾಗರಾಜಯ್ಯ: "ಪಂಪಕವಿಯ ಎರಡು ಪದ್ಯಗಳು", ಪ್ರ. ಕ. ೪೬–೧, ಪು. ೧೯೫).

'ಸಡಹುಡನಪ್ಪ ಕಟಿತ್ತಿಕೊಡೆ' ಎಂಬುದಷ್ಟೇ ಈ ಪದ್ಯದಲ್ಲಿ ಮುಖ್ಯವಾಗಿ ಅರ್ಥಕ್ಲೇಶವಿರುವ ಪದಸಮುಚ್ಚಯ. ಇಲ್ಲಿಯ ಎರಡು ಪದಗಳಿಗೂ ಪಂಪನಿಘಂಟುವಿನಲ್ಲಿ ಪ್ರಶ್ನಚಿಹ್ನವಿದೆ. 'ಸಡಹುಡಪ್ಪ' ಎಂಬುದಕ್ಕೆ ಸ್ಪಷ್ಟವಾಗಿ ಅರ್ಥನಿಷ್ಪತ್ತಿಗಳು ತಿಳಿಯದೆಂದರೂ ಕಾವ್ಯಾಧಾರಗಳನ್ನು ಅವಲೋಕಿಸಿದಾಗ 'ಆತುರ ತವಕ ಸಂಭ್ರಮ ಸಡಗರ' ಮುಂತಾದವುಗಳನ್ನು ವ್ಯಕ್ತಪಡಿಸುವ ಒಂದು ಅನುಕರಣವಾಚಕವಾಗಿರಬೇಕೆಂದು ಸಾಧಾರಣವಾಗಿ ಹೊಳೆಯುತ್ತದೆ. ಎರಡನೆಯ ಪದ ಪಂಪನಿಘಂಟುವಿನಲ್ಲಿ ಕೊಟ್ಟಿರುವಂತೆ 'ಕಟಿತ್ತಿಕೊಡೆ' ಎಂಬುದಾಗಿ ಒಂದು ಸಮಾಸಪದವೇ ಅಥವಾ ಪಂಪಭಾ. ದ ಸಂಯುಕ್ತ ಮುದ್ರಣದಲ್ಲಿ (೧೯೩೧) ಕಾವ್ಯಭಾಗದಲ್ಲಿ ಅಚ್ಚುಮಾಡಿರುವಂತೆ 'ಕಟಿತ್ತಿ ಕೊಡೆ' ಎಂಬುದಾಗಿ ವಿಭಿನ್ನವಾದೆರಡು ಪದಗಳೇ ಎಂಬುದು ಪರಿಶೀಲನಾರ್ಹವಾದದು. ಪಂಪನಿಘಂಟುವಿನಲ್ಲಿಯಂತೂ ಸಮಾಸಶಬ್ದವಾಗಿಯೇ ಕೊಟ್ಟಿದೆ. ಕೆಲವು ಕಡೆ ಗಕಾರಾದೇಶವು ಸ್ವಚ್ಛಂದವಿರಬಹುದು ಎಂದು ಗ್ರಹಿಸಿದರೂ, ಇಂಥದೊಂದು ಬಗೆಯ ಕೊಡೆಯಿರಬಹುದು ಎಂಬುದನ್ನು ಆಸ್ಯಾಧಾರಗಳಿಲ್ಲದೆ ಥಟ್ಟನೆ ಒಪ್ಪಲೊಲ್ಲದ ಮನಸ್ಸು ಪ್ರಸ್ತುತ ವೃತ್ತವನ್ನು ಮತ್ತೆ ಮತ್ತೆ ಪರಿಶೀಲಿಸುವಂತೆ ಮಾಡುತ್ತದೆ. ಹಾಗೊಮ್ಮೆ ಈ ವೃತ್ತವನ್ನು ಇಲ್ಲಿ ಪರಿಶೀಲಿಸಿದೆ.

ಸಂದಿಗ್ಧವಾದ ಪದಸಮುಚ್ಚಯದ ಅರ್ಥವನ್ನು ಬಿಟ್ಟರೆ, ಉಳಿದ ಭಾಗದ ಅರ್ಥವು ಸ್ಥೂಲವಾಗಿ "...ಸಂತೋಷದಿಂದ ಹಿಂದೆ ಹತ್ತಿಕೊಂಡು

ಬರುವ ಕನ್ನಡಿ ಹಿಡಿದಾಕೆ(ಗಳು), ಚಿನ್ನದ ಕವಚ(ಗಳು), ಅಪೂರ್ವವಾದ ಪಾದರಕ್ಷೆ(ಗಳು), ಉಚಿತ ಪ್ರಮಾಣದ ಚಿನ್ನದ ಪಾರಿವಾಳದ (ಕಸೂತಿ ಗೆಲಸದ?) ಕುಪ್ಪಸ(ಗಳು)—ಇವು ಒಪ್ಪುತ್ತಿರಲು, ಸೊಬಗಿನಿಂದ ಕೂಡಿ, ಕಣ್ಣಿಗಿಂಬಾಗಿ, ಅಂತಃಪುರದ ವಿಳಾಸದ ಸೂಳೆಯರು ಮೆರೆದರು" ಎಂದಾಗ ಬಹುದು. 'ಸೂಳೆಯರ್' ಎಂಬ ಬಹುವಚನ ಕರ್ತೃವಿನ ದೆಸೆಯಿಂದಾಗಿ ಅವರಿಗೆ ಅನ್ವಯಿಸಿ ಹೇಳಿರುವ 'ಕನ್ನಡಿವಿಡಿದಾಕೆ' ಮುಂತಾಗಿ ಮುಂದಿನ ನಾಲ್ಕಂಶಗಳಿಗೂ ಬಹುವಚನವನ್ನು ಭಾವಿಸಬೇಕು. ಆರಂಭದಲ್ಲಿ ತಾತ್ಪರ್ಯ ವಿತ್ತ ಮೊದಲ ಮೂರು ಪದ್ಯಗಳನ್ನು (೯–೧೦೦, ೧೦೧, ೧೦೨) ಮೂಲದಲ್ಲಿ ಹೃದ್ಯವಾಗಿ ಓದಿಕೊಂಡಾಗ ಅವು ಒಂದು ಇನ್ನೊಂದನ್ನು ವಿಷಯಗಳಲ್ಲಿಯೂ ನಿರೂಪಣ ವಿಧಾನದಲ್ಲಿಯೂ ಹತ್ತಿರದಿಂದ ಹೋಲುತ್ತಿರುವುದು ಸ್ಪಷ್ಟಪಡು ತ್ತದೆ. ಅಲ್ಲದೆ ಸ್ತ್ರೀಸಮುದಾಯವು ಸ್ಥಾನಮಾನಗಳ ತಾರತಮ್ಯವನುಸರಿಸಿ ಒಂದರ ಹಿಂದೊಂದು ಅಥವಾ ಒಂದರ ಪಕ್ಕದಲ್ಲಿ ಒಂದು ಎಂಬಂತೆ ನಾಲ್ಕು (ಅಥವಾ ಎರಡು) ಸಾಲುಗಳಲ್ಲಿ ಪ್ರಯಾಣಮಾಡಿದರೆಂದು ಪ್ರಾಯಃ ಬಣ್ಣಿಸಿರುವಂತಿದೆ. 'ನರೇಂದ್ರಕಾಂತೆ'ಯರು ದೊಡ್ಡ ಹೆಣ್ಣಾನೆಗಳ ಮೇಲೆಯೂ, ಕೆಲವರು 'ಭೋಗಿ'ಯರು ದಂತದ ಪಾಲಕಿಗಳಲ್ಲಿಯೂ ಇನ್ನೂ ಕೆಲವರು 'ಭೋಗಿ'ಯರು ಕುದುರೆಗಳ ಮೇಲೆಯೂ ಪಯಣಿಸಿದ ರೆಂಬುದನ್ನು ಮೊದಲ ಮೂರು ಪದ್ಯಗಳಲ್ಲಿ ಸ್ಪಷ್ಟವಾಗಿಯೇ ಹೇಳಿದೆ ಯೆನ್ನಬಹುದು. ಇದೇ ರೀತಿಯ ವಿಷಯಾನುಕ್ರಮವನ್ನು ಮುಂದಿನ ಪದ್ಯದಲ್ಲಿಯೂ ಸಹಜವಾಗಿ ನಿರೀಕ್ಷಿಸಬಹುದು. 'ಕಟಿತ್ತೆಕೊಡೆ' ಎಂಬುದನ್ನು ೧೯೩೧ರ ಪಂಪಭಾ. ದ ಸಂಯುಕ್ತ ಮುದ್ರಣದಲ್ಲಿ ಅಚ್ಚಾಗಿರುವ ಪ್ರಕಾರ 'ಕಟಿತ್ತೆ ಕೊಡೆ' ಎಂಬುದಾಗಿ ವಿಭಕ್ತರೂಪದಲ್ಲಿ ಸ್ವೀಕರಿಸಿ ಪಂಪನಿಘಂಟುವಿನ ಸೂಚನೆಯನ್ನು ತಾತ್ಕಾಲಿಕವಾಗಿ ಅಲಕ್ಷಿಸಿದರೆ, ವೃತ್ತದ ಅನ್ವಯವು "ಸಜ ಹುಡನಪ್ಪ ಕಟಿತ್ತೆ, ಕೊಡೆ, ಸಂತಸದಿಂ ಪೆಱಗೇಱಿ ಬರ್ಪ ಕನ್ನಡಿವಿಡಿದಾಕೆ..." ಎಂಬುದಾಗಿ ಏರ್ಪಟ್ಟು 'ಪೆಂಡವಾಸದ ವಿಳಾಸದ ಸೂಳೆಯರು' ಕತ್ತೆಗಳ ಮೇಲೆ (=ಹೇಸರಗತ್ತೆಗಳ ಮೇಲೆ) ಸಾಗಿದರೆಂದು ಅರ್ಥೈಸಲು ತಕ್ಕಮಟ್ಟಿಗೆ ಅನುವುದೊರೆತಂತಾಗುತ್ತದೆ. ಹೇಸರಗತ್ತೆಗಳನ್ನು ಸಾರಿಗೆಗೆ ಬಳಸುತ್ತಿದ್ದುದು ಸಾಮಾನ್ಯವಾಗಿತ್ತೆಂದು ತಿಳಿಸುವ ಆಧಾರಗಳು ಪಂಪನ ಕಾವ್ಯಗಳಲ್ಲಿಯೂ

ಅನ್ಯತ್ರವೂ ದೊರೆಯುತ್ತವೆ. ಪಂಪನ ಕಾವ್ಯಗಳನ್ನೇ ನೋಡಿದರೆ, ಪಂಪಭಾ. ದ "ಕುಣಿದು ಮೆಟ್ಟುವ ಗು(ವ) ಜ್ಜರಿಗಟ್ಟೆ" (೪-೮೭) ಎಂಬುದೂ ಆದಿಪು. ದ "ಕುಣಿದು ಮೆಟ್ಟುವಜ್ಜರಿಗಟ್ಟೆಗಳುಮಂ" (೪-೫೪ವ.) ಎಂಬುದೂ ವಚೋಸಾಮ್ಯದಿಂದ ಸಕೌತುಕವಾಗಿರುವುದೇ ಅಲ್ಲದೆ ಇಲ್ಲಿಯ ವಿಶೇಷಣ ವಿಶಿಷ್ಟತೆಯೂ ಸ್ವಾರಸ್ಯವಾಗಿದೆ. ಈ ಮೂರೂ ಪ್ರಯೋಗಗಳಲ್ಲಿ ಹೇಳಿರುವುದು 'ಹೇಸರಗತ್ತೆ' ಎಂಬುದು ಸ್ಪಷ್ಟ. ಈ ಕಾರಣದಿಂದ "ಸಡ ಹುಡನಪ್ಪ ಕಟ್ಟೆ" ಎಂಬುದೂ ಮೇಲಿನ ರೀತಿಯಲ್ಲಿ ಒಂದು ವಿಶೇಷಣ ವಿಶಿಷ್ಟವಾದ ಪ್ರಯೋಗವಾಗಿದ್ದು, ಪ್ರಾಯಃ ಇದರ ಅರ್ಥ '(ನಡೆಯಲು) ಚಡಪಡಿಸುವ (ಅಥವಾ ತವಕಿಸುವ/ಉತ್ಸಾಹಿಸುವ) ಹೇಸರಗತ್ತೆ' ಎಂದಿರ ಬಹುದು. ಆಗ ವೃತ್ತದ ಅರ್ಥವನ್ನು "ನಡೆಯುವಾಗ ಅಥವಾ ನಡೆಯಲು ಚಡಪಡಿಸುವ ಕತ್ತೆ, ಕೊಡೆ, ಸಂತೋಷದಿಂದ ಹಿಂದೆ ಹತ್ತಿಕೊಂಡು ಬರುವ ಕನ್ನಡಿ ಹಿಡಿವವಳು..." ಎಂದು ಮುಂತಾಗಿ ಹೇಳಬೇಕಾಗುತ್ತದೆ. ಇದರಿಂದ ಈ ಮೊದಲು ಹೇಳಿರುವ ನಾಲ್ಕಂಶಗಳೊಂದಿಗೆ ಮತ್ತೆರಡು ಅಂಶಗಳು ಜತೆ ಗೂಡಿ ಈ ಎಲ್ಲವೂ ಸೂಳೆಯರ ಬೆಡಗನ್ನು ಬೆಳೆಸುವ 'ಹತ್ತೆಂಟು ದೇಸೆ' ಗಳೆಂದು ತೋರಿಬರುತ್ತದೆ. ವಿಳಾಸದ ಸೂಳೆಯರ ಪರಿವಾರ ಚೇಟಿಕೆಯರಾದ ಕನ್ನಡಿ ಹಿಡಿದಾಕೆಗಳು ಸೂಳೆಯರ ಒಡನೆ ಹತ್ತಿಕೊಂಡು ಬಂದದ್ದು ಏನನ್ನು ಎಂಬುದಕ್ಕೆ ತಕ್ಕ ವಾಕ್ಯಾರಂಭವು ಇದರಿಂದ ಲಕ್ಷ್ಯವಾಗುವುದಲ್ಲದೆ, ೧೧೦ನೆಯ್ನ ಪದ್ಯದಲ್ಲಿ ಬಣ್ಣಿಸಿರುವ, ನರೇಂದ್ರಕಾಂತೆಯರು 'ಏರಿಕೊಂಡ ದೊಡ್ಡ ಹೆಣ್ಣಾನೆಗಳು. (ಅವರಿಗೋ ನೋಟಕರಿಗೋ) ಎದುರಾಗುವಂತೆ ಮೊದಲೆ ಬಂದು ಅವನ್ನು ಏರಿಕೊಂಡ ಚೆನ್ನಗನ್ನಡಿಯ ಚೇಟಿಕೆಯರು—' ಎಂಬ ಪ್ರಯಾಣಚಿತ್ರದೊಡನೆ ನಿಕಟಸಾದೃಶ್ಯವೂ ತೋರಿಬಂದು ಪ್ರಸ್ತುತ ಪದ ವಿಭಾಗವು ಈ ಎರಡು ಕಾರಣಗಳಿಂದಲೂ ಸಮರ್ಥನೀಯವಾಗುತ್ತದೆ. ೧೧೦ ಮತ್ತು ೧೧೩ನೆಯ ಪದ್ಯಗಳು ಸುಮಾರು ಒಂದೇ ತರಹೆಯ ರಚನೆ ಗಳೆಂಬುದು ಗಮನಾರ್ಹವಾಗಿದೆ. ಹೀಗೆ 'ಸಡಹುಡನಪ್ಪ ಕಟ್ಟೆ' ಎಂಬು ದನ್ನೂ 'ಸಂತಸದಿಂ ಪೆಱಗೇಱೆ ಬರ್ಪ ಕನ್ನಡಿವಿಡಿವಾಕೆ' ಎಂಬುವನ್ನೂ ಪರಸ್ಪರ ಸಂಬಂಧಿಗಳಾಗಿ ಗ್ರಹಿಸಿದರೆ (ಇವರಿಂದ ಒಂದೊಂದು ಹೇಸರಗತ್ತೆಯ ಮೇಲೆಯೂ ಒಬ್ಬೊಬ್ಬಳು ಸೂಳೆ ಮತ್ತು ಅವಳ ಜತೆಗೆ ಒಬ್ಬೊಬ್ಬಳು ಕನ್ನಡಿ

ಹಿಡಿದ ಹೆಂಗಸು ಇರುತ್ತಿದ್ದರೆಂದು ಭಾವಿಸಬೇಕಾಗುತ್ತದೆ; ಪದ್ಯ ೧೮೦ ರಲ್ಲಿಯೂ ಹೀಗೆಯೇ.[1]) ಇವುಗಳ ಹಿಡಿತದಿಂದ 'ಕೊಡೆ' ಎಂಬ ಪದವು ಬೇರ್ಪಡುವುದು. ಅರ್ಥದ ದೃಷ್ಟಿಯಿಂದ ಈ ಪದ್ಯದ ಪೂರ್ವೋಕ್ತವಾದ ಆರಂಶಗಳನ್ನೂ ಅನುಕ್ರಮವಾಗಿ ಪರಿಶೀಲಿಸಿದಾಗ °ಕಟ್ಟಿ ಮತ್ತು °ಕನ್ನಡಿ ವಿಡಿದಾಕೆ ಇವುಗಳ ನಡುವೆ 'ಕೊಡೆ' ವಿಸಂಬಂಧಿಯೂ ವಿಲಕ್ಷಣವೂ ಆಗಿ ಸೇರಿ ಕೊಂಡಿರುವಂತೆ ತೋರಿಬಂದು ಮನಸ್ಸಿಗೆ ಅತೃಪ್ತಿಯುಂಟಾಗುತ್ತದೆ. ಹಾಗೆ ನೋಡಿದರೆ ೧೮೦ನೆಯ ಪದ್ಯದಲ್ಲಿ 'ಬೀಸುವ ಕುಂಚಂ' ಮತ್ತು 'ಕಾಂಚನದ ದಂಡದಸೀಗುರಿ' ಇವುಗಳ ನಡುವೆ 'ಎಯ್ದೆ ಮೆಯ್ವೋಜುವ ಗಾಡಿ' ಎಂದು ಹೇಳಿರುವುದರಲ್ಲಿಯೂ ಅಂಥ ಸಂಬದ್ಧತೆಯಿಲ್ಲದಿರುವುದು ಸ್ಪಷ್ಟವಾಗಿಯೇ ಇದೆ. ಆದ್ದರಿಂದ ಈ ಅತೃಪ್ತಿ ನಿರಾಧಾರವಾದುದು. ೧೮೨ನೆಯ ಪದ್ಯ "ನಡೆಯೆ ತುರಗಂ ಪೊನ್ನಾಯೋಗಂಗಳಿಂಪಮರ್ದಟ್ಟಿಯಿಂ । ಪಡೆಯೆ ನೆಟಿಲಂ ಚಂಚತ್ಪಿಂಛಾತಪತ್ರಮೆ..." ಎಂದು ಆರಂಭವಾಗಿರುವುದನ್ನು ನೆನೆದರೆ ೧೮೩ ನೆಯದರಲ್ಲಿಯು ಆರಂಭ ಅಸಹಜವೆಂದು ತೋರುವುದಿಲ್ಲ. ಇದು ಅದಕ್ಕೆ ಸದೃಶವಾಗಿದ್ದು, ಇಲ್ಲಿಯ ಚಿತ್ರವು ಮಾತ್ರ ಅಲ್ಲಿಯಂತೆ ಸವಿವರವಾಗಿರದೆ ಅತ್ಯಂತ ಸಂಕ್ಷೇಪವಾಗಿದೆ, ಅಷ್ಟೆ. ಇಂಥ ಸಂಕ್ಷಿಪ್ತತೆ ಪಂಪನ ಶೈಲಿಯಲ್ಲಿ ಸಹಜ ಮತ್ತು ಸಾಮಾನ್ಯ. ಸದೃಶಸಂನಿವೇಶವಿರುವ, ಸ್ತ್ರೀಸಮುದಾಯದ ಪ್ರಯಾಣವೈಖರಿಯನ್ನು ವರ್ಣಿಸಿರುವ, ಆದಿಪುರಾಣದಲ್ಲಿ "ಸಿವಿಗೆ ತಟ್ಟಿದು ಉಗಲೊಡನಿ । ಕ್ಕುವ ಕುಂಚಂ ಲೀಲೆವಡೆಯೆ..." (೧೧–೩೯), "ಕರಿಣೀ ವೃಂದದ ಮೇಲೆ ತಳ್ತ ತಟ್ಟಿಗಳ್..." (೧೧–೪೧), "ಲಯದಿಂ ಮೆಲ್ಪಿಂ ಬೆಡಂಗಂ ಪಡೆವ ತುರಗದಿಂ ಚಿತ್ರಿತಚ್ಛತ್ರಿಕಾ ಲೀಲೆಯಿನ್..." (೧೧–೪೫), "ತುರಗಮುಮೊಂದು ಸತ್ತಿಗೆಯುಮೊಂದಿರೆ..." (೧೧–೪೫ ಅ. ಟಿ.) ಎಂಬ ಪದ್ಯಭಾಗಗಳನ್ನು ನೋಡಿದರೆ ಪಂಪಭಾ.ದಲ್ಲಿ "ಸಡಹುಡನಪ್ಪ ಕಟ್ಟಿ ಕೊಡೆ..." ಎಂಬ ಮಾತಿನ ರೀತಿಯೂ ಅವಕ್ಕೆ ಅನುಗುಣವಾಗಿಯೇ

---

1 ಈ ಎರಡು ಕಡೆಗಳಲ್ಲಿಯೂ ಇದು ಹೀಗಿರಲಾರದೆಂದು ತೋರುವ ಪಕ್ಷದಲ್ಲಿ, ಕನ್ನಡಿ ಹಿಡಿದ ಚೇಟಿಯರು ಬೇರೆಯಾಗಿಯೇ ಬಂದರೆಂದಿಟ್ಟುಕೊಳ್ಳಬಹುದು. ಇದರಿಂದ ನಮ್ಮ ಪದಾರ್ಥವಿವೇಚನೆಗೆ, ಪ್ರಸ್ತುತ ಪಾಠಪರಿಶೀಲನೆಗೆ, ಬಾಧೆಯಿಲ್ಲ.

ಇರುವುದು ಕಂಡು ಬರುತ್ತದೆ. ರಾಜಮಹಾರಾಜರು ಹೇಗೋ ಹಾಗೆಯೇ ನರೇಂದ್ರ ಕಾಂತೆಯರೂ ಅಂತಃಪುರ ವಿಲಾಸಿನಿಯರೂ ಮೆರವಣಿಗೆಯ ಸಮಯದಲ್ಲಿ ತಾವು ಕುಳಿತಿರುತ್ತಿದ್ದ ವಾಹನಗಳ ಮೇಲೆಯೋ ಅಕ್ಕಪಕ್ಕಗಳಲ್ಲಿಯೋ ನೆರಳಿಗಾಗಿಯೂ ವೈಭವವಿಲಾಸಗಳ ಪ್ರತೀಕವಾಗಿಯೂ ಕೊಡೆಯನ್ನೋ ಕೊಡೆಗಳನ್ನೋ ಹಿಡಿಸಿಕೊಳ್ಳುತ್ತಿದ್ದರೆಂದು ತೋರುತ್ತದೆ. ಈ ಸಂದರ್ಭದಲ್ಲಿ 'ವಡ್ಡಾರಾಧನೆ'ಯ 'ಭದ್ರಬಾಹು ಭಟಾರರ ಕಥೆ'ಯಲ್ಲಿಯ "ಮಱುದಿವಸಂ ಧಾರಿಣಿ ಮಹಾದೇವಿಯುಮುೞ್ವರರಸಿಯರ್ಕಳುಂ ಪೆಂಡವಾಸದಗ್ಗಳದ ಸೂಳೆಯರ್ಕಳುಂ ಬೆರಸು ವೇಸರಿಗಟ್ಟಿಗಳುಂ ಪಿಡಿಗಳುಂ ಸಿಬಿಗೆಗಳುಮನೇಱಿ ಸೀಗುರಿಗಳುಮಂ ಕೊಡೆಗಳುಮಂ ಪಿಡಿಯಿಸಿ..." (ಪು. ೭೫, ೧೯೪೯ರ ಮುದ್ರಣ) ಎಂಬ ಒಂದು ಗದ್ಯಭಾಗವನ್ನು ನೆನೆಯಬಹುದು. ಈ ಚಿತ್ರದ ವಿಷಯಗಳಿಗೂ ಪಂಪಭಾ.ದ ಪೂರ್ವೋಕ್ತ ಪದ್ಯಗಳ ವಿಷಯಗಳಿಗೂ ಇರುವ ಹೋಲಿಕೆಯನ್ನು ಗಮನಿಸಬಹುದು.

ಈ ಮೇಲಿನ ಕೆಲವು ಸಂಗತಿಗಳನ್ನು ಪರಿಶೀಲಿಸಿದಾಗ "ಸಡಹುಡನಪ್ಪ ಕಟ್ಟಿ, ಕೊಡೆ, ಸಂತಸದಿಂ ಪೆಱಗೇಱಿ ಬರ್ಪ ಕನ್ನಡಿವಿಡಿದಾಕೆ...." ಎಂದು ಮುಂತಾಗಿ ಪರಸ್ಪರ ಸಂಬಂಧವಿರುವ ಆರು ಅಂಶಗಳನ್ನು ನಿರೂಪಿಸಿ ಅವುಗಳ ಸಮುದಾಯಶೋಭೆಯಿಂದ ಪೆಂಡವಾಸದ ವಿಳಾಸದ ಸೂಳೆಯರ ಬೆಡಗು ಅತಿಶಯವಾಯಿತು ಎಂಬುದನ್ನು ತಿಳಿಸುವುದು ಪಂಪನ ಆಶಯವಾಗಿರಬೇಕು ಎಂದು ಹೇಳಬಹುದು.

ಪಂಪಭಾ.ದ ಹಸ್ತಪ್ರತಿಗಳಲ್ಲಿ 'ಕಟ್ಟಿ' ಮತ್ತು 'ಕೊಡೆ' ಎಂಬ ಪದಗಳನ್ನು ಸೇರಿಸಿ ಬರೆದಿತ್ತೆ ಅಥವಾ ಬಿಡಿಸಿ ಬರೆದಿತ್ತೆ ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳಲು ಪರಿಶೀಲನೆಗೆ ಲಭ್ಯವಾಗುವುದಾದರೆ ಇನ್ನೊಮ್ಮೆ ಹಸ್ತಪ್ರತಿಗಳನ್ನು ಎಚ್ಚರಿಕೆಯಿಂದ ನೋಡಬೇಕಾಗುವುದು. ಎಲ್ಲ ಹಸ್ತಪ್ರತಿಗಳಲ್ಲಿಯೂ ಒಂದ ಪಕ್ಷ ಸೇರಿಸಿಯೇ ಅಥವಾ ಬಿಡಿಸಿಯೇ ಬರೆದಿತ್ತೆಂದರೂ ಅದೇ ಸರಿಯಾದ ಪಾಠವೆಂದು ನಂಬುವುದರಲ್ಲಿಯೂ ಕಷ್ಟವಿಲ್ಲದಿಲ್ಲ[2]. ಈ ಕಷ್ಟ

2 ಇದಕ್ಕೆ ಪಂಪನ ಆದಿಪುರಾಣದಿಂದಲೇ ಒಂದು ಉದಾಹರಣೆಯನ್ನು ಕೊಡಬಹುದು: ನೀಲಾಂಜನೆಯ ನೃತ್ಯಪ್ರಸಂಗದಲ್ಲಿ ನಡೆದೊಂದು ಘಟನೆ ಆದಿನಾಥನಲ್ಲಿ ವೈರಾಗ್ಯವನ್ನು ಪ್ರೇರಿಸಿ ಆತನು ದೇಹಾನಿತ್ಯತೆಯನ್ನು ಕುರಿತು ಚಿಂತಿಸುವಾಗ

"ವನದಹನಂ ವನಾಂತರಮನೊರ್ಬುಳಸಾಗಿರೆ ಮುತ್ತಿ ಸುತ್ತಿ ಸು
ತ್ತಿನ ನಡುವಿರ್ದ ಮಾಮರನನಟ್ಟಿದುದೀ ಮರನಂ ತಗುಳ್ದುದೆಂ
ಬನೊಳೆಣೆಯಾಗೆ ಸತ್ತರನೆ ಸಾಯದರಂತೆಣಿಸುತ್ತುಮಿರ್ಪ ಬೆ
ಳ್ಪನದನಿತಲ್ಲದಾಮರನಸಾಸ ದವದಗ್ನಿ ಒರ್ದುಂಕಲೀಗುಮೇ॥" (೯-೫೯)

ಎಂಬೊಂದು ಪದ್ಯ ಬಂದಿದೆ. ಆದಿಪುರಾಣದ ೧೯೦೦ ಮತ್ತು ೧೯೫೩ರ ಎರಡು ಪರಿಷ್ಕರಣಗಳಲ್ಲಿಯೂ, ಮೈ. ವಿ. ವಿ. ದ ಸಂಗ್ರಹಗ್ರಂಥದಲ್ಲಿಯೂ ಈ ಪದ್ಯವು ಹೀಗೆಯೇ ಇದೆ. ಇರುವಂತೆ ಇದರ ತಾತ್ಪರ್ಯವನ್ನು ಹೀಗೆ ಹೇಳಬಹುದು: "ಕಾಡುಕಿಚ್ಚು ಕಾಡನ್ನೆಲ್ಲ ಪೂರ್ತಿಯಾಗಿ ಸುತ್ತಿಮುತ್ತಿರಬೇಕಾದರೆ, ಹಾಗೆ ಸುತ್ತಿಕೊಂಡ ಬೆಂಕಿಯು ನಡುವೆಯಿದ್ದ ಮಾವಿನಮರವನ್ನು ಸುಟ್ಟುಹಾಕಿತು, ಈ ಮರವನ್ನು ಬಿಟ್ಟಿತು–ಎಂಬವನಿಗೆ ಸಮಾನವಾಗಿ ಸತ್ತವರನ್ನೆ ಸಾಯದವರಂತೆ ಭಾವಿಸುತ್ತಿರುವುದೂ ಮೌಢ್ಯವೆ. ಆ ಇನ್ನೊಂದು ಮರವನ್ನು ಕೂಡ ಆ ಕಾಡುಕಿಚ್ಚು ಬದುಕಲು ಬಿಡುತ್ತದೆಯೆ?" ಇಲ್ಲಿ 'ಮಾಮರನನ್' ಎಂದು ಕವಿ ಹೇಳಿರುವುದಕ್ಕೆ ಸಾರ್ಥಕತೆಯಾಗಲಿ ವಿಶೇಷ ಪ್ರಯೋಜನವಾಗಲಿ ಇಲ್ಲ. ಬೆಂಕಿಯು ಕಾಡನ್ನು ಸುತ್ತುವರಿದು ಸುಡುವಾಗ ಮಾವಿನಮರಗಳನ್ನೇ ಅಂಟುವುದು, ಬೇರೆ ಜಾತಿಯ ಮರಗಳನ್ನು ಬಿಡುವುದು ಎಂದು ಮೂಢನೂ ತಿಳಿಯುವುದಿಲ್ಲ. ಇಲ್ಲವೆ 'ಮಾಮರನನ್' ಎಂಬುದಕ್ಕೆ ಸಂವಾದಿಯಾಗಿ 'ಈ ಮರನನ್' ಎಂಬೆಡೆಗೆ ಬೇರೊಂದು ಮರದ ಜಾತಿಯ ಹೆಸರು ಬಂದಿದ್ದರೆ ಆಗ ಸಾರ್ಥಕತೆಯಿರುತ್ತಿತ್ತು. ಆದ್ದರಿಂದ ಈ ಭಾಗದಲ್ಲಿ ಏನೋ ದೋಷವಿರಬೇಕೆಂದು ತೋರುತ್ತದೆ. 'ನಡುವಿರ್ದ' ಎಂಬುದನ್ನು 'ನಡುವಿರ್ದು' ಎಂಬುದಾಗಿ ತಿದ್ದಿಕೊಂಡು 'ಮಾಮರನನಟ್ಟಿದುದೀ ಮರನಂ...' ಎಂಬುದನ್ನು ಅದರೊಡನೆ ಕೂಡಿಸಿಕೊಂಡು ಓದಿದರೆ "...ಸುತ್ತಿನ ನಡುವಿ[ರ್ದು]ಮಾಮರನನಟ್ಟಿದುದೀ ಮರನಂ ತಗುಳ್ದುದೆಂ। ಬನೊಳೆಣೆಯಾಗೆ..." ಎಂದಾಗಿ, ಇದರ ಅರ್ಥವು 'ಬೆಂಕಿಯು ಬಳಸಿನ ನಡುವೆಯಿದ್ದೂ ಆ ಮರವನ್ನು ಸುಟ್ಟಿತು ಈ ಮರವನ್ನು ಬಿಟ್ಟಿತು (ಎಂದರೆ ಕಾಡುಕಿಚ್ಚು ಸುತ್ತಲೂ ವ್ಯಾಪಿಸಿರಬೇಕಾದರೆ ಅವರ ನಡುವೆ ಸಿಕ್ಕಿಕೊಂಡಿರುವ ಎಲ್ಲಾ ಮರಗಳೂ ಅದಕ್ಕೆ ತುತ್ತಾಗಲೇಬೇಕಾದುದು ನಿಶ್ಚಯವಷ್ಟೆ; ಹೀಗಿರುವಲ್ಲಿ ಒಂದು ಮರವನ್ನು ಮಾತ್ರ ಸುಟ್ಟು ಇನ್ನೊಂದನ್ನು ಮಾತ್ರ ಉಳಿಯಗೊಟ್ಟಿತು ಎಂಬುದು ಬೆಪ್ಪುತನವಲ್ಲದೆ ಬೇರೆಯಲ್ಲ; ಏಕೆಂದರೆ ಆ ಮರವನ್ನೂ ಆ ದವಾಗ್ನಿ ಸುಡದೆ ಬಿಡುವುದಿಲ್ಲ—ಎಂಬುದು ಆಶಯ. "ಸತ್ತರನೆ ಸಾಯದರಂತೆಣಿಸುತ್ತುಮಿರ್ಪ" ಎಂಬುದು ನೇರವಾಗಿ ಸೀಲಾಂಜನೆಯ ಆಯುರಂತ್ಯದ ಘಟನೆಯನ್ನೆ ಕುರಿತಾತೆ ತೋರುತ್ತದೆ) ಎಂಬವನಿಗೆ ಸಮಾನವಾಗಿ ಎಂದು ಸ್ಪಷ್ಟವಾಗುತ್ತದೆ. ಈ ತಿದ್ದುಪಡಿಯಿಂದ ಪದಾರ್ಥವು ಇಡೀ ಪದ್ಯಕ್ಕೆ ಸರ್ವಾಂಶಗಳಲ್ಲಿಯೂ ಅನ್ವಯಿಸುವಂತೆ ಸುಕರವಾಗಿ, ಸ್ವಾರಸ್ಯವು ಮನೋಜ್ಞವಾಗುತ್ತದೆ. ಇಲ್ಲಿ ಮಾಡಿಕೊಂಡಿರುವ ತಿದ್ದುಪಡಿಗೆ ಆದಿಪುರಾಣದ ಯಾವ ಹಸ್ತಪ್ರತಿಯಲ್ಲಿಯೂ ಬೆಂಬಲವಿಲ್ಲದಿದ್ದರೂ 'ಊಹಾತ್ಮಕ ಪರಿಷ್ಕರಣ' ಮಾರ್ಗವನ್ನನುಸರಿಸಿ ಇಲ್ಲಿಯ 'ಲಿಪಿಕಾರ ಸ್ಖಾಲಿತ್ಯ'ವನ್ನು ಸರಿಪಡಿಸಿಕೊಳ್ಳದೆ ವಿಧಿಯಿಲ್ಲ.

ಪಂಪಭಾ.ದ ಸಂಪಾದಕರಿಗೆ ಚೆನ್ನಾಗಿ ಗೊತ್ತಿದ್ದಿತು ಎಂಬುದಕ್ಕೆ ಸೂಚನೆಯಿದೆ (ಉಪೋದ್ಘಾತ, ಪು.xvi). ಅಲ್ಲದೆ ೧೯೩೧ರ ಸಂಯುಕ್ತ ಮುದ್ರಣದಲ್ಲಿ ಬಿಡಿಸಿ ಬರೆದಿರುವುದು ಅಚ್ಚಿನ ದೋಷವಾಗಿರದೆ ಮಾತೃಕೆಗೆ ಅನುಸಾರ ವಾಗಿಯೋ ಕೊಟ್ಟಿರುವುದಾಗಿದ್ದು, ಪಂಪಸಿಘಂಟುವನ್ನು ಸಿದ್ಧಪಡಿಸುವಾಗ ಸೇರಿಸಿಕೊಂಡು ಅಚ್ಚುಮಾಡಿಸಿದ್ದು ಭ್ರಾಂತಿಯೋ ಪ್ರಮಾದವೋ ಆಗಿರು ವುದು ಅಸಂಭವವಲ್ಲ. ಹಸ್ತಪ್ರತಿಗಳಲ್ಲಿ ಈ ಪದವನ್ನು ಹೇಗೆ ಬರೆದಿದೆ ಎಂಬುದನ್ನು ಪರಿಶೀಲಿಸಲು ಸದ್ಯದಲ್ಲಿ ಸಾಧ್ಯವಿಲ್ಲದಿರುವ ಕಾರಣ, ಅನ್ಯ ಪ್ರಮಾಣಗಳನ್ನು ಆಧರಿಸಿ ಪ್ರಸ್ತುತ ಪಾಠವನ್ನು ನಿಷ್ಕರ್ಷಿಸಲು ಮೇಲೆ ಪ್ರಯತ್ನಿಸಿದೆ.

‘ ಚಕ್ಕಣಂ ’

ಪಂಪಭಾರತದ ೪–೮೭ರ ಮುಂದಿನ ವಚನಭಾಗದ ಈ ಕೊನೆಯ ಸಾಲುಗಳನ್ನು ನೋಡಿ :

‘...ಧರ್ಮಗಳ್ಗುಡಿವರ್ಗೆಲ್ಲಂ ಮಿಾಸಲ್ಗಳ್ಗನೆಱೆದು, ಪೊನ್ನ ಬೆಳ್ಳಿಯ ಸಿಪ್ಪುಗಳೊಳ್ ಕಿಱುಕಿಱುದನೆಱೆದು ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮೂರುದಿನ ಮೆಣಸು ಗಡಲೆಯ ಪುಡಿಯೊಳಡಸಿದಲ್ಲವಲ್ಲಣೆಗೆಯ ಚಕ್ಕಣಂಗಳಂ ಸವಿಸವಿದು—’

ಈ ವಾಕ್ಯದ ಸರಣಿ ಮುಂದಿನ ವೃತ್ತದಲ್ಲಿ ಮುಂದುವರಿದು ‘....ಕಳ್ಳ ಪ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮುಂ ಕಾಂತೆಯರ್ ’ ಎಂಬ ಮಾತಿನಿಂದ ಕೊನೆಗೊಳ್ಳುತ್ತದೆ,

ಸೂಳೆಗೇರಿಯ ಒಂದೆಡೆಯಲ್ಲಿ ನಡೆದ ಮಧುಪಾನ ವೈಖರಿಯ ವರ್ಣ ನಾಂಶವನ್ನು ಮೇಲೆ ಉದ್ಧರಿಸಿದೆ. ಕಳ್ಗುಡಿಯಲೆಂದು ವಿಧಿವತ್ತಾಗಿ ಪಾತೆ

ಗಳಿಗೆ ಕಳ್ಳಿರವ ಪರುಠವಣೆಯಾದ ಮೇಲೆ, ಕೆಲ ಸಾಮಗ್ರಿಗಳ ಪಾಕವಾದ ಚಕ್ಕಣಗಳನ್ನು ಸವಿದು, ಕಳ್ಳಿನ ರುಚಿಯನ್ನು ಬಣ್ಣಿಸುತ್ತ ಕಾಂತೆಯರು ಕಳ್ಳುಡಿದರೆಂಬುದು ಒಟ್ಟು ವಚನ ಮತ್ತು ವೃತ್ತದ ತಾತ್ಪರ್ಯ.

ಮೇಲಣ ವಚನಭಾಗದಲ್ಲಿ, ಅರ್ಥಕ್ಲೇಶವಿರುವ ಶಬ್ದಗಳಲ್ಲಿ, 'ಚಕ್ಕಣಂ' ಎಂಬುದು ಸದ್ಯದ ವಿಚಾರಕ್ಕೆ ವಿಷಯ: ಪಂಪಭಾರತದ ಎರಡನೆಯ (ಹೊಸ) ಮುದ್ರಣದಲ್ಲಿ ಮಾತ್ರ ಈ ಶಬ್ದವು ಕಾಣುತ್ತದೆ. ಹಿಂದಿನ ಎಲ್ಲ ಮುದ್ರಣಗಳಲ್ಲಿಯೂ ಈಯೆಡೆಯಲ್ಲಿ 'ಚಿಕ್ಕಣಂ' ಎಂಬ ಶಬ್ದವಿದೆ. ಈ ಶಬ್ದಗಳು ಒಂದಕ್ಕೊಂದು ಪಾಠಾಂತರ. ಅರ್ಥ ಸಮಂಜಸತೆಯ ದೃಷ್ಟಿಯಿಂದ ಈಚಿನ ಪ್ರತಿಯಲ್ಲಿ 'ಚಕ್ಕಣಂ' ಎಂಬುದೇ ಸಂಪಾದಕರಿಗೆ ಗ್ರಾಹ್ಯಪಾಠವಾಗಿ ಕಂಡಿರಬಹುದು. "ಚಿಕ್ಕಣಂ" ಶಬ್ದಕ್ಕೆ ಪಂಪಭಾರತದ ನಿಘಂಟಿನಲ್ಲಿ ಪ್ರಶ್ನಚಿಹ್ನೆಯಿದೆ. ಕಿಟೆಲ್ ನಿಘಂಟಿನಲ್ಲಿಯೂ ಸಂಸ್ಕೃತ ಮತ್ತು ಇತರ ಭಾಷೆಯ ಕೋಶಗಳಲ್ಲಿಯೂ ಈ ಶಬ್ದಕ್ಕೆ "ಸ್ನಿಗ್ಧವಾದ್ದು, ಜಿಗುಟಾದ್ದು" ಎಂಬರ್ಥದ ಮಾತಂಗಳಿವೆ. ಈ ಅರ್ಥವನ್ನಿಟ್ಟುಕೊಂಡು ಕೆಲವು ಪದಾರ್ಥಗಳ ಮಿಶ್ರಣದ ಲೇಹ್ಯಪಾಕವನ್ನೋ ಸ್ನಿಗ್ಧಪಾಕವನ್ನೋ ಸವಿದರೆಂದು ಹೇಳಲಾಗದೇ ? ಇದು ಸಂಪಾದಕರಿಗೆ ಸಮ್ಮತವಾಗಿದ್ದರೆ ಪ್ರಶ್ನಚಿಹ್ನೆಯನ್ನು ಹಾಕುತ್ತಿರಲಿಲ್ಲ. ಹೋಗಲಿ, ಪಾಠಾಂತರದ ಸವರಣೆಯಿಂದ ಅರ್ಥದ ತೊಡಕು ಪರಿಹಾರವಾಯಿತೆ ?

ಈಗ ಪಂಪಭಾರತದ ೭-೯೦ನೆಯ ಈ ಪದ್ಯವನ್ನು ನೋಡಿ :

ಒದವಿದ ಕೆತ್ತ ಕಂಕಣದ ಪುರ್ವಿನ ಜರ್ವು ಲಯಕ್ಕೆ ಲಕ್ಕ ಲೆ
ಕ್ಕದ ಗತಿ ನಾಟಕಾಭಿನಯಮಾಯ್ತನೆ ಗೇಯದೊಳೀಕೆ ಸೊರ್ಕನಿ
ಕ್ಕಿದಳೆನೆ ಕಳ್ಗೆ ಚಕ್ಕಣಮೆನಿಪ್ಪುದು ಸಾಗೆನಿಸಲ್ಕೆ ಸಾಲ್ವ ಸ
ಗ್ಗದ ಪೊಸದೇಸಿಯೋಳಿಗಳನೊರ್ವಳೊಜಲ್ಲು ನೆಜಲ್ದು ಪಾಡಿದಳ್

ಇಂದ್ರಕೀಲ ನಗೇಂದ್ರದಲ್ಲಿ ತಪೋನಿಯಮನಿಯಮಿಂತನಾಗಿ ನಿಂತ ನರೇಂದ್ರ ತಾಪಸನಾದ ಅರ್ಜುನನ ತಪೋವಿಘಾತವನ್ನು ಮಾಡಲೆಂದು ಇಂದ್ರನಪ್ಪಣೆಯಂತೆ ಬಂದ ದೇವಾಪ್ಸರೆಯರ ವೃಂದದಲ್ಲಿ ಒಬ್ಬಳು ಅವನೆದುರಿನಲ್ಲಿ ಕಾಣಿಸಿ

ಕೊಂಡ ಪರಿಯನ್ನು ಇಲ್ಲಿ ಹೇಳಿದೆ. "ಕೈಬಳೆಗಳ ಮತ್ತು ಹುಬ್ಬುಗಳ ಮಿಡು ಕಾಟ, ಲಯಾನುಸಾರಿಯಾದ ತ್ವರಿತ ಪದಗತಿ, ನೃತ್ಯಾಭಿನಯವಾಯಿತೆಂಬಂತೆ ಇತ್ತು; ಹಾಡಿದ ಹಾಡಿನಲ್ಲಿ ಮಾದಕತೆಯನ್ನು ತುಂಬಿದಂತೆ ಇತ್ತು; ಅವಳ ಸಾಗು[1] ಎಂದರೆ ಮುಂಬರಿವು (?) ಕಳ್ಳಿಗೆ ಚಕ್ಕಣವೆನಿಸುವುದು–ಎಂದು ಹೇಳ ಬಹುದಾದ ಸ್ವರ್ಗದ ಹಲವು ಸೊಗಸುಗಳನ್ನು ಒಬ್ಬಳಂ ಪ್ರೀತಿಯಿಂದಲೂ ತನ್ಮಯತೆಯಿಂದಲೂ ಹಾಡಿದಳು'' ಎಂಬುದು ಈ ಪದ್ಯದ ಸಾರಾಂಶ.

ಪಂಪಭಾರತದ ಎರಡನೆಯ (ಹೊಸ) ಮುದ್ರಣದಲ್ಲಿ ಮಾತ್ರ 'ಕಳ್ಗೆ ಚಕ್ಕಣಮೆನಿಪ್ಪುದು–' ಎಂದಿದೆ. ಹಿಂದಿನ ಎಲ್ಲ ಮುದ್ರಣಗಳಲ್ಲಿಯೂ 'ಕಳ್ಗೆ' ಎಂಬೆಡೆಯಲ್ಲಿ 'ಕಣ್ಗೆ' ಎಂದಿದೆ. ಈ ಮಾರ್ಪಾಟಿನಿಂದ ಅರ್ಥ ಸುಕರವಾಯಿತೆ? ಕಣ್ಗೆ ಅಥವಾ ಕಳ್ಗೆ 'ಚಕ್ಕಣಮೆನಿಪ್ಪುದು ಸಾಗು' ಎಂದರೇನು ? 'ಪಂಪಭಾ. ನಿಘಂಟಿ'ನಲ್ಲಿ 'ಚಕ್ಕಣಂ' ಶಬ್ದಕ್ಕೆ ಪ್ರಶ್ನಚಿಹ್ನೆ ಯಿದೆ. ಕಿಟ್ಟೆಲ್‌ಕೋಶದಲ್ಲಿ ಈ ಶಬ್ದವಿಲ್ಲ. ಸನ್ನಿವೇಶ ಬಲದಿಂದ ಇಲ್ಲಿ ಶಬ್ದಾರ್ಥವನ್ನು ಊಹಿಸುವುದು ಕಷ್ಟ. ಅರ್ಥಾನುಕೂಲ್ಯದ ದೃಷ್ಟಿಯಿಂದ ಸಂಪಾದಕರು ಯೋಜಿಸಿರಬಹುದಾದ ಈ ಪಾಠಾಂತರ(?)ದ ಔಚಿತ್ಯವನ್ನು ಮನಗಾಣಬೇಕಾಗಿದೆ.

೪–೮೭ವ. ದ ಮಧುಪಾನ ಸಂದರ್ಭದಲ್ಲಿ 'ಚಿಕ್ಕಣ'ವು 'ಚಕ್ಕಣ' ವಾದುದನ್ನು, ೭–೯೦ರಲ್ಲಿ 'ಕಣ್ಗೆ'ಯು 'ಕಳ್ಗೆ' ಆದುದನ್ನೂ, ಸನ್ನಿವೇಶಬಲ ದಿಂದ ನೋಡಿದರೆ ಕಳ್ಳಿಗೂ ಚಕ್ಕಣಕ್ಕೂ ಜಾತಿಸಂಬಂಧವಿರಬಹುದೆಂದು ತೋರುತ್ತದೆ. ೨ನೇ ನಾಗವರ್ಮನ "ಅಭಿಧಾನ ವಸ್ತುಕೋಶದ'' ಈ ತ್ರಿಪದಿ ಯಲ್ಲಿ ಈ ಸಂಬಂಧವನ್ನು ಕಾಣಬಹುದು.

---

[1] 'ಪಂಪಭಾ. ನಿಘಂಟಿ'ನಲ್ಲಿ ಈ ಶಬ್ದಕ್ಕೂ ಪ್ರಶ್ನಚಿಹ್ನೆಯಿದೆ. ಇದು 'ಮುಂದವರಿ' ಎಂಬ ರೂಢಿಯ ಅರ್ಥದ ಶಬ್ದವಿರಲಾರದೇನೋ ? 'ವೇಷ' ಎಂಬರ್ಥದ 'ಸೋಗು' ಎಂದೋ, ಮಡಿಲು ಅರ್ಥದ 'ಸೋಗೆ' ಎಂದೋ, 'ಪೋಗು' 'ಬಾಗು' ಎಂಬಂತೆ ಸಹಜ ಭಾವನಾಮವಾಗಿ 'ಮುಂದುವರಿ' ಎಂಬರ್ಥದಲ್ಲಿಯೋ 'ಸಾಗು' ಎಂದೋ, ವಿಶೇಷವಾದ ಬೇರೆ ಅರ್ಥವುಳ್ಳ ಶಬ್ದವೋ, ಏನಿರಬಹುದೆಂದು ಇಲ್ಲಿ ಹೇಳುವುದು ಕಷ್ಟ. 'ಚಕ್ಕಣಂ' ಶಬ್ದದ ಅರ್ಥನಿರ್ಣಯಕ್ಕೆ ಹೇಗೂ ಬಾಧಕವಿಲ್ಲ.

ಪಾನಂ ಗೋಷ್ಠಿಕೆಯದಾ ಪಾನಂ ಶುಂಡಾ ಪ್ರ
ಪಾನು ಕಳ್ಗಡಿಹ ಕಡುಸೊರ್ಕು ಚರ್ಕ್ಕಣಂ
ತಾನದು ಪೆಸರೊಳಿವುಂ (೯೩-೬)

ಇಲ್ಲಿ ಬಂದಿರುವ 'ಚರ್ಕ್ಕಣಂ' 'ಚಕ್ಕಣಂ' ಎಂಬುದರ ಮೊದಲ ರೂಪ ವಿರಲು ಸಾಧ್ಯ. ಬಹುಶಃ ಪಂಪನಲ್ಲಿ, ರೂಢಿಯ ಶಬ್ದವಾಗಿದ್ದ ತರುವಾಯದ ರೂಪ, ಬಳಕೆಯಾಗಿರಬಹುದು. ಈ ಪದ್ಯದಿಂದ ಚಕ್ಕಣವು ಕಳ್ಳಿನ ಅನುಬಂಧಿ ಶಬ್ದವೆಂದು ತಿಳಿಯುಬಹುದಲ್ಲದೆ ಈ ಪದಾರ್ಥ ವಿಶೇಷದ ಪಾತ್ರವೇನೆಂದು ಸ್ಪಷ್ಟಪಡುವುದಿಲ್ಲ.

ಹಳಗನ್ನಡ ಕಾವ್ಯಗಳಲ್ಲಿ ಸಾದೃಶ್ಯಕ್ಕಾಗಿ ಎತ್ತಿಕೊಳ್ಳಲು ಈ ಶಬ್ದಗಳ ಅನ್ಯಪ್ರಯೋಗಗಳು ದೊರೆಯುಂತೆ ಕಾಣುವುದಿಲ್ಲ. ಕನ್ನಡ, ತೆಲುಗು ಮತ್ತು ತುಳು ನುಡಿಗಳ ಪ್ರಮಾಣಿತ ನಿಘಂಟುಗಳಲ್ಲಿ 'ಚಕ್ಕಣಂ' ಶಬ್ದದ ಯಥಾರೂಪವಾಗಲಿ, ವಿಕೃತರೂಪವಾಗಲಿ ಕಾಣುವಂತೆ ತೋರಲಿಲ್ಲ. ತಮಿಳು ಕೋಶದಲ್ಲಿ (Tamil Lexicon) ಇದರ ವಿಕೃತರೂಪವನ್ನು ಕಾಣ ಬಹುದು. 'ಚಾಕ್ಕಣಾಕ್ಕಟಿ' ಎಂಬ ಒಂದು ಮಾತನ್ನು ಇಲ್ಲಿ ಕೊಟ್ಟು, ಅದಕ್ಕೆ 'Meat prepared and sold at taverns to be taken by drunkards along with the drink' ಎಂದು ಅರ್ಥವನ್ನು ಬರೆದಿದೆ. ಕೋಶಕಾರರು ರೂಢಿಯಿಂದ ಈ ಮಾತನ್ನು ಸಂಗ್ರಹಿಸಿದಂತಿದೆ. ಇದು 'ಚಾಖನಾ' ಎಂಬ ಉರ್ದು ಧಾತುವಿನಿಂದ ಜನ್ಯವಾದುದೆಂದು ಸೂಚಿಸಿ, 'ಚಕ್ಷಣ' ಎಂಬ ಸಂಸ್ಕೃತ ಶಬ್ದವನ್ನು ಹೋಲಿಕೆಗೆ ಕೊಟ್ಟಿದೆ.

ಗ್ರಂಥಾಧಾರಗಳು ಮತ್ತು ನಿಘಂಟುವಿನ ಉಲ್ಲೇಖ ದುರ್ಲಭವಾಗಿ ರುವ ಈ ಶಬ್ದ ಕಳ್ಳಂಗಡಿಯಲ್ಲಿ ಕಳ್ಳಿನಷ್ಟೇ ಸುಪರಿಚಿತ. ಪಡಖಾನೆಯಿರು ವಲ್ಲಿ ಕಳ್ಳಿರುವಂತೆ, ಕಳ್ಳಿರುವೆಡೆ ಚಕ್ಕಣವಿರುತ್ತದೆ. ರೂಢಿಯಲ್ಲಿ ಇದನ್ನು "ಚಾಕಣ" ಎನ್ನುತ್ತಾರೆ. ಕನ್ನಡಿಗರೂ, ತಮಿಳರೂ, ತೆಲುಗರೂ, ತುಳು ವರೂ ಸಮಾನವಾಗಿ ಈ ಶಬ್ದವನ್ನು ಬಳಸುತ್ತಾರೆ. ಉರ್ದು ತಾಯಿನುಡಿಯ ಜನರೂ ಹೇಳುತ್ತಾರೆ. ಕಳ್ಳಂಗಡಿಯ ವಿತರಣೆಗಾರರಾದ ನನ್ನ ಪರಿಚಯದ ಮಹನೀಯರೊಬ್ಬರು ಇದರ ಬಗೆಗೆ ಹೀಗೆ ಹೇಳುತ್ತಾರೆ: 'ಕಳ್ಳು ವ್ಯಾಪಾರ

ದಲ್ಲಿ ಚಾಕಣದ ಪಾತ್ರ ಹಿರಿದು. ಆ ವ್ಯಾಪಾರ ಸುಸೂತ್ರವಾಗಿ ನಡೆದು ಕೊಂಡು ಹೋಗಲು ಇದು ಇರಲೇಬೇಕು. ಇದನ್ನು ಸಾಮಾನ್ಯವಾಗಿ ಮಾಂಸವ್ಯಾಪಾರಿಗಳು ಒದಗಿಸುತ್ತಾರೆ, ಕಳ್ಳಿನ ರುಚಿಯನ್ನು ಹೆಚ್ಚಿಸಲು ಚಾಕಣವು ಇಷ್ಟವಾದೊಂದು ವ್ಯಂಜಕದ್ರವ್ಯ. ಬಿರಿಯಾನಿಯಂತಹ ಉತ್ತಮ ದರ್ಜೆಯ ಮಾಂಸವ್ಯಂಜನಗಳಿಗಿಂತ ಚಾಕಣವನ್ನೇ ಕಳ್ಳಿನೊಡನೆ ಹೆಚ್ಚಾಗಿ ಕುಡುಕರು ಅಪೇಕ್ಷಿಸುತ್ತಾರೆ. ಚಾಕಣವು ಮೂರನೆಯ ದರ್ಜೆ ವ್ಯಂಜನ ವಾದರೂ ಬಳಸುವ ಸಾಮಗ್ರಿಗಳೇನೋ ಒಳ್ಳೆಯವೆ! ಪ್ರಾಣಿಗಳ ಕಣ್ಣು, ನಾಲಿಗೆ, ಕರುಳು, ಕಾಲು ಮುಂತಾದ ಸೂಕ್ಷ್ಮಾಂಗಗಳನ್ನು ಕೆಲವು ಸಂಬಾರ ಪದಾರ್ಥಗಳೊಡನೆ ಬೇಯಿಸಿ ಮಾಡಲಾಗುತ್ತದೆ. ವಿಶೇಷವಾಗಿ ಖಾರದ ರುಚಿಗಾಗಿ ಮೆಣಸು, ಕಡಲೆಗಳನ್ನು ಇದರೊಂದಿಗೆ ಸೇರಿಸಲಾಗುತ್ತದೆ (ನೋಡಿ: 'ಮೆಣಸುಗಡಲೆಯ ಪುಡಿಯೊಳಡಸಿದ....') ಇದನ್ನು ಕಳ್ಳಿನೊಡನೆ ಯಾವಾಗ ಬೇಕೆನಿಸಿದರೂ ಸ್ವೇಚ್ಛೆಯಿಂದ ಕುಡುಕರು ಉಪಯೋಗಿಸುತ್ತಾರೆ. ಆಗಾಗ್ಗೆ ಇತರ ಸಂದರ್ಭಗಳಲ್ಲಿಯೂ ಚಾಕಣವನ್ನು ಮನೆಯಲ್ಲಿಯೂ ತಯಾರಿಸಿ ಬಳಸುವುದುಂಟು.[2]

ಈ ಹೇಳಿಕೆಗಳಿಂದ ನಾವು 'ಚಕ್ಕಣ' ಎಂದರೆ 'ಕಳ್ಳಿನೊಡನೆ ರುಚಿಗಾಗಿ ನೆಂಜಿಕೊಳ್ಳುವ ಮಾಂಸದ ಒಂದು ವ್ಯಂಜಕ ದ್ರವ್ಯ' ಎಂದು ತಿಳಿಯಬಹುದು. ಮೇಲೆ ಉದ್ಧರಿಸಿದ ಕಾವ್ಯಭಾಗಗಳಲ್ಲಿ ಈ ಶಬ್ದವು ಈ ಅರ್ಥದಲ್ಲಿಯೇ ಬಂದಿರುವುದೆಂದು ಹೇಳಬಹುದು.[3] ಸೂಳೆಗೇರಿಯ ಒಂದೆಡೆಯಲ್ಲಿ ಕಾಂತೆ

---

2 ಕಳ್ಳು ಕುಡಿವ ತುಳುವರಲ್ಲಿ 'ಚಾಕಣ'ವು ರೂಢಿಯ ಮಾತು. ಪಡಖಾನೆಯ ಬಳಿ ಇದನ್ನು ಮಾರುವಾತನನ್ನು 'ಚಾಕಣದ ಪೊರ್ಬು' ಎಂದು ಕರೆಯುವರೆಂದು ನನ್ನ ಮಿತ್ರರೊಬ್ಬರು ಹೇಳುತ್ತಾರೆ.

3 ಪಂಪಭಾರತದ ೪-೮೭ವ. ದಲ್ಲಿ ಬಂದಿರುವ 'ಚಕ್ಕಣ' ವ್ಯಂಜನದ ಬಣ್ಣನೆಯಲ್ಲಿ ಸಂಬಾರ ಪದಾರ್ಥಗಳೆನ್ನಬಹುದಾದ ಪದಾರ್ಥಗಳನ್ನು ಮಾತ್ರ ಹೇಳಿರುವಂತಿದೆ. ಮಾಂಸೇತರ ಸಾಮಗ್ರಿಗಳಿಂದಲೂ ಈ ವ್ಯಂಜನವನ್ನು ತಯಾರಿಸುತ್ತಿದ್ದಿರಬಹುದು. ಈ ವಚನಭಾಗದಲ್ಲಿ ಬರುವ 'ಅಲ್ಲವಲ್ಲಣಿಗೆ' ಎಂಬ ಶಬ್ದಕ್ಕೆ ಪಂಪಭಾ. ನಿಘಂಟಿನಲ್ಲಿ ಪ್ರಶ್ನಚಿಹ್ನೆಯಿದೆ.

ಯುರು ಮೊದಲು ಬಾಯಿಯ ರುಚಿ ಪಟುಗೊಳ್ಳಲು ‘ಚಕ್ಕಣ’ವನ್ನು ಸವಿದು, ಆಮೇಲೆ ಕಳ್ಳನ್ನು ಕುಡಿವರು ಎಂಬುದು ಸರಿ. ಅರ್ಜುನನ ಮುಂದೆ ಹಲವು ಹೊಸ ಸೊಗಸುಗಳನ್ನು ಹಾಡಿ ತೋರಿದ ಒಬ್ಬಳು ಮೋಹಕವಾಗಿ ಗೀತೆಯನ್ನು ಹಾಡಿದ ಪರಿ ಕಳ್ಳಿನ ಸೊಕ್ಕು ಹಿಡಿಯುವಂತೆ, ಸಾರಿ ಬಂದ ಪರಿ (?) ಗೀತೆಯ ಮೋಹಕತೆಗೂ ಮಿಗಿಲಾಗಿ ಕಳ್ಳಿನೊಡನೆ ಚಕ್ಕಣವನ್ನು ಸವಿದಂತೆ ಇದ್ದಿತೆಂಬುದು ಬಣ್ಣನೆಗೆ ಸಹಜ.

ಎರಡನೆಯ ನಿದರ್ಶನದಲ್ಲಿ ಪರಿಹಾರವಾಗಬೇಕಾದ ಒಂದು ಸಣ್ಣ ತೊಡಕುಂಟು. ಅಕ್ಷರಂ>ಅಕ್ಕರಂ, ಲಕ್ಷಣಂ>ಲಕ್ಕಣಂ ಎಂಬ ತದ್ಭವಶಬ್ದಗಳಂತೆ ಚಕ್ಷಣಂ>ಚಕ್ಕಣಂ ಆಗಬಹುದು. ‘ಚಕ್ಷಣಂ’ ಶಬ್ದಕ್ಕೆ ಸಂಸ್ಕೃತ ನಿಘಂಟಿನಲ್ಲಿ ತೋರುವಿಕೆ, ಕಾಣುವಿಕೆ ಎಂಬರ್ಥವೂ ಉಂಟು[4]. ‘ಕಣ್ಗೆ’ ಎಂಬ ಪಾಠವನ್ನು ಈಯರ್ಥದ ಚಕ್ಕಣದೊಂದಿಗೆ ಹೊಂದಿಸಿದರೆ ಸರಿ ಹೊಂದದೆ? ಆದರೆ ಇಲ್ಲಿ ಪುನರುಕ್ತಿಯ ಆಕ್ಷೇಪವಿರಲಿ, ‘ಗೇಯದೋಳಿಕೆ ಸೊರ್ಕನಿಕ್ಕಿದಳೆನೆ’ ಎಂಬ ಮಾತಿನ ಸ್ವಾರಸ್ಯವು ಅರ್ಥದಲ್ಲಿಯೇ ಕಡಿದಂತಾಗುತ್ತದೆ. ‘ಚಕ್ಷಣಂ’ ಶಬ್ದಕ್ಕೆ ಸಂಸ್ಕೃತ ನಿಘಂಟಿನಲ್ಲಿ ‘Eating a relish to promote appetite’ ಎಂದೂ (Apte's), ‘Eating a relish to promote drinking’ ಎಂದೂ (Monier Williams') ಅರ್ಥಗಳನ್ನು ಹೇಳಿರುವುದು ನಮ್ಮ ಪೂರ್ವ ನಿರ್ಧಾರಕ್ಕೆ ಪೋಷಕವಾಗುತ್ತದೆ. ಅಲ್ಲದೆ ೪-೮೭ವ. ದಲ್ಲಿ ಈ ಶಬ್ದದ ಔಚಿತ್ಯವನ್ನು ನಾವು ಮನಗಂಡಿದ್ದೇವೆ. ಆದುದರಿಂದ ಇಲ್ಲಿ ಈ ಶಬ್ದವನ್ನು ಕವಿಯು ಕಳ್ಳಿನ ಸಲುವಾಗಿ ಬಳಸಿರುವನಲ್ಲದೆ ಕಾಣ್ಕೆಯ ಸಲುವಾಗಿ ಬಳಸಿಲ್ಲವೆಂದು ಒಪ್ಪಬೇಕಾಗುತ್ತದೆ. ‘ಕಳ್ಗೆ ಚಕ್ಕಣಮೆನಿಪ್ಪುದು—’ ಎಂಬುದು ಉಚಿತ ಪಾಠವೆಂದು ಗ್ರಹಿಸಬೇಕು.

---

4 ತೋರ್ಕೆ, ಕಾಣ್ಕೆಯೆಂಬರ್ಥದಲ್ಲಿ (?) ‘ಸಮಯ ಪರೀಕ್ಷೆ’ಯ ೧೨-೨೪ರಲ್ಲಿ ಈ ಶಬ್ದವಿರುವುದು ಕಾಣುತ್ತದೆ. ಆದರೆ ಈ ಪದ್ಯಪಾಠ ಅಶುದ್ಧವೂ ಅರ್ಥವು ಅಸ್ಪಷ್ಟವೂ ಆಗಿದೆ.

ಈ ಮೂಪ್ರ್ ೧೯೩೫ರ ಎರಡನೆಯ (ಹೊಸ) ಮುದ್ರಣದ ವೇಳೆಗೆ ಸಂಪಾದಕರಿಗೆ ಮನವರಿಕೆಯಾಗಿ ಹಿಂದಿನ ಪಾಠಗಳು ತಿದ್ದುಪಡಿಯಾಗಿವೆ. ಪತ್ತೆ ನಿಘಂಟಿನ ಪುನರ್ವಿಮರ್ಶೆಯಾಗಿ ಪೂರ್ಣಗ್ರಂಥದ ಹೊಸ ಮುದ್ರಣ ಹೊರಬೀಳದೆ, ೧೯೩೧ರ 'ಪಂಪಭಾ. ನಿಘಂಟಿ'ನಲ್ಲಿ 'ಚಕ್ಕಣ'ವು ಪ್ರಶ್ನಚಿಹ್ನೆಯ ಶಬ್ದವಾಗಿಯೇ ಉಳಿದುಕೊಂಡಿತು. ಈ ಟಿಪ್ಪಣಿಕಾರನಿಗೆ ಸತ್ತಹುಲಿಯ ಬಾಲವನ್ನೆಳೆದು ಶೂರನಾಗುವ ಪ್ರಸಂಗವೊಂದು ಹುಟ್ಟಿಕೊಂಡಿತು !

ಇನ್ನು ಈ ಶಬ್ದದ ವ್ಯುತ್ಪತ್ತಿಯನ್ನು ಕುರಿತು ತೋರಬಹುದಾದ ಒಂದೆರಡು ಸಂದೇಹಗಳು.

ಸಂಸ್ಕೃತ ನಿಘಂಟಿನಲ್ಲಿ "ಚಕ್ಷಣಂ" ಶಬ್ದಕ್ಕೆ ಧಾತುಮೂಲದ ಸೂಚನೆಯಾಗಲಿ ಪ್ರಯೋಗವಾಗಲಿ ಕಾಣುವುದಿಲ್ಲ. ಬೇರೆ ನಿಘಂಟುವಿನ ಆಧಾರದಿಂದ ಈ ಶಬ್ದಾರ್ಥವನ್ನು ಸೂಚಿಸಿರುವುದು ಕಾಣುತ್ತದೆ.[5] ಚರ್, ಚಷ್, ಜಕ್ಷ್ (=ಜಕ್ಷಣಂ) ಧಾತುಗಳಿಗೆ 'ತಿನ್ನು' ಎಂಬರ್ಥವಿದೆಯಾದರೂ ಈ ಶಬ್ದವು ಇವುಗಳಿಂದಾದ ಜನ್ಯ ಶಬ್ದವಾಗಿ ಕಾಣುವುದಿಲ್ಲ. ಉರ್ದು ಹಿಂದಿಗಳಲ್ಲಿ ಚಖ (ನ), ಚಾಖ (ನ) ಎಂಬ ಧಾತುಗಳು 'ರುಚಿ ನೋಡು' ಎಂಬರ್ಥದಲ್ಲಿದ್ದು ಇವುಗಳ ನಾಮರೂಪ ಚಿಖೌನಾ, ಚಿಖೌನೀ ಎಂದಾಗುತ್ತವೆ.

---

[5] ಹಲಾಯುಧನ 'ಅಭಿಧಾನ ರತ್ನಮಾಲೆ'ಯ ಈ ಪದ್ಯವನ್ನು ಟೀಕೆಯೊಡನೆ ನೆನೆದುಕೊಳ್ಳಬಹುದು :

ಆಪಾನಂ ಪಾನಗೋಷ್ಠೀಸ್ಯಾತ್ ಸಪೀತಿಃ ಸಹಪಾನಕಂ
ಉಪದಂಶಾವದಂಶೌ ಚ ಭ (ಚ) ಕ್ಷಣಂ ಸಂಪ್ರಚಕ್ಷತೇ (೫೪-೧೭೩)

ಟೀಕೆ॥ ಇದರಲ್ಲಿ ಆಪಾನಂ, ಪಾನಗೋಷ್ಠೀ—ಈ ೨ ಕಳ್ಳುಗುಡಿವುದು ; ಸಪೀತಿಃ, ಸಹಪಾನಕಂ_ ಈ ೨ ಗೋಟ್ಟಿಗಳ್ಗುಡಿವುದು ; ಉಪದಂಶಃ, ಅವದಂಶಃ, ಭಕ್ಷಣಂ-ಈ ೩ ಕುಡಿವುತ್ತೆ ಬಾಡಿಸುವುದು.

ಇಲ್ಲಿ 'ಉಪದಂಶಃ', 'ಅವದಂಶಃ'-ಎಂಬ ಶಬ್ದಗಳ ಅರ್ಥಕ್ಕೆ ಅನುಗುಣವಾಗಿ ಇರಬೇಕಾದರೆ ಪದ್ಯದಲ್ಲಿಯೂ ಟೀಕೆಯಲ್ಲಿಯೂ 'ಚಕ್ಷಣಂ' ಎಂದಿರಬೇಕು. ಪದ್ಯಪಾಠದಲ್ಲಿ ಚಕಾರವು ಆವರಣ ಚಿಹ್ನೆಯಲ್ಲಿದೆ. ಚಕಾರವು ಭಕಾರವಾಗಿ ಟೀಕೆಯಲ್ಲಿ ತಪ್ಪಾಗಿ ಲಿಖಿತಗೊಂಡಿದೆಯೆನ್ನಬಹುದು.

ಸ್ವಾದಕ್ರಿಯೆ, ಸ್ವಾದವಸ್ತು ಎರಡರಲ್ಲಿಯೂ ಇವು ಪ್ರಯುಕ್ತ, ಸುರಾ ಸಹಚರಿಯಾದ ಈ ವ್ಯಂಜನಕ್ಕೆ 'ಚಾಕಣ' ಎಂಬ ಹೆಸರನ್ನು ದಾಕ್ಷಿಣಾತ್ಯರಾದ ಮುಸ್ಲಿಮರು ಹೇಳುವರಲ್ಲದೆ ಔತ್ತರೇಯರಾದವರು ಹೇಳುವುದಿಲ್ಲವೆಂದು ತಿಳಿದು ಬರುತ್ತದೆ. ಉರ್ದು, ಪರ್ಶಿಯನ್, ಹಿಂದಿ ನಿಘಂಟುಗಳಲ್ಲಿ ಈ ಶಬ್ದ ವಿದ್ದಂತಿಲ್ಲ. ಸಂ. 'ಚಕ್ಷಣ' ಶಬ್ದದ ತದ್ಭವರೂಪವೆಂದು 'ಚಕ್ಕಣ' ಶಬ್ದವನ್ನು ಒಪ್ಪಿಕೊಳ್ಳುವಲ್ಲಿ ನಾಗವರ್ಮನ ಪ್ರಯೋಗವಾದ 'ಚಕ್ಕಣ' ಶಬ್ದರೂಪ ಮಧ್ಯೆ ತೊಡಕಾಗಿ ನಿಲ್ಲುತ್ತದೆ. ಆದುದರಿಂದ ಇದು ದೇಶ್ಯವೇ, ತದ್ಭವ ರೂಪವೇ, ಅನ್ಯದೇಶ್ಯವೇ ಎಂಬುದು ತಿಳಿದವರು ನಿರ್ಧರಿಸಬೇಕಾದ ಅಂಶ.

೧೯೬೧]

'ಗದಾಯುದ್ಧ'ದ ಒಂದು ಪದ್ಯ

೧. ಸಂಜಯನು ಕುರುರಾಜನನ್ನು ಉದ್ದೇಶಿಸಿ ಅರ್ಜುನ ಭೀಮರ ಸಾಹಸಾತಿಶಯವನ್ನು ಅವನೆದುರು ವರ್ಣಿಸುವಾಗ ಪಾರ್ಥನ ಬಿಲ್ಬಲ್ಮೆಯನ್ನು ಕುರಿತ ಈ ಒಂದು ಪದ್ಯವನ್ನು ರನ್ನನು (ಕ್ರಿ.ಶ.೯೯೦–೧೦೨೦) ಬರೆದಿದ್ದಾನೆ :

ದೊಣೆಯಿಂದಂ ತೆಗೆವಾಗಳೊಂದು ತುಡುವಾಗಳ್ ಪತ್ತು ಬಾಣಂ ಧನು
ರ್ಗುಣದಿಂದಂ ಬಿಡುವಲ್ಲಿ ನೂಱು ಪರಿವಾಗಳ್ ಸಾಸಿರಂ ವೈರಿಮಾ
ರ್ಗಣವಂ ಭೇದಿಸುವಲ್ಲಿ ಲಕ್ಕ ನಡುವಾಗಳ್ ಕೋಟಿ ಸೇನಾಂಗದೊಳ್
ಗಣನಾತೀತಮಿದೆಂದೊಡೇಂ ಪೊಗಳ್ವುದೋ ಬಿಲ್ಬಲ್ಮೆಯಂ ಪಾರ್ಥನಾ
(ಗದಾಯು , ೩-೩)

ಪಾರ್ಥನ ಸಾಹಸದ ನಿರೂಪಣೆ ಮಾಡ ಮೇಲೆ ಸಾಹಸಭೀಮನ ಸಾಹಸಾ ತಿಶಯವನ್ನೇ ಮುನ್ನೆಲೆಗೆ ತಂದು ವಿವರವಾಗಿ ಬಣ್ಣಿಸುವಾಗ ಈ ಪದ್ಯ

ಬಂದಿವೆ. ಇಲ್ಲಿ ಅನುಕ್ರಮ ಕೊಂಚಮಟ್ಟಿಗೆ ತಪ್ಪಿತೆಂದು ತೋರುವುದು ಸಹಜ. ಆದರೆ ಮುಖ್ಯವಾಗಿ ನಮ್ಮ ಗಮನ ಹರಿಯುವುದು ಈ ಪದ್ಯದ ಸ್ವಾರಸ್ಯದ ಕಡೆಗೆ. ಪಾರ್ಥನು ಬಾಣಪ್ರಯೋಗದಲ್ಲಿ ಪಡೆದಿದ್ದ ಅಪೂರ್ವಕೌಶಲ ಅಸಾಮಾನ್ಯಸಿದ್ಧಿ ಅದ್ಭುತವಾಗಿತ್ತು, ಪರಿಣಾಮದಲ್ಲಿ ಅಪ್ರತಿಹತವಾಗಿತ್ತು, ಎಂಬುದನ್ನು ಈ ಪದ್ಯ ಮನೋಜ್ಞವಾಗಿ ನಿರೂಪಿಸಿದೆ. ಪಾರ್ಥನು ಯಾವುದೇ ಒಂದು ಅಸ್ತ್ರವನ್ನು ಬಿಲ್ಲಿಗೆ ಹೂಡಿ ಬಿಡುತ್ತಿದ್ದನು, ಅದು ತನ್ನ ಮಹಿಮೆಯಿಂದ ಒಂದು ಹತ್ತಾಗಿ ಹತ್ತು ನೂರಾಗಿ ಹಾಗೆಯೇ ವೃದ್ಧಿಗೊಂಡು ಶತ್ರುಪಕ್ಷದ ಸಮಸ್ತ ಚತುರಂಗಬಲವನ್ನೂ ವ್ಯಾಪಿಸುವಾಗ ಗಣನಾತೀತವಾಗುತ್ತಿತ್ತು ಎಂಬುದು ಇಲ್ಲಿ ಸಾಮಾನ್ಯವಾಗಿ ತೋರುವ ಅಭಿಪ್ರಾಯ. ಆದರೆ ಪಾರ್ಥನು ಶತ್ರುವಿನ ಕಣ್ಮನಗಳು ಅರಿಯಲಾಗದಷ್ಟು ಅತ್ಯಲ್ಪ ಕಾಲದಲ್ಲಿಯೇ ಕೋಟ್ಯಂತರ ಬಾಣಗಳನ್ನು ಹೂಡಿ ಬಿಡುತ್ತಿದ್ದುದರ ಬಾಣಪ್ರಯೋಗದ ವೇಗಾಯ್ಲ ತನವನ್ನು ಇಲ್ಲಿ ಚಮತ್ಕಾರವಾಗಿ ಹೇಳಿದೆಯೆಂದೂ ತಿಳಿಯಲಾಸ್ಪದವಿದೆ.

೨. ಕರ್ಣಪಾರ್ಯನ (ಸು. ೧೧೪೦) 'ನೇಮಿನಾಥ ಪುರಾಣ'ದಲ್ಲಿಯೂ ಅರ್ಜುನನ ಬಿಲ್ಬಲ್ಮೆಯನ್ನು ವರ್ಣಿಸುವ ಒಂದು ಸಂದರ್ಭವುಂಟು. ಅಭಿಮನ್ಯುವಿನ ಸಾವಿಗೆ ಕಾರಣನಾದ ಸೈಂಧವನನ್ನು ಕೊಲ್ಲಬೇಕೆಂದು ಅರ್ಜುನನು ಸಂಕಲ್ಪಿಸಿದನು. ಮಾರನೆಯ ದಿನ ಕೌರವನು ಒಡ್ಡಿದ ಚಕ್ರವ್ಯೂಹವನ್ನು ಭೇದಿಸಿಕೊಂಡು ಮಹಾವೀರರನ್ನು ನಿಗ್ರಹಿಸುತ್ತ ವ್ಯೂಹಮಧ್ಯಸ್ಥಿತನಾದ ಸೈಂಧವನನ್ನು ಸಮೀಪಿಸಿದನು. ಜಯದ್ರಥನಾದರೋ ಅಂಜುಕುಳಿಯಂತೆ ಹದುಗಿರದೆ ಸೈನ್ಯ ಸಮೇತನಾಗಿ ಅರ್ಜುನನನ್ನು ಎದುರಿಸಲು ನುಗ್ಗಿದನು. ಆಗ ಅರ್ಜುನನು ಹಸಿದ ಹೆಬ್ಬುಲಿಯಂತೆಯೂ ಬೇಸಗೆಯ ನಡುಹಗಲ ಕಾಳ್ಗಿಚ್ಚಿನಂತೆಯೂ ಕೆರಳಿ ಆ ಸೈಂಧವನ ಸೈನ್ಯದ ಮೇಲೆ ಬಾಣಪ್ರಯೋಗಮಾಡಿ ಕೊಲ್ಲತೊಡಗಿದನು. ಇದು ಆತನ ಬಿಲ್ಬಲ್ಮೆಯನ್ನು ಹೇಳುವ ಪದ್ಯ :

ಶರಧಿಯಿನುರ್ಚಲೊಂದೆ ತಿರುವಾಯೊಳೆ ಪತ್ತು ಸಮಂತು ಮತ್ತಮಾ
ಶರಮೆ ಬಿಡಲ್ಕೆ ನೂಱು ಪರಿವಲ್ಲಿಯೆ ಸಾಸಿರಮನ್ಯಶಸ್ತ್ರಮಂ
ನಿರುತಮೆ ಖಂಡಿಪಲ್ಲಿ ಸಲೆ ಲಕ್ಕ ವಿರೋಧಿಯನುರ್ಚೆ ಕೋಟಿಯೂ
ಗಿರೆ ನರನೆಚ್ಚು ಸೈಂಧವನ ಸೈನ್ಯಮನಾಕ್ಷಣದಿಂದಮಿಕ್ಕಿದಂ

(ನೇಮಿಪು., ೧೨-೭೫.)

ಪಂಪ ರನ್ನರ ಕೃತಿಗಳಿಂದ ಪ್ರಭಾವಿತನಾದ, ಅವರನ್ನು ಅನುಕರಿಸಿ, ಕೆಲವೊಮ್ಮೆ ಅಲ್ಲಿಯ ಅಭಿಪ್ರಾಯಗಳನ್ನೂ ಮಾತುಗಳನ್ನೂ ಅಲ್ಪಸ್ವಲ್ಪ ವ್ಯತ್ಯಾಸಮಾಡಿಯೂ ಯಥಾವತ್ತಾಗಿಯೂ ಎತ್ತಿಕೊಂಡು ಹೊಂದುವಂತೆ ಬಳಸುವ ಕರ್ಣಪಾರ್ಯನಿಗೆ ಈ ಪದ್ಯವನ್ನು ಬರೆಯುವಲ್ಲಿ ರನ್ನನ ಪದ್ಯವೇ ಸ್ಫೂರ್ತಿನೀಡಿರಬೇಕು, ಮಾದರಿಯಾಗಿರಬೇಕು ಎಂದು ತೋರುತ್ತದೆ. ಹೆಚ್ಚೇನೂ ವ್ಯತ್ಯಾಸಗಳಿಲ್ಲದೆ ರನ್ನನ ಪದ್ಯವನ್ನು ಕರ್ಣಪಾರ್ಯನ ಪದ್ಯ ಹೋಲುತ್ತದೆಯೆಂಬುದು ಸ್ಪಷ್ಟ. ಬಿಟ್ಟ ಬಾಣವು ಸೇನಾಂಗದಲ್ಲಿ ಎಂದರೆ ಚತುರಂಗಬಲದಲ್ಲಿ ಗಣನಾತೀತವಾಯಿತೆಂಬ ಒಂದು ಅಂಶವು ಇಲ್ಲಿ ಕಾಣದಿದ್ದರೂ ನಿರೂಪಣೆಯಲ್ಲಿ ಸಮೀಪ ಸಾದೃಶ್ಯವಿದೆ ; ಅನುಸರಣೆಯ ಸುಳುವಿದೆ.

೬. ವಿಡಂಬನ ಕವಿ ಬ್ರಹ್ಮಶಿವನು (ಸು. ೧೨೦೦) 'ಸಮಯಪರೀಕ್ಷೆ' ಯಲ್ಲಿ ಅಲ್ಲಲ್ಲಿ ವೈದಿಕ ಪೌರಾಣಿಕ ಸಂಗತಿಗಳನ್ನೂ ಸಂಪ್ರದಾಯಗಳನ್ನೂ ಪುರಾಣೇತಿಹಾಸಗಳ ಪ್ರಸಂಗಗಳನ್ನೂ ನಿಷ್ಠುರತೆಯಿಂದಲೂ ನಿರ್ಲಜ್ಜೆಯಿಂದಲೂ ಟೀಕಿಸಿ ಅಪಹಾಸ್ಯಮಾಡುತ್ತಾನೆ. ಕವಿರತ್ನತ್ರಯರ ಬಗೆಗೆ ಗೌರವವಿರುವ ಈ ಕವಿ ಅವರ ಕೃತಿಗಳನ್ನು ಓದಿದ್ದರೂ ಅಲ್ಲಿಯ ಸಂಗತಿಗಳನ್ನು ಬಳಸಿಕೊಂಡು ಕೆಲವೊಮ್ಮೆ ಅಪಹಾಸ್ಯಮಾಡಿರುವಂತೆ ತೋರುತ್ತದೆ. ಅಂಥವುಗಳಲ್ಲಿ ಇದೊಂದು :

ತೊಡುವಾಗಳೊಂದು ಬಿಲ್ಲಿಂ
ಬಿಡುವಾಗ [ಳ್] ಲಕ್ಕೆ ವೈರಿಸೇನೆಯ ಮೊನೆಯೊ
ಳ್ನಡುವಾಗ ಕೋಟಿಯಪ್ಪುವ
ವೆಡ ಪಾರ್ಥ ಬಾಣಪೆಂಬರಿನ್ನವು ಪುಸಿಗಳ್ (ಸಮಯ. ೧೦-೧೭೦)

ಈ ಪದ್ಯವನ್ನು ಬರೆಯುವಾಗ ಬ್ರಹ್ಮಶಿವನು ರನ್ನನ ಅಥವಾ ಕರ್ಣಪಾರ್ಯನ ಸದೃಶ ಪದ್ಯವನ್ನು ಓದಿದ್ದು ಅದನ್ನೇ ಟೀಕಿಸುತ್ತಿರಬಹುದೆಂದು ಸಹಜವಾಗಿ ತೋರುತ್ತದೆ. ಕರ್ಣಪಾರ್ಯ ಬ್ರಹ್ಮಶಿವರ ಪೌರ್ವಾಪರ್ಯ ವಿಚಾರದಲ್ಲಿ ಸಂದಿಗ್ಧತೆ ಇರುವುದರಿಂದಲೂ, ರನ್ನನ ಪದ್ಯದೊಡನೆಯೇ ಸಮೀಪತರ ಶಬ್ದಸಾದೃಶ್ಯ ತೋರುವುದರಿಂದಲೂ, ಬ್ರಹ್ಮಶಿವನು ರನ್ನನ ಪದ್ಯವನ್ನೇ ಕುರಿತಿರುವ ಸಂಭವ ಹೆಚ್ಚೆಂದು ಹೇಳಬಹುದು. ತನಗೊಪ್ಪದುದನ್ನು ಎತ್ತಿ ಟೀಕಿಸು

ವಾಗ ಮೂಲದ ಸೊಗಸನ್ನು ಹಿಸುಕಿ ಹಿಪ್ಪೆಮಾಡಿ ತಪ್ಪಾಗಿ ಎತ್ತಿ ಆಡಿರುವುದು ನೋಡಿದರೆ 'ಇನ್ನವು ಪುಸಿಗಳ್' ಎಂದು ಬ್ರಹ್ಮಶಿವನಿಗೇ 'ಏಕೆ ಹೇಳಬಾರದೆನಿ ಸುತ್ತದೆ !

೪. ಇಂದ್ರಕೀಲ ನಗದಲ್ಲಿ ಅರ್ಜುನನು ತಪಸ್ಸಾಧನೆಯಿಂದ ಪರಮೇಶ್ವರನನ್ನು ಒಲಿಸಿಕೊಂಡು ಅವನಿಂದ ಬ್ರಹ್ಮಶಿರೋಸ್ತ್ರವನ್ನೂ ಪಾಶು ಪತಾಸ್ತ್ರವನ್ನೂ ಪಡೆದದ್ದು 'ಕುಮಾರವ್ಯಾಸ ಭಾರತ'ದ (ಸು. ೧೪೦೦) ಅರಣ್ಯಪರ್ವದಲ್ಲಿ ಒಂದು ಮುಖ್ಯವಾದ ಪ್ರಸಂಗ. ಆ ಸಂದರ್ಭದಲ್ಲಿಯೇ ಅರ್ಜುನನು ಪಾರ್ವತಿಯನ್ನೂ ಸ್ತುತಿಸಿ ವಂದಿಸಿ ಅವಳ ಕೃಪೆಗೆ ಪಾತ್ರನಾದಾಗ ಆಕೆಯೂ ಅವನಿಗೆ ಅಂಜನಾಸ್ತ್ರವನ್ನಿತ್ತು ಅನುಗ್ರಹಿಸುತ್ತಾಳೆ. ಹಾಗೆ ಅದನ್ನು ಕೊಟ್ಟು ಮಂತ್ರೋಪದೇಶ ಮಾಡುವಾಗ ಈ ಪದ್ಯ ಬಂದಿದೆ :

ಒಂದು ದಶ ಶತ ಸಾವಿರದ ಹೆಸ
ರಿಂದ ಲಕ್ಷವು ಕೋಟಿಯಗಣಿತ
ದಿಂದ ನಿನಗಾಂತದಟರಿಪುಗಳ ತಿಂದು ತೇಗುವುದು
ಬಂದು ಬೆಸನನು ಬೇಡುವುದು ತಾ
ನೊಂದು ಶರರೂಪಾಗೆನುತ ಮುದ
ದಿಂದ ವರ ಮಂತ್ರೋಪದೇಶವನಿತ್ತಳರ್ಜುನಗೆ

(ಕುವ್ಯಾಭಾ. ಅರಣ್ಯ., ಸಂ. ೬, ಪ. ೧೦೬)

'ಒಂದು ಬಾಣವೇ ಹತ್ತಾಗಿ ನೂರಾಗಿ ಬೆಳೆಯುತ್ತ ಹೋಗಿ ಕೊನೆಗೆ ಕೋಟಿಯಾಗಿ ವ್ಯಾಪಿಸಿ ಪ್ರತಿಭಟಿಸಿದ ಶತ್ರುಸೇನೆಯನ್ನು ತಿಂದು ತೇಗುವುದು ; ಅದಾದ ಮೇಲೆ ಮತ್ತೆ ಒಂದು ಶರರೂಪವಾಗಿ ತನ್ನಲ್ಲಿಗೇ ಬಂದು ತನ್ನ ಅಪ್ಪಣೆ ಯನ್ನು ಬೇಡುವುದು'—ಎಂದು ಪಾರ್ವತಿ ತಾನಿತ್ತ ಅಂಜನಾಸ್ತ್ರದ ಮಹಿಮೆ ಯನ್ನು ಅರ್ಜುನನಿಗೆ ತಿಳಿಸಿದಳು. ಅಂಜನಾಸ್ತ್ರ ಪ್ರಯೋಗದ ವಿಚಾರದಲ್ಲಿ, ಅಸ್ತ್ರಸಂಖ್ಯೆ ಉತ್ತರೋತ್ತರವಾಗಿ ವೃದ್ಧಿಗೊಳ್ಳುವುದೆಂದು ಬಂದಿರುವುದು ಗಮನಾರ್ಹವಾಗಿದೆ. 'ವ್ಯಾಸಭಾರತ'ದ ಕೈರಾತ ಪರ್ವದಲ್ಲಾಗಲಿ ಭಾರವಿಯ 'ಕಿರಾತಾರ್ಜುನೀಯ'ದಲ್ಲಾಗಲಿ ಅರ್ಜುನನಿಗೆ ಶಿವನು ಪಾಶುಪತಾಸ್ತ್ರವನ್ನು ಕೊಟ್ಟಂತೆ ಹೇಳಿದೆಯಲ್ಲದೆ, ಪಾರ್ವತಿಯೂ ಅಂಜನಾಸ್ತ್ರವನ್ನು ಕೊಟ್ಟಂತೆ

ಹೇಳಿಲ್ಲ. ಪ್ರಾಯಶಃ ನಾರಣಪ್ಪನು ಈ ಸಂಗತಿಯ... 'ಪಂಪಭಾರತ'ದಿಂದ ಗ್ರಹಿಸಿರಬಹುದು ಎಂದು ತೋರುತ್ತದೆ.[1] ಹಾಗೆಯೇ ... ನ 'ಗದಾಯುದ್ಧ'ವೂ ಅವನಿಗೆ ಪರಿಚಿತವಿದ್ದು, ಅಲ್ಲಿಯ ಪಾರ್ಥನ ಬಿಲ್ಬಲ್ಮೆ ಕುರಿತಾದ ಪ್ರಸ್ತುತ ಪದ್ಯ ಅವನಿಗೆ ಮೆಚ್ಚಿಕೆಯಾಗಿ ಅದನ್ನು ಸಮಯೋಚಿತವಾಗಿ ಮಾರ್ಪಡಿಸಿ ಇಲ್ಲಿ ಬಳಸಿಕೊಂಡಿರಬಹುದು. ಆ ಪದ್ಯದಲ್ಲಿ ಕಂಡುಬರುವಂತಲ್ಲದೆ ಬಾಣಸಂಖ್ಯೆ ಉತ್ತರೋತ್ತರವಾಗಿ ಬೆಳೆಯಿತೆಂಬುದನ್ನು ಇಲ್ಲಿ ಬೇರೊಂದು ರೀತಿಯಲ್ಲಿ ಸಂಗ್ರಹಿಸಿದೆ. ರನ್ನನ ಪದ್ಯದಲ್ಲಿ ಕಾಣಬರದ ಒಂದು ಹೆಚ್ಚಿನ ಸ್ವಾರಸ್ಯವೂ ಉಂಟು. ಆರಂಭದಲ್ಲಿ ಒಂದಾಗಿ ತೋರುತ್ತಿದ್ದುದು ಅಥವಾ ಒಂದಾಗಿದ್ದುದು ಶತ್ರು ಸೇನೆಯನ್ನು ಕವಿದಾಗ ಅಗಣಿತವಾಗಿ ಅಲ್ಲಿಗೇ ಪರ್ಯವಸಾನಹೊಂದುವಂತೆ ರನ್ನನ ಪದ್ಯದ ಭಾವವಾಗಿದ್ದರೆ, ನಾರಣಪ್ಪನಲ್ಲಿ ಆ ಬಾಣವು ಪಾರ್ವತಿಯಿತ್ತ ಅಂಜನಾಸ್ತ್ರವೆಂಬ ದಿವ್ಯಾಸ್ತ್ರವೆಂಬುದೂ ಅದು ಶತ್ರುಗಳನ್ನು ಕೊಂದ ಮೇಲೆ ಅರ್ಜುನನಲ್ಲಿಗೆ ಮರಳಿ ಬಂದು 'ಬೇಕಾದರೆ ಮತ್ತಿನ ಹೋರಾಟಕ್ಕೂ ಸಿದ್ಧ' ಎಂಬಂತೆ ಅಪ್ಪಣೆಬೇಡುತ್ತದೆಂಬುದೂ ಒಪ್ಪುವ ಮಾರ್ಪಾಡು. ಈ ಮಾರ್ಪಾಡು ಮುಂದೆ ಷಡಕ್ಷರಿಯಲ್ಲಿ ಮೇಲ್ಪಾಡಾಯಿತು.

೫. ಕುಮಾರವ್ಯಾಸನದೆಂದು ಸಾಮಾನ್ಯವಾಗಿ ಭಾವಿಸಲಾಗಿರುವ 'ಐರಾವತ'ವೆಂಬ (ಸು. ೧೪೦೦) ಕೃತಿಯಲ್ಲಿ ಬರುವ ಒಂದು ಪ್ರಸಂಗ ಹೀಗಿದೆ: ಗಾಂಧಾರಿಯು ತನ್ನ ಮಕ್ಕಳ ನೆರವಿನಿಂದ ಎರೆಮಣ್ಣು ತರಿಸಿ, ಚಿತ್ರಕರ ಕೌಶಲದಿಂದ ಐರಾವತದ ಹೋಲಿಕೆಯ ಮೃತ್ತಿಕಾಗಜವೊಂದನ್ನು ಮಾಡಿಸಿ ಐರಾವತದ ನೋಂಪಿಯನ್ನು (ಗಜಗೌರೀ ವ್ರತವನ್ನು) ವೈಭವದಿಂದ ನೋಂತಳು. ಆದರೆ ಬನ್ನ ಬವಣೆಗಳನ್ನು ಉಣ್ಣುತ್ತಿದ್ದ ಕುಂತಿಯನ್ನು ಮಾತ್ರ ಪೂಜೆಗೆ ಆಹ್ವಾನಿಸಲಿಲ್ಲ. ಇದರಿಂದ ಕುಂತಿಯು ತುಂಬ ನೊಂದು ತನ್ನ ಅಳಲು ಪಾಡು ಅಶಕ್ತತೆಗಳನ್ನು ತನ್ನ ಮಕ್ಕಳ ಮುಂದೆ ತೋಡಿಕೊಂಡಳು. ಫಲ್ಗುಣನಂ

[1] "ಆಗಳೀಶ್ವರಂ ಕೊಟ್ಟುದರ್ಕೆ ತೆಲ್ಲಂಟಿಯೆಂದು ಗೌರಿದೇವಿಯುಮಂಜರಿಕಾಸ್ತ್ರಮೆಂಬಮೋಘಾಸ್ತ್ರಮುಮಂ ವಿಕ್ರಮಾರ್ಜುನಂಗೆ ಕುಡೆ ." ಎಂಬುದು ಪಂಪಭಾರತದ ಮಾತು (೮-೨೩ ವ). 'ಕುಮಾರವ್ಯಾಸ ಭಾರತ'ದಲ್ಲಿ ಅಂಜನಾಸ್ತ್ರ ಎಂದಿರುವುದಕ್ಕೆ ಆಧಾರ ವೇನೋ ತಿಳಿಯದು.

ದಿಟವ ಐರಾವತವನ್ನೆ ಇಂದ್ರಪುರಿಯಿಂದ ತಂದು ತಾಯಿಂದ ನೋಂಪಿಸಲು ಸಂಕಲ್ಪಿಸಿದನು. ಪಾಂಡವರು ಈ ಉತ್ಸವದ ವಿಷಯವಾಗಿ ಎಲ್ಲರಿಗೂ ಮುಂಚಿತವಾಗಿಯೇ ತಿಳಿಸಿ ಆಹ್ವಾನಿಸಿದರು. ಕೃಷ್ಣನ ಸಲಹೆಯಂತೆ ಐರಾವತದ ಆಗಮನಕ್ಕಾಗಿ ಸ್ವರ್ಗಮರ್ತ್ಯಗಳಿಗೆ ಶರಪಂಜರವನ್ನು ನಿರ್ಮಿಸಲೆಂದು ಅರ್ಜುನನು ತನ್ನ ಕೋದಂಡದಲ್ಲಿ ಬಾಣವೊಂದನ್ನು ತೊಡಿಸಿದನಂತೆ. ಭಿಲ್ಲಗುರುವನ್ನು ನೆನೆದು ಅಣ್ಣನಿಗೆ ಎರಗಿ ತಾಯ ಹರಕೆಗೊಂಡನಂತೆ. ಆಗ ಆದದ್ದೇನು !

ಹಿಡಿದನೊಂದಂಬುವನು ತಿರುವಿಗೆ
ತೊ[ಡಿ]ಸಿದರೆ ಹತ್ತಾಯ್ತು ಧನುವಂ
ಬಿಡಲು ನೂರು ಸಹಸ್ರ ಲಕ್ಷವು ಕೋಟಿ ಸಂಖ್ಯೆಗಳು
ಕ[ಡೆ]ಗೆ ಹೆಚ್ಚಿದ ಬಾಣದಳತೆಯ
ಮೃಡನು ತಾನೇ ಬಲ್ಲ ಶರದಿಂ
ದಿಡಿದುದಂಬರವೇನನುಸುರುವೆನರಸ ಕೇಳೆಂದ

(ಐರಾವತ, ೫-೫.)

'ಐರಾವತ'ದ ಕರ್ತೃತ್ವದ ಬಗೆಗೆ ನಿಷ್ಕರ್ಷೆಯಿಲ್ಲ. ಪ್ರಾಯಶಃ ಕರ್ತೃ ಕುಮಾರವ್ಯಾಸನಲ್ಲವೆಂದು ತೋರುತ್ತದೆ. ಬಾಣಪ್ರಯೋಗ ಚಮತ್ಕಾರದ ಸೂಚನೆಯಿದ್ದರೂ ಉಳಿದಂತೆ 'ಕುಮಾರವ್ಯಾಸ ಭಾರತ'ದಲ್ಲಿಯಂತೆಯೇ ಸಂಗ್ರಹಿಸಿದೆ. ಕುಮಾರವ್ಯಾಸನ ಖ್ಯಾತಿಗೆ ಕೃತಿಗೆ ಮಾರುಹೋದ ಈ 'ಐರಾವತ'ದ ಕವಿಗೆ ರನ್ನನ 'ಗದಾಯುದ್ಧ'ದ ಪರಿಚಯವೂ ಇದ್ದಿರಬಹುದೇ ಎಂಬ ಶಂಕೆಗೆ ಈ ಪದ್ಯದಲ್ಲಿ ಎಡೆಯಿದೆ; ಆದರೆ ಇದು ಹೀಗೆಯೇ ಸರಿಯೆನ್ನುವಂತಿಲ್ಲ.

೬. ಷಡಕ್ಷರಿಯ (ಕ್ರಿ.ಶ. ೧೬೫೦) 'ಶಬರಶಂಕರ ವಿಲಾಸ'ದ ಪ್ರಸಂಗವನ್ನು ಈಗ ಗಮನಿಸಬಹುದು : ಅರ್ಜುನನ ಬೇಡಿಕೆಯಂತೆ ಈಶ್ವರನು ಆತನಿಗೆ ಬ್ರಹ್ಮಶಿರೋಸ್ತ್ರವನ್ನೂ ಪಾಶುಪತಾಸ್ತ್ರವನ್ನೂ ಮಂತ್ರಪುರಸ್ಸರವಾಗಿ ಅನುಗ್ರಹಿಸಿದನು; ಶಿವತತ್ತ್ವವನ್ನೂ ಮೋಕ್ಷಮಾರ್ಗವನ್ನೂ ತಿಳಿಸಿ ಜಯಾಸ್ಪದನೂ ಸುಖಾಸ್ಪದನೂ ಆಗುವಂತೆ ಹರಸಿದನು. ಇಷ್ಟಲಾಭದಿಂದ ಹರ್ಷಿಸಿದ ಅರ್ಜುನನು ಪುರಹರನ ಜತೆಗಿದ್ದ ಪಾರ್ವತಿಗೆ ಸಾಷ್ಟಾಂಗವೆರಗಿ ಆಕೆಯನ್ನು

ಭಕ್ತಿಭಾವದಿಂದ ಸ್ತುತಿಸಿದನು. ಆಕೆ ಅವನ ಭಕ್ತಿಗೆ ಮೆಚ್ಚಿ, ಕೃಪೆಯಿಂದ ಅವನನ್ನು ನೋಡಿ, ಅವನ ವೈರಿ ಸಮೂಹವನ್ನು ಕ್ಷಣಮಾತ್ರದಲ್ಲಿ ಮರ್ದಿಸುವ ಬಾಣವನ್ನು ಕೊಡುವುದಾಗಿ ಭರವಸೆನೀಡಿ, ಅಂಜನಾಸ್ತ್ರವನ್ನು ಅವನಿಗೆ ಅನುಗ್ರಹಿಸಿದಳು. ಅದನ್ನು ಕೊಟ್ಟಾಗ ಪಾರ್ವತಿ ಆ ಮಹಾಶರದ ಮಹತ್ವವನ್ನು ಹೀಗೆ ತಿಳಿಸಿದಳು.

ಮೊದಲೊಳಿದೊಂದು ಪತ್ತು ತುಡುವಲ್ಲಿ ಶತಂ ಬಿಡುವಲ್ಲಿ ಸಾಸಿರಂ
ಪದಮಿಡುವಲ್ಲಿ ವೈರಿಶರ ಸಂಹತಿಯಂ ತಱಿವಲ್ಲಿ ಲಕ್ಷಮ
ಗ್ಗದ ಗತಿಯಲ್ಲಿ ಕೋಟಿ ಸಮರಾಂಕಣದೊಳ್ ಗಣನಾವಿಹೀನಮ
ಪ್ಪುದು ರಿಪುವೃಂದಮಂ ತವಿಸಿ ನಿನ್ನೆಡೆಗೆಯ್ದುಗುಮೀ ಮಹಾಶರಂ

(ಶಬಶಂ. ೫-೫೧)

'ಕುಮಾರವ್ಯಾಸ ಭಾರತ'ದ ಕಿರಾತಾರ್ಜುನೀಯ ಪ್ರಸಂಗ ಷಡಕ್ಷರಿಗೆ ಮಾದರಿಯಾಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಅಂಜನಾಸ್ತ್ರ ಪ್ರದಾನದಲ್ಲಿ ಕೂಡ ಈ ಸಮೀಪಸಾದೃಶ್ಯ ಸ್ಪಷ್ಟವಾಗಿದ್ದರೂ ಅಂಜನಾಸ್ತ್ರ ಮಹಿಮೆಯನ್ನು ಹೇಳುವ ಷಡಕ್ಷರಿಯ ಪದ್ಯ ಕುಮಾರವ್ಯಾಸನ ಪದ್ಯವನ್ನು ನೇರವಾಗಿ ಅನುಸರಿಸಿಲ್ಲವೆಂಬುದು ಸುಲಭವಾಗಿ ತಿಳಿಯುತ್ತದೆ. ಈ ಒಂದು ಸನ್ನಿವೇಶವನ್ನು ಕುರಿತು ಬರೆಯುವಾಗ ಕುಮಾರವ್ಯಾಸನ ಪದ್ಯದ ನೋಟ ನೆನಪುಇವುಗಳೊಂದಿಗೆ ರನ್ನನ ಸದೃಶ ಪದ್ಯದ ನೆನಪು ಕೂಡ ಚಿಮ್ಮಿ ಬಂದು,[2] ಆ ಇಬ್ಬರು ಮಹಾಕವಿಗಳ ರೀತಿಯನ್ನೂ ಭಾವವನ್ನೂ ಅಳವಡಿಸಿ ಸ್ವಂತಿಕೆಯನ್ನು ತುಂಬಿ ಪರಿಷ್ಕೃತ ಪದ್ಯಶಿಲ್ಪವೊಂದನ್ನು ಷಡಕ್ಷರಿ ನಿರ್ಮಿಸಿದ್ದಾನೆ ಎಂದು ತೋರುತ್ತದೆ, 'ಮೊದಲೊಳಿದೊಂದು...' ಎಂದು ಮೊದಲಾದುದರಲ್ಲಿ ರನ್ನನ ಪ್ರಭಾವ ಮುದ್ರೆಯೂ, 'ಅಗ್ಗದ ಗತಿಯಲ್ಲಿ ಕೋಟಿ' ಎಂಬುದರಲ್ಲಿ ಷಡಕ್ಷರಿಯ ಹೊಸತನವೂ, 'ರಿಪುವೃಂದಮಂ ತವಿಸಿ....' ಎಂದು ಮುಗಿಯುವ ಮಾತಿನಲ್ಲಿ ನಾರಣಪ್ಪನ ಪ್ರಭಾವಮುದ್ರೆಯೂ ಮುಪ್ಪುರಿಗೊಂಡಿವೆ.

---

೨ ಶ್ರೀ ಶಿ. ಶಿ. ಬಸವನಾಳರು 'ಶಬರಶಂಕರ ವಿಳಾಸ'ದ ಪೀಠಿಕೆಯಲ್ಲಿ (ಪು. ೨೬) ಇದನ್ನು ಗುರುತಿಸಿದ್ದಾರೆ.

೭. ಚಿಕುಪಾಧ್ಯಾಯನ (ಕ್ರಿ.ಶ. ೧೬೭೨) 'ಶ್ರೀ ವಿಷ್ಣುಪುರಾಣ'ದ ಮೈತ್ರೇಯ ಪರಾಶರ ಸಂವಾದದ ಪಂಚಮಾಂಶದಲ್ಲಿ, ಕೃಷ್ಣ ಜರಾಸಂಧರ ಕದನ ಪ್ರಸಂಗವೊಂದನ್ನು ಕವಿ ವರ್ಣಿಸಿದ್ದಾನೆ. ಕೃಷ್ಣನು ಜರಾಸಂಧನನ್ನು ವಿರಥನನ್ನಾಗಿ ಮಾಡಿದ ಮೇಲೆ ಆತನು ಬೇರೊಂದು ರಥಕ್ಕೇರಿ ಮತ್ತೆ ಕದನಕ್ಕೆ ಉದ್ಯುಕ್ತನಾಗಿ ಶರವರ್ಷವನ್ನು ಕರೆದು ರಣರಂಗವನ್ನು ಬಾಣಮಯವಾಗಿ ಮಾಡಿದನಂತೆ. ಆಗ ಅಬ್ಜಾಂಬಕನು ಪ್ರತಿಯಾಗಿ ಬಾಣಪ್ರಯೋಗ ಮಾಡಿದು ದನ್ನು ಕವಿ ಹೀಗೆ ಬಣ್ಣಿಸಿದ್ದಾನೆ :

ಪೊದೆಯಿಂದಂ ತೆಗೆವಾಗಳೊಂದು ಬಿಡುವಾಗಳ್ಪತ್ತು ನೂಱು ಬಳಿ
ಕ್ಕದು ತಾಂ ಸಾಸಿರವಾಕ್ಷಣಂ ದಶ ಸಹಸ್ರಂ ಲಕ್ಷಕೋಟ್ಯರ್ಬುದಂ
ಪದೆಪಿಂ ನಿರ್ಬುದ ಖರ್ವಮುತ್ತರಿಭಕೀರ್ರೈದಲ್ಲಿ ತೇರ್ಗಂಟು ಕೇ
ಳದಱೊಳ್ ವಾಜಿಗೆ ನಾಲ್ಕು ಪತ್ತಿಗೆರಡೀತಾಯೆಚ್ಚೊಡಬ್ಜಾಂಬಕಂ

(ವಿಷ್ಣುಪು. v. ೬-೧೦೩)

ಚಿಕ್ಕದೇವರಾಜನ ಕಾಲದ ತರುಣ ಕವಿಗಳ ಮೇಲೆ ಷಡಕ್ಷರಿಯ ಪ್ರಭಾವವುಂಟು. ಅವರಿಗೆ ಈತನು ಕೆಲವುಮಟ್ಟಿಗೆ 'ಆದರ್ಶಪ್ರಾಯನೂ ಮಾರ್ಗದರ್ಶಿಯೂ' ಆದನು. 'ರಾಜಶೇಖರ ವಿಳಾಸ'ದ ಹಲವು ಪದ್ಯಗಳನ್ನು 'ವಿಷ್ಣು ಪುರಾಣ'ದ ಪದ್ಯಗಳು ಹೋಲುತ್ತವೆ. ಆದುದರಿಂದ 'ವಿಷ್ಣು ಪುರಾಣ'ದ ಈ ಪದ್ಯವು 'ಶಬರಶಂಕರ ವಿಳಾಸದ' ಸದೃಶ ಪದ್ಯದ ಅನುಕರಣೆ ಯಾಗಿರುವುದು ಅಸಂಭವವಲ್ಲ. ಆದರೆ ಪರಸ್ಪರ ಹೋಲಿಸಿ ನೋಡಿದರೆ ಭಿತ್ತಿ ಅಲ್ಲಿಯದು, ಚಿತ್ರ ಇಲ್ಲಿ ಬೇರೆಯೇ. ಅಲ್ಲದೆ ಕೊನೆಮುಟ್ಟ ಬಾಣದ ಬಳವಿ ಯನ್ನು ತಿಳಿಸುವುದು ಕೈಬಿಟ್ಟು ಸೇನಾಂಗದೊಡನೆ ಕೃಷ್ಣನು ಹೋರಾಡಿದುದರ ಅನ್ಯವಿವರವನ್ನು ಕವಿ ಬೆರೆಸಿದ್ದಾನೆ. ನಾರಣಪ್ಪನ ಪದ್ಯದ ಪರಿಶೀಲನೆಯಲ್ಲಿ ರನ್ನನ ನೆನಪು ಷಡಕ್ಷರಿಗೆ ಮೂಡಿರಬಹುದು ಎಂದು ಭಾವಿಸುವ ಹಾಗೆ, ಷಡಕ್ಷರಿಯ ಪದ್ಯದ ಪರಿಶೀಲನೆಯಲ್ಲಿ ರನ್ನನ ನೆನಪು ಚಿಕುಪಾಧ್ಯಾಯನಿಗೂ ಆಗಿರಬಹುದು ಎಂದು ತಿಳಿಯುವುದಕ್ಕೆ 'ಪೊದೆಯಿಂದಂ ತೆಗೆವಾಗಳೊಂದು' ಎಂಬ ಆರಂಭ ಎಡೆಮಾಡುತ್ತದೆ.

ವಿಸ್ತಾರವಾದ ಕನ್ನಡ ಸಾಹಿತ್ಯದಲ್ಲಿ ಕವಿಗಳಿಗೆ ರನ್ನನ 'ಗದಾಯುದ್ಧ'ದ ಪ್ರತ್ಯಕ್ಷಪರಿಚಯವಿರುವುದೂ ಅಲ್ಲಿಂದ ತಮಗೆ ಮನಸ್ಸೊಪ್ಪಿದುದನ್ನು ತಾವು ಅನುಕರಿಸುವುದೂ ಅಸಂಭವವಲ್ಲ ಎಂಬುದನ್ನು ದೃಢಪಡಿಸುವ ಸಾಕ್ಷ್ಯಾಂತರಗಳೊಂದಿಗೆ ರನ್ನನ ಈ ಪದ್ಯವೂ (೩-೩) ಒಂದು ಸಾಕ್ಷ್ಯವಾಗಬಲ್ಲದು ಎಂಬುದನ್ನು ನಿದರ್ಶಿಸಲು ಮಾತ್ರ ಇಲ್ಲಿ ಕೆಲವು ಕಾವ್ಯಗಳಿಂದ ಸದೃಶ ಪದ್ಯಗಳನ್ನು ಕ್ರೋಡೀಕರಿಸಿವೆ. ಹೆಚ್ಚಿನಮಟ್ಟಿಗೆ ಅರ್ಜುನನ ಬಿಲ್ಗಾರಿಕೆಯ ಕೌಶಲವನ್ನು ಎತ್ತಿ ಹೇಳುವಾಗಲೇ ಇವು ಬಂದಿರುವುದು ಗಮನಾರ್ಹವಾಗಿದೆ. ಮುಂದಿನ ಕವಿಗಳಲ್ಲಿ ತನ್ನೊಂದು ಬೆಡಗಿನಿಂದ ಮೆಚ್ಚಾದ ಈ ಪದ್ಯ ರನ್ನನ ಸ್ವಯಂಸ್ಫೂರ್ತಿಯಿಂದಾದುದೇ ಇಲ್ಲವೆ ಅವನಿಗೆ ಹಿಂದಿನ ಯಾವುದೇ ಕನ್ನಡ ಸಂಸ್ಕೃತ ಕೃತಿಯಿಂವ ಎತ್ತಿ ಅನುವಾದಿಸಿದುದೇ ಎಂಬುದನ್ನು ಇನ್ನೂ ತಿಳಿಯಬೇಕಾಗಿದೆ.

೧೯೬೫]

ಕವಿಸಮಯ

ಪ್ರಾಚೀನ ಲಾಕ್ಷಣಿಕರು ಮತ್ತು ಆಧುನಿಕ ವಿಮರ್ಶಕರು ಕವಿಸಮಯ ವನ್ನು ಎರಡು ಬೇರೆ ಬೇರೆ ದೃಷ್ಟಿಕೋನಗಳಿಂದ ಪರಿಶೀಲಿಸುವರು. ಪ್ರಾಚೀನರ ದೃಷ್ಟಿಯಲ್ಲಿ ಈ ವಿಚಾರವನ್ನು ಇಲ್ಲಿ ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಿದೆ. ಸಂಸ್ಕೃತ ಅಲಂಕಾರ ಗ್ರಂಥಗಳಲ್ಲಿ ಈ ವಿಚಾರದ ಪ್ರತಿಪಾದನೆಯನ್ನು ಮಾಡಿರುವ ಗ್ರಂಥಗಳು ಬಹಳ ವಿರಳ. ಅನೇಕ ಲಾಕ್ಷಣಿಕರು 'ಕವಿ ಪ್ರಸಿದ್ಧಿ ನಿರೋಧ' ಎಂಬ ಕಾವ್ಯದೋಷವನ್ನು ವಿವರಿಸುವಾಗ ಕವಿಪ್ರಸಿದ್ಧಿ ಅಥವಾ ಕವಿಸಮಯದ ವಿಚಾರವನ್ನು ತಕ್ಕಮಟ್ಟಿಗೆ ತಿಳಿಸಿದ್ದಾರೆ. ಅಗ್ನಿಪುರಾಣವು (ಸು. ಕ್ರಿ. ಶ. ೯೦೦) 'ಅಸಾಮಯಿಕತೆ' ಎಂಬ ಕಾವ್ಯದೋಷವನ್ನು ಹೇಳುವಾಗ ಕವಿಸಮಯವನ್ನು ಪ್ರಸ್ತಾಪಿಸಿದೆ. 'ಕವೀನಾಂ ಸಮುದಾಚಾರಃ ಸಮಯೋ ನಾಮ ಗೀಯತೇ.' ಎಂಬುದು ಅಲ್ಲಿಯ ವಾಕ್ಯ. ಇತರ ಅಲಂಕಾರ ಗ್ರಂಥಗಳಲ್ಲಿ ಹೇಳಿರುವ 'ಅಸದಾಖ್ಯಾತಿ' ಮೊದಲಾದ ವಿಭಾಗಗಳನ್ನು ಇಲ್ಲಿ ಹೇಳಿಲ್ಲ. ಸು. ಕ್ರಿ. ಶ. ಹತ್ತನೆಯ ಶತಕದ ಅಮರಚಂದ್ರನು 'ಕಾವ್ಯಕಲ್ಪಲತಾ' ಗ್ರಂಥದಲ್ಲಿಯೂ, ಸು. ಕ್ರಿ. ಶ. ಹನ್ನೆರಡನೆಯ ಶತಕದ ಹೇಮಚಂದ್ರನು 'ಕಾವ್ಯಾನುಶಾಸನ' ಗ್ರಂಥದಲ್ಲಿಯೂ, ಸು. ಕ್ರಿ. ಶ. ಹದಿಮೂರನೆಯ ಶತಕದ ವಾಗ್ಭಟನು ಇನ್ನೊಂದು 'ಕಾವ್ಯಾನುಶಾಸನ' ಗ್ರಂಥದಲ್ಲಿಯೂ, ಕವಿಸಮಯವನ್ನು ಪ್ರಸ್ತಾಪಿಸಿದ್ದಾರೆ. ಅಮರಚಂದ್ರನ ಗ್ರಂಥದ ಕವಿಸಮಯಭಾಗವನ್ನು ಕೇಶವಮಿಶ್ರನು 'ಅಲಂಕಾರ ಶೇಖರ' ಎಂಬ ತನ್ನ ಗ್ರಂಥವಲ್ಲಿ ನೇರವಾಗಿ ಬಳಸಿಕೊಂಡಿದ್ದಾನೆ. ವಾಮನನ 'ಕಾವ್ಯಾಲಂಕಾರ ಸೂತ್ರ'ದ ಐದನೆಯ ಅಧ್ಯಾಯದ ಮೊದಲ ಭಾಗದಲ್ಲಿ 'ಕಾವ್ಯಸಮಯ' ವನ್ನು ವಿವರಿಸುವಂತೆ ಕಂಡರೂ, ಅಲ್ಲಿ ಹೇಳಿರುವುದು ಶಬ್ದೋಕ್ತಿಗಳ ಪ್ರಯೋಗ ವಿಚಾರವೇ ಹೊರತು ಕವಿಸಮಯವಲ್ಲ. ಸುಮಾರು ಕ್ರಿ. ಶ. ಹತ್ತನೆಯ ಶತಕದ ರಾಜಶೇಖರನು 'ಕಾವ್ಯಮೀಮಾಂಸೆ'ಯಲ್ಲಿ ವಿಸ್ತಾರವಾಗಿ ಕವಿಸಮಯವನ್ನು ಕುರಿತು ಹೇಳಿದ್ದಾನೆ. ಕನ್ನಡದಲ್ಲಿ ನಾಗವರ್ಮನಿಗೆ ಹಿಂದೆ

ಕವಿರಾಜಮಾರ್ಗಕಾರನು ಕವಿಸಮಯದ ವಿಚಾರ ಹೇಳದಿರುವುದರಿಂದ ನಾಗವರ್ಮನು ಹನ್ನೆರಡನೆಯ ಶತಕದ ಲಾಕ್ಷಣಿಕರಾದ ಅಮರಚಂದ್ರ ಮತ್ತು ರಾಜಶೇಖರರ ಕೃತಿಗಳಲ್ಲಿ ಹೇಳಿರುವ ಕವಿಸಮಯದ ವಿಚಾರವನ್ನು ಆಧಾರವಾಗಿಟ್ಟುಕೊಂಡು ಕಾವ್ಯಾವಲೋಕನದ ಕವಿಸಮಯಾಧಿಕರಣವನ್ನು ಬರೆದಿರುವನೆಂದು ತಿಳಿಯಬಹುದು. ಕಾವ್ಯಕಲ್ಪಲತಾ, ಕಾವ್ಯಮೀಮಾಂಸೆಯ ಶಬ್ದವಾಕ್ಯ ಪ್ರಮಾಣಗಳನ್ನು ನಾಗವರ್ಮನು ನೇರವಾಗಿ ಅನುಸರಿಸುವುದು ನಿದರ್ಶನಗಳಿಂದ ಕಂಡುಬರುತ್ತದೆ. ಆಲಂಕಾರಿಕರು ಪ್ರಾಚೀನರ ಸಂಪ್ರದಾಯವನ್ನು ಅನುಸರಿಸಿ ಸಶಾಸ್ತ್ರೀಯವಾಗಿ ಕವಿಸಮಯವನ್ನು ಕುರಿತು ವಿಚಾರ ಮಾಡಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ.

ಕವಿಸಮಯವೆಂಬುದಕ್ಕೆ ಅಮರಚಂದ್ರನ ಸೂತ್ರ ಹೀಗಿದೆ :

ಅಸತೋಽಪಿ ನಿಬಂಧೇನಾನಿಬಂಧೇನ ಸತೋಽಪಿ ಚ ।
ನಿಯಮೇನ ಚ ಜಾತ್ಯಾದೇಃ ಕವೀನಾಂ ಸಮಯಸ್ತ್ರಿಧಾ ॥

ರಾಜಶೇಖರನು ಕೊಡುವ ಸೂತ್ರ ಈ ರೀತಿಯಲ್ಲಿದೆ :

ಅಶಾಸ್ತ್ರೀಯಮಲೌಕಿಕಂ ಚ ಪರಂಪರಾಯಾತಂ, ಯಮ
ರ್ಥಮುಪನಿಬಧ್ನಂತಿ ಕವಯಃ ಸ ಕವಿಸಮಯಃ
ಕವಿಸಮಯಶ್ಚಾಯಂ ಮೂಲಮಪಶ್ಯದ್ಭಿಃ ಪ್ರಯೋಗ ಮಾತ್ರ
ದರ್ಶಿಭಿಃ ಪ್ರಯುಕ್ತೋ ರೂಢಶ್ಚ

ನಾಗವರ್ಮನ ಸೂತ್ರವು ಮೇಲಿನ ಸೂತ್ರಗಳನ್ನು ಹೋಲುತ್ತದೆ :

ಆವುದ ಶೇಷಲೋಕಸ್ಥಿತಿಯಲ್ಲಖಿಳಾಗಮಾರ್ಥಮುಂ
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿ ನಿ
ಷ್ಕೇವಳಮಾದ ರೂಢಿವಶದಿಂ ಸಲೆ ಸಲ್ವುದಿದಲ್ತೆ ಶಿಷ್ಟ ಸಂ
ಭಾವಿತಮಪ್ಪ ಕಾವ್ಯಸಮಯಂ ಭುವನತ್ರಯವಸ್ತುಗೋಚರಂ ॥

'ಲೋಕದಲ್ಲಿ ವಸ್ತುತಃ ಇಲ್ಲದೆಯೂ, ಶಾಸ್ತ್ರದಲ್ಲಿ ಪ್ರಸಿದ್ಧವಲ್ಲದೆಯೂ ಇರುವ ಅನೇಕ ಸಂಗತಿಗಳನ್ನು ಕವಿಗಳು ಒಬ್ಬರಾದಮೇಲೊಬ್ಬರು ಒಂದೇ ರೀತಿಯಲ್ಲಿ ಹೇಳುತ್ತ ಬಂದು ರೂಢಿಗೆ ತಂದಿರುತ್ತಾರೆ. ಈ

ರೂಢಿಗೆ 'ಕವಿಸಮಯ'ವೆಂದು ಹೆಸರು. ಇದನ್ನು ಕಾವ್ಯಸಮಯವೆಂದು ಸೂತ್ರದಲ್ಲಿ ಕರೆದಿರುವುದರಿಂದ ಕಾವ್ಯದಲ್ಲಿ ಸೌಂದರ್ಯಾತಿಶಯತೆ, ಹಾಗೂ ರಸಚಮತ್ಕಾರಗಳನ್ನು ತರಲು ಉಪಯೋಗಿಸುತ್ತಿದ್ದ ರೂಢಿಯಾದ ವಿಶಿಷ್ಟ ಸಂದರ್ಭಗಳು, ವಾಕ್ಯ ಮತ್ತು ಶಬ್ದಗಳು ಎಂದು ತಿಳಿಯಬಹುದು. ಆದರೆ ಉಕ್ತಿವೈಚಿತ್ರ್ಯವಾಗಲೀ ರೀತಿರಚನಾ ವಿಶೇಷವಾಗಲೀ ಕವಿಸಮಯ ವಾಗುವುದಿಲ್ಲ. ಏಕೆಂದರೆ ಅವು ಪ್ರತಿಯೊಬ್ಬ ಕವಿಯ ಪ್ರತಿಭಾವಿಶೇಷದಿಂದ ಹೊಮ್ಮಿದ ಅವನದೇ ಅಭಿವ್ಯಕ್ತಿ. ಅವುಗಳನ್ನು ಇತರರು ಅನುಕರಿಸುವ ಸಂಭವವಾಗಲೀ ಆವಶ್ಯಕತೆಯಾಗಲೀ ಇರುವುದಿಲ್ಲ. ಅವುಗಳ ಸ್ವಾರಸ್ಯವನ್ನು ಅವನಿಗಲ್ಲದೆ ಅನ್ಯರಿಗೆ ಹೇಳಲು ಬರುವುದಿಲ್ಲ. ಆದರೆ ಕವಿಸಮಯಗಳಾಗಿ ಬಹಳ ಹಿಂದಿನಿಂದಲೂ ಅನುಸರಿಸಿಕೊಂಡು ಬರುತ್ತಿರುವ ಕಮಲಕನ್ನೈದಿಲೆ, ಚಂದ್ರಸೂರ್ಯ, ಚಕೋರಚಕ್ರವಾಕ, ಪಾರಾವತ ಹಂಸಸಾರಸಗಳು, ತಿಮಿತಿಮಿಂಗಿ ಲಾದಿಗಳು, ಕಲ್ಪವೃಕ್ಷ ಕಾಮಧೇನು ಚಿಂತಾಮಣಿಗಳು, ಶರಭಭೇರುಂಡ ಗಳು ಬ್ಯಾಂಕಿನಲ್ಲಿ ಹಣವಿಟ್ಟು ವಹಿವಾಟು ನಡೆಸುವ ವ್ಯಕ್ತಿಯಂತೆ ಕವಿ ಯಿಂದ ಕಾವ್ಯ ರಚನಾವಸರದಲ್ಲಿ ಬಳಕೆಯಾಗುತ್ತವೆ. ಹೀಗೆ ಬಳಸುವಾಗ ಶುಷ್ಕಪಾಂಡಿತ್ಯದ ಪರಿಣಾಮವಾಗಿ ಕೆಲವು ಸಂದರ್ಭಗಳಲ್ಲಿ ಅನೌಚಿತ್ಯ ದೋಷವು ಘಟಿಸಿ ಸಹೃದಯರಿಗೆ ಬೇಸರವಾಗುತ್ತದೆ; ಪ್ರತಿಭಾವಂತನಾದ ಕವಿಯು ಇವುಗಳನ್ನು ಉಚಿತವಾದೆಡೆಗಳಲ್ಲಿ ಬಳಸುವುದರಿಂದ ಕಾವ್ಯಕ್ಕೆ ಶೋಭಾಕರವಾಗುತ್ತದೆ.

ಶಾಸ್ತ್ರಕಾರರು ಎಲ್ಲ ವಿಚಾರಗಳನ್ನೂ ಶಾಸ್ತ್ರ ದೃಷ್ಟಿಯಿಂದ ವಿಭಜಿಸಿ, ವಿಚಿಕಿತ್ಸೆಗೆ ಒಳಪಡಿಸಿ ಸ್ಪಷ್ಟವಾದ ಸಿದ್ಧಾಂತ ರೇಖೆಯನ್ನೆಳೆಯಲು ಪ್ರಯತ್ನಿಸಿ ದ್ದಾರೆ. ಈ ಸಿದ್ಧಾಂತ ಪ್ರತಿಪಾದನೆಗೆ ಪ್ರಯೋಗದಲ್ಲಿ ಸಿಗುವಷ್ಟು ಆಧಾರ ಗಳನ್ನೇ ತೆಗೆದುಕೊಂಡಿದ್ದಾರೆ. ವಿಪುಲವಾಗಿ ಹೊಸ ಪ್ರಯೋಗಗಳನ್ನೂ ಕೆಲವರು ಸೃಷ್ಟಿಸಿದ್ದಾರೆ. ಕವಿಸಮಯದಂಥ ಸ್ವತಂತ್ರವೂ ಅನುಭವವೇದ್ಯವೂ ಆದ ಅಲಂಕಾರ ಸಾಮಗ್ರಿ ಶಾಸ್ತ್ರದ ಕಟ್ಟುಪಾಡಿಗೆ ಸಿಕ್ಕಿ ಹಲವು ಪ್ರಭೇದಗಳೂ ಅವುಗಳಿಗೆ ಲಕ್ಷ್ಯ ಲಕ್ಷಣಗಳೂ ಲಿಖಿತವಾಗಿದೆ. ಕಾವ್ಯರಚನಾವಸರದಲ್ಲಿ ಕವಿ ಸಹಜವಾದ ಪ್ರತಿಭಾವ್ಯಾಪಾರದಿಂದ ಮೊತ್ತಮೊದಲು ಸೌಂದರ್ಯಪೂರ್ಣವಾಗಿ ರಸಾಭಿವ್ಯಂಜಕವಾಗಿ ಸ್ಫುರಣೆಯಾದ ಕಮಲ ಕನ್ನೈದಿಲೆಯಂಥ ಶಬ್ದಗಳು

ತದನಂತರದ ಅನುಸರಣಶೀಲ ಕವಿಗಳಿಗೆ ಮಾದರಿಯೆನಿಸಿ, ಆಲಂಕಾರಿಕ ಶಬ್ದಾಭಿವ್ಯಕ್ತಿಗಳಾದವು. ಒಬ್ಬೊಬ್ಬ ದೊಡ್ಡ ಕವಿಯು ಸಮಯ ಸ್ಫುರಣೆಯಿಂದಾದ ಇಂಥ ರಸವಾಕ್ಯಗಳು, ಶಬ್ದಗಳು ಕಾಲಕ್ರಮವಾಗಿ ಇತರರಿಗೆ ಹೆಚ್ಚಿನ ಆಕರ್ಷಣೆಗಳಾದವು. ಅಭ್ಯಾಸವಶದಿಂದ ಕವಿಯ ಚಿತ್ತದಲ್ಲಿ ಸಂಸ್ಕಾರವಾಗಿ ಅಡಗಿಕೊಂಡಿದ್ದ ಈ ಆಕರ್ಷಣೀಯ ಶಬ್ದಗಳು ತನಗೆ ಅರಿವಿಲ್ಲದಂತೆಯೇ ತನ್ನದೇ ಅಭಿವ್ಯಕ್ತಿಯೆನ್ನುವಂತೆ ತನ್ನ ಕೃತಿಯಲ್ಲಿ ಕಾಣಿಸಿಕೊಳ್ಳಬಹುದು. ಆದರೆ ಲಾಕ್ಷಣಿಕರಿಗೆ ಹೆಚ್ಚು ಬಳಕೆಯ ಈ ವಿಶಿಷ್ಟ ಸಂದರ್ಭದ ಶಬ್ದವಾಕ್ಯಗಳು ಮತ್ತು ಸಂಗತಿಗಳು 'ಕವಿಸಮಯ'ವೆಂಬ ಪರಿಭಾಷೆಯಿಂದ ಗಮನಾರ್ಹವಾಗಿದೆ. ಕವಿಸಮಯಗಳಲ್ಲಿ ಔಚಿತ್ಯ ಮತ್ತು ಮಿತಿ ಬಹಳ ಮುಖ್ಯ. ಮಿತಿ ಮೀರಿದ ಮತ್ತು ತಾರ್ಕಿಕವಾದ ಬಳಕೆಯಿಂದ ಬೇಸರವಾಗುತ್ತದೆ. ಅಲ್ಲದೆ ಅರ್ಥಕಾಂತಿಯಿಲ್ಲದೆ ರಸದ ಹಿರಿಮೆಯನ್ನು ಹೆಚ್ಚಿಸಲು ಒತ್ತಾಯದಿಂದ ಕವಿಸಮಯವನ್ನು ಪ್ರಜ್ಞಾಪೂರ್ವಕವಾಗಿ ತಂದು ಬಳಸಿದರೆ ಕಾವ್ಯವು ನೀರಸವಾಗುವುದಲ್ಲದೆ ಅಪ್ರಯೋಜಕವಾಗುತ್ತದೆ. ಕುಮಾರವ್ಯಾಸನಂಥ ಮಹಾಕವಿಗಳಿಗೆ ಕವಿಸಮಯಗಳು ಶಕ್ತಿಪೂರ್ಣವಾಗಿಯೂ ರಸಾಭಿವ್ಯಂಜಕವಾಗಿಯೂ ಸ್ಫುರಣೆಯಾಗುತ್ತವೆ.

'ಕಾವ್ಯಾವಲೋಕನ' ಗ್ರಂಥದ ಕಡೆಯ ಅಧ್ಯಾಯ ಕವಿಸಮಯಾಧಿಕರಣ. ಇದರಲ್ಲಿ ಇಪ್ಪತ್ತುನಾಲ್ಕು ಸೂತ್ರಗಳಿದ್ದು ವಿಪುಲವಾದ ಉದಾಹರಣೆಗಳನ್ನು ಕೊಡಲಾಗಿದೆ. ನಾಗವರ್ಮನು ಕವಿಸಮಯವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿದ್ದಾನೆ: ಅಸದಾಖ್ಯಾತಿ, ಸದಕೀರ್ತನ, ನಿಯಮ ಮತ್ತು ಐಕ್ಯ. ಇವುಗಳೊಂದೊಂದೂ ಜಾತಿ, ದ್ರವ್ಯ, ಕ್ರಿಯೆ ಮತ್ತು ಗುಣ ಎಂಬ ಚತುರ್ವಿಧಗಳಲ್ಲಿ ಸಂಭವಿಸಬಹುದು. ಈಗ ಅವನು ಕೊಟ್ಟಿರುವ ಉದಾಹರಣೆಗಳ ಸ್ಥೂಲ ಪರಿಚಯವನ್ನು ನಾವು ಮಾಡಿಕೊಳ್ಳಬಹುದು:

(ಅ) ಅಸದಾಖ್ಯಾತಿ (ಇಲ್ಲದಿರುವುದನ್ನು ಇದೆಯೆಂದು ವರ್ಣಿಸುವುದು):

(i) ಕೆರೆಕಟ್ಟೆಕೊಳಗಳಲ್ಲಿ ಹಂಸಗಳಿವೆ; ಹೊಳೆಗಳಲ್ಲಿ ಕಮಲ ಕನ್ನೈದಿಲೆಗಳಿವೆ.

(ii) ಕತ್ತಲೆ ಕೈಯಲ್ಲಿಟ್ಟುಕೊಳ್ಳುವಷ್ಟು ಮತ್ತು ಸೂಜಿಯಿಂದ ಚುಚ್ಚುವುದಕ್ಕೂ ಆಗುವಷ್ಟು ದಟ್ಟವಾಗಿದೆ; ಹಾಗೆಯೇ ಬೆಳುದಿಂಗಳನ್ನು ಬೊಗಸೆಯಲ್ಲಿ ಅಥವ ಪಾತ್ರೆಯಲ್ಲಿ ತುಂಬಿಕೊಳ್ಳಬಹುದು ಮತ್ತು ಅದರಲ್ಲಿ ದೋಣಿಯ ಸಂಚಾರ ಹೋಗಬಹುದು.

(iii) ಚಕ್ರವಾಕ ದಂಪತಿಗಳು ರಾತ್ರಿಯ ಕಾಲದಲ್ಲಿ ವಿರಹವನ್ನು ಅನುಭವಿಸುತ್ತವೆ; ಚಕೋರಗಳು ಬೆಳುದಿಂಗಳನ್ನು ಕುಡಿಯುತ್ತವೆ.

(iv) ನಗುವುದು, ಯಶಸ್ಸು—ಇವುಗಳ ಬಣ್ಣ ಬಿಳುಪು; ಅಪಯಶಸ್ಸಿನ ಬಣ್ಣ ಕಪ್ಪು; ಕೋಪ ಪ್ರೀತಿಗಳಲ್ಲಿ ಕೆಂಪು ಬಣ್ಣ ಎಂದು ಹೇಳುವುದು.

(ಆ) ಸದಕೀರ್ತನ (ಇರುವುದನ್ನು ಇಲ್ಲದಂತೆ ಭಾವಿಸಿ ವರ್ಣಿಸುವುದು):

(i) ಅಶೋಕ ವೃಕ್ಷದಲ್ಲಿ ಹಣ್ಣುಗಳು, ವಸಂತದಲ್ಲಿ ಜಾಜಿಯ ಹೂವು ಮತ್ತು ಗಂಧದ ಮರದಲ್ಲಿ ಹೂವು ಹಣ್ಣುಗಳು ಇರುವುದಿಲ್ಲವೆಂದು ವರ್ಣಿಸುವುದು.

(ii) ಶುಕ್ಲಪಕ್ಷದ ರಾತ್ರಿಯಲ್ಲಿ ಕತ್ತಲಿದ್ದರೂ, ಕೃಷ್ಣಪಕ್ಷದ ರಾತ್ರಿಯಲ್ಲಿ ಬೆಳುದಿಂಗಳಿದ್ದರೂ ಶುಕ್ಲಪಕ್ಷದಲ್ಲಿ ಬರಿಯ ಬೆಳುದಿಂಗಳನ್ನೂ, ಕೃಷ್ಣಪಕ್ಷದಲ್ಲಿ ಬರಿಯ ಕತ್ತಲೆಯನ್ನೂ ಹೇಳುವುದು.

(iii) ಕನ್ನೈದಿಲೆಗಳು ಹಗಲು ಹೊತ್ತು ಅರಳಿದರೂ ರಾತ್ರಿವೇಳೆ ಮಾತ್ರ ಅರಳುತ್ತವೆಯೆಂದು ವರ್ಣಿಸುವುದು.

(iv) ಹಲ್ಲುಗಳು ಮತ್ತು ಮೊಗ್ಗುಗಳಿಗೆ ಬೇರೆ ಬಣ್ಣಗಳಿದ್ದರೂ ಬಿಳುಪು ಬಣ್ಣವನ್ನು ಮಾತ್ರ ಆರೋಪಿಸುವುದು.

(ಇ) ನಿಯಮ (ಅನೇಕ ಕಡೆ ದೊರಕುವುದನ್ನು ಒಂದೇ ಕಡೆ ದೊರಕುವಂತೆ ಹೇಳುವುದು):

(i) ಮುತ್ತುಗಳು ತಾಮ್ರಪರ್ಣಿಯಲ್ಲಿ, ಶಂಖ ತಿಮಿಂಗಿಲಗಳು ಸಮುದ್ರದಲ್ಲಿ ಮಾತ್ರ ಇರುವುವೆಂದು ಭಾವಿಸುವುದು.

(ii) ಶ್ರೀಗಂಧವು ಮಲಯಪರ್ವತದಲ್ಲಿಯೂ, ಭೂರ್ಜವೃಕ್ಷವು ಹಿಮಾಲಯ ಪರ್ವತದಲ್ಲಿಯೂ ಮಾತ್ರ ಬೆಳೆಯುತ್ತವೆಯೆಂದು ಹೇಳುವುದು.

(iii) ಕೋಗಿಲೆ ವಸಂತದಲ್ಲಿಯೂ, ನವಿಲು ವರ್ಷಾಕಾಲದಲ್ಲಿಯೂ ಮಾತ್ರವೇ ಕೂಗುತ್ತವೆ.

(iv) ಇತರ ಬಣ್ಣಗಳಿದ್ದರೂ ಹೂವುಗಳಲ್ಲಿ ಬಿಳುಪನ್ನೂ, ರತ್ನಗಳಲ್ಲಿ ಕೆಂಪನ್ನೂ, ಮೇಘದಲ್ಲಿ ಕಪ್ಪನ್ನೂ ಮಾತ್ರ ವರ್ಣಿಸುವುದು.

(ಈ) ಐಕ್ಯ (ವಸ್ತುತಃ ಭೇದವಿರತಕ್ಕ ವಸ್ತುಗಳಲ್ಲಿ ಭೇದ ಮಾಡದಿರುವುದು.

(i) ದಾನವರೂ ದೈತ್ಯರೂ, ನಾಗರೂ ಸರ್ಪರೂ ಒಂದು ; ಚಂದ್ರನಲ್ಲಿರುವ ಕಳಂಕ ಮೊಲವೂ ಅಹುದು, ಜಿಂಕೆಯೂ ಅಹುದು ; ಮನ್ಮಥನ ಧ್ವಜದಲ್ಲಿ ಸಂಕೇತಗಳು ಮೀನೂ ಅಹುದು, ಮಕರವೂ ಅಹುದು.

(ii) ಲವಣಸಮುದ್ರಕ್ಕೂ, ಕ್ಷೀರಸಮುದ್ರಕ್ಕೂ ; ಕ್ಷೀರಸಾಗರದಲ್ಲಿ ಹುಟ್ಟಿದ ಚಂದ್ರನಿಗೂ, ಅತ್ರಿಯ ಮಗನಾದ ಚಂದ್ರನಿಗೂ ; ಮುರಾಂತಕನಿಗೂ ನಾರಾಯಣನಿಗೂ, ಸಂಪತ್ತು ಮತ್ತು ಲಕ್ಷ್ಮಿಯರಿಗೂ ಭೇದವನ್ನು ಹೇಳದಿರುವುದು.

(iii) ಮೊಗ್ಗಾಗುವುದು ಮುಚ್ಚಿಕೊಳ್ಳುವುದು, ಕಪ್ಪು ಮತ್ತು ಬೂದು, ಹಳದಿ ಮತ್ತು ಕೆಂಪು–ಒಂದೇ ಆಗಿ ಭಾವಿಸುವುದು ; ಕಣ್ಣಿನ ಕಾಂತಿ ಕಪ್ಪೆಂದೂ, ಬಿಳುಪೆಂದೂ ವರ್ಣಿಸುವುದು.

೧೯೫೭]

'ಸೂಕ್ತಿಸುಧಾರ್ಣವ'ದ ಕೆಲವು ಪದ್ಯಗಳಿಗೆ ಆಕರಗಳು

'ಸೂಕ್ತಿಸುಧಾರ್ಣವ'ದಲ್ಲಿ ಆಕರನಿರ್ದೇಶನ ಸಾಧ್ಯವಾಗಿರದ ಕೆಲವು ಪದ್ಯಗಳಿಗೆ ಆಕರಸೂಚನೆಯ ಪ್ರಯತ್ನಗಳು ಪ್ರಾಸಂಗಿಕವಾಗಿಯೂ ಪ್ರಧಾನವಾಗಿಯೂ ಈ ಹಿಂದೆ ನಡೆದಿವೆ. ಅವನ್ನೇ ಇಲ್ಲಿ ಸ್ವಲ್ಪಮಟ್ಟಿಗೆ ಮುಂದುವರಿಸಿದೆ.

(೧) 'ಪರ್ವತವರ್ಣನಂ' ಎಂಬ ಆಶ್ವಾಸದಲ್ಲಿ ಬರುವ ಒಂದು ಕಂದ ಪದ್ಯ ಹೀಗಿದೆ :

ಬಿಸಿಲೊಳರೆವಿರಿದ ಬಿದುವಿಂ
ನಸು ಕಿದಱಿದ ರಕ್ತಯುಕ್ತಮುಕ್ತಾಫಳಮಂ
ರಸದಾಳಿಂಬದ ಬಿತ್ತೆಂ
ದೊಸೆದು ಕರ್ದುಂಕವ್ರ ಶುಕಕುಲಂ ವನಗಜದಾ (೩-೬೪)

ಈ ಪದ್ಯಕ್ಕೆ ಆಕರ ನಿರ್ದೇಶನವಿಲ್ಲ. ಇದರ ಚತುರ್ಥಪಾದದಲ್ಲಿ ಛಂದೋಭಂಗವಿರುವುದೇ ಅಲ್ಲದೆ ವಿಮರ್ಶನದೃಷ್ಟಿಗೆ ಇಲ್ಲಿ ಅರ್ಥವೈಪರೀತ್ಯವೂ ಭಾಸವಾಗದಿರದು. ನ್ಯಾಯವಾಗಿ ನೋಡಿದರೆ, ಇಲ್ಲಿ ಪ್ರಶ್ನಚಿಹ್ನೆಯನ್ನು ಹಾಕಬೇಕಾಗಿತ್ತು. ಇದೇ ಪದ್ಯವು

ಬಿಸಿಲಳುರೆ ಬಿರಿದ ಬಿದುವಿಂ
ನಸುದೋಱುವ ರಕ್ತಸಿಕ್ತ ಮುಕ್ತಾಫಳಮಂ
ರಸದಾಳಿಂಬದ ಬಿಟ್ಟಿಂ
ದೊಸೆದು ಕರ್ದುಂಕುವುವು ಶುಕಕುಳಂ ಮದಗಜದಾ (೧೦-೧೦೪)

ಎಂಬ ಭಿನ್ನಪಾಠದೊಡನೆ 'ಋತುವರ್ಣನಂ' ಎಂಬ ಆಶ್ವಾಸದಲ್ಲಿ ಮತ್ತೆ ಕಾಣಿಸಿಕೊಂಡಿದೆ. ಇಲ್ಲಿ ಇದಕ್ಕೆ 'ಜಗನ್ನಾಥವಿಜಯ'ದ ೧೬-೬೯ನೆಯ ಪದ್ಯ

ವೆಂದು ಆಕರವನ್ನು ಸೂಚಿಸಿದೆ. ಆದರೆ 'ಜಗನ್ನಾಥವಿಜಯ'ದ ಮುದ್ರಿತ ಪ್ರತಿಯಲ್ಲಿ (ಓರಿಯಂಟಲ್ ಲೈಬ್ರರಿ, ೧೯೨೩, ಭಾಗ ii) ಈ ಪದ್ಯವು ೧೬-೬೯ನೆಯದಾಗಿರದೆ ೧೭-೬೯ ಆಗಿದ್ದು, ಗಮನಾರ್ಹವಲ್ಲದ ಪಾಠಭೇದ ವಿದೆ. ಅಂತೂ ಸೂ.ಸು.ದ ೩-೬೪ನೆಯ ಪದ್ಯ 'ಜಗನ್ನಾಥವಿಜಯ'ದ್ದೆಂಬುದು ಸ್ಪಷ್ಟ; ಅಲ್ಲದೆ ಶುದ್ಧಪಾಠ ಮತ್ತು ಅರ್ಥೌಚಿತ್ಯದ ದೃಷ್ಟಿಯಿಂದ ೧೦-೧೦೪ರ ಪದ್ಯವೇ ಗಣ್ಯ.

(೨) 'ನಾಯಕಾಭ್ಯುದಯವರ್ಣನಂ' ಎಂಬ ಆಶ್ವಾಸದಲ್ಲಿ ನಾಲ್ಕನೆಯ ಪದ್ಯ ಹೀಗಿದೆ :

ಪೊಡರ್ದಡೆ ಕಪ್ಪಮಂ ಕುಡದ ಮಂಡಳಿಕರ್ ಮನೆಮಕ್ಕಳಂದದಿಂ
ಪಡೆದಬಳಾಜನಂ ನೆಱೆದ ಮಕ್ಕಳೆ ಮಕ್ಕಳನೀಳ್ವದೊಂದು ದಾಂ
ಗುಡಿವಿಡಿದೀವ ಜಾಗವೆಡಱೋಡುವಿನಂ ಪೊರೆದಾ ನೆಗಟ್ಟೆಯೊಳ್
ತೊಡರ್ದಿರೆ ವೃದ್ಧರಾಜ್ಯಮುಮದೇನೆಸೆದತ್ತೊ ನಭಶ್ಚರೇಂದ್ರನಾ ? (೫-೪)

ಈ ಪದ್ಯವು ಪಂಪನ 'ಆದಿಪುರಾಣ'ದ

ಪೊಡರದೆ ಕಪ್ಪವೀವ ಪರಮಂಡಳಿಕರ್ ಮನೆದೀವಿ ಮಕ್ಕಳಂ
ಪಡೆದಬಳಾಜನಂ ನೆಱೆದ ಮಕ್ಕಳೆ ಮಕ್ಕಳ ನೀಳ್ದದೊಂದು ದಾಂ
ಗುಡಿವಿಡಿದೀವ ಚಾಗವೆಡಱೋಡುವಿನಂ ಪೊರೆದೊಳ್ಗೆಗಟ್ಟೆಯೊಳ್
ತೊಡರ್ದಿರೆ ವೃದ್ಧರಾಜ್ಯಮುಮದೇನೆಸೆದತ್ತೊ ನಭಶ್ಚರೇಂದ್ರನಾ

(ಆದಿಪು. ಸಂಗ್ರಹ ೨೩; ಆದಿಪು. ಮೂಲ ೨-೨೪.)

ಎಂಬ ಪದ್ಯದ ಭಿನ್ನಪಾಠ. ಈ ಭಿನ್ನಪಾಠದ ಪದ್ಯ ಛಂದೋಬದ್ಧವಾಗಿದ್ದರೂ ಅಶುದ್ಧಪಾಠ ಪರಿಪ್ಲುಷ್ಟವಾದುದರಿಂದ ಸಹಜವಾಗಿ ಅರ್ಥಕ್ಲೇಶವಿದ್ದು ಸಂಪಾದಕರು ಪ್ರಶ್ನಚಿಹ್ನೆ ಹಾಕಿರುವುದು ಯುಕ್ತವಾಗಿದೆ. 'ಆದಿಪುರಾಣ'ದ ಅಚ್ಚಿನ ಪ್ರತಿಗಳ ಸಹಾಯದಿಂದ ಈ ಪದ್ಯದ ಶುದ್ಧಪಾಠವನ್ನೂ ಸರಿಯಾದ ಅರ್ಥವನ್ನೂ ಕಂಡುಕೊಳ್ಳಬಹುದು.

(೩) 'ಚಂದ್ರೋದಯವರ್ಣನಂ' ಎಂಬ ಆಶ್ವಾಸದ 'ಉಡೆಯಂ ಸಡಿಲಿಸಿಯುಡುವೊಡೆ....' ಎಂಬ ಪದ್ಯವೂ (೮-೮೭), 'ವಿವಿಧಾನ್ನಪಾನ

ಖಾನಾದಿ....' ಎಂಬ ಪದ್ಯವೂ (೮–೯೨), 'ಅಸಗವನೆ ಕೆಯ್ಗೆ ತೋಟಕ್ಕೆ....' ಎಂಬ ಪದ್ಯವೂ (೮–೧೧೫ ಅ.ಟಿ.), 'ಒಲವೆಂದುಂ ನಿಲಲಱಿಯದು....' ಎಂಬ ಪದ್ಯವೂ (೮-೧೧೭) ಕ್ರಮವಾಗಿ ಚಂದ್ರರಾಜನ 'ಮದನತಿಲಕ'ದ ಅಷ್ಟಮಾಧಿಕಾರದ ೪೦, ೪೨, ೪೯ ಮತ್ತು ೬೧ನೆಯ ಪದ್ಯಗಳ ಭಿನ್ನಪಾಠಗಳಾಗಿವೆ. ಇವುಗಳಲ್ಲಿ ಮದತಿ.ದ ೮–೪೦ರ ಒಂದು ಪದ್ಯಕ್ಕೆ ಅದರ ಸಂಪಾದಕರು ಸೂ.ಸು.ದ ಪಾಠಾಂತರವನ್ನು ಸೂಚಿಸಿದ್ದಾರೆ. ಇತರತ್ರ ಹೇಗೋ ಹಾಗೆ ಸೂ. ಸು. ದ ಈ ಭಿನ್ನಪಾಠಗಳೇ ಮದತಿ.ದ ಅಚ್ಚಿನ ಪ್ರತಿಯ (ಧಾರವಾಡ, ೧೯೫೩) ಪದ್ಯಪಾಠಗಳಿಗಿಂತ, ಅರ್ಥ ಮತ್ತು ಛಂದಸ್ಸುಗಳ ದೃಷ್ಟಿಯಿಂದ ಶುದ್ಧವೂ ಗ್ರಾಹ್ಯವೂ ಆಗಿವೆಯೆಂಬುದು ಸ್ಪಷ್ಟ.

(೪) 'ಮಂತ್ರವರ್ಣನಂ' ಎಂಬ ಆಶ್ವಾಸದಲ್ಲಿ ಬರುವ 'ವೇದವಿದಂ ಕಾಲತ್ರಯವೇದಿ....' ಎಂಬ ಕಂದಪದ್ಯ (೧೬–೫೩) 'ಶಬ್ದಮಣಿದರ್ಪಣ'ದಲ್ಲಿ ೧೧೫ನೆಯ ಸೂತ್ರದ ಅಡಿಯಲ್ಲಿ ೧ನೆಯ ಪ್ರಯೋಗವಾಗಿಯೂ ಬಂದಿದೆ.

೧೯೬೫]

ಕುವಲಯಾಮಲ ಖಡ್ಗನೀಲಃ

ಇದು ಒಂದು ಪಾಠಾಂತರ ವಿಚಾರ. ಇದು 'ಮಧ್ಯಮ ವ್ಯಾಯೋಗ' ವೆಂಬ ಭಾಸಕೃತ ಸಂಸ್ಕೃತ ನಾಟಕದ ನಾಂದೀ ಪದ್ಯದ ಒಂದು ಸಮಸ್ತಪದಕ್ಕೆ ಸಂಬಂಧಪಟ್ಟದ್ದು :

ಮಧ್ಯಮ ವ್ಯಾಯೋಗದ ನಾಂದೀ ಪದ್ಯ ಹೀಗಿದೆ :

> ಪಾಯಾತ್ ಸ ವೋ ಸುರವಧೂ ಹೃದಯಾವಸಾದಃ
> ಪಾದೋ ಹರೇಃ ಕುವಲಯಾಮಲ ಖಡ್ಗನೀಲಃ
> ಯಃ ಪ್ರೋದ್ಯತಸ್ತ್ರಿಭುವನೈಕಮಣೇ ರರಾಜ
> ವೈದೂರ್ಯ ಸಂಕ್ರಮ ಇವಾಂಬರ ಸಾಗರಸ್ಯ॥

ಈ ಪದ್ಯದಲ್ಲಿ ಶ್ರೀಹರಿಯ ಪಾದಕ್ಕೆ ಕೊಟ್ಟಿರುವ ನಾಮವಿಶೇಷಣ ಗಳಲ್ಲಿ 'ಕುವಲಯಾಮಲ ಖಡ್ಗನೀಲಃ' ಎಂಬುದರ ಬಗೆಗೆ ೧೯೧೭ರಲ್ಲಿ ಪ್ರಕಟ ವಾದ ಪೂನಾ ಮುದ್ರಣದ ಮಧ್ಯಮ ವ್ಯಾಯೋಗವನ್ನು ಸಂಪಾದಿಸಿರುವ ಎಸ್. ಎಮ್. ಪರಂಜಪೆ ಅವರು ಹೀಗೆ ಟಿಪ್ಪಣಿ ಬರೆದಿದ್ದಾರೆ :

"ಕುವಲಯವತ್ ಅಮಲ ಖಡ್ಗವತ್ ಚ ನೀಲಃ seems to be the meaning of the phrase. The blade of a bright and sharpened sword may appear to be ನೀಲ; also compare: ಅಸಿಃ ಖಲು ತೀಕ್ಷ್ಣಂ ಶಿಖಿಗ್ರೀವಾಮೋಚಕಃ, ಚಾರುದತ್ತ 1–15; but for ನೀಲತ್ವ a ಖಡ್ಗ is not the usual standard of comparison. And hence it may be conjuctured that the original reading might be ಖಂಡ instead of ಖಡ್ಗ. If the emendation is adopted, the meaning will be 'blue like a spotless collections of ಕುವಲಯ lotuses"

(ಇದರರ್ಥ ಹೀಗೆ: 'ಕುವಲಯವತ್ ಅಮಲಖಡ್ಗವತ್ ಚ ನೀಲಃ' ಎಂಬುದು ಈ ಸಮಾಸಪದದ ಅರ್ಥವಾಗಿರಬೇಕು. ಹೊಳೆಯುವ ಮತ್ತು ಹರಿತವಾದ ಖಡ್ಗದ ಧಾರೆಯು ನೀಲವರ್ಣವಾಗಿ ತೋರಬಹುದು; ಹೋಲಿಸಿ- ಅಸಿಃ ಖಲು ತೀಕ್ಷ್ಣಂ ಶಿಖಿಗ್ರೀವಾಮೇಚಕಃ–ಚಾರುದತ್ತ 1–15; ಆದರೆ ನೀಲತ್ವಕ್ಕೆ ಖಡ್ಗವು ಹೋಲಿಕೆಗೆ ಪ್ರಸಿದ್ಧ ವಿಷಯವಲ್ಲ. ಆದಕಾರಣ ಮೂಲ ಪಾಠವು ಖಡ್ಗವೆಂಬುದಕ್ಕೆ ಬದಲಾಗಿ 'ಖಂಡ'ವೆಂದಿರಬಹುದೆಂದು ಊಹಿಸ ಬಹುದು. ಈ ಸೂಚನೆ ಒಪ್ಪಿತವಾದರೆ ಅರ್ಥವು 'ಕುವಲಯಗಳ ಅಮಲ ಖಂಡದಂತೆ ಎಂದರೆ ಸಮೂಹದಂತೆ ನೀಲವಾಗಿ' ಎಂದಾಗುವುದು.)

ಈ ಟಿಪ್ಪಣಿ ಅಷ್ಟು ಸಮಂಜಸವೆಂದು ತೋರುವುದಿಲ್ಲ. ಅದಕ್ಕೆ ಕೆಲವು ಕಾರಣಗಳನ್ನು ಇಲ್ಲಿ ಸೂಚಿಸಿದೆ :

(i) ಗ್ರಂಥಪಾಠದ ನಿರ್ಣಯದಲ್ಲಿ ಸಂಪಾದಕನು ಪಾಠಾಂತರ ಗಳಿಲ್ಲದೆಯೇ ಪಾಠವಿಚಾರ ಮಾಡುವುದು ಸಾಮಾನ್ಯವಾಗಿ ಸರಿಯಲ್ಲ. ಪ್ರಸಕ್ತ, ಮಧ್ಯಮವ್ಯಾಯೋಗದ ಪೂನಾ ಮುದ್ರಣದಲ್ಲಿ 'ಖಡ್ಗ' ಎಂಬುದಕ್ಕೆ ಪಾಠಾಂತರಗಳನ್ನು ಕೊಟ್ಟಿಲ್ಲ. ಆದಕಾರಣ ಆ ಕೃತಿಯ ಎಲ್ಲ ಪ್ರತಿ ಗಳಲ್ಲಿಯೂ ಖಡ್ಗವೆಂಬುದೇ ಪಾಠವಿರುವುದು ಕಂಡುಬರುತ್ತದೆ. ಕವಿಯ ಇನ್ನೊಂದು ಕೃತಿಯಾದ 'ಚಾರುದತ್ತ'ದಲ್ಲಿ ಸಂಪಾದಕರೇ ತೋರಿಸಿರುವಂತೆ ತೀಕ್ಷ್ಣವಾದ ಖಡ್ಗವು ಶಿಖಿಗ್ರೀವದ ಮೇಚಕದಂತಿತ್ತು ಎಂಬ ಅಭಿಪ್ರಾಯದ ವಾಕ್ಯವಿದೆ. ಅಂದ ಮೇಲೆ ಕವಿಯ ಆಶಯ 'ಖಡ್ಗನೀಲಃ' ಆಗಿರಬೇಕೇ ಹೊರತು 'ಖಂಡನೀಲಃ' ಆಗಿರಲಾರದು. ಅಲ್ಲದೆ ಶ್ರೀಹರಿಯ ಏಕ ಕಮಲ ಪಾದಕ್ಕೆ ಏಕ ಕುವಲಯದ ನೀಲವರ್ಣದ ಉಪಮೆ ಉಚಿತವಾಗಿ ತೋರುವಂತೆ ಕುವಲಯಾಮಲಖಂಡದ ಉಪಮೆ ಅಷ್ಟು ಉಚಿತವಾಗಿ ತೋರುವುದಿಲ್ಲ. ಸಂಪಾದಕರಿಗೆ ಬಹುಶಃ ಖಡ್ಗನೀಲತ್ವದ ಸ್ಪಷ್ಟಚಿತ್ರ ಮನಸ್ಸಿನಲ್ಲಿ ಮೂಡಿಲ್ಲ ದಿರುವುದೇ ಈ ರೀತಿಯ ಅನುಮಾನಕ್ಕೆ ಆಸ್ಪದವಾಗಿರಬೇಕು.

(ii) ಹೊಳೆಯುವ ಮತ್ತು ಹರಿತವಾದ ಖಡ್ಗಧಾರೆಯು (ಖಡ್ಗವೇ ಅಲ್ಲದೆ ಇತರ ಚಾಕು ಕುಡುಗೋಲು ಮುಂತಾದ ಲೋಹವಸ್ತುಗಳೂ) ಕಪ್ಪು ,,

ಮತ್ತು ನೀಲಿಯ ಬಣ್ಣದ ಮಿಶ್ರಛಾಯೆಯನ್ನು ಪಡೆದಿರುವುದು ಕಂಡ ವಿಷಯ. ಅಗ್ನಿಸಂಪರ್ಕದಿಂದಲೂ ಸೂರ್ಯನ ತಾಪದಿಂದಲೂ ಉಕ್ಕು ಮುಂತಾದ ಲೋಹವಲ್ಲಿ ಈ ಕಾಂತಿ ಸಹಜವೆಂಬುದು ವಸ್ತುಜ್ಞಾನದ ವಿಷಯ.

(iii) ಒಂದೆರಡು ಕಾವ್ಯ ನಿದರ್ಶನಗಳನ್ನೂ ಗಮನಿಸಬಹುದು: (ಅ) ಪಂಪ ಕವಿಯ ವಿಕ್ರಮಾರ್ಜುನವಿಜಯದ ಆಶ್ವಾಸ ೭–ಪದ್ಯ ೭೧ರಲ್ಲಿ ಶರತ್ಕಾಲದ ವೈಭವವನ್ನು ವರ್ಣಿಸುತ್ತ ಕವಿ ಈ ಅಂಶವನ್ನು ಕೊಡುತ್ತಾನೆ:

ಪುಳಿಯೊಳ್ ಕರ್ಚಿದ ಬಾಳಬಣ್ಣಮನೆ ಪೋಲ್ವಾಕಾಶಮಾಕಾಶ ಮಂಡಳಮಂ ಪರ್ವಿದ ಬೆಳ್ಮುಗಿಲ್ ಮುಗಿಲ ಬೆಳ್ಪೊಳ್ ಪೊಕ್ಕು ತಳ್ಪೊಯ್ಯೆ ಬಾಳ್ವಳ ನೀಳ್ದಿರ್ದ ದಿಶಾಳಿ; ಶಾಳಿವನ ಗಂಧಾಂಧ ದ್ವಿರೇಫಾಳಿ; ಕಣ್ಗೊಳಿಸಿ ತ್ತೊರ್ಮೆಯೆ ಬಂದುದಂದು ಶರದಂ ಲೋಕಕ್ಕೆ ಕಣ್ ಬರ್ಪಿನಂ||.

'ಹುಳಿಯಿಟ್ಟು ತೊಳೆದ ಕತ್ತಿಯ ಬಣ್ಣವನ್ನು ಹೋಲುವ ಆಕಾಶ' ಎಂಬ ಮಾತು ಇಲ್ಲಿ 'ಅಮಲ ಖಡ್ಗ ನೀಲಃ' ಎಂಬ ಮಾತನ್ನು ಹೋಲುತ್ತದೆ. ಇಲ್ಲಿ ಆಕಾಶಕ್ಕೇ ಕತ್ತಿಯ ಬಣ್ಣದ ಹೋಲಿಕೆ ಕೊಟ್ಟಿರುವುದು ಖಡ್ಗನೀಲತ್ವಕೆ. ಪ್ರಬಲಸಾಕ್ಷ್ಯವೆನ್ನಬೇಕು. ಕವಿಯೆಂತೋ ಅಂತು ಯೋಧನೂ ಆಗಿದ್ದ ಪಂಪನು ಕೊಡುವ ಉಪಮೆ ವಸ್ತುಜ್ಞಾನಕ್ಕೆ ಎಂದೂ ವಿರೋಧವಾಗಿರದು.

(ಆ) ನಾಗಚಂದ್ರ ಕವಿಯ ರಾಮಚಂದ್ರಚರಿತ ಪುರಾಣದ ಆಶ್ವಾಸ ೯–ಪದ್ಯ ೨೧ರಲ್ಲಿ ಸೂರ್ಯಹಾಸವೆಂಬ ಖಡ್ಗದ ಕಾಂತಿಯನ್ನು ವರ್ಣಿಸುವಾಗ ಉತ್ಪಲವೆಂಬ ಶಬ್ದದ ಔಚಿತ್ಯವನ್ನು ಗಮನಿಸಬೇಕು.

ಜಯಲಕ್ಷ್ಮಿಯ ನಯನೋತ್ಪಲ
ಮಯೂಖಮೆನೆ ತಾನೆ ಬಂದು ಕರಕಿಸಲಯ ಕಾಂತಿ
ಯಿನೇಂ ರಾಗಂಬೆತ್ತುದೊ
ಜಯಾಸಿ ಪೊಗರಿಳಿಸೆ ಕಿಸುರ ಮಸಿಯಕ್ಕರಮಂ ||

(ಇ) ಅದೇ ಕಾವ್ಯದ ಆಶ್ವಾಸ ೪–ಪದ್ಯ ೧೨೩ನ್ನು ನೋಡಿ

ತ್ವರಿತದಿನೆಯ್ದುವಂದು ಪುರಮಂ ರಥನೂಪುರ ಚಕ್ರವಾಳಮಂ। ಪುರ
ವನವೀಥಿಯೊಳ್ ನಡೆಯೆ ವಾಜಿ ವಿಳಂಬಿತದಿಂ ಧರಾಧಿಪಂ। ಘನರೆಗೆ ಪಾಯ್ದು
ಕಯ್ಯ ಕರವಾಳಳಿಮಾಳೆ ಸರೋಜಕೋಶದೊಳ್। ಮೊರೆಯದೆ ನೀಳ್ದುವೋಲಿರೆ
ವಸಂತನನೇಳಿಸಿದಂ ವನಾಂತದೊಳ್॥.

ಇಲ್ಲಿ "ಕಯ್ಯ ಕರವಾಳಳಿಮಾಳೆ ಸರೋಜಕೋಶದೊಳ್ ಮೊರೆಯದೆ ನೀಳ್ದುವೋಲಿರೆ" ಎಂಬ ಮಾತನ್ನು ಗಮನಿಸಬೇಕು. 'ದುಂಬಿಗಳ ಸಾಲು ತಾವರೆಯ ಹೂವೊಳಗೆ ಮೊರೆಯದೆಯೇ ಸಾಲುಗಟ್ಟಿ ನಿಂತಂತೆ ಕೈಯಲ್ಲಿ ಕತ್ತಿ ಶೋಭಿಸಿತು' ಎಂದು ಇದರ ಅಭಿಪ್ರಾಯ. ಇಲ್ಲಿ ಕತ್ತಿಯ ಬಣ್ಣವು ದುಂಬಿಯ ಮೈಬಣ್ಣವನ್ನೂ ಅಂಗೈಯ ಬಣ್ಣವು ತಾವರೆಯ ಬಣ್ಣವನ್ನೂ ಹೋಲುವಂತೆ ತಿಳಿಸಿರುವುದು ಸ್ಪಷ್ಟವಾಗಿದೆ.

ಮೇಲೆ ಕೊಟ್ಟಿರುವ ಸ್ವಲ್ಪ ಸಾಮಗ್ರಿಯ ಸಹಾಯದಿಂದಲೇ ಖಡ್ಗದ ನೀಲತ್ವ ವಿಚಾರದಲ್ಲಿ ಸಂದೇಹ ನಿರಸನವಾಗುವುದು ಸಾಧ್ಯ. ಆದ ಕಾರಣ ಇಲ್ಲಿಯ ಮೂಲ ಪಾಠ 'ಕುವಲಯಾಮಲ ಖಡ್ಗನೀಲಃ' ಎಂದೇ ಇರಬೇಕೆಂದು ನನ್ನ ತಿಳಿವಳಿಕೆ.

೧೯೫೦]

ಸೂಕ್ತಿಸುಧಾರ್ಣವದ ಛಂದಸ್ಸಿನ ಕೆಲವಂಶಗಳು

"ಸೂಕ್ತಿ ಸುಧಾರ್ಣವದಲ್ಲಿ ಕಂದ ವೃತ್ತಗಳಲ್ಲದೆ ಬೇರೆಯ ಛಂದಸ್ಸಿನ ಪದ್ಯಗಳು ಉದಾಹೃತವಾಗಿಲ್ಲ. ವೃತ್ತಗಳಲ್ಲಿಯೂ ಮಧುಪಾನ ವರ್ಣನೆಯಲ್ಲಿ ಬರುವ ಚಿತ್ರಲಯ, ಲಲಿತ, ಮಲ್ಲಿಕಾಮಾಲೆ, ಲಯೋತ್ತರ ಅಥವಾ ಲಯಗ್ರಾಹಿ ಜಾತಿಗೆ ಸೇರಿದ ಒಂದೊಂದು ಪದ್ಯಗಳನ್ನು ಬಿಟ ರೆ ಉಳಿದುವೆಲ್ಲ ಕನ್ನಡದಲ್ಲಿ ಪ್ರಸಿದ್ಧವಾದ ಉತ್ಪಲಮಾಲೆಯೇ ಮೊದಲಾದ ಆರು ಸಂಸ್ಕೃತ ವೃತ್ತಗಳು. ದೇಶೀಯ ಛಂದಸ್ಸುಗಳಾದ ರಗಳೆ, ಷಟ್ಪದಿ ಮೊದಲಾದುವು ಆಗಿನ ಪಂಡಿತರ ದೃಷ್ಟಿಯಲ್ಲಿ ಗಣ್ಯವಾಗಿದ್ದಿರಲಾರದು"–ಎಂದೂ, "ಈ ಸಂಕಲನದಲ್ಲಿ ಆಗತಾನೆ ರೂಢಿಗೆ ಬರುತ್ತಿದ್ದ ಷಟ್ಪದಿ, ರಗಳೆ ಮೊದಲಾದ ಛಂದಸ್ಸಿನ ಪದ್ಯಗಳಾವುವೂ ಇಲ್ಲದುದರಿಂದ ಅವಿನ್ನೂ ಪಂಡಿತರ ಮನ್ನಣೆಗೆ ಪಾತ್ರವಾಗಿರಲಿಲ್ಲವೆಂದು ಹೇಳಬಹುದು,"–ಎಂದೂ, ಆ ಗ್ರಂಥದ ಮುನ್ನುಡಿಯಲ್ಲಿ (ಪು. xxiii ಮತ್ತು xxvi) ಅದರ ಸಂಪಾದಕರು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯಗಳಲ್ಲಿ ವಿಚಾರಣೀಯವಾಗಿ ನನಗೆ ಕಂಡುಬಂದ ಅಂಶಗಳನ್ನು ಸ್ವಲ್ಪಮಟ್ಟಿಗೆ ವಿಮರ್ಶಿಸಿದ್ದೇನೆ.

ಸೂ. ಸು. ವು ಬಲುಮಟ್ಟಿಗೆ ೧೩ನೆಯ ಶತಾಬ್ದದ ಮಧ್ಯಭಾಗದಲ್ಲಿ ರಚಿತವಾಗಿರಬೇಕೆಂಬುದು ವಿದ್ವಾಂಸರ ಸಾಮಾನ್ಯಗ್ರಹಿಕೆ. ಈ ವೇಳೆಗಾಗಲೆ ಸಮಾಜದಲ್ಲಿ ವೀರಶೈವಧರ್ಮೋಜ್ಜೀವನವೂ ಸಾಹಿತ್ಯದಲ್ಲಿ ದೇಶ್ಯಪದ್ಧತಿಯ ವಿಜೃಂಭಣವೂ ತಲೆದೋರಿ ೫೦–೬೦ ವರ್ಷಗಳಾದರೂ ಸಂದಿದ್ದವು. ಪ್ರೌಢವಾದ ಚಂಪೂ ಶೈಲಿಯ ವ್ಯಾಮೋಹವೇನೋ ಕಡಿದುಹೋಗದೆ ಇನ್ನೂ ಸ್ವಲ್ಪಕಾಲ ವೃದ್ಧಿಂಗತವಾಗಿಯೇ ಸಾಗಿತ್ತು. ಜೈನಮತೀಯನೂ ಸುಮನೋಬಾಣ ಜನ್ನರ ನಂಟನೂ ಆದ ಮಲ್ಲಿಕಾರ್ಜುನ ತನ್ನ ಸಂಕಲನ ಗ್ರಂಥಕ್ಕೆ ಜೈನಕವಿ ಪರಂಪರೆ ಕಟ್ಟಿ ಬೆಳೆಸಿದ ಚಂಪೂಕಾವ್ಯಸಮೃದ್ಧಿಯಿಂದ ಸ್ಫೂರ್ತಿ

ಯನ್ನೂ ವಿಷಯಸಂಪತ್ತನ್ನೂ ಸಹಜವಾಗಿಯೇ ಪಡೆದುಕೊಂಡುದನ್ನು ಅವನ ಗ್ರಂಥ ಚೆನ್ನಾಗಿಯೇ ಪ್ರತಿಬಿಂಬಿಸಿದೆ. ಇದು ಹೆಸರಿಂದ, ಸ್ವರೂಪದಿಂದ ಸಂಕಲನಗ್ರಂಥವಾದರೂ ಕವಿ ಇದನ್ನು ಮಹಾಕಾವ್ಯವಾಗಿಯೇ ಭಾವಿಸಿದನೆಂದು ಪೀಠಿಕಾ ಪ್ರಕರಣದಿಂದ, ವರ್ಣನಾಂಗಗಳನ್ನು ಬಲುಮಟ್ಟಿಗೆ ಕಾವ್ಯೋಚಿತವಾಗಿ ಯೋಜಿಸಿರುವುದರಿಂದ ತಿಳಿಯಬಹುದಾಗಿದೆ. ಒಂದು ನಿರ್ದಿಷ್ಟ ಕಥಾವಸ್ತುವಿಲ್ಲ ದಿರುವುದರಿಂದ ಗದ್ಯಪದ್ಯಮಿಶ್ರಿತ ಚಂಪೂಕೃತಿ ಆಗಲು ಸಾಧ್ಯವಾಗದೆ, ವಿಶೇಷ ವಾಗಿ ಕಂದ ವೃತ್ತಗಳನ್ನೊಳಗೊಂಡು ಸಂಸ್ಕೃತ ಮಹಾಕಾವ್ಯ ಮಾರ್ಗವನು ನೆನೆಪು ಮಾಡುತ್ತದೆ. ಆದರೆ ವಾಸ್ತವವಾಗಿ ಇದು ಕನ್ನಡದ ಚಂಪೂಶೈಲಿಯ ಹಾದಿಯಲ್ಲಿ ಸಾಗಿದ ಕೃತಿಯೆಂದೇ, ವಿಶಿಷ್ಟರೀತಿಯ 'ಮಹಾಕಾವ್ಯ'ವೆಂದೇ ತಿಳಿಯುವುದು ತಪ್ಪಲ್ಲ. ಹೀಗೆ ಹೇಳುವುದರ ಅಭಿಪ್ರಾಯ ಎಂದರೆ, ಚಂಪೂ ಕೃತಿಗಳಲ್ಲಿ ಬಳಕೆಯಾದಷ್ಟುಮಟ್ಟಿಗೆ ಅಕ್ಕರ, ರಗಳೆ (ಮತ್ತು ಷಟ್ಪದಿ)–ಈ ಛಂದಸ್ಸಿನ ಪದ್ಯಗಳನ್ನು ಹಿಂದಿನವರಂತೆಯೇ ಉದ್ಧರಿಸಲು ಕವಿಗೆ ಯಾವ ರೀತಿಯ ನಿಷೇಧವೂ ವಿದ್ವಜ್ಜನಮಾನ್ಯತೆಯ ಸಮಸ್ಯೆಯೂ ಇರಲಿಲ್ಲ ಎಂಬು ದನ್ನು ತಿಳಿಸುವುದೇ ಆಗಿದೆ. ಹೇಗೂ ಅವನು ಕೆಲವು ತ್ರಿಪದಿಗಳನ್ನು ಎತ್ತಿ ಬಳಸಿದ್ದಾನೆ (೮–೩೩೯–೩೪೮). ಯಾವುದೇ ವರ್ಣನೆಗಾಗಲಿ ಸುಂದರ ಸೂಕ್ತಿವಿಶೇಷಗಳಿಗಾಗಲಿ ಅವನ ಅಭಿರುಚಿಗೆ ಒಪ್ಪುವಂಥ ಉದಾಹರಣೆ ಗಳು ಕಂದವೃತ್ತಗಳ ಛಂದಗಳಲ್ಲಿಯೇ ಅಪಾರವಾಗಿ ಅಪ್ರಯತ್ನಪೂರ್ವಕ ವಾಗಿ ಅವನ ಕೈವಶವಾಗುತ್ತಿರುವುದರಿಂದ ದೇಶ್ಯ ಛಂದಃಪ್ರಕಾರಗಳ ವಿರಳಪದ್ಯಪ್ರಪಂಚವನ್ನು ಅನ್ಯಕಾವ್ಯಗಳಿಂದ ಆಯ್ದು ಬಳಸಬೇಕಾಗುವುದು ಆತನಿಗೆ ಅನಿವಾರ್ಯವಾಗಲಿಲ್ಲ. ಸಂಯೋಜಿತ ಗ್ರಂಥವನ್ನೂ ವಸ್ತುಕ ಮಾರ್ಗ ದಲ್ಲಿ ನಡೆಸುವ ಗುರಿಯನ್ನು ಹಿಡಿದಿದ್ದ ಕಾರಣ ರಾಘವಾಂಕನ ಷಟ್ಪದಿಕಾವ್ಯ ಗಳಿಂದಲೂ ಹರಿಹರನ ರಗಳೆಗಳಿಂದಲೂ ಪ್ರಯೋಗಗಳನ್ನು ಎತ್ತಿಕೊಳ್ಳಲಿಲ್ಲ. ಅವು ತನಿಯಾಗಿ ವರ್ಣಕ ಮಾರ್ಗದ ಕೃತಿಗಳು. ಹರಿಹರನ ಗಿರಿಜಾಕಲ್ಯಾಣ ದಿಂದ ಮಾತ್ರ ಹತ್ತಾರು ಪ್ರಯೋಗಗಳನ್ನು ಉದಾಹರಿಸಿ ರಗಳೆಗಳ ಕಾವ್ಯ ಖಂಡಗಳನ್ನು ಉದಾಹರಿಸದಿರುವುದಕ್ಕೆ ಕೂಡ ಇದೇಕಾರಣ.

(i) ಸೂ. ಸು. ದಲ್ಲಿ ಉತ್ಪಲಮಾಲೆಯೇ ಮೊದಲಾದ 'ಖ್ಯಾತ ಕರ್ಣಾಟಕ'ವೃತ್ತಗಳೂ ಕಂದಗಳೂ ಅಧಿಕ ಸಂಖ್ಯೆಯಲ್ಲಿದ್ದು ಅಲ್ಲಲ್ಲಿ ಚೆದರಿ

ದಂತೆ ತರಳ (೨–೩೨ ; ೧೩–೧೨), ಮಲ್ಲಿಕಾಮಾಲೆ (೭–೬೪ ; ೧೩–೧೧), ಮಾಲಿನಿ (೮–೩೨ ; ೧೧–೩೬ ; ೧೨–೯೭) ಎಂಬ ವರ್ಣವೃತ್ತಗಳು ಅಲ್ಪ ಸಂಖ್ಯೆಯಲ್ಲಿವೆ. ಇವೆಲ್ಲ ನಿಯಮಾನುಸಾರ ಇವೆ.[1] ೮ನೆಯ ಆಶ್ವಾಸದಲ್ಲಿ ಬರುವ ೧೦ ತ್ರಿಪದಿಗಳು ಅಂಶಗಣಘಟಿತಗಳೇ ಆಗಿದ್ದು ನಿಯಮಾನುಸಾರ ಇವೆ.[2]

(ii) ಮಧುಪಾನವರ್ಣನೆಯಲ್ಲಿ ಬರುವ ಕೆಲವು ಅಪೂರ್ವವೃತ್ತಗಳು ಪ್ರತ್ಯೇಕಪರಿಶೀಲನೆಗೆ ಅರ್ಹವಾದವು. ಅವು ೯, ೧೦ ಮತ್ತು ೧೩ನೆಯ ವೃತ್ತಗಳು.

'ತೋರಮುಡಿ ಬಿಟ್ಟಿಪ್ಪುದಾರುಣಿಯೊಳಗ್ರಕಚಮಾರತಿಯನೆತ್ತೆ....' ಎಂದು ಮೊದಲಾಗುವ ೯ನೆಯ ಪದ್ಯಕ್ಕೆ ಆಕರ ತಿಳಿಯದು. ಪಾಠದೋಷ ಗಳೂ ಅರ್ಥಕ್ಲೇಶಗಳೂ ಇವೆ. ಪ್ರಥಮ ಪಾದದಲ್ಲಿಯೇ ಇವನ್ನು ಕಾಣ ಬಹುದು. ಆದರೆ ಉಳಿದ ಪಾದಗಳ ಗಣವಿನ್ಯಾಸವನ್ನು ಲಕ್ಷಿಸುವಾಗ, ಇದು ನಿಶ್ಚಿತವರ್ಣಗಣವಿನ್ಯಾಸವುಳ್ಳ ವರ್ಣವೃತ್ತ ಜಾತಿಯ ಸಮಚತುಷ್ಪದೀವೃತ್ತ ವೆಂದು ಸ್ಪಷ್ಟವಾಗುತ್ತದೆ.[3] ಇಲ್ಲಿಯ ಗಣವಿನ್ಯಾಸ : 'ಭಜಸನಭಜಸನಭಯ.' ಮೊದಲ ಪಾದವೊಂದು ದೋಷಯುಕ್ತ. ಉಳಿದಂತೆ ಪ್ರತಿಪಾದದಲ್ಲಿಯೂ ೪ನೆಯ ಗಣದ ಆದ್ಯಕ್ಷರ, ೬ನೆಯ ಗಣದ ಅಂತ್ಯಾಕ್ಷರ ಹಾಗೂ ಪ್ರಾಸಾಕ್ಷರ ಒಂದೇ ವರ್ಣದ್ದಾಗಿವೆ.[4] ರಕಾರದ ವೃತ್ತ್ಯನುಪ್ರಾಸ ಸ್ಪಷ್ಟ. ಛಂದೋಂಬು ಧಿಯ ಸಮವೃತ್ತ ಪ್ರಕರಣದಲ್ಲಿ ಇದರ ಲಕ್ಷಣ ಉಕ್ತವಾಗಿಲ್ಲ, ತೃತೀಯಾಧಿ ಕಾರದಲ್ಲಿಯ 'ಮಾಲಾವೃತ್ತಂಗಳೊಳಗೆ ಪುಟ್ಟುವ' ಲಲಿತವೃತ್ತದ ಲಕ್ಷಣಕ್ಕೆ

---

1 ೧೩–೧೨ ತರಳ ವೃತ್ತದ ಚತುರ್ಥಪಾದ ಅಶುದ್ಧ.

2 ೮–೩೪೫ ತ್ರಿಪದಿಯಲ್ಲಿ ೮ನೆಯದನ್ನು ರುದ್ರಗಣವಾಗಿ ಗಣಿಸಬೇಕು.

3 ೨೬ ಅಕ್ಷರಗಳ ಉತ್ಕೃತಿ ಛಂದಸ್ಸಿನ ಮಿತಿ ಮೀರಿಯೂ ಸಮವೃತ್ತಗಳು ರಚನೆ ಯಾಗಲು ಸಾಧ್ಯವಿದೆಯೆಂಬುದಕ್ಕೆ ಛಂದಶ್ಶಾಸ್ತ್ರಗಳಲ್ಲಿ ಅಂಥವುಗಳ ಲಕ್ಷಣನಿರ್ವಚನ ವಿರುವುದೇ ಸಾಕ್ಷಿ.

4 ವಡಿಯ ನಿಯಮ ಇಲ್ಲಿಗೆ ಅನನ್ವಿತವಾದ್ದರಿಂದ ಇದನ್ನು ಅನುಪ್ರಾಸವಿಶೇಷ ವಾಗಿ ತಿಳಿಯುವುದು ಯುಕ್ತ.

ಇದು ಒಪ್ಪುತ್ತದೆ (ಮದ್ರಾಸ್ ಪ್ರತಿ, III–೩–೫೫)[5]. ಸೂ. ಸು. ದ ಸಂಪಾದಕರು 'ಲಲಿತ' ಎಂದು ಸೂಚಿಸಿರುವುದು ಇದನ್ನೇ ಇರಬೇಕು. ಹೇಮಚಂದ್ರನ 'ಛಂದೋನುಶಾಸನ'ದಲ್ಲಿಯೂ ಜಯಕೀರ್ತಿಯ 'ಛಂದೋನುಶಾಸನ'ದಲ್ಲಿಯೂ ಈ ವೃತ್ತಲಕ್ಷಣವನ್ನು ವಿವರಿಸಿದೆ. ಹೇಮಚಂದ್ರನು 'ನೃತ್ತಲಲಿತಮ್' ಎಂದೂ (II–೩೮೩) ಜಯಕೀರ್ತಿಯು 'ವೃತ್ತಲಲಿತಮ್' ಮತ್ತು 'ನೃತ್ತಲಲಿತಮ್' ಎಂದೂ (II–೨೭೧) ಹೆಸರಿಸಿದ್ದಾರೆ. ಹೇಮಚಂದ್ರನು ಉತ್ಕೃತಿಯಿಂದತ್ತಣ ಸಮವೃತ್ತ ಪ್ರಪಂಚದ ಶೇಷಜಾತಿಯಲ್ಲಿ ಒಂದು ಭೇದವಾಗಿಯೂ ಜಯಕೀರ್ತಿಯು ಸಮವೃತ್ತ ಜಾತಿಯ ಮಾಲಾ ವೃತ್ತಗಳಲ್ಲಿ[6] ಒಂದು ಭೇದವಾಗಿಯೂ ಇದನ್ನು ಗಣಿಸಿದ್ದಾರೆ. ಒಟ್ಟಿನಲ್ಲಿ ಸೂ. ಸು. ದ ೧೩–೯ನೆಯ ವೃತ್ತವನ್ನು ನಾಗವರ್ಮ, ಹೇಮಚಂದ್ರ, ಜಯಕೀರ್ತಿ ಇವರು ನಿರ್ದೇಶಿಸಿರುವ ಯಾವುದೇ ಹೆಸರಿಂದ ಕರೆಯಲಡ್ಡಿಯಿಲ್ಲ.

'ತುಂಬಿಗುರುಳೊಳ್ ತಡತಡಂಬಡರೆ...' ಎಂದು ಆರಂಭವಾಗುವ ೧೩–೧೧ನೆಯ ಪದ್ಯದ ಆಕರವೂ ಅನಿರ್ದೇಶಿತವೆ. ಇಲ್ಲಿಯೂ ಪಾಠದೋಷ ಅರ್ಥಕ್ಲೇಶ ಇವೆ. ೧, ೩, ೪ನೆಯ ಪಾದಗಳಲ್ಲಿ ತೊಡಕುಂಟು. ಕೊನೆಯ ಪಾದದಲ್ಲಿ ಸಂಪಾದಕರ ಪಾಠಸವರಣೆಯಿದೆ. ೨ನೆಯ ಪಾದದ ಆಧಾರದ ಮೇಲೆ ಗಣವಿನ್ಯಾಸ ಲಕ್ಷಿಸಿದರೆ ಈ ಪದ್ಯ ಪೂರ್ವೋಕ್ತ 'ಲಲಿತವೃತ್ತ'ದ

---

5 ಕಿಟ್ಟೆಲ್‌ಪ್ರತಿಯಲ್ಲಿ 'ಲಲಿತಪದಂ' ಎಂದಿದೆ. ಲಕ್ಷಣಪದ್ಯದಲ್ಲಿ 'ಲಲಿತವೃತ್ತಂ' ಎಂದಿರುವುದರಿಂದ 'ಲಲಿತವೃತ್ತ'ವೆಂದು ತಿಳಿಯುವುದು ಸರಿ. ಅಲ್ಲದೆ ಪದ್ಯದಲ್ಲಿ ಗಮನಾರ್ಹವಲ್ಲದ ಪಾಠಭೇದವಿದೆ (III–೨೩೩–೬೭).

6 ಜಯಕೀರ್ತಿ ಪ್ರತ್ಯೇಕ ಪ್ರಕರಣದಲ್ಲಿ ಮಾಲಾವೃತ್ತಗಳನ್ನು ವಿವರಿಸದೆ ಸಮವೃತ್ತಾಧಿಕಾರದಲ್ಲಿಯೇ ಅಂತರ್ಗತಗೊಳಿಸಿದ್ದಾನೆ.

ಲಕ್ಷಣಕ್ಕೆ ಸರಿಬರುತ್ತದೆ. ಇದೂ ಲಲಿತವೃತ್ತವೆಂಬ ದರಲ್ಲಿ ಸಂಶಯವಿಲ್ಲ.[7] ಹಿಂದಿನ ಪದ್ಯದಲ್ಲಿರುವಂತೆ (೧೩–೯) ಅನುಪ್ರಾಸವಿಶೇಷವನ್ನು ಇಲ್ಲಿಯೂ ಕಾಣಬಹುದು (ಕೊನೆಯ ಪಾದದಲ್ಲಿ ಸಂಪಾದಕರ ಯೋಜಿತಪಾಠ ವೃತ್ತ ಲಕ್ಷಣಕ್ಕೆ ಅನುಸಾರವಾಗಿಲ್ಲ).

'ತುಱುಗಿ ತುಂಬಿಗುರುಳ ಬಂಬಲೀ ಕಪೋಲ ರಂಗದೊಳ್....' ಎಂದು ಆರಂಭವಾಗುವ ೧೩–೧೩ನೆಯ ಪದ್ಯದ ಆಕರ ಸಂಪಾದಕರು ಸೂಚಿಸಿರುವಂತೆ ನೇಮಿಚಂದ್ರನ ಲೀಲಾವತೀ ಪ್ರಬಂಧ (೭–೨೩). ಎರಡರಲ್ಲಿಯೂ ಛಂದಸ್ಸಿನ ದೃಷ್ಟಿಯಿಂದ ಗಮನಾರ್ಹವಲ್ಲದ ಪಾಠಭೇದಗಳಿವೆ. 'ಲೀಲಾವತಿ' ಯಲ್ಲಿ ನಾಯಕಾಭ್ಯುದಯ ವರ್ಣನಾವಸರದಲ್ಲಿ ಬಂದಿರುವ ಈ ಪದ್ಯ ಸೂ. ಸು. ದಲ್ಲಿ ಮಧುಪಾನವರ್ಣನೆಯ ಪದ್ಯವಾಗಿ ಉದ್ಧೃತವಾಗಿರುವುದರ ಔಚಿತ್ಯ ನಿಜಕ್ಕೂ ಪ್ರಶ್ನಾರ್ಹವಾಗಿದೆ. ಏಕೆಂದರೆ ಶೃಂಗಾರಶೇಖರನ ರಾಜ ಭವನವನ್ನು ಅಂಗನೆಯರೂ ಅಂಕದಾನೆಯೂ ಪ್ರವೇಶಿಸುವುದನ್ನು ವೈಖರಿ ಯಿಂದ ಬಣ್ಣಿಸುವುದುದಷ್ಟೆ ಈ ಪದ್ಯದ ಉದ್ದೇಶ.[8] ಚಿತ್ರವೇನೋ ಚೆನ್ನಾಗಿದೆ; ಸರಿ, ಪದ್ಯದ ಛಂದಸ್ಸು? ಕಾವ್ಯಮಂಜರಿಯವರು 'ಲಯೋತ್ತರ' ಎಂದು ಅಚ್ಚು ಮಾಡಿದ್ದಾರೆ. ಕನ ಡ ಕೈಪಿಡಿಯ ಮಾತ್ರಾವೃತ್ತ ಪ್ರಕರಣ

---

7 'ಛಂದೋಂಬುಧಿ'ಯ ಕಿಟ್ಟೆಲ್ ಪ್ರತಿಯಲ್ಲಿ 'ಲಯಗ್ರಾಹಿ' ಎಂಬೊಂದು ಮಾತ್ರಾವೃತ್ತವುಂಟು (ಪು. 84). ಇದನ್ನು ಮದ್ರಾಸ್ ಪ್ರತಿಯಲ್ಲಿ ಮೂಲದಲ್ಲಿ ಅಂಗೀಕರಿಸದೆ ಪರಿಶಿಷ್ಟದಲ್ಲಿ ಕೊಟ್ಟಿದೆ (ಪು. 106). ನಾಗವರ್ಮನ ಶಾಸ್ತ್ರ ನಿರೂಪಣೆಯ ರೀತಿಯನ್ನು ತಿಳಿದವರಿಗೆ ಲಕ್ಷ್ಯಾಂತರ್ಗತ ಲಕ್ಷಣಪದ್ಯವಾಗಿರುವ ಈ ವೃತ್ತವು ಪ್ರಕ್ಷಿಪ್ತವೆಂದು ಸುಲಭವಾಗಿ ತೋರುತ್ತದೆ [ತ್ರಿಷ್ಟುಪ್ ಛಂದದಲ್ಲಿ 'ಲಯಗ್ರಾಹಿ' ಎಂಬ ಸಮವೃತ್ತ ಪ್ರಸಿದ್ಧವಿದೆ: ಛಂದೋ. ೨-೭೪; ಹೇಮ. ೨–೧೯೯ ; ಜಯ ೨–೧೧೮.] ಗುರುಲಘು ವಿನ್ಯಾಸದ ನಿಯತತೆಯನ್ನು ನೋಡಿದರೆ ಇದು ಮೂಲತಃ ಮಾತ್ರಾವೃತ್ತವಾಗಿರದೆ, 'ಮಾಲಾವೃತ್ತಂಗಳೊಳಗೆ ಪುಟ್ಟುವ' ಲಲಿತವೃತ್ತದ ಪರಿಣಾಮರೂಪವೆಂದು ತೋರುತ್ತದೆ.

8 ಅರ್ಥಸಾಮಂಜಸ್ಯದ ದೃಷ್ಟಿಯಿಂದ ಸೂ. ಸು. ದ ಪದ್ಯಪಾಠಕ್ಕಿಂತ ಕಾವ್ಯ ಮಂಜರಿಯವರ 'ಲೀಲಾವತೀಪ್ರಬಂಧ'ದ ಪದ್ಯಪಾಠವೇ ಗ್ರಾಹ್ಯ. ಆದರೆ 'ದಾನದೊಳ 'ಕಡಂಗೆ' ಎಂಬೆಡೆಗಳಿಗೆ 'ಗಾನದೊಳ್' 'ಕಡಂಗಿ' ಎಂಬ ಪಾಠಗಳು ಸೂಕ್ತವೆಂದು ತೋರುತ್ತದೆ.

ದಲ್ಲಿ 'ಲಯೋತ್ತರ'ದ ಲಕ್ಷಣವನ್ನು 'ಪ್ರತಿಪಾದದಲ್ಲಿಯೂ ತ್ರಿಮಾತ್ರಾಗಣವು ಹದಿನಾಲ್ಕೂ, ಪಂಚಮಾತ್ರಾಗಣವೊಂದೂ ಇರುವ ನಾಲ್ಕು ಪಾದ ಗಳುಳ್ಳದ್ದು' ಎಂದು ಹೇಳಿದೆ (ಪು. 94) ; ಇಲ್ಲಿ 'ಲೀಲಾವತಿ'ಯ ಪದ್ಯವನ್ನೆ ಲಕ್ಷ್ಯವಾಗಿ ಎತ್ತಿಕೊಂಡಿದೆ. ಪ್ರಾಯಶಃ ಕನ್ನಡ ಸಾಹಿತ್ಯದಲ್ಲಿಯೇ ಇನ್ನೊಂದು ಇಂಥ ವೃತ್ತಜಾತಿಯ ಪದ್ಯವಿರಲಾರದು. ತ್ರಿಮಾತ್ರಾಲಯದ ಓಟವನ್ನು ನೋಡಿದರೆ ಇದನ್ನು ಮಾತ್ರಾವೃತ್ತವಾಗಿ ಕಲ್ಪಿಸಿರಬೇಕೆಂದು ಭಾವಿಸುವುದು ಸಹಜ. 'ಛಂದೋಂಬುಧಿ'ಯಲ್ಲಿ ಇದು ಉಕ್ತವಾಗಿಲ್ಲ. ಸಂಸ್ಕೃತ ಛಂದೋಗ್ರಂಥಗಳಲ್ಲಿ ಜಯಕೀರ್ತಿಯೊಬ್ಬನು 'ಛಂದೋನುಶಾಸನ'ದ ಆರನೆಯ ಮಿಶ್ರಾಧಿಕಾರದಲ್ಲಿ ಲಯೋತ್ತರವೃತ್ತವನ್ನು ಲಕ್ಷಣಿಸಿದ್ದಾನೆ. ಇವನ ಅಭಿಪ್ರಾಯದಂತೆ ಇದನ್ನು ವರ್ಣಗಣ ಮತ್ತು ಮಾತ್ರಾಗಣ ಇವುಗಳ ಮಿಶ್ರ ಜಾತಿಯೆಂದು ತಿಳಿಯಬೇಕು. 'ಉತ್ಸವ' ಎಂಬ ವೃತ್ತಜಾತಿಯ ಒಂದು ಪಾದವೂ, ' ರಮಾ ' ಎಂಬ ವೃತ್ತಜಾತಿಯ ಎರಡು ಪಾದಗಳೂ ಸೇರಿ ಲಯಾನುಗಾಮಿಯೂ ಯಮಕವತ್ತರವೂ ವಿಚಿತ್ರಗತಿಯುಳ್ಳದ್ದೂ ಆಗಿರುವ ಒಂದು 'ಚತುಷ್ಪಾದಿ ಮಿಶ್ರವೃತ್ತ'ವೆಂದು ತಿಳಿಯುತ್ತದೆ (ಛಂದೋನು ಶಾಸನಂ. ೬–೩೨): (i) ಉತ್ಸವದ ಲಕ್ಷಣ: 'ಅನುಕ್ರಮವಾಗಿ ಗುರು ಲಘುಯುಗ್ಮಕದ ೭ ಗಣ+೧ ಗುರು. (ಗುರುಲಘುಯುಗ್ಮಕದ ಸ್ಥಾನದಲ್ಲಿ ೭ ನಗಣಗಳು ಬರಬಹುದು.)' (ii) ರಮಾದ ಲಕ್ಷಣ: '೧ ಜಗಣ + ೨ ಗುರು ಲಘುಯುಗ್ಮಕ + ೧ ಗುರು (ಗುರುಲಘುಯುಗ್ಮಕದ ಸ್ಥಾನದಲ್ಲಿ ನಗಣವೂ ಬರ ಬಹುದು.)' (ಛಂದೋ. ೬–೩೦, ೩೧) ಸೂ. ಸ. ದ ಪೂರ್ವೋಕ್ತ ಪದ್ಯ (೧೩–೧೩) ಈ ಲಯೋತ್ತರ ಲಕ್ಷಣಕ್ಕೆ ಸರಿಯಾಗಿದೆ. ಇದೇ ಲಕ್ಷ್ಯವನ್ನು ಆಧರಿಸಿ ಲಯೋತ್ತರ ಲಕ್ಷಣವನ್ನು ಮಾತ್ರಾ ವೃತ್ತವಾಗಿ ಹೇಳಿರುವ ಕೈಪಿಡಿಯ ನಿರೂಪಣೆಯನ್ನು ಬಿಟ್ಟು ಜಯಕೀರ್ತಿಯ ಮಿಶ್ರಜಾತಿಲಕ್ಷಣವನ್ನು ಅದಕ್ಕೆ ಹೇಳಿಕೊಳ್ಳುವುದು ಸೂಕ್ತ (ಈ ವೃತ್ತದ ಲಕ್ಷಣ ಇನ್ನೂ ವಿಚಾರಣೀಯವಾದ್ದು.)

ಸೂ. ಸು. ದ ಸಂಪಾದಕರು ಮಧುಪಾನವರ್ಣನೆಯಲ್ಲಿ ಬಂದಿರುವಂತೆ ಸೂಚಿಸಿರುವ 'ಚಿತ್ರಲಯ' ಎಂಬ ವೃತ್ತ ಇಲ್ಲಿ ಕಂಡುಬರುವುದಿಲ್ಲ.

೧೯೬೪]

ಕರ್ಣಪಾರ್ಯನ ನೇಮಿನಾಥ ಪುರಾಣದ ಕೆಲವು ಅಂಕಿತನಾಮ ಪಾಠಗಳು

ಕರ್ಣಪಾರ್ಯನ 'ನೇಮಿನಾಥ ಪುರಾಣ' ವು (ಕ್ರಿ.ಶ. ಸು. ೧೧೬೦-೭೦) ಶ್ರೀಮಾನ್ ಎಚ್. ಶೇಷ ಅಯ್ಯಂಗಾರ್ ಅವರಿಂದ ಸಂಪಾದಿತವಾಗಿ, ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೮ನೆಯ ಪ್ರಕಟಣೆಯಾಗಿ, ೧೯೪೦ರಲ್ಲಿ ಪ್ರಕಟವಾಯಿತು. ಗ್ರಂಥ ಸಂಪಾದನೆಯಲ್ಲಿ ೩ ತಾಳೆಯ ಪ್ರತಿಗಳನ್ನು (ಕ, ಖ ಮತ್ತು ಗ) ಬಳಸಿಕೊಂಡಿದೆ ; ೪ನೆಯ ಇನ್ನೊಂದು ತಾಳೆಯ ಪ್ರತಿಯ (ಘ) ಪಾಠಗಳನ್ನು ಪ್ರತ್ಯೇಕವಾಗಿ ತೋರಿಸಿದೆ. ಸಂಪಾದಕರು ಗ್ರಂಥದ ಮೂಲಪ್ರತಿಯನ್ನು ಗ್ರಂಥಪಾತವೂ ಅಶುದ್ಧ ಪಾಠವೂ ವಿಶೇಷವಾಗಿರುವ ಕ. ಪ್ರತಿಯನ್ನು ಆಧರಿಸಿಯೇ ತಯಾರಿಸಿದ್ದರೂ, ಅನ್ಯ ಪ್ರತಿಗಳ ಸಹಾಯದಿಂದ ಗ್ರಂಥವು ಆದಷ್ಟು ಮಟ್ಟಿಗೆ ಶುದ್ಧವಾಗಿಯೇ ಸಿದ್ಧವಾಗುವಂತೆ ಶ್ರಮಿಸಿದ್ದಾರೆನ್ನಬಹುದು. ಪ್ರತ್ಯಂತರಗಳ ಭಿನ್ನಪಾಠಗಳನ್ನು ಗ್ರಂಥ ಶರೀರದಲ್ಲಿ ಪುಟಗಡಿಯಲ್ಲಿ ತೋರಿಸಿರುವುದು ಸೂಕ್ತವಾಗಿಯೇ ಇದೆ. ಆದರೆ ಪಾಠಾಂತರಗಳು ಯಾವ ಯಾವ ಪ್ರತಿಗಳಿಗೆ ಸೇರಿದವು ಎಂಬುವನ್ನು ತೋರಿಸದೆ ಹೋಗಿರುವುದರಿಂದ ಶುದ್ಧ ಪಾಠ ನಿರ್ಣಯಕ್ಕೆ ಅವುಗಳ ಉಪಯುಕ್ತತೆ ತಗ್ಗಿದಂತಾಗಿದೆ.

ಪ್ರಸ್ತುತ ಲೇಖನದಲ್ಲಿ, ಕರ್ಣಪಾರ್ಯನ 'ನೇಮಿನಾಥ ಪುರಾಣ'ದ (ಕರ್ಣನೇ.) ಕೆಲವು ಅಂಕಿತನಾಮ ಪಾಠಗಳ ಸಮಸ್ಯೆಗಳನ್ನೂ ಸ್ಖಾಲಿತ್ಯಗಳನ್ನೂ ಸಂಗ್ರಹವಾಗಿ ಪರಿಶೀಲಿಸಿ ಅವುಗಳ ಶುದ್ಧಪಾಠಗಳನ್ನು ನಿರ್ಣಯಿಸುವ ಪ್ರಯತ್ನವನ್ನು ಕೆಲಮಟ್ಟಿಗೆ ಮಾಡಿದೆ. ಇದಕ್ಕೆ ಕರ್ಣನೇ., ದಲ್ಲಿಯೇ ದೊರೆಯುವ ಆಂತರಿಕ ಆಧಾರಗಳನ್ನೂ ಅದಕ್ಕೆ ಆಕರಗಳ ಸ್ಥಾನದಲ್ಲಿರುವ ಪ್ರಸಿದ್ಧ ಕೃತಿಗಳಾದ ಜಿನಸೇನಾಚಾರ್ಯರ "ಹರಿವಂಶ ಪುರಾಣ" (ಕ್ರಿ.ಶ. ೭೮೩), ಗುಣಭದ್ರಾಚಾರ್ಯರ "ಉತ್ತರ ಪುರಾಣ" (ಕ್ರಿ.ಶ. ೮೯೮) ಹಾಗೂ

ಚಾವುಂಡರಾಯನ "ಚಾವುಂಡರಾಯ ಪುರಾಣ" (ಕ್ರಿ.ಶ. ೯೭೮) ಇವುಗಳಲ್ಲಿ ದೊರೆಯುವ ಬಾಹ್ಯಾಧಾರಗಳನ್ನೂ ಆವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳಲಾಗುತ್ತದೆ.

(೧) ಆಶ್ವಾಸ ೧- ಪದ್ಯ ೬೩ :

ಇಭದತ್ತ ವಸುದತ್ತೆಯರೆಂಬ ವೈಶ್ಯದಂಪತಿಗಳಿಗೆ ಇನಕೇತುವೆಂಬ ಪುತ್ರನಾದನೆಂದು ಹೇಳಿದೆ. '....ಪುಟ್ಟಿದನವರ್ಗಿನಕೇತುವೆನಿಪ್ಪ ನಂದನಂ' ಎಂಬುದು ಮೂಲದ ಮಾತು. ಈ ಪದ್ಯದಿಂದ ಮುಂದುವರಿಯುತ್ತಿದ್ದಂತೆ, ಈ 'ಇನಕೇತು'ವಿನ ಹೆಸರು 'ಇಭಕೇತು' ಎಂಬುದಾಗಿ ಕಾಣಿಸಿಕೊಂಡಿದೆ (ನೋಡಿ ೬೬ವ. ; ೬೮; ೬೮ವ. ; ೬೯; ೭೨; ೮೯ವ..; ೯೬; ೯೬ವ.). ಈ ವೈಶ್ಯಪುತ್ರನ ಕಥೆ ಮೇಲೆ ಹೇಳಿರುವ ಹರಿವಂಶಾದಿ ಕೃತಿಗಳಲ್ಲಿಲ್ಲ. 'ಅರ್ಧನೇಮಿಪುರಾಣ'ದಲ್ಲಿ 'ಇಭ್ಯಕೇತು' ಎಂದಿದೆ. ಇದು ಹೇಗಿದ್ದರೂ ಕರ್ಣನೇ.ದ 'ಇನಕೇತು' ಎಂಬ ಏಕಾಕಿ ಪ್ರಯೋಗವು ಲಿಪಿಕಾರ ಸ್ಖಾಲಿತ್ಯವೋ ಮುದ್ರಣ ಸ್ಖಾಲಿತ್ಯವೋ ಆಗಿರುವುದೆಂದೂ, 'ಇಭಕೇತು' ಎಂಬುದೇ ಸರಿಯಾದ ರೂಪವೆಂದೂ ತಿಳಿಯಲಡ್ಡಿಯಿಲ್ಲ.

(೨) ಆಶ್ವಾಸ ೧–ಪದ್ಯ ೭೪, ೭೪ ವ. :

ಇಲ್ಲಿ ವಿಂಧ್ಯಕನೆಂಬ ಪುಳಿಂದನಾಯಕನ ಪತ್ನಿಯ ಹೆಸರನ್ನು 'ವಾಗುರೆ' ಎಂದು ಹೇಳಿದೆ. ಆದರೆ ೭೭ವ. ಮತ್ತು ೮೦ವ.ಗಳಲ್ಲಿ 'ವಾಗ್ವರೆ' ಎಂದಿದೆ. ಎರಡು ಕಡೆಯೂ ಹೆಸರಿಗೆ ಪಾಠಾಂತರಗಳನ್ನು ತೋರಿಸಿಲ್ಲ. ಇವುಗಳಲ್ಲಿ 'ವಾಗುರೆ' ಎಂಬ ಮೊದಲನೆಯ ರೂಪವೇ ಸರಿ. ಅರ್ಧನೇ. ದಲ್ಲಿ 'ವಾಗುರೆ' ಎಂದೇ ಕರೆದಿದೆ (೩–೫೫; ೩–೭೪ವ.; ೩–೭೮ವ. ಇ.). ಸಂಸ್ಕೃತದಲ್ಲಿ 'ವಾಗುರಾ' ಎಂದರೆ ಬೇಟೆಗೆ ಬಳಸುವ ಬಲೆಯೆಂದರ್ಥ. ಈಯರ್ಥದ ಹೆಸರು ಬೇಟೆಗಾರನ ಪತ್ನಿಗೆ ಸಾಂಕೇತಿಕವಾಗಿ ಒಪ್ಪುತ್ತದೆ.

(೩) ಆಶ್ವಾಸ ೧–ಪದ್ಯ ೮೯ವ. :

ಇಭಕೇತುವಿನ ಮಿತ್ರನ ಹೆಸರನ್ನು ಇಲ್ಲಿ 'ದೀವ(ಳ)ರ' ಎಂದು ಕೊಟ್ಟಿದೆ. ಇದಕ್ಕೆ ಮೊದಲು ಪ. ೬೪ ಮತ್ತು ೭೨ವ, ದಲ್ಲಿಯೂ ಅನಂತರ

೯೬ವ. ಮತ್ತು ೧೧೫ ವ.ದಲ್ಲಿಯೂ 'ದೀವಳ' ಎಂಬ ರೂಪವಿದೆ. ಹರಿವಂಶಾದಿಗಳಲ್ಲಿ ಈತನ ಪ್ರಸ್ತಾಪವಿಲ್ಲ. ಅರ್ಥನೇ.ದಲ್ಲಿ 'ದೀವರ–ಧೀವರ–ದೀವಳ' ಎಂಬ ಮೂರು ರೂಪಗಳು ಗೋಚರಿಸುತ್ತವೆ. ಆದರೆ ಹೆಚ್ಚು ಕಡೆಗಳಲ್ಲಿ 'ಧೀವರ' ಎಂಬುದಾಗಿರುವುದರಿಂದಲೂ 'ಧೀವರನಪ್ಪ ಧೀವರನುಂ' ಎಂದು ಒಂದು ಕಡೆ (೪–೮ವ.) ಬಂದಿರುವುದರಿಂದಲೂ ಇಲ್ಲಿ ಮೂಲರೂಪ 'ಧೀವರ' ಎಂಬುದರಲ್ಲಿ ಸಂಶಯವಿಲ್ಲ. 'ಧೀವರ' ಎಂದರೆ ಬೆಸ್ತ ಎಂದು ಅರ್ಥ. ಇದು ದೀವರ>ದೀವಳ ಆಗಬಹುದು. ಕರ್ಣಪಾರ್ಯನು 'ದೀವಳ' ಎಂಬ ತದ್ಭವ ರೂಪವನ್ನಿಟ್ಟುಕೊಂಡಿದ್ದಾನೆ.

(೪) ಆಶ್ವಾಸ ೩–ಪದ್ಯ ೧೫೭ವ. :

ವಸುದೇವನಿಗೆ ವಿಜಯೆಯೆಂಬವಳಲ್ಲಿ ಕ್ರೂರನೆಂಬ ಮಗನಾದನೆಂದು ಇಲ್ಲಿ ಹೇಳಿದೆ. '...ವಿಜಯಿಗೆ [ವಿಜಯೆಗೆ] ವಿಕ್ರಮಾಂಕುರಪ್ರೋಗೆವಂದದಿಂ ಕ್ರೂರನೆಂಬ ತನೂಜನಾಗೆ...' ಎಂಬುದು ಮೂಲದ ಮಾತು. ಹರಿವಂಶದಲ್ಲಿ ಮಾತ್ರ ಕಾಣುವ ಸದೃಶ ಸನ್ನಿವೇಶದಲ್ಲಿ, ವಸುದೇವನಿಗೆ ವಿಜಯಸೇನೆಯೆಂಬವಳಲ್ಲಿ ಅಕ್ರೂರನೆಂಬ ಮಗನಾದನು ('...ಸೂನುಂ ವಿಜಯಸೇನಾಂ ನಾಮುತ್ಪಾದ್ಯಾಕ್ರೂರ ಸಂಜ್ಞಕಮ್' ೧೯–೫೯) ಎಂಬುದಾಗಿ ಹೇಳಿದೆ. ಇದನ್ನು ಗಮನಿಸಿ ಕರ್ಣನೇ., ದ ವಚನ ಭಾಗವು '....ವಿಜ[ಯೆ]ಗೆ ವಿಕ್ರಮಾಂಕುರಪ್ರೋಗೆವಂದದಿಂ[ದ]ಕ್ರೂರನೆಂಬ ತನೂಜನಾಗೆ...' ಎಂಬುದಾಗಿ ಇದ್ದಿರಬಹುದೆಂದು ಭಾವಿಸಬಹುದು. ಆದರೆ ಹಾಗೆಂದು ದೃಢವಾಗಿ ಗ್ರಹಿಸುವುದಕ್ಕೆ ಸ್ವಲ್ಪ ಮಟ್ಟಿಗೆ ಕ್ಲೇಶವಿದೆ. ಕರ್ಣನೇ. ದಲ್ಲಿಯೇ ೧೨–೨೫೧ವ. ದಲ್ಲಿ ಪ್ರಾಯಃ ವಸುದೇವ ಪುತ್ರನ ಹೆಸರೇ ಕ್ರೂರನೆಂಬುದಾಗಿ ಮತ್ತೆ ಉಲ್ಲೇಖಗೊಂಡಿದೆ. ಆದುದರಿಂದ ಈ ವಿಷಯದಲ್ಲಿ ನಿರ್ಣಯ ಕಷ್ಟ. ಇಲ್ಲಿಯೂ '...ಜರತ್ಕುಮಾರನುಂ ಅನಾದೃತಕುಮಾರನುಂ ಕ್ರೂರನುಂ....' ಎಂದಿರುವ ವಚನಭಾಗವು ಮೂಲದಲ್ಲಿ.... 'ಜರತ್ಕುಮಾರನುಮನಾದೃತ ಕುಮಾರನುಮಕ್ರೂರನುಂ....' ಎಂಬುದಾಗಿ ಸೇರಿ ಇದ್ದಿರಬಹುದಾದುದು ಅಸಂಭವವಲ್ಲ. ಹೇಗೂ ಹರಿವಂಶದ ಉಲ್ಲೇಖವನ್ನೂ ಹೆಸರಿನ ರೂಢಿಯನ್ನೂ ಲಕ್ಷಿಸಿ ಈಎರಡು ಕಡೆಗಳಲ್ಲಿಯೂ ವಸುದೇವ ಪುತ್ರನ ಹೆಸರು 'ಅಕ್ರೂರ' ಎಂದೇ ಇದ್ದಿತೆಂದು ತಿಳಿಯುವುದು ಹೆಚ್ಚು ಸಂಭಾವ್ಯವಾದುದು.

(೫) ಆಶ್ವಾಸ ೪- ಪದ್ಯ ೩೮ :

ಸಿದ್ಧಾರ್ಥ ಸುಮಿತ್ರೆಯರೆಂಬ ವೈಶ್ಯ ದಂಪತಿಗಳಿಗೆ 'ಮಿತ್ರಾವತಿ' ಎಂಬ ಮಗಳಾದಳೆಂದು ಇಲ್ಲಿ ಹೇಳಿದೆ. ಈ ಹೆಸರು ೪೪ನೆಯ ಪದ್ಯದಲ್ಲಿಯೂ ಹೀಗೆಯೇ ಇದೆ. ೪–೬೦ದಲ್ಲಿ ಮಿತ್ರಾವಳಿ ಎಂದಾಗಿದೆ. ಮುಂದೆ ೪–೬೪ವ., ೧೯೯ವ., ಇತ್ಯಾದಿ ಕಡೆಗಳಲ್ಲಿ ಮತ್ತೆ 'ಮಿತ್ರಾವತಿ' ಎಂದಿದೆ. ಹರಿವಂಶದಲ್ಲಿ ಸರ್ವಾರ್ಥ ಸುಮಿತ್ರೆಯರೆಂಬವರಿಗೆ 'ಮಿತ್ರವತಿ' ಮಗಳೆಂದು (....'ಊಢಾ ಚ ಯಶ್‌ವನಸ್ಥೇನ ಸಾಪ್ಯೂ ಮಿತ್ರವತಿ ಮಯಾ' ೨೧–೩೮) ಉಲ್ಲೇಖಿಸಿದೆ. ಮಿತ್ರವತಿ–ಮಿತ್ರಾವತಿಗಳು ಸದೃಶ ರೂಪಗಳು. ಈ ಕಾರಣದಿಂದಲೂ ಕರ್ಣನೇ.,ದಲ್ಲಿ 'ಮಿತ್ರಾವತಿ' ಎಂಬ ರೂಪದ ವಿಶೇಷ ಪ್ರಾಚುರ್ಯದಿಂದಲೂ 'ಮಿತ್ರಾವಳಿ' ಎಂಬುದರೆಡೆಗೆ 'ಮಿತ್ರಾವತಿ' ರೂಪವನ್ನೇ ಗ್ರಹಿಸಬೇಕು.

(೬) ಆಶ್ವಾಸ ೪–ಪದ್ಯ ೭೭ವ :

ಚಾರುದತ್ತನ ಮಾಹಾತ್ಮ್ಯವನ್ನು ಪರೀಕ್ಷಿಸಬೇಕೆಂದು ಒಬ್ಬ ಧೀರಪ್ರಭನೆಂಬ ವ್ಯಂತರಾಮರನು ಪ್ರಯತ್ನಿಸಿದ ಒಂದು ವೃತ್ತಾಂತವು ಚತುರ್ಥಾಶ್ವಾಸದಲ್ಲಿ ಬಂದಿದೆ. ಈತನ ಹೆಸರನ್ನೇ ವೃತ್ತಾಂತದ ಕೊನೆಗೆ ವೀರಪ್ರಭದೇವನೆಂಬುದಾಗಿ (೪–೮೨ವ.) ಹೇಳಿದೆ. ಈ ವೃತ್ತಾಂತವು ಹರಿವಂಶಾದಿಗಳಲ್ಲಿ ಬರುವುದಿಲ್ಲವಾದುದರಿಂದ ಇದರಲ್ಲಿ ಯಾವ ರೂಪ ಸರಿಯಾದುದೆಂದು ನಿರ್ಣಯಿಸುವುದು ಕಷ್ಟ. ಘ. ಪ್ರತಿಯಲ್ಲಿ ವೀರಪ್ರಭ ಎಂಬ ಪಾಠವಿದೆ (ಪು ೫೭೮). ಇದನ್ನು ಗಮನಿಸಿ ೪–೭೭ವ., ದಲ್ಲಿಯೂ ೪–೮೨ವ., ದಲ್ಲಿರುವ ಹಾಗೆಯೇ 'ವೀರಪ್ರಭ' ಎಂಬ ಪಾಠವೇ ಮೊದಲಿಗೆ ಇದ್ದಿತೆಂದೂ ಲಿಪಿಸಾದೃಶ್ಯದಿಂದ ಅದನ್ನು 'ಧೀರಪ್ರಭ' ಎಂಬುದಾಗಿ ಓದಿಕೊಂಡಿರಬೇಕೆಂದೂ ಊಹಿಸಬಹುದು.

(೭) ಆಶ್ವಾಸ ೬–ಪದ್ಯ ೨ :

ದೇವಕಿಯ ತಾಯಿ–ತಂದೆಯರ ಹೆಸರುಗಳನ್ನೂ ಜನ್ಮಸ್ಥಾನವನ್ನೂ ದೇವಸೇನ ವನದೇವಿಯರೆಂದೂ ಮೃಗಯಾವತೀ ವಿಷಯದ ದಶಾರ್ಣವೀಪುರ (ದಶಾರ್ಣವಪುರವೆಂದೂ ಪಾಠಾಂತರ) ವೆಂದೂ ಇಲ್ಲಿ ಉಲ್ಲೇಖಿಸಿದೆ. ಆದರೆ

ಕರ್ಣನೇ., ದಲ್ಲಿಯೇ ೬–೫೮ ವ., ದಲ್ಲಿ ದೇವಸೇನ ಧನದೇವಿಯರೆಂದೂ ಮಳಯಾವತೀ ವಿಷಯದ ದಶಾರ್ನವಪುರವೆಂದೂ ಹೇಳಿರುವುದು ಕಂಡುಬರುತ್ತದೆ. ಲೇಖಕನೇ ಎರಡು ಕಥೆಗಳಲ್ಲಿ ಎರಡು ರೀತಿಯಾಗಿ ಹೇಳಿರುವುದಂ ಅಸಂಭವ. ಪ್ರತಿಕಾರ ಲೇಖ್ಯವೇ ಇಲ್ಲಿ ಸ್ಖಾಲಿತ್ಯದ ಮೂಲವಾಗಿರಬೇಕು. ಹರಿವಂಶದಲ್ಲಿ ಈ ವಿವರವಿದ್ದಂತೆ ತೋರುವುದಿಲ್ಲ. ಇನ್ನು ಉತ್ತಪು., ದಲ್ಲಿ ೭೧ನೆಯ ಪರ್ವದಲ್ಲಿ, ದೇವಕಿಯಂ ಭವಕಥನ ಸಂದರ್ಭದಲ್ಲಿ ಈ ವಿಷಯ ಹೀಗೆ ಬಂದಿದೆ :

'...ಮೃಗಾವತ್ಯಾಖ್ಯ ವಿಷಯೇ ದಶಾರ್ಣಪುರ ಭೂಪತೇಃ ॥ ೭೮೮ ॥
ದೇವಸೇನಸ್ಯ ಜೋತ್ಪನ್ನಾ ಧನದೇವ್ಯಾಶ್ಚ ದೇವಕೀ
ತ್ವಂ ಸಾ ನಂದಶಯಾಃ ಸ್ತ್ರೀತ್ವಮುಪಗಮ್ಯ ನಿದಾನತಃ ॥ ೭೮೯ ॥

ಚಾವುಂಪು., ದಲ್ಲಿ ಈ ಹೆಸರುಗಳನ್ನೇ ಯಥಾವತ್ತಾಗಿ ಇಟ್ಟುಕೊಂಡಿದೆ. ಈ ಸೂಚನೆಗಳನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಮೃಗಾವತಿ–ಮೃಗಯಾವತಿ, ದಶಾರ್ಣಪುರ–ದಶಾರ್ನವಪುರ ಎಂಬ ಅಲ್ಪ ವ್ಯತ್ಯಾಸಗಳನ್ನು ಒಪ್ಪಿಕೊಂಡು ಕರ್ಣನೇ., ದ ೬–೨೮ಲ್ಲಿ ದಶಾರ್ನವೀಪುರಂ : ದಶಾರ್ನವಾಭಿಧಂ (ಪಾ.), ವನದೇವಿನಾಮದಿಂ : ಧನದೇವಿನಾಮದಿಂ ಎಂದಿಟ್ಟುಕೊಳ್ಳಬಹುದು ; ಹಾಗೆಯೇ ೬–೫೮ವ,ದಲ್ಲಿ 'ಮಳಯಾವತೀ ವಿಷಯದ' ಎಂಬುದು 'ಮೃಗಯಾವತೀ ವಿಷಯದ' ಎಂದಾಗಬೇಕು. ವಕಾರ ಧಕಾರಗಳ ಲಿಪಿಸಾದೃಶ್ಯದಿಂದ 'ಧನದೇವಿ'ಯೆಂಬುದು 'ವನದೇವಿ' ಯೆಂಬುದಾಗಿಯೂ ಹೆಸರಿನ ಹೋಲಿಕೆಯಿಂದಾಗಿ 'ಮೃಗಯಾವತೀ' ಎಂಬುದು 'ಮಳಯಾವತೀ' ಎಂಬುದಾಗಿಯೂ ಭ್ರಾಂತಿಯನ್ನುಂಟುಮಾಡಿರಬೇಕೆಂದು ತೋರುತ್ತದೆ.

(೮) ಆಶ್ವಾಸ ೬–ಪದ್ಯ ೧೭ ವ. :

ಭಾನುದತ್ತನೆಂಬ ರಾಜಶ್ರೇಷ್ಠಿಯ ಪತ್ನಿಯ ಹೆಸರನ್ನು 'ಯಮುನಾದಾತ್ತೆ'ಯೆಂದು ಇಲ್ಲಿ ಹೇಳಿದೆ. ೬–೧೮ ವ ದಲ್ಲಿ ಈಕೆಯನ್ನು 'ಯಮುನಾದತ್ತೆ' ಎಂದಿದೆ. ಹರಿವಂಶದಲ್ಲಿ ಈ ವೈಶ್ಯದಂಪತಿಗಳನ್ನು ಭಾನು–ಯಮುನೆಯರೆಂದು ಮಾತ್ರ ಹೇಳಿದೆ (೩೩–೯೬); ಉತ್ತಪು.,ದಲ್ಲಿ ಭಾನುದತ್ತ–

ಯಮುನಾದತ್ತಾ ಎಂಬುದಾಗಿ (ಪ. ೧೯೯–೨೦೦) ಹೇಳಿದೆ. ಚಾವುಂಪು. ದಲ್ಲಿಯೂ ಹೀಗೆಯೇ ಇದೆ. ಕರ್ಣನೇ., ದಲ್ಲಿಯು ಈ ವ್ಯಕ್ತಿಗಳ ಕಥಾಸಂದರ್ಭವು ಚಾವುಂಪು.ವನ್ನು ಹತ್ತಿರದಿಂದ ಹೋಲುವುದರಿಂದ ಕರ್ಣಪಾರ್ಯನು ಆ ಕೃತಿಯನ್ನೇ ಆಕರವಾಗಿ ಗ್ರಹಿಸಿ ಅಲ್ಲಿಂದಲೇ ಸಂಗತಿಗಳನ್ನು ಅನುವಾದಿಸಿರುವ ನೆನ್ನಬಹುದು. ಕರ್ಣನೇ.ದಲ್ಲಿ ಈ ವೈಶ್ಯದಂಪತಿಗಳ ವೈರಾಗ್ಯ ವಿಷಯವನ್ನು ನಿರೂಪಿಸುವಾಗ "....ಜಿನದತ್ತೆಯುಂ ಯಮುನಾದತ್ತೆಯುಂ ಯಮುನೆಯುಂ ಜಿನದತ್ತಾರ್ಯಿಕಾನಿಕಟದೊಳ್ ವಿರತಿಯರಾದರ್...' ಎಂದು (೬-೧೮ವ.) ಬರೆದಿದೆಯಷ್ಟೆ: ಇಲ್ಲಿ ಉಕ್ತಳಾಗಿರುವ ಜಿನದತ್ತೆಯೆಂಬವಳ ಉಲ್ಲೇಖ ವಿರುವುದು ಚಾವುಂಪು.ದಲ್ಲಿ ಮಾತ್ರವೇ ಎಂಬುದು ಒಂದು ಗಣ್ಯವಾದ ಸಾಕ್ಷ್ಯ. ಇಲ್ಲಿ ಉದ್ಧರಿಸಿದ ವಚನ ಭಾಗದಲ್ಲಿ 'ಯಮುನೆಯುಂ' ಎಂದು ಹೇಳಿರುವುದು ವಿಚಾರಣೀಯವಾಗಿದೆ. ಇದಕ್ಕೆ ಹರಿವಂಶಾದಿಗಳಲ್ಲಿ ಆಧಾರವಿಲ್ಲ. ಹರಿವಂಶ– ಉತ್ತಪು.ಗಳಲ್ಲಿ ಯಮುನಾದತ್ತೆಯೊಬ್ಬಳೇ ದೀಕ್ಷಿತೆಯಾದಂತೆ ಹೇಳಿದೆ. ಚಾವುಂಪು.ದಲ್ಲಿ ಜಿನದತ್ತೆಯೆಂಬವಳ ಹೆಸರು ಹೆಚ್ಚಾಗಿ ಸೇರಿದೆ. ಸೂರಸೇನ ಧೊರೆಯೂ ಭಾನುದತ್ತ ಶ್ರೇಷ್ಠಿಯೂ ಅಭಯನಂದ್ಯಾಚಾರ್ಯರಲ್ಲಿ ದೀಕ್ಷೆ ಗೊಂಡಂತೆ ಅವರ ಪತ್ನಿಯರಾದ ಜಿನದತ್ತೆ ಯಮುನಾದತ್ತೆಯರು ಜಿನ ದತ್ತಾರ್ಯಿಕೆಯರಲ್ಲಿ ದೀಕ್ಷೆಗೊಂಡರೆಂಬುದು ಚಾವುಂಪು.–ಕರ್ಣನೇ.ಗಳಲ್ಲಿಯ ಆಶಯ. ಹೇಗೂ "ಯಮುನೆ'' ಎಂಬ ಈ ಮೂರನೆಯ ವ್ಯಕ್ತಿಗೆ ಕರ್ಣನೇ ದಲ್ಲಿ ದೊರೆತಿರುವ ಸ್ಥಾನ ಹೆಚ್ಚಿನದು. ಆದ್ದರಿಂದ 'ಯಮುನಾದಾತ್ತೆ' 'ಯಮುನಾದತ್ತೆ' ಎಂಬುದರ ಸ್ಖಾಲಿತ್ಯರೂಪ, 'ಯಮುನೆಯುಂ' ಅನಾ ವಶ್ಯಕವಾಗಿ ಸೇರಿದ ಅಧಿಕರೂಪ, 'ಯಮುನಾದತ್ತೆ'ಯೇ ಶುದ್ಧರೂಪ.

(೯) ಆಶ್ವಾಸ ೬–ಪದ್ಯ ೪೯ವ. :

ಇಲ್ಲಿಯೂ ಪ. ೫೧, ೫೨ರಲ್ಲಿಯೂ ನಂದಯಶೆಯ ಒಬ್ಬ ಪುತ್ರನ ಹೆಸರನ್ನು 'ನಿರ್ನಾಮಿಕ' ನೆಂದು ಕರೆದಿದೆ. ಆದರೆ ೬-೫೦ವ. ಮತ್ತು ೫೧ವ.ದಲ್ಲಿ 'ನಿರ್ನಾಮಕ'ನೆಂದು ಶಬ್ದರೂಪವಿದೆ. ಜತೆಜತೆಗೇ ಕವಿ ಈ ಎರಡು ರೂಪಗಳನ್ನೂ ಬಳಸಿರುವುದು ಅಸಂಭವ. ಕವಿ ಬಳಸಿದ ಯಾವುದೋ ಒಂದು ರೂಪ ಪ್ರತಿಕಾರರ ಚಂಚಲಮನಸ್ಕತೆಯಿಂದ ಇಬ್ಬಗೆಯ ರೂಪಗಳಿಗೆ ಎಡೆ

ಕೊಟ್ಟಿರಬಹುದು. ಇವುಗಳಲ್ಲಿ ಯಾವ ರೂಪ ಸರಿಯಾದುದೆಂಬುದನ್ನು ನಿರ್ಧರಿಸುವುದು ಕಷ್ಟವೇನಲ್ಲ. ಹರಿವಂಶಾದಿಗಳಲ್ಲೆಲ್ಲ ಸಾರ್ವತ್ರಿಕವಾಗಿ 'ನಿರ್ನಾಮಕ' ಎಂಬ ರೂಪವನ್ನೆ ಬಳಸಿದೆ. ಆದ್ದರಿಂದ ಕರ್ಣನೇ.ದಲ್ಲಿ ಮೊದಲಿಗೆ ಅದೇ ರೂಪವೇ ಇದ್ದಿರಬಹುದೆಂದು ತಿಳಿಯಬಹುದು.

(೧೦) ಆಶ್ವಾಸ ೬–ಪದ್ಯ ೬೮ವ. :

ಶಿಶುವಾದ ಕೃಷ್ಣನನ್ನು ಕಂಸನ ಕ್ರೌರ್ಯಕ್ಕೆ ಸಿಕ್ಕು ಬಲಿಯಾಗದ ಹಾಗೆ ರಕ್ಷಿಸಲು ದೇವಕಿಯು ಸಲಹೆಯಂತೆ ವಸುದೇವನು ಏಕಾಕಿಯಾಗಿಯೇ ಮಗುವನ್ನೆತ್ತಿಕೊಂಡು ಹೊರಟಾಗ, ಬಲದೇವನು ಈತನಿಗೆ ನೆರವಾದನೆಂಬ ಒಂದು ಸನ್ನಿವೇಶ ಕರ್ಣನೇ.ದಲ್ಲಿ ಈ ಭಾಗದಲ್ಲಿ ಬಂದಿದೆ. '...ವಸುದೇವನೇಕಾಕಿಯಾಗಿ ಪೊಱಮಡುವುದುಮನೇಕಕುಂಡಲನಱಿದು ಬಂದಾ ಬಾಳಂಗೆ ಸಕಳರಾಜ್ಯಮೇಕಚ್ಛತ್ರಮೆಂಬಂತೆ ಕೊಡೆವಿಡಿದು ಬರೆ....' ಎಂಬುದು ಮೂಲದಲ್ಲಿಯ ಮಾತು. ಇಲ್ಲಿ 'ಮನೇಕ' ಎನ್ನುವೆಡೆ 'ಮದನೇಕ' ಎಂಬುದನ್ನು ಪಾಠಾಂತರವಾಗಿ ತೋರಿಸಿದೆ. ಅಂಗಿಕೃತಪಾಠದ ಪ್ರಕಾರ 'ಪೊಱಮಡುವುದುಂ + ಅನೇಕಕುಂಡಲನಱಿದು' ಎಂದು ಪದವಿಭಾಗವಾಗುತ್ತದೆ. ಈ 'ಅನೇಕಕುಂಡಲನ್' ಯಾರು ಎಂಬುದು ತಿಳಿಯದೆ ಹೋಗುವುದು. ಹಿಂದೆ ಸೂಚಿಸಿದ ಪಾಠಾಂತರವನ್ನು ಬಳಸಿಕೊಂಡರೆ, ಪದ ವಿಭಾಗವು 'ಪೊಱಮಡುವುದುಂ+ಅದನ್+ಏಕಕುಂಡಲನಱಿದು' ಎಂದಾಗಿ, ಬಲದೇವನಿಗೆ ಏಕಕುಂಡಲನೆಂಬ ನಾಮಾಂತರವಿರುವುದರಿಂದ ಅಭಿಪ್ರಾಯ ವಿಶದವಾಗುವುದು. ಅರ್ಥನೇ. ದ ಸದೃಶ ಸಂದರ್ಭದಲ್ಲಿಯೂ 'ಏಕಕುಂಡಲನೋಲೆಯ ಕೊಡೆವಿಡಿದು' (೭–೪೪ವ.) ಎಂದು ಬಂದಿರುವುದನ್ನು ಇಲ್ಲಿ ನೆನೆಯಬಹುದು.

(೧೧) ಆಶ್ವಾಸ ೭–ಪದ್ಯ ೧೩೯ವ. :

ಪ್ರದ್ಯುಮ್ನನು ವಜ್ರದಾಡಾದ್ಯರಾದ ಕುಮಾರರ ಪ್ರಚೋದನೆಗಳಿಗೆ ಒಳಗಾಗಿ ಸಾಹಸ ಕಾರ್ಯಗಳಿಗೆ ತೊಡಗಿದುದನ್ನು ವರ್ಣಿಸುವಾಗ, ಒಂದು ಸಾಹಸದ ಬಣ್ಣನೆ ಹೀಗೆ ಬಂದಿದೆ; "....ಮತ್ತಂ ತಮ್ಮೊಳೋರಂದದಿಂ ಪೋರ್ವ ಭೀಷಣಮೆನಿಪ ಮೇಷಪಾಷಾಣಂಗಳಂ ತೋರ್ಪುದುಂ ದರ್ಪಕನವಱಿಡೆವೊಕ್ಕು ಪೊಡೆಯೆ ನಡುಗಿ ಮೇಘಾಸುರಂ ಭಾಸುರರತ್ನಕುಂಡಳಂಗಳಂ ಕುಡೆ ಪಡೆದು ಬರೆ"... (೭–೧೩೯ವ.). ಇಲ್ಲಿ ಸಂದರ್ಭಕ್ಕೆ ಹೊಂದುವಂತಿರಬೇಕಾದರೆ,

'ಮೇಷಪಾಷಾಣಂಗಳಂ' ಎನ್ನುವೆಡೆ 'ಮೇಘಪಾಷಾಣಂಗಳಂ' ಎಂದೋ 'ಮೇಘಾಸುರಂ' ಎನ್ನುವೆಡೆ 'ಮೇಷಾಸುರಂ' ಎಂದೋ ಇರಬೇಕಾದುದು ಆವಶ್ಯಕ. ಪ್ರದ್ಯುಮ್ನನು ಮೇಷಾಕೃತಿಯ ಗಿರಿಯನ್ನು ಹೊಕ್ಕು ಕರ್ಣಕುಂಡಲ ಗಳನ್ನು ಪಡೆದ ಹಾಗೆ ಹರಿವಂಶದಲ್ಲಿ ಹೇಳಿದೆ ("....ಮೇಷಾಕೃತಿ ಗಿರೌ ಲೇಭೇ ಕರ್ಣಕುಂಡಲಯೋರ್ದ್ವಯಮ್...."೪೭–೩೬). ಹಾಗೆಯೇ ಮೇಷರೂಪ ದಿಂದ ತಾಗುವ ಎರಡು ಬೆಟ್ಟಗಳನ್ನು ಹೊಕ್ಕು ಬಲಿಷ್ಠನಾದ ಪ್ರದ್ಯುಮ್ನನು ತಡೆದು ನಿಲ್ಲಲು, ಅಲ್ಲಿರುತ್ತಿದ್ದ ದೇವತೆ ಹರ್ಷಿಸಿ ಆತನಿಗೆ ಮಕರಕುಂಡಲಗಳನ್ನು ಕೊಟ್ಟುದಾಗಿ ಉತ್ತಪು.–ಚಾವುಂಪು.ಗಳಲ್ಲಿ ಹೇಳಿದೆ (ಉತ್ತಪು. ಪ. ೧೦೬೫–೬೬). ಕರ್ಣಪಾರ್ಯನು ಈಯೆರಡು ಕೃತಿಗಳ ವರ್ಣನ ರೀತಿಯನ್ನೇ ಅನು ಸರಿಸಿದ್ದಾನೆ. ಅಲ್ಲಿ ದೇವತೆಯೆಂದು ಸೂಚಿಸಿದ್ದರೆ, ಕರ್ಣನೇ.ದಲ್ಲಿ ಇನ್ನೂ ಸ್ಪಷ್ಟವಾಗುವ ಹಾಗೆ 'ಮೇಷಾಸುರಂ' ಎಂದು ಹೇಳಿದೆಯೆಂದು ಸುಲಭವಾಗಿ ತಿಳಿಯಬಹುದು. ಷ ಎಂಬಕ್ಷರವನ್ನು ಘ ಎಂಬಕ್ಷರವಾಗಿ ಪ್ರತಿಕಾರರೋ ಅಚ್ಚುಗಾರರೋ ಓದಿಕೊಂಡಿದ್ದರೆ ಅದು ಸಹಜ. ಪ್ರಸ್ತುತ 'ಮೇಷಾಸುರಂ' ಎಂಬ ಪಾಠವನ್ನು ಸರಿಯೆಂದಿಟ್ಟುಕೊಳ್ಳಬೇಕು.

(೧೨) ಆಶ್ವಾಸ ೭-ಪದ್ಯ ೧೬೧ವ. :

ಕಾಳಶಂಬರನನ್ನು ಒಪ್ಪಿಸಿ ಪ್ರದ್ಯುಮ್ನನನ್ನು ದ್ವಾರಾವತಿಗೆ ಕರೆದೊ ಯ್ಯಲು ನಾರದನು ಮೇಘಕೂಟ ನಗರಕ್ಕೆ ಬಂದು, ಪ್ರದ್ಯುಮ್ನನ ಸಂಬಂಧ ವಾದ ಪೂರ್ವಸಂಗತಿಗಳನ್ನುಆತನಿಗೆ ಶ್ರುತಪಡಿಸುತ್ತಾನೆ. "....ಪೂರ್ವವಿದೇಹದ ಪುಷ್ಕಳಾವತೀ ವಿಷಯದ ಪುಂಡರೀಕಿಣಿಯೊಳಖಿಳ ಕರ್ಮೇಂಧನ ಹುತಾಶನನೆ ನಿಪ ಶ್ರೀಮಂದರ ತೀರ್ಥೇಶಗಣಧುರಂಧರರಿಂ...." ಎಂಬ ಒಂದು ವಚನ ಭಾಗವು ಆ ಸಂದರ್ಭದಲ್ಲಿ ಬಂದಿದೆ. ಇಲ್ಲಿ ಕೊನೆಯ ಮಾತಿಗೆ 'ಸೀಮಂಧರ ಗಣಧರರಿಂ' ಎಂಬ ಪಾಠಾಂತರವಿದೆ. ಈ ಪಾಠಾಂತರವೇ ಕ್ರಮಪಾಠವಾಗಿರ ಬೇಕೆಂದು ತೋರುತ್ತದೆ. ಪೂರ್ವೋಕ್ತ ಪ್ರದ್ಯುಮ್ನ ವೃತ್ತಾಂತವನ್ನೇ ನಾರದನು ಸತ್ಯಭಾಮೆಗೆ ಅರಿಕೆಮಾಡಬೇಕಾದಾಗ "....ಪೂರ್ವವಿದೇಹದ ಸೀಮಂಧರ ತೀರ್ಥೇಶ್ವರರಂ ಬಂದಿಸಿ ತದನಂತರಂ ಕಂ|| ಗಣಧರರ್ಗಮೆಱಗಿ ಬೞಿಕಾ। ಗುಣನಿಧಿಗಳೊಳಂದು ತಿಳಿದೆನ್...." ಎಂದು ನಿರೂಪಿಸಿದೆ (೮–೧೧ವ., ೧೨)

ನಾರದನು ತೀರ್ಥಂಕರ ಗಣಧರರಿಂದ ಪ್ರದ್ಯುಮ್ನ ಚರಿತವನ್ನು ತಿಳಿದುಕೊಂಡ ನೆಂಬುದು ಮೇಲಿನ ಎರಡು ಸಂದರ್ಭಗಳ ಆಶಯವಾದರೂ ಆ ತೀರ್ಥಂಕರನು ಶೀಮಂಧರನೋ ಸೀಮಂಧರನೋ ಎಂಬುದು ವಿಚಾರಣೀಯವಾದುದು. 'ಹರಿವಂಶ'ದಲ್ಲಿ ವರ್ಣಿತವಾಗಿರುವ ಸಮಾನ ಸಂದರ್ಭದಲ್ಲಿ "ಅತಃ ಪೂರ್ವ ವಿದೇಹೇಷು ಗತ್ವಾ ಸೀಮಂಧರಂ ಜಿನಂ। ಸಂಪೃಚ್ಛ್ಯ ಪುತ್ರವಾರ್ತಾಂ ತೇ ಪ್ರಾಪ ಸೂಮೀತಿ ನಾರದಃ" (೪೩-೭೯) ಎಂದು ಹೇಳಿರುವುದು ಕಾಣು ತ್ತದೆ. ಉತ್ತಪು.-ಚಾವುಂಪು., ಗಳಲ್ಲಿ ಈ ವಿಷಯದ ಪ್ರಸ್ತಾಪವಿಲ್ಲ. ಹರಿವಂಶದ ಉಲ್ಲೇಖವನ್ನೂ ಕರ್ಣನೇ.ದ ಅಷ್ಟವಾಶ್ವಾಸದ ಉಲ್ಲೇಖವನ್ನೂ ಲಕ್ಷಿಸಿ ೭-೧೬೧ವ. ದಲ್ಲಿ 'ಸೀಮಂಧರ ಗಣವರರಿಂ' ಎಂಬ ಪಾಠವನ್ನೇ ಮೂಲ ಪಾಠವಾಗಿ ಗ್ರಹಿಸುವುದು ಸೂಕ್ತವಾದದೆನ್ನಬೇಕು.

(೧೩) ಆಶ್ವಾಸ ೭-ಪದ್ಯ ೧೯೪

ಕೃಷ್ಣ ಸತ್ಯಭಾಮೆಯರ ಒಂದು ಸಂವಾದದ ಸಂದರ್ಭ ಕರ್ಣನೇ.,ದಲ್ಲಿ ಬರುತ್ತದೆ. ಇದು ರುಕ್ಮಿಣಿ ಸತ್ಯಭಾಮೆಯರ ನಡುವೆ ಆಗಿದ್ದ ಒಂದು ಪ್ರತಿಜ್ಞೆಯ ಪೂರೈಕೆಯ ಸಂಬಂಧವಾದ ಕೋಲಾಹಲವೇ ಈ ಸಂವಾದಕ್ಕೆ ಹೇತು. ಈ ಪ್ರಸಂಗದಲ್ಲಿ 'ತಲೆಕೆಳಗಾಗಿರೆ ಕಟ್ಟಿರ । ಲಲಘುಭುಜಂ ಜಲರು ಹೋದ್ಭವಂ ಕೇಳ್ದದನ್....' ಎಂಬ ಒಂದು ಕಂದ ಪದ್ಯ ಬಂದಿದೆ. ಇಲ್ಲಿ 'ಜಲರುಹೋದ್ಭವಂ' ಎಂಬ ಒಂದು ಮಾತು ಕೃಷ್ಣನನ್ನೇ ಕುರಿತದ್ದು ಎಂದು ಸಂದರ್ಭವನ್ನು ಪರಿಶೀಲಿಸಿದಾಗ ತಿಳಿಯುತ್ತದೆ. ಆದರೆ ಆ ಶಬ್ದದ ಅರ್ಥ ಬ್ರಹ್ಮ ಎಂದಾಗುವುದಲ್ಲದೆ ವಿಷ್ಣು (=ಕೃಷ್ಣ) ಎಂದಾಗುವುದು ಶಕ್ಯವಿಲ್ಲ. ಆದ್ದರಿಂದ ಇಲ್ಲಿ ಕೃಷ್ಣನಾಮ ಸೂಚಕವಾದ 'ಜಲರುಹೋದರಂ' ಎಂಬುದು ಪ್ರಾಯಃ ಮೂಲಪಾಠವಾಗಿದ್ದು, ಅದು ಈಚೆಗೆ ಹೇಗೋ 'ಜಲರು ಹೋದ್ಭವಂ' ಆಗಿರಬೇಕೆಂದು ತೋರುತ್ತದೆ.

(೧೪) ಆಶ್ವಾಸ ೮-ಪದ್ಯ ೩೦ವ. :

ನಾರದನು ಪ್ರದ್ಯುಮ್ನನ ಭವಾಂತರಗಳನ್ನು ಸತ್ಯಭಾಮೆಗೆ ವಿವರಿಸ ಬೇಕಾಗಿ ಬಂದ ಒಂದು ಸಂದರ್ಭದಲ್ಲಿ ಮಧುಕೈಟಭರೆಂಬ ಅವಳಿ ಪುತ್ರರ ವೃತ್ತಾಂತ ಬರುತ್ತದೆ. ಮಧುರಾಜನು ಅನ್ವಯಾಗತವಾದ ಹಸ್ತಿನಪುರದಲ್ಲಿ

ರಾಜ್ಯವಾಳುತ್ತಿದ್ದನೆಂಬ ೮–೨೫, ೨೭ ಮತ್ತು ೨೯ನೆಯ ಪದ್ಯಗಳಲ್ಲಿ ಸೂಚನೆ ದೊರೆಯುತ್ತದೆ. ಹಾಗೆಯೇ ಪ. ೨೮ರಲ್ಲಿ ವೀರಸೇನನೆಂಬ ಇನ್ನೊಬ್ಬ ಅರಸು ಮಥುರೆಯಲ್ಲಿರುತ್ತಿದ್ದನೆಂದು ತಿಳಿಯುವುದು ("....ಮಥುರೆಯೆಂಬುದ್ಯತ್ಪುರಾಧೀಶ್ವರಂ। ಧರಣೀಭೃತ್ಪತಿ ವೀರಸೇನನ ತುಳಂ...."). ಹೀಗಿದ್ದು, ಪ. ೩೦ವ.,ದಲ್ಲಿ ಮಧುರಾಜನನ್ನೇ 'ಮಥುರಾಧಿಪಂ' ಎಂದು ಹೇಳಿರುವುದು ವಿಚಾರಣೀಯವಾಗಿದೆ ("....ಒಂದು ದಿಸಂ ವಿಮಳವಾಹನ ಕೇವಳಜ್ಞಾನಿಗಳ ಪಕ್ಕದೊಳಪಗತಧರ್ಮನಾಗಿ ಮಥುರಾಧಿಪಂ ವೈರಾಗ್ಯಮಂ ತಳೆದು...."). ಹರಿವಂಶದಲ್ಲಿಯೂ ಉತ್ತಪು.–ಚಾವುಂಪು., ಗಳಲ್ಲಿಯೂ ಈ ವೃತ್ತಾಂತ ಬಂದಿದೆಯಾದರೂ ವ್ಯಕ್ತಿನಾಮ ಸ್ಥಲನಾಮಗಳ ಉಲ್ಲೇಖಗಳಲ್ಲಿ ಅನ್ಯಾನ್ಯತೆಯಿದೆ. ಉತ್ತಪು.–ಚಾವುಂಪು. ಗಳಲ್ಲಿ ಮಧುರಾಜನನ್ನು ಹಸ್ತಿನಾಪುರಾಧಿಪನಾಗಿದ್ದನೆಂದೂ ವಿಮಳವಾಹನ ಕೇವಲಿಯಿಂದ ದೀಕ್ಷಿತನಾದನೆಂದೂ ಸ್ಪಷ್ಟವಾಗಿ ಬರೆದಿದೆ (ಉತ್ತಪು. ೯೬–೭. ೧೦೦೨). ಕರ್ಣಪಾರ್ಯನು ಚಾವುಂಪು.ವನ್ನು ಅನುಸರಿಸಿರುವಂತೆ ತೋರುತ್ತದೆ. ಹೀಗಿರುವುದರಿಂದ ೮–೩೦ವ. ದಲ್ಲಿ 'ಮಥುರಾಧಿಪಂ' ಎಂದು ಕಾಣಿಸಿಕೊಂಡಿರುವುದು ಸಮರ್ಥನೀಯವಾಗದು. ಅಲ್ಲಿ 'ಹಸ್ತಿನಪುರಾಧಿಪಂ' ಎಂದಿರುವುದು ಸೂಕ್ತ. ಇದು ಕವಿಯ ವಿಸ್ಮೃತಿಮೂಲವಾದ ಪ್ರಮಾದವೋ ಪ್ರತಿಕಾರನ ಕೈತಪ್ಪೋ ನಿರ್ಧರಿಸುವುದು ಕಷ್ಟ.

(೧೫) ಆಶ್ವಾಸ ೯–ಪದ್ಯ ೮:

ಪಾಂಡುರಾಜನು 'ಧರಣೀವಿಶ್ರುತ ಹಸ್ತಿನಾಗ ಪುರದೊಳ್' ರಾಜ್ಯವಾಳುತ್ತಿದ್ದುದಾಗಿ ಇಲ್ಲಿ ಹೇಳಿದೆ. 'ಹಸ್ತಿನಾಖ್ಯ ಪುರದೊಳ್' ಎಂಬುದು ಪಾಠಾಂತರ. ಕುರುವಂಶೀಯರ ರಾಜಧಾನಿಯು ಹಸ್ತಿನಪುರ, ಹಸ್ತಿನಾಪುರ, ನಾಗಪುರ, ಎಂಬ ಹೆಸರುಗಳಿಂದ ವಿಶೇಷವಾಗಿ ಪ್ರಚಲಿತವಾಗಿರುವುದಲ್ಲದೆ 'ಹಸ್ತಿನಾಗಪುರ' ಎಂದು ಎಲ್ಲಿಯೂ ಉಕ್ತವಾಗಿರುವುದು ಕಂಡು ಬರುವುದಿಲ್ಲ. ಹೆಸರಿನಲ್ಲಿಯ ದ್ವಿರ್ಭಾವವು ವಿಚಾರಣೀಯವಾಗಿದೆ. ಆದ್ದರಿಂದ 'ಧರಣೀವಿಶ್ರುತ ಹಸ್ತಿನಾಖ್ಯ ಪುರದೊಳ್' ಎಂಬುದೇ ಗ್ರಾಹ್ಯಪಾಠವಾಗುತ್ತದೆ ಎನ್ನಬೇಕು.

(೧೬) ಧಾನ್ಯರಾಜನ ಪುತ್ರಿ, ಯುಧಿಷ್ಠಿರನ ಪತ್ನಿ, ಕುಸುಮಮಾಳಿಕೆ ಎಂಬ ಹೆಸರಿನವಳೆಂದು ೯–೩೯, ೪೪ರಲ್ಲಿ ಬಂದಿದೆ. ಆದರೆ ೧೦–೧೩ವ.ದಲ್ಲಿ ಹಾಗೂ ೧೦–೧೬೪ರಲ್ಲಿ 'ಕುಸುಮಮಾವಳಿ ದೇವಿ' ಎಂಬುದಾಗಿ ಸ್ವಲ್ಪ ಬೇರೆಯಾಗಿ ಹೇಳಿದೆ. ಹೀಗೆ ಎರಡು ರೀತಿಯಲ್ಲಿ ಹೆಸರಿನ ಬಳಕೆಯಿರುವುದು ವಿಚಾರಣೀಯವಾಗಿದೆ. ಸ್ಥೂಲಸಾದೃಶ್ಯವಿರುವ ಹರಿವಂಶದಲ್ಲಿಯ ಪ್ರಸಂಗದಲ್ಲಿ 'ಕುಸುಮಕೋಮಲೆ' ಎಂಬುದಾಗಿ ಆ ಹೆಸರನ್ನು (೪೫–೬೨) ಹೇಳಿದೆ.

(೧೭) ಆಶ್ವಾಸ ೧೧–ಪದ್ಯ ೧೪೪ ವ. :

ಕೃಷ್ಣಜರಾಸಂಧರ ಕಾಳಗದ ಸಂದರ್ಭದಲ್ಲಿ ಕೃಷ್ಣನ ಪಕ್ಷದಲ್ಲಿ ಸೇನಾಪತಿಯಾಗಿ ಅರ್ಜುನನು ಗರುಡವ್ಯೂಹವನ್ನು ರಚಿಸಿದ ವಿಷಯ ಬರುತ್ತದೆ. ಆ ವಿಷಯದ ವಿವರಣೆಯಲ್ಲಿ ....'ಮತ್ತಂ ಮಣಿಪುತ್ರ ಸೋಮದೇವ ವಸುದೇವ ಅಂಶುಮಾಳಿ ಭಗ್ನಸೇನ ಮೇಘಮುಖಾದಿ ಮೇದಿನೀಶ್ವರರಂ ಸಮಗ್ರಸೇನಾಸಹಿತಂ ಗ್ರೀವಮಾಗೊಡ್ಡಿ....' ಎಂಬ ವರ್ಣನಾಂಶವು (೧೧–೧೪೪ವ.) ಪ್ರಸ್ತುತ ಗಮನಾರ್ಹವಾದುದು. 'ವಸುದೇವ' ಎಂಬ ಪಾಠದೆಡೆಗೆ 'ವಸುಪಾಳ' ಎಂಬುದೊಂದು ಪಾಠಾಂತರವಿದೆ. ಈ ಪಾಠಾಂತರವೇ ಮೂಲಪಾಠವಾಗಿರುವುದು ಶಕ್ಯ. ಸಮುದ್ರ ವಿಜಯನ ಸೋದರನಾದ ವಸುದೇವನು ನೇರವಾಗಿ ಈ ಯುದ್ಧದಲ್ಲಿ ಭಾಗವಹಿಸಿದಂತೆ ತೋರುವುದಿಲ್ಲ. ಆ ರೀತಿಯಾಗಿ ಸ್ಪಷ್ಟವಾಗಿ ಎಲ್ಲಿಯೂ ಉಕ್ತವಾಗಿಲ್ಲ. ಇದಕ್ಕೆ ಪ್ರತಿಯಾಗಿ ವಸುಪಾಳನೆಂಬ ಕೃಷ್ಣನ ಪಕ್ಷದ ವೀರನೊಬ್ಬನು, ವಸುಧಾಧಿಪನೊಬ್ಬನು, ಆ ಯುದ್ಧದಲ್ಲಿ ಗಣ್ಯನಾಗಿ ಹೋರಾಡಿದ್ದು ಅಲ್ಲಲ್ಲಿ ವರ್ಣಿತವಾಗಿದೆ. ಈ ಮೊದಲೇ ಆತನು ಪ್ರಮುಖನಾಗಿ ಕಾಣಿಸಿಕೊಂಡು ಜರಾಸಂಧನ ರಾಯಭಾರಿಗಳಾದ ಮಹತ್ತರರನ್ನಿದಿರಿಸಿ ಮಾತನಾಡಿದ ಸಂಗತಿ ಬಂದಿದೆ (೧೦-೧೦೪ವ.–೧೦೬). ಆ ಬಳಿಕ ಆತನು ವಜ್ರಕಾಂಡನೆಂಬವನನ್ನು ಮರ್ದಿಸಿದ್ದು (೧೨–೫೩), ಚತುರಂಗ ಬಲವನ್ನು ಮುಗಿಸಿದ ಕೇಸರಿಯಂತೆ ಕೆರಳಿ ಕೊಂದದ್ದು (೧೨–೨೧೪), ಜರಾಸಂಧ ಚಕ್ರವರ್ತಿಯ ಚಕ್ರರತ್ನವನ್ನು ತಡೆಯಲು ಪ್ರಯತ್ನಿಸಿದ್ದು (೧೨–೨೫೧)–ಈ ಸಂಗತಿಗಳು ಯುದ್ಧ ಸಂದರ್ಭದಲ್ಲಿ ಬಂದಿದೆ.

ಇವನ್ನು ಗಮನಿಸಿದರೆ, ೧೧–೧೪೪ವ.ದಲ್ಲಿ 'ವಸುಪಾಳ' ಎಂಬುದೇ ಮೂಲಪಾಠವಾಗಿರುವುದು ಸಾಧ್ಯವೆಂದು ಹೇಳಬಹುದು.

(೧೮) ಜರಾಸಂಧನ ಪುತ್ರನೊಬ್ಬನ ಹೆಸರಿನ ಪಾಠದಲ್ಲಿ ಕರ್ಣನೇ.ದ ಪ್ರತಿಗಳಲ್ಲಿ ಸ್ವಲ್ಪ ಗೊಂದಲವುಂಟಾಗಿದೆ. ಹರಿವಂಶ–ಉತ್ತಪು.,ಗಳಲ್ಲಿ ಆ ಪುತ್ರನ ಹೆಸರು 'ಕಾಲಯವನ' ಎಂಬ ಒಂದೇ ರೂಪದಲ್ಲಿ ಕಾಣಿಸಿಕೊಂಡಿದೆ. ಚಾವುಂಪು. ದಲ್ಲಿ 'ಕಾಲಯಮು' ಎಂಬ ರೂಪವಿದೆ. ಕರ್ಣನೇ.ದಲ್ಲಿ ೭–೮, ೮ವ, ೧೬ವ, ೧೮ವ, ೧೯ವ, ೨೦ವ, ಇಲ್ಲೆಲ್ಲ 'ಕಾಳಯಮು' ಎಂಬ ಶಬ್ದ ರೂಪವನ್ನೇ ಕಾಣುತ್ತೇವೆ. ಸಂಪಾದಕರು ಅದನ್ನೇ ಶುದ್ಧರೂಪವಾಗಿ ಗ್ರಹಿಸಿರುತ್ತಾರೆಂಬುದಕ್ಕೆ ಎರಡು ಕಡೆಗಳಲ್ಲಿ (೭–೬ವ., ೧೨ವ.) 'ಕಾಳವಯಂ' ಎಂಬ ರೂಪವನ್ನು ಪಾಠಾಂತರವಾಗಿ ಕೊಟ್ಟಿರುವುದೇ ಸಾಕ್ಷಿ. ಇದು ಸರಿ. ಕರ್ಣಪಾರ್ಯನು ಚಾವುಂಪು. ವನ್ನನುಸರಿಸಿ 'ಕಾಳಯುಮಂ' ಎಂಬ ರೂಪ ವನ್ನು ಇಟ್ಟುಕೊಂಡಿರುವನೆಂದು ತಿಳಿಯಬಹುದು. ಆದರೆ ಏಕಾದಶಾಶ್ವಾಸಕ್ಕೆ ಬಂದರೆ, ಇಲ್ಲಿ ೧೩೩ವ. ದಲ್ಲಿ 'ಕಾಳಯುವ' ಎಂಬ ಮಾತನ್ನಿದಿರುಗೊಳ್ಳುತ್ತೇವೆ. ಕಾಳಯುಮ' ಎಂಬ ಶಬ್ದರೂಪವೇ ಪ್ರತಿಕಾರರ ಅಥವ ಮುದ್ರಣಕಾರರ ಕೈತಪ್ಪಿನಿಂದ 'ಕಾಳಯುವ' ಆಗಿರಬಹುದೆಂದು ಊಹಿಸಬಹುದು. ಮತ್ತೆ ಇದೇ ವ್ಯಕ್ತಿಯ ಹೆಸರು ೧೨–೧೧೬ರಲ್ಲಿ 'ಕಾಳವಯಂ' ಎಂದಾಗಿದೆ; ಪಾಠಾಂತರವೇನೂ ಕಂಡುಬರುವುದಿಲ್ಲ. ಪ್ರಾಯಃ ಸಮೀಪತರವಾದ ಈ ಪಾಠವನ್ನು ಗಮನಿಸಿಯೋ ಏನೋ, ಸಂಪಾದಕರು ೧೨–೨೧೪ರಲ್ಲಿ 'ಕಾಳವಯಂ' ಎಂಬುದನ್ನು ಮೂಲಪಾಠವಾಗಿಟ್ಟು ಅಲ್ಲಿಯೇ ಪ್ರತ್ಯಂತರದ 'ಕಾಳಯುಮಂ' ಪಾಠವನ್ನು ಪಾಠಾಂತರದಲ್ಲಿ ತೋರಿಸಿಬಿಟ್ಟಿದ್ದಾರೆ. ಈ ಮೊದಲೇ ಅವರು ಸಪ್ತಮಾಶ್ವಾಸದಲ್ಲಿ ಅನುಸರಿಸಿದ ವಿಧಾನಕ್ಕೆ ಇದು ವಿಪರೀತವಾಗಿದೆ. ಕರ್ಣನೇ.ದಲ್ಲಿ ಮೂಲಪಾಠವು ಎಲ್ಲ ಕಡೆಯೂ ಚಾವುಂಪು.ದ ಶಬ್ದರೂಪವನ್ನನುಸರಿಸಿ 'ಕಾಳಯುಮಂ' ಎಂಬುದಾಗಿಯೇ ಇದ್ದಿತೆಂದೂ, ಉಳಿದ ರೂಪಗಳು ಭ್ರಾಂತಿಮೂಲವಾದ ವರ್ಣಪಲ್ಲಟ ಘಟಿತ ರೂಪಗಳೆಂದೂ ತಿಳಿಯುವುದು ತಪ್ಪಾಗದು.

(೧೯) ಆಶ್ವಾಸ ೧೨–ಪದ್ಯ ೧೪೬ವ. :

ಜರಾಸಂಧನ ಪಕ್ಷದಲ್ಲಿ ಜಯದ್ರಥನೆಂಬವನು ಸೇನಾನಿಯಾದಾಗ ವಾಸುದೇವನು ತನ್ನ ಪಕ್ಷದಲ್ಲಿ ಪದ್ಮನೆಂಬವನನ್ನು ಸೇನಾನಿಯನ್ನಾಗಿ ಮಾಡಿದ ನೆಂದು ಇಲ್ಲಿ ಹೇಳಿದೆ. ಈತನನ್ನೇ ೧೨–೧೫೮ವ.,ದಲ್ಲಿ ಮಹಾಪದ್ಮ ನೆಂಬುದಾಗಿ ಕರೆದಿದೆ. ಇದು ಈ ಹಿಂದೆ ಪ್ರಸ್ತಾಪಿಸಿರುವ ೧೫ನೆಯ ನಿದರ್ಶನಕ್ಕೆ ಸದೃಶವಾದುದು.

(೨೦) ಆಶ್ವಾಸ ೧೪–ಪದ್ಯ ೫ವ. :

ಸತ್ಯಭಾಮೆಯ ಭವಾವಳಿಯ ಕಥನದಲ್ಲಿ ಉರುಬಳ–ಜ್ಯೋತಿರ್ಮಾಳಿ ಯರ ಪುತ್ರ 'ಹರಿಚಳ' ನೆಂಬುದಾಗಿ ಇಲ್ಲಿ ಹೇಳಿದೆ. ಉತ್ತಪು.–ಚಾವುಂಪು. ಗಳ ಸಂವಾದಿಯಾದ ಕಥಾಭಾಗದಲ್ಲಿ ಆ ದಂಪತಿಗಳ ಪುತ್ರನನ್ನು ಹರಿಬಲ(ಳ) ನೆಂಬುದಾಗಿ ಕರೆದಿದೆ. ಲಿಪಿಸಾದೃಶ್ಯದಿಂದ 'ಬ' ಅಕ್ಷರವನ್ನು 'ಚ' ಅಕ್ಷರವಾಗಿ ಪ್ರತಿಕಾರರು ಅಥವಾ ಮುದ್ರಕರು ಓದಿಕೊಂಡದ್ದು ಕಾರಣವಾಗಿ 'ಹರಿಬಳ' ಎಂದಿರಬೇಕಾದ ಪದವು 'ಹರಿಚಳ' ಎಂದಾಗಿದೆ. ಆದ್ದರಿಂದ 'ಹರಿಬಳ' ಎಂಬು ದನ್ನೇ ಮೂಲಪಾಠವಾಗಿಟ್ಟುಕೊಳ್ಳಬೇಕು.

(೨೧) ಆಶ್ವಾಸ ೧೪–ಪದ್ಯ ೮ವ. :

ರುಕ್ಮಿಣಿಯ ಭವಾವಳಿಯ ಕಥನದಲ್ಲಿ ಬರುವ ಈ ವಚನದ ಕೊನೆಯ ಭಾಗ ಈ ರೀತಿಯಾಗಿದೆ: "…. ಕಾಳಿಂದೀತಟ ಮಂದಿರ ಗ್ರಾಮದ ಮರ್ತ್ಯನೆಂಬ ಮೀಂಗುಲಿಗಂಗಮೊತನ ಪೆಂಡಿತಿ ಮಂಡೂಕಿಗಂ ಪೂತಿಗಂಧಿನಿಯೆಂಬ ತನೂಜೆ ಯಾಗಿ'. ಇಲ್ಲಿ ಮೀಂಗುಲಿಗನ ಹೆಸರು ಮರ್ತ್ಯನೆಂದಿರುವುದು ಗಮನಿಸತಕ್ಕ ದ್ದಾಗಿದೆ. 'ಮರ್ತ್ಯ' ಎಂದಿರುವೆಡೆ ವಾಸ್ತವವಾಗಿ 'ಮತ್ಸ್ಯ' ಎಂದಿರಬೇಕು. ಉತ್ತಪು.–ಚಾವುಂಪು. ಗಳ ಸದೃಶಕಥಾಭಾಗದಲ್ಲಿ 'ಮತ್ಸ್ಯ' ಎಂದೇ ಉಕ್ತವಾ ಗಿದೆ. ಅದು ವೃತ್ತಿಗೆ ಅನುಗುಣವಾದ ಹೆಸರೆಂಬುದನ್ನು ಪ್ರತ್ಯೇಕವಾಗಿ ಹೇಳ ಬೇಕಾಗಿಲ್ಲ. ('ಮರ್ತ್ಯನಾಳಾಗಿ' ಎಂದು ಇರಬೇಕಾದ ಕಡೆಯಲ್ಲಿ 'ಮತ್ಸ್ಯ ನಾಳಾಗಿ' ಎಂದಿರುವ ಪಂಪಭಾರತದ ಒಂದು ನಿದರ್ಶನವನ್ನು (೯–೪೭) ಇದಕ್ಕೆ ಪ್ರತಿಯಾದ ಸಾದೃಶ್ಯವನ್ನಾಗಿ ಇಲ್ಲಿ ನೆನೆಯಬಹುದು.) ಆದ್ದರಿಂದ 'ಮತ್ಸ್ಯನೆಂಬ' ಎಂಬುದನ್ನು ಮೂಲಪಾಠವನ್ನಾಗಿ ಗ್ರಹಿಸಬೇಕು.

(೨೨) ಆಶ್ವಾಸ ೧೪-ಪದ್ಯ ೨೭ವ. :

'ಉತ್ತಮಕುರುವೆಂಬ ಭೋಗಭೂಮಿಯೊಳ್....' ಎಂಬುದರಲ್ಲಿ 'ಉತ್ತಮು' ಎಂಬುದು 'ಉತ್ತರ' ಆಗಬೇಕು. ಮಂದರ ಪರ್ವತಕ್ಕೆ ಉತ್ತರ ದಲ್ಲಿರುವ ಭೋಗಭೂಮಿಗೆ 'ಉತ್ತರಕುರು'ವೆಂದು ಹೇಳಲಾಗುತ್ತದೆ.

(೨೩) ಆಶ್ವಾಸ ೧೪-ಪದ್ಯ ೩೧ ವ. :

'ವಿನೀತಾ ಖಂಡಕ್ಕೆ ಮಂಡನದಂತೆ ಶೋಭೆಯುನಾಂತವತೀ ವಿಷಯದ' ಎಂಬ ವಚನ ಭಾಗದಲ್ಲಿ 'ಅವತೀ ವಿಷಯದ' ಎನ್ನುವೆಡೆ 'ಅವಂತಿ(ೀ) ವಿಷಯದ' ಎಂದಿರಬೇಕು.

(೨೪) ಆಶ್ವಾಸ ೧೪-ಪದ್ಯ ೩೧ ವ. :

'ಜಂಬೂ ದ್ವೀಪದ ಹೈಮತವೆಂಬ ಜಘನ್ಯ ಭೋಗಭೂಮಿಯೊಳ್' ಎಂಬ ವಚನ ಭಾಗದಲ್ಲಿ 'ಹೈಮತ' ಎನ್ನುವೆಡೆ 'ಹೈಮವತ' ಎಂದಿರಬೇಕು. ಜಂಬೂದ್ವೀಪದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಇರುವ ಕ್ಷೇತ್ರಗಳಲ್ಲಿ ಭರತ ಕ್ಷೇತ್ರದ ಮೇಲಿನದು ಹೈಮವತ ಕ್ಷೇತ್ರ.

(೨೫) ಆಶ್ವಾಸ ೧೪-ಪದ್ಯ ೬೭ ವ. :

ದಶಾರ್ಹರಾದಿಯಾಗಿ ಯಾದವ ಮುಖ್ಯರೆಲ್ಲರೂ ವರದತ್ತ ಗಣಧರರಿಂದ ಮುನಿದೀಕ್ಷೆಯನ್ನು ಪಡೆದುದನ್ನು ವರ್ಣಿಸುವಾಗಲೇ, ಯಾದವ ಸ್ತ್ರೀ ಮುಖ್ಯರು ರಾಜಮತ್ಯಾರ್ಯಿಕೆಯ ಬಳಿಯಲ್ಲಿ ಆರ್ಯಿಕಾದೀಕ್ಷೆಯನ್ನು ವಹಿಸಿದ ರೆಂಬ ಸಂಗತಿಯನ್ನೂ ವರ್ಣಿಸಿದೆ. 'ಆ ಸ್ತ್ರೀಸಮೂಹಮುಂ ರಾಜಮತ್ಯಾ ರ್ಯಿಕಾ ನಿಕಟದೊಳಾರ್ಯಿಕಾ ಪದಪ್ರಯುಕ್ತೆಯರಾದರ್' – ಎಂಬುದು ಮೂಲದಲ್ಲಿಯ ಮಾತು. 'ರಾಜಮತ್ಯಾರ್ಯಿಕಾ' ಎಂಬ ಪದದ ಸ್ಥಾನದಲ್ಲಿ 'ರಾತ್ರಿಮತ್ಯಾರ್ಯಿಕಾ' ಎಂಬ ಪಾಠಾಂತರವಿರುವುದು ಗೋಚರಿಸುತ್ತದೆ. ಇದೇ ಮೂಲಪಾಠವಾಗಿರಬೇಕೆಂದು ತಿಳಿಯುವುದಕ್ಕೆ ಅವಕಾಶವಿದೆ. ಹರಿ ವಂಶದಲ್ಲಿ ಯಾದವ ಸ್ತ್ರೀ ಪುರುಷ ಮುಖ್ಯರ ದೀಕ್ಷಾ ವಿಷಯವು ೬೧ನೆಯ ಸರ್ಗದ ಆರಂಭದಲ್ಲಿ ಬಂದಿದೆಯಾದರೂ ಅವರೆಲ್ಲಾ ನೇಮಿನಾಥನ ಬಳಿಯಲ್ಲಿ ದೀಕ್ಷಿತರಾದರೆಂಬುದಾಗಿ ಅಭಿಪ್ರಾಯವಾಗುತ್ತದೆ. ಇಲ್ಲಿಯೇ ೬೪ನೆಯಂ ಸರ್ಗದಲ್ಲಿ ಪಾಂಡವರು ನೇಮಿನಾಥನಲ್ಲಿ ದೀಕ್ಷಾ ಗ್ರಹಣ

ಮಾಡಿದುವನ್ನು ತಿಳಿಸುವಾಗ, ಕುಂತಿ ಮುಂತಾದ ಸ್ತ್ರೀಯರು ರಾಜೀಮತಿ ಆರ್ಯಿಕೆಯ ಬಳಿಯಲ್ಲಿ ತಪಸ್ಸಿಗೆ ನಿಂತರೆಂದು ಹೇಳಿದೆ. ಉತ್ತಪು.–ಚಾವುಂಪು.ಗಳಲ್ಲಿ ಇದೇ ಸಂಘಟನೆಯನ್ನು ವರ್ಣಿಸುವಾಗ ರಾತ್ರಿಮತಿ ಆರ್ಯಿಕೆಯನ್ನು ದೀಕ್ಷಾ ಪ್ರದಾಯಿಕೆಯಾಗಿ ಹೇಳಿದೆ (ಉತ್ತಪು. ಪ. ೧೨೨೪). ಕರ್ಣನೇ., ದಲ್ಲಿಯಾದರೋ ಪಾಂಡವರು ವರದತ್ತ ಗಣಧರರಿಂದ ದೀಕ್ಷಿತರಾದುದನ್ನು ತಿಳಿಸಿದ್ದರೂ ಕುಂತಿ ಮೊದಲಾದ ಸ್ತ್ರೀಯರು ಯಾರಲ್ಲಿ ದೀಕ್ಷೆಗೊಂಡರೆಂದು ಹೇಳಿಲ್ಲ. ಪ್ರಸ್ತುತ ಕರ್ಣನೇ.ದಲ್ಲಿ ಉತ್ತಪು.–ಚಾವುಂಪು. ಗಳ ಈ ಸೂಚನೆಯನ್ನು ಗ್ರಹಿಸಿ ರಾತ್ರಿಮತ್ಯಾರ್ಯಿಕೆಯನ್ನು ೧೪–೬೭ವ. ದಲ್ಲಿ ಬರುವ ಸ್ತ್ರೀಯರಿಗೆ ದೀಕ್ಷಾಪ್ರದಾಯಿಕೆಯನ್ನಾಗಿ ಹೇಳಿದೆಯೆಂದು ಭಾವಿಸಬಹುದು.

(೨೬) ಆಶ್ವಾಸ ೧೪– ಪದ್ಯ೧೧೪ವ. ಮತ್ತು ೧೧೭ ವ. :

ಸೋಮನೆಂಬ ಮಂತ್ರಿಯ ಪುತ್ರ ಸೋಮಭೂತಿಯೆಂಬುದಾಗಿಯೂ ವೈದನ 'ಅಗ್ನಿಭೂಪತಿ'ಯೆಂಬುದಾಗಿಯೂ ಇಲ್ಲಿ ಉಕ್ತವಾಗಿದೆ. ಸೋಮಭೂತಿಯ ಹೆಸರು ೧೧೭ವ.ದಲ್ಲಿ ಸೋಮಭೂಪತಿ ಎಂದಾಗಿದೆ. ಆದರೆ ೧೩೩ವ., ೧೩೪, ೧೩೪ವ. ಇಲ್ಲೆಲ್ಲ ಸೋಮಭೂತಿ ಎಂಬ ರೂಪದಲ್ಲಿಯೇ ಮಂತ್ರಿಪುತ್ರನ ಹೆಸರು ಗೋಚರಿಸುತ್ತದೆ. ರೂಪ ಸಾಮ್ಯದ ಮೇಲೆ 'ಅಗ್ನಿಭೂಪತಿ' ಎನ್ನುವಲ್ಲಿಯೂ ಅಗ್ನಿಭೂತಿ ಎಂದಿರಬೇಕೆಂದು ಊಹಿಸಬಹುದು. ಹರಿವಂಶದಲ್ಲಿಯೂ ಉತ್ತಪು.–ಚಾವುಂಪು. ಗಳಲ್ಲಿಯೂ ಅಗ್ನಿಭೂತಿ–ಸೋಮಭೂತಿಗಳೆಂಬುದಾಗಿಯೇ ಹೆಸರುಗಳನ್ನು ಉಲ್ಲೇಖಿಸಿರುವುದು ಸದೃಶ ಸಂದರ್ಭವನ್ನು ಪರಿಶೀಲಿಸಿದಾಗ ತಿಳಿಯುತ್ತದೆ. ಜೈನ ಕಥಾ ಸಾಹಿತ್ಯದಲ್ಲಿ ಅಗ್ನಿಭೂತಿ – ವಾಯುಭೂತಿಗಳೆಂಬ ಹೆಸರುಗಳು ಅಲ್ಲಲ್ಲಿ ಕಾಣಿಸಿಕೊಳ್ಳುವುದು ಸಾಮಾನ್ಯ (ಉದಾ: ವಡ್ಡಾರಾಧನೆ–ಸುಕುಮಾರ ಸ್ವಾಮಿಯ ಕಥೆ, ಸಾಲು ೯). ಆದುದರಿಂದ 'ಅಗ್ನಿಭೂಪತಿ'ಯನ್ನು 'ಅಗ್ನಿಭೂತಿ'ಯೆಂದೂ, 'ಸೋಮಭೂಪತಿ'ಯನ್ನು 'ಸೋಮಭೂತಿ'ಯೆಂದೂ ಗ್ರಹಿಸಬೇಕು.

ಭಾಗ ೨

ಕಲೆ ಮತ್ತು ಸಾಹಿತ್ಯ

ಕಲಾತ್ಮಕ ಸಾಹಿತ್ಯ ಮತ್ತು ಅದರ ನಿಯಮಗಳನ್ನು ಕುರಿತು, ಶ್ರೇಷ್ಠ ಕಲಾವಿದನು ತನ್ನ ಸರ್ವಸಮರ್ಪಕವೂ ಅತ್ಯಂತ ವಿಶಿಷ್ಟವೂ ಆದ ಕೆಲಸವನ್ನು ಮಾಡಲು ಯೋಗ್ಯನಾಗಬೇಕಾದರೆ ತನ್ನದೆಂದು ಹೇಳಿಕೊಳ್ಳುವ ಸ್ವಾತಂತ್ರ್ಯವನ್ನು ಕುರಿತು, ನಾವು ಮಾತನಾಡುತ್ತಿದ್ದೇವೆ. ಯಾವ ಅರ್ಥದಲ್ಲಿ ಸಾಹಿತ್ಯವು ಒಂದು ಕಲೆಯೆಂದೂ, ಯಾವ ಸಂಬಂಧವನ್ನು ಇದು ಅನ್ಯಕಲೆಗಳೊಂದಿಗೆ ಹೊಂದಿದೆಯೆಂದೂ ನಾವು ವಿಚಾರ ಮಾಡೋಣ. ಎಲ್ಲ ಕಲೆಗಳೂ ಎರಡು ವರ್ಗಗಳಾಗಿ ವಿಂಗಡಣೆಯಾಗಿವೆ. ಪಾರಿಶ್ರಮಿಕ ಅಥವಾ ಔಪಯೋಗಿಕ ಕಲೆಗಳು ಮತ್ತು ಲಲಿತ ಕಲೆಗಳು. ಪಾರಿಶ್ರಮಿಕ ಅಥವಾ ಔಪಯೋಗಿಕ ಕಲೆಗಳು ತಾಂತ್ರಿಕ ನಿಯಮಗಳ ಸಹಾಯದಿಂದ ಶ್ರದ್ಧೆಯಿಂದ ಕಲಿಯಲಾಗುತ್ತವೆ. ಅಭ್ಯಾಸದಿಂದ ಇವುಗಳಲ್ಲಿ ಕೌಶಲವನ್ನು ಗಳಿಸಲಾಗುತ್ತದೆ. ಇವು ಪ್ರಥಮತಃ ಮನುಷ್ಯನ ಭೌತಿಕ ಆವಶ್ಯಕಗಳು ಅಥವಾ ಅನುಕೂಲಗಳಿಗೆ ನೆರವಾಗುತ್ತವೆ. ಆದರೆ ಲಲಿತಕಲೆಗಳು ಯಾಂತ್ರಿಕವಾಗಿ ಹೃದ್ಯವಿದ್ಯವಾಗುವುದು ಸಾಧ್ಯವಿಲ್ಲ. ಅವು ಲೌಕಿಕ ಪ್ರಯೋಜನಗಳಿಗೆಂದು ಬಳಸುವುದಕ್ಕಾಗಿ ಇಲ್ಲ. ಅವು ಪ್ರಧಾನವಾಗಿ ಪ್ರತಿಭೆ ಮತ್ತು ಸ್ಫೂರ್ತಿಯನ್ನವಲಂಬಿಸಿವೆ; ಮನುಷ್ಯನ ಸೌಂದರ್ಯಾಕಾಂಕ್ಷೆಗೆ ಹಾಗೂ ಅಲೌಕಿಕಾನಂದಕ್ಕೆ ನೆರವಾಗುತ್ತವೆ. ಸಾಮಾನ್ಯವಾಗಿ ಒಪ್ಪಿರುವಂತೆ, ಲಲಿತಕಲೆಗಳು ಸಂಖ್ಯೆಯಲ್ಲಿ ಐದೆಂದು ಹೇಳಲಾಗಿದೆ: ವಾಸ್ತುಕಲೆ, ಶಿಲ್ಪಕಲೆ, ಚಿತ್ರಕಲೆ, ಸಂಗೀತ ಮತ್ತು ಕಾವ್ಯ. ಕೊನೆಯದು, ಶಾಸ್ತ್ರೀಯ ಸಾಹಿತ್ಯಕ್ಕಿಂತ ಭಿನ್ನವಾಗಿ ಎಲ್ಲ ಕಲಾತ್ಮಕ ಸಾಹಿತ್ಯವನ್ನೂ ಒಳಗೊಳ್ಳುವಂತೆ ವಿಸ್ತರಿಸಬಹುದಾಗಿದೆ. ಏಕೆಂದರೆ, ನಾವು ನೋಡಿರುವಂತೆ, ಶಾಸ್ತ್ರೀಯ ಸಾಹಿತ್ಯವು ಪ್ರತ್ಯಕ್ಷ ಪ್ರಯೋಜನವಿರುವ ಜ್ಞಾನದ ಕಡೆಗೆ ಗುರಿಯಿಡುವಲ್ಲಿ ಔಪಯೋಗಿಕ ಕಲೆಗಳಿಗೆ ಸಂವಾದಿಯಾಗಿದೆ. ಆದರೆ ಕಲಾತ್ಮಕ ಸಾಹಿತ್ಯವು ಮಾನವತ್ವ, ಕಲಾಮಯ ಆಕೃತಿ, ಭಾವಸಂವಾದಗಳಿಂದ ಮನಸ್ಸನ್ನು ರಂಜಿಸುವುದರ ಹಾಗೂ ಸಂಸ್ಕರಿಸುವುದರ ಕಡೆಗೆ ಲಕ್ಷ್ಯ

ಎಡುತ್ತದೆ. ಔಪಯೋಗಿಕ ಕಲೆಗಳೂ ಶಾಸ್ತ್ರೀಯ ಸಾಹಿತ್ಯವೂ ಯಾವುದಾ ದರೂ ಕುಶಲ ಕರ್ಮಕ್ಕೋ ಉದ್ಯಮಕ್ಕೋ ಮನುಷ್ಯನನ್ನು ಯೋಗ್ಯನನ್ನಾಗಿ ಮಾಡುತ್ತವೆ. ಲಲಿತಕಲೆಗಳು ತನಗೆ ತಾನು ಒಳ್ಳೆಯವನಾಗುವಂತೆ, ಮನುಷ್ಯ ನಾಗುವಂತೆ ಮಾಡುತ್ತವೆ.

ಬ್ರಿಟಾನಿಕಾ ವಿಶ್ವಕೋಶದಲ್ಲಿ ಲಲಿತಕಲೆಯೆಂಬುದಕ್ಕೆ ಹೀಗೆ ಸೂತ್ರ ವನ್ನು ಕೊಡಲಾಗಿದೆ : "ಲಯಗತಿಯ ಅಥವಾ ಉಕ್ತಿಯ ಅಥವಾ ನಿಯಮಿತಾ ಕೃತಿಯ ನಿಯಮಾನುಸಾರವಾಗಿ, ವಿವಿಧವಾದ ಶಾಶ್ವತವೂ ನಿರ್ಲಿಪ್ತವೂ ಆದ ಆನಂದವನ್ನು ಕೊಡಲು ಸಮರ್ಥವಾಗಿರುವ ರಸಭಾವವನ್ನು ಪ್ರತ್ಯಕ್ಷ ಪ್ರಯೋಜನದಿಂದ ಸ್ವತಂತ್ರವಾದ ಫಲಿತಗಳೊಂದಿಗೆ ಅಭಿವ್ಯಕ್ತಿಗೊಳಿಸಲೂ ಉತ್ಥಾಪಿಸಲೂ ಸ್ವತಂತ್ರವಾಗಿ, ಪೂರ್ವಸಂಕಲ್ಪದಂತೆ ಮನುಷ್ಯನು ಮಾಡುವ ಅಥವಾ ನಿರ್ಮಿಸುವ ಎಲ್ಲವೂ ಲಲಿತಕಲೆ."

ಲಲಿತಕಲೆಗಳು ಪ್ರತ್ಯಕ್ಷ ಪ್ರಯೋಜನವನ್ನು ಲಕ್ಷ್ಯವಾಗಿ ಇಟ್ಟುಕೊಳ್ಳು ವುದಿಲ್ಲ ಎಂಬುದನ್ನು ನಾವಿಲ್ಲಿ ಮೊದಲು ಗಮನಿಸಬೇಕು. ಒಂದು ಕಲಾ ಕೃತಿ, ಸಹಜವಾಗಿ, ಇಂಥ ಪ್ರಯೋಜನವನ್ನು ಹೊಂದಿರಬಹುದು. ಉದಾ ಹರಣೆಗೆ, ಉತ್ಸಾಹಾತಿಶಯದಿಂದ ಹಾಡಿದ ಒಂದು ಸಮರಗೀತೆ, ಯೋಧ ನನ್ನು ಸ್ವದೇಶಕ್ಕಾಗಿ ಹೋರಾಡುವಂತೆ ಪ್ರಚೋದಿಸಬಹುದು. ಒಂದು ಸುಂದರ ಪ್ರತಿಮೆ ದೇವಾಲಯದಲ್ಲಿ ಪೂಜೆಗೊಳ್ಳಲು ವಿಕ್ರಯವಾಗಬಹುದು. ಸುಂದರ ಸೌಧವೊಂದು ವಾಸಕ್ಕಾಗಿ ಉಪಯುಕ್ತವಾಗಬಹುದು. ಆದರೆ ಲಲಿತಕಲೆಗಳು ಸೃಷ್ಟಿಕಾರ್ಯದ ಸ್ವಯಂಪ್ರೇರಣೆಯಿಂದ, ಕಲಾವಿದನು ತನ್ನಲ್ಲಿ ರೂಪಿಸಿಕೊಂಡ ಸೌಂದರ್ಯ ಮತ್ತು ಆನಂದಗಳನ್ನು ಪರಪ್ರಕಟ ಮಾಡುವ ಇಚ್ಛೆಯಿಂದ, ನಿರ್ಲಿಪ್ತವಾದ ಅಭೀಪ್ಸೆಯಿಂದ ಮುಂಬರಿಯುತ್ತವೆ. ಕೇವಲ ಸ್ವಕೀಯವಾದ ಸ್ವಾಮ್ಯವಲ್ಲದೆ, ಎಲ್ಲರೂ ಮೆಚ್ಚುವಂತೆ ನಲಿಯುವಂತೆ ಪ್ರೇರಿಸುತ್ತವೆ.

ಲಲಿತಕಲೆಗಳು ತಂತ್ರಪ್ರಧಾನವಾದರೂ ನಿಯಮಗಳಿಂದ ಯಾಂತ್ರಿಕವಾಗಿ ಬದ್ಧವಾದುವಲ್ಲ. ಪ್ರತಿ ಕಲೆಯೂ ತನ್ನ ನಿಯಮಗಳನ್ನು ಉಳ್ಳದ್ದೇ.

ಅದು ಕಲಿಕೆಯನ್ನೂ ಅಭ್ಯಾಸವನ್ನೂ, ಮುಂದಾಲೋಚನೆಯನ್ನೂ ಸಂವಿಧಾನವನ್ನೂ ಆಶಿಸುತ್ತದೆ. ಆದರೆ ಬರಿಯ ನಿಯಮಗಳೂ ಮಾದರಿಗಳೂ ಕಲಾವಿದನನ್ನು ಮುನ್ನಡಸಲಾರವು. ತನ್ನ ಮಾಧ್ಯಮವನ್ನು ತಾನು ಅರಿತುಕೊಳ್ಳಲೂ ಕರಗತಮಾಡಿಕೊಳ್ಳಲೂ ಅವು ಅವನಿಗೆ ನೆರವಾಗುತ್ತವೆ, ಅಲ್ಲದೆ ಆಕೃತಿಯ ಅರಿವುಂಟುಮಾಡುತ್ತವೆ. ಆದರೆ ಕಲಾವಿದನು ಭಾವನೆಯೊಂದರಿಂದ ಸ್ಫೂರ್ತಿ ಪಡೆಯದಿದ್ದರೆ, ಚೇತನವು ಆಕೃತಿಯನ್ನು ಚುರುಕುಗೊಳಿಸದಿದ್ದರೆ, ಅವನ ಕೆಲಸ ಯಾಂತ್ರಿಕವಾಗುತ್ತದೆ; ನೀರಸವೂ ನಿರ್ಜೀವವೂ ಆಗುತ್ತದೆ.

ಈ ರೀತಿ ನಾವು ಕಲಾವಿದನ ಕಲ್ಪನೆಯ ಅಥವ ಭಾವನೆಯ ಪ್ರಾಮುಖ್ಯವನ್ನು ಅರಿತುಕೊಳ್ಳುತ್ತೇವೆ. ಜೀವನದಲ್ಲಿ, ಪ್ರಕೃತಿಯಲ್ಲಿ, ಇಲ್ಲವೆ ಕಲ್ಪನೆಯ ಮತ್ತು ಕಾಣ್ಕೆಯ ವಲಯಗಳಲ್ಲಿ ಯಾವುದು ಕಲಾವಿದನನ್ನು ಭಾವಪರವಶನನ್ನಾಗಿ ಮಾಡಿದೆಯೋ, ಸಹೃದಯರೊಡನೆ ಆ ಪರವಶತೆಯನ್ನು ಪಾಲುಗೊಳ್ಳುವ ಸಲುವಾಗಿ, ಆ ಅದನ್ನು ಅಭಿವ್ಯಕ್ತಿಗೊಳಿಸಲು ಯತ್ನಿಸುತ್ತಾನೆ. ನಿಜವಾಗಿ, ಯತ್ನಿಸುವಂತೆ ಒತ್ತಾಯಗೊಳ್ಳುತ್ತಾನೆ. ಅವನ ಕಲ್ಪನೆಯು ಇತಿಕೃತಿ ಅಥವಾ ಅನುಭವದಿಂದ ಮಿತವಾದುದಲ್ಲ. ವಾಸ್ತವ ಜಗತ್ತಿನಲ್ಲಿ ವಾಸ್ತವವಾದ ಏನಾದರೂ ಆಗಿರಬೇಕಾಗಿಲ್ಲ. ಅವನ ವ್ಯಕ್ತಿನಿಷ್ಠ ಅನುಭವಕ್ಕೆ ಸಂವಾದಿಯಾಗಿ, ಅವನ "ಅನುಕರಣೆ" ಎಂದು ಕರೆಯುವಂಥದು ಆದರ್ಶಭಾವವಾಗಬಹುದು. ಕಲೆಯು ಕೇವಲ ಪ್ರಕೃತಿಯ ಹಾಗೂ ವಾಸ್ತವದ ಪಡಿಯಲ್ಲ. ಅದು ಪ್ರಕೃತಿಗೆ ಕನ್ನಡಿ ಹಿಡಿಯಬೇಕೆನ್ನುವುದೇನೋ ಸರಿಯೆ. ಆದರೆ ವರ್ಡ್ಸ್‌ವರ್ತ್ ಹೇಳಿರುವಂತೆ ಕಲಾವಿದನು ಕಾಣುವುದನ್ನು ಕಲೆಯು ಅಭಿವ್ಯಕ್ತಿಗೊಳಿಸಬೇಕು. ಅಲ್ಲದೆ ಕಡಲು ನೆಲಗಳ ಮೇಲೆ ಎಂದೂ ಇದ್ದಿರದ ಪ್ರಕಾಶವನ್ನೂ ಪ್ರತಿಭೆಯನ್ನೂ, ಪಾವಿತ್ರ್ಯವನ್ನೂ ಕವಿಸ್ವಪ್ನವನ್ನೂ ಅದು ಸಂಕಲಿಸಬೇಕು.

ಪ್ರತಿಕಲೆಯಲ್ಲಿಯೂ ಹೀಗೆ ಭಾವನೆಯ ಅಲೌಕಿಕಾಂಶವೂ ಮತ್ತು ಭಾವನೆಯ ಮೂರ್ತರೂಪದ ಲೌಕಿಕಾಂಶವೂ ಇರುತ್ತವೆ. ಅಲ್ಲದೆ ಭಾವನೆಯೂ ಮೂರ್ತರೂಪವೂ ಒಟ್ಟಿಗೆ, ಶಬ್ದದ ವಿಶಾಲಾರ್ಥದಲ್ಲಿ

‘ಅನುಕರಣೆ’ಯನ್ನು ಸಂಯೋಜಿಸುವುದು. ಇದು ಶ್ರೇಷ್ಠ ಕಲೆಗಳೂ ತಂತಮ್ಮ ಅನುಕರಣೆ ಮತ್ತು ಭಾವನೆಗಳನ್ವಯ, ಮಾಧ್ಯಮ ಮತ್ತು ರೂಪಗಳ ಅನ್ವಯ ವಿಶದಗೊಳ್ಳಬಹುದು, ವಿಭಜನೆಗೊಳ್ಳಬಹುದು. ಹೀಗೆ ವಾಸ್ತುವಿದ್ಯೆಯಲ್ಲಿ ಭಾವನೆಯು ಅಲಕ್ಷ್ಯ, ಆಕೃತಿಯು ಪ್ರಧಾನ. ಶಿಲ್ಪಕಲೆ ಭಾವನೆ ಮತ್ತು ಆಕೃತಿಗಳನ್ನು ಸಮತೂಕದಲ್ಲಿ ಹೊಂದಿದೆ. ಆ ಸಮತೂಕ ಅಥವಾ ಸಾಮರಸ್ಯ ಶ್ರೇಷ್ಠವೂ ಲಾಕ್ಷಣಿಕವೂ ಆದ ಪ್ರಾಚೀನ ಕಲೆಯ (ಕ್ಲಾಸಿಕಲ್) ಆದರ್ಶ. ರೊಮ್ಯಾಂಟಿಕ್ ಕಲೆಗಳಲ್ಲಿ ರೂಪಕ್ಕಿಂತ ಭಾವನೆಗೆ ಮೇಲುಗೈ, ಚಿತ್ರಕಲೆಯಲ್ಲಿಯಂತೆ, ಸಂಗೀತ ಮತ್ತು ಕಾವ್ಯದಲ್ಲಿಯಂತೆ. ವಾಸ್ತುವಿದ್ಯೆಯ ಮಾಧ್ಯಮವೆಂದರೆ ಶಿಲೆ. ಅದರ ರೂಪವೆಂದರೆ ಕ್ರಮಬದ್ಧವೂ ಅಲಂಕೃತವೂ ಆದ ವಸ್ತುಜೋಡಣೆಯ ಮಿಶ್ರಣ. ಶಿಲ್ಪಕಲೆಯ ಮಾಧ್ಯಮವೂ ಶಿಲೆಯೆ. ನೈಜವಸ್ತುಗಳ ಅನುಕರಣೆ, ಅದರಲ್ಲಿಯೂ ಮುಖ್ಯವಾಗಿ ಮನುಷ್ಯ ಶರೀರವನ್ನು ಘನರೂಪದಲ್ಲಿ ಅನುಕರಣೆ ಮಾಡುವುದು ಇದರ ಕೆಲಸ. ಚಿತ್ರಕಲೆಯ ಮಾಧ್ಯಮ ವರ್ಣ. ಸಪಾಟಾದ ಪದಾರ್ಥಗಳ ಮೇಲ್ಮೈಯಲ್ಲಿ ನೈಜವಸ್ತುಗಳ ಹಾಗೂ ಮನುಷ್ಯ ಶರೀರದ ಅನುಕರಣೆಯಿದು. ಕಾವ್ಯದ ವಾಹಕವೆಂದರೆ ಛಂದೋಬದ್ಧವಾದ ಭಾಷೆ. ಇದು ಜೀವನದ ಸಂಗತಿಗಳನ್ನೂ ಪ್ರಕೃತಿಯನ್ನೂ ಅನುಕರಿಸುತ್ತದೆ, ಅಥವಾ ಆವಾಹಿಸುತ್ತದೆ. ಸಂಗೀತವು ಧ್ವನಿಯನ್ನು ತನ್ನ ಮಾಧ್ಯಮವನ್ನಾಗಿ ಪಡೆದಿದೆ. ಇದು ಸ್ವರಗಳ ಶ್ರೇಣಿಯನ್ನೂ ಮೇಳನವನ್ನೂ ನಿಯಂತ್ರಿಸುತ್ತದೆ. ಪ್ರಕೃತಿಯ ಯಾವುದೇ ವಸ್ತುವಿನ ಗಣನೀಯವಲ್ಲದ ಅನುಕರಣೆಯಾದ ಕಾರಣ, ವಸ್ತುವಿನ ಗಣನೀಯವಲ್ಲದ ಮೂರ್ತರೂಪವಾದ ಕಾರಣ ಎಲ್ಲ ಕಲೆಗಳಲ್ಲಿಯೂ ಇದು ಅಲೌಕಿಕ ಕಲೆಯೆನ್ನಿಸಿದೆ. ಹೀಗೆ ಸಂಗೀತವೂ ವಾಸ್ತುವಿದ್ಯೆಯೂ ಖಚಿತವಾಗಿ ಅನುಕರಣೆಯಲ್ಲ. ಅವು ಮನಸ್ಸಿನಲ್ಲಿ ನಿಶ್ಚಿತ ಪ್ರತಿಮೆಯೇನನ್ನೇ ಆಗಲಿ, ಪ್ರಕೃತಿಯಲ್ಲಿ ಇರುವಂಥ ಭಾವನೆಯನ್ನಾಗಲಿ, ಅದರ ಪ್ರತಿರೂಪವನ್ನಾಗಲಿ ಪ್ರಚೋದಿಸುವುದಿಲ್ಲ,— ಕಾವ್ಯ, ಚಿತ್ರಕಲೆ ಮತ್ತು ಶಿಲ್ಪಕಲೆಗಳು ಮಾಡುವಂತೆ. ವಾಸ್ತುಕಲೆ, ಶಿಲ್ಪಕಲೆ ಮತ್ತು ಚಿತ್ರಕಲೆ ಅವಕಾಶಭೂಮಿಕೆಯ ಪದಾರ್ಥಗಳಿಗೆ, ಕಾಣಲಾಗುವ ಮತ್ತು ಮುಟ್ಟಲಾಗುವ ಪದಾರ್ಥಗಳಿಗೆ ರೂಪ ಕೊಡುತ್ತವೆ; ರೂಪಣಕಲೆಗಳೆಂದು ಕರೆಯಬಹುದಾಗಿದೆ. ಸಂಗೀತ ಮತ್ತು ಕಾವ್ಯಗಳು ಕಾಲಭೂಮಿಕೆಯ

ಪದಾರ್ಥಗಳಿಗೆ, ಕೇಳಬಹುದಾದ ಮತ್ತು ತಿಳಿಯಬಹುದಾದ ಪದಾರ್ಥಗಳಿಗೆ (ಅಭಿವ್ಯಕ್ತಿ) ಉಕ್ತಿ ಕೊಡುತ್ತವೆ ; ವಾಚಸಕಲೆಗಳೆಂದು ಕರೆಯಬಹುದಾಗಿವೆ.

ಅಂದಮೇಲೆ, ಎಲ್ಲ ಕಲೆಗಳೂ ಅಲೌಕಿಕ ಸ್ಫೂರ್ತಿ ಮತ್ತು ಉತ್ಸಾಹ ಗಳಿಂದ ಹುಟ್ಟುತ್ತವೆ. ಹಾಗೂ ಅಲೌಕಿಕ ಭಾವವನ್ನು ಘನಿಷ್ಠವಾದ ಮತ್ತು ರಮಣೀಯವಾದ ಆಕೃತಿಯಲ್ಲಿ ಮೂರ್ತಗೊಳಿಸುತ್ತವೆ. ಐತಿಹಾಸಿಕವಾಗಿ ನೋಡಿದರೆ, ಎಲ್ಲ ಶ್ರೇಷ್ಠಕಲೆಗಳೂ ಮತಧರ್ಮದಿಂದ ಪೋಷಿತವಾಗಿವೆ. ಸೃಷ್ಟಿಕ್ರಿಯಾವಸರದ ಘಟ್ಟಗಳಲ್ಲಿ, ಕೆಲವೊಮ್ಮೆ ಎಚ್ಚರಿಕೆಯಿಂದ ಸೂಕ್ಷ್ಮ ವಿವರಗಳಿಗೆ ಗಮನವನ್ನು ಕೊಡದೆ ಹೋದರೂ, ಸೌಂದರ್ಯವನ್ನು ರೂಢಿಸುವುದು ನಿಲ್ಲಿಸದೆ, ಮೊದಲನೆಯದಾಗಿ ಮುಖ್ಯವಾಗಿ ಕಲೆಯು ಭಾವನೆಯ ಮಹತ್ತ್ವವನ್ನು ಲಕ್ಷ್ಯದಲ್ಲಿಡುತ್ತದೆ. ಈ ಕಾಲಾವಧಿಯು ತಾತ್ತ್ವಿಕವಾಗಿ ರೊಮ್ಯಾಂಟಿಕ್ ಆಗಿದೆ. ಉನ್ನತ ಸಂಸ್ಕೃತಿಯ ಮತ್ತು ವಿಚಾರಯುಗದಲ್ಲಿ ಕಲೆಗಾಗಿ ಕಲೆಯ ಪಂಥ ಪ್ರಾರಂಭವಾಯಿತು. ರೂಪದ ಮತ್ತು ಶೈಲಿಯ, ನಿಯಮಗಳ ಮತ್ತು ವಿಧಾನಗಳ, ಕೈವಾಡವೇ ಹೆಚ್ಚಾಗಿ ಕಲೆಯ ವಿಷಯಗಳು ಚರ್ವಿತ ಚರ್ವಣವೇ ಆದವು. ಅವುಗಳ ಅಲೌಕಿಕ ಹಾಗೂ ಸಾಮಾಜಿಕ ಪ್ರಯೋಜನಗಳನ್ನು ಲಾಘವವಾಗಿ ಎಣಿಸಲಾಯಿತು. ಇದು ಇಳಿಮುಖದ ಹಾಗೂ ಅನುಕರಣೆಯ ಕಾಲ. ರೂಪದ ರಮಣೀಯತೆ ಮತ್ತು ಭಾವದ ಘನತೆ ಸಂಪೂರ್ಣ ಸಾಮರಸ್ಯದಲ್ಲಿ ಕೂಡಿದರೆ, ನಿಶ್ಚಯವಾದ ಕ್ಲಾಸಿಕಲ್ ಕಲೆಯ ಕಾಲವನ್ನು ಕಾಣುತ್ತೇವೆ.

೧೯೬೧]

ಮೂಲ : ಬಿ. ಎಂ. ಶ್ರೀಕಂಠಯ್ಯ

[A Hand book of Rhetoric]

ರುದ್ರನಾಟಕ ಮತ್ತು ಹರ್ಷನಾಟಕ

ನಾಟಕದ ಮುಗಿತಾಯ ಮತ್ತು ಕ್ರಿಯೆಯು ಪ್ರೇರಿಸುವ ಭಾವನೆಗಳ ಆಧಾರದ ಮೇಲೆ ನಾಟಕಗಳನ್ನು ರುದ್ರನಾಟಕ ಮತ್ತು ಹರ್ಷನಾಟಕಗಳೆಂದು ವಿಂಗಡಿಸಬಹುದು. ಮಾನವೀಯವಾದ ಸಂಗತಿಗಳಿಗೆ ನಮ್ಮ ಮನಸ್ಸು ಹರ್ಷಗೊಂಡು ನಲಿಯುವಂತೆ ಮಾಡುವುದು ಹರ್ಷನಾಟಕ; ನಮ್ಮ ಮನಸ್ಸು ಮರುಕಗೊಂಡು ಕಂಬನಿ ಮಿಡಿಯುವಂತೆ ಮಾಡುವುದು ರುದ್ರನಾಟಕ. ಇವೆರಡೂ ಮೂರನೆಯ ವಿಧವಾದ 'ಟ್ರಾಜಿ-ಕಾಮೆಡಿ' ಇಲ್ಲವೆ 'ರೊಮಾನ್ಸ್' ಎಂಬ ಜಾತಿಯೊಡನೆ ಐಕ್ಯಗೊಳ್ಳಬಹುದು. ಜೀವನದ ಅಘೋರತೆ ಮತ್ತು ಅಳಲುಗಳಿಂದ ವಿಡಂಬನೆ ಮತ್ತು ನಲಿವುಗಳವರೆಗೆ ನಾಟಕಗಳನ್ನು ಹೀಗೆ ವಿಂಗಡಿಸಬಹುದು: ದುಃಖಾಂತವಾದ ಶುದ್ಧ ರುದ್ರನಾಟಕ; ಸುಖಾಂಶಕ್ಕಿಂತ ಮಿಗಿಲು ದುಃಖಾಂಶಗಳೇ ಇರುವ, ಆದರೆ ಸುಖಾಂತವಾಗಿ ಮುಗಿಯುವ ಮಿಶ್ರ ರುದ್ರನಾಟಕ ಇಲ್ಲವೆ 'ಟ್ರಾಜಿ-ಕಾಮೆಡಿ' ಅಥವಾ 'ರೋಮಾನ್ಸ್': ಹಾಸ್ಯ ಮತ್ತು ಹರ್ಷಕರಾಂಶಗಳು ಹೇರಳವಾಗಿರುವ, ಸುಖಾಂತವಾಗಿ ಮುಗಿಯುವ ಮಿಶ್ರ ಹರ್ಷನಾಟಕ ಇಲ್ಲವೆ 'ರೊಮ್ಯಾಂಟಿಕ್ ಕಾಮೆಡಿ'; ದುಃಖಾಂಶವೇನೂ ಇಲ್ಲದೆ ಉನ್ನತವೂ ಸಾರ್ವತ್ರಿಕವೂ ಆದ ಸುಖಾಂಶವನ್ನುಳ್ಳ ಶುದ್ಧ ಹರ್ಷನಾಟಕ, ಮತ್ತು ಅಣಕು ಅಪಹಾಸ್ಯಗಳು ಅಧಿಕವಾಗಿರುವ, ಕೀಳು ಅಭಿರುಚಿಯ ಹಾಗೂ ಕೆಲವೊಂದು ಜಾತಿಯ ಸುಖಾಂಶವನ್ನು ಮಾತ್ರ ಗುರಿಯಾಗಿಟ್ಟುಕೊಳ್ಳುವ, ಲಘು ಹರ್ಷನಾಟಕ ಅಥವಾ ಹಾಸ್ಯನಾಟಕ. ಹೇಗೂ ರುದ್ರನಾಟಕ ಮತ್ತು ಹರ್ಷನಾಟಕಗಳಲ್ಲಿ ಪ್ರಮುಖ ಭಿನ್ನತೆಯಿದೆ.

ರುದ್ರನಾಟಕ

ಅರಿಸ್ಟಾಟಲಿನ ಪ್ರಸಿದ್ಧ ರುದ್ರನಾಟಕ ಸೂತ್ರವು ಸಾರಭೂತವಾಗಿ ಹೀಗಿದೆ: "Tragedy is an imitation of an action that is serious, complete and of a certain magnitude

in the way not of narrative, but of an action, effecting through pity and fear, the proper purgation (Katharsis) of these emotions." ಈ ಸೂತ್ರವು ಎಲ್ಲ ಕಲೆಗಳಿಗೂ ಸಾಧಾರಣ ಲಕ್ಷಣವಾದ 'ಅನುಕರಣೆ'ಯನ್ನು ರುದ್ರನಾಟಕಕ್ಕೂ ಆರೋಪಿಸುತ್ತದೆ. ಅನಂತರ ಕಾವ್ಯ ಮತ್ತು ನಾಟಕಕ್ಕೆ ಸಾಧಾರಣ ಲಕ್ಷಣವನ್ನು-'ಮಹಾಕ್ರಿಯೆಯ ಅನುಕರಣೆಯನ್ನು'-ಹೇಳುತ್ತದೆ. ಅನುಕರಣೆಯು ಕಥನರೂಪದಲ್ಲಿರದೆ ಅಭಿನಯರೂಪದಲ್ಲಿ ಇರುವುದೆಂಬುದನ್ನು ಅನುಲಕ್ಷಿಸಿ ನಾಟಕವು ಕಾವ್ಯದಿಂದ ಬೇರೆಯಾದುದೆಂದು ತಿಳಿಸುತ್ತದೆ. ನಾಟಕದಲ್ಲಿಯೇ ರುದ್ರನಾಟಕದ ವಿಷಯ ಒಂದು ಗಂಭೀರಕ್ರಿಯೆ ಮತ್ತು ರುದ್ರನಾಟಕದ ಕಾರ್ಯ ಮರುಕ ಮತ್ತು ಭಯಗಳ ವಿರೇಚನವೆಂದು ತಿಳಿಸಿ ರುದ್ರನಾಟಕ ಮತ್ತು ಹರ್ಷನಾಟಕಗಳನ್ನು ಪ್ರತ್ಯೇಕಿಸುತ್ತದೆ. ದೊರೆಗಳೂ ಲೋಕಪ್ರಿಯ ನಾಯಕಶ್ರೇಷ್ಠರೂ ಹಾಗೂ ಗುಣೋತ್ಕರ್ಷವುಳ್ಳವರೂ (ಸದ್ಗುಣಿ ಎಂಬ ಅರ್ಥದಲ್ಲಿ ಅಲ್ಲ; ಅಧಿಕವಾದ ಭಾವನಾಶಕ್ತಿ ಮತ್ತು ರಾಗಭಾವಗಳನ್ನುಳ್ಳವರು ಎಂಬರ್ಥದಲ್ಲಿ) ಅದಂತಹ ಸುಪ್ರಸಿದ್ಧ ವ್ಯಕ್ತಿಗಳಿಗೆ ಸಂಬಂಧಪಟ್ಟು ಬರುವ ಒಂದು ಅತಿಶಯವೂ ದುಃಖಭಾರದಿಂದ ಗಂಭೀರವೂ ಆದ ಕ್ರಿಯೆಯೇ ದುರಂತನಾಟಕದ ವಸ್ತು ಎಂದಂತಾಯಿತು. ಆಂತರಿಕ ಗುಣಗಳಿಂದ ಒಬ್ಬ ವ್ಯಕ್ತಿಯ ವೈಯಕ್ತಿಕ ಜೀವನ ಎಷ್ಟೇ ದುರಂತವಾಗಿ ದುಃಖಪೀಡಿತವಾಗಿ ಕಂಡುಬಂದರೂ ಶ್ರೇಷ್ಠ ರುದ್ರನಾಟಕದ ವಸ್ತುವಾಗುವುದು ಸಾಧ್ಯವಿಲ್ಲ. ಅದರ ಪರಿಣಾಮ ಫಲದಲ್ಲಿ ಸಾರ್ವತ್ರಿಕವಾದ ಪ್ರಾಮುಖ್ಯವಿರುವುದಿಲ್ಲ. ಸಾಕಷ್ಟು ಸತ್ವದಿಂದ ತೀವ್ರವಾಗಿ ನಮ್ಮ ಕಲ್ಪನಾ ಶಕ್ತಿಯ ಕುಡಿ ಕೊನರುವಂತೆ ಇದು ಮಾಡುವುದಿಲ್ಲ. ಅತ್ಯಂತ ಸಂಕುಚಿತ ವಲಯದಲ್ಲಿ, ಸಂಕುಚಿತ ದೃಷ್ಟಿಕೋನದಲ್ಲಿ ಮತ್ತು ನೀಚೋದ್ದೇಶ ಪ್ರೇರಿತವಾದ ನಡೆವಳಿಯಲ್ಲಿ ವ್ಯವಹರಿಸುವುದು ನಮ್ಮ ಅನುಭವಕ್ಕೆ ಬರುತ್ತದೆ. ಕ್ರಿಯೆಯು ಕ್ಷುದ್ರವಾದ್ದರಿಂದ ಈ ಸಹಜವಾದ ಅಲ್ಪತೆಯು ಗಾಂಭೀರ್ಯ ಮತ್ತು ಭಯೋತ್ಕಂಠೆಗಳನ್ನು ಉಂಟುಮಾಡಲು ಅಸಮರ್ಥವಾಗುತ್ತದೆ. ರುದ್ರನಾಟಕದ ಕೆಲಸವೆಂದರೆ ವಿರೇಚನ; ಹಾಗೆಂದರೆ ಭಯ ಮತ್ತು ಕರುಣೆಯ ಭಾವಗಳು ಉಮ್ಮಳಿಸುವಂತೆ ಅಥವಾ ಉದ್ರೇಕಗೊಳ್ಳುವಂತೆ

ಮಾಡಿ ಈ ಮಾನವೀಯ ಭಾವನೆಗಳಿಗೆ ನಿರಪಾಯಕಾರಿಯೂ ಉಲ್ಲಾಸ ಕಾರಿಯೂ ಆದ ಬಿಡುಗಡೆಯನ್ನು ಕೊಡುವ ಆನಂದವನ್ನು ಪ್ರದಾನಮಾಡು ವುದೇ ಆಗಿದೆ. ಪ್ಲೇಟೋ ಕಾವ್ಯವನ್ನು ಅನೀತಿಪ್ರದವೆಂದು ಖಂಡಿಸಿದ್ದನು. ರಾಗಭಾವಗಳನ್ನು ಪೋಷಿಸಿ ಚಿಂತನೆಯನ್ನು ಅಲಕ್ಷಿಸುವುದೆಂದು ತಿಳಿಸಿದನು. ಅರಿಸ್ಟಾಟಲನು ಭಾವಗಳನ್ನು ಕೊಂದುಬಿಡುವುದಾಗಲಿ, ಸರಿಯಾಗಿ ಪೋಷಿಸದೇ ಹೋಗುವುದಾಗಲಿ ಸರಿಯಲ್ಲವೆಂದು ತಿಳಿಸಿ ಅವುಗಳಿಗೆ ಯೋಗ್ಯ ಪರಿಪೋಷಣೆ ಕೊಟ್ಟು ಕ್ರಮಗೊಳಿಸಬೇಕೆಂದೂ ತಿಳಿಸಿದನು. ರುದ್ರನಾಟಕವು ಇದನ್ನು ಮಾಡುತ್ತದೆ. ಪರಿಣಾಮದಲ್ಲಿ ಶಮನಗೊಳಿಸುವುದಕ್ಕೆಂದೇ ರಾಗಭಾವಗಳನ್ನು ಉದ್ರೇಕಗೊಳಿಸುತ್ತದೆ. ಸ್ವಾರ್ಥಪರತೆ ಮತ್ತು ಕಲ್ಮಷಾಂಶಗಳಿಂದ ರಾಗ ಭಾವಗಳನ್ನು ಶುದ್ಧಗೊಳಿಸಿ ಮಾನವರನ್ನು ರಾಗಭಾವಗಳಿಂದ ಮುಕ್ತರನ್ನಾಗಿ ಮಾಡುತ್ತದೆ. ಭಾವಾತಿರೇಕವಳಿದು ನಿರ್ಮಲಾನಂದದಲ್ಲಿ ಚಿತ್ತ ಪ್ರಸನ್ನವಾಗಿರು ವಾಗ ರಾಗಭಾವಗಳ ವಿಚಿಕಿತ್ಸೆಯಾಗಿರುತ್ತದೆ. ಹೀಗೆ ರುದ್ರನಾಟಕದ ಕೆಲಸ ಕರುಣೆ ಮತ್ತು ಭೀತಿಗಳಿಗೆ ಬಿಡುಗಡೆಯನ್ನು ಕಲ್ಪಿಸುವುದೇ ಅಲ್ಲದೆ ಅವುಗಳಿಗೆ ನಿರ್ದಿಷ್ಟ ರಸಾನುಭವನ್ನುಂಟುಮಾಡಿ ಕಲೆಯ ಮಾಧ್ಯಮದಲ್ಲಿ ಅವು ಪ್ರವೇಶಿಸುವಂತೆಮಾಡಿ ಅವುಗಳನ್ನು ನಿಷ್ಕಳಂಕವೂ ಸುಸ್ಪಷ್ಟವೂ ಆಗಿರುವಂತೆ ಮಾಡುವುದು. ಮಾನವೀಯ ಕರುಣೆ ಮತ್ತು ಮಾನವೀಯ ಭೀತಿ ಕಲೆಯ ರಸಾಯನ ಕ್ರಿಯೆಯಲ್ಲಿ ಮಾರ್ಪಟ್ಟು ಆನಂದದಲ್ಲಿ ಕರಗುತ್ತವೆ ; ನೋವು ಮಾನವೀಯ ಸಹಾನುಭೂತಿಯ ಪರಿಶುದ್ಧ ತರಂಗದಲ್ಲಿ ನುಸುಳುತ್ತದೆ.

ಜ್ಞಾನಪುನರುಜ್ಜೀವನ ಕಾಲದ ವಿಮರ್ಶಕರು ಅರಿಸ್ಟಾಟಲಿನ ಸೂಕ್ತಿಯನ್ನು ವಿಸ್ತರಿಸಿದುದೇ ಅಲ್ಲದೆ ರುದ್ರನಾಟಕ ಮತ್ತು ಹರ್ಷನಾಟಕ ಗಳನ್ನು ಈ ಕೆಳಕಂಡಂತೆ ಪ್ರತ್ಯೇಕಿಸಿದರು :

(೧) ರುದ್ರನಾಟಕವು ಮಹತ್ತಾದ ಮತ್ತು ಘನ ಗಂಭೀರವಾದ ಕ್ರಿಯೆಗಳಿಗೆ ಸಂಬಂಧಪಟ್ಟುದು ; ಹರ್ಷನಾಟಕವು ಸುಪರಿಚಿತವಾದ ಮತ್ತು ದೈನಂದಿನ ವ್ಯವಹಾರದ ಕ್ರಿಯೆಗಳಿಗೆ ಸಂಬಂಧಪಟ್ಟುದು.

(೨) ರುದ್ರನಾಟಕವು ಸುಖದಲ್ಲಿ ಪ್ರಾರಂಭವಾಗಿ ಘೋರವಾಗಿ ಮುಗಿಯುತ್ತದೆ ; ಹರ್ಷನಾಟಕವು ಸಂಕ್ಷೋಭೆಯಲ್ಲಿ ಪ್ರಾರಂಭವಾಗಿ ಸುಖದಲ್ಲಿ ಮುಗಿಯುತ್ತದೆ.

(೩) ರುದ್ರನಾಟಕದ ಪಾತ್ರಗಳು – ದೊರೆಗಳು, ರಾಜಕುಮಾರರು ಅಥವಾ ಮಹಾನಾಯಕರು; ಹರ್ಷನಾಟಕದ ಪಾತ್ರಗಳು ಸಾಮಾನ್ಯ ಮನುಷ್ಯರು ಮತ್ತು ಸ್ವಂತ ವ್ಯವಹಾರದ ವ್ಯಕ್ತಿಗಳು.

(೪) ರುದ್ರನಾಟಕದ ಶೈಲಿ ಮತ್ತು ಶಬ್ದಪ್ರಯೋಗ ಮೇಲು ಮಟ್ಟದ್ದು ಮತ್ತು ಗಂಭೀರವಾದದ್ದು; ಆದರೆ ಹರ್ಷನಾಟಕದಲ್ಲಿ ಅವು ಸಾಮಾನ್ಯವಾದದ್ದು ಮತ್ತು ರೂಢಿಗತವಾದದ್ದು.

(೫) ರುದ್ರನಾಟಕದ ವಸ್ತು ಸಾಧಾರಣವಾಗಿ ಪೌರಾಣಿಕ ಮತ್ತು ಚಾರಿತ್ರಿಕವಾಗಿರುತ್ತದೆ; ಆದರೆ ಹರ್ಷನಾಟಕದ ವಸ್ತು ಯಾವಾಗಲೂ ಕವಿಕಲ್ಪಿತವಾದದ್ದು.

(೬) ರುದ್ರನಾಟಕವು ದೇಶತ್ಯಾಗ ಮತ್ತು ರಕ್ತಪಾತಗಳಿಗೆ ಸಂಬಂಧಿಸಿರುವುದು; ಆದರೆ ಹರ್ಷನಾಟಕವು ಬಹುಮಟ್ಟಿಗೆ ಪ್ರೇಮ ಮತ್ತು ಕನ್ಯಾಪಹಾರಗಳಿಗೆ ಸಂಬಂಧಿಸಿರುವುದು. ಸಾರಾಂಶವಷ್ಟನ್ನು ಗಮನಿಸಿ ಅರಿಸ್ಟಾಟಲನು ರುದ್ರನಾಟಕದ ಕ್ರಿಯೆಯ ಸ್ವರೂಪವು ಮಹತ್ತಾದುದೂ ಗಂಭೀರವಾದುದೂ ಮತ್ತು ಉತ್ಪಾತಕಾರಿಯಾದುದೂ ಎಂಬುದನ್ನು ಒತ್ತಿ ತಿಳಿಸಿದ್ದಾನೆ; ಅಲ್ಲದೆ ಈ ರುದ್ರಕ್ರಿಯೆಯು ಭೀತಿ ಮತ್ತು ಕರುಣೆಗಳ ಭಾವಗಳನ್ನು ಉಮ್ಮಳಿಸಿ ಶುದ್ಧಿಗೊಳಿಸುತ್ತವೆ ಎಂಬ ಅದರ ಪರಿಣಾಮಫಲವನ್ನೂ ಒತ್ತಿ ಹೇಳಿದ್ದಾನೆ. ಹೇಗೂ ಆತನು ರುದ್ರನಾಟಕದ ಕ್ರಿಯೆ ಅನಿವಾರ್ಯವಾಗಿ ಮುರಿತದಲ್ಲಿ ಕೊನೆಗೊಳ್ಳುವುದೆಂಬುದನ್ನು ಸ್ಪಷ್ಟವಾಗಿ ಹೇಳುವುದಿಲ್ಲ; ಪ್ರೊ. ಬ್ರಾಡ್ಲೆ ಮತ್ತು ಕೋರ್ಟ್ನೆಯವರುಗಳು ರುದ್ರನಾಟಕದ ಎರಡು ಆಧುನಿಕ ಸೂತ್ರಗಳನ್ನು ಕೊಟ್ಟು ವಿಶದೀಕರಿಸಿರುವ ಹೆಗಲ್‌ನ ಮಾನಸಿಕ ಘರ್ಷಣೆಯ ತತ್ತ್ವದ ಸಹಾಯದಿಂದ ಇದಕ್ಕೆ ವಿವರಣೆಯನ್ನು ತಂದುಕೊಳ್ಳಬಹುದು.

ಉನ್ನತ ದರ್ಜೆಯ ಮನುಷ್ಯನೊಬ್ಬನನ್ನು ಮರಣಮುಖಕ್ಕೆ ಕೊಂಡೊಯ್ಯುವ ಅಸಾಧಾರಣ ಮುರಿತದ ಕತೆಯೆಂದು ಷೇಕ್ಸ್‌ಪಿಯರಿಯನ್ ರುದ್ರನಾಟಕಕ್ಕೆ ಬ್ರಾಡ್ಲೆ ಸೂತ್ರ ಕೊಟ್ಟಿದ್ದಾನೆ. ಈ ಮುರಿತವು ಸುಮ್ಮನೆ ಮೇಲೆ ಎರಗುವುದಲ್ಲ ಅಥವಾ ಸಂಘಟಿಸುವುದಷ್ಟೇ ಅಲ್ಲ; ಯಾವುದೋ

ಬಾಹ್ಯಶಕ್ತಿ ಅಥವಾ ವಿಧಿಸಂಕಲ್ಪದಿಂದಷ್ಟೇ ಕಾಣಿಸಿಕೊಂಡುದಲ್ಲ; ಆದರೆ ಪ್ರಮುಖವಾಗಿ ಕ್ರಿಯೆಯಾಗಿ ಹೊಮ್ಮುವ ಮಾನವ ಪಾತ್ರದ ಪರಿಣಾಮವಾಗಿ ಅನಿವಾರ್ಯ ಸಂಘಟನೆಯಾಗಿ ಸಿದ್ಧವಾಗುತ್ತದೆ. ಪಾತ್ರವೇ ವಿಧಿ ಅಥವಾ ದೈವ; ಮನುಷ್ಯರು ತಮಗೆ ತಾವೇ ತಮ್ಮ ದುಃಖಗಳ ಜನಕರು; ದುರಂತವು ಪಾತ್ರ ಅಥವ ಕ್ರಿಯೆಯ ಘರ್ಷಣೆಯ ಫಲವಾಗಿ ಬರುವಂಥದು; ಘರ್ಷಣೆ ಯೆಂದರೆ ಅನ್ಯವ್ಯಕ್ತಿಗಳೊಡನೆ ಮಾಡುವ ಬಾಹ್ಯಘರ್ಷಣೆ; ಘಟನೆಗಳೊಡನೆ ಸಂದರ್ಭ ಸನ್ನಿವೇಶಗಳೊಡನೆ ಮಾಡುವ ಘರ್ಷಣೆ; ರಾಗಭಾವಗಳೊಡನೆ ಪ್ರವೃತಿಗಳೊಡನೆ ಭಾವನೆಗಳೊಡನೆ ನಿಯಮ ಅಥವಾ ತತ್ತ್ವಗಳೊಡನೆ ಮನುಷ್ಯರಲ್ಲಿ ಹುಟ್ಟಿ ಆಳುತ್ತಿರುವ ಶಕ್ತಿಗಳೊಡನೆ ಮಾಡುವ ಆಂತರ ಘರ್ಷಣೆ ಯಾವುದೇ ಆಗಬಹುದು; ಇಲ್ಲವೆ ದುಷ್ಟಶಕ್ತಿಯೊಡನೆ ಪ್ರತಿಭಟಿಸಿ ನಿಲ್ಲುವ ನಿರ್ಭೀತವಾದ ಅಜೇಯವಾದ ಆತ್ಮವಾಗಿರಬಹುದು, ಯಾವುದೋ ಒಳತೋಟಿಯಿಂದ ತನ್ನೊಳಗೇ ಸಿಡಿದುಹೋದ ಆತ್ಮವಾಗಿರಬಹುದು; ಈ ಬಾಹ್ಯ ಮತ್ತು ಆಂತರ ಹೋರಾಟಗಳನ್ನು Spiritual Force ಎಂಬ ಒಂದು ಮಾತಿನಿಂದ ಹೇಳಬಹುದು. ಮಾನವನ ಅಂತರಂಗದಲ್ಲಿ ಯಾವುದೇ ಶಕ್ತಿಗಳು ಕೆಲಸ ಮಾಡುತ್ತಿರಲಿ–ಒಳ್ಳೆಯದು ಅಥವ ಕೆಟ್ಟದ್ದೇ ಆಗಿರಲಿ-ವೈಯಕ್ತಿಕ ರಾಗಭಾವಗಳೇ ಆಗಿರಲಿ, ಇಲ್ಲವೆ ವ್ಯಕ್ತಿ ನಿಷ್ಠವಲ್ಲದ ನಿಯಮಗಳೇ ಆಗಿರಲಿ; ಮನುಷ್ಯನ ಆತ್ಮವನ್ನು ಆಳುವ, ಅಲುಗಿಸುವ, ಒಳಗೊಳ್ಳುವ, ಪ್ರಚೋದಿಸುವ, ಸಂಶಯಗಳು ಕಾಮನೆಗಳು ಧರ್ಮಸೂಕ್ಷ್ಮಗಳು ಭಾವನೆಗಳು ಯಾವುವೇ ಆಗಿರಲಿ, ಈ ಮಾತಿನ ಒಳಗಡೆ ಬರುತ್ತವೆ. ಷೇಕ್ಸ್‌ಪಿಯರಿಯನ್ ರುದ್ರನಾಟಕದಲ್ಲಿ ಇಂಥ ಕೆಲವು ಶಕ್ತಿಗಳ ಸಂಘರ್ಷವನ್ನು ನಾವು ಕಾಣುತ್ತೇವೆ. ಮನುಷ್ಯರಲ್ಲಿ ಇವು ಕೆಲಸಮಾಡಿ ಅವರವರಲ್ಲಿ ವಿವಾದ ಸಂಘರ್ಷಗಳನ್ನು ಉತ್ಪನ್ನ ಮಾಡುವುದನ್ನು ತೋರಿಸುತ್ತದೆ. ನಾಯಕನ ಆತ್ಮದಲ್ಲಿ ಕ್ಷೋಭೆ ಯನ್ನೂ ಜತೆಗೆ ಸಂಘರ್ಷವನ್ನೂ ಇವು ತೋರಿಸುತ್ತವೆ. ಮ್ಯಾಕ್‌ಡಫ್ ಮತ್ತು ಮಾಲ್‌ಕಮ್ಮರ ರಾಜಭಕ್ತಿ ಮತ್ತು ದೇಶಪ್ರೇಮಗಳಿಗೆ ಮ್ಯಾಕ್‌ಬೆತ್ತನ ದ್ರೋಹಚಿಂತನೆಯು ಸಿಡಿಲಾಗಿ ಬಡಿಯುತ್ತದೆ. ಆದರೆ ಈ ಶಕ್ತಿಗಳು ಅಥವಾ ತತ್ತ್ವಗಳು ಮ್ಯಾಕ್‌ಬೆತ್ತನ ಆತ್ಮದಲ್ಲಿಯೇ ಸಮಾನ ತಾಕಲಾಟಗಳಿಗೆ ಗುರಿ ಯಾಗುತ್ತವೆ, ಆದರೆ ಅಷ್ಟರಿಂದಲೇ ರುದ್ರನಾಟಕವಾಗುವುದಿಲ್ಲ.

ಇನ್ನೊಬ್ಬ ಲೇಖಕನ ಅಭಿಪ್ರಾಯವನ್ನು ಇಲ್ಲಿ ಉದ್ಧರಿಸಬಹುದು: ಜೀವನದ ಆದ್ಯ ದುರಂತವೆಂದು ಷೇಕ್ಸ್‌ಪಿಯರನಿಗೆ ಕಾಣುವಂಥದು- ಮಾನವರಲ್ಲಿ ಅತ್ಯಂತ ಸುಂದರವೂ ಮತ್ತು ಬಲಯುತವೂ ಆದುದರ ವೃಥಾಹಾನಿ. ಅವರ ಸಾಮರ್ಥ್ಯದ ಮೇಲೆ ಮುಸುಕುವ ದೋಷಗಳಿಂದ ಹೀಗಾಗುವುದು. ಶಕ್ತಿಯು ಯಾವ ಪ್ರಮಾಣದಲ್ಲಿದ್ದರೆ ಆ ಪ್ರಮಾಣದಲ್ಲಿಯೇ ದುರಂತತೆಯ ವ್ಯಾಪ್ತಿಯೂ ಸಂಘಟಿಸುವುದು. ಇಂಥ ನಾಟಕವು ನಮ್ಮದೇ ಬಗೆಯ ಎಂದರೆ ದೃಷ್ಟಿಯ ತಾತ್ತ್ವಿಕತೆ ಅಥವಾ ಕ್ಷುಲ್ಲಕ ವರ್ಗ ಭೇದಗಳಿಗೆ ಮೈಯುಬ್ಬುವಂತೆ ಮಾಡದೆ, ಜ್ಞಾನದ ಪ್ರಮುಖಾಂಶವೂ ರುದ್ರನಾಟಕದ ಸಂದೇಶವೂ ಆಗಿರುವ ಜೀವನದ ಗುಹ್ಯಾದ್ಭುತಗಳು ಮತ್ತು ವೈಚಿತ್ರ್ಯಗಳನ್ನು ಕಂಡು ಭಯೋತ್ಕಂಠವಾಗಿ ಕಡೆಗೆ ವಿನೀತರಾಗುವಂತೆ ಮಾಡುತ್ತದೆ. ಪುಟಕ್ಕೆ ಹಾಕಿ ತೆಗೆದಂತೆ ಆತ್ಮವನ್ನು ಪರಿಶುದ್ಧಗೊಳಿಸಿ, ನಮ್ಮ ಅರ್ಥಹೀನವೂ ಸ್ವಾರ್ಥಪರವೂ ಆದ ಅಲ್ಪಾಸೆಗಳಿಂದ ನಮ್ಮನ್ನು ಉದ್ಧರಿಸಿ ನಮ್ಮ ಜೀವನ ವನ್ನು ಬಂದು ಮುತ್ತುವ ಶಕ್ತಿಗಳು ಹೇಗೆ ಜಟಿಲವಾಗಿಯೂ ಅದರ ಸಮಸ್ಯೆಗಳು ಹೇಗೆ ಅತ್ಯಾಶ್ಚರ್ಯಕರವಾಗಿಯೂ ಇರಬಲ್ಲವೆಂಬುದನ್ನು ತೋರಿಸುತ್ತದೆ. ನಾವು ಜೀವನವನ್ನು ದಿಟ್ಟತನದಿಂದ ಎದುರಿಸುತ್ತೇವೆ. ನಮ್ಮ ಕಲ್ಪನೆ ಮತ್ತು ಅಭಿಪ್ರಾಯಗಳಿಗೆ ನಾವೇ ಗರ್ವಿಷ್ಠರಾಗದೆ ವ್ಯರ್ಥಾಲಾಪಗಳ ಕೊಳೆ ತೊಳೆದು ಹೋಗಿ ನಾವು ಬಲಿಷ್ಠರೂ ಶ್ರೇಷ್ಠರೂ ಆಗುತ್ತೇವೆ.

ಕೋರ್ಟ್ನೆಯ ವಿವರಣೆ ಹೀಗಿದೆ: ಮಾನವ ಸೌಖ್ಯದ ಬಗ್ಗೆ ನಿರಾಶೆ ಯನ್ನು ತಳೆಯಬೇಕಾಗಿಬಂದಾಗಲೂ ಮಾನವ ಗುಣಶೀಲದ ಬಗ್ಗೆ ಶ್ರೇಷ್ಠ ಕಲಾವಿದನು ಆಶಾವಾದವನ್ನೇ ಎತ್ತಿ ಹಿಡಿದರೂ ರುದ್ರನಾಟಕದ ಜನನ ಸಾಧಾರಣ ನಿರಾಶಾವಾದ ಮತ್ತು ವಿಷಣ್ಣತೆಯಿಂದಲೇ ಆಗಿದೆ. ಅದು ಯಾವಾಗಲೂ ಎರಡು ಶಕ್ತಿಗಳ ಘರ್ಷಣೆಯಾಗಿರುತ್ತದೆ. ಬಹಿರಂಗದ ಅನಿವಾರ್ಯತೆ ಅಥವಾ ಆವಶ್ಯಕತೆ ಮತ್ತು ಅಂತರಂಗದ ಸ್ವಾತಂತ್ರ್ಯ ಅಥವಾ ಸ್ವಚ್ಛಂದತೆ; ಹೊರಗಡೆ ಮಹತ್ತಾದ ಬಲವಾದ ಹಾಗೂ ನಿರಂಕುಶವಾದ ವಿಧಿನಿಯಮವಿರುತ್ತದೆ, ಒಳಗಡೆ ಅಜೇಯವೂ ಏಕಾಂಗಿಯೂ ಆದ ಚಿತ್ತವು

ತನ್ನ ಭೌತಸಂದರ್ಭಗಳೆಲ್ಲವೂ ನುಚ್ಚು ನೂರಾಗಿ ಹೋದರೂ ಸರಿಯೆ, ಆತ್ಮಜಯವನ್ನು ಪಡೆದಿರುತ್ತದೆ. ರುದ್ರನಾಟಕದ ಸಾರಭೂತಾಂಶವು ಇಷ್ಟೆ : ಸಾರ್ವತ್ರಿಕವೂ ವಿಶ್ವವ್ಯಾಪಿಯೂ ಆಗಿರುವ ಒಂದು ಮಹತ್ತಾದ ನಿಯತಿ ಅಥವಾ ಶಕ್ತಿಗೂ ವ್ಯಕ್ತಿಯ ಸ್ವನಿಷ್ಠಚಿತ್ತಕ್ಕೂ ನಡೆಯುವ ಹೋರಾಟ : ಬಹಿರಂಗದ ಅನಿವಾರ್ಯತೆ ಮತ್ತು ಅಂತರಂಗದ ಸ್ವಾತಂತ್ರ್ಯ. ಬಲ ಪ್ರಾಧಾನ್ಯ ಕಾಲದಲ್ಲಿ ಮನುಷ್ಯನು ತನ್ನ ವಿಧಿಗೆ ತಾನೇ ಯಾಜಮಾನನೆಂದು ತಿಳಿಯಲಾಗಿತ್ತು ; ಅವಸರ್ಪಿಣೀ ಕಾಲದಲ್ಲಿ ಅವನು ವಿಧಿಯ ಕೈಗೊಂಬೆ, ದೈವಶಕ್ತಿಯ ಲೀಲಾವಸ್ತು. ಆದರೆ ಮನುಷ್ಯನು ವಿಶ್ವದ ಕಬ್ಬಿಣದಂಥ ನಿಯಮಗಳೊಡನೆ ತಾನೇ ನುಗ್ಗಿ ಹೋರಾಟ ನಡೆಸುತ್ತಾನೆ. ಅದೇ ರುದ್ರನಾಟಕದ ಮಹದ್ವಿಷಯವಾಗುವುದು. ಭೌತಿಕ ವಿನಾಶದ ನಡುವೆ ಈ ಆತ್ಮಿಕ ಜಯದ ದೃಷ್ಟಿಯೇ ಈ ರುದ್ರನಾಟಕವು ಮನುಷ್ಯನನ್ನು ಪರಿಶುದ್ಧಗೊಳಿಸುವ ಅಂಶ.

ಈಗ ನಾವು ಹೀಗೆ ಸಂಗ್ರಹಿಸಬಹುದು :—

(೧) ರುದ್ರನಾಟಕವು ಮರಣದಲ್ಲಿ ಕೊನೆಗೊಳ್ಳುವ ಗಂಭೀರಕ್ರಿಯೆ.

(೨) ಈ ಮರಣವು ಆತ್ಮಶಕ್ತಿಗಳ ಅಂತರಂಗ ಇಲ್ಲವೆ ಬಹಿರಂಗದ ಹೋರಾಟದ ಫಲವಾಗಿ ಸಂಭವಿಸುವುದು ; ಲೋಹಕರ್ಕಶನಿಯಮಗಳಿಗೂ ದೃಢಚಿತ್ತಕ್ಕೂ ನಡೆಯುವ ಘರ್ಷಣೆಯ ಫಲವಾಗಿಯೂ ಆಗುವುದು.

(೩) ಈ ಮರಣವು ನಮ್ಮಲ್ಲಿ ಭೀತಿ ಮತ್ತು ಕರುಣೆಗಳ ರಾಗಭಾವಗಳನ್ನು ಎಬ್ಬಿಸುತ್ತದೆ ; ಆದರೆ ನಮ್ಮನ್ನು ಅಶಾಂತರನ್ನಾಗಿ ಮಾಡುವುದಿಲ್ಲ; ಏಕೆಂದರೆ ಈ ಭಾವನೆಗಳು ಉಪಶಾಂತವೂ ಪರಿಶುದ್ಧವೂ ಮತ್ತು ಉನ್ನತವೂ ಆಗಿರುತ್ತವೆ.

(೪) ಇದು ನಮ್ಮನ್ನು ಸೋತವರಂತೆ ಮಾಡಿ ದುರ್ಬಲಗೊಳಿಸುವುದಿಲ್ಲ; ಸಂಪನ್ನತೆಯು ಪತನವಾಗಿದ್ದರೂ ನಾವು ಮಾನವನ ಆತ್ಮದ ಹಿರಿಮೆಯನ್ನು ಗುರುತಿಸಿ ಪರಿಶುದ್ಧರೂ ನಿರ್ಮಲಾನಂದದ ಅನುಭವಿಗಳೂ ಆಗುತ್ತೇವೆ.

(೫) ಕ್ರಿಯೆ ಮತ್ತು ಪಾತ್ರಗಳು ಉದ್ದೇಶಾನುಸಾರವಾಗಿ ಪರಿಣಾಮವನ್ನು ಉಂಟುಮಾಡಲು ತಕ್ಕಂತೆ ಉನ್ನತವೂ ಘನಗಂಭೀರವೂ ಆಗಿರಬೇಕು. ಹಾಗೆ ಮಾಡಿದರೆ ಮಾತ್ರ ವಿಶ್ವವ್ಯಾಪಿಯಾದ ಸಾರ್ವತ್ರಿಕ ಸಹಾನುಭೂತಿಯನ್ನು ಉಂಟುಮಾಡಲು ಸಾಧ್ಯ.

[ಕ್ರಿಯೋನ್ಮುಖ ಪಾತ್ರವು ಅಂಥ ಅತಿಶಯವಾದ ಬಿರುಬಿನಿಂದ ದಾರ್ಢ್ಯದಿಂದ ಕೂಡಿರದಿದ್ದರೆ, ಮುರಿಯುವ ಬದಲು ಬಗ್ಗುವಂತಿದ್ದರೆ, ನಾಟಕವು ಸುಖಾಂತವಾಗುವುದು ಸಾಧ್ಯ; ಇದಕ್ಕೆ 'ಟ್ರಾಜಿ-ಕಾಮೆಡಿ' ಎನ್ನುತ್ತೇವೆ.]

ಹರ್ಷನಾಟಕ

ಹರ್ಷನಾಟಕವು ವಿವೇಕಶೂನ್ಯತೆ, ನ್ಯೂನಾತಿರೇಕಗಳು ಮತ್ತು ಮಾನವತೆಯ ಸಮಸ್ತ ಲೋಪದೋಷಗಳು—ಇವುಗಳಿಗೆ ಸಂಬಂಧಪಟ್ಟಿದೆ. ಇದರ ಪರಿಣಾಮವು ಮಾತ್ಸರ್ಯ ಅಥವಾ ಪಾಶವೀ ಸಂತೋಷದಿಂದ ದೊರೆಕೊಂಡುದಾಗಿರಬೇಕು. ಮನುಷ್ಯರು ಹಲವುವೇಳೆ ಇತರರ ದುರ್ವಿಧಿಗೆ ಸಂತೋಷಪಡುವರು ಮತ್ತು ಇತರರ ಲೋಪದೋಷಗಳಿಗೆ ಹಿಗ್ಗಿ ಸಂಭ್ರಮಿಸುವರು. ಇಲ್ಲವೆ ನಾವು ಇತರರಿಗಿಂತ ದೊಡ್ಡವರು ಎಂಬ ದೃಷ್ಟಿಯಿರುವುದರಿಂದಲೇ ನಾವು ನಗುವಂತಾಗಬಹುದು. ಹಾಬ್ಸ್ ಹೇಳುವಂತೆ ನಗೆಯು ಭಾವವು ಯಾವುದೆಂದರೆ ಇತರರ ಕೀಳುತನದೊಂದಿಗೆ ನಮ್ಮನ್ನು ಹೋಲಿಸಿಕೊಂಡು ನಮ್ಮೊಳಗೇ ಯಾವುದೋ ದೊಡ್ಡಸ್ತಿಕೆಯನ್ನು ಹಟಾತ್ತನೆ ತಂದುಕೊಂಡುದರಿಂದ ಉಬ್ಬೇಳುವ ವಿಸ್ಮಿತಾನಂದ ಅಥವಾ ತಕ್ಷಣದ ಹೆಮ್ಮೆ ಎನ್ನಬಹುದು. ಮಾತ್ಸರ್ಯ ಅಥವಾ ಇತರರಿಗಿಂತ ತಾವು ಮೇಲೆಂಬ ದೃಷ್ಟಿ ಹೇಗೂ ತಮಗೆ ತಾವೇ ಕೆಟ್ಟವು: ಹರ್ಷನಾಟಕವು ಅಸಂಗತ ಹಾಸ್ಯದ ಶುದ್ಧ ಮುಗ್ಧವಾದ ಅಂಶಗಳ ಮೂಲದಿಂದಲೇ ಜನ್ಯವಾದುದೆಂದು ಹೇಳಬಹುದು. ಅರಿಸ್ಟಾಟಲನು ಸಂಕಟಕರವಾಗಲಿ ಘಾತುಕವಾಗಲಿ ಅಲ್ಲದ ಯಾವುದೋ ಕುಂದು ಇಲ್ಲವೆ ಕುರೂಪತೆಯಿಂದ, ಬದುಕು ಮತ್ತು ವ್ಯಕ್ತಿಯನ್ನು ಒಳಗೊಂಡಿರುವ ಅಸಂಬದ್ಧಗಳು ಮತ್ತು ದೋಷಗಳಿಂದ ಹರ್ಷನಾಟಕವಾಗುತ್ತದೆ; ಮತ್ತು ಕೆಟ್ಟದ್ದನ್ನು ಅದರ ಸಾರಭೂತ ಸ್ಥಿತಿ ಅಥವಾ

ಮೂಲಗುಣದಲ್ಲಿರುವಂತೆ ತೋರಿಸದೆ ದ್ವೇಷಾರೋಪಣೆಗೆ ಬದಲು ನಗೆಗೀಡು ಮಾಡುವಂತೆ ತೋರಿಸುತ್ತದೆ—ಎಂದು ಸೂತ್ರ ಬರೆದಿದ್ದಾನೆ.

ಇದು ವಿಶಿಷ್ಟವರ್ಗದ ಅಥವಾ ವ್ಯಕ್ತಿಗಳಿಗೆ ಸಂಬಂಧಿಸಿದಾಗ ಹರ್ಷ ನಾಟಕವು ವಿಡಂಬನ ನಾಟಕವಾಗಿ ಇಳಿದು ಬಿಡುತ್ತದೆ. ಇದು ತಿರಸ್ಕೃತಿ ಅಥವಾ ದ್ವೇಷಗಳಿಲ್ಲದೆ ಸಹಾನುಭೂತಿ ಭಾವನೆಯಿಂದ ಕೂಡಿದ ವಿಶ್ವ ಸಾಮಾನ್ಯ ಮಾನವ ಧರ್ಮಕ್ಕೆ ಸಂಬಂಧಪಟ್ಟು ವ್ಯವಹರಿಸಿದರೆ ಆಗ ತನ್ನ ಉತ್ತಮೋತ್ತಮ ರೂಪಕಗಳ ಬಗೆಯನ್ನು ಸೃಜಿಸಬಲ್ಲುದು.

ಹರ್ಷನಾಟಕವು ನಗೆಯನ್ನು ;ಹಾಗೂ ಲಗಂಬಗೆಯ ರೀತಿಯನ್ನು ದೃಷ್ಟಿಯಲ್ಲಿಟ್ಟಿರುತ್ತದೆ; ಸ್ವಲ್ಪವಂಟ್ಟಿಗೆ ಕ್ಷುದ್ರವೂ ಅಸುಂದರವೂ ಆದ ವಿಷಯಗಳಿಗೆ ಸಂಬಂಧಿಸಿರುತ್ತದೆ: ಆದಕಾರಣ ಜೀವನದ ಉನ್ನತ ಧ್ಯೇಯಾ ದರ್ಶಗಳಿಗೆ ಸಂಬಂಧಿಸಿದ ರುದ್ರನಾಟಕದಂತೆ ಅದು ಶ್ರೇಷ್ಠ ದರ್ಜೆಯ ಹಾಗೂ ರೋಮಾಂಚನಕಾರಿಯಾದ ಒಂದು ಕಾವ್ಯವಿಧಾನವಲ್ಲ. ಇದರ ಸಾಮಾನ್ಯ ಲಕ್ಷಣಗಳೆಂದರೆ — ತಂಟೆತೊಡಕುಗಳು, ತಪ್ಪು ತಿಳುವಳಿಕೆಗಳು, ಆಕಸ್ಮಿಕ ವಿಸ್ಮಯಗಳು, ಸ್ವಭಾವದ ವಿಶಿಷ್ಟಚರ್ಯೆಗಳು ಮತ್ತು ವಿಲಕ್ಷಣವಾದ ರೀತಿ ನೀತಿಗಳು ಮತ್ತು ಶಬ್ದಪ್ರಯೋಗಗಳು.

ಹರ್ಷನಾಟಕದಲ್ಲಿ ಎರಡು ಬಗೆಯ ವಿಶಿಷ್ಟವರ್ಗದ ನಾಟಕಗಳು ಸೇರಿ ಕೊಂಡಿರುವುದನ್ನು ಮರೆಯಲಾಗದು: ಹಾಸ್ಯಾತ್ಮಕವಾದ ಇಲ್ಲವೆ ಹರ್ಷಾತ್ಮಕ ವಾದ ಉಪಘಟನೆಯೊಂದಿಗೆ ಮಿಶ್ರಿತವಾದ ಸುಖಾಂತವಾದ ರೊಮ್ಯಾಂಟಿಕ್ ಘಟನೆಯುಳ್ಳ ಷೇಕ್ಸ್‌ಪಿಯರನ 'ರೊಮ್ಯಾಂಟಿಕ್ ಕಾಮೆಡಿ.' ನಗೆಗಳು ವರ್ತನೆ ಗಳು ಮತ್ತು ಭಾವನೆಗಳ ಹರ್ಷನಾಟಕ.—ಇದೇ ಯುಕ್ತಾರ್ಥದಲ್ಲಿ ಹರ್ಷ ನಾಟಕ.—ದುರ್ಗುಣಗಳನ್ನು ಅಣಕವಾಡುತ್ತ, ಮಾನವೀಯ ಲೋಪದೋಷ ಗಳನ್ನು ನಗೆಗೀಡು ಮಾಡುವಂಥವು; ಅರಿಸ್ಟೊಫೇನಿಸ್, ಮೋಲಿಯರ್, ಬೆನ್‌ಜಾನ್‌ಸನ್, ಷೆರಿಡಾನ್ ಮತ್ತು ಗೋಲ್ಡ್‌ಸ್ಮಿತರ ನಾಟಕಗಳಲ್ಲಿರುವಂತೆ, ಇಲ್ಲವೆ ಸಮಕಾಲಿಕ ಸಾಮಾಜಿಕ ಮತ್ತು ಸಮಸ್ಯಾತ್ಮಕ ನಾಟಕಗಳು ಇರುವಂತೆ.

೧೯೫೭]

ಮೂಲ: ಬಿ. ಎಂ. ಶ್ರೀಕಂಠಯ್ಯ
[A Hand book of Rhetoric]

ಕರ್ಣಾಟಕದ ಯಕ್ಷಗಾನ

ದಕ್ಷಿಣ ಭಾರತದ ಪ್ರತಿಯೊಂದು ಭಾಷಾಪ್ರಭೇದದಲ್ಲಿಯೂ ಜನಪದ ಗೀತೆಗಳು, ಪದಗಳು ಮತ್ತು ಹಾಡುಗಳು ಕಂಡುಬರುತ್ತವೆ. ಪೂರ್ವಸಂಸ್ಕೃತಿ ಇಲ್ಲಿ ಜ್ವಲಿಸುತ್ತದೆ. ಇವು ಅಚ್ಚದೇಶೀಯವಾಗಿದ್ದು ಸಹಜ ಸುಂದರವಾಗಿ ಬೆಳೆದು ಬಂದಿವೆ. ಸಂಸ್ಕೃತ ಸಾಹಿತ್ಯದ ಪ್ರಭಾವದಿಂದ ಹೊರಟ ಮಾರ್ಗ ವಿಧಾನದಿಂದ ಭಿನ್ನವಾದ ದೇಶೀವಿಧಾನಕ್ಕೆ ಇವು ಸೇರಿವೆ.

ದಕ್ಷಿಣಭಾರತದಲ್ಲಿ ಜನಪ್ರಿಯವಾದ ಒಂದು ಬಗೆಯ ಸಂಪ್ರದಾಯ ಸಂಗೀತಕ್ಕೆ ಯಕ್ಷಗಾನವೆಂಬ ಪದವನ್ನು ಅನ್ವಯಿಸಬಹುದು. ಇದು ವಿಶಾಲಾರ್ಥದಲ್ಲಿ--ಔದ್ಯೋಗಿಕ ಅಭ್ಯಾಸಿಕ ನಟವರ್ಗದಿಂದ ಗ್ರಾಮ್ಯಪ್ರೇಕ್ಷಕರ ಮುಂದೆ ಹಾಡಲು ಸರಿಹೋಗುವಂಥ ನಾಟಕವಿಧಾನವೆನ್ನಬಹುದು. ಒಟ್ಟಿನಲ್ಲಿ ಜನಪದನಾಟಕದ ಪ್ರದರ್ಶನಕ್ಕೆ ಈ ಮಾತನ್ನು ಹೇಳಬಹುದು. ಕೇರಳವೊಂದನ್ನು ಬಿಟ್ಟು ಮೂರು ಭಿನ್ನಭಾಷಾ ಪ್ರದೇಶಗಳಾದ ಕರ್ಣಾಟಕ, ತಮಿಳು, ತೆಲುಗು ದೇಶಗಳಲ್ಲಿ ಒಂದೇ ಹೆಸರಿನಿಂದ ಇದು ಪ್ರಚಲಿತವಿದೆ. ಇನ್ನೂ ಸುಸಂಸ್ಕೃತವೂ ಮೇಲುಮಟ್ಟದ್ದೂ ಆದ 'ಗಂಧರ್ವಗಾನ'ದಿಂದ ಇದು ಭಿನ್ನವಾದುದು. ಇದರ ಚರಿತ್ರೆಯನ್ನು ಕುರಿತು ಮಿ॥ ಇ. ಪಿ. ರೈಸ್ ಅವರು ಹೀಗೆ ಹೇಳಿದ್ದಾರೆ: "೧೮ ನೆಯ ಶತಮಾನದಲ್ಲಿ ಕಾವ್ಯ ಪುರಾಣಗಳಿಂದ ತೆಗೆದ ಕಥೆಗಳನ್ನು ಹೊಸ ಸಾಹಿತ್ಯ ಪ್ರಕಾರದಲ್ಲಿ ನೆಲೆಗೊಳಿಸಿದ ಒಂದು ಗುಂಪಿನ ಕೃತಿಗಳು 'ಯಕ್ಷಗಾನ' ಎಂಬ ಹೆಸರಿನಲ್ಲಿ ಕಾಣಿಸಿಕೊಂಡವು."

ಯಕ್ಷ-ಗಾನ ಎಂಬುದು ಸಮಾಸ ಪದ. ಗಾನ ಎಂದರೆ ಸಂಗೀತ. 'ಯಕ್ಷ' ಎಂಬ ಪದ, ವೇದದಷ್ಟು ಪುರಾತನವಾದರೂ ಅದರ ವ್ಯುತ್ಪತ್ತಿವಿಚಾರ ಇನ್ನೂ ಅನಿರ್ದಿಷ್ಟ. ಡಾ॥ ಎ. ಕುಮಾರಸ್ವಾಮಿಯವರು ಬರೆದಿರುವ "ಯಕ್ಷರು" (ಭಾಗ ೧-೨) ಎಂಬ ಪುಸ್ತಕದಲ್ಲಿ ಬೇಕಾದಷ್ಟು ವಿಷಯವನ್ನು ಅವರು ಸಂಗ್ರಹಿಸಿದ್ದಾರೆ.

ವೇದಗಳಂಥ ಪ್ರಾಚೀನ ಗ್ರಂಥಗಳಲ್ಲಿ, ಬ್ರಾಹ್ಮಣ ಮುಂತಾದವುಗಳಲ್ಲಿ 'ಯಕ್ಷ' ಎಂಬುದು ಸಾಮಾನ್ಯವಾಗಿ, ಸ್ಪಷ್ಟವಾಗಿ ನಿಪಯಸಲಾಗದ "ವಿಸ್ಮಯಾತ್ಮಕ, ಅದ್ಭುತ" ಎಂಬರ್ಥದಲ್ಲಿ ಬಂದಂತೆ ತಿಳಿಯುತ್ತದೆ. ಇತ್ತೀಚೆ ಚರ್ಚೆ ನಡೆದು, ಮಿ॥ ಹಿಲ್‌ಬ್ರಾಂಟ್ ಈ ಪದದ ಅರ್ಥವನ್ನು "ಯಕ್ಷಿಣಿಕಾರ, ವಿಚಿತ್ರವೇಷಧಾರಿ, ಅಗೋಚರನಾದ ಆತ್ಮಶತ್ರು" ಎಂದು ಮುಂತಾಗಿ ಕಲ್ಪಿಸಿದ್ದಾರೆ. ಆಮೇಲೆ ಬರಿಯು "ಘನವಂತನಾದ ಅಪ್ರಾಕೃತ ವ್ಯಕ್ತಿ" ಎಂದು ಕೂಡ ತಿಳಿಯುತ್ತಾರೆ. ಈ ಶಬ್ದಾರ್ಥದ ಮೂಲ ಮತ್ತು ಶಬ್ದ ಎರಡೂ ಅನಾರ್ಯವಾಗಿರಬೇಕೆಂದು ಇನ್ನೊಂದು ವಾದವಿದೆ. ಇದೆಂತಾದರೂ ಪ್ರಾಚೀನಾಧಾರಗಳಲ್ಲಿ ಈ ಪದಕ್ಕೆ ವಿಸ್ಮಯ, ಪವಾಡ, ಅಪ್ರಾಕೃತತೆ, ಅಜ್ಞಾತತೆ, ಮಾಯಾಶಕ್ತಿ, ಅಗೋಚರತೆ, ಆತ್ಮಭಾವ—ಎಲ್ಲ ಭಾವಗಳೂ ಹೆಚ್ಚು ಕಡಿಮೆ ಸೇರಿಕೊಂಡಿವೆ.

ಆ ಕಾರಣ 'ಯಕ್ಷಗಾನ' ಎಂಬ ಸಮಾಸಪದದ ವ್ಯುತ್ಪತ್ತಿಯನ್ನು ಇಲ್ಲಿಯವರೆಗೆ ಯಾರೂ ಸರಿಯಾಗಿ ವಿವರಿಸಲಾಗಿಲ್ಲ. ಸಂಸ್ಕೃತ ವಿದ್ವಾಂಸರು ೧೬ನೆಯ ಶತಕದ ಪೂರ್ವದ ಸಂಸ್ಕೃತ ಸಾಹಿತ್ಯದಲ್ಲಿ ಈ ಪದ ಕಂಡುಬರದೆಂದು ಅಭಿಪ್ರಾಯ ಪಡುತ್ತಾರೆ. ೧೭ನೆಯ ಶತಕಾದಿಯಲ್ಲಿ ಬರೆದ ಶ್ರೀ ಗೋವಿಂದ ದೀಕ್ಷಿತನ 'ಸಂಗೀತ ಮಾನದ ಆ ಸುಧಾ' ಎಂಬ ಕೃತಿಯಲ್ಲಿ ಇದರ ಬಹು ಪೂರ್ವ ಉಲ್ಲೇಖವಿದ್ದಂತೆ ಕಾಣುತ್ತದೆ. ಇದರಲ್ಲಿ "ಶ್ರೀ ರುಕ್ಮಿಣೀ ಕೃಷ್ಣ ವಿಜಯ" ಎಂಬ ಯಕ್ಷಗಾನವನ್ನು ಹೇಳಿದೆ. ಆಂಜನೇಯ ಎಂಬಾತನ ಹೆಸರಿಗೆ ಗುರುತಿಸುವ ಪ್ರಾಚೀನ ವಿಮರ್ಶಕೃತಿಯೊಂದನ್ನು ಹೆಸರಿಸಿದೆ. ಇಲ್ಲಿ ಯಕ್ಷರು ಹಾಡುವ ಸಂಗೀತವಿಧಾನವನ್ನು ಸೇರಿಸಿದೆ. ಕೆಲವು ಜನಪದ ನಾಟಕಗಳನ್ನು ಯಕ್ಷರು ಅಭಿನಯಿಸುತ್ತಿದ್ದರೆಂದು ತೆಲುಗು ಕವಿ ಪಾಲ್ಕುರಿಗೆ ಸೋಮನಾಥನು ಹೆಸರಿಸುತ್ತಾನೆ. ತೆಲುಗು ಕವಿ ಶ್ರೀನಾಥ (೧೩೬೫–೧೪೫೦ ಕ್ರಿ. ಶ.) ತನ್ನ ಕೃತಿ "ಭೀಮಖಾಂಡ"ದಲ್ಲಿ ಯಕ್ಷಗಾನವನ್ನು ತಿಳಿಸುತ್ತಾನೆ. ಮುನ್ನೂರು ವರ್ಷದ ಹಿಂದೆ ಬರೆದ "ಅಪ್ಪಕವೀಯಮು" ಗ್ರಂಥಕರ್ತ ಶ್ರೀ.ಅಪ್ಪಕವಿ ಈ ಪದವನ್ನು ವಿಚಾರಿಸಲು ಯತ್ನಿಸಿದ್ದಾನೆ. ಆದರೆ ಅದು ವಿವರಪೂರ್ಣವಾಗಿಲ್ಲ.

ಯಕ್ಷಗಾನದ ಸಂಪ್ರದಾಯ ಮೂಲವನ್ನು 'ಕಾಮೇಶ್ವರೀ ಪಾಟ' ಎಂಬ ತೆಲುಗು ಕೃತಿಯಲ್ಲಿ ಗುರುತಿಸಲು ಸಾಧ್ಯವಾಗುವಂತೆ ಅಲ್ಲಿಯ ಸಾಕ್ಷ್ಯ ಹೀಗಿದೆ: ಶಿವನು ಅವಶ್ಯವಾದ್ಯ ಸಾಧನಾಸಮೇತರಾದ ಯಕ್ಷರಿಬ್ಬರನ್ನು ಈ ಯಕ್ಷಗಾನಗಳನ್ನು ಹಾಡಿಸಲು ಹಾಗೂ ವಂಶಗತಾನುಸಾರ ಕಾಮಪಲ್ಲಿಯ ಕಾಮವಲ್ಲಿ ದೇವತೆಯನ್ನು ಸೇವಿಸಲು ಕಳಿಸಿಕೊಟ್ಟಂತೆ ತಿಳಿಯುತ್ತದೆ. ಪ್ರಾರಂಭದೆಸೆಯಲ್ಲಿ ಈ ಯಕ್ಷಗಾನ ಪರ್ವಸಮಯಗಳಲ್ಲಿ ದೇವತಾ ಸಮಕ್ಷದಲ್ಲಿ ಹೇಗೆ ಅಭಿನಯಿಸಲ್ಪಡುತ್ತಿತ್ತೆಂದು ತಿಳಿಯಲು ಇದೊಂದು ಸೂಚಕಾಂಶ. ಕನ್ನಡ ದೇಶದಲ್ಲಿ, ಅದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ಯಕ್ಷಗಾನ ಮೇಳವೂ ತಮ್ಮ ಆರಾಧ್ಯ ದೈವದ ಗುಡಿಯಲ್ಲಿ ದೀಪಾವಳಿ ದಿವಸದಲ್ಲಿ ಮೊದಲನೆಯ ಅಭಿನಯವನ್ನು ನಡೆಸುತ್ತದೆ. ಯಕ್ಷಗಾನ ಮೇಳದ ಕೆಲವು ದೇಗುಲಗಳನ್ನು ಮಂದಾರ್ತಿ, ಮಾರನಕಟ್ಟೆ, ಕಟೀಲ್, ಧರ್ಮಸ್ಥಳಗಳಲ್ಲಿ ನೋಡಬಹುದು. ದೀಪಾವಳಿ ದಿವಸ ಇದರ ಮೊದಲನೆಯ ಅಭಿನಯ ನಡೆಸುವ ಕಾರಣವೆಂದರೆ ದೀಪಾವಳಿ ರಾತ್ರಿಯನ್ನು 'ಯಕ್ಷರಾತ್ರಿ' ಎಂದು ಕರೆಯುವುದಾಗಿ ಶ್ರೀ ಮು. ತಿಮ್ಮಪ್ಪಯ್ಯನವರು ತಿಳಿಸುತ್ತಾರೆ. ಯಕ್ಷೇಂದ್ರನಾದ ಕುಬೇರ ತನ್ನ ಸಿರಿಯನ್ನೆಲ್ಲ ಬಲಿಯಿಂದ ಮರಳಿ ಪಡೆದುಕೊಂಡ ಆ ದಿನ, ಅವನ ಸಹಚರರು ಆನಂದೋಲ್ಲಾಸದಿಂದ ಗೀತನರ್ತನದಲ್ಲಿ ಕಾಲ ಕಳೆಯುತ್ತಾರೆ. ಬಹುಶಃ ಈ ಕಾರಣದಿಂದಲೇ ಈ ಗೀತೆ ಯಕ್ಷಗಾನವೆನಿಸಿ, ನಾಟಕ "ಯಕ್ಷಗಾನ ಆಟ"ವಾಗಿರಬೇಕು. ಇದರಿಂದ ಯಕ್ಷಗಾನ ಯಕ್ಷರ ಅಥವಾ ಯಕ್ಷರಿಗಾಗಿ ಬರೆದ ಒಂದು ಗೀತ ವಿಧಾನ. ಈ ಊಹೆಯನ್ನು ಸಮರ್ಥಿಸುವ ಸಂಪ್ರದಾಯದ ಕಥೆಯೊಂದುಂಟು. ಇಂದ್ರಸಭೆಯಲ್ಲಿ ಗಂಧರ್ವರು ಹಾಡಿ ಆಡುವುದು, ಯಕ್ಷರೆಲ್ಲರೂ ಅವರನ್ನು ಅನುಸರಿಸುವುದು ನಡೆಯುತ್ತಿತ್ತು. ಒಮ್ಮೆ ಯಕ್ಷರೆಲ್ಲ ಸೇರಿ ಅಸುರಗುರು ಶುಕ್ರಾಚಾರ್ಯರನ್ನು ಕಂಡು ಈ ವಿಶಿಷ್ಟ ಬಗೆಯ ಗೀತನಾಟಕಗಳನ್ನು ಕಲಿತುಕೊಂಡರು. ಆ ಕಾರಣ ಇದು ಯಕ್ಷಗಾನವೆನಿಸಿತು. ಪಾಶ್ಚಾತ್ಯ ವಿದ್ವಾಂಸರಿರ್ವರು—ಮಿ॥ ಉಡ್‌ವಿಗ್, ಮಿ॥ ಗೆಲ್ಡ್ನರ್ 'ಯಕ್ಷ' ಎಂಬ ಪದಕ್ಕೆ "ಪರ್ವಸಂತೋಷ" ಎಂದು ಅರ್ಥ ಹೇಳುತ್ತಾರೆ. ಇದನ್ನೊಪ್ಪಿದರೆ ಇದರರ್ಥ "ಹಬ್ಬದ ವೇಳೆ ಹಾಡಲರ್ಹವಾದ ಒಂದು ಗೀತವಿಧಾನ" ಎನ್ನಬಹುದು,

ಯಕ್ಷಗಾನ ರಚನೆ ಕ್ರಿ. ಶ. ಒಂಬತ್ತನೆಯ ಶತಕದಷ್ಟು ಪೂರ್ವದಲ್ಲಿಯೇ ಇದ್ದಂತೆ ಕನ್ನಡ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನೃಪತುಂಗನ 'ಕವಿರಾಜಮಾರ್ಗ' (೮೧೪–೮೭೭)ದಲ್ಲಿ ಹೇಳಿರುವ ಚತ್ತಾಣ, ನಾಟ್ಯಗರಣ ಮುಂತಾದವು ಯಕ್ಷಗಾನ ಕೃತಿಗಳಲ್ಲದೆ ಬೇರಲ್ಲವೆಂದು ಊಹಿಸುತ್ತಾರೆ. ಈ ತೆರನಾದ ರಚನೆಯ ಯಾವೊಂದು ಕೃತಿಯೂ ನಮಗೆ ಉಪಲಬ್ಧವಿಲ್ಲದ ಕಾರಣ ಇದರ ಸಮರ್ಥನೆ ಸಾಧ್ಯವಿಲ್ಲ. ಶ್ರೀ ಎಂ. ಗೋವಿಂದ ಪೈ— 'ಕುಮಾರವ್ಯಾಸ ಭಾರತ'ದಲ್ಲಿ ಹೇಳಿರುವ "ನಾಡಾಡಿಗಳ ನಾಟಕ" ಯಕ್ಷಗಾನ ಆಟವಲ್ಲದೆ ಬೇರೆಯಲ್ಲವೆಂದು ಹೇಳುತ್ತಾರೆ. ಪದಿನೈದರ ಶತಕದ ಪೂರ್ವಾರ್ಧದ ಆದಿಭಾಗದಲ್ಲಿ ಈ ಕವಿಯಿದ್ದನು. ನಾನೋದಿರುವ ಸಾಕಷ್ಟು ಯಕ್ಷಗಾನ ಕೃತಿಗಳಲ್ಲಿ ಹದಿನೇಳರ ಶತಕದ ಅಂತ್ಯಭಾಗಕ್ಕೆ ಹಿಂದಿನ ಕೃತಿಗಳು ಕಂಡುಬಂದಿಲ್ಲ.

ಯಕ್ಷಗಾನ ನಾಟಕವನ್ನು ಬಯಲಲ್ಲಾಡುವ ಕಾರಣ "ಬಯಲಾಟ" ವೆನ್ನುತ್ತಾರೆ. ವಿಷ್ಣು ದಶಾವತಾರದ ಕಥಾಮೂಲವಿರುವ ಕಾರಣ 'ದಶಾವತಾರದ ಆಟ' ಎನ್ನುತ್ತಾರೆ. ಮೆಕಿಂಜೆ ಸಂಗ್ರಹದ ಬೇತಳ್ಳಿ ಕೈಫಿಯತ್‌ನಲ್ಲಿ 'ದಶಾವತಾರ ನಾಟಕ' ವೊಂದರ ಉಲ್ಲೇಖವಿದೆ. ಸೋದೆ ನಾಯಕ ರಾಮಚಂದ್ರನ ಆಳ್ವಿಕೆಯಲ್ಲಿ ದೇವೀಕೆರೆಗೆ ದಕ್ಷಿಣದಲ್ಲಿ ಚೆನ್ನಪಟ್ಟಣದ ಕೋಟೆ ಕಟ್ಟಿತು. ಕೆಳದಿ ಚೆನ್ನಮ್ಮಾಜಿಯ ಮಗ ಬಿದರೂರು ನಾಯಕ ವೀರಭದ್ರನು ಈ ಕೋಟೆಯನ್ನು ಮುತ್ತಿದಾಗ ಸೋದೆ ನಾಯಕ ಕುಕ್ಕಳ್ಳಿಗೆ ಓಡಿಹೋದನು. ಅಲ್ಲಿಂದ ಇವನ ತಮ್ಮ ಸದಾಶಿವನಾಯಕ ವಿಜಯಪುರಕ್ಕೆ ಹೊರಟು ದಶಾವತಾರ ನಾಟಕಾಭಿನಯ ವನ್ನೇರ್ಪಡಿಸಿ ಅಲ್ಲಿಯ ಬಾದಶಹನನ್ನು ಮೆಚ್ಚಿಸಿದನು. ಸಂತುಷ್ಟನಾದ ಬಾದಶಹ ನಾಯಕನ ಶತ್ರುಗಳನ್ನೋಡಿಸಲು ಅವನಿಗೆ ನೆರವಾದನು. ಸೋದೆ ಸದಾಶಿವನಾಯಕನು ಒಬ್ಬ ದೊಡ್ಡ ಗ್ರಂಥಕರ್ತನಾಗಿದ್ದಂತೆ ಕಾಣುತ್ತದೆ. ಹಾಲಾಸ್ಯಪುರಾಣದ ಕರ್ತೃ ಇಮ್ಮಡಿ ಮುರಿಗೆಯ ಸ್ವಾಮಿ (ಕ್ರಿ.ಶ. ೧೭೨೦) ಇವನನ್ನು ತನ್ನ ಕೃತಿಯಲ್ಲಿ ತುಂಬ ಗೌರವಿಸಿರುವುದಲ್ಲದೆ ಅವನು ಬರೆದೊಂದು ಕೃತಿಯನ್ನೂ ಉಲ್ಲೇಖಿಸುತ್ತಾನೆ. ಆದ್ದರಿಂದ ಕ್ರಿ.ಶ. ೧೭೨೦ ಕ್ಕಿಂತ ಹಿಂದೆ

ವಿಂದರೆ ೧೭ನೇ ಶತಕದ ಉತ್ತರಾರ್ಧದಲ್ಲಿ ಇವನು ಜೀವಿಸಿರಬೇಕೆಂದು ತಿಳಿಯಬಹುದು.

ನಾನೋದಿರುವ ಸುಮಾರು ೬೫ ಯಕ್ಷಗಾನ ಕವಿಗಳಲ್ಲಿ ಯಾರೂ ೧೭ನೇ ಶತಕದ ಅಂತ್ಯಭಾಗಕ್ಕೆ ಪೂರ್ವದಲ್ಲಿ ಇದ್ದಂತೆ ಕಂಡುಬರದು. ಯಕ್ಷಗಾನದ ಪ್ರಸಿದ್ಧ ಕವಿಯೊಬ್ಬ–ಪಾರ್ತಿಸುಬ್ಬ ಎಂಬ ಹೆಸರಿನವನು–ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಸುಮಾರಿಗೆ ಜೀವಿಸಿದ್ದು ಯಕ್ಷಗಾನ ಪ್ರದರ್ಶನದ ಸ್ವರೂಪಕ್ಕೆ ಕಾರಣವಾದ ಅನೇಕ ಸಂಸ್ಕಾರ ಸುಧಾರಣೆಗಳನ್ನು ಮಾಡಿದಂತೆ ತಿಳಿಯುತ್ತದೆ. ರಾಮಾಯಣದಿಂದ ವಸ್ತುಗಳನ್ನಾಯ್ದು ಅನೇಕ ಯಕ್ಷಗಾನಗಳನ್ನು ಈತ ಬರೆದನು. ಅವುಗಳಲ್ಲಿ "ಪಂಚವಟಿ", "ಚೂಡಾಮಣಿ", "ಅಂಗದ ಸಂಧಾನ" ಶ್ರೇಷ್ಠವಾದವು. ಇಬ್ಬರು ಬೇರೆ ಕವಿಗಳು 'ಪಂಚವಟಿ'ಯನ್ನು ತುಳುಭಾಷೆಗೆ ಭಾಷಾಂತರಿಸಿರುವುದರಿಂದ ಅದು ಎಷ್ಟು ಜನಪ್ರಿಯವಾದುದೆಂದು ತಿಳಿಯುತ್ತದೆ.

ಪಾರ್ತಿಸುಬ್ಬನ ಕಾಲಾನಂತರ ಪ್ರಸಿದ್ಧ ಯಕ್ಷಗಾನ ಕವಿಗಳೆಂದರೆ ಗೇರುಸೊಪ್ಪೆ ಶಾಂತಯ್ಯ, ಮುಲ್ಕಿ ವೆಂಕಣ್ಣ, ವಾಸುದೇವಪ್ರಭು, ನಂದಳಿಕೆ ಲಕ್ಷ್ಮೀನಾರಣಪ್ಪ. ವಿಶ್ರಾಂತ ನ್ಯಾಯಾಧಿಪತಿಯಾಗಿದ್ದ ಗೇರುಸೊಪ್ಪೆ ಶಾಂತಯ್ಯ ತನ್ನ ಕೈಕೆಳಗೆ ಒಬ್ಬ ಭಾಗವತ, ನಟ ಮತ್ತು ಲಿಪಿಕಾರನನ್ನು ಸಹಾಯಕ್ಕೆ ಇರಿಸಿಕೊಂಡಿದ್ದನೆಂಬುದು ಗಮನಾರ್ಹವಾಗಿದೆ. ಯಕ್ಷಗಾನ ನಾಟಕ ಕಲೆಯ ಬೆಳವಣಿಗೆ ಮತ್ತು ಉನ್ನತಿಗೆ ತನ್ನ ಆದಾಯದ ಬಹು ಪಾಲನ್ನು ವೆಚ್ಚ ಮಾಡುತ್ತಿದ್ದನು. ಸ್ವಂತ ಖರ್ಚಿನಲ್ಲಿಯೇ ನಟರಿಗೆ ಆವಶ್ಯಕ ಉಡುಪುತೊಡುಪುಗಳನ್ನು ಮಾಡಿಕೊಡುತ್ತಿದ್ದನು. ಅವನ ಶ್ರೇಷ್ಠಕೃತಿ ಕರ್ಣಪರ್ವ. ಕರ್ಣನ ರಥ ಕೆಸರಿನಲ್ಲಿ ಹೂತ ಸನ್ನಿವೇಶ ಪ್ರೇಕ್ಷಕರಲ್ಲಿ ಕಂಬನಿಯುಮಿಕ್ಕಿಸುವನಿತು ಕರುಣಾಜನಕವಾಗಿದೆ. ಮುಲ್ಕಿ ವೆಂಕಣ್ಣನ ಕೃಷ್ಣ ಸಂಧಾನ ರಾಜನೀತಿಯ ಸಾರ. ಮಟ್ಟಿ ವಾಸುದೇವ ಪ್ರಭುವಿನ ಬಿಲ್ಲಹಬ್ಬ, ಸಮುದ್ರ ಮಥನ, ಚಂದ್ರಹಾಸ, ರಾಧಾವಿಲಾಸಗಳು ಶೃಂಗಾರ ವೀರ ಹಾಸ್ಯ ರಸಪೂರ್ಣಗಳಾಗಿವೆ. ನಂದಳಿಕೆಯವರ ಕುಮಾರವಿಜಯ, ರತ್ನಾವತೀ ಕಲ್ಯಾಣ ಮೇಲ್ಪಟ್ಟದ ನಾಟಕಗಳು.

ಸಾಮಾನ್ಯ ಜನರೇ ಅಲ್ಲದೆ ದೊರೆಗಳು, ನಾಯಕರು ಯಕ್ಷಗಾನ ಪ್ರದರ್ಶನಗಳಲ್ಲಿ ಆಸಕ್ತವಹಿಸಿದ್ದರು. ಈ ರಂಗನಟನಕಲೆಯನ್ನು ಪ್ರೋತ್ಸಾಹಿಸಿದ ರಾಜವಂಶಗಳಲ್ಲಿ ಸೋದೆನಾಯಕರು, ಕೆಳದಿಯವರು. ಮೈಸೂರಿನವರು ಪ್ರಸಿದ್ಧರು. ೧೮೧೨ರಲ್ಲಿ ಧರ್ಮಸ್ಥಳದ ಕುಮಾರ ಹೆಗ್ಗಡೆಯವರು ಯಕ್ಷಗಾನ ನಟರ ಮೇಳವೊಂದನ್ನು ಮುಮ್ಮಡಿ ಕೃಷ್ಣ ಭೂಪಾಲನಲ್ಲಿಗೆ ಕಳಿಸಿಕೊಟ್ಟಂತೆ ತಿಳಿಯುತ್ತದೆ. ಯಕ್ಷಗಾನ ನಾಟಕ ಚರಿತ್ರೆಯಲ್ಲಿ ಇದು ಉತ್ಕರ್ಷದ ಕಾಲ.

ಕರ್ಣಾಟಕದ ಯಕ್ಷಗಾನ, ಕೇರಳದ ಕಥಕ್ಕಳಿ, ತೆಲುಗು ದೇಶದ ವೀಥಿನಾಟಕ ಒಂದೇ ಬಗೆಯ ಜನಪದ ನಾಟಕಪಡಿಯಲ್ಲಿ, ಸ್ವಲ್ಪ ವ್ಯತ್ಯಾಸಗಳಿದ್ದರೂ ಸೇರುವಂಥವು. ಕಥಕ್ಕಳಿಯಲ್ಲಿ ನಟರು ಗೀತೆಗಳನ್ನು ಹಾಡುವುದಿಲ್ಲ. ಅಭಿನಯದ ಮೂಲಕ ಗೀತಾರ್ಥವನ್ನು ವಿವರಿಸುತ್ತಾರೆ. ಯಕ್ಷಗಾನದಲ್ಲಿ ನಡುನಡುವೆ ಗೀತವನ್ನು ಹಾಡುತ್ತಾರೆ. ಗೀತಾರ್ಥವನ್ನು ಯಾವಾಗಲೂ ಮಾತಿನಲ್ಲಿ ವಿವರಿಸುತ್ತಾರೆ ಯಕ್ಷಗಾನದಲ್ಲಿ ಅಭಿನಯವೇಕೆ ಕಡಿಮೆಯೆಂಬುದಕ್ಕೆ ಇದೊಂದು ಕಾರಣವಿರಬಹುದು. ನಟರು ಮಾತು ನಿಲ್ಲಿಸಿದಾಗ ಭಾಗವತ ಹಾಡುತ್ತಾನೆ, ಇಲ್ಲವೆ ಭಾಗವತಾನುಚರನಾದ ಸಂಗೀತಗಾರ ಶ್ರುತಿ, ತಾಳ, ಮದ್ದಳೆ, ಚಂಡೆಗಳನ್ನು ಬಾಜಿಸಿ ಹಾಡುತ್ತಾನೆ. ಹಾಡುವಾಗ ನಟರು ಅಭಿನಯಿಸಿ ಕುಣಿಯುತ್ತಾರೆ. ಹಾರುಹೆಜ್ಜೆಗಳನ್ನು ಹಾಕುವಲ್ಲಿ ನಟರು ಶಾರೀರಕ ಚಲನ ಕೌಶಲವನ್ನು ಮೆರೆಯುತ್ತಾರೆ. ಕೆಲವೊಮ್ಮೆ ಇಬ್ಬರು ಮೂವರು ನಟರು ರಂಗದ ಮೇಲೆ ಒಂದು ಸುಂದರ ಸಮಂಜಸತೆಯಿಂದ ಕುಣಿಯುತ್ತಾರೆ. ಕೆಲವು ಪಾತ್ರಗಳು ರಂಗಕ್ಕೆ ಬರುವಾಗ ಪೂರ್ತಿಯಾಗಿ ಕುಣಿಯುತ್ತಲೇ ಬರುವುದನ್ನು ಇಂದಿಗೂ ನೋಡಬಹುದು.

ಬಹುಶಃ ಯಕ್ಷಗಾನ ನಾಟಕದ ಅತ್ಯುತ್ತಮವಾದ ಭಾಗವೆಂದರೆ ಪಾತ್ರಗಳ ಪ್ರಸಾಧನ ಮತ್ತು ಅಲಂಕರಣ. ಬೇರೆ ಬೇರೆ ಪಾತ್ರಗಳಿಗೆ ತಲೆದೊಡವು ಬೇರೆ ಬೇರೆ. ಅವಕ್ಕೆ ಬೇರೆ ಬೇರೆ ಹೆಸರುಗಳು. ರಾಕ್ಷಸ ಪಾತ್ರಗಳಿಗೆ "ಬಟ್ಟಲು ಕಿರೀಟ"; ರಾಮ ಲಕ್ಷ್ಮಣ ದುರ್ಯೋಧನ ಧರ್ಮರಾಯರಂಥ ಪಾತ್ರಗಳಿಗೆ "ಪ್ರಂಬೆ ಕಿರೀಟ"; ಕೃಷ್ಣ ಅರ್ಜುನ ಕರ್ಣ ಅಭಿಮನ್ಯು ವಿನಂಥ ಪಾತ್ರಗಳಿಗೆ "ಶ್ರೀಮುಡಿ". ಈ ಪಾತ್ರಗಳು ತೊಡುವ ತೊಡಿಗೆಗಳು

ಕರ್ಣಪತ್ರ, ಕೊರಳಹಾರ, ಭುಜಕೀರ್ತಿ, ವಡೆಗಟ್ಟು, ವಸ್ತ್ರಕಡಗ ಮುಂತಾದು ವನ್ನು ಹೇಳಬಹುದು. ಕೆಲವು ಸಂಪ್ರದಾಯಾನುಸಾರ ನಟರು ತಮ್ಮ ಮುಖ ಗಳಿಗೆ ಬೇರೆ ಬೇರೆ ಬಣ್ಣಗಳನ್ನು ಬಳಿದುಕೊಳ್ಳುತ್ತಾರೆ. ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಪಾತ್ರಗಳು ರಂಗಪ್ರವೇಶಮಾಡುತ್ತವೆ. ಮೊದಲು ರಂಗವೇರುವ ಪಾತ್ರಗಳು "ಪೀಠಿಕಾವೇಷ" ಅಥವಾ "ಮೊದಲನೆಯ ವೇಷ" ಎನಿಸುತ್ತವೆ. ಅಭಿಮನ್ಯು, ಬಭ್ರುವಾಹನ, ಲವಕುಶರಂಥ ಬಾಲಪಾತ್ರಗಳು "ಪುಂಡುವೇಷ"ವೆನಿಸುತ್ತವೆ. ರಾಕ್ಷಸ ಪಾತ್ರಗಳು "ಬಣ್ಣದ ವೇಷ"ವೆನಿಸುತ್ತವೆ. ಅನಂತರ ಕಿರಾತರು, ಕಪಿಗಳು, ಋಷಿಗಳು, ಹೆಣ್ಣುಪಾತ್ರಗಳು ಕೂಡ ಬರುತ್ತವೆ. ಹನುಮನಾಯಕನೆಂಬ ಹಾಸ್ಯಪಾತ್ರ ಆಟದ ಮೊದಲು ಆಟದ ಕೊನೆಯವರೆಗೆ ಕಾಣಿಸಿಕೊಳ್ಳುತ್ತದೆ. ತನ್ನ ಉಲ್ಲಾಸಕರವಾದ ಲಾವಣಿ ಪದ್ಯಗಳಿಂದ, ತಮಾಷೆ ಮಾತುಗಳಿಂದ ಪ್ರೇಕ್ಷಕರನ್ನೊಲಿಸುವುದು ಇವನ ಕೆಲಸ. ಎಲ್ಲ ಯಕ್ಷಗಾನಗಳಲ್ಲಿಯೂ ಸಾಮಾನ್ಯವಾಗಿ ಒಂದೆರಡು ರಾಕ್ಷಸ ಪಾತ್ರಗಳು ಕಾಣಿಸಿಕೊಳ್ಳುತ್ತವೆ. ರಾಕ್ಷಸರು ರಂಗಪ್ರವೇಶಮಾಡುವಾಗ, ಅವರ ಅಬ್ಬರ ಉಬ್ಬಟೆಗಳಿಗೆ ಪ್ರೇಕ್ಷಕರು ವಿಸ್ಮಯ ಭಯಾಕ್ರಾಂತರಾಗುತ್ತಾರೆ.

ಯಕ್ಷಗಾನ ಪ್ರದರ್ಶನ ನೇಸರುಬೀಳುವ ಕಾಲಕ್ಕೆ ತೊಡಗಿ ಇರುಳೆಲ್ಲ ನಡೆಯುತ್ತದೆ. ಚಂಡೆಮದ್ದಳೆಯು ಹೊಡೆತ ಆರಂಭವನ್ನು ಸಾರುತ್ತದೆ. ಇದನ್ನು 'ಅಬ್ಬರತಾಳ' ಎನ್ನುತ್ತಾರೆ. 'ಸಭಾಲಕ್ಷಣ'ವೆಂಬ ನಾಂದೀಪದ್ಯದ ಹಾಡಿಕೆ ಮುಗಿದು ಕೋಡಂಗಿ ಕುಣಿತ, ಬಾಲಗೋಪಾಲರ ಕುಣಿತ, ಒಂದು ಜತೆ ಹೆಣ್ಣುಪಾತ್ರಗಳ ಕುಣಿತ ನಡೆದಿರುತ್ತವೆ. ಇವೆಲ್ಲ ಇರುಳು ಒಂಬತ್ತರ ವೇಳೆಗೆ ಮುಗಿದು ನಿಜನಾಟಕ ಕೆಲಪಾತ್ರಗಳ ರಂಗಪ್ರವೇಶದ ಮೂಲಕ ತೊಡಗುತ್ತದೆ. ಇದಕ್ಕೆ 'ಒಡ್ಡೋಲಗ'ವೆನ್ನುತ್ತಾರೆ. ಇದು ಕಥಕ್ಕಳಿಯ "ಪುರಪ್ಪಾಡು"ವಿಗೆ ಸದೃಶವಾಗಿದೆ. ಆಮೇಲೆ ನೇಸರೇಳುವವರೆಗೆ ಆಟ ಬೆಳೆಯುತ್ತದೆ.

ಈ ಪ್ರದರ್ಶನಗಳಲ್ಲಿ ಹಳ್ಳಿಗರು ತುಂಬ ಸಂಭ್ರಮೋತ್ಸಾಹದಿಂದ ಇರುಳೆಲ್ಲ ಕಣ್ಣೆವೆ ತೆರೆದು ಕುಳಿತು ನೋಡುತ್ತಾರೆ. ಇದು ಅವರಿಗೆ ಒಂದು ರೀತಿ ಸಂತೋಷಸಾಧನೆ ಮಾತ್ರವಲ್ಲದೆ ಸರಳ ವಿದ್ಯಾಭ್ಯಾಸದ ನಿಜವಿಧಾನ

ವಾಗಿದೆ. ಋಷಿಗಳ ಜ್ಞಾನಸಾರವನ್ನು ಮುಗ್ಧರಿಗೆ ಬೋಧಿಸುತ್ತದೆ. ಈ ನಾಟಕಗಳು ಸುಂದರ ಸತ್ಯಗಳನ್ನು, ಶ್ರೇಷ್ಠ ನೀತಿಬೋಧೆಗಳನ್ನು ಒಳಕೊಂಡಿವೆ. ಹಲಬಗೆಯ ವ್ಯವಹಾರದರಿವನ್ನು ತುಂಬ ಪರಿಣಾಮಕಾರಿಯಾಗಿ ಇವು ಸಾಧಿಸುತ್ತವೆ. ಯಕ್ಷಗಾನದ ಭಾಷೆ ಸರಳವಾದರೂ ಘನವಾದ್ದು. ಹಾಡುಗಳು ಬೇಕಾದ ರಸಗಳನ್ನು ನೋಟಕರಲ್ಲಿ ತರತಕ್ಕವು. ಈ ನಾಟಕಗಳಿಂದಾಯ್ದ ಸೂತ್ರವಾಕ್ಯಗಳನ್ನು ಗ್ರಾಮೀಣರು ಆಗಾಗ್ಗೆ ತೆಗೆದು ಬಳಸುತ್ತಾರೆ. ಒಂದೆರಡನ್ನು ಇಲ್ಲಿ ನೋಡಬಹುದು : ದಾರಿತಪ್ಪಿದ ಗಂಡನಿಗೆ ಪತಿವ್ರತೆಯ ಎಚ್ಚರ—"ನಮ್ಮ ಸಂಸಾರ ಪೂರ್ತಿ ಕೆಡುವ ಕಾಲ ಬಂದಿದೆ ; ಈ ನೆಲದಲ್ಲಿನ್ನು ಬಾಳುವಾಸೆ ಹೋಯಿತು." "ಪಂಚವಟಿ"ಯಲ್ಲಿ ಒಂದೆಡೆ ಮಂಡೋದರಿ ರಾವಣನನ್ನು ಕುರಿತು ಲಂಕೆಗೆ ಸೀತೆಯನ್ನು ತರುವುದು ಬೇಡ ಎಂದ ಮಾತು ಬರುತ್ತದೆ. "ಸಂಸಾರ ಸಾಗರವನ್ನು ಈಸಲೆಳಸುವವರು, ಮೋಕ್ಷಮಾರ್ಗವನ್ನು ಸಾಧಿಸಬಯಸುವವರು ನನ್ನೊಡನೆ ಬರಲಿ"—ಎಂಬ ಸೂಕ್ತಿ 'ಅತಿಕಾಯ ಕಾಳಗ'ದಲ್ಲಿ ಬರುತ್ತದೆ. ಹಳ್ಳಿಗರಲ್ಲಿ ಇವುಗಳ ಬಳಕೆ ವಿಶೇಷ.

ಹಳ್ಳಿಗಳಲ್ಲಿ ಹರಡಿಕೊಂಡಿರುವ ಜನಪದ ನಾಟಕ ಕಲೆ ಈ ಯಕ್ಷಗಾನ. ಇದು ಅನಕ್ಷರಸ್ಥ ಕಲಾವಿದರ ಕೃಷಿಯ ಫಲ. ಜನರಲ್ಲಿ ಇದು ಅರಿವುಗಳನ್ನು ತುಂಬುತ್ತದೆ. ಇದನ್ನು ಉಳಿಸಿ ಬೆಳಸಿಕೊಂಡು ಬರಬೇಕು.

[೧೯೫೪]

[ಮದರಾಸು ವಿಶ್ವವಿದ್ಯಾನಿಲಯದ "*Annals of Oriental Research*" ಪತ್ರಿಕೆಯಲ್ಲಿ (ಸಂ X. ಭಾಗ II) ಎಂ. ಗೋವಿಂದರಾವ್, ಎಂ.ಎ., ಬಿ.ಒ.ಎಲ್ ಅವರು ಬರೆದ ಲೇಖನ.]

ತೆಲುಗು ಜಾನಪದ ಸಾಹಿತ್ಯ

೧. ಉದ್ಗಮ

ತೆಲುಗು ದೇಶದಲ್ಲಿ ನನ್ನಯನವರೆಗೂ ಸಂಸ್ಕೃತದಲ್ಲಿಯೇ ಕಾವ್ಯರಚನೆ, ವ್ಯಾಖ್ಯಾನಗಳು ನಡೆದವು. ನನ್ನಯನ ತರುವಾಯ ಆಂಧ್ರವಾಙ್ಮಯ ಸಾಹಿತ್ಯ ಸಂಪನ್ನವಾಯಿತು. ಆ ಕಾಲದ ಸಾಹಿತ್ಯದಲ್ಲಿ ಸಂಸ್ಕೃತ ಧಾರಾಳವಾಗಿ ಪ್ರವೇಶಮಾಡಿ ತೆಲುಗಿನಲ್ಲಿ ಮಾರ್ಗ ಕವಿತ್ವವನ್ನು ಸೃಷ್ಟಿಸಿದೆ. ನನ್ನಯನಿಗೆ ಪೂರ್ವದಲ್ಲಿ ತರುವೋಜಗಳನ್ನೂ, ಮಧ್ಯಾಕ್ಕರಗಳನ್ನೂ, ರಗಡಗಳನ್ನೂ, ಕವಿಗಳು ರಚಿಸುತ್ತಿದ್ದರು. ಸೀಸಪದ್ಯಕ್ಕೆ ಮುಡಿ ಛಂದಸ್ಸೆನಿಸುವ ರೀತಿಯಲ್ಲಿ ಹಾಡುಗಳಿವೆ. ಕಾವ್ಯರಚನೆ ಮಾಡಿದರೋ ಇಲ್ಲವೋ, ಆ ಕಾಲದ ಕವಿಗಳು ದೇವಾಲಯಗಳಲ್ಲಿ ಸ್ತುತಿ ಪದ್ಯಗಳನ್ನು ಹಾಡುತ್ತಿದ್ದರೆಂದು ಮುಖಲಿಂಗದಲ್ಲಿನ "ಸುಕವೀಂದ್ರ ಸ್ತುತ್ಯ ನಿತ್ಯೋದಯಃ" ಎಂಬ ಶಾಸನಭಾಗದಿಂದ ತಿಳಿಯುತ್ತದೆ. ನನ್ನೆಚೋಡನ ಕಾಲದ ವೇಳೆಗೆ (ಕ್ರಿ. ಶ. ೧೧೫೦) ಉಯ್ಯಾಲೆ ಹಾಡುಗಳೂ, ಗೌಡ ಗೀತೆಗಳೂ ಇದ್ದುವೆಂದು ಆತನ ಸಾಕ್ಷ್ಯದಿಂದಲೇ ತಿಳಿಯುತ್ತದೆ. ಪಾಲ್ಕುರಿಕೆ ಸೋಮನಾಥನು ತನ್ನ ಕಾಲದಲ್ಲಿ (ಕ್ರಿ.ಶ. ೧೩೦೦) ತುಂಬಿಪದಗಳು, ಶಂಕರಪದಗಳು, ನಿವಾಳಿಹಾಡುಗಳು, ವಾಲೇಶುಪದಗಳು, ಬೆಳುದಿಂಗಳ ಹಾಡುಗಳು—ಇದ್ದಂತೆ ಪಂಡಿತಾರಾಧ್ಯ ಚರಿತ್ರೆಯಲ್ಲಿ ತಿಳಿಸಿದ್ದಾನೆ. ಈ ಹೊತ್ತು 'ತುಂಬಿ' 'ಬೆಳುದಿಂಗಳು'—ಎಂಬ ಪಾದಾಂತಪದಗಳಿಂದ ಕೇಳಿಬರುವ ಹಾಡುಗಳ ನಮೂನೆಗಳು ಸೋಮನಾಥನ ಕಾಲಕ್ಕೇ ಇದ್ದಂಥವು. ಶಂಕರಪದಗಳು ಈಶ್ವರನನ್ನು ಕುರಿತವಿರಬೇಕು. ನಿವಾಳಿಪದಗಳೂ, ಆರತಿ ಹಾಡುಗಳೂ, ಒನಕೆಪಾಡುಗಳೂ, ಜಾಜರ ಹಾಡುಗಳೂ ಅತಿ ಸಾಮಾನ್ಯವಾದವುಗಳು. ಸಾಂಗಕ್ರಿಯಾಂಗ ಭಾಷಾಂಗ ನಾಟಕಗಳು ಆ ದಿವಸಗಳಲ್ಲಿ ತೀರ್ಥಯಾತ್ರೆಮಾಡುವ ಭಕ್ತರ ವಿನೋದಾರ್ಥವಾಗಿ ಆಡುವಂಥವಂತೆ ; ಇವು ಇವತ್ತಿಗೂ ನಿಂತಿವೆ. ಇವುಗಳೆಲ್ಲ ಪಂಡಿತ ಪಾಮರರಿಬ್ಬರಿಗೂ ವಿನೋದಾರ್ಥವೂ ಪ್ರಬೋಧಾರ್ಥವೂ ಆಗಿವೆ.

೨. ಸ್ತ್ರೀಯರ ವ್ರತಕಥೆಗಳು, ಕಥಾಗೀತೆಗಳು, ಹಾಡುಗಳು

ನಮ್ಮ ಸ್ತ್ರೀಯರ ವ್ರತಗಳಲ್ಲಿ ನೂರಕ್ಕೆ ತೊಂಬತ್ತು ಗೌರೀವ್ರತಗಳೇ. ಮತವ್ಯಾಪನೆಯನ್ನು ಜಾನುತೆಲುಗು ರಚನೆಗಳಿಂದ ನಡೆಸಿದ ವೀರಶೈವರು ಈ ವ್ರತಕಥೆಗಳನ್ನು ಕೂಡ ಜಾನುತೆಲುಗು ದ್ವಿಪದಗಳಲ್ಲಿಯೂ, ಆ ಕಾಲದ ಹಾಡಿನ ವರಸೆಗಳಲ್ಲಿಯೂ ರಚಿಸಿ ಪ್ರಚಾರಮಾಡಿದ್ದಾರೆ. ಇಂಥವೇ ಇತರ ಕಥೆಗಳನ್ನು ಕೂಡ ದ್ವಿಪದ, ಸೀಸಪದಗಳಂತೆ ಸಾಗುವ ವರಸೆಗಳಲ್ಲಿ ರಚಿಸುವುದು ಪ್ರಾರಂಭವಾಗಿ "ಸ್ತ್ರೀಯರ ಹಾಡುಗಳು" ಎಂಬ ದೇಶೀ ಸಾಹಿತ್ಯಶಾಖೆಗೆ ಕಾರಣವಾಯಿತು. ಮಾರ್ಗಕವಿತ್ವದಲ್ಲಿ ಭಾರತ ಭಾಗವತ ಹರಿವಂಶಾದಿ ಪುರಾಣಗಳು ತೆಲುಗಿಗೆ ಬರುತ್ತಿದ್ದರೆ, ದೇಶೀಕವಿತೆಯಲ್ಲಿ ಪುರಾಣಕಥೆಗಳು ಹಾಡುಗಳಾಗಿ ಬಂದವು. ವೇದಗಳನ್ನು ಪುರುಷರು ಆವೃತ್ತಿಗಳಲ್ಲಿ ಶ್ರುತಪಡಿಸಿ ಪ್ರಚಾರಮಾಡಿದಂತೆ ಈ ಗಾಥೆಗಳನ್ನು ಸ್ತ್ರೀಯರು ಶ್ರುತಪಡಿಸಿ ಬಾಯಿಂದ ಬಾಯಿಗೆ ಪ್ರಚಾರಮಾಡುತ್ತಿದ್ದರು.

ಆರಾಧ್ಯರು, ಲಿಂಗಧಾರಿಗಳು, ಲಿಂಗಧಾರಿ ವೈಶ್ಯರು, ದೇವಾಂಗದವರು—ಮುಂತಾದವರ ಆದರಾಭಿಮಾನದಿಂದಲೇ, ನೂರಕ್ಕೆ ಮೀರಿದ ಗೌರೀವ್ರತಗಳೂ, ಶ್ರಾವಣ ಮಂಗಳವಾರದ ಹಾಡು, ದಕ್ಷಯಜ್ಞ, ಮಾರ್ಕಂಡೇಯ ಜನನ, ಸುರಭಾಂಡೇಶ್ವರ, ಚಿಂತೊಂಡರಾಜ ಚರಿತ್ರೆ, ಗಂಗಾಗೌರೀ ಸಂವಾದ ತ್ರಿಪುರಸಂಹಾರ ಎಂಬಿವಾದಿಯಾದ ಹಾಡುಗಳು ಬಂದಿವೆ. ಭ್ರಮರಾಂಬಿಕಾಷ್ಟಕ, ಕಾಲಭೈರವಾಷ್ಟಕ, ಈಶ್ವರಭೃಂಗಿವಾದ, ಮೇನಕಾಪಾರ್ವತೀ ಸಂವಾದ, ಲಕ್ಷ್ಮೀಪಾರ್ವತೀ ಸಂವಾದ—ಇವುಗಳೂ ಇಂಥವೇ. ದಾರುಕಾವನ ವಿಹರಣ ಲೀಲೆ ಮೊನ್ನೆಮೊನ್ನೆಯವು. ಈ ಹಾಡುಗಳ ಮಾದರಿಯನ್ನನುಸರಿಸಿ ಪಂಡಿತ ಕವಿಗಳೆಷ್ಟೋ ಮಂದಿ ಪುರಾಣ-ಕಥೆಗಳನ್ನು ತೆಗೆದುಕೊಂಡು ಸ್ತ್ರೀಯರಿಗಾಗಿ ಹಾಡುಗಳನ್ನು ಬರೆದರು. ಭಾಗವತ ಗಾಥೆಗಳನ್ನು ಅನುಸರಿಸುವಂಥವು—ಧ್ರುವಚರಿತ್ರೆಯ ಹಾಡು, ವಾಮನ ಚರಿತ್ರೆ, ಅಂಬರೀಷ ಚರಿತ್ರೆ, ಕುಚೇಲನ ಕಥೆ, ಭ್ರಮರ ಗೀತೆಗಳು, ಗಜೇಂದ್ರಮೋಕ್ಷ ಕಥಾ ಗೀತೆ. ಕಡೆಯದು ಅಧ್ಯಾತ್ಮ ರಾಮಾಯಣ ಕೀರ್ತನೆಗಳ ತರ್ವಾಯ ರಚಿಸಿದ ಹಾಡು, ರಾಮಕೃಷ್ಣ ಯೋಗೀಂದ್ರರವು, ಭಾರತ ಗಾಥೆಗಳು ಕೂಡ ಹಾಡುಗಳಲ್ಲಿ

ಅಲ್ಪಸಂಖ್ಯೆಯಲ್ಲಿ ರಚಿಸಲಾಗಿವೆ (ರಾಜನೀತಿ ತಂತ್ರದಲ್ಲಿ ಸ್ತ್ರೀಯರು ತಲೆಹಾಕಲೂ ವಿನೋದಿಸಲೂ ಬಲ್ಲರು). ಧರ್ಮರಾಜದ್ಯೂತ, ಕೀಚಕವಧೆ, ದ್ರೌಪದೀ ವಸ್ತ್ರಪ್ರಸಂಗ, ಹಣ್ಣುಹಾಡು, ವಿಶ್ವರೂಪ, ಸುಭದ್ರೆಯನ್ನು ಕಳಿಸಿ ಕೊಡುವುದು, ಸುಭದ್ರಕಲಾ, ಶಶಿರೇಖ ಪರಿಣಯ—ಇವು ಭಾರತ ಗಾಥೆಗಳು.

ವೀರಶೈವದೊಡನೆಯೇ ವೀರವೈಷ್ಣವವೂ ಕೂಡ ತೆಲುಗುನಾಡನ್ನು ವ್ಯಾಪಿಸಿದೆ. ಈ ವ್ಯಾಪನೆಯ ಫಲವಾಗಿ ವೈಷ್ಣವ ಗಾಥೆಗಳೂ, ಮುಖ್ಯವಾಗಿ ಶ್ರಿ ಕೃಷ್ಣ ಚರಿತ್ರೆಯ ಮಹಾತ್ಮ್ಯವೂ ಜನಸಾಮಾನ್ಯಕ್ಕೆ ತುಂಬ ಸೊಗಸಿದವು. ಪಾರಿಜಾತ ಪಲ್ಲವಿ ಪಾರಿಜಾತ ಹರಣವನ್ನು ಅನುಸರಿಸಿದ ಹಾಡು, ಲಕ್ಷ್ಮೀದೇವಿಯ ವಿಲಾಸ ಸೋಮನ ಉತ್ತರಹರಿವಂಶದ ಮೂರನೇ ಆಶ್ವಾಸಗಾಥೆ. ಚೆಂಚಿತ ಕಥೆ (ಕಾಡು ಹುಡುಗಿಯ ಕಥೆ) ಅಹೋಬಿಲಸ್ಥಲ ಪುರಾಣವನ್ನು ಕೃಷ್ಣಪರವಾಗಿ ತಿದ್ದುಕೊಂಡ ಹಾಡು. ಗಿಳಿಯ ರಾಯಭಾರವು ರುಕ್ಮಿಣೀಕಲ್ಯಾಣ ಗಾಥಾನುಸಾರಿ. ಕಾಳಿಂಗಮಡು, ತುಲಸೀದಳ (ತುಲಾಭಾರಗಾಥೆ), ಗೋಪಿಕಾಸ್ತ್ರೀಯರ ಜಲಕ್ರೀಡೆ—ಕೃಷ್ಣಗಾಥೆಗಳು, ರುಕ್ಮಿಣೀ ದೇವಿಯ ಸೀಮಂತ, ಬಂಪುಕೆ, ವಿಜಯ, ಸರಸ—ರುಕ್ಮಿಣೀಗಾಥೆಗಳು. ಶ್ರಿಕೃಷ್ಣನ ಜನನ, ಬಾಲಕ್ರೀಡೆಗಳು, ಬೃಂದಾವನಕ್ರೀಡೆಗಳು, ಯಶೋದ ಕೊಂಗೆಹಾಡು, ಗೋವಿನ ಹಾಡು, ಸತ್ಯಭಾಮೆಯ ಸರಸ, ಕೃಷ್ಣನ ಜೀವಿತಕ್ಕೆ ಸಂಬಂಧಿಸಿದ ಪ್ರಕೀರ್ಣಕ ಗಾಥೆಗಳು. ಶ್ರೀಕೃಷ್ಣನ ಜೀವಿತವು ಅದ್ಭುತವಾದರೆ ಶ್ರೀರಾಮನ ಜೀವಿತವು ವೀರ ಕರುಣರಸಗಳ ಮಧುರ ವರ್ಷ. ಶಾಂತಾಕಲ್ಯಾಣ, ಪುತ್ರಕಾಮೇಷ್ಟಿ, ರಾಘವಕಲ್ಯಾಣ, ಶ್ರಿರಾಮರ ಅಲಕೆ, ಲಂಕಾಯಾಗ, ಲಕ್ಷ್ಮಣ ಮೂರ್ಛೆ, ಸೇತುಮಾಹಾತ್ಮ್ಯ, ಗುಹಭರತರ ಅಗ್ನಿಪ್ರವೇಶ, ಶ್ರೀರಾಮ ಪಟ್ಟಾಭಿಷೇಕ, ಸೀತ ಸುರಟೀ, ಲಕ್ಷ್ಮಣದೇವರ ನಗೆ—ಎಂಬಿವು ರಾಮಾಯಣವನ್ನು ಒಂದು ವಿಧವಾಗಿ ಸುತ್ತುಗಟ್ಟಿರುವ ಹಾಡುಗಳು. ಶ್ರೀರಾಮದಂಡಗಳೂ, ಸಂಕ್ಷೇಪರಾಮಾಯಣವೂ, ಚಿಕ್ಕ ರಾಮಾಯಣವೂ ಪುಟ್ಟ ರಾಮಾಯಣಗಳೇ. ಬದುಕಮ್ಮನ ಹಾಡೆಂಬುದು, ಉತ್ತರ ರಾಮಾಯಣದ ಗಾಥೆ, ಶಾಂತ, ವಿವಾಹ, ಶ್ರೀ, ಅರಣ್ಯ, ಸೇತು, ಗೋವಿಂದ ನಾಮಗಳು ಸ್ತ್ರೀಯರ ಬಾಯಲ್ಲಿ ಬೆಳೆದ ರಾಮಾಯಣ ನಾಮಗಳು,

ಇವುಗಳಲ್ಲಿ ವಿವಾಹ, ಗೋವಿಂದನಾಮಗಳನ್ನು 1914ರಲ್ಲಿ ಮೈಲವರದ ವೆಂಕಣ್ಣಶಾಸ್ತ್ರಿಯವರು ಪ್ರಕಟಿಸಿದ್ದಾರೆ. ಕೌಸಲ್ಯಾದೇವಿಯ ಬಯಕೆಗಳು, ಸೀತಾಜನನ, ಸೀತಾಕಲ್ಯಾಣ, ಶ್ರೀರಾಮರ ಅಲಕೆ, ಸೀತೆಯನ್ನು ಅತ್ತೆಯ ಮನೆಗೆ ಕಳಿಸುವುದು, ಸೀತೆ ಋತುವಾದದ್ದು, ಸೀತೆಯ ಸರಸ, ಕಣ್ಣು ಮುಚ್ಚಾಲೆ, ರಾಯಭಾರ, ಮುದ್ರಿಕೆ, ಅಗ್ನಿಪ್ರವೇಶ, ಅಲಕೆ, ವಸಂತ, ಋಷಿಗಳ ಆಶ್ರಮ, ಕೋಗಿಲೆಗಳ ರಾಯಭಾರ, ಸೀತೆಯ ಶುಭಗೋಷ್ಠಿ, ಬಯಕೆಗಳು—ಎಂಬ ಹಾಡುಗಳು ತೆಲುಗು ರಚೇತರು ಸೀತಾದೇವಿಗೆ ಸಮರ್ಪಿಸಿದ ಗೀತಮುಕ್ತಾವಳಿ. ಉದಯಗಂಧವಾಹನನ ಪ್ರಸನ್ನತೆ, ವಿದ್ಯುನ್ಮಾಲೆಯಲ್ಲಿನ ಚೈತನ್ಯ, ಭೂದೇವಿಯ ಕ್ಷಮೆ, ಸಹಸ್ರದಲ ಕಮಲ ಸೌಂದರ್ಯವನ್ನು ಮಿಳನಗೊಳಿಸಿ ಸೀತಾದೇವಿಯ ವಿಗ್ರಹವನ್ನು ಇವರು ಕಡೆದಿದ್ದಾರೆ. ಊರ್ಮಿಳಾದೇವಿಯ ನಿದ್ರೆ ಸ್ತ್ರೀಯರ ಸಾಹಿತ್ಯದ ನಿರ್ಮಾತರು ನಿರ್ಮಿಸಿರುವ ಚಂದಮಾಮ. ಅದು ತೆಲುಗು ದೇಶದ ಆಕಾಶದಿಂದ ಭಾರತೀಯ ಸಾರಸ್ವತಾಕಾಶಕ್ಕೆ ತಂಪಾದ ಕಾಂತಿಯನ್ನು ಹೊಮ್ಮಿಸಬಲ್ಲುದು !

ರಾಮ ಕೃಷ್ಣರ ಗಾಥೆಗಳೊಡನೆ ಹಾಡುವ ವೈಕುಂಠವರ್ಣನೆ, ವರದ ರಾಜ ವಿವಾಹ, ತುಲಸೀದಲ ಪಟಲಗಳು, ಸಪತ್ನೀಕಲಹ, ವೆಂಕಟೇಶ್ವರನ ಬೇಟೆ, ಉಷಾಸ್ವಪ್ನ, ಲಕ್ಷ್ಮೀದೇವಿಯ ವರ್ಣನೆ, ಲಕ್ಷ್ಮಿಯನ್ನು ಅತ್ತೆಯ ಮನೆಗೆ ಕಳಿಸುವ ಹಾಡು, ಶ್ರಾವಣ ಶುಕ್ರವಾರದ ಹಾಡು, ತಿರುಮಂತ್ರವೆಂಬ ವೈಷ್ಣವಗೇಯಗಳು ಹುಟ್ಟಿಕೊಂಡಿವೆ. ಧರ್ಮಾಂಗಚರಿತ್ರೆ, ಸಾರಂಗಧರಚರಿತ್ರೆ, ಕನ್ಯಕಾಮ್ಮನವರ ಹಾಡು—ಎಂಬವು ಮೂರೇ ಚಾರಿತ್ರಕಗಳೆನ್ನುವಂಥವು. ಅಶ್ವತ್ಥಪ್ರದಕ್ಷಿಣೆ, ಸೂರ್ಯನ ಕುದುರೆಗಳು, ಪ್ರಯಾಗಧವಳ—ಪ್ರಕೀರ್ಣಕೆಗಳು. ರಾಮಮಾನಸಪೂಜೆ ಎಲ್ಲ ಮಾನಸಪೂಜೆಗಳಂತೆಯೇ. ಗಿಳಿರಂಗವಲ್ಲಿ ಹಾಡು ಪೂರ್ವಕಾಲದ ಕಥೆಗಳ ಸ್ವರೂಪವನ್ನು ತಿಳಿಸುವ ವ್ರತಕಥೆ. ವಶಿಷ್ಠ ವಾಕ್ಯಗಳು, ಲಕ್ಷ್ಮಣೋಪದೇಶ, ವೇದಾಂತ ಕುಚ್ಚೆಲ ಕಥೆ, ಸೀತೆಯ ಹಾಡು—ವೇದಾಂತ ಗೀತೆಗಳು. ಕೂಸಲಮ್ಮನ ಹಾಡು ಒಂದು ನೀತಿಗೀತೆ,

೩. ವೀರಗಾಥೆಗಳು

ಶೈವಮತ ವಿಜೃಂಭಣದಿಂದ ಸಾಹಿತ್ಯಸಂಪನ್ನವಾದ ಆಂಧ್ರವಾಙ್ಮಯದಲ್ಲಿ ವೀರಗಾಥೆಗಳು ಒಂದು ಶಾಖೆ. ಪಾಲ್ಕುರಿಕೆ ಸೋಮನಾಥಾರಾಧ್ಯನು ದ್ವಿಪದಿಗಳಲ್ಲಿ ಶೈವಗಾಥೆಗಳೆಷ್ಟನ್ನೋ ತನ್ನೆರಡು ಪುಸ್ತಕಗಳಲ್ಲಿಯೂ ಬರೆದಿರುತ್ತಾನೆ. ಸ್ತ್ರೀಯರ ವ್ರತಗಾಥೆಗಳೂ, ಕಥಾಗೀತೆಗಳೂ ದ್ವಿಪದಿಗಳಲ್ಲಿ ಬೆಳೆದುವು. ಜನಪದದಲ್ಲಿ ಶೈವಮತ ಪ್ರಚಾರಕ್ಕೆ ದ್ವಿಪದಿ ಗ್ರಂಥಗಳು ಬಹಳ ಉಪಯುಕ್ತವೆನಿಸಿದುವು. ಆ ಕಾರಣ ವೀರಗಾಥೆಗಳಿಗೂ ದ್ವಿಪದಿಯೇ ತಕ್ಕ ಛಂದಸ್ಸಾಯಿತು. ಪಲ್ನಾಡು ವೀರಚರಿತ್ರೆಯೇ ಈಹೊತ್ತಿಗೂ ಸಿಕ್ಕಿರುವುದರಲ್ಲಿ ಪ್ರಾಚೀನಗಾಥೆಯೆಂದು ಕಾಣಿಸುತ್ತದೆ. ಕೃಷ್ಣಾ, ಗೋದಾವರೀ ಮಧ್ಯಪ್ರದೇಶದಲ್ಲಿ ಶೈವ ವೈಷ್ಣವಗಳ ಸಂಘರ್ಷಣೆ ೧೨ನೆಯ ಶತಾಬ್ದಕ್ಕೇ ಕಾಲಿಟ್ಟಿತು. ಪಲ್ನಾಡು ಯುದ್ಧವು ಈ ಸಂಘರ್ಷಣೆಯ ಪ್ರಥಮಫಲ. ಮತಸಾಂಬಂಧಿಕಗಳಾದ ಜನಪದ ಕಾವ್ಯಗಳಲ್ಲಿ ಪಲ್ನಾಟಿ ವೀರಚರಿತ್ರೆಯೇ ಮೊದಲಿನದೇನೋ ? ಶ್ರೀನಾಥನ ಕಾಲಕ್ಕೇ ಕೆಲವು ವೀರಚರಿತ್ರೆಗಳಿರಬೇಕೆಂದೂ, ಅವನು ಒಂದು ಘಟ್ಟವನ್ನು ಹಿಡಿದು ಸಾಣೆಹಿಡಿದಿದ್ದಾನೆಂತಲೂ ಎನಿಸುತ್ತದೆ. ಕದಿರಿಬಾಲನ ಚರಿತ್ರೆ ಆ ತೆರನಾದ್ದೇ. ಕಾಕತೀಯರು ಮೊದಲು ಜೈನರು, ಅನಂತರ ವೀರಶೈವರಾದರು. ವೀರಶೈವದೊಡನೆ ವಿಜೃಂಭಿಸಿದ ಆಸ್ತಿಕತೆಯೊಡನೆ ಎಲ್ಲ ಬಗೆಯ ಆಸ್ತಿಕತೆಗಳೂ ತಲೆಯೆತ್ತಿ ಮಾಹುರಮ್ಮನ ಕಥೆ, ಮಾತೆಯ ಪುರಾಣ, ಗೌತಮ ಪುರಾಣ, ಆಲದ ಮರಗಳ ಕಥೆ, ರೇಣುಕಾಯುದ್ಧ, ಕಾಕತಮ್ಮನ ಕಥೆ, ಅಂಕಮ್ಮನ ಕಥೆ, ಗಂಗಾನಮ್ಮನ ಕಥೆ, ಮಾತಂಗಿ ಕಥೆ ಕಾಣಿಸಿಕೊಂಡಿರಬೇಕು. ಇವುಗಳಲ್ಲಿ ಕೆಲವಲ್ಲಿ ಓರುಗಲ್ಲಿನ ಪ್ರಶಂಸೆಯಿದೆ. ಇವು ಓರುಗಲ್ಲು ಉಚ್ಚದೆಶೆಯಲ್ಲಿದ್ದಾಗ ಬಂದಿರಬೇಕು. ಕಾಮೇಶ್ವರೀ ಹಾಡು ಕೂಡ ಇಂಥದೇ. ಪರಶುರಾಮ ಪುರಾಣ ವೈಷ್ಣವ ಪ್ರಶಂಸೆಯನ್ನು ಮಾಡುತ್ತದೆ. ದಕ್ಷಿಣದ ಗಣಪತಿದೇವನ ಸಮಕಾಲಿಕನಾದ ನಲ್ಲಸಿದ್ಧಿ ಎರ್ರಗಡ್ಡಪಾಟಿ ಹೋರಾಟದಲ್ಲಿ ಸತ್ತುಹೋಗಿ, ವಿಜಯಿಯಾದ ಕಾಟರಾಜನ ಕಥೆ ಆ ಹೆಸರಿನಿಂದ ಮಾತ್ರವಲ್ಲದೆ ಭಟ್ಟರಾಯಭಾರವೂ ಮಲ್ಲರಾಜಯುದ್ಧ ಮುಂತಾದ ರೂಪಗಳಲ್ಲಿಯೂ ಬಂದಿವೆ. ದ್ವಿಪದವೇ ಇವೆಲ್ಲಕ್ಕೂ ಛಂದಸ್ಸು. ಇವೆಲ್ಲವೂ ಪ್ರಾಚ್ಯಲಿಖಿತ ಕೋಶಾಗಾರದಲ್ಲಿವೆ.

ಇಷ್ಟು ಗಾಥೆಗಳು ಬರುವ ವೇಳೆಗೆ ಈ ವೀರಕಥಾವಾಙ್ಮಯವು ಕಲ್ಪನೆಗಳನ್ನು ಕೂಡ ಕಟ್ಟಲು ಕಲಿಯಿತು. ಕ್ರಿ. ಶ. ೧೩೦೦ರ ತರುವಾಯ ಆನೆಗೊಂದಿಯನ್ನಾಳಿದ ಕಂಪಿಲಿರಾಯನ ಮಗ ಕುಮಾರನಾಥನು ಶೌರ್ಯವಂತ. ತಂದೆಯೊಡನೆ ಸೇರಿ ದೆಹಲಿಸುಲ್ತಾನನೊಡನೆ ಯುದ್ಧದಲ್ಲಿ ಹತನಾಗಿದ್ದಾನೆ. ಇವನ ಗಾಥೆ ಕೈಕಾಲು ಬೆಳೆದು ಬದಲಾಯಿಸಿ ಕುಮಾರರಾಮನ ಕಥೆಯಾಗಿದೆ. ಇದರ ಛಂದಸ್ಸು ಇಲ್ಲಿಯವರೆಗಿನ ದ್ವಿಪದಿಯಲ್ಲ. ಈ ಕಥೆ ಪ್ರಾರಂಭಿಸುವ ಮಾತುಗಳಿಂದಲೇ ಪೂರ್ತಿಯಾಗಿ ಕಲ್ಪನಾಕತೆಯಾದರೂ ಗಾಂಧಾರೀಕಥೆಯನ್ನು ಪ್ರಾರಂಭಿಸುತ್ತದೆ. ಬಾಲನಾಗಮ್ಮನ ಕಥೆಗೂ ಕೂಡ ಮೇಲಿನೆರಡರೊಡನೆ ಹೋಲಿಕೆಯಿದೆ. ಗಾರುಡೀಕಥೆಗಳು ಜಾನಪದಗಾಥೆಗಳಲ್ಲಿ ಪ್ರವೇಶಿಸುವುದಕ್ಕೆ ಇದೇ ಮೊದಲು. ಕಾಕತೀಯರ ತರುವಾಯ ತೆಲುಗು ನಾಡನ್ನಾಳಿದ ಒಡ್ಡೆ ರಾಜರೊಡನೆ ಅವರ ಕಥಾಪ್ರಭಾವವೇನಾದರೂ ಈ ಗಾಥೆಗಳಲ್ಲಿ ಇಳಿದು ಬಂದಿರಬಹುದೇನೋ ? ಕ್ರಿ. ಶ. ೧೨ನೆಯ ಶತಾಬ್ದ ಕಳೆದ ತರುವಾಯ ಬಹುಶಃ ಅಹೋಬಿಲ, ಕದಿರಿ, ಮಂಗಳಗಿರಿ ನರಸಿಂಹರು ಪ್ರತಿಷ್ಠೆಯಾಗಿದ್ದಾರೆ. ಅಹೋಬಿಲ ನರಸಿಂಹನ ಕಥೆಯೇ ಬಹುಶಃ ವರಾಹಾವತಾರ ಎಂಬ ಹೆಸರಿನಿಂದ "ತಕಿಟ ತಕಿಟ ತಕ ಕಿಟತಕ ಕಿಟತಕ" ಎಂಬ ಗತಿಯಲ್ಲಿ ನಡೆಯುವ ರಚನೆಯಾಗಿ ರೂಪುವಡೆದಿದೆ. ಇದರ ರಚನೆ ತುಪಾಕಿ ಬಂದ ಈಚಿನ ಕಾಲದ್ದೇ ಆದರೂ ವಸ್ತುವು ಮಾತ್ರ ಶೈವವೈಷ್ಣವ ಸಮನ್ವಯಕಾಲದ್ದು. ಬಂಗಾರು ತಿಮ್ಮರಾಜನ ಕಥೆ ಪೆನುಗೊಂಡೆರಾಜರ ಕಾಲದ ಬೊಬ್ಬಿಲಿ ಕಥೆಯ ವರಸೆಯಲ್ಲಿದೆ. ಚಿನ್ನಮ್ಮನ ಕಥೆ ಎಂಬ ತಂದಾನಕತೆ ಕೂಡ ಶೈವ ವೈಷ್ಣವ ಸಮನ್ವಯದ ವಿಜಯನಗರಕಾಲದ್ದು. ಚೆಂಗಲ್ವರಾಜ ಇದರ ಕರ್ತೃ. ಬೊಬ್ಬಿಲಿಕಥೆಯ ವರಸೆ. ಇದರ ಜಾಡು ಹಿಡಿದುಬಂದದ್ದು ಜಂಗಂ ಸುಬ್ಬಯ್ಯದೇವರ ಕಾಂಭೋಜರಾಜನ ಕಥೆ, ಪುಲಿಗಂಟಿ ವೀರಯ್ಯನ ಲಕ್ಷ್ಮಮ್ಮನ ಕಥೆ ತಂದಾನ ಪದಗಳ ವರಸೆಯಲ್ಲಿದೆ. ಶ್ರುತಿಮುಖ ವಿಸ್ತಾರವಾದ ಇವು ೧೮೫೦–೧೯೦೦ರ ನಡುಗಾಲದಲ್ಲಿ ಪ್ರಸಿದ್ಧಿಹೊಂದು ವಷ್ಟು ಅಧಿಕ ಸಂಖ್ಯೆಯಿಂದ ಆಚ್ಛಾದವು.

೪. ಯಕ್ಷಗಾನಗಳು—ಜಂಗಂ ಕಥೆಗಳು

ನಾಟಕಗಳು ತೆಲುಗುನಾಡಿನ ರಾಯಲಸೀಮೆಯಲ್ಲಿ ಬಳಕೆಯಲ್ಲಿ ಹೆಚ್ಚಾಗಿವೆ. ಪಾಲ್ಕುರಿಕೆಯ ಕಾಲಕ್ಕೇ ಅವು ಪ್ರಚಾರದಲ್ಲಿದ್ದುವು, ಇವುಗಳಲ್ಲಿ

"ದರುವುಲು" ಎಂಬ ತಾಳಪ್ರಧಾನವಾದ ಕೀರ್ತನೆಗಳೂ, ಪದ್ಯಗಳೂ, ಅರ್ಧ ಪದ್ಯಗಳೂ, ವಚನಗಳೂ ಇರುತ್ತವೆ. ನಾಟಕವೆಂಬುದು ಪೂರ್ತಿಯಾಗಿ ದೃಶ್ಯವೇ ಆದರೂ, ಯಕ್ಷಗಾನದಲ್ಲಿ ಶ್ರವ್ಯಭಾಗವು ಬಹಳವಿರುತ್ತದೆ. ಆ ಕಾರಣ ಯಕ್ಷಗಾನವನ್ನು ಹಾಡಿಕೊಂಡು ಕೇಳುವುದು ಕೂಡ ವಿಶಾಖಮಂಡಲ ದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. "ತುಲಾಭಾರ" ಯಕ್ಷಗಾನದ ರಚೇತನು "ಯುವರೀ ಹಾಡ ಪಾಡಿದರು ಕೇಳಿದರು ಸಿರಿಯು ಸಂಪದವೊದಗಿ ಸ್ಥಿರ ಬಾಳುವರು" ಎಂದಿದ್ದಾನೆ. ಯಕ್ಷಗಾನಗಳು ಅಧಿಕವಾಗಿ ಶ್ರಾವ್ಯವಾಗಿ ಪ್ರಚಾರವಾದೊಡನೆಯೇ ಇವುಗಳ ದರುವುಲು, ವಚನಗಳು, ಪದ್ಯ ಅರ್ಧ ಪದ್ಯಗಳೂ, ಪೂರ್ತಿಯಾಗಿ ಜಂಗಂ ಕಥೆಗಳಲ್ಲಿ ಪ್ರವೇಶಿಸಿದುವು. ಕೀರ್ತನೆ ಗಳಿರುವ ಕಾರಣ ಕಡೆಯ 'ಮಕುಟ'ವನ್ನು ನೋಡಿ ರಚೇತನ ಹೆಸರನ್ನರಿಯಲು ಸಹಾಯವಾಗುತ್ತದೆ, ಧೇನುವಕೊಂಡ ವೆಂಕಯ್ಯನ ವಿರಾಟಪರ್ವ, ಗಯೋಪಾ ಖ್ಯಾನ; ಉಪ್ಪಲಪಾಟಿ ವೆಂಕಟರಾಮಯ್ಯನ ಅಂಬರೀಷು ಚರಿತ್ರೆ; ಗಂಜಿ ನಾಗದಾಸುವಿನ ಶ್ರೀಯಾಳ ಮಹಾರಾಜ ಚರಿತ್ರೆ; ವೆಂಕಟಸುಬ್ಬರಾಯಗುಪ್ತನ ದೇವಯಾನಿ ಚರಿತ್ರೆ, ವಾಮನವಿಜಯ; ರೂಪೆನಗುಂಟ್ಲ ಸೀತಾರಾಮದಾಸನ ಹರಿಶ್ಚಂದ್ರೋಪಾಖ್ಯಾನ ಇವು ಜಂಗಂ ಕಥೆಯ ಬಗೆಯವು. ಇವೆಲ್ಲ ಮದ್ರಾಸು ವೆಸ್ಟ್‌ವರ್ಡ್ ಕಂಪೆನಿಯವರು ಮುದ್ರಿಸಿದ್ದಾರೆ. ಇದಲ್ಲದೆ ಮಾರ್ಕಂಡೇಯ ಚರಿತ್ರೆ, ದಕ್ಷಿಣ ಗೋಗ್ರಹಣ, ರುಕ್ಮಿಣೀಕಲ್ಯಾಣ, ತುಲಸೀ ಮಾಹಾತ್ಮ್ಯ, ರುಕ್ಮಾಂಗದ, ಯಲ್ಲಮಂದ ಕೋಟೀಶ್ವರನ ಕಥೆ, ಅಚ್ಚಾದಂತೆ ಸಾಕ್ಷ್ಯಗಳಿವೆ. ಇಂಥದೇ ಚಿತ್ರಸೇನ ಮಹಾರಾಜನ ಕಥೆ. ಕಡಿಯಮು ಗ್ರಾಮದ ಕಿನ್ನೆರ ವೀರಾಸ್ವಾಮಿ "ಬಾಲರಾಜು ಕಥೆ"ಯನ್ನು ಕೀರ್ತನೆಗಳಿಲ್ಲದ ಪದ್ಯವಚನಗಳಲ್ಲಿ ಬರೆದಿರುತ್ತಾನೆ. ನಲೋಪಾಖ್ಯಾನ, ರಾಮದಾಸ, ವೇಣುಗೋಪಾಲಸ್ವಾಮಿ ಪರಿಣಯಗಳೆಂಬ ಜಂಗಂ ಕಥೆಗಳು ಪದ್ಯವಚನ ನಿಬದ್ಧಗಳಾಗಿವೆ. ಲಿಂಗಮ್ಮ ಚರಿತ್ರೆ, ಪುರಂದರದಾಸರ ಚರಿತ್ರೆ, ಗೋರಕುಂಬಾರ ಚರಿತ್ರೆ, ಸಕ್ಕೂಬಾಯಿ ಚರಿತ್ರೆ, ರಾಯಪುರದ ಸುದರ್ಶನದಾಸನ ಶಿಷ್ಯ ರಾಮಾನುಜದಾಸನು ಬರೆದವು, ೧೯೪೧ರಲ್ಲಿ ಅಚ್ಚಾಗಿವೆ.

೫. ದ್ವಿಪದಿ

ದ್ವಿಪದಕಾವ್ಯಗಳು ಸಭಾಕವಿತ್ವದಲ್ಲಿಯೇ ಮುಖ್ಯವಾಗಿ ಸೇರಿದರೂ, ಇವುಗಳಲ್ಲಿ ಜನಪದದ ಬಾಯಲ್ಲಿ ವ್ಯಾಪನೆಗೊಂಡವು ಇಲ್ಲದೇ ಹೋಗಲಿಲ್ಲ.

ಬೊಮ್ಮಕವಿ ನೃಸಿಂಹಕವಿಗಳ ಧರ್ಮಾಂಗದ ಚರಿತ್ರೆ, ಪುರಾಣಂ ರಾಮಶರ್ಮನ ಪುರೂರವೋಪಾಖ್ಯಾನ, ರಾವೂರಿ ವೆಂಕಟಸುಬ್ಬಯ್ಯನ ತಿರುತ್ತನಿ ತೆಪ್ಪೋತ್ಸವದ ಹಾಡು, ಈ ಮಾದರಿಯವು. ರಾಮಕೃಷ್ಣಯೋಗೀಂದ್ರನ ಜ್ಞಾನ ಮಂಜರಿ ಇದೇ ಮಾದರಿಯದು (ಗಜೇಂದ್ರ ಮೋಕ್ಷ ಕಥಾಗೀತವು ಈತನದೇ). ತಾಳ್ಳಪಾಕ ತಿಮ್ಮಪ್ಪನ ಸುಭದ್ರಾಕಲ್ಯಾಣ ಪ್ರಾರಂಭ—ಪೂರ್ತಿಯಾಗಿ ಜಾನಪದರಿಗಾಗಿಯೇ. ಹೇಮಾದ್ರಿತನಯ ಅಪ್ಪನ್ನ ರಚಿಸಿದ ಸುಭದ್ರಾಕಲ್ಯಾಣ ದ್ವಿಪದಿಯಲ್ಲಿಯೇ ಸಾಗಿಹೋದರೂ ಅದರ ಪ್ರಕಾಶಕರು ಅದನ್ನು ಪದಗಳೆಂದಿದ್ದಾರೆ.

೬. ಪದಗಳು

ಜಾನಪದ ಸಾಹಿತ್ಯವು ವಿಶಾಖಮಂಡಲದಿಂದ ಬಂದನಿತು ಬೇರೊಂದು ಮಂಡಲದಿಂದ ಬರಲಿಲ್ಲ. ಹೆಣ್ಣುಮಕ್ಕಳ ಗೀತಕಥೆಗಳು ಹೆಚ್ಚುಕಡಿಮೆ ಎಲ್ಲ ಅಲ್ಲಿಯವೆ. ಅವುಗಳ ರೂಢಿ, ಪ್ರಚಾರ ಕೂಡ ಇಂದಿಗೂ ಅಲ್ಲಿಯೇ ಹೆಚ್ಚು. ಸುದೀರ್ಘವಾದ ಸ್ತ್ರೀಯರ ಹಾಡುಗಳು ಕುಶಲವ ಕುಚ್ಚಲಕಥೆ, ಕುಶಲವರ ಯುದ್ಧವೂ ಅಲ್ಲಿಯವೇ ಎನಿಸುತ್ತದೆ. ಈ ಎರಡನ್ನೂ ಸ್ತ್ರೀಯೇ ರಚಿಸಿರಬೇಕೆ ?—ಎಂಬ ಅನುಮಾನವೂ ಬರುತ್ತದೆ. ಮೊದಲನೆಯದರಲ್ಲಿ "ವಾಲ್ಮೀಕಿ ರಾಮಾಯಣದ ನೆನಪಿಗಿದ ಬರೆದಿಹೆನು ಸತಿ ತಾನು" ಎಂದಿದೆ. ವರಸೆ ಕೂಡ ಗೋವಿಂದನಾಮಗಳಿಗಿಂತ ಒಂದು ಮೆಟ್ಟು ಮೇಲಿನದು. ಕುಶಲವರ ಯುದ್ಧದಲ್ಲಿ—"ತಾಯಿತಂದೆಗಳಾಗಿ ತಪ್ಪನೆಣಿಸದಿರಿ, ಒಪ್ಪೆನಲು ಭಾವಿಸಿರಿ ಸ್ವಾಮಿ" ಎಂದಿದೆ. ಹೆಂಗುಸಿಗೆ ತಾಯ ಮೇಲೆ ಹೆಚ್ಚು ಪ್ರೀತಿ, ಸೇರಿಕೆ. ಪುರುಷನು "ತಾಯಿತಂದೆಯಾಗಿ" ಎಂದು ರಾಮನನ್ನು ಎನ್ನನೇನೊ ? ಕುಶಲವ ಕುಚ್ಚಲ ಚರಿತ್ರೆಯ ಕಡೆಯ ಮಂಗಳದಲ್ಲಿ "ರಾಮಬ್ರಹ್ಮದಾಸ" ಎಂಬ ಅಂಕಿತವಿದೆ. ಪದಗಳೆಂಬ ಹೆಸರಿನಿಂದ ಬಹಳ ಕಾವ್ಯಗಳು ವಿಶಾಖ ಮಂಡಲದಿಂದ ಬಂದಿವೆ. ಇವು "ಶ್ರೀರಾಮ ಜಯರಾಮ ಸೀತಾಪತೇ ರಾಮ ನಿನಗೆ ವಂದನೆಯಯ್ಯ ಲೋಕನಾಯಕನೇ" ಎಂಬ ಪ್ರಾರಂಭ ಪದಗಳೊಡನೆ "ಹರಿ ಹರಿ ನಾರಾಯಣಾದಿ ನಾರಾಯಣ ಕರುಣೆಯಿಂದೆಮ್ಮನೋವಯ್ಯ ಕಮಲಲೋಚನನೇ" ಎಂಬ ವರಸೆಯಲ್ಲಿರುತ್ತದೆ. ಅಯ್ಯಗಾರಿ ಕೂರ್ಮ

ನಾಥನು ಅಲ್ಲಿ ವಿರಾಟ, ಕರ್ಣ, ಶಲ್ಯ ಪರ್ವಗಳನ್ನು ರಚಿಸಿದ್ದಾನೆ. ವೈಕುಂಠ ಮಾಹಾತ್ಮ್ಯವು ಗೋಪಾಲರಾಯರದು. ಇದರಲ್ಲಿನ ಕೀರ್ತನೆಗಳು ಪದ ಸಾರಸ್ವತಕ್ಕೆ ಹೊಸದು. ಮುಡುಂಬ ಲಕ್ಷ್ಮಣಾಚಾರ್ಯರ ಶ್ರೀರಾಮ ಕಥೆ ಆರು ಕಾಂಡಗಳ ಪದಗ್ರಂಥ (೧೮೯೫). ಚಿತ್ರಾಡಕಾಮೇಶನೆಂಬ ಸೋಮ ಪುರವಾಸಿ ವಿಶ್ವಬ್ರಾಹ್ಮಣನು ಓಡ್ರದಲ್ಲಿನ "ತ್ರಿನಾಥಚರಿತ್ರೆ"ಯನ್ನು ಪದವಾಗಿ ರಚಿಸಿದ್ದಾನೆ. ಈ ಶತಾಬ್ದದ ಆರಂಭದಲ್ಲಿ ವಿಶಾಖಪಟ್ನದ ಗವರ್ನರರ ಏಜೆಂಟರಾದ ಪೂಡಿಪೊದ್ದಿ ಬುಚ್ಚನ್ನಪಂತುಲು "ಲಕ್ಷ್ಮಣಮೂರ್ತಿ"ಯನ್ನು ಸಂಸ್ಕರಿಸಿ ಸುಂದರಕಾಂಡ, ರಾಮರಾವಣ ಯುದ್ಧವೆಂಬ ಪದಗಳನ್ನು ರಚಿಸಿದ್ದಾರೆ. ನೀಪೂರಿ ನಾರಾಯಣರಾಜುವಿನ ಧರ್ಮಾಂಗದ ಹಾವಿನ ಹಾಡು (೧೮೭೪) ನೀಪೂರಿ ರಾಮಚಂದ್ರರಾಜುವಿನ ಕುಶಲಾಯಕ (೧೮೬೨), ಮಂಥಾರಾಯುಡು ಶಾಸ್ತ್ರಿಗಳ ಪಾತಾಳಹೋಮ (೧೯೨೨), ಬೊಟ್ಟಿ ನರಸಿಂಹ ದಾಸುವಿನ ಸುಂದರಕಾಂಡ, ಶಾಪಗೋಪಾಲ, ರಾಮಾಯಣಾನುಸಾರಿ (೧೯೨೨), ನಡುಮನೆ ರಾಮಯೋಗಿ ಕವಿಯ ಬಾಣಾಸುರಯುದ್ಧ (೧೮೬೪), ರಸಖಂಡವು, ಪಸಗಾಡ ಸಂನ್ಯಾಸಿಯ ಸಾರಂಗಧರ ಚರಿತ್ರೆ, ಶತಕಂಠಯುದ್ಧ, ಗಂಗಾವಿವಾಹ, ತೋಲೇಟಿ ಸೀತಾರಾಮಯ್ಯನವರ ಶಶಿರೇಖಾಪರಿಣಯ, (೧೮೮೩), ನಳಚರಿತ್ರೆ (೧೯೦೦), ಪ್ರಹ್ಲಾದಚರಿತ್ರೆ (೧೯೦೪), ಕಟೋಜು ವೀರಾಚಾರಿಯ ಭಳ್ಳಾಣಿರಾಯಪದ—ಅಚ್ಚಾಗಿ ಪ್ರಕಟಗೊಂಡಿರುವ ಪದಗಳಲ್ಲಿ ಹಲವು. ರಾಮಾಯಣದ ಪದವೊಂದು ಪ್ರಾಚ್ಯಕೋಶಾಗಾರದಲ್ಲಿದೆ. ವೀರ ಭದ್ರಯ್ಯನ ಗೌರೀವಿವಾಹ ಗಂಗಾವಿವಾಹಕ್ಕೆ ಪ್ರತಿದ್ವಂದ್ವವೆನ್ನುವಂತಿದೆ. ವೆಂಗಿಪುರಂ ವೆಂಕಟರಂಗಾಚಾರ್ಯರ ಶ್ರೀರಂಗಮಾಹಾತ್ಮ್ಯವೆಂಬ ಆಂಡಾಳಚರಿತ್ರೆ ಬೊಬ್ಬಿಲಿ ವರಸೆಯ ಪದ. ಕೊಮಿರಿಲ್ಲಿ ಮಲ್ಲನ ಕಥೆ, ಅಣ್ಣ ಚೆರ್ವಿರಾಲ ಭಾಗಯ್ಯನವರ ಪದ, ಎಂಟು ಮೂರು ಅಕ್ಷರಗಳ ಆವೃತ್ತಿಯಲ್ಲಿದೆ; ಹೈದರಾಬಾದಿನಿಂದ ಹೊಸದಾಗಿ ಬಂದುದು. ಪೊಡುಗು ರಾಜಬ್ರಹ್ಮಮು ಅವರ ಹರಿಶ್ಚಂದ್ರೋಪಾಖ್ಯಾನ, ಗಯೋಪಾಖ್ಯಾನ, ನಿಜಲಿಂಗ ಚಿಕ್ಕಯ್ಯ ಚರಿತ್ರೆ, ಸಿಂಹಾಚಲ ಮಾಹಾತ್ಮ್ಯ, ರಾಮಾಯಣಪದ ವಿಶಾಖಪಟ್ಟಣದ ಕೃಷ್ಣಮೂರ್ತಿ ಕಂಪೆನಿ ಅವರ ಬಳಿಯಿದೆ.

೭. ಗೇಯಕಥೆಗಳು

ಈ ಪದ ಸಾರಸ್ವತವು ಹೊರಬರುವ ಮುನ್ನವೇ ವೀರಕಥೆಗಳೆನ್ನುವಂಥ ಗೇಯಕಥೆಗಳು ತೆಲುಗುನಾಡಿನಲ್ಲಿ ಪ್ರಚಾರವಾದವು. ಇವು ಕಳ್ಳರಿಂದ ರಾಜರು ವರೆಗಿನ ಹಾಗೂ ಸತಿಯಾದ ಸ್ತ್ರೀಯರ ಸಾಹಸಗಳನ್ನು ಕೀರ್ತಿಸಿವೆ. ಅಚ್ಚಾದವುಗಳಲ್ಲಿ ಔರಂಗಜೇಬಿನ ಮಗ ಮಹಮ್ಮದ್ ಷಾ ಕಾಲದಲ್ಲಿ ಗೋಲ್ಕೊಂಡವನ್ನು ಸೂರೆಮಾಡಿದ ಸರ್ವಾಯಿ ಪಾಪುಡು ಕಥೆ ಪ್ರಾಚೀನವೇನೋ ಎನಿಸುತ್ತದೆ. ಹೈದರಾಬಾದು ರಾಷ್ಟ್ರಕ್ಕೆ ಸೇರಿದ "ಗದ್ವಾಲ ಸೋಮನಾದ್ರಿಯ ಕಥೆ" ಇದುವರೆಗೆ ತಿಳಿದವಲ್ಲಿ ಪ್ರಾಚೀನವೇ ಆದರೂ ಪ್ರಕಟವಾಗಿಲ್ಲ. ಅಲ್ಲಿಯದೇ ಸದಾಶಿವರೆಡ್ಡಿ ಕಥೆ, ಮಿಯ್ಯಾಸಾಹೇಬು ಕಥೆ, ರಾಮೇಶ್ವರ ರಾಯರ ಕಥೆ ಪ್ರಕಟವಾಗಿಲ್ಲ. ೧೭೫೭ರ ಬೊಬ್ಬಿಲಿ ಯುದ್ಧವನ್ನು ವರ್ಣಿಸುವ ಪೆದ್ದ ಬೊಬ್ಬಿಲಿರಾಜ ಕಥೆ, ಬೊಬ್ಬಿಲಿ ಕಥೆ ಎಂಬೆರಡು ಗೇಯಕಥೆಗಳು ಉಂಟು. ಮೊದಲಿನದು ಅಚ್ಚಾಗಿದೆ. ಪೆದ್ದಾಡ ನಾಗೇಶನ ಮಗ ಮಲ್ಲೇಶ ರಚಿತವಾದ ಎರಡನೆಯ ಕಥೆ ಪ್ರಾಚ್ಯಕೋಶಾಗಾರದಲ್ಲಿದೆ. ಸುಂದರವಾದ ರಚನೆ. ಪೆದ್ದಾಪುರದ ಕೋಳಿಹುಂಜಗಳ ಕಥೆ ವಿಜಯನಗರದ ಆನಂದರಾಜ ಮಾಡಿದ ಪೆದ್ದಾಪುರ ಯುದ್ಧವನ್ನು ಕುರಿತದ್ದು. ದೇಶಿಂಗುರಾಜನ ಕಥೆ ಜಿಂಜಿ ದುರ್ಗದಲ್ಲಾಳಿದ ದೇಶಿಂಗುರಾಜನ ವೀರಮರಣ ಗಾಥೆ. ಆರು ಮರಾಠಿಗಳ ಕಥೆಯೆಂಬುದು ಕೊಂಚ ಕಲ್ಪಿತ, ಕೊಂಚ ಸತ್ಯ. ಪೆದ್ದಕಾಪು ಕಥೆ ಎಂಬ ವೆಂಕಟೇಶ್ವರನ ಭಕ್ತನ ಮಹತ್ತ್ವವನ್ನು ಹೇಳುವ ಗಾಥೆಯೊಂದು ಇರುವುದಾದರೂ ಅದರ ಕಥಾವಸ್ತುವನ್ನು ಹಿಡಿದು ಅದನ್ನು ಪದವೆನ್ನಬೇಕೇನೋ ? ಬಂದಿ ಚಿನ್ನಪರೆಡ್ಡಿ ವೀರ; ಆತನು ಹಲವರನ್ನು ನಿಗ್ರಹಿಸಿ ಮಾತನಾಡುವುದರಲ್ಲೂ ತಪ್ಪಿಸಿಕೊಳ್ಳುವುದರಲ್ಲೂ ಘನವಂತ. ಉರಿಗಂಬವನ್ನು ಹತ್ತಿದ ಆತನ ಸಾಹಸಕ್ಕೆ ದೇಶೀಯರಚೇತರ ದೃಷ್ಟಿಯಲ್ಲಿ ಹೊಗಳಿಕೆ ಸಂದಿತು. ಈ ಹಾಡಿನ ವರಸೆ ವರಾಹಾವತಾರ ಚರಿತ್ರೆಯ ವರಸೆಯಂತೆ. ಓೀರಮಂಡಲದಲ್ಲಾಡುವ ಸುಂದರ ನಾರಾಯಣರ ರಾಮಕಥಾ ಸುಧಾರ್ಣವ ಬೊಬ್ಬಿಲಿ ಕಥೆಯ ವರಸೆಯ ಪದ. ವರಸೆಯನ್ನು ಹಿಡಿದು ಪದವೆನ್ನುವುದಕ್ಕಿಂತ ವಸ್ತುವನ್ನು ಹಿಡಿದು ಹೆಸರಿಡುವುದೇ ನ್ಯಾಯ. ನಲ್ಲತಂಗಾಳ್ ತಮಿಳಿನಿಂದ ತೆಲುಗಿಗೆ ಬಂದ ಕಥೆ. ಕನ್ನಡದಿಂದ ಬಂದುದಾವುದೂ ದೊರಕಿಲ್ಲ. ಅರ್ಥಾತು

ನಾಟು ಮನೆಯ ಚರಿತ್ರೆ ಎಂಬುದು ಆ ಕಂಪನಿಯ ದಿವಾಳಿಯನ್ನು ಕುರಿತು ಹೇಳುವ ಹಾಡು.

೮. ಮುತ್ತೈದೆಯರ ಕಥೆ (ಪೇರೆಂಟಾಲು ಕಥೆ)

ದಕ್ಷಯಜ್ಞದ ಸತೀದೇವಿ, ಕನ್ಯಕಾಮ್ಮನವರ ಕಥೆಯನ್ನು ಬಿಟ್ಟರೆ ಕಾಮಮ್ಮನ ಕಥೆಯೇ ಮೊದಲ ಪೇರೆಂಟಾಲು ಕಥೆ (೧೮ನೇ ಶತಮಾನ ?). ಆ ಕಾಲದಲ್ಲಿ ತನ್ನ ಕತೆಯನ್ನು ಬರೆಯ ಹೇಳಿ ರಚೇತ ಮಾದಾಸು ವೆಂಕಯ್ಯನಿಗೆ ಕಾಮಮ್ಮ ೨೫ ವರಹಗಳನ್ನು ಕೊಟ್ಟಳಂತೆ. ಈ ಬಗೆಯದೇ ಸಂನ್ಯಾಸಮ್ಮನ ಕಥೆ. ಈಕೆಯೂ ಕೂಡ ಸತಿ ಮಾಡಿದವಳು. ೧೮೬೭ರ ಶೃಂಗವರದ ಕೋಟ ಎರುಕಮ್ಮ ಸಹಗಮನ ಗಾಥೆಯನ್ನು "ಎರುಕಮ್ಮ ಪೇರೆಂಟಾಲು ಕಥೆ" ಎಂದು ಪ್ರಕಟಿಸಿದೆ. ಮಂಡಪೇಟ ಪಾಪಮ್ಮ ಪೇರೆಂಟಾಲು ಕಥೆ ರಾಜ ಮಂಡ್ರಿಯಲ್ಲಿ ಅಚ್ಚಾಗಿದೆ. ಮಾನರಕ್ಷಣೆಗೋಸ್ಕರವಾಗಿ ಮಗನನ್ನು ತ್ಯಾಗ ಮಾಡಿದ ವೀರರಾಜಮ್ಮನ ಕಥೆ ಕೂಡ ಅಲ್ಲಿಯೇ ಅಚ್ಚಾಗಿದೆ. ಅನಂತಪುರ ಮಂಡಲದಲ್ಲಿ ಮುದಿಯಳ ಕಥೆ, ಕರ್ನೂಲಿನಲ್ಲಿ ದೂದೆಕುಲದ ಸಿದ್ದಪ್ಪನ ಕಥೆ ಇವೆಯೆಂದು ತಿಳಿದುಬಂದರೂ ಸಿಕ್ಕಿಲ್ಲ. ಬವಿನೀಳ್ಳು, ಗುಂಟೂರು, ನೆಲ್ಲೂರು ಜಿಲ್ಲೆಯಲ್ಲಿ ಹಾಡುವ ಹಾಡುಗಳನ್ನು ಬರೆದುಕೊಂಡರೆ ಈ ಸಾರಸ್ವತ ಇನ್ನೂ ತುಂಬಿಕೊಳ್ಳುತ್ತದೆ.

೯. ಸ್ತ್ರೀಯರ ಹಾಡುಗಳು

ಯಾವ ವಾಙ್ಮಯದಲ್ಲೇ ಆಗಲಿ ಹಾಡುಗಳೇ ಮೊದಲು, ಪದ್ಯಗಳು ಅನಂತರವಲ್ಲಿ. ಆದ್ದರಿಂದ ತೆಲುಗಿನಲ್ಲಿ ನನ್ನಯನವರೆಗೆ ಮೊದಲು ಹಾಡು ಗಳು ಹುಟ್ಟಿರಲೇಬೇಕು. ರಾಜಪೋಷಣೆಯ ಸಭಾಸಾಹಿತ್ಯವೇ ಬಿಲವಾಗಿ ಹೋಗುತ್ತಿರುವಾಗ, ಜಾನಪದ ವರ್ಣನೆಯನ್ನಾಧರಿಸಿದ ಹಾಡುಗಳು ಹೇಗೆ ನಿಲ್ಲಲು ಸಾಧ್ಯವಾಗಿವೆ? ಪಾಲ್ಕುರಿಕೆಯು ಹೇಳಿದ ಪದಗಳಿಗೆ ಉದಾಹರಣೆ ಗಳನ್ನು ಈ ದಿನ ಊಹಿಸಿಕೊಳ್ಳಬೇಕಾಗಿದೆಯೇ ಹೊರತು ಆ ಕಾಲದ ಹಾಡುಗಳು ಇವೇ ಎಂದು ಹೇಳಲು ಸಾಧ್ಯವಿಲ್ಲ. ಪ್ರಬಂಧಗಳಲ್ಲಿ ಸುಮಂಗಲಿ ಯರು ಹಾಡಿದ್ದಾರೆನ್ನುವ ಆರತಿ ಹಾಡುಗಳೂ ಸುವ್ವಿ ಹಾಡುಗಳೂ,

ಏಳೆಗಳೂ, ಧವಳಗಳೂ, ಜೋಗುಳಗಳೂ, ಪೂರ್ವಸಂಪ್ರದಾಯದ ನಾಟಕಗಳಲ್ಲಿಯೂ ಯಕ್ಷಗಾನಗಳಲ್ಲಿಯೂ ಕಂಡುಬರುತ್ತಿವೆ. ಚಿಂತಾದೀಕ್ಷಿತರು ಇವೆಷ್ಟನ್ನೋ ಎತ್ತಿ ತೋರಿಸಿದ್ದಾರೆ. ಹಾಡುಗಳ ಹೆಸರನ್ನು ಹಿಡಿದು ಮಾದರಿಯಾಗಿ ವಿಭಾಗಿಸಿ ಪಟ್ಟಿ ಹಾಕಿದ್ದಾರೆ, ಟಿ. ಕಾಮೇಶ್ವರರಾವು ಅವರು. ಇವು ಇನ್ನೂ ವಿಶಾಲವಾದ ವಿಭಾಗಗಳ ಅಡಿಯಲ್ಲಿ ಪಟ್ಟಿ ಹಾಕುವನಿತು ವಿಸ್ತಾರವಾಗಿವೆ.

ಲಾಲಿ ಹಾಡುಗಳೂ, ಜೋಗುಳಗಳೂ ಹಾಡುಗಳಲ್ಲಿ ಮೊದಲ ಮಾದರಿಯೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಲಾಲಿ ಹಾಡುಗಳು ನವರೋಜರಾಗದಲ್ಲಿರುತ್ತವೆ. ಪ್ರತಿ ಚರಣದ ಕಡೆಯಲ್ಲೂ 'ಲಾಲಿ' ಎಂದಿರುತ್ತದೆ. ಇವು ಮುಖ್ಯವಾಗಿ ಮಕ್ಕಳನ್ನು ನಿದ್ದಿಸುವ ಸಲುವಾಗಿ ಅವತರಿಸಿದ್ದರೂ, ಮಕ್ಕಳನ್ನು ತೊಟ್ಟಿಲಲ್ಲಿಟ್ಟು ತೂಗಿ ವಿನೋದಿಸುವಾಗ ಕೂಡ ಹಾಡುತ್ತಾರೆ. ವರಸೆಗಳೂ ರಾಗಗಳೂ ಮಾರ್ಪುಗೊಳ್ಳುತ್ತಲೂ ಇವೆ. ಕಥನಾತ್ಮಕವಾದ ಲಾಲಿ ಹಾಡುಗಳೂ ಇವೆ. ಇವು ಜೋಗುಳೊಡನೆ ಕಲೆತುಹೋಗುತ್ತವೆ. ಜೋಗುಳಗಳು ವಿನೋದಕ್ಕಾಗಿಯೇ ರಚಿಸಿದವು. ಮಕ್ಕಳನ್ನು ತೂಗುತ್ತ ಹಾಡುತ್ತಾರೆ. ಆನಂದಭೈರವಿ, ಶ್ರೀರಾಗಗಳಲ್ಲಿಯೇ ಹೆಚ್ಚಾಗಿ ಇವು ಇರುವುವಾದರೂ ತಾಳ್ಲಪಾಕರ "ಜೋ ಅಚ್ಯುತಾನಂದ" ಹಾಡಿನೊಡನೆ ನವರೋಜದಲ್ಲಿ ಕೂಡ ಇವನ್ನು ಹಾಡುವ ಪರಿಪಾಠವಿದೆ. ಹೆಣ್ಣು ಮಕ್ಕಳ ಕೇಳಿವಾಡುಗಳೂ, ಗಂಡುಮಕ್ಕಳ "ಬುಜುಬುಜರೇಕಲು" ಇವುಗಳ ಪರಿಣತಿಯನ್ನು ತೋರಿಸುತ್ತವೆ. ಬಾಲಗೀತಾವಳಿ, ಗೀತಮಾಲಾ, ಮಕ್ಕಳ ಹಾಡುಗಳು, ಹಿಂದೂಬಾಳಿಕಾಭೂಷಣ, ನಗೆಗಳೂ-ಹೂಗಳೂ, ಮಕ್ಕಳ ಹಾಡುಗಳ ಪುಸ್ತಕಗಳು. ಗುಬ್ಬಿವಾಡುಗಳು ಹತ್ತು, ಮಂದಿ ಬಾಲಿಕೆಯರು ಸೇರಿ ಕೈತಟ್ಟುತ್ತ ಗುಂಡಗೆ ತಿರುಗುವಾಗ ಹೇಳುವ ಹಾಡು. ಸಂಕ್ರಾಂತಿ ದಿನಗಳಲ್ಲಿ ವಿರಳವಾಗಿ ಕೇಳಿಬರುವ ಈ ಗುಬ್ಬಿವಾಡುಗಳೊಳಗೆ ದಶಾವತಾರ ಕಥೆ, ದಶಮಸ್ಕಂಧ, ರಾಮಾಯಣವೂ ಪ್ರವೇಶಿಸಿರುವುದು ಮಾತ್ರವಲ್ಲದೆ ಇವನ್ನು ಸ್ತುತಿಗಳಿಗೂ ಪುಣ್ಯ ಕಥಾಗಾನಕ್ಕೂ ಕೂಡ ಉಪಯೋಗಿಸಿಕೊಂಡಂತೆ ಕಂಡುಬರುತ್ತದೆ. ಮದುವೆಯ ಹಾಡುಗಳಲ್ಲಿ ಎಷ್ಟೋ ಮಾದರಿಗಳುಂಟು. ಮಂಗಳಗೀತೆಗಳೂ, ಆರತಿ

ಹಾಡುಗಳೂ ಸಾವಿರದ ಮೇಲೆಯೇ ಇವೆ. (ಆರಾತ್ರಿಕ>ಆರಾತ್ರಿ>ಆರತಿ ಹೀಗೆ ಬಂದಿರಬಹುದೆಂದು ಚಿಂತಾದೀಕ್ಷಿತರು ಪ್ರಬಂಧಗಳಲ್ಲಿ ಬರುವ ಆ ಜಾತಿಯ ಹಾಡುಗಳಿಂದ ಊಹಿಸುತ್ತಾರೆ). ಕಲ್ಯಾಣದ ಹಾಡುಗಳೂ, ಬಾಗಿಲೆಡೆಯ ಹಾಡುಗಳೂ, ಸಲುಗು ಹಾಡುಗಳೂ, ಬಂತುಲಾಟ ಹಾಡುಗಳೂ, ಬುವ್ವದ ಹಾಡುಗಳೂ, ಎಗತಾಳಿ ಹಾಡುಗಳೂ, ಕೊಟ್ನಗಳ ಹಾಡುಗಳೂ. ಗಂಧಪನ್ನೀರು ಹಾಡುಗಳೂ, ತಾಂಬೂಲದ ಹಾಡುಗಳೂ, ಅಲಕೆ ಹಾಡುಗಳೂ, ದಂಪತಿಗಳ ಹಾಡುಗಳೂ, ಅತ್ತೆಯ ಮನೆಗೆ ಮಗಳನ್ನು ಕಳಿಸಿಕೊಡುವ ಹಾಡುಗಳೂ, ಗೌರೀಕಲ್ಯಾಣದ ಹಾಡುಗಳೂ, ಮಂಗಳಾರತಿ ಹಾಡುಗಳೂ ಮದುವೆ ಹಾಡುಗಳ ಕೆಳಗೆ ಸೇರುವಂಥವು. ದಕ್ಷಿಣ ದೇಶದಲ್ಲಿ ಸ್ಥಿರವಾಗಿ ನೆಲಸಿಬಿಟ್ಟ ತೆಲುಗರ ಮದುವೆ ಕಾಲಗಳಲ್ಲಿ ಶೋಭನಗಳೂ, ಗೌರೀಕಲ್ಯಾಣಗಳೂ ಇಂದಿಗೂ ಕೇಳಿಬರುತ್ತವೆ. ಆ ಕಾರಣ ಇವು ವಿಜಯ ನಗರದ ಕಾಲಕ್ಕೆ ಮೊದಲಿನಿಂದಲೂ ಇದ್ದಿರಬೇಕು. ಶ್ರಾಮಿಕರ ಮದುವೆ ಮನೆಗಳಲ್ಲಿ ಅಲಂಕರಿಸಿದ ಘಟವನ್ನಿಡುವ ಸಂದರ್ಭದಲ್ಲಿ ಅವಿರೇಣಿ ಹಾಡುಗಳನ್ನು ಹಾಡುತ್ತಾರೆ. ಎನ್. ಗಂಗಾಧರರು ಇವನ್ನು ಬಹಳ ಸೇರಿಸಿದ್ದಾರೆ. ಜಿ. ಸುಬ್ಬರಾವು, ಟಿ. ಶೇಷಯ್ಯ ಪಂತುಲು ಮದುವೆ ಹಾಡುಗಳನ್ನು ಬೇಕಾದಷ್ಟು ಬರೆದಿದ್ದಾರೆ. ಲಕ್ಷ್ಮೀಕಲ್ಯಾಣದ ಹಾಡುಗಳೂ, ಹರಿಬುವ್ವದ ಹಾಡುಗಳೂ ಪುಸ್ತಕರೂಪದಲ್ಲಿ ಬಂದಿವೆ.

ಟಿ. ಕಾಮೇಶ್ವರರಾವು, ಎನ್. ಗಂಗಾಧರಂ ಮತ್ತಿತರರು "ಭಾರತಿ" "ಗೃಹಲಕ್ಷ್ಮಿ" ಪತ್ರಿಕೆಗಳಲ್ಲಿ ದ್ವಿಪದಿಗಳಲ್ಲಿರುವ ಹಳೆಯ ಹಾಡುಗಳನ್ನು ಪ್ರಚುರಿಸಿದ್ದಾರೆ. ಇವು ದೇಶವಲೆಲ್ಲಾ ಇರುವುದನ್ನು ನೋಡಿ, ಪ್ರಾಚೀನ ಛಂದಸ್ಸೂ ಆಂಧ್ರದ ನೈಸರ್ಗಿಕ ಛಂದಸ್ಸೂ ಆದ ದ್ವಿಪದಿಗಳಲ್ಲಿರುವುದನ್ನು ನೋಡಿ, ಈ ಹಾಡುಗಳ ಮಾದರಿ ಅತಿ ಪ್ರಾಚೀನವಾದದ್ದೆಂದು ಹೇಳಬೇಕಾಗುತ್ತದೆ. ಪ್ರಮುಖರಾದ ಜಾನಪದ ಸಾಹಿತ್ಯ ಸಂಶೋಧಕರನೇಕರು ಆಸಕ್ತಿವಹಿಸಿ ಶೇಖರಿಸಿದ ಜಾನಪದಗೀತೆಗಳ ಸಂಯುಕ್ತ ಸಂಪುಟ ಇನ್ನೂ ತೆಲುಗಿನಲ್ಲಿ ಬಂದಿಲ್ಲ. ದೇಶವು ಮೊತ್ತದಲ್ಲಿ ಈ ಉದ್ಯಮಕ್ಕೆ ಪ್ರಯತ್ನಿಸಿದಲ್ಲದೆ ಈ ಅಮೂಲ್ಯ ಸಂಪತ್ತು ಕೈಗೆಸಿಕ್ಕದು.

೧೦. ಜಾನಪದ ಗೀತೆಗಳು

ಜಾನಪದ ಗೀತೆಗಳಲ್ಲಿ ಸುಗ್ಗಿಯ ಕಾಲಕ್ಕೆ ಕೇಳಿಬರುವ "ಪೊಲಿಪಾಟಲು" ಮತ್ತು ವಿನಾಯಕನ ಮೇಲೆ ಹಾಡುವ ಹಾಡುಗಳನ್ನು ಮೊದಲು ಹೇಳಬೇಕು. "ಊಡುಪು ಪಾಟಲೂ", "ಕಲುಪುಲೇತ ಪಾಟಲೂ", ಮಳೆರಾಯನ ಮೇಲಿನ ಹಾಡುಗಳೂ, ಕೋಡಂಗಿ ಹಾಡುಗಳೂ, ನಂದಿ ಹಾಡುಗಳೂ, ಏರುವಾಕ ಹಾಡುಗಳೂ, ತೊಲಕರಿ ಪಾಟಲೂ ವ್ಯವಸಾಯಕ್ಕೆ ಸಂಬಂಧಿಸಿದ್ದು. ತೋಟ ನೆಡುವ ಹಾಡುಗಳು "ಜಾಜಾರಮ್ಮಾ ಹೂದೋಟದಲಿ ಜಾಜಿಹೂವು ಹೂತುದು" ಎಂಬಂಥವಿವೆ. ಇಟ್ಟಿಗೆಯನ್ನು ವರಸೆಯಾಗಿ ಮೇಲೆ ನಿಂತವನಿಗೆ ಎಟುಕಿಸುತ್ತ "ಇಡೆಲೋ ಮಗನೇ ಇಡೆಲೋ!" ಎಂಬ ಹಾಡೂ, ಭೂಮಿಯನ್ನು ಅಗೆಯುತ್ತ "ಯಾವೂರು ಭಾಮೆ?—ಗುಂಟೂರು ನಂದು" ಎಂದು ಮಣ್ಣೆತ್ತಿ ಚೆಲ್ಲುವ ಹಾಡೂ, "ಕಡಿಯಯ್ಯ ಕಡಿಯೋ!" ಎಂಬ ಕಾಡುಕಡಿಯುವ ಹಾಡೂ, "ಏತವೆತ್ತೋ ತಮ್ಮಯ್ಯ!" ಎಂಬ ಏತವೆತ್ತುವ ಹಾಡೂ, "ಬಂಡಿಯ ಹಿಂದೆ ಬಂಡಿ ಹೊರಟು" ಎಂಬ ಬಂಡಿಯ ಹಾಡೂ, "ನೆರಾ ನೆರಾ ನೆರಬಂಡಿ" ಮತ್ತು "ದಮ್ಮಿಡೀ" ಎಂಬ ಬಂಡಿಯ ಹಾಡೂ, ಒನಕೆವಾಡುಗಳೂ, ಕುಟ್ಟುವ ಹಾಡುಗಳೂ, ರಾಟೆಯ ಹಾಡುಗಳೂ, ಬೀಸುವ ಕಲ್ಲಿನ ಹಾಡುಗಳೂ, "ತೃಣವೆಮ್ಮ ತಾಯಿ" ಎಂಬ ಹುಲ್ಲುಕೊಯ್ಯುವ ಹಾಡುಗಳೂ—ಕೆಲಸದ ಹಾಡುಗಳು. ಕೋಲಾಟದ ವಿನೋದದ ಹಾಡುಗಳ ಎರಡು ಪುಸ್ತಕಗಳು ಬಂದಿವೆ. ಕೆಲವು ಹಾಡುಗಳನ್ನು ಎ. ಐ. ಅರ್. ಅವರು ಪ್ರಸಾರಮಾಡಿದ್ದಾರೆ. ಎರಡು ವೀರಗಾಥೆಗಳು ಸಂತೆಯನ್ನು ಕುರಿತವು. "ಯಾವೂರು ಯಾದೇಶ ನಿನ್ನದೆಲೆ ಹೆಣ್ಣೆ?", "ತಿರುನಾಳ್ಲು", "ಶುಕ್ರವಾರದ ಸಂತೆಯಲ್ಲಿ" ಎಂಬವು ಇಂಥವು. ಕೆಲವು ಹಾಡುಗಳು ಪ್ರತ್ಯೇಕಾಕರ್ಷಕ ಘಟನೆಗಳ ಸುತ್ತ ಕಟ್ಟಿದವು. ಹತ್ತಾರು ದೋಣಿ ನಡಸುವ ಹಾಡುಗಳು ಕಂಡು ಬರುತ್ತವೆ. ಪ್ರಗಲ್ಭೆಯಾದ ಗೃಹಿಣಿಗೆ ಬುದ್ಧಿ ಹೇಳುವುದು ಮುಂತಾದ ಪ್ರೇಮಗೀಯಗಳೆಷ್ಟೋ ಪಾಠಕರ ಅನುಭವಕ್ಕೆ ಬಂದವೇ ಆಗಿವೆ. ಚಲ್ ಮೋಹನರಂಗ ಹಾಡುಗಳೂ. ಘುಮ್ ಘುಮಾ ಹಾಡುಗಳೂ, ದೋಣಿ ಹಾಡುಗಳೂ, ತಿಲ್ಲಾಲೆ ಹಾಡುಗಳೂ ಕೆಲವು ಪ್ರಕಾಶಕರಿಂದ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಚೆನ್ನಪುರಿ ಶೃಂಗಾರಗೀತೆಗಳೆಂದು ಟಿ. ಕೆ. ಯತಿರಾಜಲು ಕೆಲವು ಹಾಡುಗಳನ್ನು ಬರೆದು ಅಚ್ಚುಹಾಕಿದ್ದಾರೆ.

೧೧. ವೇದಾಂತ ಗೀತೆಗಳು

ವೇದಾಂತದ ಹಾಡುಗಳು ಬಹಳ ಬಂದಿವೆ. ವೀರಶೈವದ ಪ್ರಚಾರ ಕಾಲದಲ್ಲಿ ಕಾಲಜ್ಞಾನತತ್ತ್ವಗಳನ್ನು ಹೇಳುವುದು ಆರಂಭವಾಯಿತು. ಮಡಿವಾಳ ಮಾಚಯ್ಯ, ಅಲ್ಲಮಪ್ರಭು ಕಾಲಜ್ಞಾನತತ್ತ್ವಗಳನ್ನು ಹೇಳಿದರಂತೆ. ಸಿದ್ಧರಾಮಯ್ಯ ಕಾಲಜ್ಞಾನವನ್ನು ರಚಿಸಿದ್ದಾನೆ. ತರುವಾಯದ ಸಂನ್ಯಾಸಿಗಳೂ ರಚಿಸಿದ್ದಾರೆ.

ಸಿದ್ದಪ್ಪ, ಪೋತಲೂರಿ ವೀರಬ್ರಹ್ಮಮು, ಮಹಮ್ಮದೀಯ ಯೋಗಿಗಳೂ ಜಾತಿಯನ್ನೂ ಕರ್ಮಕಾಂಡವನ್ನೂ ನಿರಸನಗೊಳಿಸುವ ರಚನೆಯನ್ನು ಮಾಡಿದ್ದಾರೆ. ಸಭಾಸಂಪರ್ಕವೂ, ಸಂಸ್ಕಾರವೂ ಇದ್ದಂಥ ವೇಮನ್ನ ದ್ವಿಪದಿಯಲ್ಲಿ ಅಲ್ಲದೆ ಆಟವೆಲದಿ ಪದ್ಯದಲ್ಲಿ ವೇದಾಂತವನ್ನು ಬೋಧಿಸಿದ್ದಾನೆ. ಸಾಧ್ಯವಿದ್ದವರು ಹಾಡುಗಳಲ್ಲಿ ತತ್ತ್ವಗಳನ್ನು ಹೇಳಿದ್ದಾರೆ. ಸಿದ್ದಪ್ಪ ಕುಲತತ್ತ್ವವನ್ನು ಏಕೀಕರಿಸಿದ್ದಾನೆ. ಕೀಳುಕುಲದವರೆಂದುಕೊಳ್ಳುವವರಿಗೆ ತತ್ತ್ವಗಳು ಆಯುಧಗಳಾಗಿವೆ. ಆತ್ಮಬೋಧಾಮೃತ ತತ್ತ್ವಗಳೂ, ತಾರಕಾಮೃತ ಸಾರವೂ, ಶುದ್ಧ ನಿರ್ಗುಣತತ್ತ್ವ ಕಂದಾರ್ಥಗಳೂ, ಗೋಪಂ ಜಗನ್ನಾಥ ಅದ್ವೈತ ಕೀರ್ತನೆಗಳೂ, ಶುದ್ಧ ನಿರ್ಗುಣತತ್ತ್ವ ದ್ವಿಪದಾರ್ಥಗಳೂ ಈ ವಿಧವಾದ ರಚನೆಗಳು. ಯಡ್ಲ ರಾಮದಾಸನ ಚರಿತ್ರೆ ಈ ಶ್ರೇಣಿಯಲ್ಲಿ ಕಡೆಯದು.

೧೨. ಕೀರ್ತನೆಗಳು

ಆಂಧ್ರವಾಙ್ಮಯವು ಪದ್ಯಕಾವ್ಯಗಳ ದ್ವಾರ ಮಾರ್ಗಪದ್ಧತಿಯನ್ನೂ, ಪದಕಾವ್ಯಗಳ ದ್ವಾರ ದೇಶೀಪದ್ಧತಿಯನ್ನೂ ವಿಸ್ತರಿಸಿದೆ. ಹಾಡುಗಳು ದೇಶಿಗೂ ಮಾರ್ಗಕ್ಕೂ ಸಂಗಮಸ್ಥಾನ. ಇವು ಪಂಡಿತ ಪಾಮರರಿಬ್ಬರಿಗೂ ಉದ್ದೇಶಿಸಿದವು. ಪಂಡಿತ ಕವಿಗಳು ಇವನ್ನು ಅವರ ಕಾವ್ಯರಚನೆಯಲ್ಲಿ ಹೊರಗಿಟ್ಟರೂ, ದೇಶಿಕವಿಗಳು ತಮ್ಮ ಪದಗಳಲ್ಲಿ ಇವನ್ನು ಧಾರಾಳವಾಗಿ ಸ್ವೀಕರಿಸಿ ಜಂಗಂಕಥೆ, ಯಕ್ಷಗಾನ, ನಾಟಕಗಳನ್ನು ಸೃಷ್ಟಿಸಿಕೊಂಡಿದ್ದಾರೆ. ನಾಟಕಗಳನ್ನು ಸಂಸ್ಕೃತ ಪದ್ಧತಿಯಲ್ಲಿ ಬರೆದರೆ ಅವುಗಳಲ್ಲಿ ಹಾಡುಗಳನ್ನು

ಉಪಯೋಗಿಸದಂತಾಯಿತು. (ರತ್ನಾವಳಿಯೊಂದರಲ್ಲಿ ಬಹುಶಃ ಸಂಸ್ಕೃತ ಕೀರ್ತನೆಯಿದೆ.) ಆ ಕಾರಣ ದೃಶ್ಯಪ್ರದರ್ಶನ ವ್ಯಾಮೋಹದಿಂದ ಪಂಡಿತರು ನಾಟಕಗಳನ್ನು ಸಹಿಸುವುದು ಮಾತ್ರವಲ್ಲದೆ ಆನಂದಿಸುತ್ತಾರೆ. ತಮ್ಮ ಪಾಂಡಿತ್ಯ ಕಂಡೂತಿ ಶಮನಾರ್ಥವಾಗಿ ಈಚೆಗೆ ಗೊಲ್ಲಕಲಾಪವನ್ನು ಸೃಷ್ಟಿಸಿ ಕೊಂಡಿದ್ದಾರೆ. ದೇಶಿ ಕವಿಗಳ ಹಾಡುಗಳು ಮತಪ್ರಚಾರಕ್ಕೆ ಚೆನ್ನಾಗಿ ಉಪಯುಕ್ತವಾದವು. ಬರಬರುತ್ತ ಮಾರ್ಗಕವಿತ್ವದಲ್ಲಿನ ಚಾಟುಪದ್ಯಗಳಿಗೆ ಇವು ಸಮಾನವೆನಿಸಿದುವು, ತಾಳ್ಲಪಾಕರು ಹರಿಸಂಕೀರ್ತನೆಗಳಿಗೆ ಹಿಡಿದ ಪಟ್ಟನ್ನು ಎಲ್ಲ ಕೀರ್ತನೆಗಳಿಗೂ ಹಿಡಿದಿದ್ದರೆ ತೆಲುಗು ಸಾಹಿತ್ಯದಲ್ಲಿ ಕೀರ್ತನೆ ಗಳ ಸಂಖ್ಯೆ ಮಿಗಿಲಾಗುತ್ತಿತ್ತು. ರಾಜರುಗಳೇಕೋ ಕೀರ್ತನೆಗಳನ್ನು ಅಭಿ ಮಾನಿಸಲಿಲ್ಲ. ಕನ್ನಡದೇಶದ ಪುರಂದರದಾಸರು ನಾಲ್ಕು ಲಕ್ಷಕ್ಕೆ ಮೀರಿ ಕೀರ್ತನೆಗಳನ್ನು ರಚಿಸಿದ್ದಾರಂತೆ. ತಾಳ್ಲಪಾಕರ ಸಂಗತಿ ಹೇಳರೇಕೋ? ಕ್ಷೇತ್ರಯ್ಯನದು ನಾಲ್ಕು ಸಾವಿರ ಪದಗಳಿವೆ ಎನ್ನುತ್ತಾರೆ. ಆ ಕಾರಣ ಕೀರ್ತನೆಗಳ ರಚನೆ ಸಾವಿರದ ಮೇಲಿವೆಯೆಂದರೆ ಆಶ್ಚರ್ಯವಿಲ್ಲ. ತಾಳ್ಲಪಾಕರಿಗೆ ಪೂರ್ವದಿಂದ ಎಂದರೆ ೧೫ನೆಯ ಶತಾಬ್ದದ ಆರಂಭದಿಂದ ಪಾಲ್ಕುರಿಕೆ ಕಾಲದ ಪದಗಳು ಸರಳವಾಗಿ ಕೀರ್ತನೆಗಳಾದವೆನ್ನಬಹುದು. ಇವಲ್ಲಿ ಅಕ್ಷರಕ್ಕೊಂದು ಸ್ವರ ಹಾಕುವಂತಿದ್ದು ಸಂಗೀತವು ಸಾಹಿತ್ಯಕ್ಕೆ ಅಲಂಕಾರ ಮಾತ್ರವಾಗಿ ಉಪಯೋಗವಾಗುತ್ತದೆ. ಪುರಂದರದಾಸರ ಕಾಲದವರೆಗೂ ಶಂಕರಾಭರಣ ಸ್ವರಗಳೇ ಸಾಮಾನ್ಯವಾಗಿ ಬಳಕೆಯಾಗುತ್ತಿದ್ದವು (೧೪೮೫). ಹಿರಿಯ ಸಾಹಿತಿಗಳು ಪದಗಳನ್ನು ಅವಜ್ಞೆಮಾಡಿದರೂ ದೇಶೀಪದಗಳಲ್ಲಿ ೩, ೪, ೫ ಸ್ವರಗಳ ಬಳಕೆಯನ್ನು ಸಂಗೀತ ಶಾಸ್ತ್ರಕಾರರು ಗುರ್ತಿಸಿ ಆರ್ಚಿಕ, ಗಾಥಿಕ, ಸಾಮಿಕ, ಸ್ವರಾಂತರ ಷಾಡವಗಳೆಂಬ ಹೆಸರಿನಿಂದ ಗೌರವಿಸಿದರು. ಪುರಂದರದಾಸರು ಶಂಕರಾಭರಣ ಸ್ವರಗಳಿಗೆ ಬದಲು ಮಾಯಾಮಾಳವಗೌಳ ಸ್ವರವನ್ನು ಪ್ರವೇಶಮಾಡಿಸಿ ಸಂಗೀತಸಾಧನೆಯನ್ನು ಸುಲಭಮಾಡಿ ಕರ್ನಾಟಕ ಸಂಗೀತ ಪಿತಾಮಹರಾಗಿದ್ದಾರೆ. ತೆಲುಗುಪಂಡಿತರಾದರೂ ಜಯದೇವನ ಚಂಪೂ ಕಾವ್ಯಪದ್ಧತಿಯನ್ನು ಸ್ವೀಕರಿಸಿದ್ದರೆ ತೆಲುಗುದೇಶದಲ್ಲಿ ಸಂಗೀತವು ಚೆನ್ನಾಗಿ ವೃದ್ಧಿಯಾಗುತ್ತಿತ್ತು. ಅನ್ನಮಾಚಾರ್ಯನ ಕಾಲಕ್ಕೆ (೧೫ನೇ ಶ.) ಸಂಗೀತವು ರಾಗವೃದ್ಧಿಯನ್ನು ಹೊಂದಿದರೂ, ಹನ್ನೆರಡು ಪಾದಗಳೇ

ಬರಬೇಕೆಂಬ ಸಂಕೀರ್ತನೆಗಳ ಸಾಹಿತ್ಯಕ್ಕೆ ಅಡಿಯೊತ್ತಿತು. ಆ ಕಾಲದಲ್ಲಿ ತಿರುಪತಿಯಲ್ಲಿಯಂತೆ ಇತರ ದೇವಸ್ಥಾನಗಳಲ್ಲಿಯೂ ಸಂಕೀರ್ತನೆಗಳು ಜರುಗುತ್ತ ಕೀರ್ತನ ರಚನೆ ಸಾಗುತ್ತಿರಬೇಕು (೧೫೨೫). ತೆಲುಗುನಾಡಿನ ಶ್ರೀ ಕಾಕುಳಾಂಧ್ರದೇವನಿಗೆ ಕೃಷ್ಣರಾಯರವರೆಗೂ ನಿತ್ಯಕೈಂಕರ್ಯಗಳು ಜರುಗುತ್ತ ಇದ್ದುವು. ಕೂಚಿಪೂಡು ನಟುವರು ವಿಜಯನಗರದ ವೀರ ನರಸಿಂಹರಾಯರನ್ನು (ಕೃಷ್ಣದೇವರಾಯರ ಅಣ್ಣ) ಮೆಚ್ಚಿಸಿ ಬಹುಮಾನ ಹೊಂದಿದಾರೆ. ವಿಜಯನಗರದ ವಿಧ್ವಂಸಾನಂತರ ಸಂಗೀತ ಸಾಹಿತ್ಯಕಲೆ ದಕ್ಷಿಣಾದಿಗೆ ಹೋಗುವಾಗ, ವೃತ್ತಪನ್ನನಾದ ಕ್ಷೇತ್ರಯ್ಯ ಸನ್ಮಾನಗಳಿಗಾಗಿ ದಕ್ಷಿಣಾದಿಗೆ ಹೋಗಬೇಕಾಗಿ ಬಂತು. ನಾಟ್ಯಕ್ಕೆ ಅಂಗವಾದ ಅಭಿನಯಕ್ಕೆ ಅಕ್ಕರೆ ಬಂದಂತೆ ಪದಗಳನ್ನು ಹೆಣೆಯುವಾಗ ಕ್ಷೇತ್ರಯ್ಯ ತನ್ನ ಪದಗಳನ್ನು ಪ್ರಥಮಕಾಲಕ್ಕಿಳಿಸಿ ಮಾತುಗಳ ಪ್ರಾಧಾನ್ಯವನ್ನು ತಗ್ಗಿಸಿದ್ದಾನೆ. ಪದವು ಸಾಹಿತ್ಯಕ್ಕಿಂತ ಸಂಗೀತದಲ್ಲಿ ತಪ್ಪದೆ ಬರುತ್ತದೆ. ಆದರೂ ಉತ್ತರಾಂಧ್ರ ಸೀಮೆಯಲ್ಲಿ ರಾಮದಾಸರ ಕೀರ್ತನೆಗಳನ್ನು ಸ್ವಲ್ಪ ಸಾಹಿತ್ಯ, ಸ್ವಲ್ಪ ಸಂಗೀತ ದೊಡನೆ ರಚಿಸಿದ್ದಾರೆ, ಅವರ ಕೀರ್ತನೆಗಳಿಗೆ ಅಕ್ಷರಸ್ವರಗಳಿರುತ್ತವೆ. ತರುವಾಯ ಕನ್ನಡದೇಶದ ಹರಿದಾಸೋದ್ಯಮವೂ, ಮಹಾರಾಷ್ಟ್ರ ಕಾಲ ಕ್ಷೇಪೋದ್ಯಮವೂ ತೆಲುಗುನಾಡಿನಲ್ಲಿ ದಾಸಪರಂಪರೆಯನ್ನು ತಂದಿತು. ಅದ್ವೈತ, ಭಕ್ತಿಪ್ರಚಾರಗಳಲ್ಲಿ ಜಾತಿಭೇದವಿಲ್ಲದೆ ಹೋಗುವುದರಿಂದ ಜನ ಸಾಮಾನ್ಯವೆಲ್ಲ ಈ ಹಾಡುಗಳ ಮೇಲೆ ಆಸಕ್ತಿವಹಿಸಿದರು. ಅದ್ವೈತ ಯೋಗಿಗಳು ಗುರುವನ್ನೂ, ಸಮರ್ಥರು ಈಶ್ವರನನ್ನೂ ಪ್ರಧಾನವಾಗಿ ಹೇಳಿದರು. ನಮ್ಮ ಕೀರ್ತನ ಸಾಹಿತ್ಯವನ್ನು ಈ ದೃಷ್ಟಿಯಿಂದ ನೋಡಿ ಎರಡು ವಿಶಾಲಭಾಗಗಳಾಗಿ ವಿಂಗಡಿಸಬಹುದು. ಗುರುಸ್ತುತಿ, ಜಾತಿನಿರಸನ, ಜ್ಞಾನಪ್ರಧಾನತೆಯ ಮೇಲೆ ಬರುವ ಹಾಡುಗಳೊಂದು ಭಾಗ. ಪ್ರಸನ್ನ ತಾಮುಮುಕ್ಷುತ್ವವನ್ನೂ, ಭಗವದ್ಭಕ್ತಿಯನ್ನೂ ಮುಖ್ಯವಾಗಿ ಹೇಳುವ ಹಾಡುಗಳೊಂದು ಭಾಗ. ಮೊದಲ ಮಾದರಿಯ ಹಾಡುಗಳನ್ನು ಪೋತಲೂರಿ ವೀರಬ್ರಹ್ಮಯೋಗಿ, ಸಿದ್ದಪ್ಪ, ಜಂಗಂ ಅಮರಲಿಂಗಂ, ಶೇಷರಾಜ, ಚೆಂಚು ರಾಜ, ಪೋಕಲ ಶೇಷಾಚಲಸ್ವಾಮಿ ಮತ್ತು ಅವರ ಶಿಷ್ಯವರ್ಗದವರೂ ಹೇಳಿದ್ದಾರೆ. ಕನ್ನಡದಲ್ಲಿ ಕನಕದಾಸರು ಹೇಳಿದ ಕೀರ್ತನೆಗಳ ಕುಲಾಧಿಕ್ಯನಿರಸನ

ಸಿದ್ಧಪ್ಪನ ಹಾಡುಗಳಲ್ಲಿ ನೂರಕ್ಕೆ ನೂರುಪಾಲುಕಾಣುತ್ತದೆ. ವೀರಬ್ರಹ್ಮರವರ ಕಾಲಜ್ಞಾನತತ್ತ್ವಗಳು, ಗುಜ್ಜಲ ನಾರಾಯಣದಾಸರ ತಾರಕಾಮೃತ ಸಾರ, ಆತ್ಮಬೋಧಾಮೃತ, ಚೇತಪೂಡಿ ಪರಬ್ರಹ್ಮದಾಸರ ಬ್ರಹ್ಮಾನಂದ ಕೀರ್ತನೆಗಳು, ಯಲ್ಲಯದಾಸರ ಗುರುಜ್ಞಾನಾಮೃತ, ಗೋಪಂ ಜಗನ್ನಾಥರ ಅದ್ವೈತಾಮೃತ, ಗೊಲ್ಲಪೂಡಿ ರಾಮಲಿಂಗಶಾಸ್ತ್ರಿಗಳ ಶಿವೈಕಾಂತಸೇವೆ, ಭೋಜದಾಸು ಅಚಲ ಸದ್ಗುರು ಸಂಕೀರ್ತನೆಗಳೂ, ಬ್ರಹ್ಮಾನಂದ ಸರಸ್ವತೀ ಸ್ವಾಮಿಗಳ ಮುಕ್ತಿಕಾಂತೆಯ ಅರಿವು, ರಾಮಾನಂದಸ್ವಾಮಿಯವರ ಅಪರೋಕ್ಷಾನುಭವವೂ ಜ್ಞಾನಮಾರ್ಗ ರಚನೆಗಳು. ನಿರ್ಗುಣತತ್ತ್ವವನ್ನು ಬೋಧಿಸುವ ಕಂದಾರ್ಥಗಳು ಕೂಡ ಇವೆ. ಪರಶುರಾಮ ಶ್ರೀ ನರಸಿಂಹದಾಸರ ಸೋದರಿ ಶೇಷಮಾಂಬ ರಚಿಸಿದ ಬ್ರಹ್ಮೈಕಬೋಧ ಎಂಬ ದ್ವಿಪದೀಕಾವ್ಯವೂ ಉಂಟು. ಕನ್ನಡದೇಶದ ಹರಿದಾಸೋದ್ಯಮವು ಮುಮುಕ್ಷುಗಳಾದ ನರಹರಿ ತೀರ್ಥರೂ, ವ್ಯಾಸರಾಜಸ್ವಾಮಿ, ಪುರಂದರದಾಸ, ಕನಕದಾಸರಂಥವರಿಂದ ಉಪದೇಶಪಡೆದ ಶಿಷ್ಯಪರಂಪರೆಯಿಂದ ಪ್ರಸರಿಸಿತು, ಈ ವರ್ಗದವರ ರಚನೆ ಸಂಖ್ಯಾತೀತ.

ಭಕ್ತಿಕೀರ್ತನೆಗಳು ಅಸಂಖ್ಯಾತವಾಗಿವೆ. ಒಂದೊಂದು ಭಜನ ಮಂದಿರಕ್ಕೆ ಒಂದೊಂದು ಕೀರ್ತನೆಯ ಪುಸ್ತಕವಿರುತ್ತದೆ. ಪ್ರತಿ ಕೀರ್ತನೆಯಲ್ಲೂ ಕಡೆಯಲ್ಲಿ ಮಕುಟ (ಅಂಕಿತ) ವಿರುತ್ತದೆ. ಗುರುಪೂಜಾಕೀರ್ತನೆ, ರಾಮನಾಮ, ರಾಮನಾಮ ಮಾಹಾತ್ಮ್ಯ, ಭಗವನ್ನಾಮ ಸಂಕೀರ್ತನೆಗಳು, ಪ್ರಸನ್ನರಾಘವ ದಿವ್ಯನಾಮ, ಶಿವನಾಮ ಸಂಕೀರ್ತನೆಗಳು, ಪಂಚವಿಂಶತಿ ತತ್ತ್ವಗಳು, ಹರಿಭಜನ ಕೀರ್ತನೆಗಳು, ರಾಮಭಜನಾಮೃತ ಕೀರ್ತನೆಗಳು, ಶ್ರೀಹರಿನಾಮ ಸಂಕೀರ್ತನೆಗಳು, ಚೆನ್ನಕೇಶವ ಭಜನಕೀರ್ತನೆಗಳು, ಸೀತಾರಾಮ ಭಜನ ಕೀರ್ತನೆ, ವಿಠಲೇಶ್ವರ ಭಜನ ಕೀರ್ತನೆ, ಪಂಡರಿನಾಮಾವಳಿ ಕೀರ್ತನೆ, ಚತುರ್ವಿಂಶತಿ ಕೀರ್ತನೆ, ರಾಮಾನಂದ ಪ್ರಭಾವ ತತ್ತ್ವಂ, ತಿರುನಾಮಗಳು, ಪಾಂಡುರಂಗ ಬೃಂದಾವನ ಸಂಕೀರ್ತನೆ, ಭಕ್ತಿಸಾರ ಸಂಗ್ರಹ ಕೀರ್ತನೆ— ಇನ್ನೆಷ್ಟೋ ದಾಸರಚಿತವಾದ ಕೀರ್ತನೆಗಳೂ ಕಂಡುಬರುತ್ತವೆ.

೧೩. ಸಂಕೀರ್ಣಕ

ಪದ್ಯಕಾವ್ಯಗಳು ಮಾತ್ರವೇ ಸಭಾಗೌರವವನ್ನು ಪಡೆದ ಕಾರಣವಾಗಿ ಕೀರ್ತನೆಗಳನ್ನು ಸೇರಿಸಿದ ಚಂಪೂಕಾವ್ಯಗಳು ಖ್ಯಾತಿಗೆ ಬರಲಿಲ್ಲ. ಮೊತ್ತದಲ್ಲಿ ದ್ವಿಪದಿಗಳಂಥ ಪದಗಳಲ್ಲಿ ನಡೆದು ನಡುವೆ ಕೀರ್ತನೆಗಳು ಬಂದಿರುವ ಕಾವ್ಯಗಳು, "ಕಮ್ಮವಾರ ಪಡತಿ"ಯು ಹಾಗೆ ಬೊಬ್ಬಿಲಿ ಕಥೆಯಲ್ಲಿಯೇ ನಡೆಯುತ್ತ ನಡುವೆ ಕೀರ್ತನೆಗಳನ್ನು ಪಯೋಗಿಸಿದುವು. ಬಾಲಕೃಷ್ಣಲೀಲೆಗಳು, ಸೂಕ್ಷ್ಮರಾಮಾಯಣ, ಪುರಂದರದಾಸರ ಚರಿತ್ರೆ, ಶಾರದ ರಾಮಾಯಣ, ರಾಮಯಾಣ ಕೀರ್ತನೆಗಳು, ರಾಮ ರಾಮಶತಕ, ಸಾರಂಗಧರ ಚರಿತ್ರೆ, ಶಾರದ ಹರಿಶ್ಚಂದ್ರ, ನರಸಿಂಹ ನಕ್ಷತ್ರಮಾಲಿಕೆ, ಆದ್ಯಂತವೂ ಕೀರ್ತನೆಗಳನ್ನೇ ಉಪಯೋಗಿಸಿರುವ ಕಾವ್ಯಗಳು. "ಬತುಕಮ್ಮಪಾಟ"ದ ಹಾಗೆ ಗೋವಿಂದನಾಮಗಳ ವರಸೆಯಂಥರಚನೆಗಳೂ; ರಾಮಾನುಜ ದಾಸರ ಲಿಂಗಮ್ಮ ಚರಿತ್ರೆ, ಕಂದ ಸ್ವಾಮಿ ಸುಮನೋಲ್ಲಾಸಿನೀ ಹಾಗೆ ಕೀರ್ತನೆಗಳೂ, ಪದ್ಯಗಳೂ; ರಾಮಃಪುತ್ರಿ, ಉಮಾಮಹೇಶ್ವರ ವಿಲಾಸದಂತಹ ಕೀರ್ತನೆಗಳೂ; ವಚನಗಳನ್ನು ಬಳಸಿದ ಕಾವ್ಯಗಳೂ; ಇವಷ್ಟನ್ನೂ ತೆಲುಗಿನಲ್ಲಿ ಚಂಪೂಕಾವ್ಯಗಳೆಂದು ಗಣಿಸುತ್ತಾರೆ. ಪದ್ಯವೂ, ಕೀರ್ತನೆಗಳೂ, ವಚನ, ಏಳೆ, ತೇವಾರ, ತೋಹರಗಳೆಲ್ಲವನ್ನೂ ಬಳಸಿದ ಯಕ್ಷಗಾನಗಳೂ ಈ ಚಂಪೂಕಾವ್ಯದ ಗುಂಪಿಗೆ ಸೇರುತ್ತವೆ. ಪದ್ಯಗಳ, ಕೀರ್ತನೆಗಳ ಕಾವ್ಯಗಳು ಬೆಳೆದಂತೆ ಪದ್ಯಾರ್ಥಗಳ ಕಾವ್ಯಗಳು ಕೂಡ ಚಿಕ್ಕಚಿಕ್ಕವು ಬಂದಿವೆ. ಪದ್ಯಾರ್ಥಗಳೆಂದರೆ ಸ್ವಲ್ಪಮಟ್ಟಿಗೆ ಪದ್ಯದ ಹಾಗೆಯೇ ನಡೆದು ಮಿಕ್ಕ ಸ್ವಲ್ಪ "ದರುವು"ಗಳಂತೆ ನಡೆಯುವುದು. (ಕೀರ್ತನೆಗೆ ತಾಳದ ಬಿಗಿಯಿದ್ದರೆ "ದರುವು" ಎಂದೂ, ರಾಗ ಪ್ರಾಧಾನ್ಯವಿದ್ದರೆ 'ಕೃತಿ' ಎಂದೂ ಎನ್ನಬಹುದು. ಕೀರ್ತನೆಯೊಡನೆ ನೃತ್ಯ ಕಲೆತರೆ ದರುವು, ರಾಗ ಕಲೆತರೆ 'ಕೃತಿ' ಎಂದು ಕೂಡ ಹೇಳಬಹುದೇನೋ?). ಇವು ಅತ್ತ ಪದ್ಯಕ್ಕೂ ಇತ್ತ ಕೀರ್ತನೆಗೂ ಮೈತ್ರಿತರುತ್ತವೆ. ಕಂದಾರ್ಥಗಳೂ, ದ್ವಿಪದಾರ್ಥಗಳೂ, ಸೀಸಾರ್ಥಗಳೂ ಉತ್ಪಲಾರ್ಥಗಳೂ ಇವೆ. ಕೆಲವು ಪದ್ಯಾರ್ಥಗಳು ಇನ್ನೂ ಲಭಿಸಿಲ್ಲ. ಪದ್ಯಗಳು ಸಾಮಾನ್ಯವಾಗಿ ಮೂರಕ್ಷರದ ಗಣಕ್ಕೆ ವಿಭಜಿಸುತ್ತವೆ. ಆದ್ದರಿಂದ 'ಕಿಟತಕ', 'ಕಿಟತಕ' ಎಂಬ ಆವೃತ್ತಿಗಳಂತೆ ಸ್ಫುರಿಸುವ ಹಾಗೆ ಕಂದ, ದ್ವಿಪದಿ, ಸೀಸ, ಉತ್ಪಲಮಾಲೆಗಳನ್ನು ನಡೆಸಬಹುದು. ಹಾಗೆ

ನಡಸಿ, ನಡುವಣ ಘಟ್ಟದಲ್ಲಿ ಹಾಡುಗಳ ಹಾಗೆ ಪೂರ್ತಿ ಮಾಡಿದರೆ ಈ ಅರ್ಥಪದ್ಯಗಳು ಮೂಡುತ್ತವೆ. ಇವು ಯಕ್ಷಗಾನ ನಾಟಕಗಳಲ್ಲಿ ಕಂಡು ಬರುತ್ತವೆ, ಅಲ್ಲಿಂದಲೇ ದೇಶಿಕವಿಗಳ ವಾಡಿಕೆಯಲ್ಲಿ ಬಂದಿವೆ, ಶುದ್ಧ ನಿರ್ಗುಣ ತತ್ತ್ವಕಂದಾರ್ಥ ದರುವುಗಳೂ, ದ್ವಿಪದಾರ್ಥದರುವುಗಳೂ, ಪುಸ್ತಕ ರೂಪದಲ್ಲಿ ಬಂದಿವೆ. ಆತ್ಮಾನಂದ ಅನುಭವಾಮೃತವು ಕಂದಾರ್ಥದಲ್ಲಿ; ಅಲಮೇಲುಮಂಗ ಸಂವಾದಗಳು ಉತ್ಪಲಾರ್ಥದಲ್ಲಿ; ಸೀಸಾರ್ಥಗಳು ಯಕ್ಷ ಗಾನದಲ್ಲಿವೆಯಾದರೂ, ಕಂದಾರ್ಥಗಳು ಮಾತ್ರ ಬಿಡಿಯಾಗಿ ಹೆಚ್ಚಾಗಿ ಕಾಣುತ್ತವೆ. ಯಕ್ಷಗಾನಗಳು ಮಿಶ್ರಕಾವ್ಯಗಳು. ಮುಖ್ಯವಾಗಿ ಹಾಡಿ ಕೊಳ್ಳುವುದಕ್ಕೇ ರಚಿತವಾದಾಗ್ಯೂ, ಯಕ್ಷರ ವೇಷಭೂಷಣಗಳೂ, ತಾಳ ತಂಬಟೆಗಳೂ, ಪ್ರದರ್ಶನವನ್ನು ಸೂಚಿಸುತ್ತವೆ. ನಾಟಕಗಳು ಪೂರ್ತಿಯಾಗಿ ಪ್ರದರ್ಶನಗಳು, ಯಕ್ಷಗಾನಗಳು ತೆಲಂಗಾಣದಲ್ಲಿಯೂ, ನಾಟಕಗಳು ರಾಯಲಸೀಮೆಯಲ್ಲಿಯೂ ತುಂಬ ವೃದ್ಧಿಯಾಗಿವೆ. "ಉಷಾಪರಿಣಯ," "ಪಾರಿಜಾತ" ಸ್ವಲ್ಪ ಪ್ರದರ್ಶಿತವಾದರೂ, ಉಷಾ, ಸತ್ಯಭಾಮೆಯರ ಅಭಿನಯಕ್ಕೇ ಪ್ರಾಮುಖ್ಯವಲ್ಲದೆ ನಟನೆಗಲ್ಲ. ಚಾಳುಕ್ಯ ಸೀಮೆಯಲ್ಲಿ ಲಾಸ್ಯಾಭಿನಯಗಳೂ, ಪಾಂಡಿತ್ಯ ಪ್ರದರ್ಶನವನ್ನಾಕ್ರಮಿಸುವ ಭಾಗವತಗಳೂ ಗೊಲ್ಲಕಲಾಪಗಳೂ ವೃದ್ಧಿಯಾಗಿವೆ. ಕೊರವರ ನಾಟಕ (ಚೆಂಚುನಾಟಕ) ದಲ್ಲಿ ಕೂಡ ನೃತ್ಯವೇ ಮುಖ್ಯ. ವಿಜಯನಗರದ ಕಾಲಕ್ಕೇ ಯಕ್ಷಗಾನಗಳು, ನಾಟಕಗಳು ಪ್ರದರ್ಶಿತವಾಗುತ್ತಿದ್ದು ಆ ರಾಜ್ಯ ನಾಶವಾದ ತರುವಾಯ ದಕ್ಷಿಣಾದಿಗೆ ವಲಸೆ ಹೋದವು. ರಘುನಾಥ ನಾಯಕ, ವಿಜಯರಾಘವ ನಾಯಕರ ಕಾಲದಲ್ಲಿ ಮಧುರೆಯಲ್ಲಿಯೂ ನಾಟಕಗಳು ವೃದ್ಧಿಯಾದವು. ಮಧುರ ತಿರುಮಲನಾಯಕನ ಮಹಲಿನಲ್ಲಿ ನಾಟಕಶಾಲೆಯಿದೆ. ನಾಟಕಗಳೂ, ಯಕ್ಷಗಾನಗಳೂ ಬಹುಸಂಖ್ಯೆಯಲ್ಲಿ ತಂಜಾವೂರು ಸರಸ್ವತೀ ಮಹಲಿನಲ್ಲಿ ಮೂರನೇ ಒಂದು ಭಾಗದಷ್ಟು ಇವೆಯೆನ್ನುತ್ತಾರೆ. ವೆಸ್ಟ್‌ವಾರ್ಡ್ ಕಂಪೆನಿಯವರು ೪೦ ನಾಟಕಗಳನ್ನೂ. ೩೦ ಯಕ್ಷಗಾನಗಳನ್ನೂ ಅಚ್ಚು ಹಾಕಿದ್ದಾರೆ.

೧೪. ಪ್ರಚಾರಗೀತೆಗಳು

ರಾಜಕೀಯೋದ್ಯಮವನ್ನು ಪುರಸ್ಕರಿಸುತ್ತ ಹಾಡುಗಳು ರಾಶಿರಾಶಿ ಹೊರಬಿದ್ದಿವೆ. ಗುರಿಮೆಳ್ಳ ಸತ್ಯನಾರಾಯಣರಾವು ಪ್ರವೇಶಿಸಲು ಈ

ಶಾಖೆ ಸಮುದ್ರೋಪಮವಾಯಿತು. ಆತನವು ನೂರಾರು ಹಾಡುಗಳಿವೆ. ಆತನ ತರುವಾಯ 'ಉಪ್ಪು ಹಾಡು' ಒಂದೇ ಕೊಂಚ ಪ್ರಚಾರವಾದ್ದು. ಆದರೆ ಈ ಹಾಡುಗಳು ದೇಶೀಸಾರಸ್ವತವಲ್ಲವೇನೋ ಎನಿಸುತ್ತದೆ. ಸಾಮಾನ್ಯರನ್ನುದ್ದೇಶಿಸಿ ಪಂಡಿತರು ಹೇಳಿದ್ದಿವು, ಶತಕಗಳಂಥವು.

೧೫. ಮಿಶ್ರರಚನೆಯ ಪದಗಳು

ಸಾಹಿತ್ಯದಿಂದ ಸಂಗೀತದೊಳಕ್ಕೆ ತಪ್ಪಿಸಿಕೊಂಡ ಕ್ಷೇತ್ರಯ ಪದಗಳೂ, ಪರಿಮಳರಂಗನ ಪದಗಳೂ, ಘಟ್ಟಪಲ್ಲಿ, ಧರ್ಮಪುರಿ, ಛತ್ರಪುರಿ ಜಾವಳಿಗಳೂ, ಸಾರಂಗಪಾಣಿ ಪದಗಳೂ, ದಾಸರ ಶ್ರೀರಾಯರ ಕೀರ್ತನೆಗಳೂ, ಸಂಗೀತ ರಚನೆಯಲ್ಲದೆ ದೇಶೀಸಾಹಿತ್ಯದೊಳಕ್ಕೆ ಬರಲಾರವೆಂದು ನನ್ನ ಭಾವನೆ. ಅವುಗಳ ಪ್ರಚಾರ ಅವುಗಳ ಸಂಗೀತದಿಂದ ಮಾತ್ರವಲ್ಲದೆ ಸಾಹಿತ್ಯದಿಂದಲ್ಲ. ಅಧ್ಯಾತ್ಮ ರಾಮಾಯಣ ಕೀರ್ತನೆಗಳ ಮಟ್ಟಿಗೆ ಕಥಾಪ್ರಾಧಾನ್ಯವನ್ನು ಕೂಡ ಗಣನೆಗೆ ತಂದ ಸಾಹಿತ್ಯವೆನ್ನಬೇಕಾಗುತ್ತದೆ. ಶಾರದ ರಾಮಾಯಣವು ಅಧ್ಯಾತ್ಮವಾಗಿ ವೃದ್ಧಿಯಾಗಿದೆಯೆಂದು ಕಾಣುತ್ತದೆ.

೧೬. ಗದ್ಯ

ದೇಶೀಸಾಹಿತ್ಯದಲ್ಲಿ ಗದ್ಯಕ್ಕೆ ಯಾವ ರೀತಿಯ ಪ್ರಾಧಾನ್ಯವೂ ಕಂಡು ಬರುವುದಿಲ್ಲ. ಸ್ಥಲಮಾಹಾತ್ಮ್ಯಗಳೂ, ಕಥೆಗಳೂ, ಕೈಫಿಯತ್ತುಗಳೂ ಯಾರಿಗೆ ಹೇಗೆ ಬೇಕೋ ಅವರು ಹಾಗೆ ಬರೆದುಕೊಂಡಿದ್ದಾರೆ. ಶಾಸನಗಳ ಭಾಷೆ ಗ್ರಾಂಥಿಕ ಭಾಷೆಗೆ ಭಿನ್ನವಾದರೂ ಕೇಳುವವರಿಗೆ ಪ್ರತ್ಯೇಕವಾಗಿ ಹೆಣೆದು ಹೇಳಿದ್ದಂತೆ ಕಂಡುಬರದು. ವ್ರತಕಲ್ಪಗಳ ಕಥೆಯಲ್ಲಿ ಮಟ್ಟಿಗೆ "ಕಥೆಗಳಲ್ಲಿ ಏನಾದರೂ ವ್ರತಲೋಪವಾಗಬಾರದು. ಭಕ್ತಿ ತಪ್ಪಿದರೂ ಫಲ ತಪ್ಪದು" ಎಂಬಂಥ ವಾಕ್ಯಗಳಲ್ಲಿ ರಚನೆ ಕಂಡುಬರುವುದಾದರೂ ಇವು ಮೂಲ ರೂಪದಲ್ಲಿಯೇ ಇಳಿದುಬಂದುವೇ ಎಂಬುದು ಸಂದೇಹಾಸ್ಪದ.

ಯತಿ ಪ್ರಾಸಗಳು ಆಗಾಗ್ಗೆ ಬರುವುದುಂಟು. ಗಾದೆಗಳು ಮಾತ್ರ ನೂರಕ್ಕೆ ನೂರುಪಾಲು ದೇಶೀ ಸಾರಸ್ವತದವೇ. ಕೀ. ಶೇ. ಚಿಲಕೂರಿ ನಾರಾಯಣರಾವು ಅವರು ಲಕ್ಷದವರೆಗೆ ಗಾದೆಗಳನ್ನು ಶೇಖರಿಸಿದ್ದಾರಂತೆ,

ನಾಳಮು ಕೃಷ್ಣರಾವು ಅವರ ಸಂಕಲನವನ್ನು ತೆನಾಲಿಯವರು ಪ್ರಕಟಿಸಿದ್ದಾರೆ. ಯತಿ ಪ್ರಾಸಗಳ ವೈಖರಿಯಿಂದ ಇವುಗಳಲ್ಲಿ ಹೊರಚಿಮ್ಮುವ ಪ್ರಪಂಚಜ್ಞಾನ ಆದರಣೀಯವಾದುದು.

ವಿಡಂಬನ ಕಥೆಗಳೂ ಈ ಜಾತಿಯವೇ. ಆದಿಪ್ರಾಸ ಅಂತ್ಯಪ್ರಾಸಗಳೂ ಕೂಡ ಇವುಗಳಲ್ಲಿ ಬರುತ್ತವೆ. ಮಾತುಗಳನ್ನು ಪ್ರಾಸಕ್ಕೋಸ್ಕರ ಮುಕ್ತಪದ ಗ್ರಸ್ತಗಳಾಗಿ ಬಳಸುವುದೂ ಉಂಟು.

೧೯೫೪]

[ಸಂ, ೫—ಸಂ. ೧೨ ಕಿನ್ನೆರ ತೆಲುಗು ಮಾಸಪತ್ರಿಕೆಯಲ್ಲಿ ಶ್ರೀ ಶ್ರೀಪಾದಗೋಪಾಲ ಕೃಷ್ಣಮೂರ್ತಿ ಅವರು ಬರೆದಿರುವ "ದೇಶೀ ಸಾರಸ್ವತ ವಿಭೂತಿ" ಎಂಬ ತೆಲುಗು ಲೇಖನದಿಂದ ಸಂಗ್ರಹಿಸಿದೆ.]

ಅಸ್ಸಾಮಿನ ಅಂಕೀಯನಾಟ್

ಅಸ್ಸಾಮಿನಲ್ಲಿ ವೈಷ್ಣವ ಮತ ಪ್ರಚಾರಕ್ಕೆ ಹದಿನಾರನೆಯ ಶತಮಾನದಲ್ಲಿ ಪ್ರಯೋಗವಾದ ನಾಟಕಗಳೇ 'ಅಂಕೀಯಾನಾಟ್'. ಪ್ರಚಾರಕಾಲದಲ್ಲಿ, ಪರ್ವದಿನಗಳಲ್ಲಿ ಭಕ್ತಿಪ್ರೇರಕವಾದ ಕಾವ್ಯಗಳನ್ನೂ ಶಾಸ್ತ್ರಗಳನ್ನೂ ಸಮೂಹಗಳಲ್ಲಿ ಗಾನಮಾಡುವುದನ್ನು ವೈಷ್ಣವ ಮತ ಪ್ರಚಾರಕರು ಹದಿನೇಳನೆಯ ಶತಮಾನದಲ್ಲಿ ಪ್ರಮುಖ ಸಾಧನವನ್ನಾಗಿ ಇಟ್ಟುಕೊಂಡರು ಹಾಗೆ ಗಾನ ಮಾಡುವುದು ವ್ಯಾಖ್ಯಾನಿಸಿ ಹೇಳುವುದು ಬರುಬರುತ್ತ ನಾಟಕರೂಪದೊಳಕ್ಕೆ ಇಳಿದವು.

ಶಂಕರದೇವನೆಂಬ ವೈಷ್ಣವ ಭಕ್ತನು (ಕ್ರಿ.ಶ. ೧೪೪೯–೧೫೬೯) ಹೀಗೆ ಗಾನಮಾಡುವುದಕ್ಕೆಂದು ಕೆಲವು ಕಾವ್ಯಗಳನ್ನು ರಚಿಸಿ ಕಾಲಕ್ರಮೇಣ ನಾಟಕರಚನೆಗೆ ತೊಡಗಿದನು. ಶಂಕರದೇವನು ಈಗಿನ ನೌಗಾಂಗ್ ಪಟ್ಟಣಕ್ಕೆ ಹದಿನಾರು ಮೈಲಿ ದೂರದಲ್ಲಿರುವ ಅಲಿಪುಖೂರಿ ಎಂಬ ಗ್ರಾಮದಲ್ಲಿ 'ಭೂಯಾನ್'ವಂಶದಲ್ಲಿ ಹುಟ್ಟಿದನು. ಭೂಯಾನ್ ವಂಶವು ಆ ದಿವಸಗಳಲ್ಲಿ ಅತಿಶಯ ಶ್ರೇಷ್ಠವಾಗಿದ್ದುದೇ ಅಲ್ಲದೆ ಆ ಕುಲದಲ್ಲಿ ಅನೇಕ ಮಂದಿ ಭಾಗ್ಯವಂತರೂ ಆಗಿದ್ದರು. ಅದರಲ್ಲಿ ಶಂಕರದೇವನ ಮನೆತನ ತುಂಬ ಪ್ರಸಿದ್ಧವಾದುದು. ಆದಕಾರಣ ಆ ಮನೆತನದವರನ್ನು 'ಶಿರೋಮಣಿ ಭೂಯಾನರು' ಎಂದು ಕರೆಯುತ್ತಿದ್ದರು. ಬಾಲ್ಯದಲ್ಲಿ ಶಂಕರದೇವನು ಚೆನ್ನಾಗಿ ವ್ಯಾಸಂಗ ಮಾಡಿದನು. ಪ್ರೌಢನಾದಮೇಲೆ ಸಂಸ್ಕೃತದಲ್ಲಿ ಸ್ವತಂತ್ರವಾಗಿ ಕಾವ್ಯರಚನೆ ಮಾಡಿದುದೇ ಅಲ್ಲದೆ ಸಂಸ್ಕೃತ ಕಾವ್ಯಗಳನ್ನು ಅಸ್ಸಾಮಿ ಭಾಷೆಗೆ ಪರಿವರ್ತಿಸಿದನು. ಭಕ್ತಿರತ್ನಾಕರವೆಂಬ ವೈಷ್ಣವ ತತ್ತ್ವ ಗ್ರಂಥವನ್ನೂ ರಚಿಸಿದನು. ವಿದ್ಯಾಭ್ಯಾಸವು ಇಪ್ಪತ್ತೆರಡನೆಯ ವಯಸ್ಸಿಗೇ ಮುಗಿಯಿತು. ಸೂರ್ಯಾವತಿಯೆಂಬ ಕಾಯಸ್ಥ ಕನ್ಯೆಯನ್ನು ಮದುವೆಯಾದನು. ಆಕೆ ಒಂದು ಮಗುವನ್ನು ಹಡೆದು ನಾಲ್ಕು ವರ್ಷಗಳ ನಂತರ ತೀರಿಕೊಂಡಳು. ಶಂಕರದೇವನು ಮಗಳಿಗೆ ಮದುವೆಮಾಡಿ ೧೫೧೪ರಲ್ಲಿ

ದೇಶಾಟನೆಗೆ ಉಪಕ್ರಮಿಸಿದನು. ಹದಿನೇಳು ಮಂದಿ ಶಿಷ್ಯರೇ ಅಲ್ಲದೆ ಆತನ ಗುರು ಮಹೇಂದ್ರಕಂದಳಿ ಕೂಡ ಆತನೊಂದಿಗೆ ಯಾತ್ರೆ ಹೊರಟನು. ಗಯೆ, ಪೂರಿ, ಭುವನೇಶ್ವರ, ಬೃಂದಾವನ, ಮಥುರೆ, ದ್ವಾರಕ, ಕಾಶಿ, ಪ್ರಯಾಗ, ಅಯೋಧ್ಯೆ, ಬದರಿಕಾಶ್ರಮ ಮುಂತಾದ ಕ್ಷೇತ್ರಗಳಲ್ಲಿ ಸಂಚರಿಸಿ ಅಲ್ಲಲ್ಲಿ ಮತಪ್ರಚಾರ ಮತ್ತು ತತ್ತ್ವಬೋಧೆಯ ನಡವಳಿಕೆಯನ್ನು ತಿಳಿದು ಹನ್ನೆರಡು ವರ್ಷಗಳ ತರುವಾಯ ಅಸ್ಸಾಮಿಗೆ ಮರಳಿದನು. ಆಗ ಮತ್ತೆ ಮದುವೆಯಾದನು. 'ಬಾಡೋರ್ಣವಾ' ಎಂಬ ಹಳ್ಳಿಯಲ್ಲಿ ನೆಲಸಿ, ಅಲ್ಲಿ ತನ್ನ ಭಕ್ತರಿರುವುವಕ್ಕೆ ಛತ್ರವೊಂದನ್ನು ಕಟ್ಟಿಸಿದನು. ಎಲ್ಲರಿಗೂ ಭಜನೆ, ಸಂಕೀರ್ತನೆ ಮತ್ತು ಚರ್ಚೆಗಳ ಸತ್ಕಾಲಕ್ಷೇಪಕ್ಕೆ ಅನುಕೂಲವಾಗುವ 'ನಾಮ್‌ಘರ್' ಎಂದರೆ ಭಜನ ಮಂದಿರವನ್ನು ಕಟ್ಟಿಸಿದನು. ಆ ಕಾಲಕ್ಷೇಪಗಳಿಗೆ 'ನಾಮ್ ಕೀರ್ತನ್' ಎನ್ನುತ್ತಿದ್ದರು. ಕೆಲವು ದಿವಸಗಳಿಗೆ ಶಂಕರದೇವನು ಮತ್ತೊಂದು ಗ್ರಾಮಕ್ಕೆ ಹೋಗಬೇಕಾಯಿತು. ಅಲ್ಲಿ ಮಾಧವದೇವನೆಂಬ ಶಾಕ್ತೇಯನು ಶಂಕರದೇವನ ಶಿಷ್ಯನಾಗಿ ವೈಷ್ಣವ ತತ್ತ್ವವನ್ನು ಅವಲಂಬಿಸಿದನು. ಕಾಲಕ್ರಮದಲ್ಲಿ ಈ ಮಾಧವದೇವನೂ ಶಂಕರದೇವನಂತೆಯೇ ನಾಟಕಗಳನ್ನೂ ಕಾವ್ಯಗಳನ್ನೂ ಬರೆದನು. ಶಂಕರದೇವನು ಶಾಕ್ತೇಯರೊಡನೆಯೂ ಬ್ರಾಹ್ಮಣರೊಡನೆಯೂ ವೈರಕಟ್ಟಿಕೊಳ್ಳಬೇಕಾಯಿತು. ಆದರೂ ಶಂಕರದೇವನಿಗಿದ್ದ ವಿದ್ಯೆಯಾಗಲಿ, ಅನುಭವಜ್ಞಾನವಾಗಲಿ, ಭಕ್ತಿಯಾಗಲಿ ಅವರಾರಿಗೂ ಇಲ್ಲದೆ ಅವರ ವೈರ ನಿರರ್ಥಕವಾಯಿತು. ಏನೇ ಆದರೂ ಆ ಪ್ರಾಂತ ಎಂದರೆ 'ಅಹೋಂ ರಾಜ್ಯ'ವು ಶಂಕರದೇವನ ಕೃಷಿಗೆ ತಕ್ಕ ಕ್ಷೇತ್ರವಾಗಲಿಲ್ಲ. ಆದಕಾರಣ ಆತನು ಕೂಚಬೇಹಾರ ಪ್ರಾಂತಕ್ಕೆ ತೆರಳಿ 'ಬಾರ್ಪೇಟ' ವೆಂಬ ಗ್ರಾಮದಲ್ಲಿ ಒಂದು ಛತ್ರವನ್ನೂ ಭಜನ ಮಂದಿರವನ್ನೂ ಕಟ್ಟಿಸಿದನು. ಪ್ರಶಾಂತವಾಗಿ ಪ್ರಚಾರ ಕಾರ್ಯವನ್ನು ನಡೆಸಿದನು. ಮತ್ತೆ ತನ್ನ ತೊಂಬತ್ತೇಳನೆಯ ವಯಸ್ಸಿನಲ್ಲಿ ನೂರುಮಂದಿ ಶಿಷ್ಯರೊಡನೆ ತೀರ್ಥಯಾತ್ರೆಯನ್ನು ಕೈಕೊಂಡನು. ಪೂರಿಯಲ್ಲಿ ಚೈತನ್ಯ ದೇವನನ್ನು ಭೇಟಿ ಮಾಡಿದನು. ಮರಳಿ ಬಂದಮೇಲೆ ಇಮ್ಮಡಿಯಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದು ಕೂಚಬೇಹಾರದಲ್ಲಿ ತೀರಿಕೊಂಡನು. ಶಂಕರದೇವನು ಆರು ನಾಟಕಗಳೂ ಸೇರಿ ಒಟ್ಟು ಮೂವತ್ತು ಗ್ರಂಥಗಳನ್ನು ಬರೆದಿದ್ದಾನೆ.

ಶಂಕರದೇವನು ತನ್ನ ಯಾತ್ರೆಗಳಲ್ಲಿ, ವಿವಿಧ ಸ್ಥಳಗಳಲ್ಲಿ ರಾಮಲೀಲ, ರಾಸಲೀಲ, ಭಾಗವತ ಪುರಾಣ ಕಥೆಗಳನ್ನು ನಾಟಕಗಳಾಗಿ ಪರಿವರ್ತಿಸಿ ಪ್ರದರ್ಶನಗಳನ್ನು ಪ್ರಾರಂಭಿಸಿದನು.

ಶಂಕರದೇವನ ಕಾಲದಲ್ಲಿ ಅಸ್ಸಾಮಿನಲ್ಲಿ ಕೆಲವು ಬಗೆಯ ರೂಪಕಗಳನ್ನು ಹೆಚ್ಚಾಗಿ ಪ್ರದರ್ಶಿಸುತ್ತಿದ್ದರು. ದೇವಾಲಯ 'ದೇವಧಾನಿ ನೃತ್ಯ' ಮತ್ತು 'ಓಜಪಾಳಿ'ಗಳೆಂಬ ಪ್ರದರ್ಶನಗಳು ಆ ದಿವಸಗಳ ಪರಿಪಾಠಿಯಾಗಿತ್ತು. ಓಜ ಎಂದರೆ ಮುಖ್ಯ ಗಾಯಕ; ಪಾಳಿಯೆಂದರೆ ಇಲ್ಲಿಯಲ್ಲಿ ಇರುವ ಹಿಮ್ಮೇಳದವರು. ಓಜಪಾಳಿಯಲ್ಲಿ ಸ್ವಲ್ಪ ನಾಟ್ಯ ಕೂಡ ಇರುತ್ತದೆ. ಓಜನು ಹಾಡುತ್ತಾನೆ, ಆಡುತ್ತಾನೆ, ನಟಿಸುತ್ತಾನೆ; ಪಾಳಿಯವರು ಅವನನ್ನು ಅನುಸರಿಸುತ್ತಾರೆ. ಅವರವರಲ್ಲಿ ಕಥೆಯನ್ನು ಬಿಡಿಸಿ ಹೇಳುವ ಉದ್ದೇಶದಿಂದ ಸಂಭಾಷಣೆಯನ್ನು ಸಾಗಿಸುತ್ತಾರೆ.

ಇವೆಲ್ಲವನ್ನೂ ನೋಡಿ ಶಂಕರದೇವನು ನಾಟಕಗಳನ್ನು ಬರೆದಿದ್ದಾನೆ. ಅಂದು ನಾಟಕಗಳನ್ನು 'ಯಾತ್ರಾ', 'ನೃತ್ತ', 'ಅಂಕ', 'ಭಾವನಾ' ಎಂಬ ಹೆಸರುಗಳಿಂದ ಕರೆಯುವ ವಾಡಿಕೆಯಿತ್ತು. ಮಾಧವದೇವನು ಬರೆದಿರುವ ನಾಟಕಗಳನ್ನು 'ಝುಮುರಾ' ಎಂದಿದ್ದಾರೆ. ಒಟ್ಟಿನಲ್ಲಿ 'ಅಂಕೀಯಾ ನಾಟ್' ಎಂಬುದು ನಾಲ್ವರೂ ಬಳಸುವ ಪದವಾಗಿದೆ. ಹೀಗೆಂದರೆ ಒಂದು ವಿಧವಾಗಿ ವೈಷ್ಣವ ಏಕಾಂಕ ನಾಟಕಗಳೆಂದು ಅರ್ಥಯಿಸಹುದು.

'ಅಂಕೀಯಾ ನಾಟ್' ಪ್ರಯೋಗದಲ್ಲಿ ಸಂಸ್ಕೃತ ನಾಟಕಗಳಲ್ಲಿರುವಂತೆ ನಾಂದಿ ಪ್ರಸ್ತಾವನೆಗಳಿರುತ್ತವೆ. ಆದರೆ ಸೂತ್ರಧಾರನು ಮಾತ್ರ ಕೊನೆಯವರೆಗೆ ಒಬ್ಬ ನಟನೇ ಆಗಿರುತ್ತಾನೆ. ಸೂತ್ರಧಾರನೇ ನಾಟಕದರ್ಶಕನೂ ವ್ಯಾಖ್ಯಾತನೂ ಆಗಿರುತ್ತಾನೆ. ಈತನು ಪಾತ್ರದೊಡನೆ ಕೂಡಿ ನಾಟ್ಯ ಮಾಡುತ್ತಾನೆ, ಹಾಡುತ್ತಾನೆ, ಪಾತ್ರಪರಿಚಯ ಮಾಡುತ್ತಾನೆ, ಪ್ರವೇಶ ನಿಷ್ಕ್ರಮಣಗಳನ್ನು ಪ್ರಕಟಿಸುತ್ತಾನೆ. ನಡುನಡುವೆ ಧರ್ಮ ಪ್ರವಚನಗಳನ್ನು ಮಾಡುತ್ತಾನೆ. ಒಟ್ಟಿನಲ್ಲಿ ವಿದ್ಯಾವಂತರೂ ಅವಿದ್ಯಾವಂತರೂ ಒಂದು ಗೂಡಿದ ಪ್ರೇಕ್ಷಕ ವೃಂದವನ್ನು ರಂಜನೆಗೊಳಿಸುತ್ತಾನೆ. ವೈಷ್ಣವ ಮತ

ವಿಕಾಸವನ್ನುಂಟುಮಾಡುತ್ತಾನೆ. ಆತನು ಕೇವಲ ಸರ್ವಜ್ಞನೇ ಸರಿ. ಸೂತ್ರ ಧಾರನಿಗೆ ಗುರುಗಳು ಪ್ರತ್ಯೇಕ ಶಿಕ್ಷಣವನ್ನು ಕೊಡುವರು.

'ಅಂಕೀಯಾ ನಾಟ್' ಒಂದು ವಿಧವಾಗಿ ಗೇಯನಾಟಕವೂ ಹೌದು. ವರ್ಣನೆಗಳೆಲ್ಲವೂ ಶ್ಲೋಕಗಳು, ಗೇಯಗಳು. ಸೂತ್ರಧಾರನೇ ಹಾಡುತ್ತಾನೆ. ಯಾವ ಪಾತ್ರದ ಮನಸ್ಸಿನಲ್ಲಿ ಯಾವ ಆಲೋಚನೆ ಸುಳಿದಾಡುತ್ತಿದೆ ಯೆಂಬುದನ್ನೂ ಗಾನರೂಪದಲ್ಲಿ ತಿಳಿಯಪಡಿಸುವನು. ನಡುನಡುವೆ 'ಬಾರ್ ಗೀತ್' ಎಂಬ ಹೆಸರುಳ್ಳ ಭಕ್ತಿ ಕೀರ್ತನೆಗಳನ್ನು ಹಾಡುವನು.

ನಾಂದೀ ಶ್ಲೋಕಗಳಲ್ಲಿ ಪ್ರಾರ್ಥನೆಯೆ ಅಲ್ಲದೆ ಕಥಾಸಾರವನ್ನೂ ಸೂತ್ರ ಧಾರನು ವಿವರಿಸುತ್ತಾನೆ. ಕಾಲಕ್ರಮದಲ್ಲಿ ಗೋಪಾಲದೇವನು ತನ್ನ ನಾಟಕಗಳಲ್ಲಿ ನಾಂದಿಗೆ ಶ್ಲೋಕಗಳ ಬದಲಾಗಿ ಅಸ್ಸಾಮಿ ಗೀತೆಗಳನ್ನೇ ಬಳಕೆಗೆ ತಂದನು. ನಾಂದಿಯ ತರುವಾಯ 'ಭಾತಿಮಾ' ಎಂಬ ದೊಡ್ಡ ಗೀತೆಯನ್ನು ಗಾನಮಾಡುತ್ತಾರೆ. ನಾಂದಿಯಲ್ಲಿ ಬರುವ ಮತ್ತೊಂದು ಪಾತ್ರ 'ಸಂಗಿ'. ಸೂತ್ರಧಾರನು ತಾನು ಯಾವುದೋ ದಿವ್ಯವಾಣಿಯನ್ನು ಕೇಳುತ್ತಿರುವಂತೆ ನಟಿಸಿ 'ಸಂಗಿ'ಯೊಡನೆ ನಾಂದಿಯಾದಮೇಲೆ ಕಥಾಪ್ರಾಮುಖ್ಯ ವನ್ನು ಚರ್ಚಿಸುತ್ತಾನೆ. ನಟರ ಶೃಂಗಾರವನ್ನು ಹೇಳುತ್ತಾನೆ. ಅದಾದಮೇಲೆ 'ಸಂಗಿ' ನಾಟಕದಲ್ಲಿ ಮತ್ತೆ ಬರುವುದಿಲ್ಲ.

ಇವರಲ್ಲದೆ ನಾಟಕದಲ್ಲಿ ದೂತನೆಂಬ ಪಾತ್ರ ಮತ್ತು 'ಬಹುವಾ' ಎಂಬ ಮತ್ತೊಂದು ಪಾತ್ರ ಮನೋರಂಜನೆಗಾಗಿ ಕಾಣಿಸಿಕೊಳ್ಳುತ್ತವೆ. ಮುಖ್ಯವಾಗಿ ರಂಗಸ್ಥಲದ ಮೇಲೆ ನಟರು ಬರಲು ತಡವಾದಾಗ ನಟರ ಕಥೆ ಗಳನ್ನು ಹೇಳಿ ಪ್ರೇಕ್ಷಕರನ್ನು ರಂಜನೆಗೊಳಿಸುತ್ತಾರೆ.

ಕಡೆಯದಾಗಿ ಸೂತ್ರಧಾರನು ಮೊದಲು ಪ್ರಾರ್ಥನಾ ಗೀತೆಯನ್ನು ಹಾಡಿದಂತೆಯೇ 'ಮುಕ್ತಿ ಮಂಗಳ ಭಾತಿಮಾ (ಗೀತೆ)' ಹಾಡುತ್ತಾನೆ. ಅದರಲ್ಲಿ ತಪ್ಪುಗಳೇನಾದರೂ ಘಟಿಸಿದ್ದರೆ ಕ್ಷಮಿಸುವಂತೆ ದೇವರನ್ನು ಪ್ರಾರ್ಥಿಸುತ್ತಾನೆ. ಆ ಗೀತದಲ್ಲಿಯೇ ಈ ಕಥೆಯ ನೀತಿಯನ್ನೂ ಹೇಳುವನು ;

ಬೋಧೆ ಮಾಡುವನು. ಮಂಗಳ ಗೀತೆಯನ್ನು ಕಡೆಯಲ್ಲಿ ಪ್ರೇಕ್ಷಕರೂ ಸಹ ಸೇರಿ ಹಾಡುತ್ತಾರೆ.

ಈ ನಾಟಕಗಳನ್ನು 'ನಾಮ್‌ಘರ್'ನಲ್ಲಿಯೋ ಇಲ್ಲವೆ ಅದರ ಮುಂದೆಯೋ ಆಡುತ್ತಾರೆ. ಒಮ್ಮೊಮ್ಮೆ ನಾಟಕ ಪ್ರದರ್ಶನಕ್ಕೆಂದು ಹಸಿರುವಾಣಿ ಚಪ್ಪರಗಳನ್ನು ಹಾಕುತ್ತಾರೆ. ಮಾಧವದೇವನು ತನ್ನ ನಾಟಕ ಪ್ರದರ್ಶನಕ್ಕೆ ಅನುವಾಗಿ 'ಬಾರ್ಪೇಟ'ದಲ್ಲಿ ಒಂದು ನಾಟಕಶಾಲೆಯನ್ನು ಕಟ್ಟಿಸಿದ್ದಾನೆ. ಇದನ್ನು 'ಬಾರ್‌ಘರಾ' ಎಂದೂ 'ರಂಗೀಯೂಲ್ ಘರಾ' ಎಂದೂ ಕರೆಯುತ್ತಾರೆ.

'ನಾಮ್‌ಘರ್'ಗಳನ್ನು ನಾಟ್ಯಶಾಸ್ತ್ರದಲ್ಲಿ ತಿಳಿಸಿರುವ 'ವಿಕೃಸ್ತ' ಪದ್ಧತಿಯಲ್ಲಿ ಕಟ್ಟುತ್ತಿದ್ದರು. ಐವತ್ತು ಅಡಿಗಳ ಉದ್ದವಿದ್ದು ಎರಡು ಅಂತಸ್ತುಗಳಿರುತ್ತವೆ. ಒಂದು ಕೊನೆಯಲ್ಲಿ 'ಮಣಿಕೂಟ್' ಎಂಬ ಚಿಕ್ಕ ಮನೆಯನ್ನು ಕಟ್ಟಿ ಅದರಲ್ಲಿ ಸಿಂಹಾಸನದ ಮೇಲೆ ಪವಿತ್ರ ಗ್ರಂಥಗಳನ್ನು ಇಡುತ್ತಿದ್ದರು. 'ಮಣಿಕೂಟ್' ಒಳಕ್ಕೆ ಅರ್ಹರು ಮತ್ತು ಅಧಿಕಾರಿಗಳ ಹೊರತು ಎಲ್ಲರೂ ಹೋಗಿಬರಲು ಅವಕಾಶವಿಲ್ಲ. 'ನಾಂಘರ್' ಮುಂಭಾಗವು 'ರಂಗಮಂಡಪ್'; ಪ್ರೇಕ್ಷಕರು ಇಲ್ಲಿ ಕೆಳಗಡೆಯೇ ಕೂರುವರು. ಮುಂಭಾಗ ದಲ್ಲಿ ಸ್ವಲ್ಪ ಸ್ಥಳ ಪ್ರಮುಖರಿಗೆಂದು ಪ್ರತ್ಯೇಕಿಸಿರುತ್ತದೆ. 'ನಾಂಘರ್'ನಲ್ಲಿ ಮೂರನೆ ಎರಡುಪಾಲು 'ರಂಗಮಂಡಪ್', ಆಮೇಲೆ ರಂಗಭೂಮಿ. ರಂಗ ಭೂಮಿ ಪ್ರತ್ಯೇಕವಾಗಿ ಎತ್ತರಿಸಿದ ವೇದಿಕೆಯಂಥದಲ್ಲ. ಆದುದರಿಂದ ರಂಗಭೂಮಿಗೆ ಅತ್ತಿತ್ತ ನಟರೂ, ಹಂಗುದಾರರೂ, ವಾದ್ಯಗಾರರೂ ಕುಳಿತು ಕೊಳ್ಳುವರು. ರಂಗಭೂಮಿಗೆ ಮುಂಭಾಗದಲ್ಲಿ 'ಅರ್ಕಪೋರ್' ಎಂದರೆ ಬಿಳಿಯ ತೆರೆಯಿರುತ್ತದೆ. ನಟರು ವೇಷಗಳನ್ನು ಹಾಕಿಕೊಳ್ಳುವ 'ಚೋಘರಾ'– ಛದ್ಮಗೃಹ ಇಲ್ಲವೆ ಗ್ರೀನ್‌ರೂಮ್–ರಂಗಭೂಮಿಗೆ ಹಿಂದಿರುತ್ತದೆ. ಸೂತ್ರ ಧಾರನು ಕರೆದಾಗ ಛದ್ಮಗೃಹದಿಂದ ನಟರು ರಂಗಭೂಮಿಗೆ ಬರುವರು.

ನಟರಿಗೆ 'ಭಾವರಿಯಾ'ಗಳೆಂದು ಅಸ್ಸಾಂ ಭಾಷೆಯಲ್ಲಿ ಹೆಸರು. ನಟನ ವೃತ್ತಿಯುಳ್ಳವರು ಆ ದಿವಸಗಳಲ್ಲಿ ಇರಲಿಲ್ಲ. ಆಸಕ್ತಿ ಭಕ್ತಿಗಳಿರುವ ಯುವಕರು

ಗುರುವಾಕ್ಯ ಪ್ರಕಾರ ಈ ವೇಷಗಳನ್ನು ಹಾಕುತ್ತಿದ್ದರು. ಸ್ತ್ರೀಯರು ವೇಷಗಳನ್ನು ಹಾಕುತ್ತಿರಲಿಲ್ಲ. ಎಲ್ಲರೂ ವಿದ್ಯಾವಂತರಾದ ಕಾರಣ ಗುರ್ವಾಜ್ಞೆಯನ್ನು ಪಾಲಿಸಿ ಚೆನ್ನಾಗಿ ಅಭ್ಯಾಸಮಾಡಿ ನಟಿಸುತ್ತಿದ್ದರು. ಅವರಾರೂ ನಿಷಿದ್ಧರಲ್ಲ. ನಾಟಕಕ್ಕೆ ಊರಿನ ತಲೆಯಾಳುಗಳು ಅಧ್ಯಕ್ಷತೆ ವಹಿಸುವುದು ರೂಢಿ. ಆಗ ಆತನಿಗೆಲ್ಲರೂ ವಿಧೇಯರು. ಆತನನ್ನು 'ಅಧಿಕಾರಿ', 'ಪ್ರೇಕ್ಷಾಪತಿ', 'ಸಭಾಪತಿ' ಎನ್ನುತ್ತಿದ್ದರು. ಪ್ರೇಕ್ಷಕರೆಂದರೆ ಸಭಾಸದರು ಇಲ್ಲವೆ ಸಾಮಾಜಿಕರು.

ನಟರಿಗೂ ನಾಟಕಕ್ಕೂ ಬೇಕಾಗುವ ಸಾಮಗ್ರಿಗಳನ್ನು ತಯಾರಿಸುವ ವೃತ್ತಿ ಕೆಲವರಿಗೆ ಸೇರಿವೆ. ಅವರು 'ಖಾನಿಕಾರ್'ಎನಿಸುತ್ತಾರೆ. ಗೊಂಬೆಗಳು ತೊಡುವಂಥ ಮರದ ಮತ್ತು ಮಣ್ಣಿನ ಪದಾರ್ಥಗಳು, ವಿಗ್ರಹಗಳು ('ಚೋ'), ಮುಖವಾಡಗಳು ('ಮುಖಾ'), ಬಗೆಬಗೆಯ ವಸ್ತ್ರಾಲಂಕರಣಗಳು, ಯುದ್ಧ ಪರಿಕರಗಳು, ಛದ್ಮಗೃಹ ನಿರ್ವಹಣೆ, ನಟರಿಗೆ ಅಲಂಕರಣಕಾರ್ಯ– ಇವೆಲ್ಲವೂ ಈ 'ಖಾನಿಕಾರ'ರ ಕೆಲಸಗಳು. ಅಂದಮೇಲೆ ಈತನು ಬಹಳ ತಿಳಿದವನೇ ಆಗಿರಬೇಕು.

ಸೂತ್ರಧಾರನು ಮೊಣಕಾಲ ಕೆಳಗಿನವರೆಗೆ ಬರುವ ಜರಿಯಂಚಿನಿಂದ ಮಿರುಗುವ ಅಂಗರೇಖೆಯನ್ನು ('ಝುರೀ') ಧರಿಸುತ್ತಾನೆ. ತೋಳಿಲ್ಲದ ಒಂದು ಕುಪ್ಪಸ ('ಫಾತೋ' ಇಲ್ಲವೆ 'ವೆಸ್ಟ್‌ಕೋಟ್'), ಬಣ್ಣಬಣ್ಣದ ಒಂದು ಕಮರ್‌ಬಂದ್ ('ಕಾರಾಧಾನಿ' ಇಲ್ಲವೆ 'ಸೊಂಟಪಟ್ಟಿ'), ಒಂದು ತಲೆಪಾಗು– ಆತನ ಉಡಿಗೆಗಳು. ಗಾಯನ್‌ಬಾಯನ್‌ಗಳು ಎಂದರೆ ವಾದ್ಯಗಾರರು ಕೂಡ ಇಂಥ ಉಡಿಗೆಗಳನ್ನೇ ತೊಡುವರು. ಎಲ್ಲರೂ ಆಕರ್ಷಕವಾದ ಅಂಚು ಗಳನ್ನುಳ್ಳ, ಪಾತ್ರೋಚಿತವಾದ ಧೋತ್ರಗಳನ್ನು ಧರಿಸುತ್ತಾರೆ. ಸ್ತ್ರೀ ಪಾತ್ರಗಳ ಅಲಂಕರಣಗಳಲ್ಲಿ ಮುಖ್ಯವಾದುದೆಂದರೆ 'ಮೇಖಲೆ' ಇಲ್ಲವೆ ಒಡ್ಯಾಣದಂಥ ಭೂಷಣ. ಆಕರ್ಷಣೀಯವಾದ ಸೀರೆಗಳನ್ನು ಆಗಿಂದಾಗ್ಗೆ ತಯಾರು ಮಾಡುತ್ತಾರೆ. ಕಾಳಿ, ಜಟಾಯು ಮತ್ತು ರಾಕ್ಷಸ ಪಾತ್ರಗಳನ್ನು ಧರಿಸಲು ಅನೇಕ ಮುಖವಾಡಗಳನ್ನು ತಯಾರಿಸಬೇಕಾಗಿ ಬರುವುದು,

ಆ ದಿವಸಗಳಲ್ಲಿ ಮೈಥಿಲೀಭಾಷೆ ಸುಪುಷ್ಟವಾಗಿತ್ತು. ವಿದ್ಯಾಪತಿಯು ಈ ಭಾಷೆಯಲ್ಲಿ ಅನೇಕ ವೈಷ್ಣವ ಗೀತೆಗಳನ್ನು ರಚಿಸಿದ್ದಾನೆ. ಅಲ್ಲಿಗೆ ಪರಿಸರ ಪ್ರಾಂತಗಳಿಂದ ಅನೇಕ ಕವಿಗಳೂ ಗ್ರಂಥಕರ್ತರೂ ಹೊರಟು ಮೈಥಿಲಿ ಭಾಷೆಯನ್ನು ಕಲಿತುಕೊಳ್ಳುತ್ತಿದ್ದರು. ಅಸ್ಸಾಮಿನಿಂದಲೂ ಹಾಗೆಯೇ ಹೊರಟರು. ಮೈಥಿಲೀ ಭಾಷೆಯನ್ನು ಬೆರಸಿ ಬರೆಯುವುದೊಂದು ಸಂಪ್ರದಾಯ, ಒಂದು ಆಕರ್ಷಣೆಯಾಯಿತು. ಈ ಮಿಶ್ರಭಾಷೆಯನ್ನು 'ವ್ರಜ ಬೋಲಿ' ಎಂದರು. ಅಸ್ಸಾಂ ಬಂಗಾಳಗಳಲ್ಲಿ ವ್ರಜಬೋಲಿಯನ್ನು ಹೆಚ್ಚಾಗಿ ಬಳಸುತ್ತಿದ್ದರು. ಶಂಕರದೇವ ಮತ್ತು ಮಾಧವದೇವರಿಬ್ಬರೂ ವ್ರಜಬೋಲಿ ಯನ್ನು ಬಳಸಿದ್ದಾರೆ.

ಶಂಕರದೇವನು ಕಾಳೀಯದಮನ್, ಕೇಳೀಗೋಪಾಲ (ರಾಸಕ್ರೀಡೆ), ಪತ್ನೀಪ್ರಸಾದ್ (ಗೋಪಿಯರಿಗೆ ಕೃಷ್ಣದರ್ಶನ), ಪಾರಿಜಾತಹರಣ್, ರಾಮ ವಿಜಯ, ರುಕ್ಮಿಣೀಹರಣ್ ಎಂಬ ಆರು ನಾಟಕಗಳನ್ನು ಬರೆದಿದ್ದಾನೆ.

ಮಾಧವದೇವನು ಅರ್ಜುನ ಭಂಜನ (ಕೃಷ್ಣನು ಅರ್ಜುನ ವೃಕ್ಷಗಳನ್ನು ಬೀಳ್ಗೆಡೆದುದು), ಭೂಮಿಲೋತೋವಾ (ಕೃಷ್ಣನು ಮಣ್ಣು ತಿಂದದ್ದು ವಗೈರೆ), ಭೋಜನವಿಹಾರ (ಯಾದವರ ಹಸುಗಳನ್ನು ಬ್ರಹ್ಮನು ಮಾಯ ಮಾಡಿದ್ದು ವಗೈರೆ), ಭೂಷಣ ಹೇರೋವಾ (ಕೃಷ್ಣನ ಕಂಠಹಾರವನ್ನು ಯಶೋದೆ ಕದಿಯುವಿಕೆ !), ಕೊತೋರಾ ಖೇಲಾ (ಕೃಷ್ಣ ಮತ್ತು ಗೋಪಾ ಲರು ಹಾಲು ಕುಡಿಯುತ್ತ ಮಾಡುವ ನೃತ್ಯ), ಪಿಂಪಾರಾಗುಛಾವಾ (ಬೆಣ್ಣೆ ಕಳ್ಳ, ತಾನು ಇರುವೆಗಳನ್ನೋಡಿಸಲು ಬಂದಂತೆ ನಟಿಸುವಿಕೆ), ರಾಸಝುಮುಕಾ (ರಾಸಕ್ರೀಡೆ)–ಈ ನಾಟಕಗಳನ್ನು ಬರೆದಿದ್ದಾನೆ.

ಗೋಪಾಲದೇವನು ಜನ್ಮಯಾತ್ರೆ (ಕೃಷ್ಣನ ಜನನ) ಮತ್ತು ಉದ್ಧವ ಸಂವಾದಗಳನ್ನು ಬರೆದಿದ್ದಾನೆ.

ವೈಷ್ಣವಮತ ಪ್ರಚಾರವು ಈ ನಾಟಕಗಳ ಮೂಲಕ ಎಷ್ಟೋ ಸುಖ ಪ್ರದವಾಗಿ ಸಾಗಿತು. ವೈಷ್ಣವ ಭಕ್ತರು ತತ್ತ್ವ ಪ್ರಚಾರಕ್ಕೆ ಮಾತು, ಹಾಡು

ಮತ್ತು ಸಾಹಿತ್ಯಗಳನ್ನು ಹೀಗೆ ಬಳಸಿಕೊಂಡಿದ್ದಾರೆ. ಇವತ್ತಿಗೂ ಕೂಡ ಆದರ್ಶ ಪ್ರಚಾರ ಕಾರ್ಯಕ್ಕೆ ಮನಸ್ಸುಮಾಡುವ ಬಲಿಷ್ಠ ಸಾಧನವಾಗಿ ಅನುಕೂಲಿಸುವಂಥವು ಇಂಥ ಆಂಕಿಯಾ ನಾಟ್‌ಗಳೇ ಎನ್ನಬಹುದು.

೧೯೫೮]

ಮೂಲ : ಜಿ. ಕೃಷ್ಣ,
['ಭಾರತಿ,' ೩೪_೧೦]

ಮಾತ್ರಾ ಛಂದಸ್ಸುಗಳು

ಭಾಗ ಒಂದು

ಪೀಠಿಕೆ

೧.೧ ಛಂದಸ್ ಎಂಬ ಸಂಸ್ಕೃತ ಪದಕ್ಕೂ ಸ್ಕಂದೋ ಎಂಬ ಲ್ಯಾಟಿನ್ ಪದಕ್ಕೂ ಸಂಬಂಧವಿದೆ. ಸ್ಕಂದೋ ಎಂದರೆ ಛೇದಿಸುವಿಕೆ, ವಿಭಜಿಸುವಿಕೆ ಎಂದು ಅರ್ಥ. ಕವಿಗಳು ಕಾವ್ಯಗಳಲ್ಲಿಯೂ, ಹಾಡುಗಳಲ್ಲಿಯೂ ಲಯಕ್ಕೂ ಶ್ರುತಿಗೂ ಅನುಕೂಲವಾಗಿ ರಚಿಸಿದ ರಚನೆಗಳನ್ನು ಅನಂತರದ ಲಾಕ್ಷಣಿಕರು ಪರೀಕ್ಷಿಸಿ ಅವುಗಳ ನಡೆ, ಧಾಟಿ ಈ ರೀತಿಯಾಗಿದೆಯೆಂದು ನಿರೂಪಿಸಲು ಒಡೆದು ವಿಭಜಿಸಿ, ಕೆಲವು ಸೂತ್ರಗಳನ್ನು ರಚಿಸಿರುತ್ತಾರೆ. ಅಂಥ ಸೂತ್ರಗಳ ಸಮುದಾಯಕ್ಕೆ ಛಂದಶ್ಶಾಸ್ತ್ರವೆಂದು ಹೆಸರು.

೧.೨ ಕವಿಗಳು ರಚಿಸಿದ ಪದ್ಯಗಳೂ ಹಾಡುಗಳೂ ಒಂದಲ್ಲ ಒಂದು ಲಯವನ್ನು ಅನುಸರಿಸುತ್ತವೆ. ಲಯಭೇದವನ್ನು ಅನುಸರಿಸಿ ಅವುಗಳಲ್ಲಿ ಭೇದಗಳುಂಟಾಗುತ್ತವೆ. ಆ ಲಯ ವಿಧಾನಗಳು ಬೇರೆಬೇರೆ ಭಾಷಾ ಕುಟುಂಬಗಳಲ್ಲಿ ಬೇರೆಬೇರೆಯಾಗಿ ಇರುತ್ತವೆ. ಇಂಗ್ಲಿಷಿನಲ್ಲಿ ಸ್ವರಘಾತವನ್ನು ಹಿಡಿದು ಪದ್ಯಗಳು ನಡೆಯುತ್ತವೆ. ವೈದಿಕ ಭಾಷೆಯಂಥ ಭಾಷೆಗಳಲ್ಲಿ ಸ್ವರದ ಉಚ್ಚನೀಚ ಸಮಾನತೆಗಳನ್ನು ಅನುಸರಿಸಿ, ಅಕ್ಷರ ಸಂಖ್ಯೆಯನ್ನು ಅನುಸರಿಸಿ ಮುಖ್ಯವಾಗಿ ಭೇದಗಳುಂಟಾಗುತ್ತವೆ. ಸಂಸ್ಕೃತದಂಥ (ಲೌಕಿಕ) ಭಾಷೆಗಳಲ್ಲಿ ಪದ್ಯಪಾದಗಳಲ್ಲಿರುವ ಅಕ್ಷರಗಳ ಸಂಖ್ಯೆಯನ್ನು ಅನುಸರಿಸಿ ಪದ್ಯವು ನಡೆಯುತ್ತದೆ. ಅದರಲ್ಲಿ ಹ್ರಸ್ವ ದೀರ್ಘ ನಿಯಮವಿರುತ್ತದೆ. ಪ್ರಾಕೃತ ಭಾಷೆಗಳಲ್ಲಿ ಪಾದಗಳಲ್ಲಿನ ಮಾತ್ರಾ ಸಂಖ್ಯೆಯನ್ನು ಅನುಸರಿಸಿ ಆಯಾ ಪದ್ಯಗಳು ಏರ್ಪಡುತ್ತವೆ. ದ್ರಾವಿಡ ಭಾಷೆಗಳಲ್ಲಿ ಮಾತ್ರಾಗಣಗಳನ್ನು ಅನುಸರಿಸಿ ಪದ್ಯಪಾದಗಳುಂಟಾಗುತ್ತವೆ. ಹ್ರಸ್ವ ದೀರ್ಘ ನಿಯಮವು ಎಲ್ಲಪಾದಗಳಲ್ಲಿಯೂ ಒಂದೇ ರೀತಿಯಾಗಿರಬೇಕೆಂಬ ನಿಯಮವಿಲ್ಲ.

೧.೩ ಹೀಗೆ ಸ್ವರಘಾತ, ಅಕ್ಷರ ಸಂಖ್ಯೆ, ಅಕ್ಷರಗಣ ಸಂಖ್ಯೆ, ಮಾತ್ರಾ ಸಂಖ್ಯೆ, ಮಾತ್ರಾ ಗಣ ಸಂಖ್ಯೆ ಎಂಬುವುಗಳಲ್ಲಿ ಯಾವುದೋ ಒಂದು ಮಾತ್ರ ಒಂದು ಭಾಷೆಯಲ್ಲಿ ಇರುವುದೆಂದು ಹೇಳಲು ಸಾಧ್ಯವಿಲ್ಲ. ಒಂದು ಭಾಷೆಯಲ್ಲಿ ಒಮ್ಮೆ ಇದ್ದ ಪ್ರಧಾನ ನಿಯಮ ಎಲ್ಲ ಕಾಲದಲ್ಲಿಯೂ ಹಾಗೆಯೇ ಇರುವುದೆಂದು ಹೇಳುವುದಕ್ಕಾಗುವುದಿಲ್ಲ. ಭಾಷೆಗಳ ಸಂಪರ್ಕದ ಕಾರಣ, ಜನ್ಯಜನಕಭಾವದ ಕಾರಣ ಒಂದು ಭಾಷೆಯ ಲಕ್ಷಣ ಮತ್ತೊಂದು ಭಾಷೆಗೆ ಉಂಟಾಗಬಹುದು.

೧.೪ ವೈದಿಕ ಛಂದಸ್ಸುಗಳಲ್ಲಿನ ಉದಾತ್ತ ಅನುದಾತ್ತ ಸ್ವರಜ್ಞಾನವು ಇಂದು ಸರಿಯಾಗಿ ಇರುವುದೆಂದು ಹೇಳುವುದು ಸಾಹಸದ ಮಾತೇ ಸರಿ. ಪ್ರಾಚೀನ ಕಾಲದ ಛಂದಸ್ಸುಗಳು ಗುರುಶಿಷ್ಯಪರಂಪರೆಯಾಗಿ ಬಾಯಿಯ ಮೂಲಕ ಬರುತ್ತಿದ್ದ ಕಾರಣ ಅವುಗಳನ್ನು ಕುರಿತು ಕೆಲವು ತಬ್ಬಿಬ್ಬುಗಳುಂಟಾದವು, ಭರತ ವರ್ಷದ ಎಲ್ಲ ಪ್ರಾಂತಗಳಲ್ಲಿಯೂ ಈ ಸ್ವರ ಸಂಪ್ರದಾಯ ಒಂದೇ ಬಗೆಯಾಗಿಲ್ಲ. ಅವರವರು ತಂತಮ್ಮ ಸಂಪ್ರದಾಯವೇ ಉತ್ತಮವೆಂದು ಹೇಳಿಕೊಳ್ಳುವುದು ಆಶ್ಚರ್ಯವಲ್ಲ. ಯಾವುದು ಹೇಗಿದ್ದರೂ ಸಂಸ್ಕೃತ ಭಾಷಾಕಾಲದ (ಲೌಕಿಕ) ಹೊತ್ತಿಗೆ ಈ ಸ್ವರಪದ್ಧತಿ ವೈದಿಕ ಛಂದಸ್ಸುಗಳಿಗೆ ಮಾತ್ರ ಬಿಡಲ್ಪಟ್ಟಿತು. ಸಂಸ್ಕೃತವು (ಲೌಕಿಕ) ಪ್ರಚಾರಕ್ಕೆ ಬರುವವೇಳೆಗೆ ಸಮವಿಷಮವೃತ್ತಗಳಿಗೆ ಅಧಿಕವಾಗಿಯೂ, ಮಾತ್ರಾ ಛಂದಸ್ಸುಗಳಿಗೆ ಸ್ವಲ್ಪವಾಗಿಯೂ ನಿಂತಿತು. ಪ್ರಾಕೃತದಲ್ಲಿ ಮಾತ್ರ ಮಾತ್ರಾ ಛಂದಸ್ಸುಗಳಿಗೇ ಪ್ರಾಧಾನ್ಯ ಕೊಡಲ್ಪಟ್ಟಿದೆ. ಪ್ರಾಕೃತ ಕಾವ್ಯಗಳಲ್ಲಿ ಸಮವಿಷಮ ವೃತ್ತಗಳು ಸ್ವಲ್ಪವಾಗಿದ್ದರೂ, ಇರುವುದು ಬಹುಮಟ್ಟಿಗೆ ಮಾತ್ರಾ ಛಂದಸ್ಸುಗಳೇ. ಈ ಮಾತ್ರೆಗಳನ್ನು ಗಣಗಳಾಗಿ ಏರ್ಪಡಿಸಿಕೊಳ್ಳುವುದೂ ಪ್ರಾಕೃತದಲ್ಲಿ ಕೆಲಮಟ್ಟಿಗೆ ತಲೆಹಾಕಿದೆ. ಆ ಮಾತ್ರಾಗಣ ಸಂಪ್ರದಾಯ ದ್ರಾವಿಡ ಭಾಷೆಗಳಲ್ಲಿ ಹೆಚ್ಚಾಗಿ ಪ್ರಚಾರಕ್ಕೆ ಬಂದಿದೆ.

೧.೫ ಪೂರ್ವಕಾಲದ ಹಾಡುಗಳಿಗೆ ಲಾಕ್ಷಣಿಕರು ಲಕ್ಷಣವನ್ನು ವಿಶೇಷವಾಗಿ ಕಲ್ಪಿಸಲಿಲ್ಲ. ಈ ಮಾತ್ರಾಗಣ ಛಂದಸ್ಸುಗಳೇ ಕೆಲವು ಭಾಷೆಗಳಲ್ಲಿ ಹಾಡುಗಳಾಗಿ, ಕೆಲವಲ್ಲಿ ಪದ್ಯಗಳಾಗಿ ಪರಿಣಮಿಸಿವೆ. ತೆಲುಗಿನಲ್ಲಿ

ಷಟ್ಪದಿಗಳು ಅಷ್ಟಪದಿಗಳು ಮೊದಲಾದುವು ಹಾಡುಗಳಾಗಿ ಜನಸಾಮಾನ್ಯ ದಲ್ಲಿಯೂ ಸ್ತ್ರೀ ವರ್ಗದಲ್ಲಿಯೂ ನಿಂತವು. ಕನ್ನಡದಲ್ಲಿ ಅವುಗಳನ್ನು ಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡಿದ್ದಾರೆ. ಆದಕಾರಣ ಈ ಛಂದಸ್ಸು ಮಾತ್ರವೇ ಈ ಭಾಷೆಯಲ್ಲಿ ವಿಶೇಷವಾಗಿ ಇದೆಯೆಂದು ಹೇಳಲು ಸಾಧ್ಯವಿಲ್ಲ.

೧.೬ ಭಾರತೀಯ ಲಾಕ್ಷಣಿಕರ ದೃಷ್ಟಿಯನ್ನು ಆಕರ್ಷಿಸಿದ ಛಂದಸ್ಸು ಗಳು ಕೆಲವು ಮಾತ್ರ ಇವೆ. [ಅಂಥವುಗಳಲ್ಲಿ ಇಂದಿನ ದ್ರಾವಿಡ ಭಾಷೆಗಳಲ್ಲಿ ವೃತ್ತಗಳು, ಮಾತ್ರಾ ಛಂದಸ್ಸುಗಳು ಕೆಲವು ಮಾತ್ರ ಪ್ರಚಾರದಲ್ಲಿವೆ.] ವೃತ್ತಗಳನ್ನು ಕುರಿತು ವಿಶೇಷವಾಗಿ ಹೇಳಬೇಕಾದ್ದೇನೂ ಇಲ್ಲ. ಆಯಾ ಭಾಷೆಗಳಲ್ಲಿ ಅದೇ ವೃತ್ತಗಳನ್ನು ಬೇರೆ ಬೇರೆ ಹೆಸರುಗಳೊಂದಿಗೆ ಕವಿಗಳು ಬಳಸಿ ಕೊಂಡಿದ್ದಾರೆ. ಅವುಗಳನ್ನು ಲಾಕ್ಷಣಿಕರು ತಮ್ಮ ಗ್ರಂಥಗಳಲ್ಲಿ ವಿಶೇಷವಾಗಿ ಹೇಳಿದ್ದಾರೆ. ಆದರೂ ಮಾತ್ರಾ ಛಂದಸ್ಸುಗಳನ್ನು ಕುರಿತ ವಿಚಾರ ಬಹಳ ಕಡಿಮೆಯಾಗಿ ಬಂದಿದೆ. ಇದಲ್ಲದೆ ಒಂದೊಂದು ಭಾಷೆಯ ಮಾತ್ರಾ ಛಂದಸ್ಸುಗಳನ್ನು ಮಾತ್ರ ತಿಳಿದುಕೊಳ್ಳುವುದರಿಂದ ಅಷ್ಟೇನೂ ಲಾಭವಿರುವುದಿಲ್ಲ. ಹಲವುಭಾಷೆಗಳಲ್ಲಿ ಅವುಗಳ ಸ್ವರೂಪವು ಹೇಗಿವೆಯೋ ತಿಳಿದುಕೊಂಡರೆ ಅವುಗಳ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ತಿಳಿಯಲು ಸಾಧ್ಯ. ಆ ಚರಿತ್ರೆಯೇನಾದರೂ ಹೊರಬೀಳುವುದೇನೋ ನೋಡೋಣವೆಂಬ ಉದ್ದೇಶ ದಿಂದ ಈ ಪ್ರಬಂಧವನ್ನು ಬರೆಯುತ್ತಿದ್ದೇನೆ. ಆದ್ದರಿಂದ ಈ ಪ್ರಬಂಧದಲ್ಲಿ ವಿಮರ್ಶಾರ್ಹವಾದ ಹಲವು ವಿಷಯುಗಳಿರಬಹುದು. ಅಂತಹ ವಿಮರ್ಶೆಗೆ ವಿದ್ವಾಂಸರನ್ನು ಪ್ರೋತ್ಸಾಹಿಸುವುದಕ್ಕೆಂದು ಈ ಪ್ರಬಂಧವನ್ನು ಬರೆಯ ಲಾಗಿದೆ. ಆದಕಾರಣ ಫಲಿತವೇನಾದರೂ ಇದ್ದರೆ ಒಳ್ಳೆಯದೇ. ಈ ವಿಷಯುವನ್ನು ಕುರಿತ ಆಯಾ ಭಾಷೆಯ ಛಂದೋವಿಶೇಷಗಳನ್ನಾದರೂ ಒಂದು ಕಡೆ ಸೇರಿಸಿದಂತಾಗುವುದಿಲ್ಲವೇ?

ಭಾಗ ಎರಡು

ವೈದಿಕ ಛಂದಸ್ಸು

೨.೧ ವೈದಿಕ ಛಂದಸ್ಸು ಅಕ್ಷರಗಣಾತ್ಮಕವಾದದ್ದು; ಒಂದು ಅಕ್ಷರದಿಂದ ಏಕೋತ್ತರ ವೃದ್ಧಿಯಾಗತಕ್ಕ ಅಕ್ಷರಸಂಖ್ಯೆಯುಳ್ಳ ಛಂದಸ್ಸುಗಳಿಗೆ ವರಸೆಯಾಗಿ ಉಕ್ತ, ಅತ್ಯುಕ್ತ, ಮಧ್ಯ, ಪ್ರತಿಷ್ಠ, ಸುಪ್ರತಿಷ್ಠ, ಗಾಯತ್ರಿ, ಉಷ್ಣಿಕ್ಕು, ಅನುಷ್ಟುಪ್ಪು, ಬೃಹತಿ, ಪಂಕ್ತಿ, ತ್ರಿಷ್ಟುಪ್ಪು, ಜಗತಿ, ಅತಿಜಗತಿ, ಶಕ್ವರಿ, ಅತಿಶಕ್ವರಿ, ಅಷ್ಟಿ, ಅತ್ಯಷ್ಟಿ, ಧೃತಿ, ಅತಿಧೃತಿ, ಕೃತಿ, ಪ್ರಕೃತಿ, ಆಕೃತಿ, ವಿಕೃತಿ, ಸಂಕೃತಿ, ಅಭಿಕೃತಿ, ಉತ್ಕೃತಿ ಎಂಬ ಹೆಸರುಗಳನ್ನು ಉಳ್ಳದ್ದು; ಆಯಾ ಛಂದಸ್ಸುಗಳನ್ನು ಪ್ರಸ್ತಾರ ಹಾಕಲು ಒಟ್ಟು 134217726 ಸಮವೃತ್ತಗಳು ಏರ್ಪಡುವುದೆಂದೂ, ಇವಲ್ಲದೆ ಬೇರೆಬೇರೆ ವೃತ್ತಪಾದಗಳನ್ನು ಒಂದು ಪದ್ಯದಲ್ಲಿ ಸೇರಿಸುವುದರಿಂದ ವಿಷಮವೃತ್ತಗಳು ಏರ್ಪಡುತ್ತವೆಯೆಂದೂ, ಅಕ್ಷರ ಛಂದಸ್ಸುಗಳೇ ಅಲ್ಲದೆ ಮಾತ್ರಾ ಛಂದಸ್ಸುಗಳು ಕೂಡ ಇವೆಯೆಂದೂ ಲಾಕ್ಷಣಿಕರು ಹೇಳಿದ್ದಾರೆ.

೨.೨ [ಸಮವೃತ್ತವೆಂದರೆ ವೃತ್ತದಲ್ಲಿನ 4 ಪಾದಗಳಲ್ಲೂ ಆಯಾ ಸ್ಥಾನಗಳಲ್ಲಿ ಅವೇ ಗಣಗಳು ಬರುವಂಥ ವೃತ್ತಗಳು] ಇಂಥ ವೃತ್ತಗಳು ಸಂಸ್ಕೃತ (ಲೌಕಿಕ) ವಾಙ್ಮಯದಲ್ಲಿ ಇವೆಯಾದರೂ ವೇದಗಳಲ್ಲಿ ಇಲ್ಲ. ಬೇರೆ ಬೇರೆ ವೃತ್ತಪಾದಗಳು ಏಕಪದ್ಯದಲ್ಲಿ ಸೇರಿದರೆ ವಿಷಮವೃತ್ತವೆನಿಸುವುದು. ಪಾದಕ್ಕೆ ಇಷ್ಟು ಅಕ್ಷರವೆಂಬ ನಿಯಮವುಂಟಾಗಿ ಈ ಪದ್ಯಪಾದವು (* ವೇದದ ವಿಷಯದಲ್ಲಿ ಆಯಾ ಮಂತ್ರಗಳಿಗೆ ಪದ್ಯಗಳೆಂಬ ಮಾತು ಸಲ್ಲದು. ನಾಲ್ಕು ಪಾದಗಳನ್ನುಳ್ಳದ್ದು ಪದ್ಯ. ವೇದಗಳಲ್ಲಿನ ಎಲ್ಲ ಮಂತ್ರಗಳಿಗೂ ನಾಲ್ಕರಂತೆ ಪಾದಗಳಿಲ್ಲ. ಆದರೂ ತೆಲುಗು ಸಂಪ್ರದಾಯದ ಪ್ರಕಾರ ಈ ಪ್ರಬಂಧದಲ್ಲಿ ವೈದಿಕ ಮಂತ್ರಗಳಿಗೆ ಕೂಡ ಪದ್ಯ, ಪಾದಗಳೆಂಬ ಸಂಜ್ಞೆಗಳನ್ನು ಕೊಡುತ್ತಿದ್ದೇನೆ.) ಈ ಛಂದಸ್ಸಿಗೆ ಸಂಬಂಧಿಸಿದ್ದೆಂದು ಸಾಧಾರಣವಾಗಿ ಹೇಳುವುದಕ್ಕೆ ಮಾತ್ರ ಸಾಧ್ಯವಾಗುವುದಲ್ಲದೆ ಪದ್ಯದಲ್ಲಿ ಎಲ್ಲ ಪಾದಗಳಲ್ಲಿಯೂ ವರಸೆಯಾಗಿ ಅವೇ ಗಣಗಳು

ಬಂದಿರುತ್ತವೆಯೆಂದು ಹೇಳಲು ಅವಕಾಶವಿಲ್ಲ. ಹೀಗೆಯೇ ಬೇರೆ ಬೇರೆ ಪಾದಗಳು, ಬೇರೆ ಬೇರೆ ಛಂದಸ್ಸುಗಳಿಗೆ ಸಂಬಂಧವುಳ್ಳಂಥವು, ಏಕ ಪದ್ಯದಲ್ಲಿ ವೇದದಲ್ಲಿ ಸೇರಬಹುದು. ಇವುಗಳಲ್ಲಾದರೂ ಸಂಸ್ಕೃತ (ಲೌಕಿಕ) ದಲ್ಲಿರುವಂತೆ ಗಣನಿಯಮವಿಲ್ಲ.

೨.೩ ಲಾಕ್ಷಣಿಕರು 26 ಛಂದಸ್ಸುಗಳನ್ನು ವಿವರಿಸಿದರೂ, ಅವುಗಳಲ್ಲಿ ಕೆಲವಕ್ಕೆ ಮಾತ್ರವೇ ವೇದಗಳಲ್ಲಿ ಉದಾಹರಣೆಗಳು ಕಂಡುಬರುತ್ತವೆ. ಋಗ್ವೇದದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಬಳಸಿರುವುದು ತ್ರಿಷ್ಟುಪ್ಪು. $\frac{2}{5}$ ಭಾಗ ಋಕ್ಕುಗಳು ಈ ಛಂದಸ್ಸಿನಲ್ಲಿವೆ. ಆಮೇಲೆ ಹೆಚ್ಚು ಬಳಸಿರುವುದು ಗಾಯತ್ರಿ. ಒಟ್ಟಿನಲ್ಲಿ $\frac{1}{4}$ ಭಾಗ ಈ ಛಂದಸ್ಸಿನಲ್ಲಿದೆ. ಇದು ಸಂಸ್ಕೃತ (ಲೌಕಿಕ)ದಲ್ಲಿ ಅಂತರಿಸಿ ಹೋಗಿದೆ, ಗಾಯತ್ರಿಯಾದಮೇಲೆ ಹೆಚ್ಚು ಪ್ರಚಾರದಲ್ಲಿರುವುದು ಜಗತಿ. ಇದಾದಮೇಲೆ ಅನುಷ್ಟುಪ್ಪು. ಈ ಛಂದಸ್ಸಿನಲ್ಲಿರುವ ಪದ್ಯಗಳು ಋಗ್ವೇದದಲ್ಲಿ ಗಾಯತ್ರೀ ಪದ್ಯಗಳಲ್ಲಿ $\frac{1}{3}$ ಭಾಗ. ಅನಂತರ ಪಂಕ್ತಿ ಅಧಿಕ ಪ್ರಚಾರದ ಛಂದಸ್ಸು. ಇವಲ್ಲದೆ ಕೆಲವು ವಿಶ್ರಮ ಛಂದಸ್ಸುಗಳುಳ್ಳ ಉಷ್ಣಿಕ್, ಪುರ ಉಷ್ಣಿಕ್, ಕಕುಭ್, ಬೃಹತೀ, ಸತೋ ಬೃಹತೀ, ಅತಿಶಕ್ವರೀ, ಅತ್ಯಷ್ಟಿ ಎಂಬವು ಸ್ವಲ್ಪವಾಗಿ ಋಗ್ವೇದದಲ್ಲಿ ಕಂಡುಬರುತ್ತದೆ.

೨.೪ ಶುದ್ಧ ಛಂದಸ್ಸುಗಳಲ್ಲಿ ಪ್ರತಿಪಾದದಲ್ಲಿಯೂ ಸಾಧಾರಣವಾಗಿ 8 ಆಗಲಿ 11 ಆಗಲಿ, 12 ಆಗಲಿ ಅಕ್ಷರಗಳಿರುತ್ತವೆ. ವಿರಳವಾಗಿ 5 ಅಕ್ಷರಗಳ ಪಾದಗಳುಳ್ಳವು ಕೂಡ ಕಂಡುಬರುತ್ತವೆ. ಅಂಥ ಏಕಾಕ್ಷರ ಸಂಖ್ಯೆಯುಳ್ಳ 3 ಆಗಲಿ, 4 ಆಗಲಿ, 5 ಆಗಲಿ, 6 ಆಗಲಿ ಪಾದಗಳು ಒಂದು ಪದ್ಯವಲ್ಲಿ ಸೇರಬಹುದು. ಗಾಯತ್ರಿಯಲ್ಲಿ ಎಂಟರಂತೆ ಅಕ್ಷರಗಳ 3 ಪಾದ ಗಳಿರುತ್ತವೆ. ಅನುಷ್ಟುಪ್ಪಿನಲ್ಲಿ ಎಂಟರಂತೆ ಅಕ್ಷರಗಳ 4 ಪಾದಗಳಿರುತ್ತವೆ. ಇವುಗಳಲ್ಲಿ ಎರಡೆರಡು ಪಾದಗಳು ಒಂದೊಂದು ಅರ್ಧವೆನಿಸುವುದು. ಪಂಕ್ತಿಯಲ್ಲಿ ಎಂಟರಂತೆ ಅಕ್ಷರಗಳ 5 ಪಾದಗಳಿರುತ್ತವೆ. ಇವುಗಳಲ್ಲಿ ಮೊದಲೆರಡು ಪಾದಗಳು ಒಂದು ಭಾಗ; ಉಳಿದ 3 ಪಾದಗಳು 2ನೆಯ ಭಾಗ. ಕೆಲವಲ್ಲಿ ಎಂಟರಂತೆ ಅಕ್ಷರಗಳ ಪಾದಗಳು ಆರೂ, ಕೆಲವಲ್ಲಿ ಏಳೂ

ಇರುತ್ತವೆ. ಇವುಗಳಲ್ಲಿ ಮೊದಲನೆಯದು ಮಹಾಪಂಕ್ತಿ, ಎರಡನೆಯದು ಶಕ್ವರಿ ಎಂದೆನಿಸಿವೆ. ತ್ರಿಷ್ಟುಪ್ಪಿನಲ್ಲಿ 11ರಂತೆ ಅಕ್ಷರಗಳ 4 ಪಾದಗಳಿರುತ್ತವೆ. ಇವುಗಳಲ್ಲಿ ಮೊದಲೆರಡೂ ಒಂದು ಭಾಗ; ಉಳಿದೆರಡೂ 2ನೆಯ ಭಾಗ. ಕೆಲವು ತ್ರಿಷ್ಟುಪ್ಪುಗಳಲ್ಲಿ ಎರಡೇ ಪಾದಗಳಿರುತ್ತವೆ. ಇಂಥವಕ್ಕೆ ದ್ವಿಪದ ಗಳೆಂದು ಹೆಸರು. ಕೆಲವಲ್ಲಿ 3 ಪಾದಗಳಿರುತ್ತವೆ. ಇಂಥವಕ್ಕೆ ವಿರಾಟ್ಟು ಗಳೆಂದು ಹೆಸರು. 5 ಪಾದಗಳು ಕೂಡ ಇರುವುದುಂಟು. ಜಗತಿಯಲ್ಲಿ 12 ರಂತೆ ಅಕ್ಷರಗಳ 4 ಪಾದಗಳಿರುತ್ತವೆ. ದ್ವಿಪದಾವಿರಾಟ್ಟು ಎಂಬುದರಲ್ಲಿ ಪಾದಕ್ಕೆ 5ರಂತೆ ಅಕ್ಷರಗಳಿರುತ್ತವೆ.

೨.೫ ಋಗ್ವೇದದಲ್ಲಿರುವ ಮಿಂಕ್ಕಿನ ಛಂದಸ್ಸುಗಳು ಮಿಶ್ರಗಳು: ಸಾಧಾರಣವಾಗಿ ಗಾಯತ್ರೀ ಜಗತೀ ಛಂದಸ್ಸುಗಳು ಕಲೆಯುತ್ತವೆ. ಅಂಥವು ಗಳಲ್ಲಿ ಉಷ್ಣಿಕ್ಕು (8, 8, 12 ಅಕ್ಷರಗಳ 3 ಪಾದಗಳು) ; ಪುರ ಉಷ್ಣಿಕ್ (12, 8, 8 ಅಕ್ಷರಗಳ 3 ಪಾದಗಳು) ; ಕಕುಭ್ (8, 12, 8 ರ 3 ಪಾದ ಗಳು) ; ಬೃಹತಿ (8, 8, 12, 8 ರ 4 ಪಾದಗಳು)–ಸತೋಬೃಹತಿ (12, 8, 12, 8 ರ 4 ಪಾದಗಳು) ; ಅತಿಶಕ್ವರಿ (8, 8, 8, 8, 8, 12, 8 ಅಕ್ಷರಗಳ 7 ಪಾದಗಳು); ಅತ್ಯಷ್ಟಿ (12, 12, 8, 8, 8, 12, 8 ಅಕ್ಷರಗಳ 7 ಪಾದಗಳು) ; ಇವು ಮುಖ್ಯವಾದವು. ಇವಲ್ಲದೆ 12, 8; 12, 8, 12; 12, 12, 8, 8; 12, 12, 12, 8; 12, 12, 12, 8, 8;— ಮಾತ್ರೆಗಳುಳ್ಳ ಗಾಯತ್ರೀ ಜಗತೀ ಛಂದಃಪಾದಗಳೊಂದಿಗೆ ಮಿಶ್ರಗಳು ಕೂಡ ಕ್ವಚಿತ್ತಾಗಿ ಕಂಡುಬರುತ್ತವೆ.

ಜಗತೀ ಪಾದಗಳೊಂದಿಗೆ ತ್ರಿಷ್ಟುಪ್ಪಾದಗಳು ಸೇರಿದ ಕೆಲವು ಮಿಶ್ರ ಪದ್ಯಗಳು ಇವೆಯಾದರೂ ಅವುಗಳಲ್ಲಿ ಒಂದು ನಿಯಮವಿಲ್ಲ. ಹೀಗೆಯೇ ತ್ರಿಷ್ಟುಪು ಗಾಯತ್ರಿ ಸೇರಿದವು ಕೆಲವೂ, ತ್ರಿಷ್ಟುಪ್ಪು ದ್ವಿಪದ ವಿರಾಟ್ಟು ಸೇರಿದವು ಕೆಲವೂ ಇವೆ.

೨.೬ ಮೇಲಣ ವೈದಿಕ ಛಂದಸ್ಸುಗಳಲ್ಲಿ ಕೇವಲ ಅಕ್ಷರನಿಯಮವೇ ಪ್ರಧಾನವಾದಂತೆ ಕಂಡುಬರುತ್ತದೆ; ಆದರೂ ಗುರುಲಘುನಿಯಮ ಕೂಡ

ಸ್ಪಷ್ಟವಾಗಿಯೇ ಗೋಚರಿಸುತ್ತದೆ. ಈ ಗುರುಲಘು ನಿಯಮಂಗಳ ದೆಸೆಯಿಂದ ಉದಾತ್ತ ಅನುದಾತ್ತ ಸ್ವರಿತ ಸ್ವರಗಳಿಗೆ ಯಾವ ಆತಂಕವೂ ಉಂಟಾಗುವುದಿಲ್ಲ. ಕೇವಲ ಅಕ್ಷರ ನಿಯಮಕ್ಕೆ ಸರಿಹೋಗದ ಹಲವು ಪಾದಗಳು ಋಕ್ಕುಗಳಲ್ಲಿ ಕಾಣುತ್ತವೆ. ಅಕ್ಷರ ನಿಯಮಕ್ಕೆ ಸರಿಹೋಗುವಂತೆ ಓದುವುದಕ್ಕೆ ಪಾದಗಳಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕು.

(i) ಯ, ವ ಗಳೆಂಬ ಅಂತಸ್ಥಗಳು ಪದದಲ್ಲಿದ್ದರೂ, ಸಂಧಿಕಾರಣವಾಗಿ ಬಂದರೂ ಸಾಧಾರಣವಾಗಿ ಅವುಗಳನ್ನು ಇ, ಉ ಗಳಾಗಿ ಉಚ್ಚರಿಸಬೇಕು : ಸ್ಯಾಮ > ಸಿ ಆಮ ; ಸ್ವರ್ > ಸು ಅರ್ ; ವೃಷಾಃ > ವಿ ಉಷಾಃ ; ವಿದಥೇಷ್ವಞ್ಜನ್ > ವಿದಥೇಷು ಅಞ್ಜನ್.

(ii) ಸಂಧಿಯಲ್ಲಿ ಸೇರಿದ ಸ್ವರಗಳನ್ನು ಪ್ರತ್ಯೇಕವಾಗಿ ಉಚ್ಚರಿಸಬೇಕು : ಚಾಗ್ನಯೇ > ಚ ಅಗ್ನಯೇ ; ವೀನ್ದ್ರಃ > ವಿ ಇನ್ದ್ರಃ ; ಅವತೂತಯೇ > ಅವತು ಊತಯೇ ; ಐನ್ದ್ರ > ಆ ಇನ್ದ್ರ.

(iii) ಏ, ಓಗಳ ತರುವಾಯ ಲೋಪವಾದ ಪದಾದಿಯಾದ ಅಕಾರವನ್ನು ಪ್ರತ್ಯೇಕವಾಗಿ ಉಚ್ಚರಿಸಬೇಕು.

(iv) ಷಷ್ಠೀ ಬಹುವಚನ ಪ್ರತ್ಯಯವಾದ ಆಮ್ ಅನ್ನು ಅ ಅಮ್ ಆಗಿಯೂ ; ದಾಸ, ಶೂರ ಮೊದಲಾದ ಶಬ್ದಗಳನ್ನು ದಅಸ, ಶುಉರ ಎಂದೂ, ಏ ಐ ಕಾರಗಳನ್ನು ಅಇ ಆಗಿಯೂ (ಜ್ಯೇಷ್ಠ > ಜ್ಯ ಇಷ್ಠ, ಐಚ್ಛಸ್) ಉಚ್ಚರಿಸಬೇಕು.

(v) ಕೆಲವು ಪದಗಳನ್ನು ಬರೆಹದಲ್ಲಿದ್ದಂತೆ ಓದಲಾಗದು. ಉದಾ॥ ಪಾವಕ ಶಬ್ದವನ್ನು ಪವಾಕ ಎಂದೂ, ಮೃಳಯವನ್ನು ಮೃಾಳಯ ಎಂದೂ, ಸುವಾಣವನ್ನು ಸ್ವಾನ ಎಂದೂ ಉಚ್ಚರಿಸಬೇಕು.

೨.೭ ಗುರುಲಘುಗಳ ವಿಷಯದಲ್ಲಿ ಕೂಡ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾಗುತ್ತದೆ :

(i) ಪಾದದಲ್ಲಿ ಮೊದಲಕ್ಷರವೂ, ಕಡೆಯಕ್ಷರವೂ ಗುರುಲಘುಗಳಲ್ಲಿ ಯಾವುದಾದರೂ ಆಗಬಹುದು.

(ii) ಳ, ಳ್ಹ (ಧ) ಗಳನ್ನು ದ್ವಿತ್ವಾಕ್ಷರಗಳಾಗಿ ಪರಿಗಣಿಸಬೇಕು, ಎಂದರೆ ಪೂರ್ವದಲ್ಲಿರುವ ಅಕ್ಷರವು ಗುರುವಾಗುತ್ತದೆ.

(iii) ದೀರ್ಘಸ್ವರವಾದಮೇಲೆ ಇನ್ನೊಂದು ಸ್ವರ ಬಂದರೆ ಆ ದೀರ್ಘಸ್ವರ ಹ್ರಸ್ವವಾಗುತ್ತದೆ. ಏ ಓ ಗಳಾದಮೇಲೆ ಅ ಬಂದರೆ ಅವು ಎ ಒ ಗಳಾಗುತ್ತವೆ.

೨.೮ ಈ ರೀತಿಯಾಗಿ ಅಕ್ಷರ ನಿಯಮಕ್ಕೂ ಅನಿರ್ದಿಷ್ಟ ಗುರುಲಘು ನಿಯಮಕ್ಕೂ ಸರಿಗೊಳಿಸುವುದಕ್ಕೆ ಈ ಮಾರ್ಪಾಟುಗಳನ್ನೆಲ್ಲ ಮಾಡಿದರೂ, ಅರ್ಥಭಂಗವಾಗದಂತೆ ಅಂಥ ಮಾರ್ಪಾಟುಗಳನ್ನು ಮಾಡಲು ಅವಕಾಶವಿಲ್ಲದ ಎಷ್ಟೋ ಪಾದಗಳು ಉಳಿದುಹೋಗುತ್ತವೆ. ಒಮ್ಮೊಮ್ಮೆ ಒಂದಕ್ಷರ ಸಾಲದೇಹೋಗುತ್ತದೆ. ಉದಾ : ತವ್ ತು ಆ ವಯಮ್ ಪಿತೋ (ಜಗತೀ : 8 ಅಕ್ಷರಗಳಿರಬೇಕು, 7 ಇವೆ) ; ಒಮ್ಮೊಮ್ಮೆ ಒಂದೋ ಎರಡೋ ಅಕ್ಷರಗಳು ಹೆಚ್ಚಾಗಿಹೋಗುತ್ತವೆ. ಉದಾ : ಅಗ್ನಿಮೀಳೇ ಭುಜಾಂ ಯ ವಿ ಷ್ಟ ವಮ್ (ಜಗತೀ ; ಷ್ಟವಮ್ ಹೆಚ್ಚಿನ ಅಕ್ಷರಗಳು.) ; ವಯಂ ತದಸ್ಯ ಸಂಭೃತ ವಸು (ವಸು ಹೆಚ್ಚಿನ ಅಕ್ಷರಗಳು.) ತಾನೋ ವಿದ್ವಾಂಸಾ ಮನ್ಮವೋ ಚೇತಮದ್ಯ (12 ಇವೆ ; 11 ಇರಬೇಕು). ತಮುಂಗಿರೋ ಜನ ಯೊ ನ ಪತ್ನೀಃ (10 ಇವೆ ; 11 ಇರಬೇಕು.) ತ ಊ ಷು ನೋ [3 ಲೋಪವಾಗಿವೆ] ಮಹೋ ಯಂ ಜತ್ರಾಃ (9 ಇವೆ ; 11 ಇರಬೇಕು). ಅಯಂ ಸ ಹೋತಾ [3 ಲೋಪವಾಗಿವೆ] ಯೋ ದ್ವಿಜನ್ಮಾ (9 ಇವೆ ; 11 ಇರಬೇಕು). ರಥೇಭಿರ್ಯಾತ ಋಷ್ಟಿಮಂದ್ಭಿರಶ್ವಪರ್ಣೈಃ (13 ಇವೆ ; 11 ಇರಬೇಕು).

ಗುರುಲಘು ವಿಷಯದಲ್ಲಿ ಕೂಡ ಆಯಾ ಪಾದಗಳಲ್ಲಿ ನಿಯಮರಾಹಿತ್ಯ ಕಾಣುತ್ತದೆ. ಉದಾ॥ 8 ಅಕ್ಷರಗಳ ಪಾದದಲ್ಲಿ ಸಾಧಾರಣವಾಗಿ ಮೊದಲರ್ಧ ದಲ್ಲಿ 1, 3ನೆಯದೂ, ಎರಡನೆಯರ್ಧದಲ್ಲಿ ಕಡೆಯದೂ ಗುರುಲಘುಗಳಲ್ಲಿ

ಯಾವುದಾದರೂ ಆಗಬಹುದು. 11 ಅಕ್ಷರಗಳ ಪಾದಗಳಲ್ಲಿ ಯತಿಗೆ ಪೂರ್ವ– (⏑) – – (⏑) ಆಗಲಿ,– (⏑) – – (⏑) – – (⏑) ಆಗಲಿ ಆಗಿ ರುತ್ತವೆ. ಮಧ್ಯಭಾಗವೂ ಕಡೆಯ ಭಾಗವೂ ⏑⏑–ಆಗಲಿ,–(⏑) ⏑ ಆಗಲಿ ಆಗಿರುತ್ತದೆ. ಎಂದರೆ 11 ಅಕ್ಷರಗಳ ಪಾದಗಳಲ್ಲಿ ಗುರುಲಘುಗಳ ಸೇರಿಕೆ– (⏑) – – (⏑) –, ⏑⏑ –, – ⏑ – – (⏑) ಆಗಲಿ, – (⏑) – – (⏑) – – (⏑), – (⏑), ⏑ – ⏑ – – (⏑) ಆಗಲಿ ಆಗಿರುತ್ತದೆ.

೨.೯ ಎಲ್ಲ ವೈದಿಕ ಛಂದಸ್ಸುಗಳೂ ಅಕ್ಷರ ಛಂದಸ್ಸುಗಳೆಂದು ಅಂದುಕೊಳ್ಳುವ ಕಾರಣ ಇಷ್ಟು ಮಾರ್ಪಾಟುಗಳನ್ನು ಮಾಡಿಕೊಳ್ಳುವುದೂ, ಮಾಡಿಕೊಂಡರೂ ಇನ್ನೂ ಬಹುಮಟ್ಟಿಗೆ ಕುದುರದೆ ನಿಂತುಹೋಗುವುದೂ ಸಂಭವಿಸುವುದೇನೋ. ಇವುಗಳಲ್ಲಿ ಕೆಲವು ಮಾತ್ರಾ ಛಂದಸ್ಸುಗಳೆಂದು ಕೊಂಡರೆ ಹೆಚ್ಚಿನ ತೊಡಕುಗಳು ತೆಗೆದು ಹೋಗುವುದೇನೋ ಎನಿಸುವುದು. ವೇದಗಳಲ್ಲಿ ಆರ್ಯಾ, ವೈತಾಲೀಯ ಛಂದಸ್ಸುಗಳಂಡೇ ಮಾತ್ರಾಬದ್ಧಗಳೆಂದು ಕಂಡುಬರುತ್ತವೆಯೆಂದು ವಿದ್ವಾಂಸರು ಹೇಳುತ್ತಿದ್ದಾರೆ. ಈ ಮಾತು ಎಷ್ಟರ ಮಟ್ಟಿಗೆ ನಿಜವಾದರೂ ಮಾತ್ರಾ ಛಂದಸ್ಸುಗಳು ವೇದಗಳಲ್ಲಿ ಇರಬೇಕೆಂಬ ಮಾತು ಸ್ಥಿರವಾಗುವುದಲ್ಲವೇ ?

೨.೧೦ ಮಾತ್ರಾ ಛಂದಸ್ಸುಗಳೆಂದರೆ ಪಾದಕ್ಕೆ ಇಷ್ಟು ಮಾತ್ರೆಗಳ ಪ್ರಕಾರ ಇರುವಂಥವೆಂದು ಕೆಲವರ ಅಭಿಪ್ರಾಯ. ಮಾತ್ರಾಸಂಖ್ಯೆ ನಿಯಂತವಾಗಿದ್ದರೂ ಗುರುಲಘುಗಳ ಸಂಖ್ಯೆ ನಿಯತವಾಗಿಲ್ಲದ ಪಾದಗಳುಳ್ಳ ಪದ್ಯಗಳು ಮಾತ್ರಾ ಛಂದಸ್ಸುಗಳೆಂದು ಹೇಳುತ್ತಾರೆ. ಆದರೂ ಮಾತ್ರಾ ಸಂಖ್ಯೆಯ ನಿಯಮ ಕೂಡ ಇಲ್ಲದ ಕೆಲವು ಗಣಗಳನ್ನು ಕೆಲವು ಭಾಷೆಗಳಲ್ಲಿ ಲಾಕ್ಷಣಿಕರು ಏರ್ಪಡಿಸಿಕೊಂಡಿದ್ದಾರೆ. ದ್ರಾವಿಡ ಭಾಷೆಗಳಲ್ಲಿ ಅಂಥ ಸಂಪ್ರದಾಯವಿದೆ. ತಮಿಳಿನಲ್ಲಿ ನೇರ್, ನಿರೈ, ಶೀರ್ ವಿಭಾಗ; ಕನ್ನಡದಲ್ಲಿ ಬ್ರಹ್ಮ, ವಿಷ್ಣು, ರುದ್ರ ಗಣಗಳು; ತೆಲುಗಿನಲ್ಲಿ ಸೂರ್ಯ, ಇಂದ್ರ, ಚಂದ್ರ ಗಣಗಳು ಇವುಗಳಲ್ಲಿ ಮಾತ್ರಾ ಸಂಖ್ಯೆಯ ನಿಯಮವು ಕಾಣಿಸದು. ಈ ವಿಷಯ ಆಯಾ ಭಾಷಾ ಛಂದಸ್ಸುಗಳನ್ನು ವಿವರಿಸುವಾಗ ತಿಳಿದು ಬರುತ್ತದೆ.

೨.೧೧ ವೈದಿಕ ಛಂದಸ್ಸುಗಳಲ್ಲಿ ಕೂಡ ಇಂಥ ಗಣನಿಯಮ ವೇನಾದರೂ ಕಂಡು ಬರುವುದೇನೋ ನೋಡೋಣ :

(i) ಗಾಯತ್ರಿ : ಒಂದು ರೀತಿ

ಅಗ್ನಿಮೀ । ಳೇ ಪುರೋ । ಹಿತಮ್ — ರ, ರ, ಲಗ
ಯಜ್ಞ ಸ್ಯ । ದೇವಂ ಋ । ತ್ವಿಜಮ್ — ತ, ಮ, ಲಗ
ಹೋತಾರಂ । ರತ್ನಧಾ । ತಮಮ್ — ಮ, ರ, ಲಗ

ಮೇಲಣ ಪಾದಗಳಲ್ಲಿ ಎರಡರಂತೆ ಕನ್ನಡ ವಿಷ್ಣುಗಣಗಳೂ ಒಂದು ಲಗವೂ ಸೇರಿವೆ.

(ii) ಗಾಯತ್ರಿ : ಇನ್ನೊಂದು ರೀತಿ

ತು ಅಮ್ ನೋ ಅ । ಗ್ನೇ ಮಹೋ । ಭಿಃ — ಮ, ರ, ಗ
ಪಾಹಿ ವಿ । ಶ್ವಸ್ಮಾ ಅರಾ । ತೇಃ — ರ. ಮ, ಗ
ಉತ ದ್ವಿ । ಷೋ ಮರ್ತ್ಯ ಅ । ಸ್ಯ — ನಲ, ತ, ಲ

ಮೊದಲ ಪಾದದಲ್ಲಿ ಅಕ್ಷರಗಳನ್ನು ಸರಿಗೊಳಿಸುವುದಕ್ಕೆ ತ್ವಮ್ ಅನ್ನು ತು ಅಮ್ ಆಗಿ ಓದಬೇಕೆನ್ನುವರು. ಕನ್ನಡ ಗಣಗಳಿಗೆ ಸರಿಹೊಂದಿಸಿಕೊಂಡರೆ ಹಾಗೆ ಮಾಡುವ ಅಗತ್ಯವಿಲ್ಲ. 3ನೇ ಪಾದದಲ್ಲಿ ವಿಶ್ವಸ್ಮಾ ಅರಾತೇಃ ಎಂದು ಓದುವುದು ಕೂಡ ಅಕ್ಷರ ನಿಯಮವನ್ನು ಅನುಸರಿಸುವುದಕ್ಕೇ. ವಿಶ್ವ ಸ್ಮಾರಾತೇಃ ಎಂದು ಸಂಧಿ ಮಾಡಿದರೆ ಕನ್ನಡ ಗಣಗಳಿಗೆ ಸರಿಹೋಗುತ್ತವೆ. 3ನೇ ಪಾದದಲ್ಲಿ ದಿವಿಷೋ ಎಂದು ದ್ವಿಷೋ ಎಂಬುದನ್ನು ಓದಿಕೊಂಡರೆ ಪಾದದ ಮೊದಲು ನಲವು ಬರುತ್ತದೆ. ಇಂಥ ಸ್ವರಭಕ್ತಿ ವೇದಕ್ಕೆ ವಿರುದ್ಧವಲ್ಲ. ಮೇಲಣ ಪದ್ಯದಲ್ಲಿ ಪಾದಕ್ಕೆ ಎರಡರಂತೆ ಕನ್ನಡ ವಿಷ್ಣುಗಣಗಳೂ, ಆ ಮೇಲೆ ಒಂದು ಗುರು ಇಲ್ಲವೆ ಲಘು ಕಂಡುಬರುತ್ತವೆ.

(iii) ಅನುಷ್ಟುಪ್ಪು : ಒಂದು ರೀತಿ

ಆ ಯು ಸ್ತೇ । ಸರ್ಪಿರಾ । ಸು ತೇ — ಮ, ರ, ಲಗ
ಅಗ್ನೇ ಸಂ । ಅಸ್ತ್ರಿಧಾ । ಯುಸೇ — ಮ, ರ, ಲಗ
ಐಷುಮ್ಯ । ಮ್ನಂ ಉತ । ಸ್ರವಃ — ರ, ಭ, ಲಗ
ಆ ಚಿತ್ತಂ । ಮರ್ತ್ಯಿ ಏಷ । ಧಾಃ — ಮ, ತ, ಗ

ಮೇಲಿನದರಲ್ಲಿ 3ನೇ ಪಾದದಲ್ಲಿ 'ಸಮ್' ಪತ್ತಿರ ನಿಲ್ಲಬೇಕು. ಅದು ಗುರುವಾಗುತ್ತದೆ. ಹಾಗೆಯೇ ದ್ಯುಮ್ನಂ ಉತ ಎಂದಾಗ ಉ ವನ್ನು ಪ್ರತ್ಯೇಕವಾಗಿ ಉಚ್ಚರಿಸಬೇಕು. ಮರ್ತ್ಯೇಷು ಎಂಬ ಸುಪ್ ರೂಪವನ್ನು ಮರ್ತಿ ಏಷು ಎಂದು ಮುರಿಯುವ ಅಗತ್ಯವಿಲ್ಲ. ಈ ಪದ್ಯಪಾದಗಳಲ್ಲಿ ಕೂಡ ಎರಡರಂತೆ ಕನ್ನಡ ವಿಷ್ಣುಗಣಗಳು, ಆಮೇಲೆ ಒಂದು ಗುರುವೋ, ಲಗವೋ ಕಂಡು ಬರುತ್ತದೆ.

(iv) ಅನುಷ್ಟುಪ್ಪು : ಇನ್ನೊಂದು ರೀತಿ

ಕೇಶ ವಿ । ಷಸ್ಯವಾ । ತ್ರೇಣ — ತ, ರ, ಗಲ

ಯದ್ರುದ್ರೋ । ಣಾ ಪಿಬತ್ । ಸಹ — ಮ, ರ, ಲಲ

ಋಕ್ಕಿನಲ್ಲಿ ಮೇಲಿನದು ಅರ್ಧಭಾಗ. ಪಾದಕ್ಕೆ ಎರಡರಂತೆ ವಿಷ್ಣುಗಣಗಳು, ಆಮೇಲೆ ಗಲವೋ, ಲಲವೋ ಇವೆ.

(v) ಪಙ್ಕ್ತಿ

ಇತ್ಥಾಹಿ । ಸೋಮ ಇನ್ । ಮದೇ — ತ, ರ, ಲಗ

ಬ್ರಹ್ಮಾಚ । ಕಾರ ವ । ರ್ಧನಮ್ — ತ, ರ, ಲಗ

ಶವಿಷ್ಠ । ವಜ್ರಿನ್ನೋ । ಜಸಾ — ಸಲ, ಮ, ಲಗ

ಪೃಥಿವ್ಯಾ । ನಿಃಶಶಾ । ಅಹಿಮ್ — ನಗ, ರ, ಲಗ

ಅರ್ಚನ್ನ । ನುಸ್ವರಾ । ಜ್ಯ ಅಮ್ — ತ, ರ, ಲಗ

ಮೇಲಿನ 3ನೇ ಪಾದದಲ್ಲಿ ಶವಿಷ್ಠ–ಶವಿ ಇಷ್ಠ ಎಂದೂ, ಪೃಥಿವ್ಯಾ–ಪೃಥಿವಿ ಆ ಎಂದೂ ಓದಿಕೊಳ್ಳಬೇಕು. ಪಾದಕ್ಕೆ ಎರಡರಂತೆ ವಿಷ್ಣುಗಣಗಳೂ, ಒಂದು ಲಗವೂ ಬರುತ್ತವೆ.

(iv) ತ್ರಿಷ್ಟುಪ್ಪು : ಒಂದು ರೀತಿ

ಅನಾ । ಗಾಸ್ತ್ವೇ । ಅದಿತಿ । ತ್ವೇತು । ರಾಸಃ

— ಲಗ, ಗಗ, ನ, ಗಲ, ಗಗ

ಇಮಂ । ಯಜ್ಞಂ । ದಧತು । ಶ್ರೋಷ । ಮಾಣಾಃ

— ಲಗ, ಗಗ, ನ, ಗಲ, ಗಗ

ಮೇಲಿನೆರಡು ಪಾದಗಳೂ ಪದ್ಯದಲ್ಲಿ ಅರ್ಧಭಾಗ. ಮೊದಲು ಒಂದು ಲಗವೂ ಆ ಮೇಲೆ 4 ಕನ್ನಡ ಬ್ರಹ್ಮಗಣಗಳೂ ಬರುತ್ತವೆ.

(vii) ತ್ರಿಷ್ಟುಪ್ಪು : ಇನ್ನೊಂದು ರೀತಿ

ಆ ಸ್ಮಾ । ಕಂ ಸು । ತು ಭುವ । ನಸ್ಯ । ಗೋಪಾಃ
— ಲಗ, ಗಗ, ನ, ಗಲ, ಗಗ

ಪಿಬಂ । ತು ಸೋ । ಮಂ ಅವ । ಸೇನೋ । ಅದ್ಯ
— ಲಗ, ಲಗ, ನ, ಗಗ, ಗಲ

ಮೇಲಿನೆರಡು ಪಾದಗಳೂ ತ್ರಿಷ್ಟುಪ್ಪದ್ಯದಲ್ಲಿ ಅರ್ಧಭಾಗ. ಮೊದಲಪಾದ viದಲ್ಲಿನಂತೆಯೇ ಇದೆ. ೩ನೇ ಪಾದದಲ್ಲಿ ೩ನೇ ಗಣ ಲಗವಾಗಿರುವ ಕಾರಣ ತಪ್ಪಿದೆ. ತುಂ ಅನ್ನು ತೂ ಆಗಿ ಉಚ್ಚರಿಸಬೇಕೇನೋ. ಮಂ ಅವ ಎಂದು ಅಕಾರವನ್ನು ಪ್ರತ್ಯೇಕವಾಗಿ ಉಚ್ಚರಿಸಕೂಡದು, ಮಮವ ಎಂದು ಸೇರಿಸಿ ಹೇಳಬೇಕು.

(viii) ಜಗತಿ : ಒಂದು ರೀತಿ

ಅನಾನು । ದೋ ವೃಷ । ಭೋ ದೋಧ । ತೋ ವಧಃ
— ನಲ, ಭ, ತ, ರ

ಗಂಭೀರ । ಋಷ್ವೋ ಅ । ಸಂ ಅಷ್ಟ । ಕಾವಿಅಃ
— ತ, ತ, ತ, ರ

ಮೇಲಿನೆರಡು ಪಾದಗಳೂ ಜಗತೀ ಪದ್ಯದಲ್ಲಿ ಅರ್ಧಭಾಗ. ಅನಾನು = ಅನ ಅನು ಎಂದು ಓದಿದರೆ ಪಾದಕ್ಕೆ 4 ವಿಷ್ಣುಗಳು ಬರುತ್ತವೆ.

(ix) ಜಗತಿ : ಇನ್ನೊಂದು ರೀತಿ

ಅಭ್ರ ಪ್ರು । ಷೋನವಾ । ಚಾಪ್ರುಷಾ । ವೀನು
— ತ, ರ, ರ, ಲಲ

ಹವಿಷ್ಮಂ । ತೋ ನಯು । ಜ್ಞಾವಿಜಾ । ನುಷಃ
— ನಲ, ಭ, ರ, ಲಗ

ಇದು ಒಂದು ಜಗತೀ ಪದ್ಯದಲ್ಲಿ ಅರ್ಧ. ೩ನೇ ಭಾಗದಲ್ಲಿ ಮೊದಲಗಣ ಹವಿಷಮಂ ಎಂದು ಹೇಳಬೇಕು. ಪಾದಕ್ಕೆ 3 ವಿಷ್ಣುಗಣಗಳು, ಆಮೇಲೆ ಒಂದು ಲಲವೋ ಲಗವೋ ಬರುತ್ತದೆ.

(X) ದ್ವಿಪದಾ ವಿರಾಜ್

ಪ। ರಿಪ್ರಥ । ನ್ವ । ಇ । ನ್ದ್ರಾಯ ಸೋ । ಮ
— ಲ, ರ, ಲ, ಗ, ರ, ಲ

ಸ್ವಾ । ದುರ್ಮಿತ್ರಾ । ಯ । ಪೂ । ಷ್ಣೇ ಭಗಾ ।ಯ
— ಗ, ಮ, ಲ, ಗ, ರ, ಲ

ಮೊದಲು ಒಂದು ಲಘುವೋ ಗುರುವೋ, ಆಮೇಲೆ ಒಂದು ವಿಷ್ಣುಗಣ, ಆಮೇಲೆ ಲಘುವೋ ಗುರುವೋ (ಸಾಧಾರಣವಾಗಿ ಲಘು) ಬರುತ್ತದೆ; ಇದು ಒಂದು ಪಾದ.

೨.೧೨ ಇಲ್ಲಿಯವರೆಗೆ ಹೇಳಿದ್ದೆಲ್ಲ ಒಂದು ಸೂಚನೆ. ಛಂದೋ ಲಕ್ಷಣವನ್ನು ಏರ್ಪಡಿಸಿದಾಗ ದೃಷ್ಟಿಭೇದದ ಕಾರಣ ವಿವಿಧವಾಗಿ ಏರ್ಪಡಿಸಿ ಕೊಳ್ಳಬಹುದು. ವೈದಿಕ ಛಂದೋ ಲಕ್ಷಣವನ್ನು ಏರ್ಪಡಿಸಿದವರು ಅಕ್ಷರ ದೃಷ್ಟಿಯಿಂದ ಪ್ರವರ್ತಿಸಿದ್ದಾರೆ. ಅಕ್ಷರಗಳಿಗೆ ಬಗ್ಗದ ಕೆಲವನ್ನು ಮಾತ್ರಾ ಛಂದಸ್ಸುಗಳಾಗಿ ಏರ್ಪಡಿಸಿದ್ದಾರೆ. ಅಕ್ಷರಗಳಿಗೂ ಮಾತ್ರೆಗಳಿಗೂ ಬಗ್ಗದ ಅನೇಕ ಪದ್ಯಗಳು ಉಳಿದು ಹೋಗಿವೆ. ಅವುಗಳನ್ನು ಹೊಂದಿಸಿಕೊಳ್ಳುವುದಕ್ಕೆ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕೆಂದಿದ್ದಾರೆ. ಅಂಥ ಮಾರ್ಪಾಟುಗಳನ್ನು ಮಾಡಿಕೊಂಡರೂ ಕುದುರದಂತಹ ಪದ್ಯಗಳೆಷ್ಟೋ ನಿಂತು ಹೋಗಿವೆ. ಹೊಂದಿರುವವುಗಳಿಗೂ, ಹೊಂದದಿರುವವುಗಳಿಗೂ ಸರಿ ಹೋಗುವ ಲಕ್ಷಣವನ್ನು ಏರ್ಪಡಿಸಿಕೊಳ್ಳುವ ಆವಶ್ಯಕತೆಯಿದೆ: ದ್ರಾವಿಡ ಛಂದಸ್ಸಂಪ್ರದಾಯವು ವೈದಿಕ ಪದ್ಯಗಳಲ್ಲಿ ಕೂಡ ಸಲ್ಲುವುದೇನೋ ನೋಡ ಬೇಕೆಂದು ಈ ಪ್ರಬಂಧದಲ್ಲಿ ಸೂಚನೆ ಮಾಡಲಾಗಿದೆ. ಪರಿಶೋಧನೆ ಮಾಡಿದರೆ ಒಂದು ಸೂತ್ರವು ಸಿಕ್ಕುವುದೇನೋ; ವಿದ್ವಾಂಸರು ಈ ಸೂಚನೆಯನ್ನು ನಿರಾಕರಿಸದೆ, ಅದನ್ನು ಕುರಿತು ವಿಚಾರ ಮಾಡುವಂತಾಗಲಿ,

೨.೧೩ ಛಂದೋಭೇದಗಳನ್ನು ಕುರಿತು ಲಾಕ್ಷಣಿಕರಲ್ಲಿ ಅಭಿಪ್ರಾಯ ಭೇದಗಳಿವೆ;

(i) ಪದ್ಯಸಮೂಹವು ವೃತ್ತಜಾತಿಭೇದಗಳಿಂದ 2 ವಿಧಗಳಾಗಿವೆ. ನಿಯತ ವರ್ಣ ವ್ಯವಸ್ಥೆಯಿಂದ ಛಂದಸ್ಸಿದ್ಧಿಯುಂಟಾಗಿರುವುದು 'ವೃತ್ತ'. ನಿಯತ ಮಾತ್ರಾವ್ಯವಸ್ಥೆಯಿಂದ ಛಂದಸ್ಸಿದ್ಧಿ ಹೊಂದಿರುವುದು 'ಜಾತಿ'. "ನಾಲ್ಕು ಪಾದಗಳನ್ನುಳ್ಳದ್ದು ಪದ್ಯ. ಅದು ವೃತ್ತ, ಜಾತಿ ಎಂದು 2 ಬಗೆಗಳಾಗಿವೆ. ಏಕ-ದೇಶಸ್ಥಿತವಾದದ್ದು ಜಾತಿ. ಲಘುಗುರುಸ್ಥಿತವಾದದ್ದು ವೃತ್ತ"—ಇದು ಹಲಾಯುಧನ ಮಾತು.

(ii) ಛಂದಸ್ಸು, ವೃತ್ತ ಎಂಬವು ಪರ್ಯಾಯ ವಾಚಕಗಳು. ವರ್ಣ ವೃತ್ತವು ವರ್ಣಛಂದಸ್ಸು; ಮಾತ್ರಾ ವೃತ್ತವು ಮಾತ್ರಾ ಛಂದಸ್ಸು.

(iii) "ಮಾತ್ರಾಕ್ಷರ ಸಂಖ್ಯೆಯಿಂದ ನಿಯತವಾದ ವಾಕ್ಯ ಛಂದಸ್ಸು. ಗುರುಲಘು ಸಮವೇತಸ್ವರೂಪದಿಂದ ನಿಯತವಾದ ವಾಕ್ಯ ವೃತ್ತ"— ಎಂಬುದು ಛಂದಃಪರಿಮಲಕಾರನ ಮಾತು.

(iv) ಪದ್ಯ ಛಂದವು 3 ವಿಧಗಳು: ವೈದಿಕ, ಲೌಕಿಕ, ಉಭಯ ಸಾಧಾರಣ. ಲೌಕಿಕವು ಪುನಃ 3 ವಿಧಗಳು: ಗಣ ಛಂದಸ್ಸು, ಮಾತ್ರಾ ಛಂದಸ್ಸು, ಅಕ್ಷರ ಛಂದಸ್ಸು. ಆರ್ಯ ಮೊದಲಾದವು ಗಣ ಛಂದಸ್ಸು. ಚೂಲಿಕ ಮೊದಲಾದವು ಮಾತ್ರಾ ಛಂದಸ್ಸು. ಉತ್ಕೃತಿ ಮೊಧಲಾದವು ಅಕ್ಷರ ಛಂದಸ್ಸು.

(v) ಪದ್ಯ ಛಂದವು 4 ವಿಧಗಳು: ಅಕ್ಷರ ಛಂದಸ್ಸು, ಮಾತ್ರಾ ಛಂದಸ್ಸು, ಅಕ್ಷರಗಣ ಛಂದಸ್ಸು, ಮಾತ್ರಾಗಣ ಛಂದಸ್ಸು. ಮಾತ್ರಾ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಗಳಿದ್ದರೂ ಅಕ್ಷರ ಸಂಖ್ಯೆ ಸರಿಹೋದರೆ, ಅದು ಅಕ್ಷರ ಛಂದಸ್ಸು. ಅಕ್ಷರ ಸಂಖ್ಯೆಯಲ್ಲಿ ಹೆಚ್ಚುಕಡಿಮೆಗಳಿದ್ದರೂ ಮಾತ್ರಾ ಸಂಖ್ಯೆ ಸರಿಹೋದರೆ, ಅದು ಮಾತ್ರಾ ಛಂದಸ್ಸು. ಅಕ್ಷರಗಣಗಳು ಕ್ರಮವಾಗಿ ನಿಂತು, ಗುರು ಲಘುಗಳು ಕೂಡ ನಿಯತ ಸ್ಥಾನಗಳಿದ್ದರೆ ಅದು ಅಕ್ಷರಗಣ ಛಂದಸ್ಸು. ಮಾತ್ರಾ ಗಣಗಳು ಕ್ರಮವಾಗಿ ನಿಂತರೆ, ಅದು ಮಾತ್ರಾಗಣ ಛಂದಸ್ಸು; ಇವುಗಳಲ್ಲಿ ಅಕ್ಷರಗಣಗಳು ನಿಯತಗಳಲ್ಲ.

(vi) ಮೇಲಿನ 4 ವಿಧಗಳಲ್ಲದೆ ಇನ್ನೊಂದು ರೀತಿಯ ಪದ್ಯ ಸಮೂಹ ಕೂಡ ಇರುವುದೆಂದು ತಿಳಿಯಬೇಕು. ಮಾತ್ರಾಗಣ ಛಂದಸ್ಸುಗಳಲ್ಲಿ ಗಣಗಳು ವರಸೆಯಾಗಿ ಸರಿಹೋಗಬೇಕು. ಪಾದದಲ್ಲಿನ ಒಟ್ಟು ಮಾತ್ರೆಗಳ ಸಂಖ್ಯೆ ಕೂಡ ಸರಿಹೋಗಬೇಕು. ಆದರೂ ಪಾದದಲ್ಲಿ ಮಾತ್ರಾ ಗಣಗಳು ವರಸೆಯಾಗಿ ಸರಿಹೋದರೂ, ಮಾತ್ರಾ ಸಂಖ್ಯೆ ಸರಿಹೋಗುವ ಅಗತ್ಯವಿಲ್ಲದ ಕೆಲವು ಛಂದಸ್ಸುಗಳಿವೆ. ಅವು ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತವೆ. ತಮಿಳಿನ ಮಾಚ್ಚೀರುಗಳಲ್ಲಿ 3ರಿಂದ 5ರ ವರೆಗೆ ಮಾತ್ರೆಗಳಿವೆ; ವಿಳಚ್ಚೀರು ಗಳಲ್ಲಿ 4ರಿಂದ 6ರ ವರೆಗೆ ಮಾತ್ರೆಗಳಿವೆ. ಕಾಯ್‌ಚ್ಚೀರುಗಳಲ್ಲಿ 5ರಿಂದ 8ರ ವರೆಗೆ ಇವೆ. ಕಣಿಚ್ಚೀರುಗಳಲ್ಲಿ 6ರಿಂದ 9ರ ವರೆಗೆ ಇವೆ. ಪೂದುಚ್ಚೀರು ಗಳಲ್ಲಿ 7ರಿಂದ 12ರ ವರೆಗೆ ಇವೆ. ಕನ್ನಡದಲ್ಲಿ ಬ್ರಹ್ಮಗಣದಲ್ಲಿ 3ರಿಂದ 4ರ ವರೆಗೆ, ವಿಷ್ಣುಗಣದಲ್ಲಿ 4ರಿಂದ 6ರ ವರೆಗೆ, ರುದ್ರಗಣದಲ್ಲಿ 5ರಿಂದ 8ರ ವರೆಗೆ ಮಾತ್ರೆಗಳಿವೆ. ತೆಲುಗಿನ ಸೂರ್ಯಗಣಕ್ಕೆ 3 ಮಾತ್ರೆಗಳು ಮಾತ್ರ; ಇಂದ್ರ ಗಣಕ್ಕೆ 4ರಿಂದ 5ರ ವರೆಗೆ; ಚಂದ್ರಗಣಕ್ಕೆ 5ರಿಂದ 7ರ ವರೆಗೆ ಮಾತ್ರೆಗಳಿವೆ.

೨.೧೪ ವೈದಿಕ ಛಂದಸ್ಸುಗಳಲ್ಲಿ ಮಿಕ್ಕ ಛಂದೋಭೇದಗಳಿಗೆ ಬಗ್ಗದೆ ಮಿಕ್ಕು ಹೋದಂಥವೇನಾದರೂ ದ್ರಾವಿಡ ಛಂದಸ್ಸುಗಳಲ್ಲಿ ಸೇರುವುದೇ ಎಂಬ ವಿಷಯವನ್ನು ಕುರಿತು ಆಲೋಚಿಸಿದರೆ ಒಳಿತೆಂದು ಸೂಚಿಸಿ ಇಲ್ಲಿಗೆ ಈ ವಿಚಾರವನ್ನು ಬಿಡುತ್ತೇನೆ.

೨.೧೫ ಮೇಲೆ ವಿವರಿಸಿದ ವಿಷಯಗಳು ಮೇಕ್ಡನಲ್ ಮೊದಲಾದ ಪಾಶ್ಚಾತ್ಯ ಪಂಡಿತರು ವೇದಗಳನ್ನು ಪರಿಶೀಲಿಸಿ ಹೇಳಿದಂಥ ಮಾತುಗಳು. ಪಿಂಗಳ ಛಂದಶ್ಶಾಸ್ತ್ರದಲ್ಲಿ ವೈದಿಕ ಛಂದಸ್ಸನ್ನು ಕುರಿತು ಈ ರೀತಿಯಾಗಿ ಹೇಳಲ್ಪಟ್ಟಿದೆ.

(1) ವೇದದಲ್ಲಿ ಬರುವ ಛಂದಸ್ಸುಗಳು: ಗಾಯತ್ರೀ, ಉಷ್ಣಿಕ್, ಅನುಷ್ಟುಭ್, ಬೃಹತೀ, ತ್ರಿಷ್ಟುಭ್, ಜಗತಿ ಎಂಬಿವು. ಇವುಗಳಲ್ಲಿ ಒಂದೊಂದೂ ಆರ್ಷೀ, ದೈವೀ, ಆಸುರೀ, ಪ್ರಾಜಾಪತ್ಯಾ, ಯಾಜುಷೀ,

ಸಾವಿತ್ರ್ಯಾ, ಆರ್ಚೀ, ಬ್ರಾಹ್ಮೀ ಎಂದು ಎಂಟೆಂಟು ಭೇದಗಳನ್ನು ಹೊಂದಿದೆ. ಆಯಾ ಭೇದಗಳಿಗೆ ಇರುವ ಅಕ್ಷರ ಸಂಖ್ಯೆ ಹೀಗಿದೆ :

ಛಂದಸ್ಸು :		ಗಾಯತ್ರೀ	ಉಷ್ಣಿಕ್	ಅನುಷ್ಟುಭ್	ಬೃಹತೀ	ಪಂಕ್ತಿ	ತ್ರಿಷ್ಟುಭ್	ಜಗತೀ
ಆರ್ಷೀ	....	24	28	32	36	40	44	48
ದೈವೀ	....	1	2	3	4	5	6	7
ಆಸುರೀ	....	15	14	13	12	11	10	9
ಪ್ರಾಜಾಪತ್ಯಾ	....	8	12	16	20	24	28	32
ಯಾಜುಷೀ	....	6	7	8	9	10	11	12
ಸಾವಿತ್ರ್ಯಾ	....	12	14	16	18	20	22	24
ಆರ್ಚೀ	....	18	21	24	27	30	33	36
ಬ್ರಾಹ್ಮೀ	....	36	42	48	54	60	66	72

(2) ಗಾಯತ್ರೀ ಪಾದದಲ್ಲಿ 8 ಅಕ್ಷರಗಳು. ಜಗತೀ ಪಾದದಲ್ಲಿ 12. ವಿರಾಟ್ಪಾದದಲ್ಲಿ 10. ತ್ರಿಷ್ಟುಪ್ಪಾದದಲ್ಲಿ 11 ಇರುತ್ತವೆ. ಯಾವ ಛಂದಸ್ಸಿಗೆ ಎಷ್ಟು ಪಾದಗಳೋ ಆ ಪಾದಗಳಿಗೆ ನಿರ್ದಿಷ್ಟವಾದ ಅಕ್ಷರ ಸಂಖ್ಯೆಯೊಂದಿಗೆ ಹೇಳಿದರೆ ಅಂಥವಕ್ಕೆ 'ಉಕ್ತಪಾದ' ಎಂದು ಹೆಸರು. ಗಾಯತ್ರಿಗೆ 3 ಪಾದಗಳು. ಅನುಷ್ಟುಪ್ಪಿಗೆ 4 ಗಾಯತ್ರೀ ಪಾದಗಳು.

(3) ಉಕ್ತಪಾದವಾದ ಗಾಯತ್ರಿಯಲ್ಲದೆ, ಗಾಯತ್ರಿಯಲ್ಲಿ ಅನೇಕ ಭೇದಗಳು ಕಂಡು ಬರುತ್ತವೆ : (i) ಚತುಷ್ಪಾದ್ಗಾಯತ್ರಿ : ಆರರಂತೆ ಅಕ್ಷರಗಳ 4 ಪಾದಗಳು. (ii) ಪಾದ ನಿಚೃದ್ಗಾಯತ್ರಿ : ಏಳರಂತೆ ಅಕ್ಷರಗಳ 3 ಪಾದಗಳು. (iii) ಅತಿಪಾದ ನಿಚೃದ್ಗಾಯತ್ರಿ : 3 ಪಾದಗಳು ; ಮೊದಲ ಪಾದದಲ್ಲಿ ಆರು, 2ನೇ ಪಾದದಲ್ಲಿ ಎಂಟು, 3ನೇ ಪಾದದಲ್ಲಿ ಏಳು ಅಕ್ಷರಗಳು. (iv) ನಾಗೀ ಗಾಯತ್ರಿ ; 3 ಪಾದಗಳು ; ಮೊದಲನೆಯದು ಒಂಬತ್ತು ; 2ನೆಯದು ಒಂಬತ್ತು ; 3ನೆಯದು ಆರು ಅಕ್ಷರಗಳು. (v) ವಾರಾಹೀ ಗಾಯತ್ರಿ : 3 ಪಾದಗಳು ; ಮೊದಲನೆಯದು ಆರು ; 2ನೆಯದು ಒಂಬತ್ತು ; 3ನೆಯದು ಒಂಬತ್ತು ಅಕ್ಷರಗಳು. (vi) ವರ್ಧ

ಪೂನಾ ಗಾಯತ್ರಿ : 3 ಪಾದಗಳು ; ಆರು, ಏಳು, ಎಂಟು ಅಕ್ಷರಗಳು. (vii) ಪ್ರತಿಷ್ಠಾ ಗಾಯತ್ರಿ : 3 ಪಾದಗಳು ; ಎಂಟು, ಏಳು, ಆರು ಅಕ್ಷರಗಳು (viii) ದ್ವಿಪದಾ ವಿರಾಟ್ : 2 ಪಾದಗಳು ; ಹನ್ನೆರಡು, ಎಂಟು ಅಕ್ಷರಗಳು. (ix) ತ್ರಿಪಾದ್ವಿರಾಟ್ : 3 ಪಾದಗಳು ; ಹನ್ನೊಂದು, ಹನ್ನೊಂದು, ಹನ್ನೊಂದು ಅಕ್ಷರಗಳು.

(4) (ಅ) ಉಷ್ಣಿಕ್ಕುವಿನಲ್ಲಿ ಉಕ್ತಪಾದಕ್ಕೆ 2 ಗಾಯತ್ರೀ ಪಾದಗಳು, ಆ ಮೇಲೆ 1 ಜಗತೀಪಾದ; 8, 8, 12—ಈ ವರಸೆ ತಪ್ಪಿದ ಉಷ್ಣಿಕ್ಕುಗಳೂ ಇವೆ :

(i) ಕಕುಭ್=ಗಾಯತ್ರೀ, ಜಗತೀ, ಗಾಯತ್ರೀ (ii) ಪುರಉಷ್ಣಿಕ್=ಜಗತೀ, ಗಾಯತ್ರೀ, ಗಾಯತ್ರೀ, (iii) ಪರೋಷ್ಣಿಕ್=ಗಾಯತ್ರೀ, ಗಾಯತ್ರೀ ಜಗತೀ.

(ಆ) ಏಳರಂತೆ ಅಕ್ಷರಗಳ 4 ಪಾದಗಳುಳ್ಳದ್ದು ಸಹ ಉಷ್ಣಿಕ್ ಎಂದೆನಿಸಿದೆ.

(5) (ಅ) ಬೃಹತಿಯಲ್ಲಿ ಉಕ್ತಪಾದಕ್ಕೆ ವರಸೆಯಾಗಿ 1 ಜಗತಿ, 3 ಗಾಯತ್ರಿಗಳು. ಈ ಕ್ರಮ ತಪ್ಪಿದ ಬೃಹತಿಗಳು ಕೂಡ ಇವೆ. ಜಗತಿಯು 3ನೇ ಪಾದವಾಗಿದ್ದರೆ 'ಪಥ್ಯ'. 2ನೇ ಪಾದವಾಗಿದ್ದರೆ 'ನ್ಯಂಕುಸಾರಿಣಿ' (ಇದಕ್ಕೆ ಸ್ಕಂಧೋಗ್ರೀವೀ, ಉರೋಬೃಹತೀ ಎಂಬ ಹೆಸರುಗಳು ಕೂಡ ಇವೆ); 4ನೇ ಪಾದವಾಗಿದ್ದರೆ ಉಪರಿಷ್ಟಾದ್ಬೃಹತಿ; 1ನೇ ಪಾದವಾದರೆ ಪುರಸ್ತಾದ್ಬೃಹತಿ.

(ಆ) ಕೆಲವು ಬೃಹತೀಲಕ್ಷಣವನ್ನು ತಪ್ಪಿದವು ಕೂಡ ಬೃಹತಿಗಳ ಕೆಳಗೇ ಪರಿಗಣಿಸಲ್ಪಟ್ಟಿವೆ : (i) 9–9ರಂತೆ ಅಕ್ಷರಗಳುಳ್ಳ 4 ಪಾದಗಳು (ii) 4 ಪಾದಗಳು : 10, 10, 8, 8 ಅಕ್ಷರಗಳು. (iii) 3 ಜಗತೀ ಪಾದಗಳು : 12, 12, 12—ಇದಕ್ಕೆ ಮಹಾಬೃಹತಿ ಎಂದು ಹೆಸರು. ಇದನ್ನು ಸತೋಬೃಹತಿ ಎಂದು ಕೂಡ ಹೇಳುತ್ತಾರೆ.

(6) (ಅ) ಪಂಕ್ತಿಗೆ ಉಕ್ತಪಾದದಲ್ಲಿ ವರಸೆಯಾಗಿ 2 ಜಗತೀ ಪಾದಗಳು, 2 ಗಾಯತ್ರೀ ಪಾದಗಳು. ಈ ಕ್ರಮ ತಪ್ಪಿದವು ಕೂಡ ಇವೆ.

(i) ಸತಃಪಂಕ್ತಿ : ಜಗತೀ, ಗಾಯತ್ರೀ, ಜಗತೀ, ಗಾಯತ್ರೀ (ಗಾಯತ್ರೀ, ಜಗತೀ, ಗಾಯತ್ರೀ ಜಗತೀ—ಇದಕ್ಕೆ ಕೂಡ ಸತಃಪಂಕ್ತಿ ಯೆಂದು ಹೆಸರು.)

(ii) ಪ್ರಸ್ತಾರಪಂಕ್ತಿ : ಜಗತೀ, ಜಗತೀ, ಗಾಯತ್ರೀ, ಗಾಯತ್ರೀ —4 ಪಾದಗಳು. (iii) ಆಸ್ತಾರಪಂಕ್ತಿ : ಗಾಯತ್ರೀ, ಗಾಯತ್ರೀ, ಜಗತೀ, ಜಗತೀ—4 ಪಾದಗಳು. (iv) ವಿಷ್ಟಾರ ಪಂಕ್ತಿ : ಗಾಯತ್ರೀ, ಜಗತೀ, ಜಗತೀ, ಗಾಯತ್ರೀ—4 ಪಾದಗಳು. (v) ಸಂಸ್ತಾರ ಪಂಕ್ತಿ : ಜಗತೀ ಗಾಯತ್ರೀ, ಗಾಯತ್ರೀ, ಜಗತೀ – 4 ಪಾದಗಳು.

(ಆ) ಪಂಕ್ತಿ ಲಕ್ಷಣವನ್ನು ತಪ್ಪಿದ ಕೆಲವು ಪಂಕ್ತಿಗಳ ಹೆಸರು ;

(1) ಅಕ್ಷರ ಪಂಕ್ತಿ: (i) 5–5 ಅಕ್ಷರಗಳುಳ್ಳ 4 ಪಾದಗಳು (ii) 5–5 ಅಕ್ಷರಗಳುಳ್ಳ 2 ಪಾದಗಳು. (2) ಪದಪಂಕ್ತಿ; (i) 5–5 ಅಕ್ಷರಗಳುಳ್ಳ 5 ಪಾದಗಳು. (ii) ಕ್ರಮವಾಗಿ 4, 6, 5, 5, 5, ಅಕ್ಷರಗಳುಳ್ಳ 5 ಪಾದಗಳು. (3) ಪಥ್ಯಾಪಂಕ್ತಿ : 5 ಗಾಯತ್ರೀ ಪಾದಗಳು.

(7) ತ್ರಿಷ್ಟುಬ್ಜಗತಿ ಉಕ್ತಪಾದಕ್ಕೆ ಎಂಟರಂತೆ ಅಕ್ಷರಗಳುಳ್ಳ 6 ಗಾಯತ್ರೀ ಪಾದಗಳು. ತ್ರಿಷ್ಟುಭ್‌ಜ್ಯೋತಿಷ್ಮತಿಗೆ ಉಕ್ತ ಪಾದಕ್ಕೆ ವರಸೆ ಯಾಗಿ 1 ತ್ರಿಷ್ಟುಪ್ಪಾದ, 4 ಗಾಯತ್ರಿಗಳು, ಜಗತೀಜ್ಯೋತಿಷ್ಮತಿಗೆ ಉಕ್ತ ಪಾದಕ್ಕೆ ವರಸೆಯಾಗಿ 1 ಜಗತೀಪಾದ, 4 ಗಾಯತ್ರೀ ಪಾದಗಳು. (i) ಪುರಸ್ತಾಜ್ಜ್ಯೋತಿ : ಒಂದು ತ್ರಿಷ್ಟುಪ್ಪಾದ, 4 ಗಾಯತ್ರೀ ಪಾದಗಳು. (ii) ಮಧ್ಯೇಜ್ಯೋತಿ : 2 ಗಾಯತ್ರೀ ಪಾದಗಳು, 1 ತ್ರಿಷ್ಟುಪ್ಪಾದ, 2 ಗಾಯತ್ರೀ ಪಾದಗಳು. (iii) ಉಪರಿಷ್ಟಾಜ್ಜ್ಯೋತಿ : 4 ಗಾಯತ್ರೀ ಪಾದಗಳು, 1 ತ್ರಿಷ್ಟುಪ್ಪಾದ.

(8) (i) 5 ಅಕ್ಷರಗಳ ಪಾದ ಒಂದೂ, 6 ಅಕ್ಷರಗಳ ಪಾದ ಮೂರೂ ಇದ್ದರೆ ಶಂಕುಮತಿ. (ii) ಒಂದು ಪಾದದಲ್ಲಿ 6 ಅಕ್ಷರಗಳಿದ್ದೂ, ಮಿಕ್ಕ ಪಾದಗಳು ಆಯಾ ಛಂದೋ ಲಕ್ಷಣವನ್ನು ಅನುಸರಿಸಿದ್ದರೆ ಕಕುಬ್ಮತಿ. (iii) 3 ಪಾದಗಳಿರುವ ಛಂದಸ್ಸಿನಲ್ಲಿ ಮಧ್ಯ ಪಾದವು ಸ್ವಲ್ಪಾಕ್ಷರಗಳಿಂದ ಕೂಡಿದ್ದರೆ ಅದಕ್ಕೆ ಪಿಪೀಲಿಕ ಮಧ್ಯ ಎಂದು ಹೆಸರು. ಆ ಮಧ್ಯ ಪಾದವು ಮಿಕ್ಕೆರಡು ಪಾದಗಳಿಗಿಂತ ಅಧಿಕಾಕ್ಷರಗಳಿಂದ ಕೂಡಿದ್ದರೆ ಅದಕ್ಕೆ ಯವಮಧ್ಯ ಎಂದು ಹೆಸರು.

(9) ಯಾವುದಾದರೂ ಛಂದಃ ಪಾದಕ್ಕೆ ನಿಯತವಾದ ಅಕ್ಷರ ಸಂಖ್ಯೆಗಳಲ್ಲಿ ಒಂದಕ್ಷರ ಕಡಿಮೆಯಾದರೆ ನಿಚೃತ್ ಎಂದೂ, 2 ಅಕ್ಷರ ಕಡಿಮೆಯಾದರೆ ವಿಟ್ ಎಂದೂ, ಒಂದಕ್ಷರ ಹೆಚ್ಚಾದರೆ ಭುರಿಕ್ ಎಂದೂ, 2 ಅಕ್ಷರ ಹೆಚ್ಚಾದರೆ ಸ್ವರಾಟ್ ಎಂದೂ ಸಂಜ್ಞೆಗಳು ಆ ಛಂದಸ್ಸುಗಳ ಹೆಸರಿಗೆ ಸೇರುತ್ತವೆ.

(10) ಮೇಲೆ ಹೇಳಿದವುಗಳಲ್ಲದೆ ವೇದಗಳಲ್ಲಿ ಎಲ್ಲ ಪಾದಗಳ ಒಟ್ಟು ಅಕ್ಷರ ಸಂಖ್ಯೆಯಿಂದ ಇರುವ ಛಂದಸ್ಸುಗಳು ಹೇಳಲ್ಪಟ್ಟಿವೆ: ಉತ್ಕೃತಿ 104; ಅಭಿಕೃತಿ 100; ಸಂಕೃತಿ 96; ವಿಕೃತಿ 92; ಆಕೃತಿ 88; ಪ್ರಕೃತಿ 84; ಕೃತಿ 80; ಅತಿಧೃತಿ 76; ಧೃತಿ 72; ಅತ್ಯಷ್ಟಿ 68; ಅಷ್ಟಿ 64; ಅತಿಶಕ್ವರಿ 60; ಶಕ್ವರಿ 56; ಅತಿಜಗತಿ 52; ಜಗತಿ 42.

ಭಾಗ ಮೂರು

ಸಂಸ್ಕೃತ ಛಂದಸ್ಸು

(ಲೌಕಿಕ ಛಂದಸ್ಸು)

೩.೧ ವೈದಿಕ ಛಂದಃ ಪ್ರಕರಣದಲ್ಲಿ ಕೇವಲ ವೇದದಲ್ಲಿ ಮಾತ್ರ ಬರುವ ಛಂದಸ್ಸುಗಳನ್ನು ವಿವರಿಸಿದ್ದೇನೆ. ಈ ಕೆಳಗೆ ಹೇಳುವಂಥವು ಕೇವಲ ಲೌಕಿಕ ಛಂದಸ್ಸು. ಇವುಗಳಲ್ಲಿ ಗಣಚ್ಛಂದಗಳು, ಮಾತ್ರಾ ಛಂದಗಳು ಎಂದು ಎರಡು ವಿಧಗಳಿವೆ.

೩.೨ (i) **ಆರ್ಯ :** ಆರ್ಯಾದಿಗಳು ಮಾತ್ರಾಗಣಚ್ಛಂದಗಳು. ಆರ್ಯ ಗಳಲ್ಲಿ 4 ಪಾದಗಳು. 2–2 ಪಾದಗಳು ಒಂದರ್ಧ. 4 ಪಾದಗಳೂ ಸಮಪಾದಗಳಾಗಬಹುದು. ಇಲ್ಲವೆ 1, 3 ಮತ್ತು 2, 4 ಸಮಪಾದಗಳಾಗ ಬಹುದು. ಪಾದಗಳಲ್ಲಿ 4–4 ಮಾತ್ರೆಗಳ ಗಣಗಳು ಇರುತ್ತವೆ. ಎಂದರೆ ನಲ, ಗಗ, ಭ, ಜ, ಸ ಗಣಗಳು ಮಾತ್ರ ಇರುತ್ತವೆ. ಆರ್ಯಗಳಲ್ಲಿನ ವಿಷಮ ಗಣಗಳು ಜಗಣಗಳಾಗಿರಕೂಡದು. 6ನೆಯ ಗಣ ಜಗಣವಾಗಲಿ ನಲವಾಗಲಿ ಆಗಿರಬೇಕು. 6ನೆಯ ಗಣ ನಲವಾದರೆ ಆ ಗಣದ 2ನೇ ಅಕ್ಷರದಿಂದ ಮುಂದೆ ಹೊಸ ಪದ ಆರಂಭವಾಗುತ್ತದೆ. 7ನೇ ಗಣ ನಲವಾದರೆ ಮೊದಲನೇ ಅಕ್ಷರದಿಂದ ಮುಂದೆ ಪದ ಆರಂಭವಾಗುವುದು. ಮತ್ತಿನ ಪದ್ಯಾರ್ಧದಲ್ಲಿ ನಲವು 5ನೇ ಗಣವಾದರೆ ಗಣಾರಂಭದೊಡನೆಯೇ ಪದಾರಂಭವೂ ಆಗುವುದು.

೩.೩ ಆರ್ಯದಲ್ಲಿ ಮತ್ತಿನ ಪದ್ಯಾರ್ಧದ 6ನೇ ಗಣ ಏಕಲಘುವಾಗಿರು ತ್ತದೆ. ಆರ್ಯಕ್ಕೆ 7 ಗಣ, 1 ಗುರು ಪದ್ಯದ ಒಂದರ್ಧದಲ್ಲಿ ಬರುತ್ತವೆ. ಮೊದಲ 3 ಗಣಗಳಾದ ಮೇಲೆ ಪದವು ಸಂಪೂರ್ಣವಾದರೆ ಅದಕ್ಕೆ ಪಥ್ಯಾರ್ಯವೆಂದು ಹೆಸರು. ಹಾಗೆ ಪದವು ಒಡೆಯದೆ 4ನೇ ಗಣದೊಳಕ್ಕೆ ಪ್ರವೇಶಿಸಿದರೆ ಅದಕ್ಕೆ ವಿಪುಲಾರ್ಯವೆಂದು ಹೆಸರು. ಆರ್ಯಾರ್ಧದಲ್ಲಿ 2–4ನೆಯ ಗಣಗಳು ಜಗಣಗಳು. ಮೊದಲಿನದು ಸಗಣ ; 3ನೆಯದು ಗಗ, 5ನೆಯದು ಭಗಣ, ಉಳಿದವು ಯಥಾಪ್ರಾಪ್ತವಾಗಿದ್ದರೆ ಚಪಲಾರ್ಯವೆಂದು ಹೆಸರು. ಈ ಚಪಲಾ ಲಕ್ಷಣವು ಮೊದಲರ್ಧದಲ್ಲಿ ಮಾತ್ರವಿದ್ದರೆ ಅದಕ್ಕೆ ಮುಖಚಪಲ ಎಂದೂ, 2ನೆಯರ್ಧದಲ್ಲಿದ್ದರೆ ಜಘನಚಪಲ ಎಂದೂ, ಎರಡರ್ಧದಲ್ಲಿಯೂ ಇದ್ದರೆ ಮಹಾಚಪಲ ಎಂದೂ ಹೆಸರು.

೩.೪ ಆರ್ಯದಲ್ಲಿ ಮೊದಲರ್ಧದಂತೆಯೇ ಎರಡನೆಯರ್ಧವೂ ಇದ್ದರೆ ಅದಕ್ಕೆ ಗೀತಿ ಎಂದು ಹೆಸರು. 2ನೆಯರ್ಧದಂತೆ ಮೊದಲರ್ಧವೂ ಇದ್ದರೆ ಅದು ಉಪಗೀತಿ. ಮೊದಲರ್ಧವು 2ನೆಯರ್ಧದಂತೆ, ಎರಡನೆಯರ್ಧವು ಮೊದಲರ್ಧದಂತೆ ಇದ್ದರೆ ಅದು ಉದ್ಗೀತಿ. ಅರ್ಧದಲ್ಲಿ ಸಂಪೂರ್ಣವಾಗಿ 8 ಚತುರ್ಮಾತ್ರಾಗಣಗಳಿದ್ದರೆ ಅದಕ್ಕೆ ಆರ್ಯಾಗೀತಿ ಎಂದು ಹೆಸರು.

೩.೫ (ii) **ವೈತಾಲೀಯ:** 4 ಪಾದಗಳಿದ್ದು 1, 3ನೇ ಪಾದಗಳಲ್ಲಿ 14 ಮಾತ್ರೆಗಳೂ, 2, 4ನೇ ಪಾದಗಳಲ್ಲಿ 16 ಮಾತ್ರೆಗಳೂ ಇದ್ದರೆ ಅದಕ್ಕೆ ವೈತಾಲೀಯವೆಂದು ಹೆಸರು. ಇದರ ಪಾದಗಳ ಕಡೆಯಲ್ಲಿ ರಗಣವಿರಬೇಕು. ವೈತಾಲೀಯದ ಪ್ರತಿಪಾದದ ಕಡೆಯಲ್ಲಿ ಒಂದು ಗುರು ಬಂದರೆ ಔಪಚ್ಛಂದಸಿಕವಾಗುತ್ತದೆ. ವೈತಾಲೀಯ ಪಾದಗಳಲ್ಲಿಯ ಕಡೆಯ ಗಣ ಗಗವಾದರೆ ಆಪಾತಲಿಕವೆಂದು ಅದಕ್ಕೆ ಹೆಸರು. ವೈತಾಲೀಯಂದ 1, 3ನೇ ಪಾದಗಳಲ್ಲಿ ಕಡೆಯ 6 ಮಾತ್ರೆಗಳನ್ನು ಪ್ರತ್ಯೇಕ ಪದದೊಂದಿಗೆ ಆರಂಭಿಸಬೇಕು.

೩.೬ 4 ಪಾದಗಳಿದ್ದು ಪಾದಕ್ಕೆ 16 ಮಾತ್ರೆಗಳನ್ನು ಉಳ್ಳದ್ದು ಮಾತ್ರಾಸಮಕ. ಪಾದಗಳು ಗುರ್ವಂತವಾಗಿರಬೇಕು. ಪಾದದಲ್ಲಿ 9ನೆಯ ಮಾತ್ರೆ ಲಘುವಾಗಿರಬೇಕು. ಪಾದಗಳಲ್ಲಿ 9–12ನೇ ಮಾತ್ರೆಗಳು ಲಘುಗಳಾಗಿದ್ದರೆ ಅದಕ್ಕೆ ವಾನವಾಸಿಕವೆಂದು ಹೆಸರು. 5–8ನೇ ಮಾತ್ರೆಗಳು ಲಘುಗಳಾಗಿದ್ದರೆ ವಿಶ್ಲೋಕ. 5, 8, 9ನೇ ಮಾತ್ರೆಗಳು ಲಘುಗಳಾಗಿದ್ದರೆ ಚಿತ್ರ. 9, 10ನೇ ಮಾತ್ರೆಗಳು ಸೇರಿ ಒಂದು ಗುರುವಾಗಿದ್ದರೆ ಅದು ಉಪಚಿತ್ರ. ಮೇಲಿನೈದು ವಿಧಗಳಲ್ಲಿಯೂ ಯಾವುವಾಗಿದ್ದರೂ ಸರಿಯೆ 4 ಪಾದಗಳಿದ್ದರೆ ಪಾದಾಕುಲಕವೆನಿಸುವುದು.

೩.೭ ಪಾದಕ್ಕೆ 16 ಲಘುಗಳ ಪ್ರಕಾರ 4 ಪಾದಗಳನ್ನು ಉಳ್ಳದ್ದು ಗೀತ್ಯಾರ್ಯ. ಒಂದರ್ಧದಲ್ಲಿ ಎಲ್ಲ ಲಘುಗಳೂ, 2ನೆಯರ್ಧದಲ್ಲಿ ಎಲ್ಲ ಗುರುಗಳೂ ಆಗಿದ್ದರೆ ಶಿಖಿ. ಪೂರ್ವಾರ್ಧವು ಸರ್ವಲಘುಕವಾಗಿ, ದ್ವಿತೀಯಾರ್ಧವು ಸರ್ವಗುರುಕವಾಗಿದ್ದರೆ ಜ್ಯೋತಿ. ಪೂರ್ವಾರ್ಧದಲ್ಲಿ ಎಲ್ಲ ಗುರುಗಳೂ, ಪರಾರ್ಧದಲ್ಲಿ ಎಲ್ಲ ಲಘುಗಳೂ ಆಗಿದ್ದರೆ ಸೌಮ್ಯ.

೩.೮ ಮೊದಲೆರಡು ಪಾದಗಳಲ್ಲಿ 27 ಲಘುಗಳು, 1 ಗುರು, 29 ಮಾತ್ರೆಗಳು. ಕಡೆಯೆರಡು ಪಾದಗಳಲ್ಲಿ 29 ಲಘುಗಳು, 1 ಗುರು, ಒಟ್ಟು 31 ಮಾತ್ರೆಗಳು ಉಳ್ಳದ್ದು ಚೂಲಿಕ.

೩.೯ **ಪ್ರಾಕೃತ ಛಂದಸ್ಸು :** ಪ್ರಾಕೃತ ಛಂದಸ್ಸಿನಲ್ಲಿ ಸಂಸ್ಕೃತದಲ್ಲಿರುವುದಕ್ಕಿಂತ ಹೆಚ್ಚಾಗಿ ಮಾತ್ರಾ ಛಂದಸ್ಸುಗಳು ಕಂಡುಬರುತ್ತವೆ. ಪ್ರಾಕೃತ ಪೈಂಗಲದಲ್ಲಿ ವಿವರಿಸಲ್ಪಟ್ಟಿರುವ ಮಾತ್ರಾ ಛಂದಸ್ಸುಗಳನ್ನು ಲಕ್ಷಣಯುಕ್ತವಾಗಿ ಈ ಕೆಳಗೆ ವಿವರಿಸುತ್ತೇವೆ.

(i) **ಗಾಥಾ ಭೇದಗಳು :** ಗಾಥಾ ಛಂದಸ್ಸಿಗೆ ಸೇರಿದವುಗಳಲ್ಲಿ (1) ಮೊದಲ ಪಾದದಲ್ಲಿ 12 ಮಾತ್ರೆಗಳು (2) 6ನೇ ಗಣ ಒಂದು ಪ್ರತ್ಯೇಕ ನಿಯಮವನ್ನು ಅನುಸರಿಸುತ್ತದೆ (3) 2, 4ನೇ ಪಾದಗಳ ಅಂತ್ಯಾಕ್ಷರವು ಗುರುವಾಗಿರುತ್ತದೆ (4) ವಿಷಮದಲ್ಲಿ ಜಗಣವಿರುವುದಿಲ್ಲ—ಎಂಬುದು ಸಾಮಾನ್ಯ ನಿಯಮ.

(1) **ಗಾಹಾ :** ಒಟ್ಟು 54 ಮಾತ್ರೆಗಳು. 2 ಸಮಭಾಗಗಳು. ಒಂದೊಂದರಲ್ಲಿ 27 ಮಾತ್ರೆಗಳು. 2, 4ನೇ ಪಾದಗಳಲ್ಲಿ 15, 15 ಮಾತ್ರೆಗಳು. 5ನೇ ಗಣದ ತರುವಾಯ 2 ಲಘುಗಳಿರಬೇಕು. ಇದರ ಪ್ರಕಾರ ಒಂದರ್ಧ $4 \times 3 = 12$; 4, 4, 1, 4, 1 ಗುರು $= 15$. (2) ಗಾಹ : 57 ಮಾತ್ರೆಗಳು. ಒಂದರ್ಧ $4 \times 3 = 12$; $4 \times 4 + 1$ಗುರು $= 18$. ಇನ್ನೊಂದು ಅರ್ಧಕ್ಕೆ $4 \times 3 = 12$; 4, 4, 1, 4, 1 ಗುರು $= 15$. (3) ವಿಗ್ಗಾಹ : ಗಾಹದ ಮೊದಲರ್ಧ 2ನೆಯರ್ಧವಾಗಿಯೂ, 2ನೇ ಅರ್ಧ ಮೊದಲರ್ಧವಾಗಿಯೂ ಹೇಳಲಾದ್ದು. (4) ಉಗ್ಗಾಹ ; 60 ಮಾತ್ರೆಗಳು. $4 \times 3 = 12$; $4 \times 4 + 1$ ಗುರು $= 18$. ಉಳಿದರ್ಧ ಹೀಗೆಯೇ. (5) ಗಾಹಿಣೀ : 62 ಮಾತ್ರೆಗಳು. ಒಂದರ್ಧ—$4 \times 3 = 12$; $4 \times 4 + 1$ ಗುರು $= 18$. ಇನ್ನೊಂದರ್ಧ : $4 \times 3 = 12$; $4 \times 4 + 2$ $+$ ಗುರು $= 20$. (6) ಸಿಂಹಿಣೀ : ಗಾಹಿಣಿಯ ಮೊದಲರ್ಧ ಎರಡನೆಯರ್ಧವಾಗಿಯೂ, 2ನೆಯರ್ಧ ಮೊದಲರ್ಧವಾಗಿಯೂ ಹೇಳಲಾದ್ದು. (7) ಖಂದಅ : 64 ಮಾತ್ರೆಗಳು. 32 ಮಾತ್ರೆಗಳ 2 ಭಾಗಗಳು. $4 \times 3 = 12$; $4 \times 4 + 2 +$ ಗುರು $= 20$. ಉಳಿದರ್ಧವೂ ಹೀಗೆಯೇ. ಈ ಸ್ಕಂದಕದಲ್ಲಿರುವ ಗುರು ಲಘುಗಳ ಸಂಖ್ಯೆಯ ಪ್ರಕಾರ ಹೆಸರುಗಳಿವೆ : ನಂದ (4 ಲ, 30 ಗು) ; ಭದ್ರ (6 ಲ, 29 ಗು) ; ಶೇಷ (8 ಲ, 28 ಗು) ;

ಸಾರಂಗ (10 ಲ, 27 ಗು) ; ಶಿವ (12 ಲ, 26 ಗು) ; ಬ್ರಹ್ಮ (14 ಲ, 25 ಗು) ; ವಾರಣ (16ಲ, 24 ಗು) ; ವರುಣ (18 ಲ, 23 ಗು) ; ನೀಲ (20 ಲ, 22 ಗು) ; ಮದನತಾಡಂಕ (22 ಲ, 21 ಗು) ; ಶೇಖರ (24 ಲ, 20 ಗು) ; ಸರ (26 ಲ, 19 ಗು) ; ಗಗನ (28 ಲ, 18 ಗು) ; ವಿಮತಿ (30 ಲ, 17 ಗು) ; ಸ್ಥಿರ (32 ಲ, 16 ಗು) ; ನಗರ (34 ಲ, 15 ಗು) ; ನರ (36 ಲ, 14 ಗು) ; ಸ್ನಿಗ್ಧ (38 ಲ, 13 ಗು) ; ನೇಹನ (40 ಲ, 12 ಗು) ಮದಕಲ (42 ಲ, 11 ಗು) ; ಲೀಲ (44 ಲ, 10ಗು) ; ಶುದ್ಧ (46 ಲ, 9 ಗು) ; ಶ್ರೀ (50 ಲ, 7 ಗು) ; ಕುಂಭ (52 ಲ, 6ಗು) ; ಕಲಶ (54 ಲ, 5 ಗು) ; ಶಶಿನಿ (56 ಲ, 4 ಗು).

(ii) **ದೋಹಾ:** ಇದರ ಒಂದು ಮೂರನೆಯ ಪಾದಗಳಲ್ಲಿ 6, 4, 3 = 13 ಮಾತ್ರೆಗಳು ; 2, 4ನೇ ಪಾದಗಳಲ್ಲಿ 6, 4, 1 = 11 ಮಾತ್ರೆಗಳು ಬರುತ್ತವೆ. ಒಟ್ಟು 48 ಮಾತ್ರೆಗಳು ಬರುತ್ತವೆ. ಯಾವ ಪಾದದಲ್ಲಿಯೂ ಜಗಣವಿರಕೂಡದು. ಪದ್ಯದಲ್ಲಿಯ ಗುರು ಲಘುಗಳ ಸಂಖ್ಯೆಯ ಪ್ರಕಾರ ಇದಕ್ಕೆ ಬೇರೆ ಬೇರೆ ಹೆಸರುಗಳಿವೆ : ಭ್ರಮರ (22 ಗು, 4 ಲ) ; ಭ್ರಾಮರ (21 ಗು, 6 ಲ) ; ಶರಭ (20 ಗು, 8 ಲ) ; ಶ್ಯೇನ (19 ಗು, 10 ಲ) ; ಮಂಡಲ ಅಥವ ಮಂಡೂಕ (18 ಗು, 12 ಲ) ; ಮರ್ಕಟ (17 ಗು, 14 ಲ) ; ಶರಭ (16 ಗು, 16 ಲ) ; ನರ (15 ಗು, 18 ಲ) ; ಮರಾಲ (14 ಗು, 20 ಲ) ; ಮದಕಲ (13 ಗು, 22 ಲ) ; ಪಯೋಧರ (12 ಗು, 24 ಲ) ; ಚಲ ಅಥವ ಬಲ (11 ಗು, 26 ಲ) ; ವಾನರ (10 ಗು, 28 ಲ) ; ತ್ರಿಕರ ಅಥವ ತ್ರಿಕಲ (9 ಗು, 30 ಲ) ; ಕಚ್ಛಪ (8 ಗು, 32 ಲ) ; ಮತ್ಸ್ಯ (7 ಗು, 34 ಲ) ; ಶಾರ್ದೂಲ (6 ಗು, 36 ಲ) ; ಅಹಿ (5 ಗು, 38 ಲ) ; ವ್ಯಾಘ್ರ (4 ಗು, 40 ಲ) ; ಬಿಡಾಲ ಅಥವ ವಿರಾಲ (3 ಗು, 42 ಲ) ; ಶುನಕ (2 ಗು, 44 ಲ) ; ಉಂದುರ (1 ಗು, 46 ಲ) ; ಸರ್ಪ (48ಲ).

(iii) **ರಸಿಕಾ–ಉಕ್ಕಚ್ಛಾ :** 6 ಪಾದಗಳಿರುತ್ತವೆ. ಪಾದಕ್ಕೆ 11 ಮಾತ್ರೆಗಳು. 4, 4, 3 = 11. ಒಟ್ಟು 66 ಮಾತ್ರೆಗಳು. ಗುರು

ಲಘುಗಳ ಸಂಖ್ಯೆಯ ಪ್ರಕಾರ ಆಯಾ ಭೇದಗಳಿಗೆ ಹೆಸರುಗಳಿವೆ: **ಲೋಹಾಂಗಿಣೀ** (66 ಲ); ಹಂಸೀ (64 ಲ, 1 ಗು; 62 ಲ, 2 ಗು; 60 ಲ, 3 ಗು; 58 ಲ, 4 ಗು); ರೇಖಾ (56 ಲ, 5 ಗು; 54 ಲ, 6 ಗು; 52 ಲ, 7 ಗು; 44 ಲ, 11 ಗು; 50 ಲ, 8 ಗು); ತಾಲಂಕಿನೀ (48 ಲ, 9 ಗು; 46 ಲ, 10 ಗು; 42 ಲ, 12 ಗು); ಗಂಭೀರಾ (32 ಲ, 17 ಗು; 30 ಲ, 18 ಗು; 28 ಲ, 19 ಗು; 26 ಲ, 20 ಗು); ಕಾಲೀ (24ಲ, 21 ಗು; 22 ಲ, 22 ಗು; 20 ಲ, 23 ಗು; 18 ಲ, 24 ಗು); ಕಾಲ ರುದ್ರಾಣೀ (16 ಲ, 25 ಗು; 14 ಲ, 26 ಗು; 12 ಲ, 27 ಗು; 10ಲ, 28 ಗು.) ಮೇಲಣ ಭೇದಗಳನ್ನು ವಿವರಿಸುವುದರಲ್ಲಿ ವ್ಯಾಖ್ಯಾನಕಾರರು ಬೇರೆಬೇರೆಯಾಗಿ ಬರೆದಿದ್ದಾರೆ. ಈ ಭೇದಗಳ ಸ್ವರೂಪವು ಹೀಗೆಯೇ ಎಂದು ಸ್ಪಷ್ಟವಾಗಿ ಹೇಳಲು ಅವಕಾಶವಿಲ್ಲವಾಗಿದೆ.

(iv) **ರೋಲಾ**: ನಾಲ್ಕು ಪಾದಗಳಿರುತ್ತವೆ. ಪಾದಕ್ಕೆ 24 ಮಾತ್ರೆಗಳು. ಪಾದಗಳು ಗುರು ರಹಿತವಾಗಿ ಇರಕೂಡದು. ಪಾದಗಳಲ್ಲಿಯ ಗುರು ಲಘು ಸಂಖ್ಯೆಯ ಪ್ರಕಾರ ಆಯಾ ರೋಲಾಗಳಿಗೆ ಹೆಸರು ಬಂಡಿವೆ: ಕುಂದ (11 ಗು, 2 ಲ); ಕರತಲ (10 ಗು, 4 ಲ); ಮೇಘ (9 ಗು, 6 ಲ); ತಾಡಂಕ (8 ಗು, 8 ಲ); ಕಾಲರುದ್ರ (7 ಗು, 10 ಲ); ಕೋಕಿಲ (6 ಗು, 12 ಲ); ಕಮಲ (5 ಗು, 14 ಲ); ಇಂದು (4 ಗು, 16 ಲ); ಶಂಭು (3 ಗು, 18 ಲ); ಚಾಮರ (2 ಗು, 20 ಲ); ಗಣೇಶ್ವರ (1 ಗು, 22 ಲ); ಸಹಸ್ರಾಕ್ಷ (24 ಲ)—ಇದರ ಮೇಲಿರುವ ವಾಖ್ಯಾನಗಳನ್ನು ಅನುಸರಿಸಿ ಈ ಭೇದಗಳ ಸ್ವರೂಪ ಹೀಗೆಯೇ ಎಂದು ಹೇಳಲು ಸಾಧ್ಯವಿಲ್ಲ.

(v) **ಗಂಧಾನಾ:** ವಿಷಮಪಾದಗಳಲ್ಲಿ ಗುರುಗಳಾಗಲಿ, ಲಘುಗಳಾಗಲಿ 17ರಂತೆ ಅಕ್ಷರಗಳು. ಸಮಪಾದಗಳಲ್ಲಿ ಗುರುಗಳಾಗಲಿ ಲಘುಗಳಾಗಲಿ 18ರಂತೆ ಅಕ್ಷರಗಳು, ನಾಲ್ಕು ಪಾದಗಳು ಇರುತ್ತವೆ. ಇದು ವರ್ಣವೃತ್ತಗಳಲ್ಲಿ ಸೇರಬೇಕಾದುದು. ಮಾತ್ರಾ ವೃತ್ತಗಳಲ್ಲಿ ಏತಕ್ಕೆ ಸೇರಿತೋ ತಿಳಿಯದು.

(vi) **ಚೌಪದಿ ಅ :** ಪಾದಕ್ಕೆ 4 ರಂತೆ ಮಾತ್ರೆಗಳ 7 ಗಣಗಳೂ 1 ಗುರುವೂ ಸೇರಿ ಒಟ್ಟು 30 ಮಾತ್ರೆಗಳು. ಹೀಗೆ 4 ಪಾದಗಳಿರುವ 1 ಪದ್ಯಕ್ಕೆ 120 ಮಾತ್ರೆಗಳು. ಇಂಥ ಪದ್ಯಗಳು ನಾಲ್ಕನ್ನು ಹೇಳಬೇಕು. ಒಟ್ಟು 480 ಮಾತ್ರೆಗಳು.

(vii) **ಘತ್ತಾ :** 2 ಪಾದಗಳಿರುತ್ತವೆ. ಪಾದಕ್ಕೆ 7 ಚತುರಾ ತ್ರಾಗಣಗಳಂ ಮತ್ತು 3 ಲಘುಗಳು. ಒಟ್ಟು ಪಾದಕ್ಕೆ 31 ಮಾತ್ರೆ; 2 ಪಾದಗಳಿಗೆ 62 ಮಾತ್ರೆಗಳು. ಪ್ರತಿಪಾದದಲ್ಲಿಯೂ 10, 8, 13 ಮಾತ್ರೆಗಳಾದ ಮೇಲೆ ಯತಿ.

(viii) **ಘತ್ತಾನಂದ :** ಘತ್ತಾ ಪಾದಗಳಂಥವೇ 2 ಪಾದಗಳಿರುತ್ತವೆ. ಆದರೂ 11, 7, 13 ಮಾತ್ರೆಗಳಾದ ಮೇಲೆ ಯತಿ. ಗಣವಿಭಜನೆ 6, 4. 4, 4, 5, 4, 4 ಮಾತ್ರೆಗಳ ಲೆಕ್ಕ ಪ್ರಕಾರ ಇರುತ್ತದೆ.

(ix) (i) **ಛಪ್ಪಉ.** 4 ಪಾದಗಳಿರುತ್ತವೆ. ಪಾದಕ್ಕೆ 2 ಮಾತ್ರೆಗಳು + 5 ಚತುರ್ಮಾತ್ರಾಗಣಗಳು + 2 ಲಘುಗಳು. ಪಾದದಲ್ಲಿ 11, 13ನೆಯ ಮಾತ್ರೆಗಳಾದ ಮೇಲೆ ಎಂದರೆ ಪಾದಾಂತ್ಯದಲ್ಲಿ ಯತಿ. ಈ 4 ಪಾದಗಳುಳ್ಳ ಪದ್ಯಕ್ಕೆ 2 ಉಲ್ಲಾಲಗಳನ್ನು ಸೇರಿಸಬೇಕು. ಉಲ್ಲಾಲ ಎಂಬುದು 28 ಮಾತ್ರೆಗಳ ಪಾದ. ಇದರಲ್ಲಿ 15ನೆಯ ಮಾತ್ರೆಯಾದ ಮೇಲೆ ಯತಿಯಿರುತ್ತದೆ.

(ii) **ಕಬ್ಬ :** (ಛಪ್ಪಉ ವಿನಲ್ಲಿ ಭೇದ) ಪಾದಕ್ಕೆ 6, 4, 4, 4, 6 ಮಾತ್ರೆಗಳ ಗಣಗಳು. ಒಟ್ಟು 24 ಮಾತ್ರೆಗಳು. ಈ ಗಣಗಳಲ್ಲಿ 3ನೆಯದಂ ಜಗಣವಾಗಲಿ ನಲವಾಗಲಿ ಆಗಿರಬೇಕು. ಇಂಥವು 5 ಪಾದಗಳು ಸೇರಿದರೆ 1 ಪದ್ಯ. ಈ ಪದ್ಯಕ್ಕೆ 2 ಉಲ್ಲಾಲಗಳನ್ನು ಸೇರಿಸಬೇಕು. ಗುರುಲಘುಗಳ ಸಂಖ್ಯೆಯ ಪ್ರಕಾರ ಇದರಲ್ಲಿನ ಭೇದಗಳಿಗೆ ಪ್ರತ್ಯೇಕವಾಗಿ ಹೆಸರುಗಳಿವೆ (ಲಘು ಗುರುವಿನ ಕ್ರಮದಲ್ಲಿ.) ಶಕ್ರ (96 ಲ); ಸಂಭೋ (94, 1); ಸೂರೋ (92, 2); ಗಂಡೋ (90, 3); ಖಂಧೋ (88, 4); ಬಿಜಓ (86, 5); ದಪ್ಪೋ (84, 6); ತಾಲಂಕೋ

(82, 7) ; ಸಮರೋ (80, 8) ; ಸೀಹೋ (78, 9) ; ಸೀಸೋ (76, 10) ; ಉತ್ತೇಓ (74, 11) ; ಪಡಿವಕ್ಖೋ (72, 12) ; ಪರಿಧಮ್ಮೊ (70, 13) ; ಪಾಆಲು (68, 14) ; ಮಾಇಂದೋ (66, 15) ; ದಂಡೋ (64, 16) ; ಮಕ್ಕಲು (62, 17) ; ಮಅಲು (60, 18) ; ಮರಒ್ಮೋ (58, 19) ; ಬಾಸಂಒೋ (56, 20) ; ಕಂಒೋ (54, 21) ; ವೋರೋ (52, 22) ; ಬಂಧೋ (50, 23) ; ಭೀಮರೋ (48, 24) ; ಭಿಣ್ಣ ಮರಒ್ಮೋ (46, 25) ; (ಬಲಹದ್ದೋ) (44, 26) ; (ರಾಓ 42, 27) ; ಏಲಿಹೋ (40, 28) ; ವೋಹೋ (38, 29) ; ಮಂಥಾಣೋ (36, 30) ; ಬಲಿ (34, 31) ; ಮೇಹೋ (32, 32) ; ಸಹಸಕ್ಖೋ (30, 33) ; ಬಾಲೋ (28, 34) ; ಓಲಿಓ (26, 35) ; ಸರಹೋ (24, 36) ; ದಂಭೋ (22, 37) ; ಅಹೋ (20, 38) ; ಉತ್ತಂಭೋ (18, 39) ; ಬಲಿಅಂಕೋ (16, 40) ; ತುರಓ (14, 41) ; ಹರಿಣೋ (12, 42) ; ಅಂಧೋ (10, 43) ; ಭಂಗೋ (8, 44)

(iii) **ಉಲ್ಲಾಲ :** ವರಸೆಯಾಗಿ 4, 4, 4, 3, 6, 4, 3 ಮಾತ್ರೆಯ ಗಣಗಳು, ಒಟ್ಟು ಪಾದಕ್ಕೆ 28 ಮಾತ್ರೆಗಳು. ಅಂಥದೇ ಇನ್ನೊಂದು ಪಾದ ಸೇರಿ ಪದ್ಯವಾಗುವ್ರದು : (ಗುರು ಲಘುವಿನ ಕ್ರಮದಲ್ಲಿ) ಅಜಯ (70–12) ; ವಿಜಯ (69–14) ; ಬಲಿ (68–16) ; ಕರ್ಣ (67–18) ; ವೀರ (66–20) ; ವೇತಾಲ (65–22) ; ಬೃಹನ್ನಟ (ಲ) (64–24) ; ಮರ್ಕಟ (63–26) ; ಹರಿ (62–28) ; ಹರ (61–30) ; ಬ್ರಹ್ಮ (60–32) ; ಇಂದು (59–34) ; ಚಂದನ (58–36) ; ಶುಶು ಭಂಕರ (57–38) ; ಶ್ವಾ (56–40) ; ಸಿಂಹ (55–42) ; ಶಾರ್ದೂಲ (54–44) ; ಕೂರ್ಮ (53–46) ; ಕೋಕಿಲ (52–48) ; ಖರ (51–50) ; ಕುಂಜರ (50–52) ; ಮದನ (49–54) ; ಮತ್ಸ್ಯ (48–56) ; ತಾಡಂಕ (47–58) ; ಶೇಷ (46–60) ; ಸಾರಂಗ (45–62) ; ಪಯೋಧರ (44–64) ; ಕುಂದ (43–66) ; ಕಮಲ (42 68) ; ವಾರಣ (41–70) ; ಶರಭ (40–72) ; ಭೀಸಲ (39–

74) ; ಜಾಂಗಲ (38–76) ; ಶರ (37–78) ; ಸುಸರ (36–80) ; ಸಮರ (35–82) ; ಸಾರಸ (34–84) ; ಸರಸ (33–86) ; ಮೇರು (32–88) ; ಮಕರ (31–90) ; ಮದ (30–92) ; ಸಿದ್ಧಿ (29–94) ; ಬುದ್ಧಿ (28–96) ; ಕರತಲ (27–98) ; ಧವಲ (26–100) ; ಮದನ (25–102) ; ಧ್ರುವ (24–104) ; ಕನಕ (23–106) ; ಕೃಷ್ಣ (22–108) ; ರಂಜನ (21–110) ; ಮೇಧಾಕರ (19–114); ಗ್ರೀಷ್ಮ (18–116) ; ಗರುಡ (17–118) ; ಶಶಿ (16–120) ; ಶೂರ (15–122); ಶಲ್ಯ (14–124); ನವರಂಗ (13–126); ಮನೋಹರ (12–128); ಗಗನ (11–130); ರತ್ನ (10–132); ನರ (9–134); ಹೀರ (8–136); ಭ್ರಮರ (7–138); ಶೇಖರ (6–140); ಕುಸುಮಾಕರ (5–142); ದ್ವಿಪ (4–144); ಶಂಖ (3–146); ವಸು (2–148); ಶಬ್ದ (1–150) ಮುನಿ (152 ಲ).

(x) **ಪಜ್ಝಟಿಕಾ:** ಪಾದಕ್ಕೆ 4 × 3, ಜಗಣ ಸೇರಿ ಒಟ್ಟು 16 ಮಾತ್ರೆಗಳು. ಇಂಥವು 4 ಪಾದಗಳು.

(xi) **ಅಡಿಲ್ಲಾ:** 4 ರಂತೆ ಮಾತ್ರೆಗಳ 4 ಗಣಗಳು ಒಂದು ಪಾದಕ್ಕಿರುತ್ತವೆ. 4ನೇ ಗಣ ಜಗಣವಾಗಿರಕೂಡದು. ಒಟ್ಟು 4 ಪಾದಗಳಿರುತ್ತವೆ. ಮೊದಲೆರಡು ಪಾದಗಳಿಗೂ, 3, 4ನೇ ಪಾದಗಳಿಗೂ ಅಂತ್ಯಾನುಪ್ರಾಸ ನಿಯಮವುಂಟು. ಗುರುಲಘು ನಿಯಮಗಳಿಲ್ಲದ ಅಡಿಲ್ಲಾಕ್ಕೆ 'ಪಾಆಉಲಅಂ' ಎಂದು ಹೆಸರು.

(xii) **ಚೌಬೋಲಾ:** ವಿಷಮಪಾದಗಳಲ್ಲಿ 16 ಮಾತ್ರೆಗಳು. ಸಮಪಾದಗಳಲ್ಲಿ 14 ಮಾತ್ರೆಗಳು. ಒಟ್ಟು 4 ಪಾದಗಳು.

(xiii) **ರಡ್ಡಾ:** ಇದಕ್ಕೆ ರಾಜಸೇನಾ, ವಸ್ತು ಎಂದು ಕೂಡ ಹೆಸರುಗಳಿವೆ. 1ನೇ ಪಾದ 15 ಮಾತ್ರೆಗಳು, 2ನೇ ಪಾದ 12 ಮಾತ್ರೆಗಳು, 3ನೇ ಪಾದ 15 ಮಾತ್ರೆಗಳು, 4ನೇ ಪಾದ 11 ಮಾತ್ರೆಗಳು, 5ನೇ ಪಾದ 15 ಮಾತ್ರೆಗಳು, ಒಟ್ಟು 5 ಪಾದಗಳಿಗೆ 68 ಮಾತ್ರೆಗಳು ಇರುತ್ತವೆ.

ಇದಕ್ಕೆ ಒಂದು 'ದೋಹ' ಸೇರಿಸಬೇಕು, (ii) 'ದೋಹ' 4 ಪಾದಗಳು ಸೇರಿ ರಡ್ಡಾಕ್ಕೆ ಒಟ್ಟು 9 ಪಾದಗಳು. ಎಂದರೆ 68+48=116 ಮಾತ್ರೆಗಳು. ಮೇಲಿನ ಪಾದಗಳಲ್ಲಿ 1, 3, 5ನೇ ಪಾದಗಳಲ್ಲಿ ವರಸೆಯಾಗಿ 3, 4, 4, 4 ಮಾತ್ರೆಗಳುಳ್ಳ 4 ಗಣಗಳು. 1ನೇ ಪಾದದಲ್ಲಿ ಕಡೆಯ ಗಣ ಜಗಣವೊ ನಲವೋ ಆಗಿರಬೇಕು, 3, 5ನೇ ಪಾದಗಳ ಕಡೆಯಲ್ಲಿ 2 ಲಘುಗಳಿರಬೇಕು. 2ನೇ ಪಾದದಲ್ಲಿ 3 ಚತುರ್ಮಾತ್ರಾ ಗಣಗಳಿರಬೇಕು. ಇದರಲ್ಲಿ ಕಡೆಯದು ನಲವಾಗಿರಬೇಕು. 4ನೇ ಪಾದದಲ್ಲಿ ವರಸೆಯಾಗಿ 2 ಚತುರ್ಮಾತ್ರಾಗಣಗಳೂ, ಆಮೇಲೆ ನಗಣವೂ ಇರಬೇಕು. ರಡ್ಡಾವಿನಲ್ಲಿ 5 ಪಾದಗಳಲ್ಲಿನ ಮಾತ್ರಾ ಸಂಖ್ಯೆಯ ಪ್ರಕಾರ 7 ಭೇದಗಳಿರುತ್ತವೆ: ಕರಹ (13, 11, 13, 11, 13); ಣಂದಾ (14, 11, 14, 11, 14); ಮೋಹಿಣೀ 19, 11, 19, 11, 19); ಚಾರುಸೇಣಿ (15, 11 15, 11, 15); ಭದ್ದ (15, 12, 15, 12, 15); ರಾಜಸೇಣ (15, 12, 15, 11, 15); ತಾಲಂಕ (16, 12, 16, 11, 16) ಇವುಗಳಲ್ಲಿ ರಡ್ಡಾವಿಗೆ ಸಂಬಂಧಿಸಿದ ಇತರ ನಿಯಮಗಳನ್ನೂ ಅನುಸರಿಸಬೇಕು.

(xiv) **ಪೋವಮಾವತ್ತಿ:** 4 ಪಾದಗಳು. ಪಾದಕ್ಕೆ 8 ಚತುರ್ಮಾತ್ರಾ ಗಣಗಳು. ಜಗಣವು ಕೂಡದು. ಎಂದರೆ ಭ, ಸ, ಗಗ, ನಲಗಳು ಮಾತ್ರ ಬರಬೇಕು.

(xv) **ಕುಂಡಲಿಆ:** ಒಂದು ದೋಹ ಮತ್ತು ಒಂದು ಕಬ್ಬ ಬರುವುದಾದರೆ ಕುಂಡಲಿಆ. ಕಬ್ಬಕ್ಕೆ ಉಲ್ಲಾಲನ್ನು ಸೇರಿಸಬೇಕೆಂದು ಬೇರೆ ಹೇಳಬೇಕಾಗಿಲ್ಲ. ಪಾದಗಳಲ್ಲಿ ಯಮಕವಿರಬೇಕೆಂದು ಇದರ ಪ್ರತ್ಯೇಕ ಲಕ್ಷಣ.

(xvi) **ಗಗನಾಂಗ:** ಪಾದದಲ್ಲಿ ಒಟ್ಟು ವರ್ಣಸಂಖ್ಯೆ 20. ಮಾತ್ರಾ ಸಂಖ್ಯೆ 25. ಪಾದದ 1ನೇ ಗಣ ಚತುರ್ಮಾತ್ರಾಗಣ. ಪಾದಾಂತದಲ್ಲಿ ಗುರು. ಒಟ್ಟು 4 ಪಾದಗಳು.

(xvii) (ಗ) **ದೋಅಇ:** ಪಾದಕ್ಕೆ ವರಸೆಯಾಗಿ 6, 4 4, 4, 4, 6 ಮಾತ್ರೆಗಳ 6 ಗಣ. ಒಟ್ಟು 28 ಮಾತ್ರೆಗಳು. ಇಂಥವು 2 ಪಾದಗಳು. ಪಾದಾಂತ್ಯದಲ್ಲಿ ಗುರು.

(xvii) (೨) ಝುಲ್ಲಣ: 2 ಪಾದಗಳು. ಪಾದಕ್ಕೆ 10 ಮಾತ್ರೆಗಳು, ಯತಿ; 7 ಮಾತ್ರೆಗಳು, ಯತಿ. (?)

(xvii) (೩) ಸಿಖಾ: 1ನೇ ಪಾದದಲ್ಲಿ ವರಸೆಯಾಗಿ 6 ನಲಗಳು, 1 ಜಗಣ; 2ನೇ ಪಾದದಲ್ಲಿ ವರಸೆಯಾಗಿ 7 ನಲಗಳು, 1 ಜಗಣ.

(xvii) (೪) ಖಂಜ: 2 ಪಾದಗಳು. ಪಾದಕ್ಕೆ ವರಸೆಯಾಗಿ 9 ನಲಗಳು, 1 ರಗಣ.

(xvii) (೫) ಮಾಲಾ: 1ನೇ ಪಾದದಲ್ಲಿ ವರಸೆಯಾಗಿ 9 ನಲ, 1 ರಗಣ, ಗಗ; ಒಟ್ಟು 45 ಮಾತ್ರೆಗಳು. 2ನೇ ಪಾದ ಒಂದು ಗಾಹಾ ಪಾದವಾಗಿರುತ್ತದೆ.

(xvii) (೬) ಚುಲಿಆಲಾ: ಒಂದು ದೋಹಾ ಪಾದಕ್ಕೆ ಜಲಘು ಬಂದರೆ 1 ಪಾದ; ಇಂಥವು 2 ಪಾದಗಳು.

(xviii) ಸೋರಠಾ: ದೋಹದಲ್ಲಿಯ ಮೊದಲರ್ಧ ಎರಡನೆಯರ್ಧವಾಗಿಯೂ, ಎರಡನೆಯರ್ಧ ಮೊದಲರ್ಧವಾಗಿಯೂ ಹೇಳಬೇಕು. ಎಂದರೆ 1, 3ನೇ ಪಾದಗಳಲ್ಲಿ 11 ಮಾತ್ರೆಗಳು; 2, 4ನೇ ಪಾದಗಳಲ್ಲಿ 13 ಮಾತ್ರೆಗಳೂ ಬರುತ್ತವೆ. ಇದರಲ್ಲಿ ಯಮಕವಿರುವುದು ಪ್ರತ್ಯೇಕ ಲಕ್ಷಣ.

(xix) ಹಾಕಲಿ: 2 ದಳಗಳು. ದಳಕ್ಕೆ ಮೊದಲು ಸಗಣವಾಗಲಿ ಭಗಣವಾಗಲಿ ಆದ 2 ಗಣಗಳು. ಆಮೇಲೆ ನಲ, ಮತ್ತು ಗುರು ಒಟ್ಟು 14 ಮಾತ್ರೆಗಳು. ಮೊದಲ ದಳದಲ್ಲಿ 11 ವರ್ಣಗಳು, 2ನೆಯ ದಳದಲ್ಲಿ 10 ವರ್ಣಗಳು ಇರಬೇಕು.

(xx) ಮಧುಭಾರ: 2 ಪಾದಗಳು. ಪಾದಕ್ಕೆ ವರಸೆಯಾಗಿ ಚತುರ್ಮಾತ್ರಾಗಣ ಒಂದು, ಜಗಣ, ಚತುರ್ಮಾತ್ರಾಗಣ ಒಂದು, ಜಗಣ ಇರುತ್ತದೆ.

(xxi) ಆಹರ: 2 ಪಾದಗಳು. ಪಾದಕ್ಕೆ 11 ಮಾತ್ರೆಗಳು. ಪಾದಾಂತ್ಯದಲ್ಲಿ ಜಗಣ.

(xxii) **ಗಂಡಅಲ:** 4 ಪಾದಗಳು. ಪಾದಕ್ಕೆ ವರಸೆಯಾಗಿ 4, 4, 4, 4, 6, 4, 4 ಮತ್ತು ಗುರು, ಒಟ್ಟು 32 ಮಾತ್ರೆಗಳು.

(xxiii) **ದೀಪಕ್ಕ:** 2 ಪಾದಗಳು. ಪಾದಕ್ಕೆ ವರಸೆಯಾಗಿ ಚತುರ್ಮಾತ್ರಾ ಗಣ, ಪಂಚಮಾತ್ರಾ ಗಣ, ಮತ್ತು ಲಘು. ಒಟ್ಟು ಪಾದಕ್ಕೆ 10 ಮಾತ್ರೆಗಳು.

(xxiv) **ಸಿಂಹಅಲೋಅಣ:** 4 ಪಾದಗಳು. ಪಾದಕ್ಕೆ 4 ಚತುರ್ಮಾತ್ರಾ ಗಣ; ಭಗಣ, ಜಗಣ, ಗಗ—ಇವುಗಳು ಇರಕೂಡದು. ಎಂದರೆ ನಲ, ಸಗಣಗಳನ್ನು ಮಾತ ಬಳಸಬೇಕು.

(xxv) **ಪಅಂಗಮ:** ಪಾದಕ್ಕೆ 20 ಮಾತ್ರೆಗಳು. 4 ಪಾದಗಳು. ಪಾದಾದಿಯಲ್ಲಿ ಗುರ್ವಾದಿಯಾದ 6 ಮಾತ್ರೆಯ ಗಣ, ಚತುರ್ಮಾತ್ರಾಗಣಗಳು, ಲಗ ಬರುತ್ತದೆ. ಒಟ್ಟು ಪಾದಕ್ಕೆ 20 ಮಾತ್ರೆಗಳಾಗಬೇಕು (?)

(xxvi) **ಲೀಲಾವಅ:** 4 ಪಾದಗಳು. ಪಾದಕ್ಕೆ ವರಸೆಯಾಗಿ 7 ಚತುರ್ಮಾತ್ರಾಗಣ, 1 ಸಗಣ.

(xxvii) **ಹರಿಗೀಅ:** 4 ಪಾದಗಳು. ಪಾದಕ್ಕೆ ವರಸೆಯಾಗಿ 5, 6, 5, 5, 5 ಮಾತ್ರೆಗಳ ಗಣಗಳು ಮತ್ತು ಗುರು; ಒಟ್ಟು 28 ಮಾತ್ರೆಗಳು.

(xxviii) **ತಿಬ್ಬಂಗೀ:** 4 ಪಾದಗಳು. ಪಾದಕ್ಕೆ 8 ಚತುರ್ಮಾತ್ರಾಗಣಗಳು. ಕಡೆಯ ಪಾದ ಗುರ್ವಂತವಾಗಿರಬೇಕು. 10, 8, 6ನೇ ಮಾತ್ರೆಗಳಾದಮೇಲೆ ಯತಿ.

(xxix) **ದುಮ್ಮಿಲಿಓ:** 4 ಪಾದಗಳು. ಪಾದಕ್ಕೆ 8 ಚತುರ್ಮಾತ್ರಾಗಣಗಳು. ಸಮಗಣಗಳು ನಲವಾಗಿರಬೇಕು; ವಿಷಮಗಣಗಳು ಗಗ ವಾಗಿರಬೇಕು. ಪಾದವು ಗುರ್ವಂತವಾಗಿರಬೇಕು. ಪ್ರತಿ ಪಾದದಲ್ಲಿಯೂ 10, 8, 14 ಮಾತ್ರೆಗಳಾದಮೇಲೆ ಯತಿ,

(xxx) ಹೀರ: 4 ಪಾದಗಳು. ಪಾದದಲ್ಲಿ ವರಸೆಯಾಗಿ ಗುರು, ನಲ; ಗುರು, ನಲ; ಗುರು, ನಲ; ರಗಣ–ಒಟ್ಟು 23 ಮಾತ್ರೆಗಳು.

(xxxi) ಜಲಹರಣಾ: 4 ಪಾದಗಳು. ಪಾದಕ್ಕೆ ವರಸೆಯಾಗಿ 7 ಚತುರ್ಮಾತ್ರಾಗಣಗಳು, 1 ಸಗಣ. ಒಟ್ಟು 32 ಮಾತ್ರೆಗಳು. ಪ್ರತಿಪಾದದಲ್ಲಿಯೂ 10, 8, 6, 8 ಮಾತ್ರೆಗಳಾದಮೇಲೆ ಯತಿ. ಪಾದಾಂತ್ಯದಲ್ಲಿ ಸಗಣವು ಇದ್ದೇ ಇರಬೇಕು. ಉಳಿದ ಗಣಗಳಲ್ಲಿ ಗುರು ಲಘುಗಳನ್ನು ಯಥೇಚ್ಛವಾಗಿ ಬಳಸಿಕೊಳ್ಳಬಹುದು.

(xxxii) ಮಹಣಹರಾ: 4 ಪಾದಗಳು. ಪಾದಕ್ಕೆ ವರಸೆಯಾಗಿ 10 ಚತುರ್ಮಾತ್ರಾ ಗಣಗಳು. ಒಟ್ಟು ಪಾದಕ್ಕೆ 40 ಮಾತ್ರೆಗಳು. ಪಾದಾದಿಯಲ್ಲಿ ದ್ವಿಲಘುವೂ ಪಾದಾಂತ್ಯದಲ್ಲಿ ಗುರುವೂ ಇರಬೇಕು.

(xxxiii) ಮರಹಟ್ಟಾ: 4 ಪಾದಗಳು. ಪಾದದಲ್ಲಿ ವರಸೆಯಾಗಿ 6 ಮಾತ್ರೆಗಳ ಗಣ ಒಂದು, ಚತುರ್ಮಾತ್ರಾಗಣಗಳು 5, 1 ಗಲ. ಒಟ್ಟು 29 ಮಾತ್ರೆಗಳು. ಪ್ರತಿಪಾದದಲ್ಲಿಯೂ 10, 8, 11 ಮಾತ್ರೆಗಳಾದಮೇಲೆ ಯತಿ.

ಭಾಗ ನಾಲ್ಕು

ತಮಿಳು ಛಂದಸ್ಸು

೪.೧ ತಮಿಳು ಛಂದಸ್ಸಿನಲ್ಲಿ ಗಣವಿಭಜನೆಯನ್ನು ಲಾಕ್ಷಣಿಕರು ಇತರ ಭಾಷೆಗಳಲ್ಲಿರುವಂತಲ್ಲದೆ ಬೇರೆ ವಿಧವಾಗಿ ಮಾಡಿಕೊಂಡಿದ್ದಾರೆ. ಆ ಛಂದಸ್ಸುಗಳಿಗೂ ತೆಲುಗು ಕನ್ನಡ ಛಂದಸ್ಸುಗಳಿಗೂ ಇರುವ ಸಂಬಂಧವನ್ನು ತಿಳಿಯುವ ಮೊದಲು ತಮಿಳು ಛಂದಸ್ಸನ್ನು ತಮಿಳು ಲಾಕ್ಷಣಿಕರು ಹೇಗೆ ನಿರೂಪಿಸಿದ್ದಾರೆಂದು ನೋಡಬೇಕು.

೪.೨ ತಮಿಳು ಛಂದೋಲಕ್ಷಣದಲ್ಲಿ—ಕುಱಿಲ್ ಎಂದರೆ ಹ್ರಸ್ವಾಕ್ಷರ. ನೆಡಿಲ್ ಎಂದರೆ ದೀರ್ಘಾಕ್ಷರ. ವ್ಯಂಜನಗಳು ಅರ್ಧ ಮಾತ್ರಕಗಳು. ಅಸ್ಯೆ ಎಂದರೆ ಈ ಮೂರನ್ನೂ ಪ್ರತ್ಯೇಕವಾಗಿ ಆಗಲಿ, ಅವುಗಳಲ್ಲಿ 2–3 ಸೇರಿ ಆಗಲಿ ಏರ್ಪಟ್ಟು ಉಚ್ಚರಿಸುವ ಧ್ವನಿ. ಇದನ್ನು ಛಂದೋಕ್ಷರವೆನ್ನೋಣ. ಈ ಮೂರರ ಸೇರಿಕೆಯನ್ನೂ ಹಿಡಿದು ಅಸ್ಯೆ ಎಂಬುದು ನೇರ್‌ಅಸ್ಯೆ ಎಂದೂ ನಿರ್ರೈ ಅಸ್ಯೆ ಎಂದೂ 2 ವಿಧಗಳಾಗಿರುತ್ತವೆ.

೪.೩ ನೇರ್ ಅಸ್ಯೆ : ಇದು 1 ಕುಱಿಲ್ ಆಗಲಿ, 1 ನೆಡಿಲ್ ಆಗಲಿ, 1 ಕುಱಿಲ್ ಮತ್ತು ಅರ್ಧಮಾತ್ರೆ ಆಗಲಿ, 1 ನೆಡಿಲ್ ಮತ್ತು ಅರ್ಧ ಮಾತ್ರೆಯಾಗಲಿ ಆಗಿರುತ್ತದೆ. ಎಂದರೆ ಸಂಸ್ಕೃತ ಪರಿಭಾಷೆಯ ಪ್ರಕಾರ 1 ಲಘುವೋ 1 ಗುರುವೋ ಆಗಿರುತ್ತದೆ.

ನಿರ್ರೈ ಅಸ್ಯೆ : ಇದು ನೇರ್ ಅಸ್ಯೆಗೆ ಮೊದಲು 1 ಕುಱಿಲ್ ಅನ್ನು ಸೇರಿಸುವುದರಿಂದ ಬರುತ್ತದೆ. ಎಂದರೆ ಕುಱಿಲ್ + ಕುಱಿಲ್ = ಲಲ ; ಕುಱಿಲ್ + ನೆಡಿಲ್ = ಲಗ ; ಕುಱಿಲ್ + ಕುಱಿಲ್ + ಅರ್ಧಮಾತ್ರೆ = ಲಗ ; ಕುಱಿಲ್ + ನೆಡಿಲ್ + ಅರ್ಧಮಾತ್ರೆ = ಲಗ–ಎಂಬವುಗಳಲ್ಲಿ ಯಾವುದಾದರೂ ನಿರ್ರೈ ಅಸ್ಯೆ ಆಗಬಹುದು.

೪.೪ ನೇರ್ ನಿರ್ರೈಗಳ ಸಂಯೋಗದಿಂದ ಒಂದು ಶೀರ್ ಅಥವಾ ಗಣವೇರ್ಪಡುತ್ತದೆ. ಶೀರ್‌ನಲ್ಲಿ ನೇರ್‌ಗಳಾಗಲಿ, ನಿರ್ರೈಗಳಾಗಲಿ, ಎರಡೂ ಆಗಲಿ ಇರಬಹುದು. ಶೀರ್‌ನಲ್ಲಿರುವ ನೇರ್ ನಿರ್ರೈಗಳ ಸಂಖ್ಯೆಯನ್ನು ಹಿಡಿದು ಆಯಾ ಶೀರ್‌ಗಳಿಗೆ ಪ್ರತ್ಯೇಕ ಹೆಸರುಗಳಿವೆ. ನೇರ್ ನಿರ್ರೈಗಳು ಆಯಾ ಶೀರ್‌ಗಳಲ್ಲಿ ಯಾವುದಾದ ಮೇಲೆ ಯಾವುದು ಬರುತ್ತದೋ ಆ ಕ್ರಮವನ್ನು ಹಿಡಿದು ಕೂಡ ಹೆಸರುಗಳಿವೆ. ಆಯಾ ಹೆಸರುಗಳನ್ನು ಸಂಸ್ಕೃತ ಪರಿಭಾಷೆಯ ಪ್ರಕಾರ ಪ್ರಸ್ತಾರದೊಡನೆ ಇಲ್ಲಿ ತೋರಿಸಿದೆ. ಪದಾದಿ ಮಧ್ಯಗಳಲ್ಲಿ ನೇರ್ ಎಂಬುದು ಗುರುವಾಗಿಯೇ ಇರಬೇಕು. ಪದಾಂತವು ಗುರುವಾಗಲಿ ಲಘುವಾಗಲಿ ಆಗಿರಬಹುದು. ಈ ಕೆಳಗಿನ ಪ್ರಸ್ತಾರದಲ್ಲಿ ಈ ನಿಯಮವನ್ನು ಗಮನಿಸಬೇಕು,

೪.೫ ಶೀರ್ ಪ್ರಸ್ತಾರ.

i ಒರಸೈಚ್ಚೀರ್–ಒಂದು ನೇರ್ ಇಲ್ಲವೆ ನಿರೈ ಬಂದ ಗಣ. ಉದಾ. ಕಾಲ್. ಎಲರ್-ವೆಣ್ಪಾ ಎಂಬ ಪದ್ಯದ ಕಡೆಯಲ್ಲಿ ಇದನ್ನು ಸಾಧಾರಣವಾಗಿ ಬಳಸುತ್ತಾರೆ. ಒಮ್ಮೆ ಕಾಲ್ ಅಂಥದೇ ಅಲ್ಲದೆ 'ಕಾಶು' ಅಂಥ ರೂಪವುಳ್ಳ ಗಣವನ್ನೂ, ಮಲರ್ ಅಂಥದಲ್ಲದೆ ಪಿಱಪ್ಪು ಅಂಥ ರೂಪವುಳ್ಳ ಗಣವನ್ನೂ, ವೆಣ್ಪಾ ಪದ್ಯದ ಕಡೆಯಲ್ಲಿ ಬಳಸುವುದುಂಟು. ಎಂದರೆ ನೇರ್ ನಿರೈಗಳಾದ ಮೇಲೆ ಅರ್ಧಮಾತ್ರಕವಾದ ಉಕಾರ ಸೇರಿಸುತ್ತಾರೆ. ತುಂಬು ಉಕಾರ ವನ್ನು ಸೇರಿಸುವುದು ವಿರಳ.

ii ಉರಿಚ್ಚೀರ್ [ಆಶ್ರಿರಿಯುವುರಿಚ್ಚೀರ್] :– ಇದನ್ನು ಅಗವಲ್ ಎಂಬ ಪದ್ಯದಲ್ಲಿ ಬಳಸುತ್ತಾರೆ. ಇದರಲ್ಲಿ 2 ಛಂದೋಕ್ಷರಗಳಿರುತ್ತವೆ. ಪ್ರಸ್ತಾರದಿಂದ ಇಂಥವು 4 ಏರ್ಪಡುತ್ತವೆ :

ತೇಮಾ = 2 ನೇರ್‌ಗಳು – ಗಗ [ಬ್ರ] ; ಗಲ, ಹಗಣ [ಬ್ರ. ಸೂ.]
ಪುಳಿಮಾ = ನಿರೈ + ನೇರ್ – ಯಗಣ ; ಜಗಣ ; ಸಗಣ [ಬ್ರ]
ನಗಣ [ಬ್ರ. ಸೂ.]

ಮೇಲಿನವುಗಳಲ್ಲಿ ತೇಮಾ, ಪುಳಿಮಾ ಎಂಬ ಮಾತುಗಳ ಕೊನೆಗೆ ಮಾ ಇದೆ. ಆದಕಾರಣ ಈ ಗಣಗಳಿಗೆ ಮಾಚ್ಚೀರ್ ಎಂದು ಹೆಸರಾಗಿದೆ. ವಿಳಮ್‌ನಿಂದ ಕಡೆಯಾಗಿರುವುದು ವಿಳಚ್ಚೀರ್ ಎನಿಸುವುದು.

ಕರುವಿಳಮ್ = ನಿರೈ + ನಿರೈ – ನಲ [ವಿ. ಇಂ.] ; ನಗ [ವಿ. ಇಂ] ; ಜಲ ; ಜಗ.

ಕೂವಿಳಮ್ = ನೇರ್ + ನಿರೈ – ಭಗಣ [ವಿ. ಇಂ.] ; ರಗಣ [ವಿ, ಇಂ]

iii ವೆಣ್‌ಚೀರ್ [ವೆಣ್ಪಾ ಉರಿಚ್ಚೀರ್] :–ಇದು ವೆಣ್ಪಾ ಪದ್ಯದಲ್ಲಿ ಬರುವಂಥದು. ಇದರಲ್ಲಿ 3 ಛಂದೋಕ್ಷರಗಳಿರುತ್ತವೆ. ಮಾಚ್ಚೀರ್‌ಗಳಿಗೂ ವಿಳಚ್ಚೀರ್‌ಗಳಿಗೂ ಕಾಯ್ ಎಂದು ಸೇರಿಸುವುದರಿಂದ ಇವುಗಳ ಹೆಸರು ಏರ್ಪಡುತ್ತವೆ :

ತೇಮಾಂಗಾಯ್=ನೇರ್ + ನೇರ್ + ನೇರ್ — ಮಗಣ [ವಿ]; ತಗಣ [ವಿ. ೩೦.]

ಪುಳಿಮಾಂಗಾಯ್=ನಿರೈ + ನೇರ್ + ನೇರ್ — ಸಗ [ವಿ]; ಯಗ; ಸಲ [ವಿ. ೩೦]; ಯಲ.

ಕರುವಿಳಂಗಾಯ್=ನಿರೈ + ನಿರೈ + ನೇರ್ — ನವ? [ರು. ಚ.] ಜಗಗ; ನಲಲ [ರು. ಚ.] ; ಜಗಲ ; ಜಲಗ ; ನಗಗ [ರು. ಚ.] ಜಲಲ; ನಗಲ [ರು. ಚ.]

ಕೂವಿಳಂಗಾಯ್=ನೇರ್ + ನಿರೈ + ನೇರ್ — ಭಗುರು [ರು. ಚ.] ರಗ [ರು. ಚ.]; ಭಲ [ರು. ಚ.]; ರಲ [ರು. ಚ.]

ಈ ಕೆಳಗಿನವು ಕೂಡ 3 ಛಂದೋಕ್ಷರಗಳನ್ನು ಉಳ್ಳವೇ. ಇವುಗಳ ಕೊನೆಗೆ ಕಣಿ ಎಂಬುದು ಸೇರುವ ಕಾರಣ ಇವಕ್ಕೆ ಕಣಿಚ್ಚೀರ್‌ಗಳೆಂದು ಹೆಸರು. ಇವಕ್ಕೆ ವ ಞ್ಜಿಯುರಿಚ್ಚೀರ್ ಇಲ್ಲವೆ ವಞ್ಜಿಚ್ಚೀರ್ ಎಂದು ಕೂಡ ಹೆಸರು.

ತೇಮಾಂಗಣಿ=ನೇರ್ + ನೇರ್ + ನಿರೈ — ತಗ [ರು. ಚ.]; ತಲ [ರು. ಚ]

ಪುಳಿಮಾಂಗಣಿ=ನಿರೈ + ನೇರ್ + ನಿರೈ — ಸಲಗ [ರು. ಚ.]; ಯಲಗ; ಸಲಲ [ರು. ಚ.]; ಯಲಲ.

ಕರುವಿಲಂಗಣಿ=ನಿರೈ + ನಿರೈ + ನಿರೈ — ನಲಲಗ; ಜಗಲಗ; ನಲಲಲ; ಜಗಲಲ; ನಗಲಗ; ಜಲಲಗ; ನಗಲಲ; ಜಲಲಲ.

ಕೂವಿಲಂಗಣಿ=ನೇರ್ + ನಿರೈ + ನಿರೈ — ಭಲಗ; ರಲಗ; ಭಲಲ; ರಲಲ.

vi **ಪೊದುಚ್ಚೀರ್:** ಇದು ವಞ್ಜಿ ಪದ್ಯದಲ್ಲಿ ಬಳಸಲಾಗುತ್ತದೆ. ವೆಣ್ಬಾ ಪದ್ಯದಲ್ಲಿ ಇದನ್ನು ಉಪಯೋಗಿಸರು. ಇದರಲ್ಲಿ 16

ಭೇದಗಳಿವೆ. ತೇಮಾ, ಪುಳಿಮಾ, ಕರುವಿಳವ್, ಕೂವಿಳವ್, ಎಂಬ ಹೆಸರುಗಳಿಗೆ ವರಸೆಯಾಗಿ ತಣ್ಣಟಿಲ್, ತಣ್‌ಬೂ, ನಱುಂಬೂ, ನಱುನಿಟಿಲ್ ಎಂಬ ಮಾತುಗಳನ್ನು ಸೇರಿಸುವುದರಿಂದ ಈ 16ಕ್ಕೂ ಹೆಸರುಗಳೇರ್ಪಡುತ್ತವೆ. ಇವೆಲ್ಲ 4 ಛಂದೋಕ್ಷರಗಳುಳ್ಳ ಶೀರ್‌ಗಳು.

1. ತೇಮಾತಣ್ಣಟಿಲ್ : ನೇರ್ + ನೇರ್ + ನೇರ್ + ನಿರೈ — ಮಲಗ; ಮಂಲಲ.
2. ತೇಮಾತಣ್ಬೂ : ನೇರ್ + ನೇರ್ + ನೇರ್ + ನೇರ್ — ಮಗ [ರು.]; ಮಲಘು [ರು.ಚ.]
3. ತೇಮಾನಱುಮ್ಬೂ : ನೇರ್ + ನೇರ್ + ನಿರೈ + ನೇರ್ — ತಗಗ; ತಲಗ; ತಗಲ; ತಲಲ.
4. ತೇಮಾನಱುನಿಟಿಲ್ : ನೇರ್ + ನೇರ್ + ನಿರೈ + ನಿರೈ — ತರ; ತಸ; ತಭ; ತನ.
5. ಪುಳಿಮಾತಣ್ಣಟಿಲ್ : ನಿರೈ + ನೇರ್ + ನೇರ್ + ನಿರೈ — ಯರ; ಸರ; ಯಭ; ಸಭ.
6. ಪುಳಿಮಾತಣ್‌ಬೂ : ನಿರೈ + ನೇರ್ + ನೇರ್ + ನೇರ್ — ಯುಗ; ಸಗಗ [ರು]; ಯುಗಲ; ಸಗಲ [ರು. ಚ.]
7. ಪುಳಿಮಾನಱುಮ್ಬೂ : ನಿರೈ + ನೇರ್ + ನಿರೈ + ನೇರ್. ಯಯ; ಯಸ; ಯಜ; ಯನ; ಸಯ; ಸಸ; ಸಜ; ಸನ.
8. ಪುಳಿಮಾನಱುನಿಟಿಲ್ : ನಿರೈ + ನೇರ್ + ನಿರೈ + ನಿರೈ — ಯಜಗ ; ಸಜಗ ; ಯಜಲ ; ಸಜಲ; ಯಂನಗ ; ಸನಗ ; ಯನಲ ; ಸನಲ.
9. ಕರುವಿಳಮ್‌ತಣ್ಣಟಿಲ್ : ನಿರೈ + ನಿರೈ + ನೇರ್ + ನಿರೈ. ಜತಗ; ನತಗ; ಜತಲ; ನತಲ; ಜಜಗ; ನಜಗ; ಜಜಲ; ನಜಲ.

10. ಕರುವಿಳವ್‌ತಣ್ಣೊ : ನಿರೈ + ನಿರೈ + ನೇರ್ + ನೇರ್.
ಜಮ; ನಮ; ಜತ; ನತ; ಜಯ;
ನಯ; ಜಜ; ನಜ.

11. ಕರುವಿಳವ್‌ನರುಂಬೂ : ನಿರೈ + ನಿರೈ + ನಿರೈ + ನೇರ್ –
ಜರಗ; ನರಗ; ಜರಲ; ನರಲ; ಜಸಗ;
ನಸಗ; ಜಸಲ; ನಸಲ; ಜಭಗ; ನಭಗ;
ಜಭಲ; ನಭಲ; ಜನಗ; ನನಗ; ಜನಲ;
ನನಲ.

12. ಕರುವಿಳಂನರುನಿಟಿಲ್ : ನಿರೈ + ನಿರೈ + ನಿರೈ + ನಿರೈ.
ಜರಲಗ; ನರಲಗ; ಜರಲಲ; ನರಲಲ,;
ಜಸಲಗ; ನಸಲಗ;
ಜಸಲಲ; ನಸಲಲ; ಜಭಲಗ; ನಭಲಗ;
ಜಭಲಲ; ನಭಲಲ;
ಜನಲಗ; ನನಲಗ; ಜನಲಲ; ನನಲಲ.

13. ಕೂವಿಳವ್‌ತಣ್ಣಿಟಿಲ್ : ನೇರ್ + ನಿರೈ + ನೇರ್ + ನಿರೈ.
ರರ; ಭರ; ರಭ; ಭಭ.

14. ಕೂವಿಲವ್‌ತಣ್‌ಬೂ : ನೇರ್ + ನಿರೈ + ನೇರ್ + ನೇರ್
ರಗಗ; ಭಗಗ; ರಗಲ; ಭಗಲ.

15. ಕೂವಿಳವ್‌ನರುಂಬೂ : ನೇರ್ + ನಿರೈ + ನಿರೈ + ನೇರ್.
ರಯ; ಭಯ; ರಜ; ಭಜ; ರಸ; ಭಸ;
ರನ; ಭನ;

16. ಕೂವಿಳವ್‌ನರುನಿಟಿಲ್ : ನೇರ್ + ನಿರೈ + ನಿರೈ + ನಿರೈ.
ರಜಗ; ಭಜಗ; ರಜಲ; ಭಜಲ; ರನಗ;
ಭನಗ; ರನಲ; ಭನಲ.

೪.೬ ಇಲ್ಲಿಯವರೆಗೆ ಅಸ್ಸೆ ಶೀರ್‌ಗಳನ್ನು ಕುರಿತು ಹೇಳಿ ಆಯಿತು. ಇವಲ್ಲದೆ ತಮಿಳು ಛಂದಸ್ಸಿನಲ್ಲಿ ತಿಳಿದುಕೊಳ್ಳಬೇಕಾದವು ಎಟುತ್ತು, ತಳ್ಳೆ, ಅಡಿ, ತೊಡೈ ಎಂಬವು. ಎಟುತ್ತುಗಳು ಮೊದಲೆಟುತ್ತು (ಸ್ವರ ವ್ಯಂಜನಗಳು), ಶಾಪ್ಪೈಯೆಟುತ್ತು (ಆಯ್ದಮ್, ದ್ರುತ) ಎಂದು 2 ಬಗೆಗಳು.

ತಳ್ಳೆ ಎಂದರೆ ನೇರ್ ನಿರೈಗಳ ಹೊಂದಿಕೆ. ನೇರ್ ನೇರ್ ಜತೆಗೂ, ನಿರೈ ನಿರೈ ಜತೆಗೂ ಹೊಂದಿರುತ್ತದೆ. ನೇರ್ ನಿರೈ ಜತೆಗಾಗಲಿ, ನಿರೈ ನೇರ್ ಜತೆಗಾಗಲಿ ಹೊಂದಿರುವುದಿಲ್ಲ. ಈ ತಳ್ಳೆ ಎಂಬುದು 7 ವಿಧಗಳು :

1 ನೇಟಿಶೂನಾಶಿರಿಯತ್ತಳ್ಳೆ—ಮಾ [ತೇಮಾ, ಪುಳಿಮಾ] + ನೇರ್; ಇಲ್ಲವೆ ನಾಳ್ + ನೇರ್.

2 ನಿರೈಯೊನಾಶಿರಿಯತ್ತಳ್ಳೆ — ವಿಳ [ಕರುವಿಳ, ಕೂವಿಳ] + ನಿರೈ ; ಇಲ್ಲವೆ ಮಲರ್ + ನಿರೈ.

3 ವೆಣ್ ಶೀರ್ ವೆಣ್‌ದಳ್ಳೆ — ಕಾಯ್ [ತೇಮಾಂಗಾಯ್, ಪುಳಿಮಾಂಗಾಯ್, ಕರುವಿಳಂಗಾಯ್, ಕೂವಿಳಂಗಾಯ್] + ನೇರ್ ; ಇಲ್ಲವೆ ಪೂ [ತಣಪ್ಪೂ, ನಱುಮ್‌ಬೂ] + ನೇರ್.

4 ಇಯ್ಯಚ್ಚೀರ್ ವೆಣ್‌ದಳ್ಳೆ — ಮಾ + ನಿರೈ; ಇಲ್ಲವೆ ವಿಳ+ನೇರ್; ಇಲ್ಲವೆ ನಾಳ್ + ನಿರೈ; ಇಲ್ಲವೆ ಮಲರ್ + ನೇರ್.

5 ಒನ್ರಿಯವಞ್ಜಿತ್ತಳ್ಳೆ — ಕನಿ + ನಿರೈ; ಇಲ್ಲವೆ ನಿಜಲ್ + ನಿರೈ

6 ಒನ್ರಾವಞ್ಜಿತ್ತಳ್ಳೆ — ಕನಿ + ನೇರ್; ಇಲ್ಲವೆ ನಿಜಲ್ + ನೇರ್.

7 ಕಲಿತ್ತಳ್ಳೆ — ಕಾಯ್ + ನಿರೈ; ಇಲ್ಲವೆ ಪೂ + ನಿರೈ.

೪.೭ ಅಡಿ ಎಂದರೆ ಪದ್ಯಪಾದ. ಪಾದದಲ್ಲಿ ಒಂದಾಗಲಿ ಅನೇಕವಾಗಲಿ ತಳ್ಳೆಗಳು ಬರುತ್ತವೆ. ಅಡಿ ಐದು ವಿಧಗಳು. 2 ಶೀರ್‌ಗಳುಳ್ಳದ್ದು ಕುಱುಲಡಿ. 3 ಶೀರ್‌ಗಳುಳ್ಳದ್ದು ಸಿಂದಡಿ. 4 ಶೀರ್‌ಗಳುಳ್ಳದ್ದು ಅಳವಡಿ. 5 ಶೀರ್‌ಗಳುಳ್ಳದ್ದು ನೆಡಿಲಡಿ. 6 ಶೀರ್‌ಗಳುಳ್ಳದು ಕಟಿ ನೆಡಿಲಡಿ.

೪.೮ ತೊಡೈ ಎಂಬುದಕ್ಕೆ ಅನುಪ್ರಾಸ, ಮೈತ್ರಿ ಎಂದರ್ಥ ಹೇಳಬಹುದು. [ಸೆಯ್ಯುಳುಱುಪ್ಪಿನ್ನೊನ್ರು]. ಇದರಲ್ಲಿ 5 ಭೇದಗಳು. ಈ 5ರಲ್ಲಿ ಒಂದೊಂದರಲ್ಲೂ ತಿರುಗಿ ಎಂಟರಂತೆ ಭೇದಗಳ ಪ್ರಕಾರ ಒಟ್ಟು 40, ಮತ್ತೆ 3 ಸೇರಿ 43 ಭೇದಗಳನ್ನು ಲಾಕ್ಷಣಿಕರು ತಿಳಿಸಿದ್ದಾರೆ. ಅವುಗಳನ್ನು ಈ ಕೆಳಗೆ ವಿವರಿಸಿದೆ.

I ಮೋನೈ ; ಮೋನೈತ್ತೊಡೈ : ಪಾದಗಳಲ್ಲಿನ ಮೊದಲಕ್ಷರಗಳು ಮೈತ್ರಿಯಿಂದಿರುವಿಕೆ, ಇದರಲ್ಲಿ ಅಂತರ್ಭೇದಗಳು :

1 ಅಡಿಮೋನೈ [ಮುದನ್ ಮೋನೈ] : ಪಾದದಲ್ಲಿನ ಶೀರ್‌ಗಳೆಲ್ಲದರ ಮೊದಲಕ್ಷರಗಳ ಮೈತ್ರಿ.

2 ಇಣೈಮೋನೈ : ಪ್ರತಿಪಾದದಲ್ಲಿಯೂ ಮೊದಲೆರಡು ಶೀರ್‌ಗಳ ಮೊದಲಕ್ಷರಗಳ ಮೈತ್ರಿ.

3 ಪೊಳಿಪ್ಪುಮೋನೈ : 1, 3ನೇ ಶೀರ್‌ಗಳ ಮೊದಲಕ್ಷರಗಳೂ 2, 4ನೇ ಶೀರ್‌ಗಳ ಮೊದಲಕ್ಷರಗಳೂ ತಮ್ಮಲ್ಲಿ ತಾವು ಮೈತ್ರಿಯಿಂದಿರುವಿಕೆ.

4 ಒರೂಉಮೋನೈ ; 1, 4ನೇ ಶೀರ್‌ಗಳ ಮೊದಲಕ್ಷರಗಳ ಮೈತ್ರಿ.

5 ಕೂಳಿೖಮೋನೈ : ಕಡೆಯ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳ ಮೊದಲಕ್ಷರಗಳ ಮೈತ್ರಿ.

6 ಮೇಱ್‌ಗದುವಾಯ್‌ಮೋನೈ : 2ನೇ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳ ಮೊದಲಕ್ಷರಗಳ ಮೈತ್ರಿ.

7 ಕೀಱ್‌ಕ್ಕದುವಾಯ್ ಮೋನೈ : ಕಡೆಯ ಶೀರ್‌ಗೆ ಹಿಂದಣ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳ ಮೊದಲಕ್ಷರಗಳ ಮೈತ್ರಿ.

8 ಮುಱಟ್ರುಮೋನೈ : ಎಲ್ಲ ಶೀರ್‌ಗಳ ಮೊದಲಕ್ಷರಗಳ ಮೈತ್ರಿ.

II ಇಯೈಪು ; ಇಯೈಪುತ್ತೊಡೈ : ಪಾದಗಳಲ್ಲಿನ ಕಡೆಯ ಶೀರ್‌ಗಳಾಗಲಿ, ಅಕ್ಷರಗಳಾಗಲಿ ಮೈತ್ರಿಯಿಂದಿರುವಿಕೆ. ಇದರಲ್ಲಿನ ಅಂತರ್ಭೇದಗಳು :

1 ಅಡಿ ಇಯೈಪು [ಮುದಲಿಯೈಪು] : ಪ್ರತಿ ಪಾದದಲ್ಲಿ ಮೊದಲ ಶೀರ್‌ನ ಕೊನೆಯಕ್ಷರದ ಮೈತ್ರಿ.

2 ಇಣೈಯಿಯೈಪು : ಪ್ರತಿಪಾದದಲ್ಲಿ ಮೊದಲೆರಡು ಶೀರ್‌ಗಳ ಕೊನೆಯಕ್ಷರಗಳ ಮೈತ್ರಿ.

3 ಪೊಳಿಪ್ಪಿಯೈಪು : ಒಂದು ಬಿಟ್ಟು ಒಂದರಂತೆ ಶೀರ್‌ಗಳ ಕೊನೆಯಕ್ಷರಗಳ ಮೈತ್ರಿ.

4 ಒರೂಉವಿಯೈಪು : 1–4ನೇ ಶೀರ್‌ಗಳ ಕಡೆಯಕ್ಷರಗಳ ಮೈತ್ರಿ.

5 ಕೂಟೈಯಿಯೈಪು : ಕಡೆಯ ಶೀರ್ ಹೊರತು ಮಿಕ್ಕ ಶೀರ್‌ಗಳ ಕಡೆಯಕ್ಷರಗಳ ಮೈತ್ರಿ.

6 ಮೇಱ್‌ಗದುವಾಯಿಯೈಪು : 2ನೇ ಶೀರ್ ಹೊರತು, ಮಿಕ್ಕ ಶೀರ್‌ಗಳ ಕಡೆಯಕ್ಷರಗಳ ಮೈತ್ರಿ.

7 ಕೀೞ್‌ಕ್ಕದುವಾಯಿಯೈಪು : ಕಡೆಯ ಶೀರ್‌ಗೆ ಹಿಂದಣ ಶೀರ್ ಹೊರತು ಮಿಕ್ಕ ಶೀರ್‌ಗಳ ಕಡೆಯಕ್ಷರಗಳ ಮೈತ್ರಿ.

8 ಮುಟ್ರಿಯೈಪು : ಎಲ್ಲ ಶೀರ್‌ಗಳಲ್ಲಿ ಕಡೆಯಕ್ಷರಗಳ ಮೈತ್ರಿ.

[ಞ, ಣ, ನ, ಮ, ನ್, ಯ, ರ, ಲ, ವ, ೞ, ಳ–ಗಳಿಂದ ಪದ್ಯಗಳು ಕಡೆಯಾಗುವಂತೆ ರಚಿಸುವುದಕ್ಕೆ ಕೂಡ ಇಯೈಪು ಎಂದು ಹೆಸರಿದೆ.]

III ಎದುಗೈ ; ಎದುಗೈತ್ತೊಡೈ : ಪದ್ಯದಲ್ಲಿನ ಪ್ರತಿಪಾದದಲ್ಲಿಯ ಎರಡನೆಯಕ್ಷರ ಹೊಂದಿಕೊಂಡಿರುವುದು. ಇದರಲ್ಲಿ ಅಂತರ್ಭೇದಗಳು :

1 ಅಡಿಯೆದುಗೈ [ಮುದಲೆದುಗೈ]: ಎಲ್ಲ ಪಾದಗಳಲ್ಲಿಯ ಮೊದಲ ಶೀರ್‌ನ ಎರಡನೆಯಕ್ಷರ ಹೊಂದಿಕೆಯಿಂದಿರುವುದು.

2 ಇಣೈಯೆದುಗೈ: ಎಲ್ಲ ಪಾದಗಳಲ್ಲಿಯ ಮೊದಲೆರಡು ಶೀರ್‌ಗಳ ಎರಡನೆಯಕ್ಷರ ಹೊಂದಿಕೊಂಡಿರುವುದು.

3 ಪೊಳಿಪ್ಪೆದುಗೈ : ಎಲ್ಲ ಪಾದಗಳಲ್ಲಿಯ ಶೀರ್‌ಗಳಲ್ಲಿ ಒಂದು ಬಿಟ್ಟು ಒಂದರ ಎರಡನೆಯಕ್ಷರದ ಹೊಂದಿಕೆ.

4 ಒರೂಉುವೆದುಗ್ಯೆ : ಎಲ್ಲ ಪಾದಗಳಲ್ಲಿಯ 1–4ನೇ ಶೀರ್‌ಗಳ ೨ನೆಯಕ್ಷರದ ಹೊಂದಿಕೆ.

5 ಕೂಟ್ಯಿಯೆದುಗ್ಯೆ : ಎಲ್ಲ ಪಾದಗಳಲ್ಲಿಯ ಕಡೆಯ ಶೀರ್ ಹೊರತು, ಮಿಕ್ಕ ಶೀರ್‌ಗಳ ೨ನಯಕ್ಷರದ ಹೊಂದಿಕೆ.

6 ಮೇಱ್‌ಗದುವಾಯೆದುಗ್ಯೆ: ಎಲ್ಲ ಪಾದಗಳಲ್ಲಿಯ ೨ನೇ ಶೀರ್ ಹೊರತು, ಮಿಕ್ಕ ಶೀರ್‌ಗಳ ೨ನೆಯಕ್ಷರದ ಹೊಂದಿಕೆ.

7 ಕೀಱ್‌ಕ್ಕದುವಾಯೆಂದುಗ್ಯೆ : ಎಲ್ಲ ಪಾದಗಳಲ್ಲಿಯ ಕಡೆಯ ಶೀರ್‌ಗೆ ಹಿಂದಣ ಶೀರ್ ಹೊರತು, ಮಿಕ್ಕಶೀರ್‌ಗಳ ೨ನೆಯಕ್ಷರ ಹೊಂದಿಕೊಂಡಿರುವುದು.

8 ಮುಟ್ರೈದುಗ್ಯೆ : ಎಲ್ಲ ಪಾದಗಳಲ್ಲಿಯ ಎಲ್ಲ ಶೀರ್‌ಗಳ ೨ನೆಯಕ್ಷರ ಹೊಂದಿಕೊಂಡಿರುವುದು.

ಎದುಗ್ಯೆನಲ್ಲಿ ಮತ್ತೆ ಕೆಲವು ಭೇದಗಳಿವೆ :

1 ತಲೈಯಾಗೆದುಗ್ಯೆ : ಪದ್ಯದಲ್ಲಿಯ ಪ್ರತಿಪಾದದಲ್ಲಿಯ ಮೊದಲ ಶೀರ್‌ನ ಮೊದಲಕ್ಷರದ ಹೊರತು ಎಲ್ಲ ಪಾದಗಳ ಉಳಿದೆಲ್ಲ ಅಕ್ಷರಗಳೂ ಹೊಂದಿಕೊಂಡಿರುವುದು.

2 ಇಡೈಯಾಗೆದುಗ್ಯೆ : ಮೇಲಿನಂಥದೇ ಆದರೂ ಪಾದಗಳಲ್ಲಿ ಅಕ್ಷರಗಳು ಒಂದುಬಿಟ್ಟೊಂದರಂತೆ ಹೊಂದಿಕೊಂಡಿರುವುದು.

3 ಕಡೈಯಾಗೆದುಗ್ಯೆ : ಮೇಲಿನೆರಡು ವಿಧಗಳಲ್ಲದೆ ಮಿಕ್ಕಾವ ಹೊಂದಿಕೆಯಾದರೂ ಈ ಬಗೆಯೆನಿಸುವುದು.

4 ಆಶೆದುಗ್ಯೆ : ಮೊದಲಪಾದದ ಮೊದಲಕ್ಷರವಾದ ಮೇಲೆ ಯ, ರ, ಲ, ೞ ಎಂಬ ಅಕ್ಷರಗಳಿದ್ದರೆ ಅವುಗಳನ್ನು ಮಿಕ್ಕ ಎದುಗ್ಯೆ ಸ್ಥಾನಗಳಲ್ಲಿ ಬೇಕಾದಾಗ ಬಿಟ್ಟುಬಿಡಬಹುದು. ಅಂಥವಕ್ಕೆ ಆಶೆದುಗ್ಯೆ ಎಂದು ಹೆಸರು.

5 ವೞಿಯೆದುಗ್ಯೆ : ಮೊದಲೆರಡು ಪಾದಗಳಲ್ಲಿ, ಒಮ್ಮೊಮ್ಮೆ ಮೊದಲ ಮೂರು ಪಾದಗಳಲ್ಲಿ, ಎರಡೋ ಮೂರೋ ಅಕ್ಷರಗಳ ಹೊಂದಿಕೆ.

6 ನೆಡಿವೆದುಗೈ: ದೀರ್ಘಸ್ವರಗಳಿಂದ ಕೂಡಿದ ಯಾವ ವ್ಯಂಜನಗಳಾದರೂ ಎದುಗೈಗೆ ಸಲ್ಲುತ್ತವೆ. ಅಂಥದು ನೆಡಿವೆದುಗೈ ಎನಿಸುವುದು' ಉದಾ॥ ಆವಾ....ಕೂಕೂ...ಮಾಮಾ....ಏಗೀರ್....

7 ಇನವೆದುಗೈ: ಪದ್ಯದಲ್ಲಿ ಒಂದೇ ವರ್ಗಕ್ಕೆ ಸೇರಿದ ವ್ಯಂಜನಗಳ ಹೊಂದಿಕೆ. ಇದರಲ್ಲಿ ಮೂರು ವಿಧಗಳು:

i ವಲ್ಲಿನವೆದುಗೈ: ಕ ಚ ಟ ತ ಪ ಱಗಳು ತಮ್ಮಲ್ಲಿ ತಾವು ಹೊಂದಿರುವಿಕೆ.

ii ಮೆಲ್ಲಿನವೆದುಗೈ: ಙ ಞ ಣ ನ ಮ ನ್‌ಗಳು ತಮ್ಮಲ್ಲಿ ತಾವು ಹೊಂದಿರುವಿಕೆ.

iii ಇಡೈಯಿನವೆದುಗೈ: ಯ ರ ಲ ವ ೞ ಳ–ಗಳು ತಮ್ಮಲ್ಲಿ ತಾವು ಹೊಂದಿರುವಿಕೆ.

IV ಮುರಣ್; ಮುರಣ್‌ದೊಡೈ: ಪರಸ್ಪರ ವಿರುದ್ಧಗಳಾದ ಮಾತುಗಳಿಂದ ಪದ್ಯವನ್ನು ಹೇಳುವುದು.

ಉದಾ: ಇರುಳ್ ಪಱನ್ದನ್ನ ಮಾನೀರ್ ಮರುಙ್ಗಿನ್ ನಿಲವು ಗುವಿನ್ದನ್ನ ವೆಣ್‌ಮಣಲೊರುಶಿಱೈ.

[ವಿಸ್ತರಿಸಿರುವ ಕತ್ತಲಂತೆ ಕಪ್ಪಗಿರುವ ನೀರಿನ ಪಕ್ಕದಲ್ಲಿ, ಬೆಳುದಿಂಗಳ ನೂಲುಗಳು ಚೆಲ್ಲಿರುವುದೋ ಎಂಬಂತೆ ಬೆಳ್ಳಗಿರುವ ಮರಳು ಕಂಡು ಬಂದಿತು.]

ಇದರಲ್ಲಿ ಅಂತರ್ಭೇದಗಳು:

1 ಅಡಿ ಮುರಣ್ [ಮುದನ್ ಮುರಣ್]–ಪಾದಗಳಲ್ಲಿನ ಮೊದಲ ಶೀರ್‌ಗಳಿಗೆ ವಿರೋಧ.

2 ಇಣೈ ಮುರಣ್: ಪಾದಗಳಲ್ಲಿನ ಮೊದಲೆರಡು ಶೀರ್‌ಗಳಿಗೆ ವಿರೋಧ.

3 ಪೊೞಿಪ್ಪು ಮುರಣ್: ಪಾದಗಳಲ್ಲಿನ ಒಂದು ಬಿಟ್ಟೊಂದರಂತೆ ಬರುವ ಶೀರ್‌ಗಳಿಗೆ ವಿರೋಧ.

4 ಒರೂಉ ಮುರಣ್ : ಪಾದಗಳಲ್ಲಿನ 1-4ನೇ ಶೀರ್‌ಗಳಿಗೆ ವಿರೋಧ.

5 ಕೂಟ್ಟಿ ಮುರಣ್ : ಪಾದಗಳಲ್ಲಿನ ಕಡೆಯ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳಿಗೆ ವಿರೋಧ.

6 ಮೇಱ್‌ಗದುವಾಯ್ ಮುರಣ್ : ಪಾದಗಳಲ್ಲಿನ ಮೂರನೇ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳಿಗೆ ವಿರೋಧ.

7 ಕೀೞ್‌ಕ್ಕದುವಾಯ್ ಮುರಣ್ : ಪಾದಗಳಲ್ಲಿನ ಕಡೆಯ ಶೀರ್‌ಗೆ ಹಿಂದಣ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳಿಗೆ ವಿರೋಧ.

8 ಮುಟ್ರುಮುರಣ್ : ಎಲ್ಲ ಪಾದಗಳಲ್ಲಿನ ಎಲ್ಲ ಶೀರ್‌ಗಳಿಗೆ ವಿರೋಧ.

V ಅಳಪೆಡ್ಡೈತ್ತೊಡ್ಡೈ : ಪದ್ಯದಲ್ಲಿ ಗಣಗಳಿಗೋಸ್ಕರ ಅಕ್ಷರಗಳನ್ನು ಉದ್ದಮಾಡುವಿಕೆ.

[ಅಕ್ಷರಗಳನ್ನು 2 ವಿಧವಾಗಿ ಉದ್ದ ಮಾಡಬಹುದು : (1) ಉಯಿರಳ ಪೆಡ್ಡೈ—ಪದದ ಆದಿ, ಮಧ್ಯ, ಅಂತ್ಯದಲ್ಲಾಗಲಿ ಒಂದು ದೀರ್ಘಾಕ್ಷರಕ್ಕೆ ಹ್ರಸ್ವಸ್ವರವನ್ನು ಸೇರಿಸುವಿಕೆ. ಉದಾ : ಈಗೈ – ಈಇಗೈ ; ಪಡಾಗೈ— ಪಡಾಅಗೈ ; ಕುಟು—ಕುಟುಉ ; ಮುಂತಾದವು. ಇವುಗಳಲ್ಲಿ [i] ಇಯಱ್ ಗೈಯಳ ಪೆಡ್ಡೈ [ii] ಶೆಯ್ಯುೞ್ ಗೈಯುಳಪೆಡ್ಡೈ ಎಂದು ಭೇದಗಳಿವೆ. [2] ಒಟ್ರಳಪೆಡ್ಡೈ—ಒಂದೋ ಎರಡೋ ಹ್ರಸ್ವಾಕ್ಷರಗಳಾದ ಮೇಲೆ ಪದ ಮಧ್ಯದಲ್ಲಾಗಲಿ ಪದಾಂತ್ಯದಲ್ಲಾಗಲಿ ಬರುವ ಙ್, ಞ್, ಣ್, ನ್, ಮ್, ನ್, ವ್, ಯ್, ಲ್, ಳ್, ಆಯ್ದಮ್‌ಗಳಿಗೆ ದ್ವಿತ್ವವನ್ನು ಕಲ್ಪಿಸುವಿಕೆ.

ಉದಾ: ಅರಙ್‌ಙ್‌ಗಮ್; ಮುರಞ್‌ಞ್‌ಜು, ಮಣ್‌ಣ್‌ಣು; ಅಮ್‌ಮ್‌ಬು; ಕೊಳ್‌ಳ್‌ಗ; ಎಲ ಃಃಕಿ; ಮುಂತಾದವು.

ಅಳಪೆಡ್ಡೈಗಳಲ್ಲಿನ ಅಂತರ್ಭೇದಗಳು :

1 ಅಡಿಯುಳಪೆಡ್ಡೈ [ಮುದಲಳಪೆಡ್ಡೈ] : ಪ್ರತಿ ಪಾದದಲ್ಲಿನ ಮೊದಲ ಶೀರ್‌ನಲ್ಲಿ ಅಳಪೆಡ್ಡೈ ಸೇರಿಸುವಿಕೆ.

2 ಇಣೈಯುಳಪೆಡ್ಡೈ : ಪ್ರತಿಪಾದದಲ್ಲಿನ ಮೊದಲೆರಡು ಶೀರ್‌ಗಳಲ್ಲಿ ಅಳಪೆಡ್ಡೈ ಸೇರಿಸುವಿಕೆ.

3 ಪ್ರೊಟಿಪ್ಪಳಪೆಡ್ಡೈ : ಪ್ರತಿಪಾದದಲ್ಲಿ ಒಂದು ಬಿಟ್ಟೊಂದರಂತೆ ಬರುವ ಶೀರ್‌ಗಳಲ್ಲಿ ಅಳಪೆಡ್ಡೈ ಸೇರಿಸುವುದಂ.

4 ಒರೂಉವಳಪೆಡ್ಡೈ : ಪ್ರತಿಪಾದದಲ್ಲಿಯೂ 1-4ನೆಯ ಶೀರ್‌ಗಳಲ್ಲಿ ಅಳಪೆಡ್ಡೈ ಸೇರಿಸುವುದು.

5 ಕೂಟೈಯುಳಪೆಡ್ಡೈ : ಪ್ರತಿಪಾದದಲ್ಲಿಯೂ ಕಡೆಯ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳಲ್ಲಿ ಅಳಪೆಡ್ಡೈ ಸೇರಿಸುವುದು.

6 ಮೇಱ್‌ಗದುವಾಯುಳಪೆಡ್ಡೈ : ಪ್ರತಿಪಾದದಲ್ಲಿಯೂ ೨ನೇ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳಲ್ಲಿ ಅಳಪೆಡ್ಡೈ ಸೇರಿಸುವುದು.

7 ಕೀಱ್‌ಕ್ಕದುವಾಯುಳಪೆಡ್ಡೈ : ಪ್ರತಿಪಾದದಲ್ಲಿಯೂ ಕಡೆಯ ಶೀರ್‌ಗೆ ಹಿಂದಣ ಶೀರ್ ಹೊರತು ಮಿಕ್ಕೆಲ್ಲ ಶೀರ್‌ಗಳಿಗೆ ಅಳಪೆಡ್ಡೈ ಸೇರಿಸುವುದು.

8 ಮುಟ್ರಳಪೆಡ್ಡೈ : ಎಲ್ಲ ಪಾದಗಳ ಎಲ್ಲ ಶೀರ್‌ಗಳಿಗೆ ಅಳಪೆಡ್ಡೈ ಸೇರಿಸುವುದು. ಇಲ್ಲಿಗೆ ತೊಡ್ಡೈ ಅಲ್ಲಿ ೪೦ ಭೇದಗಳಾದವು. ಇವಲ್ಲದೆ ವಂತ್ತೆ ೩ ಇವೆ.

vi ಅನ್ದಾದಿ ; ಅನ್ದಾದಿತ್ತೊಡ್ಡೈ : ಒಂದು ಪದ್ಯದಲ್ಲಿನ ಕಟ್ಟಕಡೆ ಅಕ್ಷರವಾಗಲಿ, ಮಾತಾಗಲಿ ಮಾತುಗಳಾಗಲಿ ಆಮೇಲಿನ ಪದ್ಯದ ಮೊದಲಿನಲ್ಲಿ ಪುನಃ ಬರುವಿಕೆ.

vii ಇರಟ್ಟೈತ್ತೊಡ್ಡೈ : ಒಂದೇ ಅಕ್ಷರವಾಗಲಿ, ಮಾತಾಗಲಿ ಪ್ರತಿ ಪದ್ಯಪಾದದಲ್ಲಿನ ಶೀರ್‌ಗಳಲ್ಲಿ ಪದೇ ಪದೇ ಬರುವಿಕೆ.

viii ಸೆನ್ದೊಡ್ಡೈ [ಮೊನೈ ಮುದಲಿಯ ಒಲ್ಲಾದ ತೊಡ್ಡೈ] ಎಂತಹ ಪ್ರಾಸವಾಗಲಿ ಮೈತ್ರಿಯಾಗಲಿ ಅಗತ್ಯವಿಲ್ಲದ್ದು.

೪.೯ ತಮಿಳಿನಲ್ಲಿ ಪದ್ಯಕ್ಕೆ 'ಪಾ' ಎಂದು ಹೆಸರು. ಇದರಲ್ಲಿ [1] ವೆಣ್ಬಾ, [2] ಅಗವಲ್ಪಾ ಇಲ್ಲವೆ ಆಶಿರಿಯಪ್ಪಾ [3] ಕಲಿಪ್ಪಾ [4] ವಞ್ಜಿಪ್ಪಾ [5] ಮರುಟ್ಪಾ ಎಂದು 5 ಭೇದಗಳಿವೆ. ಈ ಭೇದ ಒಂದೊಂದರಲ್ಲಿಯೂ ತುಱೈ, ತಾೞಿಶೈ, ವಿರುತ್ತಮ್ ಎಂದು ಮತ್ತೆ 3 ಭೇದಗಳಿವೆ.

I ವೆಣ್ಬಾ : 4 ಪಾದಗಳು; ಮೊದಲ 3 ಪಾದಗಳಲ್ಲಿ 4–4ರಂತೆ ಶೀರ್‌ಗಳು. ಮಾ, ವಿಳ, ಕಾಯ್, ಶೀರ್‌ಗಳನ್ನು ಮಾತ್ರ ಬಳಸಬೇಕು; ಕಾಯ್ + ನೇರ್, ಮಾ + ನಿರೈ, ವಿಳ + ನೇರ್ ಎಂಬ ವೆಣ್ದಲೈಗಳನ್ನು ಮಾತ್ರ ಬಳಸಬೇಕು. ಮಿಕ್ಕ ಶೀರ್‌ಗಳು ತಳೈಗಳು ಬರಕೂಡದು. ಈ ಪದ್ಯದ ಕಡೆಗೆ ನಾಳ್, ಮಲರ್‌ಗಳಾಗಲಿ, ಕಾಶು ಪಿಱಪ್ಪುಗಳಾಗಲಿ ತಪ್ಪದೆ ಬರಬೇಕು. 4 ಪಾದಗಳಲ್ಲಿಯೂ ಒಂದೇ ಎದುಗೈ ಬರಬಹುದು. ಇಲ್ಲವೆ ಮೊದಲೆರಡು ಪಾದಗಳಿಗೆ ಒಂದು ಎದುಗೈ, ಮಿಕ್ಕೆರಡು ಪಾದಗಳಿಗೆ ಇನ್ನೊಂದು ಎದುಗೈ ಬರಬಹುದು.

ವೆಣ್ಬಾ 5 ವಿಧಗಳಾಗಿರುತ್ತವೆ: [1] ಕುಱಳ್‌ವೆಣ್ಬಾ [ಎರಡೇ ಪಾದಗಳು.] [2] ಸಿನ್ದಿಯಲ್ ವೆಣ್ಬಾ [3 ಪಾದಗಳು]; ನೇರಿಶೈವೆಣ್ಬಾ [4 ಪಾದಗಳು]; 2ನೇ ಪಾದದಲ್ಲಿನ ಕಡೆಯ ಶೀರ್ ಏಕಪದವಾಗಿರಬೇಕು. ಈ ಶೀರ್ ಆ ಪಾದದಲ್ಲಿನ ಮೊದಲೆರಡು ಶೀರ್‌ಗಳ ಎದುಗೈಯನ್ನೇ ಹೊಂದಿರಬೇಕು. [3] ಇನ್ನಿಶೈವೆಣ್ಬಾ [4 ಪಾದಗಳು]; ಆದರೂ ನೇರಿಶೈವೆಣ್ಬಾಗಿರುವ ಪ್ರತ್ಯೇಕ ನಿಯಮವು ಇದಕ್ಕಿಲ್ಲ. ಇವರ ಕಡೆಗೆ ತಣಿಚ್ಚೊಲ್ [ಸಂಪೂರ್ಣ ಪದ] ಇದ್ದರೂ, ಅದರ ಎದುಗೈಯೂ ಮೊದಲೆರಡು ಶೀರ್‌ಗಳ ಎದುಗೈಯೂ ಒಂದೇ ಆಗಿರುತ್ತದೆ. 4 ಪಾದಗಳಲ್ಲಿಯೂ ಎದುಗೈ ಒಂದೇ ಆಗಿಲ್ಲದಿದ್ದರೂ ಆ ಪದ್ಯಕ್ಕೆ ಇನ್ನಿಶೈವೆಣ್ಬಾ ಎಂದು ಹೆಸರಿರುತ್ತದೆ. [4] ಪಃಱೊಡೈವೆಣ್ಬಾ: 5 ರಿಂದ 12 ಪಾದಗಳವರೆಗಿರುವ ವೆಣ್ಬಾ. [5] ಕಲಿವೆಣ್ಬಾ: 12ಕ್ಕಿಂತ ಹೆಚ್ಚು ಪಾದಗಳಿರುವ ವೆಣ್ಬಾ.

II. ಆಶಿರಿಯಪ್ಪಾ [ಅಗವಲ್ಪಾ] : ಇದರಲ್ಲಿ ಸಾಧಾರಣವಾಗಿ 2–2 ರಂತೆ ಅಸೈಗಳಿರುವ ಶೀರ್‌ಗಳಿರುತ್ತವೆ. ಇಂಥ ಶೀರ್‌ಗಳು ಪಾದಕ್ಕೆ 6 ಇರಬೇಕು. ಎಂದರೆ ಪಾದವು ಕಟ್ಟಳೆಯಡಿಯಾಗಿರಬೇಕು.

ನೇರಿಶ್ಶೈ ಆಶಿರಿಯಪ್ಪಾವಿನಲ್ಲಿ ಕಡೆಯದರ ಹಿಂದಣ ಪಾದದಲ್ಲಿ 3 ಶೀರ್‌ಗಳೂ, ಮಿಕ್ಕ ಪಾದಗಳಲ್ಲಿ 4ರಂತೆ ಶೀರ್‌ಗಳೂ ಇರುತ್ತವೆ.

ನಿಲೈಮಣ್ಡಿಲ ಆಶಿರಿಯಪ್ಪಾವಿನಲ್ಲಿ ಎಲ್ಲ ಪಾದಗಳಲ್ಲಿಯೂ 4ರಂತೆ ಶೀರ್‌ಗಳಿರುತ್ತವೆ. ಆಶಿರಿಯವಿರುತ್ತದಲ್ಲಿ ಮೊದಲ ಪಾದದಲ್ಲಿ ವರಸೆಯಾಗಿ ಯಾವ ಶೀರ್‌ಗಳಿರುತ್ತವೆಯೋ ಮಿಕ್ಕ ಪಾದಗಳಲ್ಲೂ ವರಸೆಯಾಗಿ ಅವೇ ಶೀರ್‌ಗಳು ಬರಬೇಕು.

III ಕಳಿಪ್ಪಾ: ಪಾದಕ್ಕೆ 4 ಶೀರ್‌ಗಳು. ಅವು ಸಾಧಾರಣವಾಗಿ ಕಾಯ್‌ಚ್ಚೀರ್‌ಗಳು.

1 ತರವುಕೊಚ್ಚಗಕ್ಕಳಿಪ್ಪಾ: ಇದರ ಪಾದಗಳಲ್ಲಿ ಕಾಯ್‌ಚ್ಚೀರ್‌ಗಳು ಇಂಥವೇ ಆಗಿರಬೇಕೆಂಬ ನಿಯಮವಿಲ್ಲ.

2 ಕಲಿವಿರುತ್ತಮ್: ಮೊದಲ ಪಾದದಲ್ಲಿ ವರಸೆಯಾಗಿ ಬರುವ 4 ಶೀರ್‌ಗಳೇ ಮಿಕ್ಕ ಪಾದಗಳಲ್ಲಿಯೂ ವರಸೆಯಾಗಿ ಬರಬೇಕು.

3 ಕಲಿತ್ತುರೈ: ಮೊದಲ ಪಾದದಲ್ಲಿ ವರಸೆಯಾಗಿ ಬರುವ 5 ಶೀರ್‌ಗಳೇ ಮಿಕ್ಕ ಪಾದಗಳಲ್ಲಿಯೂ ವರಸೆಯಾಗಿ ಬರಬೇಕು.

4 ಕಟ್ಟಳೈಕಲಿತ್ತುರೈ: 5ರಂತೆ ಶೀರ್‌ಗಳ 4 ಪಾದಗಳು. ಮೊದಲ 4 ಶೀರ್‌ಗಳೂ ಈರಶ್ಶೈಚ್ಚೀರ್ ಆಗಿಯೂ, 5ನೆಯದು ವಿಳಂಗಾಯ್‌ಚ್ಚೀರ್ ಆಗಿಯೂ ಇರಬೇಕು. ಪ್ರತಿಪಾದದಲ್ಲಿಯೂ ಒಂದೇ ರೀತಿ ವೆಣ್ಡಳೈ ಬರಬೇಕು. ಪಾದಾದಿಯಲ್ಲಿ ನೇರಶ್ಶೈ ಬಂದರೆ ಪ್ರತಿಪಾದದಲ್ಲಿಯೂ ಒಟ್ಟು ಅಲ್ಲದೆ 16 ಅಕ್ಷರಗಳು ಬರಬೇಕು. ಪಾದಾದಿಯಲ್ಲಿ ನಿರೈಅಶ್ಶೈ ಬಂದರೆ ಪ್ರತಿ ಪಾದ ದಲ್ಲಿಯೂ 17 ಅಕ್ಷರಗಳು ಬರಬೇಕು. ಕಡೆಯಕ್ಷರ 'ಏ' ಆಗಿರಬೇಕು.

IV. ವಞ್ಜಿಪ್ಪಾ : ಒಂದೊಂದು ಪಾದದಲ್ಲಿ 2 ಆಗಲಿ, 3 ಆಗಲಿ ಶೀರ್‌ಗಳಿರಬಹುದು. ವಞ್ಜಿವಿರುತ್ತದಲ್ಲಿ 3ರಂತೆ ಶೀರ್‌ಗಳಿರುವ 4 ಪಾದಗಳು. ವಞ್ಜಿತ್ತುರೈ ಅಲ್ಲಿ 2ರಂತೆ ಶೀರ್‌ಗಳಿರುವ 4 ಪಾದಗಳು.

V. ಮರುಪ್ಪಾ : ಈ ಪದ್ಯವಲ್ಲಿ ಮೊದಲು ವೆಣ್ಬಾಪಾದಗಳು ಎರಡೂ, ಆ ಮೇಲೆ ಎಷ್ಟಾದರೂ ಆಶಿರಿಯಪ್ಪಾ ಪಾದಗಳೂ ಬರುತ್ತವೆ.

ಭಾಗ ಐದು

ಆಂಧ್ರ ಕರ್ಣಾಟಕ ಛಂದಸ್ಸು

೫.೧ ಆಂಧ್ರ ಕರ್ಣಾಟಕ ಭಾಷೆಗಳ ಛಂದಸ್ಸು ಸಾಧಾರಣವಾಗಿ ಒಂದು ರೀತಿಯಲ್ಲಿರುವ ಕಾರಣ ಆಯೆರಡನ್ನೂ ಇಲ್ಲಿ ಸೇರಿಸಿ ವಿವರಿಸಿರುತ್ತೇನೆ. ಆಯಾ ಛಂದಸ್ಸುಗಳ ನಾಮಲಕ್ಷಣಗಳಲ್ಲೇನಾದರೂ ಭೇದಗಳಿದ್ದರೆ ತಿಳಿಸುತ್ತೇನೆ.

೫.೨ ಸಂಸ್ಕೃತ ಮಾತ್ರಾ ಛಂದಸ್ಸಿನ ಕೆಲವು ಬಗೆಗಳು ಆಂಧ್ರ ಕರ್ಣಾಟಕ ಛಂದಸ್ಸಿನಲ್ಲಿರುವುವಾದರೂ ಇವುಗಳಲ್ಲಿ ಕೆಲವು ವಿಶೇಷ ನಿಯಮಗಳು ಏರ್ಪಟ್ಟಿವೆ.

1 ಸಂಸ್ಕೃತದಲ್ಲಿಯ ವೈತಾಲೀಯಂಕ್ಕೆ ವಿಷಮಪಾದಗಳಲ್ಲಿ 14 ಮಾತ್ರೆಗಳು, ಸಮಪಾದಗಳಲ್ಲಿ 16 ಮಾತ್ರೆಗಳು, ಪಾದಾಂತ್ಯದಲ್ಲಿ ರಗಣ ಇರಬೇಕು. ಕನ್ನಡ ವೈತಾಳಿಕದಲ್ಲಿ ಪಾದಗಳಿಗೆ ಮಾತ್ರಾಸಂಖ್ಯೆ ಅಷ್ಟೇ ಆದರೂ ವಿಷಮ ಪಾದಗಳಲ್ಲಿ 6 ಮಾತ್ರೆಗಳು, ರಗಣ ಮತ್ತು ಲಗವೂ; ಸಮಪಾದಗಳಲ್ಲಿ 8 ಮಾತ್ರೆಗಳು, ರಗಣ ಮತ್ತು ಲಗವೂ ನಿಯಮವಾಗಿದೆ. ಸಂಸ್ಕೃತ ವೈತಾಲೀಯದ ಪಾದಗಳಿಗೆ ಒಂದು ಗುರುವನ್ನು ಸೇರಿಸಿದರೆ ಹೇಗೆ ಔಪಚ್ಛಾಂದಸಿಕವೆಂಬ ಭೇದವೇರ್ಪಡುವುದೋ ಹಾಗೆಯೇ ಕನ್ನಡ ವೈತಾಳಿಕಕ್ಕೆ ಒಂದು ಗುರುವನ್ನು ಸೇರಿಸಿದರೆ ಕನ್ನಡ ಔಪಚ್ಛಾಂದಸಿಕವೇರ್ಪಡುವುದು. ಸಂಸ್ಕೃತದಲ್ಲಿ ಆಪಾತಲಿಕ, ಪ್ರಾಚ್ಯವೃತ್ತಿ, ಉದೀಚ್ಯವೃತ್ತಿ, ಪ್ರವೃತ್ತಕ, ಚಾರುಹಾಸಿನೀ, ಅಪರಾಂತಿಕ ಎಂಬ ಹೆಸರಿನ ಮತ್ತೆ ಕೆಲವು ವೈತಾಲೀಯ ಭೇದಗಳಿವೆ. ಕನ್ನಡ ಛಂದಸ್ಸಿನಲ್ಲಿ ಅವುಗಳನ್ನು ಹೇಳಿಲ್ಲ.

ತೆಲುಗಿನಲ್ಲಿ ಅಪ್ಪಕವಿ ವೈತಾಲೀಯ ಔಪಚ್ಛಾಂದಸಿಕಗಳೆನ್ನುವ ಪದ್ಯಗಳಿಗೆ ಲಕ್ಷಣವನ್ನು ಕನ್ನಡಕ್ಕಿರುವಂತೆಯೇ ಹೇಳಿದ್ದಾನೆ. ಸಂಸ್ಕೃತದಲ್ಲಿ ಹೇಳಿರುವ ಪ್ರವರ್ತಕ [ಪ್ರವೃತ್ತಕ?], ಆಪಾತಲಿಕ, ಪರಾಂತಿಕ [ಅಪರಾಂತಿಕ?], ಚಾರುಹಾಸಿಕ [ನೀ], ಪ್ರಾಚ್ಯವೃತ್ತಿ, ಉದೀಚ್ಯ

ವೃತ್ತಿಗಳನ್ನು ಕೂಡ ಅಪ್ಪಕವಿ ಉದಾಹರಿಸಿದ್ದಾನೆ. ಆದರೆ ಸಂಸ್ಕೃತದಲ್ಲಿ ವೈತಾಲೀಯದ ಪಾದಾಂತ್ಯದಲ್ಲಿ ಗಗವಿದ್ದರೆ ಆಪಾತಲಿಕವಾಗುವುದೆಂದು ಹೇಳಿದ್ದರೆ, ಅಪ್ಪಕವಿ ಭ, ಗಗ ಗಳಿರಬೇಕೆಂದು ಹೇಳಿದ್ದಾನೆ. ಪಾದಗಳಲ್ಲಿ 5ನೇ ಲಘುವು ಅದಕ್ಕೆ ಪೂರ್ವವಿರುವ ಅಕ್ಷರದೊಡನೆ ಸೇರಿ ಏಕಪದವಾಗಿದ್ದರೆ ಪ್ರಾಚ್ಯವೃತ್ತಿಯಾಗುವುದೆಂದು ಸಂಸ್ಕೃತ ಪ್ರಾಚ್ಯವೃತ್ತಿಯ ಲಕ್ಷಣವಿದೆ. ಸಮಪಾದಗಳಲ್ಲಿ 7–9ನೇ ಮಾತ್ರೆಗಳ ಮೇಲೆ ಯತಿಯಿದ್ದು, ಸಮಪಾದಗಳಲ್ಲಿ ಅಂಥ ಯತಿ ಇಲ್ಲದೇ ಹೋದರೆ ಪ್ರಾಚ್ಯವೃತ್ತಿ ಎಂದು ಅಪ್ಪಕವಿ ಹೇಳಿದ್ದಾನೆ [?]. ವಿಷಮಪಾದಗಳಲ್ಲಿ 3ನೇ ಮಾತ್ರೆ ಅದರ ಪೂರ್ವದ ಮಾತ್ರೆಯೊಡನೆ ಸೇರಿ ಏಕ ಪದವಾಗಿದ್ದರೆ ಉದೀಚ್ಯವೃತ್ತಿ ಎಂದು ಸಂಸ್ಕೃತದ ಲಕ್ಷಣ. ಅಪ್ಪಕವಿ “ದಕ್ಷಿಣಾಂತಿಕ” ಎಂಬೊಂದು ಹೆಸರು ಕಲ್ಪಿಸಿ ಅದರಂತೆ ನಡೆಯುವ ಪಾದಗಳುಳ್ಳದ್ದು ಉದೀಚ್ಯವೃತ್ತಿಯೆಂದಿದ್ದಾನೆ. ದಕ್ಷಿಣಾಂತಿಕಕ್ಕೆ ವಿಷಮಪಾದಗಳಲ್ಲಿ ಸ, ಸ, ಜ, ಗ ಗಳೂ, ಸಮಪಾದಗಳಲ್ಲಿ ಸ, ಭ, ರ, ವ ಗಳೂ ಇರುತ್ತವೆಂದೂ, ಯತಿಗಳು ವಿಷಮಪಾದಗಳಲ್ಲಿ 7ನೇ, ಸಮಪಾದಗಳಲ್ಲಿ 9ನೇ ಸ್ಥಾನಗಳಲ್ಲಿ ಇರುತ್ತವೆಂದೂ ಅಪ್ಪಕವಿ ತಿಳಿಸಿರುವ ಲಕ್ಷಣವಾಗಿದೆ.

೫.೩ [2] ಕನ್ನಡದಲ್ಲಿ ಜಾತಿಗಾದೆ ಎಂಬೊಂದು ಛಂದಸ್ಸಿಗೆ ಲಕ್ಷಣವಾಗಿ ಅನುಷ್ಟುಪ್ಪ ಶ್ಲೋಕಪಾದಗಳು 3 ಇರುತ್ತವೆಯೆಂದು ಹೇಳಲ್ಪಟ್ಟಿದೆ. ಪ್ರಾಕೃತ ಛಂದಸ್ಸಿನ ಗಾಥಾಲಕ್ಷಣಕ್ಕೆ ಇದು ಸರಿಹೋಗದು. ತೆಲುಗು ಛಂದಸ್ಸಿನಲ್ಲಿ ಗಾಥಾಲಕ್ಷಣವೇ ಸ್ಮರಿಸಲ್ಪಟ್ಟಿಲ್ಲ. ಈ ಗಾಥ ಸಂಸ್ಕೃತದಲ್ಲಿ ಕೂಡ ಇಲ್ಲ. ಜೈನರು ಪ್ರಾಕೃತ ಛಂದಸ್ಸನ್ನು ತಮ್ಮ ಕಾವ್ಯಗಳಲ್ಲಿ ಹೇರಳವಾಗಿ ಬಳಸಿದ್ದಾರೆ. ಕನ್ನಡದಲ್ಲಿ ಜೈನ ಸಾಹಿತ್ಯವು ಅಧಿಕವಾಗಿದ್ದಂತೆ ಮೊದಲಿನ ಕಾವ್ಯಗಳಿಂದ ತಿಳಿಯಬರುತ್ತದೆ. ಕನ್ನಡದಲ್ಲೂ ಕೂಡ ಗಾಥಾಛಂದಸ್ಸಿಗೆ ಪ್ರಚಾರ ಅಷ್ಟಾಗಿಲ್ಲದಾದರೂ. ನಾಗವರ್ಮನು ಆ ಸಂಪ್ರದಾಯವನ್ನು ಅನುಸರಿಸಿ ಗಾಥೆಯನ್ನು ಸ್ಮರಿಸಿದ್ದಾನೆ. ಆದರೂ ಅದರ ಲಕ್ಷಣವನ್ನು ಸರಿಯಾಗಿ ಹೇಳಿಲ್ಲ. ತೆಲುಗಿನಲ್ಲಿ ಕೂಡ ನನ್ನಯನಿಗೆ ಪೂರ್ವ ಜೈನ ಸಾಹಿತ್ಯವಿದ್ದಾಗ ಗಾಥೆಗೆ ಹೆಚ್ಚಿನ ಪ್ರಚಾರವಿದ್ದಿರಬೇಕು. ಈ ಜೈನ ಛಂದಸ್ಸನ್ನು ನಿಂದಿಸ ಮಾಡುತ್ತ ಬಹುಶಃ ಕವಿ “ಗಾಂಟ ಜೀಸಟೇ ಚದಿವಿ ಗಾಥಲು

ತ್ರವ್ವ ತೆನುಂಗುವಾರು"ಎಂದು ಹೇಳಿದ್ದಾನೆ.

೫.೪ [3] ಸಂಸ್ಕೃತ ಛಂದಸ್ಸಿನಲ್ಲಿ ಹೇಳಿರುವ ಮಾತ್ರಾಸಮಕಗಳಲ್ಲಿ ಚಿತ್ರ, ಉಪಚಿತ್ರ, ಚಿತ್ರಲತೆ ಎಂಬಂಥವನ್ನು ಕನ್ನಡ ಮಾತ್ರಾ ಛಂದಸ್ಸುಗಳಾಗಿ ನಾಗವರ್ಮನು ವಿವರಿಸಿದ್ದಾನೆ. ಆದರೂ ಇವು ಕನ್ನಡದಲ್ಲಿ 3 ಪಾದಗಳುಳ್ಳವು. ಸಂಸ್ಕೃತದಲ್ಲಿ ಚಿತ್ರ, ಉಪಚಿತ್ರಗಳು 4 ಪಾದಗಳುಳ್ಳವು. ಕನ್ನಡ ಚಿತ್ರ, ಉಪಚಿತ್ರ ಮತ್ತು ಚಿತ್ರಲತೆಗಳು ಕನ್ನಡ ತ್ರಿಪದಿಯ ಮೇಲೆ ಆಧಾರಪಟ್ಟಿವೆ. ಕನ್ನಡದಲ್ಲಿ ತ್ರಿಪದಿಯ ಮೊದಲ ಪಾದದಲ್ಲಿ 5ರಂತೆ ಮಾತ್ರೆಗಳ 4 ಗಣಗಳೂ, 2–3ನೇ ಪಾದಗಳಲ್ಲಿ 2ನೇ ಗಣಗಳು ಬ್ರಹ್ಮ ಗಣಗಳೂ ಆಗಿರುತ್ತವೆ. 1ನೇ ಪಾದಕ್ಕೆ 20 ಮಾತ್ರೆಗಳು, 2ನೇ ಪಾದಕ್ಕೆ 17, 3ನೇ ಪಾದಕ್ಕೆ 13 ಮಾತ್ರೆಗಳೂ ಇರುತ್ತವೆ. ಉಳಿದ ಗಣಗಳು ಆಯಾ ಪಾದಗಳ ಮಾತ್ರಾ ಸಂಖ್ಯೆಗೆ ಸರಿಹೋಗುವಂತೆ ಹೇಳಿಕೊಳ್ಳಬೇಕು. ಪ್ರತಿ ಪಾದದಲ್ಲಿಯೂ ತ್ರಿಪದಿಯಲ್ಲಿನ 6, 10ನೆಯ ಸ್ಥಾನಗಳಲ್ಲಿ ರುದ್ರಗಣದೊಡನೆ ಬ್ರಹ್ಮಗಣ ಸೇರಿ ಉಳಿದವು ವಿಷ್ಣುಗಣಗಳಾದರೆ ಚಿತ್ರ ಆಗುತ್ತದೆ. ಉಪಚಿತ್ರ ಚಿತ್ರಲತೆಗಳ ಲಕ್ಷಣವನ್ನು ಕುರಿತು ಅನೇಕ ಪಾಠಭೇದಗಳಿರುವ ಕಾರಣ ಅವರ ಲಕ್ಷಣವನ್ನು ಸರಿಯಾಗಿ ವಿವರಿಸಲು ಸಾಧ್ಯವಿಲ್ಲ.

ತೆಲುಗಿನಲ್ಲಿ ಅಪ್ಪಕವಿ ಉಪಚಿತ್ರವನ್ನು 4 ಪಾದಗಳುಳ್ಳದ್ದಾಗಿ ಹೇಳಿದ್ದಾನಾದರೂ ಮಾತ್ರಾಸಮಕವಾಗಿ ಹೇಳಿಲ್ಲ. ಅದನ್ನು ಅರ್ಧಸಮವನ್ನಾಗಿ ಹೇಳಿದ್ದಾನೆ. 1–3ನೇ ಪಾದಗಳಲ್ಲಿ 3 ಸಗಣಗಳು ಒಂದು ನಗಣ, 2–4ನೇ ಪಾದಗಳಲ್ಲಿ 3 ಭಗಣಗಳೂ ಒಂದು ಗಗವೂ ಇರುತ್ತವೆ.

೫.೫ [4] ಆರ್ಯಾಜಾತಿಯಲ್ಲಿ ಸೇರಿದ ಛಂದಸ್ಸುಗಳನ್ನು ಕನ್ನಡ ತೆಲುಗು ಲಾಕ್ಷಣಿಕರು ಕೂಡ ವಿವರಿಸಿದ್ದಾರೆ. ಸಂಸ್ಕೃತ ಪ್ರಾಕೃತಗಳ ಆರ್ಯೆಕ್ಕೂ ಕನ್ನಡ ತೆಲುಗುಗಳ ಆರ್ಯೆಕ್ಕೂ ಲಕ್ಷಣವೊಂದೇ ಆದರೂ ತೆಲುಗು ಕನ್ನಡಗಳಲ್ಲಿ ಮೊದಲ ಪಾದವು ಗುರ್ವಾದಿಯಾದರೆ ಉಳಿದ ಪಾದಗಳೂ ಗುರ್ವಾದಿಯಾಗಿ, ಲಘುವಾದಿಯಾದರೆ ಉಳಿದ ಪಾದಗಳೂ ಲಘುವಾದಿಯಾಗಿ

ಇರಬೇಕೆನ್ನುವ ನಿಯಮವಿದೆ. ಆರ್ಯ ಎಂಬ ಪದ್ಯ ಜಾತಿಯಲ್ಲಿ ಸಂಸ್ಕೃತದಲ್ಲಿ ಆರ್ಯಾಗೀತಿ ಎಂದೂ, ಪ್ರಾಕೃತದಲ್ಲಿ ಖಂದನೀ ಎಂದೂ ಹೆಸರುಳ್ಳದ್ದು ಮಾತ್ರ ಕನ್ನಡ ತೆಲುಗುಗಳಲ್ಲಿ ಕಂದವೆಂಬ ಹೆಸರಿನಿಂದ ವಿಶೇಷ ಪ್ರಚಾರದಲ್ಲಿದೆ. ಉಳಿದವು ಕೇವಲ ಲಕ್ಷಣ ಗ್ರಂಥಸ್ಥಿತಗಳು ಮಾತ್ರ. ಅಪ್ಪಕವಿ ಪಥ್ಯ, ವಿಪುಲ, ಚಪಲ, ಮುಖಚಪಲ, ಜಘನ ಚಪಲಗಳನ್ನು ಕಂದಭೇದಗಳನ್ನಾಗಿ ವಿವರಿಸಿದ್ದಾನೆ. ಆದರೂ ಆತನು ಕೊಟ್ಟಿರುವ ಲಕ್ಷ್ಯಲಕ್ಷಣಗಳು ಆಯಾ ಆರ್ಯಗಳಿಗೆ ತಕ್ಕಂಥವಲ್ಲದೆ ಕಂದಗಳಿಗಿಲ್ಲ. ಕನ್ನಡದಲ್ಲಿ ಸಂಕೀರ್ಣಕವೆಂಬ ಒಂದು ಆರ್ಯಾಭೇದವು ಹೇಳಲ್ಪಟ್ಟಿದೆ. ಇದರ ಪೂರ್ವಾರ್ಧ ಕಂದಲಕ್ಷಣವನ್ನೂ ಉತ್ತರಾರ್ಧವು ಆರ್ಯಾ ಲಕ್ಷಣವನ್ನೂ ಹೊಂದಿದೆ. ಇದು ಸಂಸ್ಕೃತ ಪ್ರಾಕೃತ ಆಂಧ್ರಭಾಷೆಗಳಲ್ಲಿ ಹೇಳಲ್ಪಟ್ಟಿಲ್ಲ.

೫.೬ [5] ನಾಗವರ್ಮನು ಕನ್ನಡದಲ್ಲಿ ಮಂದಾನಿಲ, ಲಲಿತ, ಉತ್ಸವ [ಉತ್ಸಾಹ] ಗಳೆಂಬ 3 ಬಗೆಯ ರಗಳೆಗಳನ್ನು ಹೇಳಿದ್ದಾನೆ. ಇವು ಮಾತ್ರಾ ಗಣಾತ್ಮಕಗಳು. ತಾಳಕ್ಕೆ ಸರಿಹೋಗುತ್ತವೆ. ಒಂದೊಂದು ಪಾದದಲ್ಲಿ ಮಂದಾನಿಲಕ್ಕೆ 16 ಮಾತ್ರೆಗಳು, ಲಲಿತಕ್ಕೆ 20 ಮಾತ್ರೆಗಳು, ಉತ್ಸಾಹಕ್ಕೆ 24 ಮಾತ್ರೆಗಳು ಇರುತ್ತವೆ. ಇವುಗಳಲ್ಲಿ ಮಂದಾನಿಲವು ತೆಲುಗಿನಲ್ಲಿಯ ಮಧುರಗತಿ ರಗಳೆಗೂ, ಲಲಿತವು ದ್ವಿರದಗತಿರಗಳೆಗೂ, ಉತ್ಸಾಹವು [ತುರಗ ವಲ್ಗನಕ್ಕೂ] ಸರಿ ಹೋಗುತ್ತವೆ.

ಅಪ್ಪಕವಿಯು ರಗಳೆಗಳು ವೈತಾಳೀಯಭೇದಗಳೆಂದಿದ್ದಾನೆ. ಆದರೆ ಈ ಮಾತಿಗೆ ಸಂಸ್ಕೃತ ಛಂದಸ್ಸಿನಲ್ಲಿ ಆಧಾರವಿಲ್ಲ. ಅಪ್ಪಕವಿಯು [1] ಹಯಪ್ರಚಾರ [2] ತುರಗವಲ್ಗನ [3] ವಿಜಯಮಂಗಳ [4] ದ್ವಿರದಗತಿ [5] ವಿಜಯಭದ್ರ [6] ಮಧುರಗತಿ [7] ಹರಿಗತಿ [8] ಹರಿಣಗತಿ [9] ವೃಷಭಗತಿ ಎಂದು 9 ವಿಧ ರಗಳೆಗಳನ್ನು ವಿವರಿಸಿದ್ದಾನೆ. ಉತ್ಸಾಹ ವನ್ನು ಪ್ರತ್ಯೇಕವಾಗಿ ಹೇಳಿದ್ದಾನೆ.

ನಾಗವರ್ಮನು ಮಂದಾನಿಲ ಲಲಿತ ರಗಳೆಗಳಿಗೆ ಕೇವಲ ಪಾದ ಮಾತ್ರಾ ಸಂಖ್ಯೆಯನ್ನು ಹೇಳಿ ಸುಮ್ಮನಾಗಿದ್ದಾನೆ, ಅಪ್ಪಕವಿ ಅವುಗಳಿಗೆ ಸರಿ

ಹೋಗುವ ಮಧುರಗತಿಗೆ ಒಂದೊಂದು ಪಾದಕ್ಕೆ ನಾಲ್ಕರಂತೆ ಮಾತ್ರೆಗಳ 4 ಗಣಗಳು ಎಂದೂ, ಆ ಗಣಗಳಲ್ಲಿ ಜಗಣವು ಸೇರದೆಂದೂ, ದ್ವಿರದಗತಿ ರಗಳೆಗೆ ಪಾದಕ್ಕೆ 5 ರಂತೆ ಮಾತ್ರೆಗಳುಳ್ಳ 4 ಗಣಗಳೆಂದೂ ಹೇಳಿದ್ದಾನೆ.

ಅಪ್ಪಕವಿ ಹೇಳಿರುವ ಉಳಿದ ರಗಳೆಗಳಲ್ಲಿ ಹಯಪ್ರಚಾರದಲ್ಲಿ ಪಾದಕ್ಕೆ 4 ಸೂರ್ಯ ಗಣಗಳು; ಹರಿಗತಿಗೂ ಮಧುರಗತಿಗೂ ಲಕ್ಷಣದಲ್ಲಿ ಭೇದವು ಕಂಡುಬರುವುದಿಲ್ಲ. ಮಧುರಗತಿಗೆ ಜಗಣದ ಹೊರತು 4 ಮಾತ್ರೆಗಳ 4 ಗಣಗಳು; ಹರಿಗತಿಗೆ ನಲ, ಸ, ಭ, ಗಗಗಳಲ್ಲಿ ಯಾವುದಾದರೂ 4 ಎಂದಿದ್ದಾನೆ. ಇವೇ ಜಗಣವಲ್ಲದೆ ಮಿಕ್ಕ 4 ಮಾತ್ರೆಗಳ ಗಣಗಳು.

ಹರಿಣಗತಿಗೆ 14 ಮಾತ್ರೆಗಳೆಂದು ಮಾತ್ರ ಅಪ್ಪಕವಿ ಹೇಳಿದ್ದಾನೆ. ಆತನು ತೋರಿಸಿರುವ ಲಕ್ಷ್ಯವನ್ನು ಹಿಡಿದು ಜಗಣವಲ್ಲದ 4 ಮಾತ್ರೆಗಳ ಗಣ, ಒಂದು ಸೂರ್ಯಗಣ, ಹಾಗೆಯೇ ಉಳಿದರ್ಧವೂ ಇರುವಂತೆ ಹೇಳಲಾಗಿರುತ್ತದೆ.

ವೃಷಭಗತಿಗೆ ಪಾದಕ್ಕೆ 28 ಮಾತ್ರೆಗಳೆಂದು ಅಪ್ಪಕವಿ ಹೇಳಿದ ಉದಾಹರಣೆಯನ್ನು ಹಿಡಿದು ಒಂದು ಪಾದಕ್ಕೆ ಜಗಣವಲ್ಲದ 4 ಮಾತ್ರೆಯ ಗಣಗಳು 3, ಒಂದು ಲಲ ಇರುವುದೆಂದು ಹೇಳಬೇಕು.

ಉಳಿದವುಗಳಲ್ಲಿ ತುರಗವಲ್ಗನವು 2 ಹಯಪ್ರಚಾರಗಳು ಸೇರಿಯೂ ವಿಜಯಮಂಗಳವು 4 ಹಯಪ್ರಚಾರಗಳು ಸೇರಿಯೂ ಆಗುತ್ತವೆ. ದ್ವಿರದ ಗತಿಯನ್ನು ಇಮ್ಮಡಿಸಿದರೆ ವಿಜಯಭದ್ರವಾಗುತ್ತದೆ.

ಕವಿಜನಾಶ್ರಯದಲ್ಲಿ ರಗಳೆಯನ್ನು ಕುರಿತು ಹೇಳಿಲ್ಲ. ಅನಂತನು ಹೇಳಿರುವ ವೃಷಭಗಮನ, ಹರಿಣಗತಿ ರಗಳೆಗಳಿಗೂ ಅಪ್ಪಕವಿ ಹೇಳಿರುವ ಆ ರಗಳೆಗಳಿಗೂ ನಡೆಯಲ್ಲಿ ಭೇದವಿದೆ.

ರಗಳೆಗಳಲ್ಲಿ ಕನ್ನಡದಲ್ಲಿ ಹೇಳಲ್ಪಟ್ಟಿರುವ 'ಉತ್ಸಾಹ'ವು ತೆಲುಗಿನಲ್ಲಿಲ್ಲ. ಕನ್ನಡದಲ್ಲಿ ಇದರ ಪಾದಕ್ಕೆ 3 ಮಾತ್ರೆಗಳುಳ್ಳ 8 ಗಣಗಳು ಹೇಳಲ್ಪಟ್ಟಿವೆ.

ದೇಶೀಯ ಮಾತ್ರಾಗಣ ಛಂದಸ್ಸಿನಲ್ಲಿ ಕನ್ನಡದಲ್ಲಿ ಇನ್ನೊಂದು 'ಉತ್ಸಾಹ'ವು ಹೇಳಲ್ಪಟ್ಟಿದೆ. ಇದಕ್ಕೂ ತೆಲುಗು ಉತ್ಸಾಹಕ್ಕೂ ಲಕ್ಷಣ ಒಂದೇ ಆಗಿದೆ.

೫.೭ (6) ಸೀಸಪದ್ಯ ಲಕ್ಷಣವು ಕನ್ನಡದಲ್ಲಿ ಪಾದಕ್ಕೆ ವರಸೆಯಾಗಿ 5 ಮಾತ್ರೆಗಳ 6 ಗಣಗಳು, 3 ಮಾತ್ರೆಗಳ 2 ಗಣಗಳು (ಲಗ ಬಿಟ್ಟು) ಇರುತ್ತವೆ. ಅಂಥವು 4 ಪಾದಗಳು. ಇದಕ್ಕೆ ಒಂದು ಆಟಗೀತಿಯನ್ನು ಸೇರಿಸುತ್ತಾರೆ. ತೆಲುಗು ಸೀಸಪದ್ಯದಲ್ಲಿ 6 ಇಂದ್ರಗಣಗಳು, 2 ಸೂರ್ಯ ಗಣಗಳು ಇರುವ ಪಾದಗಳು ಹೇಳಲ್ಪಟ್ಟಿವೆ. ಎಂದರೆ ಕನ್ನಡ ಪಾದ ಗಳಲ್ಲಿರುವ ಗಣಗಳಲ್ಲಿ ತೆಲುಗಿನಲ್ಲಿರುವ ನಲ, ಭ, ಸ ಎಂಬವು ಇರುವುದಿಲ್ಲ; ನಗ, ರ, ತ ಗಳು ಮಾತ್ರ ಇರುತ್ತವೆ.

ಕನ್ನಡದಲ್ಲಿ ಸೀಸಪದ್ಯಕ್ಕೆ ಪ್ರಚಾರವಿಲ್ಲ. ತೆಲುಗು ಕವಿಗಳು ಅದನ್ನು ಅನೇಕ ವಿಧವಾಗಿ ಬಳಸಿಕೊಂಡಿದ್ದಾರೆ. ತೆಲುಗು ಲಾಕ್ಷಣಿಕರು ಅದಕ್ಕೆ ಅನೇಕ ಭೇದಗಳನ್ನು ಕಲ್ಪಿಸಿದ್ದಾರೆ.

ತೆಲುಗಿನಲ್ಲಿ ಸೀಸಪದ್ಯ ಭೇದಗಳನ್ನು ಕುರಿತ ವಿಚಾರವನ್ನು ಶ್ರೀ ಗಿಡುಗು ವೆಂಕಟಸೀತಾಪತಿಯವರು, ವಾವಿಳ್ಲದವರು ಪ್ರಕಾಶಿಸಿರುವ 'ಅನಂತುನಿ ಛಂದಮು' ಉಪೋದ್ಘಾತದಲ್ಲಿ (ಪುಟ 37–42) ಚೆನ್ನಾಗಿ ಬರೆದಿದ್ದಾರೆ. ಪಾಠಕರು ಈ ಉಪೋದ್ಘಾತವನ್ನು ನೋಡಬಹುದು.

೫.೮ (7) ಆಟಗೀತಿ ಲಕ್ಷಣವನ್ನು ಕಿಟ್ಟೆಲ್ 1ನೇ ಪಾದದಲ್ಲಿ 4 ಸೂರ್ಯಗಣಗಳು, 1 ಚತುರ್ಮಾತ್ರಾಗಣ ಮತ್ತು 1 ಸೂರ್ಯಗಣವಾಗಿ ಪ್ರಸ್ತಾರ ಹಾಕಿ ತೋರಿಸಿದ್ದಾರೆ. ಈ ಪ್ರಸ್ತಾರವು ಸರಿಯಾಗಿರುವಂತೆ ಕಾಣುವುದಿಲ್ಲ. ಕನ್ನಡದಲ್ಲಿ ತೆಲುಗಿನಲ್ಲಿರುವಂತೆ 1ನೇ ಪಾದದಲ್ಲಿ 3 ಸೂರ್ಯಗಣ, 2 ಇಂದ್ರಗಣ ಎಂದು ಹೇಳಿಕೊಳ್ಳಬೇಕು. 2ನೇ ಪಾದದಲ್ಲಿ ಮಾತ್ರ ತೆಲುಗು ಕನ್ನಡಕ್ಕೆ ಭೇದವಿದೆ. ಅದರಲ್ಲಿ 4ನೇ ಗಣ ಕನ್ನಡದಲ್ಲಿ 4 ಮಾತ್ರೆಯದು; ತೆಲುಗಿನಲ್ಲಿ ಸೂರ್ಯಗಣವೇ. ಆಟಗೀತಿಯ 4 ಪಾದಗಳಲ್ಲಿಯೂ ಪ್ರಾಸವಿದ್ದರೆ ಪವಡಗೀತಿ ಆಗುವುದೆಂದು ಅಪ್ಪಕವಿ ಹೇಳಿದ್ದಾನೆ.

ಸೀಸಪದ್ಯದ 4 ಪಾದಗಳ ತರುವಾಯ ತೆಲುಗಿನಲ್ಲಿ ಆಟವೆಲದಿಯನ್ನು ಕೂಡ ಬಳಸುತ್ತಾರೆ. ಇದರ ಲಕ್ಷಣ 4 ಪಾದಗಳಲ್ಲಿಯೂ 1 ಸೂರ್ಯಗಣ, 2 ಇಂದ್ರಗಣ, 2 ಸೂರ್ಯಗಣ ಆಗಿರುತ್ತವೆ.

ಗೀತಿಗಳಲ್ಲಿ ಭೇದಗಳಾಗಿ ಅಪ್ಪಕವಿ ಹೇಳಿದ ಸಮಗೀತಿ, ಉದ್ಗೀತಿ, ಉಪಗೀತಿ, ಆರ್ಯಾಗೀತಿ ಎಂಬವು ಸಂಸ್ಕೃತ ಛಂದಸ್ಸಿನಲ್ಲಿ ವಿವರಿಸಲ್ಪಟ್ಟಿವೆ. ಆರ್ಯಾಗೀತಿಯೇ ಕಂದ. ಈ ಗೀತಿಗಳಲ್ಲಿ ಆರ್ಯಾಗೀತಿ ತೆಲುಗು ಕನ್ನಡಗಳಲ್ಲಿ ಸ್ಥಿರವಾಗಿ ನಿಂತು ವ್ಯಾಪಿಸಿದೆ. ಅಪ್ಪಕವಿ ಹೇಳಿದ ಎತ್ತುಗೀತಿ, ಕಮಲನ ಗೀತಿಗಳನ್ನು ತೆಲುಗು ಕವಿಗಳು ಬಳಸಲಿಲ್ಲ. ತಾನು ಬರೆದ ಎತ್ತುಗೀತಿಯ ಲಕ್ಷಣವನ್ನು ಲಕ್ಷ್ಯದಲ್ಲಿ ಅಪ್ಪಕವಿ ಅನುಸರಿಸಲಿಲ್ಲ.

೫.೯ (8) (ಅ) ತೆಲುಗು ದ್ವಿಪದ ಲಕ್ಷಣವು ಪಾದಕ್ಕೆ ವರಸೆಯಾಗಿ 3 ಇಂದ್ರಗಣ, 1 ಸೂರ್ಯಗಣ. ಪ್ರಾಸವಿರುವ ಅಂಥ 2 ಪಾದಗಳು. ಯತಿಯಾಗಲಿ ಪ್ರಾಸಯತಿಯಾಗಲಿ ಇರಬಹುದು. ಪ್ರಾಸವಾಗಲಿ ಪ್ರಾಸ ಯತಿಯಾಗಲಿ ನಿಯಮವಿಲ್ಲದೆ ವರಸೆಯಾಗಿ ಹೇಳಿದ ದ್ವಿಪದ ಪಾದಗಳಿಗೆ ಮಂಜರಿ ಎಂದು ಹೆಸರು. ಒಂದೊಂದು ದ್ವಿಪದಿಯಲ್ಲಿನ 2 ಪಾದಗಳಲ್ಲಿಯೂ ಸಮಾನಯತಿ ಬಂದು, ಅಂಥ 4 ದ್ವಿಪದಗಳ ಎಲ್ಲ ಪಾದಗಳಿಗೂ ಪ್ರಾಸವನ್ನು ಹೊಂದಿಸಿದರೆ ಅದು ತರುವೋಜ ಎನಿಸುತ್ತದೆ.

ಕನ್ನಡ ದ್ವಿಪದಕ್ಕೂ ತೆಲುಗು ದ್ವಿಪದಕ್ಕೂ ಸಂಬಂಧವಿಲ್ಲ. ಕನ್ನಡ ದಲ್ಲಿನ 'ದುವಯಿ' ಎಂಬುದರಲ್ಲಿನ 2 ಪಾದಗಳಲ್ಲಿಯೂ ಒಂದೊಂದರಲ್ಲಿ ವರಸೆಯಾಗಿ 6 ಮಾತ್ರೆಯುಗಣ, ತರುವಾಯ 5 ಕಂದ ಪದ್ಯಗಣಗಳು, ಮೊತ್ತ 26 ಮಾತ್ರೆಗಳಿರುತ್ತವೆ. ಕಂದಪದ್ಯಗಣಗಳ ತರುವಾಯ ಒಂದು ಗುರು ವನ್ನು ಸೇರಿಸಬೇಕೆಂದೂ, ಮೊತ್ತ 28 ಮಾತ್ರೆಗಳೆಂದೂ ದುವಯಿಲಕ್ಷಣಕ್ಕೆ ಪಾಠಾಂತರವಿದೆ. ಕರ್ಣಾಟಕ ಚತುಷ್ಪದವೆಂದು ಅಪ್ಪಕವಿ ಹೇಳಿದ್ದನ್ನೂ, ಸಂಸ್ಕೃತ ಪ್ರಾಕೃತ ಮಾತ್ರಾಗಣ ಛಂದಸ್ಸಿನಲ್ಲಿ ನಾಗವರ್ಮನು ಸೇರಿಸಿ ಹೇಳಿದ ಚತುಷ್ಪದವನ್ನೂ ನೋಡಿದರೆ ಆ ಪದ್ಯಗಳಲ್ಲಿನ 2 ಪಾದಗಳು ತೆಲುಗು ದ್ವಿಪದವಾಗುವುದೆಂದು ಹೇಳಬಹುದು. ಆದರೂ ತೆಲುಗಿನಲ್ಲಿನ ಇಂದ್ರಗಣ

ಗಳಾದ ನಲ, ಭಗಣಗಳನ್ನು ಕೂಡ ಬಳಸಬಹುದೆಂದೂ, ಭಗುರು ನಲಲ ಗಳನ್ನು ತಪ್ಪಿಸಬೇಕೆಂದೂ ತೆಲುಗು ಲಕ್ಷಣದಲ್ಲಿ ವಿಶೇಷವಾಗಿ ಸೇರಿಸಿಕೊಳ್ಳ ಬೇಕು. ಪ್ರಾಕೃತದಲ್ಲಿನ ದೋಅಇ ಎಂಬ ಪದ್ಯವು 28 ಮಾತ್ರೆಗಳೆಂದು ಹೇಳಲ್ಪಡುವ ಕನ್ನಡ ದುವಯಿಲಕ್ಷಣಕ್ಕೆ ಸರಿಹೋಗುತ್ತದೆ. ಪ್ರಾಕೃತದಲ್ಲಿ ಅದರ ಮಾತ್ರಾ ಪ್ರಸ್ತಾರ 6, 4, 4, 4, 4, 6 ಮಾತ್ರೆಗಳು.

(ಅ) ಕನ್ನಡ ತ್ರಿಪದಿ ಲಕ್ಷಣವನ್ನು (3) ರಲ್ಲಿ ವಿವರಿಸಿದೆ. ತೆಲುಗು ತ್ರಿಪದಿಗೂ ಇದಕ್ಕೂ ಭೇದವಿದೆ. ತೆಲುಗು ತ್ರಿಪದಿಯಲ್ಲಿ 1ನೇ ಪಾದದಲ್ಲಿ ವರಸೆಯಾಗಿ 4 ಇಂದ್ರಗಣ, ಉಳಿದೆರಡು ಪಾದಗಳಲ್ಲಿ ಒಂದೊಂದರಲ್ಲೂ 2 ಇಂದ್ರಗಣಗಳು, 1 ಸೂರ್ಯಗಣ. ವೇದದಲ್ಲಿನ ಗಾಯತ್ರೀ ಛಂದಸ್ಸು ತ್ರಿಪಾದಿಗಳು.

(ಇ) ತೆಲುಗು ಚತುಷ್ಪದದಲ್ಲಿ ಪಾದಕ್ಕೆ 16 ಮಾತ್ರೆಗಳೆಂದು ಹೇಳಲಾಗಿದೆ. ಇದು ಕರ್ಣಾಟಕ ಛಂದೋವತಂಸಕ್ಕೆ ಸರಿಹೋಗುತ್ತದೆ. ಕನ್ನಡ ಛಂದೋವತಂಸ ಲಕ್ಷಣ ಪಾದಕ್ಕೆ 3 ವಿಷ್ಣುಗಣ, 1 ಬ್ರಹ್ಮಗಣ. ತೆಲುಗಿನಲ್ಲಿ ವಿಷ್ಣುಗಣಕ್ಕೆ ಇಂದ್ರಗಣವನ್ನೂ ಬ್ರಹ್ಮಗಣಕ್ಕೆ ಸೂರ್ಯಗಣವನ್ನೂ ಹೇಳಿಕೊಳ್ಳಬೇಕು.

ಅಪ್ಪಕವಿ ಹೇಳಿರುವ ವಿತಾಳ ಚತುಷ್ಪದಿಗೆ ಹೇಳಿರುವ ಲಕ್ಷಣಗಳಲ್ಲಿ ಚತುಷ್ಪದ ಪಾದಗಳಿಗೆ ಮೊದಲು 2 ಸೂರ್ಯಗಣಗಳಿರಬೇಕೆಂದು ಇದೆ, ಆದರೂ ಲಕ್ಷ್ಯದಲ್ಲಿ ಪಾದಕ್ಕೆ 15 ಮಾತ್ರೆಗಳೇ ಇವೆ. ತೆಲುಗಿನ ಚತುಷ್ಪದ ವಿತಾಳ ಚತುಷ್ಪದಗಳೂ ಕನ್ನಡದ ಛಂದೋವತಂಸವೂ ಪ್ರಾಕೃತದ ಪಜ್ಝಟಿಕಾ, ಅಡಿಲ್ಲಾ, ಸಿಂಹ ಅಲೋಅಣ ಎಂಬ ಜಾತಿಗೆ ಸೇರಿದವಾಗಿವೆ.

ಅಪ್ಪಕವಿ ಕರ್ಣಾಟ ಚತುಷ್ಪದ ಎಂದು ಹೇಳಿದ್ದು ಕರ್ಣಾಟ ಚತುಷ್ಪದವಲ್ಲ. ಅಪ್ಪಕವಿ ಹೇಳಿದ ಲಕ್ಷಣ ಪಾದಕ್ಕೆ 3 ಪಂಚಲಘುಗಣಗಳು, 1 ಸೂರ್ಯಗಣ, ಮೊತ್ತ 18 ಮಾತ್ರೆಗಳು. ನಾಗವರ್ಮನ ಕರ್ಣಾಟ ಚತುಷ್ಪದಿಗೆ ಹೇಳಿರುವ ಲಕ್ಷಣ ಪಾದಕ್ಕೆ ವರಸೆಯಾಗಿ 1 ವಿಷ್ಣುಗಣ

1 ರುದ್ರಗಣ. ನಾಗವರ್ಮನು ಸಂಸ್ಕೃತ ಪ್ರಾಕೃತ ಮಾತ್ರಾಗಣ ಛಂದಸ್ಸಿನಲ್ಲಿ ಅಪ್ಪಕವಿ ಹೇಳಿದ ಲಕ್ಷಣಕ್ಕೆ ಸರಿಹೋಗುವ ಚತುಷ್ಪದಿಯನ್ನು ಹೇಳಿದ್ದಾನೆ.

ಮೇಲೆ ವಿವರಿಸಿದವಲ್ಲದೆ ನಾಗವರ್ಮನು ಕನ್ನಡದಲ್ಲಿ ಮದನವತಿ (5 ವಿಷ್ಣುಗಣ + 1ಗುರು ಇಲ್ಲವೆ 4 ವಿಷ್ಣುಗಣ + 1 ರುದ್ರಗಣ ಇಲ್ಲವೆ 3 ರುದ್ರ ಗಣ + 1 ವಿಷ್ಣುಗಣ.), ಗೀತಿಕೆ (ಇದರ ಲಕ್ಷಣ ಸ್ಪಷ್ಟವಾಗಿಲ್ಲ. ಅನೇಕ ಪಾಠಾಂತರಗಳಿವೆ. 2-6ನೇ ಗಣಗಳು ಬ್ರಹ್ಮಗಳಾಗಿರಬೇಕೆಂದೂ, ಉಳಿದ ಗಣಗಳನ್ನು ಕುರಿತು ನಿಯಮಗಳಿಲ್ಲವೆಂತಲೂ ಒಂದು ಪಾಠ. ಉಳಿದ ಗಣ ಗಳು ವಿಷ್ಣು ಗಣಗಳಾಗಿರಬೇಕೆಂದು ಒಂದು ಪಾಠ. ಲಕ್ಷ್ಯಗಳಾಗಿ ಕೊಟ್ಟಿರುವ ಪಾಠಗಳಲ್ಲಿ ಈ 2 ಲಕ್ಷಣಗಳೂ ಹೊಂದುವುದಿಲ್ಲ.) ಎಂಬ 2 ಬೇರೆಯ ಚತುಷ್ಪದಗಳನ್ನು ಕುರಿತು ಹೇಳಿದ್ದಾನೆ.

ಪ್ರಾಕೃತದಲ್ಲಿಯ ಚೌಪದಿಆ ಕ್ಕೂ ಆಂಧ್ರಕರ್ಣಾಟಕಗಳಲ್ಲಿಯ ಚತು ಷ್ಪದಗಳಿಗೂ ಎಂತಹ ಸಂಬಂಧವೂ ಇಲ್ಲ.

(ಈ) ಅಪ್ಪಕವಿ ಹೇಳಿರುವ ಪಂಚಪದಿ ಸಂಸ್ಕೃತ ಸಮವೃತ್ತಗಳಿಗೆ ಸಂಬಂಧಿಸಿದೆ. ತೆಲುಗಿನ ತೇಟಗೀತಗಳು ಒಂದುಂ ವೇಳೆ ಪಂಚಪದಗಳಾಗಿ ಹೇಳಲ್ಪಡುವುದುಂಟು. ಹಾಗೆಯೇ ಸೀಸಪದ್ಯವನ್ನು ಕೂಡ ಹೇಳಿಕೊಂಡರೆ ಪಂಚಪಾದಿಯಾಗುತ್ತದೆ.

(ಉ) ಅಪ್ಪಕವಿ ಷಟ್ಪದಿಲಕ್ಷಣವನ್ನು ಪಾದಕ್ಕೆ 6 ಇಂದ್ರಗಣ, 1 ಚಂದ್ರಗಣ; ಪಾದದಲ್ಲಿ 3 ಪ್ರಾಸಯುತಿಗಳು; ಅಂಥ ಪ್ರಾಸದಿಂದ ಒಡ ಗೂಡಿದ 6 ಪಾದಗಳು' ಎಂದು ಲಕ್ಷಣ ಹೇಳಿದ್ದಾನೆ. ಇಂದ್ರಗಣಗಳಿರ ಬೇಕೆಂದು ಹೇಳಿದರೂ ಲಕ್ಷ್ಯದಲ್ಲಿ 5 ಮಾತ್ರೆಗಳ ಇಂದ್ರಗಣಗಳನ್ನೇ ಉಪಯೋಗಿಸಿದ್ದಾನೆ. ಕರ್ಣಾಟಕ ಕುಸುಮ ಷಟ್ಪದಿಯಲ್ಲಿ 5 ಮಾತ್ರೆಯ ಗಣಗಳು ಮೊದಲೆರಡು ಪಾದಗಳಲ್ಲಿ ಎರಡೆರಡೂ, 3ನೇ ಪಾದದಲ್ಲಿ 5 ಮಾತ್ರೆಯ ಗಣಗಳು ಮೂರೂ ಒಂದು ಗುರುವೂ ಹೇಳಲ್ಪಟ್ಟಿದೆ. ತೆಲುಗು ಷಟ್ಪದಿಗೂ ಕನ್ನಡ ಕುಸುಮ ಷಟ್ಪದಿಗೂ ಮೊತ್ತದ ಮೇಲೆ ಲಕ್ಷಣವೊಂದೇ ಆಗಿ ತೋರಿಬರುವುದು.

ಕನ್ನಡದಲ್ಲಿ 6 ವಿಧ ಷಟ್ಪದಿಗಳಿವೆ. ಅವುಗಳಲ್ಲಿ ಕುಸುಮಷಟ್ಪದಿಯನ್ನು ಕುರಿತು ಮೇಲೆ ಹೇಳಿದೆ.

(ii) ಶರಷಟ್ಪದಿ : ಮೊದಲ 2 ಪಾದಗಳಲ್ಲಿ 2 ವಿಷ್ಣುಗಣ, 3ನೇ ಪಾದದಲ್ಲಿ 2 ವಿಷ್ಣುಗಣ, 1 ರುದ್ರಗಣ; ಹಾಗೆಯೇ ಉಳಿದ 3 ಪಾದಗಳೂ ಇರುತ್ತವೆ. (ಲಕ್ಷಣವು ಹೀಗಿದ್ದರೂ ವಿಷ್ಣುಗಣಕ್ಕೆ ಬದಲಾಗಿ 4 ಮಾತ್ರೆಗಳ ಬ್ರಹ್ಮಗಣವನ್ನಾದರೂ – ಗಗ, ಸಗಣ – ಬಳಸಬಹುದೆಂದೂ ರುದ್ರಗಣಕ್ಕೆ ಬದಲಾಗಿ 4 ಮಾತ್ರೆಗಳ ಗಣವನ್ನೂ, 1 ಗುರುವನ್ನೂ ಬಳಸಬಹುದೆಂದೂ ಸಾಹಿತ್ಯದಲ್ಲಿರುವ ಶರಷಟ್ಪದಿಗಳನ್ನು ನೋಡಿ ತಿಳಿದುಕೊಳ್ಳಬಹುದು.)

(iii) ಭೋಗಷಟ್ಪದಿ : ಮೊದಲ 2 ಪಾದಗಳಲ್ಲಿ 3 ಮಾತ್ರೆಯ 4-4 ಗಣಗಳು ; 3ನೇ ಪಾದದಲ್ಲಿ 3 ಮಾತ್ರೆಯ 6 ಗಣಗಳು ಮತ್ತು ಒಂದು ಗುರು, ಹಾಗೆಯೇ ಉಳಿದ 3 ಪಾದಗಳೂ ಮೊತ್ತದಲ್ಲಿ 88 ಮಾತ್ರೆಗಳು. ಇದು ತೆಲುಗಿನ ಸುವ್ವಿಹಾಡಿಗೆ ಸರಿಹೋಗುವುದು.

(iv) ಭಾಮಿನಿಷಟ್ಪದಿ : ಮೊದಲ 2 ಪಾದಗಳಲ್ಲಿ 3, 4, 3, 4 ಮಾತ್ರೆಗಳ ಗಣಗಳು ; 3ನೇ ಪಾದದಲ್ಲಿ 3, 4, 3, 4, 3, 4, 2 ಮಾತ್ರೆಗಳ ಗಣಗಳು. ಉಳಿದ 3 ಪಾದಗಳೂ ಹೀಗೆಯೇ. ಇದು ತೆಲುಗಿನ ಗುಮ್ಮಡಿ ಹಾಡಿಗೆ ಸರಿಹೋಗುವುದು, ಆಧುನಿಕ ಆಂಧ್ರಸಾಹಿತ್ಯದಲ್ಲಿ ಮುತ್ತಿನ ಸರಗಳೆಂಬ ಹೆಸರಲ್ಲಿ ಬರುತ್ತಿರುವುದು ಭಾಮಿನಿಷಟ್ಪದಿಯೇ. ಇವಕ್ಕೆ ಇಂದಿನ ತೆಲುಗು ಕವಿಗಳು ಕೆಲವು ಕಡೆ ಸೇರಿಸಿಯೂ, ಬದಲಾಯಿಸಿಯೂ ಕೆಲವು ಮಾರ್ಪಾಟುಗಳನ್ನು ಮಾಡುತ್ತಿದ್ದಾರೆ. ಆದರೆ ಈ ಪದ್ಯಗಳ ಧಾಟಿ ಭಾಮಿನೀಷಟ್ಪದಿಯನ್ನೇ ಹೋಲಿರುತ್ತದೆ.

(v) ಪರಿವರ್ಧಿನಿಷಟ್ಪದಿ : ಮೊದಲ 2 ಪಾದಗಳಲ್ಲಿ 4 ರಂತೆ ಮಾತ್ರೆಗಳ 4-4 ಗಣಗಳು ; 3ನೇ ಪಾದದಲ್ಲಿ ಅಂಥ ಗಣಗಳು 6 ಮತ್ತು 1 ಗುರು. ಉಳಿದ 3 ಪಾದಗಳೂ ಹೀಗೆಯೇ. ಮೊತ್ತ 116 ಮಾತ್ರೆಗಳು. ತೆಲುಗಿನಲ್ಲಿ ಇಂಥ ಹಾಡುಗಳಿವೆ.

(vi) ವಾರ್ಧಕಷಟ್ಪದಿ: ಮೊದಲ 2 ಪಾದಗಳಲ್ಲಿ 5 ರಂತೆ ಮಾತ್ರೆಗಳ 4-4 ಗಣಗಳು. 3ನೇ ಪಾದವಲ್ಲಿ ಅಂಥ ಗಣಗಳು 6 ಮತ್ತು ಒಂದು ಗುರು. ಉಳಿದ 3 ಪಾದಗಳೂ ಹೀಗೆಯೇ. ತೆಲುಗಿನಲ್ಲಿ ಇಂಥ ಹಾಡುಗಳಿವೆ.

೫.೧೦ (9) (i) ನಾಗವರ್ಮನು ರಗಳೆಯಲ್ಲಿ ಒಂದು ಭೇದ ತೋರಿಸಿರುವನಾದರೂ ಅದರ ಹೆಸರು ಹೇಳಿಲ್ಲ. ಅದರಲ್ಲಿನ ಒಂದು ಪಾದ: ಮಗನೆ ನೀನಿಂತಳಿಯೆ ಸ್ಮರಿಪೆನೆಂತೊ ಪೇಳಯ್ ಶಂಕರಾ. ಇದನ್ನು ಕಿಟ್ಟೆಲ್ 5, 5, 4, 3, 4, 5 ಮಾತ್ರೆಗಳಿರುವ ಗಣಗಳಾಗಿ ವಿಂಗಡಿಸಿದ್ದಾರೆ. ಆದರೆ ಅದರ ನಡೆಗೆ ಅನುಕೂಲವಾಗಿ ಈ ವಿಭಜನೆಯಿರುವಂತೆ ತೋರುವುದಿಲ್ಲ. 3, 4, 3, 4, 3, 4, 5ರಂತೆ ಅದನ್ನು ವಿಭಜಿಸಬೇಕಾಗುವುದೋ ಏನೋ.

(ii) ಕನ್ನಡದ ಲಯಗ್ರಾಹಿಯೂ ರಗಳೆಯೊಳಗಿನದೇ. ಅಪ್ಪಕವಿ ಹೇಳಿರುವ ಮಾಲಿಕಾವೃತ್ತಗಳಲ್ಲಿನ ಲಯಗ್ರಾಹಿಲಕ್ಷಣವೂ ಕನ್ನಡ ಲಯಗ್ರಾಹಿ ಲಕ್ಷಣವೂ ಒಂದೇ ಆಗಿದೆ. ಆದರೆ ನಾಗವರ್ಮನು ಈ ಲಯಗ್ರಾಹಿಯನ್ನೇ ಮಾಲಾವೃತ್ತಗಳಲ್ಲಿ ಲಲಿತಪದವೆಂಬ ಹೆಸರಿನಿಂದ ಬೇರೆಯಾಗಿ ಹೇಳಿದ್ದಾನೆ. ನಾಗವರ್ಮನು ಹೇಳಿರುವ ಕುಸುಮಶರವೆಂಬ ಮಾಲಾವೃತ್ತಕ್ಕೆ ಅಪ್ಪಕವಿ ಹೇಳಿರುವ ಲಯವಿಭಾತಿ ಸರಿಹೋಗುತ್ತದೆ. ಅವರಿಬ್ಬರೂ ಆ ಪಾದಗಳಿಗೆ ಮಾಡಿರುವ ಗಣವಿಭಜನೆಯಲ್ಲಿ ಭೇದವಿದೆ.

ಅಪ್ಪಕವಿ ಲಯಹಾರಿ, ತ್ರಿಭಂಗಿ ಎಂಬ ಮತ್ತೆರಡು ಮಾಲಾವೃತ್ತಗಳನ್ನು ಹೇಳಿದ್ದಾನೆ. ಲಯಹಾರಿಯ ಪಾದಕ್ಕೆ 11 ನಗಣಗಳು, 1 ಸಗಣ, 1 ಗುರು ಎಂದು ಆತನ ಲಕ್ಷಣವಿರುವುದಾದರೂ ಅದರ ಧಾಟಿಯನ್ನು ಹಿಡಿದು 7 ನಲಲಗಳು, 1 ಗಗ ಎಂದು ಹೇಳಬೇಕು. ತ್ರಿಭಂಗಿ ಲಕ್ಷಣವನ್ನು ಅಪ್ಪಕವಿ ಹೇಳಿರುವ ಲಕ್ಷಣವನ್ನು ಹಿಡಿದಾಗಲಿ, ಲಕ್ಷ್ಯವನ್ನು ಹಿಡಿದಾಗಲಿ ಸರಿಯಾಗಿ ತಿಳಿಯುವುದು ಕಷ್ಟವಾಗಿದೆ. ಆತನು ಹೇಳಿರುವ ಪದ್ಯದಲ್ಲಿನ 3, 4ನೇ ಪಾದಗಳನ್ನು ಹಿಡಿದು ತ್ರಿಭಂಗಿಪಾದಕ್ಕೆ 4 ಮಾತ್ರೆಗಳ ಗಣಗಳು ಆರೂ, ಗಗ, ಸಗಣ, ಗಗ, ಸಗಣ, ಗುರು ಎಂದು ಗಣ ವಿಭಾಗಿಸಿಕೊಳ್ಳಬೇಕೇನೋ.

ಕವಿಜನಾಶ್ರಯದಲ್ಲಿ ಇದಕೆ ನ ಸ ನ ನ ಸ ನ ನ ಸ ನ ನ ಸ ಗ ಎಂದು ಪಾದ ಗಣಗಳಿವೆ, ಅನಂತನು 6 ನಗಣ, 2 ಸಗಣ, ನ ಮ ಸ ಗ ಗಳೆಂದು ಹೇಳಿದ್ದಾನೆ.

ಕನ್ನಡದಲ್ಲಿ ದಂಡಕಕ್ಕೆ 3 ಮಾತ್ರೆಗಳ ಗಣಗಳು ಎರಡೂ, ಆಮೇಲೆ 7 ರಗಣಗಳೂ ಒಂದು ಪಾದವಾಗುತ್ತದೆ, ಅಂಥವು 4 ಪಾದಗಳು. ಇದು ಸಂಸ್ಕೃತ ಛಂದಸ್ಸಿನಲ್ಲಿ ಹೇಳಿರುವ ದಂಡಕ ಲಕ್ಷಣಕ್ಕೆ ಸರಿಹೋಗುವುದು. ಆದರೆ ತೆಲುಗು ದಂಡಕವನ್ನು ಕುರಿತು ಕವಿಜನಾಶ್ರಯಕಾರನು ಮೊದಲು ನನಹಗಳೊಡನೆ ತಗಣಗಳೆಷ್ಟೇ ಆಗಲಿ, ಇಲ್ಲವೆ ಮೊದಲಿಂದ ಕಡೆಯವರೆಗೂ ಬರಿಯ ತಗಣಗಳೇ ಆಗಲಿ ಸೇರಿಸಿ ತುದಿಗೆ ಗುರುವನ್ನು ಸೇರಿಸಬೇಕೆಂದು ಹೇಳಿದ್ದಾನೆ. ಅನಂತನು ಸಗಣ, ನಹ, ಆಮೇಲೆ ಎಷ್ಟೇ ತಗಣಗಳಾಗಲಿ, ಮೊದಲಿಂದ ಬರಿಯ ತಗಣಗಳೇ ಆಗಲಿ ಸೇರಿಸಿ ತುದಿಗೆ ಗುರುವನ್ನು ಸೇರಿಸಬೇಕೆಂದಿದ್ದಾನೆ. ಅಪ್ಪಕವಿ ಮೊದಲು ಹಗಣವಾಗಲಿ, ನಗಣವಾಗಲಿ, ಸಗಣವಾಗಲಿ ಹೇಳಿ ಆಮೇಲೆ ಎಷ್ಟಾದರೂ ತಗಣಗಳನ್ನು ಸೇರಿಸಿ ತುದಿಗೆ ಗುರುವನ್ನು ಹೊಂದಿಸಿದರೆ ದಂಡಕವಾಗುವುದೆಂದು ಹೇಳಿದ್ದಾನೆ.

ನಾಗವರ್ಮ ಅಷ್ಟಪದಿಯೆಂಬ ಮತ್ತೊಂದನ್ನು ಉದಾಹರಿಸಿದ್ದಾನೆ. ಅದರ ಲಕ್ಷಣ ಪಾದಕ್ಕೆ 4 ರಂತೆ ಮಾತ್ರೆಗಳ ಗಣಗಳು 2 ಇರುವ 8 ಪಾದಗಳು, ಎಂಟನೇ ಪಾದದ ಕಡೆಗೆ 4 ಮಾತ್ರೆಗಳ 1 ಗಣ, 1 ಗಗ ಸೇರುತ್ತವೆ.

ಮೇಲೆ ಹೇಳಿದವುಗಳು ಬಹುಮಟ್ಟಿಗೆ ದಾಸರ ಪದಗಳಲ್ಲಿಯೂ, ಸ್ತ್ರೀಯರ ಹಾಡುಗಳಲ್ಲಿಯೂ ಕಾಣುತ್ತವೆ. ಅವುಗಳಲ್ಲಿ ಕೆಲವನ್ನು ಒಂದು ಭಾಷೆಯ ಗ್ರಂಥಗಳಲ್ಲಿ ಬಳಸದೇ ಹೋದರೂ ಜನಸಾಮಾನ್ಯವು ಅವುಗಳನ್ನು ಬಿಡಲಿಲ್ಲ.

೫.೧೧ (10) ಅಕ್ಕರಗಳನ್ನು ಕುರಿತು ಇನ್ನು ವಿಚಾರ ಮಾಡಬೇಕು. ಇಷ್ಟರವರೆಗೂ ಆಯಾ ಸಂದರ್ಭಗಳಲ್ಲಿ ಕನ್ನಡ ಬ್ರಹ್ಮ ವಿಷ್ಣು ರುದ್ರಗಳನ್ನು ಕುರಿತೂ, ತೆಲುಗು ಸೂರ್ಯ, ಇಂದ್ರ, ಚಂದ್ರ ಗಣಗಳನ್ನು ಕುರಿತೂ

ಪ್ರಸ್ತಾವಿಸಲಾಗಿದೆ. ಇದಂ ದ್ರಾವಿಡ ಲಾಕ್ಷಣಿಕರು ಮಾತ್ರಾಗಣ ಪ್ರಸ್ತಾರಕ್ಕಾಗಿ ಏರ್ಪಡಿಸಿಕೊಂಡ ಕೆಲವು ಸಂಕೇತಗಳು. ತಮಿಳು ಕನ್ನಡ ತೆಲುಗು ಮಾತ್ರಾಗಣ ಪ್ರಸ್ತಾರ ಸಂಪ್ರದಾಯವು ಒಂದು ರೀತಿಯನ್ನು ಅನುಸರಿಸಿರುತ್ತದೆ. ಆಯಾ ಜಾತಿಗಣಗಳು 3 ಭಾಷೆಗಳಲ್ಲೂ ಸಮಾನವಾಗಿ ಇವೆಯೆಂದೂ ಒಂದು ಭಾಷೆಗಿಂತ ಇನ್ನೊಂದರಲ್ಲಿ ಅಧಿಕವಾಗಿರುವುದೆಂದೂ ಈ ಕೆಳಗೆ ವಿವರಿಸಿದರೆ ಅವುಗಳ ಪರಸ್ಪರ ಸಂಬಂಧ ಬೋಧೆಯಾಗುವುದು. (1) ತಮಿಳು-ತೇಮಾಗಣಗಳು-ಗಗ, ಗಲ; ಪುಳಿಮಾಗಣಗಳು-ಯ, ಜ, ಸ, ನ ಇವುಗಳಲ್ಲಿ ಯ, ಜ, ಗಣಗಳನ್ನು ತೆಗೆದುಹಾಕಿದರೆ ಕನ್ನಡ ಬ್ರಹ್ಮಗಣಗಳೂ, ಅದರೊಂದಿಗೆ ಗಗ, ಸಗಣಗಳನ್ನು ಕೂಡ ತೆಗೆದುಹಾಕಿದರೆ ತೆಲುಗು ಸೂರ್ಯಗಣಗಳೂ ಆಗುತ್ತವೆ. (2) ತಮಿಳು-ಕರುವಿಳಂ-ನಲ, ನಗ, ಜಲ, ಜಗ; ಕೂವಿಳಂ-ಭ, ರ; ತೇಮಾಂಗಾಯ್-ಮ, ತ; ಪುಳಿಮಾಂಗಾಯ್-ಸಗ, ಸಲ, ಯಗ, ಯಲ ಇವುಗಳಲ್ಲಿ ಜಲ, ಜಗ, ಯಲ, ಯಗಗಳನ್ನು ಬಿಟ್ಟರೆ ಕನ್ನಡ ವಿಷ್ಣುಗಣಗಳೂ, ಅವುಗಳೊಡನೆ ಇನ್ನೂ ಮ, ಸಗಗಳನ್ನು ಕೂಡ ಬಿಟ್ಟರೆ ತೆಲುಗು ಇಂದ್ರಗಣಗಳೂ ಆಗುತ್ತವೆ. (3) ತಮಿಳು-ಕರುವಿಳಂಗಾಯ್-ನವ, ನಲಲ, ಜಲಗ, ಜಲಲ, ಜಗಗ, ಜಗಲ, ನಗಗ, ನಗಲ; ಕೂವಿಳಂಗಾಯ್-ಭಗುರು, ಭಲ, ರಗ, ರಲ; ತೇಮಾಂಗಣಿ-ತಗ, ತಲ; ಪುಳಿಮಾಂಗಣಿ-ಸಲಗ, ಸಲಲ, ಯಲಗ, ಯಲಲ; ತೇಮಾತಣ್ಣು-ಮಗ, ಮಲಘು; ಪುಳಿಮಾತಣ್ಣು-ಯಗಗ, ಯಗಲ, ಸಗಗ, ಸಗಲ ಇವುಗಳಲ್ಲಿ ನವ, ನಲಲ, ನಗಗ, ನಗಲ, ಭಗುರು, ಭಲ, ರಗ, ರಲ, ತಗ, ತಲ, ಸಲಗ, ಸಲಲ, ಮಗ, ಮಲಘು, ಸಗಗ, ಸಗಲಗಳೆಂಬ 16 ಮಾತ್ರ ಕನ್ನಡ ರುದ್ರಗಣಗಳು, ಇವುಗಳಿಂದ ಮಗ, ಸಗಗಳನ್ನು ಬಿಟ್ಟರೆ ತೆಲುಗು ಚಂದ್ರಗಣಗಳು ಆಗುತ್ತವೆ.

ಈ ರೀತಿಯಾಗಿ ತಮಿಳು ಗಣಗಳೊಳಗಿಂದ ಕನ್ನಡಿಗರು ಕೆಲವನ್ನೂ ಕನ್ನಡ ಗಣಗಳೊಳಗಿಂದ ತೆಲುಗರು ಇನ್ನೂ ಕೆಲವನ್ನೂ ಕೈಬಿಟ್ಟು ಬಿಡುವುದಕ್ಕೆ ಕಾರಣವೇನೆಂದು ಆಲೋಚಿಸಿದರೆ ಒಂದು ಊಹೆ ಹೊಳೆಯುತ್ತದೆ. ಕನ್ನಡದವರಿಗೂ ತೆಲುಗಿನವರಿಗೂ ಯಗಣ ಜಗಣಗಳಾಗಲಿ, ಅವುಗಳೊಂದಿಗೆ ಗುರು

ಲಘುಗಳಾಗಲಿ ಇತರ ಗಣಗಳಾಗಲಿ ಸೇರಿದಂಥ ಗಣಗಳು ಕೂಡ ಇಷ್ಟವಿಲ್ಲ; ಅಂಥವುಗಳನ್ನು ತಮಿಳು ಗಣಗಳೊಳಗಿಂದ ಕೈಬಿಟ್ಟರೆ ಕನ್ನಡ ಬ್ರಹ್ಮ ವಿಷ್ಣು ರುದ್ರ ಗಣಗಳು ಏರ್ಪಡುತ್ತವೆ. ಸೂರ್ಯಗಣಗಳಲ್ಲಿ 3 ಮಾತ್ರೆಗಳಿಗೆ ಮೀರಿದವೂ ಇಂದ್ರಗಣಗಳಲ್ಲಿ 5 ಮಾತ್ರೆಗಳಿಗೆ ಮೀರಿದವೂ, ಚಂದ್ರಗಣಗಳಲ್ಲಿ 7 ಮಾತ್ರೆಗಳಿಗೆ ಮೀರಿದವೂ ಆದ ಗಣಗಳಿರಕೂಡದೆಂದು ತೆಲುಗಿನವರು ನಿಯಮಮಾಡಿಕೊಂಡಿದ್ದಾರೆ. ಆದಕಾರಣ ಆಯಾ ಜಾತಿಗಳ ಕನ್ನಡ ಗಣಗಳೊಳಗಿಂದ ಆ ಸಂಖ್ಯಾನಿಯಮವನ್ನು ಅತಿಕ್ರಮಿಸಿದಂಥವನ್ನು ಅವರು ಕೈಬಿಟ್ಟಿದ್ದಾರೆ.

ವಾಸ್ತವವಾಗಿ ಆಯಾ ಗಣಗಳನ್ನು ಕೈಬಿಡುವುದಕ್ಕೆ ಕಾರಣವೆಂದರೆ ಲಯಕ್ಕೆ ಸರಿಹೋಗಬೇಕೆಂಬುದೂ, ಶ್ರುತಿಗೆ ಸುಭಗವಾಗಿರಬೇಕೆಂಬುದೂ ಆಗಿರಬೇಕೆಂದು ನನ್ನ ಅಭಿಪ್ರಾಯ. 3 ಅಕ್ಷರದ ಗಣದ ಮಧ್ಯೆ ಗುರುವು ಬಂದರೆ ಗರ್ಭಧರಿಸಿದಂತೆ ಇರುವುದು. ಪ್ರಾಕೃತ ಪೈಂಗಳದಲ್ಲಿಯೂ, ಛಂದೋಂಬುಧಿಯಲ್ಲಿಯೂ ಜಗಣವು ಕೆಲವು ಮಾತ್ರಾ ಛಂದಸ್ಸುಗಳಲ್ಲಿ ನಿರಸನಗೊಂಡಿದೆ, ಜಗಣವು ಸೇರಿದರೆ ಗಂಡನಿಲ್ಲದ ಹೆಂಗಸಿಗೆ ಗರ್ಭವಾದಂತೆ ಇರುವುದಂತೆ. ಆರ್ಯಾಕಂದಗಳಲ್ಲಿ ಕೂಡ ಜಗಣವು ಸೇರಬಹುದೆಂದರೂ ಪ್ರತ್ಯೇಕ ಸ್ಥಳಗಳಲ್ಲಿ ಜಗಣವು ನಿಷೇಧಿಸಲ್ಪಟ್ಟಿದೆ. ಈ ಕಾರಣದ ದೆಸೆಯಿಂದಲೇ ಆಂಧ್ರಕರ್ಣಾಟಕಗಳಲ್ಲಿ ಯಗಣವೂ ನಿಷೇಧಿಸಲ್ಪಟ್ಟಿರಬೇಕು.

ತೆಲುಗು ಲಾಕ್ಷಣಿಕರು ಸೂರ್ಯಗಣಗಳಲ್ಲಿ ಕಡೆಯ ಗುರುವುಳ್ಳವನ್ನು, ಇಂದ್ರಗಣದಲ್ಲಿ ಕಡೆಯ ದ್ವಿಗುರುವಿರುವಂಥವನ್ನು, ಚಂದ್ರಗಣದಲ್ಲಿ ಕಡೆಯ 3 ಗುರುಗಳಿರುವಂಥವನ್ನೂ ಕರ್ಣಾಟಕ ಗಣಗಳೊಳಗಿಂದ ಕೈಬಿಟ್ಟಿದ್ದಾರೆ. ಇದಕ್ಕೆ ಶ್ರುತಿಸುಭಗತ್ವವೇ ಕಾರಣ.

೫.೧೨ (11) ಅಕ್ಕರಗಳು ತೆಲುಗು ಕನ್ನಡಗಳಿಗೆ ಸಾಮಾನ್ಯವಾಗಿರುವ ಮಾತ್ರಾಗಣ ಛಂದೋಜಾತಿಗಳು. ಲಾಕ್ಷಣಿಕರು 5 ಬಗೆಯ ಅಕ್ಕರಗಳನ್ನು ಹೇಳಿದರೂ ಕನ್ನಡ ಸಾಹಿತ್ಯದಲ್ಲಿ ಪಿರಿಯಕ್ಕರ (ಮಹಾಕ್ಕರ)

ವೆಂಬ ಒಂದು ಬಗೆ ಮಾತ್ರ ಬಳಕೆಯಾಗಿದೆ. ಹಾಗೆಯೇ ತೆಲುಗಿನಲ್ಲಿ ಮಧ್ಯಾಕ್ಕರ ಮತ್ತು ಮಧುರಾಕ್ಕರಗಳನ್ನು ಮಾತ್ರ ಕವಿಗಳು ಬಳಸಿ ಬರೆದಿದ್ದಾರೆ.

ಕನ್ನಡ ಪಿರಿಯಕ್ಕರ ತೆಲುಗು ಮಹಾಕ್ಕರಕ್ಕೆ ಸರಿಹೋಗುವುದು. ಆದರೂ ಇದರ ಲಕ್ಷಣವನ್ನು ಕುರಿತು ಕೆಲವು ಸಂದೇಹಗಳಿವೆ. ಕನ್ನಡದಲ್ಲಿಯ ದೊರೆಯಕ್ಕರ (2 ವಿಷ್ಣು, 1 ಬ್ರಹ್ಮ, 2 ವಿಷ್ಣು, 1 ಬ್ರಹ್ಮಗಣಗಳು) ತೆಲುಗು ಮಧ್ಯಾಕ್ಕರಕ್ಕೆ (2 ಇಂದ್ರ, 1 ಸೂರ್ಯ, 2 ಇಂದ್ರ, 1 ಸೂರ್ಯಗಣಗಳು) ಸರಿಹೋಗುವುದು. ಕನ್ನಡ ನಡುವಣಕ್ಕರ (1 ಬ್ರಹ್ಮ, 3 ವಿಷ್ಣು, 1 ರುದ್ರ) ತೆಲುಗು ಮಧುರಾಕ್ಕರಕ್ಕೆ (1 ಸೂರ್ಯ, 3 ಇಂದ್ರ, 1 ಚಂದ್ರ) ಸರಿ ಹೋಗುವುದು. ಕನ್ನಡ ಎಡೆಯಕ್ಕರ (1 ಬ್ರಹ್ಮ, 2 ವಿಷ್ಣು, 1 ರುದ್ರ) ತೆಲುಗು ಅಂತರಾಕ್ಕರಕ್ಕೆ (1 ಸೂರ್ಯ, 2 ಇಂದ್ರ, 1 ಚಂದ್ರ) ಸರಿ ಹೋಗುವುದು. ಕನ್ನಡ ಕಿರಿಯಕ್ಕರ (2 ವಿಷ್ಣು, 1 ರುದ್ರ) ತೆಲುಗು ಅಲ್ಪಾ ಕ್ಕರಕ್ಕೆ (2 ಇಂದ್ರ, 1 ಚಂದ್ರ) ಸರಿಹೋಗುವುದು.

೫.೧೩ (12) ಪಿರಿಯಕ್ಕರ (ಮಹಾಕ್ಕರ) ಲಕ್ಷಣವನ್ನು ಕುರಿತು ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ಆಂಗೀರಸ ಸಂ॥ ಪುಷ್ಯ ಮಾಸದ ಸಂಚಿಕೆಯಲ್ಲಿ ವಿಪುಲವಾಗಿ ಚರ್ಚಿಸಿದ್ದೇನೆ. ಅದರ ಸಂಗ್ರಹವನ್ನು ಇಲ್ಲಿ ಕೊಟ್ಟಿದ್ದೇನೆ.

ಕನ್ನಡ ಪಿರಿಯಕ್ಕರಕ್ಕೆ ನಾಗವರ್ಮನು ಹೇಳಿದ ಲಕ್ಷಣ: 1, 3ನೇ ಪಾದ ಗಳಲ್ಲಿ ಕ್ರಮವಾಗಿ 1 ಬ್ರಹ್ಮ, 5 ವಿಷ್ಣು 1 ರುದ್ರಗಣ; 2, 4ನೇ ಪಾದಗಳಲ್ಲಿ 1 ಬ್ರಹ್ಮ, 4 ವಿಷ್ಣು, 1 ಬ್ರಹ್ಮ, 1 ರುದ್ರಗಣ. ಇದಕ್ಕೆ ಕಿಟ್ಟೆಲ್ ಕೊಟ್ಟ ಪಾಠಾಂತರಗಳಲ್ಲಿ ಅಜಗಣವೆಂಬುದಕ್ಕೆ ಜಗಣವೆಂದೂ; 2, 4ನೇ ಪಾದಗಳಲ್ಲಿ ಆ ಗಣವು 6ನೇ ಸ್ಥಾನದಲ್ಲಿ ಇರುವುದೆಂಬುದಕ್ಕೆ 4ನೇ ಸ್ಥಾನದಲ್ಲಿ ಇರುವುದೆಂದೂ ಸೂಚನೆ ಕಾಣುತ್ತದೆ.

ಕನ್ನಡ ಸಾಹಿತ್ಯದಲ್ಲಿ ಪಂಪನು ತನ್ನ ಭಾರತದಲ್ಲಿ 7, ಆದಿ ಪುರಾಣದಲ್ಲಿ 3, ಪೊನ್ನನು ತನ್ನ ಶಾಂತಿ ಪುರಾಣದಲ್ಲಿ 5 ಪಿರಿಯಕ್ಕರಗಳನ್ನು ಬಳಸಿದ್ದಾರೆ.

ಮತ್ತಾವ ಕನ್ನಡ ಗ್ರಂಥಗಳಲ್ಲಿಯೂ ಈ ಪಿರಿಯಕ್ಕರಗಳು ಕಂಡು ಬರುವು ದಿಲ್ಲ (?). ಪಂಪಪೊನ್ನರು ಬರೆದ ಪಿರಿಯಕ್ಕರಗಳಿಗೆ ನಾಗವರ್ಮನು ಹೇಳಿರುವ ಲಕ್ಷಣ ಹಿಡಿಯುವುದಿಲ್ಲ. ಸಮದೃಷ್ಟಿಯಿಂದ ನೋಡಿದರೆ 4 ಪಾದಗಳಲ್ಲಿಯೂ ಎಂತಹ ಭೇದವೂ ಇಲ್ಲದೆ ಪಾದಕ್ಕೆ 1 ಬ್ರಹ್ಮ, 5 ವಿಷ್ಣು, 1 ರುದ್ರಗಣ ಇರಬೇಕೆಂದು ತೋರುತ್ತದೆ. ಪಂಪನ ಭಾರತದಲ್ಲಿಯೂ ಪೊನ್ನನ ಶಾಂತಿ ಪುರಾಣದಲ್ಲಿಯೂ ಈ ಲಕ್ಷಣಕ್ಕೆ ಸರಿಹೋಗುವ ಕೆಲವು ಪದ್ಯಗಳಿವೆ. ಉಳಿದ ಪಿರಿಯಕ್ಕರಗಳಲ್ಲಿ ಭೇದವಿದ್ದರೂ ಆ ಭೇದಗಳು 2, 4ನೇ ಪಾದಗಳಿಗೆ ಮಾತ್ರ ಸಂಬಂಧಿಸಿದವುಗಳಲ್ಲ. ಎಲ್ಲ ಪಾದಗಳಲ್ಲಿಯೂ ಎಲ್ಲ ಗಣಗಳ ದೆಸೆಯಿಂದಲೂ ಆ ಭೇದಗಳು ಕಂಡುಬರುತ್ತಿವೆ. ಪಾಠಾಂತರ ಗಳನ್ನು ಹಿಡಿದು ನೋಡಿದರೆ 4 ಪಾದಗಳಿಗೂ ಒಂದೇ ಲಕ್ಷಣವನ್ನು ಹೇಳಬೇಕಾಗಿ ಕಾಣುತ್ತದೆ. ಪಾಠಾಂತರಗಳಿಲ್ಲದ ಕಡೆಯಲ್ಲಿ ಸವರಣೆಯಾಗ ಬೇಕಾಗಿರುವ ಸ್ಥಾನಗಳು ಸಾಧಾರಣವಾಗಿ 2, 4ನೇ ಪಾದಗಳಲ್ಲಿನ 6ನೇ ಗಣಗಳಲ್ಲ. ಆಯಾ ಪಾದಗಳ ಧಾಟಿ, ಹೊಂದಿಕೆಗಳನ್ನು ಹಿಡಿದು ನೋಡಿದರೂ 2, 4ನೇ ಪಾದಗಳಲ್ಲಿ ಈ ವಿಶೇಷ ಲಕ್ಷಣವು ಆವಶ್ಯಕವಿಲ್ಲವೆಂದು ಕಾಣುತ್ತದೆ. ಉಳಿದ 4 ಅಕ್ಕರಗಳಲ್ಲಿಯೂ 4 ಪಾದಗಳಿಗೂ ಒಂದೇ ಲಕ್ಷಣವಿದೆ. ಈ ಪಿರಿಯಕ್ಕರಕ್ಕೆ ಮಾತ್ರ 2, 4ನೇ ಪಾದಗಳಲ್ಲಿ ವಿಶೇಷಲಕ್ಷಣವನ್ನು ಹೇಳುವ ಕಾರಣ ಕಾಣುತ್ತಿಲ್ಲ. ನಾಗವರ್ಮನ ಕಾಲಕ್ಕೆ ಕನ್ನಡದಲ್ಲಿ ಅಕ್ಕರಗಳು ಪ್ರಚಾರ ದಲ್ಲಿ ಲುಪ್ತವಾಗಿವೆ. ಆಯಾ ಅಕ್ಕರ ಪದ್ಯಗಳಿಗೆ ಅನೇಕ ಪಾಠಾಂತರ ಗಳುಂಟಾಗಿರುತ್ತವೆ. ಆ ಪಾಠಾಂತರಗಳಲ್ಲಿ ಯಾವುವಾದರೂ ಕೆಲವನ್ನು ತೆಗೆದುಕೊಂಡು ನಾಗವರ್ಮನು ಲಕ್ಷಣವನ್ನು ಕಲ್ಪಿಸಿರಬೇಕು.

೫.೧೪ (13) ತೆಲುಗು ಸಾಹಿತ್ಯದಲ್ಲಿ ಕನ್ನಡ ಪಿರಿಯಕ್ಕರಗಳಿಗೆ ಸರಿ ಹೋಗಿರುವ ಮಹಾಕ್ಕರಗಳಿಲ್ಲ. ಅದರೂ ಲಾಕ್ಷಣಿಕರು ಅದಕ್ಕೆ ಲಕ್ಷಣವನ್ನು ಕೊಟ್ಟಿದ್ದಾರೆ. ಅಪ್ಪಕವಿಯ ಮಹಾಕ್ಕರದ ಸೂತ್ರಪದ್ಯದ ಲಕ್ಷಣಕ್ಕೆ ಅರ್ಥವೇನೇ ಆದರೂ ಆ ಪದ್ಯಕ್ಕೆ ಗಣವಿಭಜನೆ ಮಾಡಿದರೆ ಎಲ್ಲ ಪಾದ ಗಳಲ್ಲಿಯೂ 1 ಸೂರ್ಯ, 5 ಇಂದ್ರ, 1 ಚಂದ್ರಗಣ ಕಾಣುತ್ತದೆ. ಇಲ್ಲಿ ೨.೪ರ ಎಡೆಗಳಲ್ಲಿ ಚಿತ್ರಭಾನುಗಣ ಕಾಣಿಸಿಕೊಳ್ಳುವುದು ಎನ್ನುವುದಕ್ಕೆ ಅಪ್ಪಕವಿ ಏನು ಅರ್ಥವನ್ನು ಉದ್ದೇಶಿಸಿರುವನೋ ತಿಳಿಯದು. ತೆಲುಗ

ಕಾವ್ಯಗಳಲ್ಲಿ ಮಹಾಕ್ಕರಗಳು ಇಲ್ಲದಿರುವ ಕಾರಣ ಅಪ್ಪಕವಿ ಲಕ್ಷಣವನ್ನೇರ್ಪಡಿಸಲು ಆಧಾರವಿಲ್ಲವಾಗಿವೆ. ಆದಕಾರಣ ಆತನು ಕನ್ನಡದಲ್ಲಿಯ ಪಿರಿಯಕ್ಕರ ಲಕ್ಷಣವನ್ನೇ ಅನುಸರಿಸಬೇಕಾಗಿ ಬಂದಿದೆ. ಆತನಿಗೆ ತಪ್ಪು ಲಕ್ಷಣವಿರುವ ಒಂದು ಕನ್ನಡ ಪದ್ಯವು ದೊರಕಿರಬೇಕು. ಇಲ್ಲವೆ ಆತನು ಅನಂತನನ್ನು ಅನುಸರಿಸಿರುತ್ತಾನೆ. ಆದರೂ ತಾನು ಬರೆದ ಪದ್ಯದಲ್ಲಿ 4 ಪಾದಗಳನ್ನೂ ಒಂದೇ ರೀತಿಯಾಗಿ ರಚಿಸಿರುತ್ತಾನೆ. ಅನಂತನ ಸೂತ್ರಪದ್ಯದಲ್ಲಿ ಮೊದಲ 3 ಪಾದಗಳಲ್ಲಿಯೂ 1 ಸೂರ್ಯ, 5 ವಿಷ್ಣು, 1 ಚಂದ್ರಗಣ ಇರುತ್ತವೆ. 4ನೇ ಪಾದದಲ್ಲಿ 'ನನಿಮ' ಎಂಬ 4ನೇ ಗಣವಿದೆ. 'ನನಿಯಮ'ವೆಂದು ಸರಿ ಮಾಡಿಕೊಂಡರೆ ಆ ಪಾದವು ಉಳಿದ ಪಾದಗಳಂತೆ ಆಗುವುದು. ಹೀಗೆ ಹೊಂದಿಸಿಕೊಳ್ಳದಿದ್ದರೆ 2ನೇ ಪಾದದಲ್ಲಿ ಕೂಡ 1 ಸೂರ್ಯಗಣ ಇರುವಂತೆ ಹೊಂದಿಸಿಕೊಳ್ಳಬೇಕಲ್ಲವೆ ? ಕವಿಜನಾಶ್ರಯದ ಪದ್ಯದಲ್ಲಿ 2, 4ನೇ ಪಾದಗಳಲ್ಲಿ ಪ್ರತ್ಯೇಕ ನಿಯಮವೇನೂ ಇಲ್ಲ. 4 ಪಾದಗಳಿಗೂ ಒಂದೇ ಲಕ್ಷಣವು ಹೇಳಲ್ಪಟ್ಟಿದೆ. ಇದೇ ಮಹಾಕ್ಕರಕ್ಕೆ ಸರಿಯಾದ ಲಕ್ಷಣ. ಕನ್ನಡ ಪಿರಿಯಕ್ಕರಕ್ಕೆ ಕೂಡ ಹೀಗೆಯೇ 1 ಬ್ರಹ್ಮ, 5 ವಿಷ್ಣು, 1 ರುದ್ರಗಣವೆಂದು ನಾನು ನಿರೂಪಿಸಿದ್ದನ್ನು ಈ ಕವಿಜನಾಶ್ರಯದಲ್ಲಿಯ ಮಹಾಕ್ಕರ ಲಕ್ಷಣವು ಸ್ಥಿರಪಡಿಸುತ್ತದೆ.

೫.೧೫ ಕೇವಲ ಗ್ರಂಥಸ್ಥಗಳಾದ ಛಂದಸ್ಸುಗಳನ್ನೇ ಅಲ್ಲದೆ ಹಾಡುಗಳ ರೂಪದಲ್ಲಿ ಗ್ರಂಥಸ್ಥಗಳಾದ ಭಾಷೆಗಳಲ್ಲಿಯೂ, ಗ್ರಂಥಗಳ ರೂಪ ಕಾಣದ ಭಾಷೆಗಳಲ್ಲಿಯೂ ಇರುವ ಛಂದಸ್ಸುಗಳನ್ನು ಕುರಿತು ಕೂಡ ತಿಳಿದುಕೊಳ್ಳಬೇಕು.

i. ಈ ಅನುವಾದದಲ್ಲಿ ಮೂಲದ ಕೆಲವು ಅಂಶಗಳನ್ನು ಬಿಟ್ಟಿದೆ.

ii. ಆವರಣದ ಪ್ರಶ್ನಾರ್ಥಕ ಚಿಹ್ನೆಗಳು ಭಾಷಾಂತರಕಾರನವು ;

iii. ಈ ಅನುವಾದ ಕಾರ್ಯದಲ್ಲಿ ಕೆಲವೆಡೆ ನನಗೆ ಬಂದ ಸಂದೇಹಗಳನ್ನು ಪರಿಹರಿಸಿ ಕೊಟ್ಟ ವಿದ್ವಾನ್ ಜಿ. ಸುಬ್ಬಯ್ಯ ಶಾಸ್ತ್ರಿಗಳಿಗೆ ನಾನು ಕೃತಜ್ಞ. [೧೯೫೯–೬೦]

ಮೂಲ : ಡಾ॥ ಚಿಲಕೂರಿ ನಾರಾಯಣರಾವ್
ಎಂ ಎ., ಎಲ್.ಟಿ., ಪಿಎಚ್.ಡಿ,
[ವ್ಯಾಸಸಂಗ್ರಹಮು, ೧೯೩೩]

ಕಾಳಿದಾಸ ಮಹಾಕವಿಯ ಜೀವಿತ ಸಮಸ್ಯೆಗಳು

'ಸಮಸ್ಯೆ'—ಎನ್ನುವ ಪದವನ್ನು ಈಚೆಗೆ "ಪ್ರಬಲವಾದ ತೊಡಕು" ಎಂಬರ್ಥದಲ್ಲಿ ಬಳಸುತ್ತಿದ್ದಾರೆ. ಪೂರ್ವದಲ್ಲಿ ಇದನ್ನು "ಪರೀಕ್ಷಾರ್ಥವಾಗಿ ಕೊಟ್ಟ ಪದ್ಯಪಾದ" ಎಂಬರ್ಥದಲ್ಲಿ ಬಳಸುತ್ತಿದ್ದರು. ಈ ದಿನದ ತೆಲುಗು ವಾರ್ತಾ ಪತ್ರಿಕೆಗಳ ಪರಿಭಾಷೆಯಲ್ಲಿ ಇದರರ್ಥ ಪೂರ್ತಿಯಾಗಿ ಬದಲಾವಣೆಯಾಗಿದೆ. ಆರ್ಥಿಕ ಸಮಸ್ಯೆ, ಸಾಂಘಿಕ ಸಮಸ್ಯೆ—ಮುಂತಾದ ಪದಗಳಲ್ಲಿ ಈ ಅರ್ಥಪರಿಣಾಮ ಇನ್ನೂ ಚೆನ್ನಾಗಿ ಸ್ಪಷ್ಟವಾಗಿ ಕಂಡುಬರುತ್ತಿದೆ. ವ್ಯಾವಹಾರಿಕ ಸಂಪ್ರದಾಯವನ್ನು ಅನುಸರಿಸಿ ಈ ಪದವನ್ನು ಈ ಅರ್ಥದಲ್ಲಿಯೇ ಉಪಯೋಗಿಸುತ್ತೇನೆ. ಕಾಳಿದಾಸನ ಕವಿತೆಯಲ್ಲಿ ಈ ಬಗೆಯ ಸಮಸ್ಯೆಗಳೇನಾದರೂ ಇವೆಯೋ ನೋಡೋಣ.

ಕವಿಗಳಾರೂ ತಮ್ಮ ದೇಶಕಾಲ ಪರಿಸ್ಥಿತಿಗಳನ್ನು ದಾಟಿಹೋಗಿಲ್ಲವೆಂದೂ, ಈ ಪರಿಸ್ಥಿತಿಗಳಿಗೂ ಇವರ ರಚನೆಗಳಿಗೂ ಏನೋ ಒಂದು ವಿಧವಾದ ಸಂಬಂಧ ಇದ್ದೇ ಇರುತ್ತದೆಂದೂ ಕೆಲವರು ಸಾಹಿತ್ಯ ವಿಮರ್ಶಕರು ಹೇಳುತ್ತಾರೆ. ಇದು ಬಹಳಮಟ್ಟಿಗೆ ನಿಜ. ಆದರೆ ಈ ದೇಶಕಾಲ ಪರಿಸ್ಥಿತಿಗಳ ಅವಗಾಹನೆಯಲ್ಲೂ, ಇವುಗಳಿಂದ ಹೊರಪಡುವ ಸಮಸ್ಯೆಗಳ ಸಮನ್ವಯದಲ್ಲೂ, ಅನೇಕ ಅಂತರಗಳಿವೆ. ಒಬ್ಬ ಕವಿ ತನ್ನ ಸಮಕಾಲೀನ ಸಮಸ್ಯೆಗಳನ್ನು ಒಂದು ತಾತ್ಕಾಲಿಕವಾದ ಸಂಕುಚಿತ ದೃಕ್ಪಥದೊಡನೆ ಪರಿಷ್ಕರಿಸಬಹುದು; ಇನ್ನೊಬ್ಬ ಕವಿ ಆ ಸಮಸ್ಯೆಗಳೆಲ್ಲವನ್ನೂ ಚೆನ್ನಾಗಿ ವಿಶಾಲದೃಷ್ಟಿಯಿಂದ ಪರಿಶೀಲಿಸಿ, ಇನ್ನೊಂದು ವಿಧವಾಗಿ ಸಮನ್ವಯಿಸಿ, ಪರಿಷ್ಕಾರ ಮಾರ್ಗ ಸೂಕ್ಷ್ಮವಾಗಿ ಸ್ಫುರಿಸುವಂತೆ ಮಾಡಬಹುದು.

ಹಾಗಲ್ಲದೆ, ಕೇವಲ ನೆಲ ಸೋಂಕದ ವ್ಯಾಯಾಮ ರೀತಿಯಂಥದು ಸಾರಸ್ವತ ಮಾರ್ಗದಲ್ಲಿ ಸಾಧ್ಯವಿಲ್ಲ. ಓದುವೇಳೆ, ತಿಳಿದೋ ತಿಳಿಯದೆಯೋ, ರಚಯಿತರಾರಾದರೂ ಇಂಥ ವ್ಯಾಯಾಮವನ್ನು ಪ್ರಾರಂಭಿ

ಸಿದರೂ—ಅವಕ್ಕೆ ಸಾರಸ್ವತ ಗೌರವ ಸಲ್ಲದು; ನಿಜವಾಗಿ ಪಲಾಯನವಾದ (Escapism) ವಾಗಲಿ, 'ಕಲೆಗಾಗಿಯೇ ಕಲೆ' (Art for Art's sake) ಎಂಬ ವಾದವಾಗಲಿ, ನಮ್ಮ ಸಂಸ್ಕೃತ ಸಾರಸ್ವತ ಸಂಪ್ರದಾಯದಲ್ಲಿ ಇಲ್ಲವೇ ಇಲ್ಲ. ಇಂಥ ಸರಕೆಲ್ಲ ಈಚಿನ ಪಾಶ್ಚಾತ್ಯ ಸಾಹಿತ್ಯದಿಂದ ನಮ್ಮ ದೇಶಕ್ಕೆ ಇಳಿದು ಬಂದಿತು. ಆ ದೇಶದಲ್ಲಿ ಇಂಥ ವಾದಗಳು ಹೊರಡಲು ಅನೇಕ ಕಾರಣಗಳಿವೆ. ಆದರೆ ಈಗ ಅದು ನಮಗೆ ಅಪ್ರಸ್ತುತ.

"ಕಾಳಿದಾಸ ಕವಿ ರಸಮಯಕವಿತಾ ಪ್ರತಿನಿಧಿ" ಎನ್ನುವ ಅರವಿಂದರ ಅಭಿಪ್ರಾಯವನ್ನು ಈ ಲೇಖನಗಳಲ್ಲಿ ಇದಕ್ಕೆ ಮೊದಲೇ ಬರೆದೆನು. (ಇಲ್ಲಿಗೆ ಇದು ಅನ್ವಯಿಸದು). ವಾಲ್ಮೀಕಿಯ ಕವಿತೆ ಧರ್ಮಪ್ರಧಾನವಾದುದೆಂದೂ, ವ್ಯಾಸನ ಕವಿತೆ ಮೇಧಾಪ್ರಧಾನವಾದುದೆಂದೂ, ಕಾಳಿದಾಸನ ಕವಿತೆ ರಸ ಪ್ರಧಾನವಾದುದೆಂದೂ ಅರವಿಂದರ ಅಭಿಪ್ರಾಯ. ಕಾಳಿದಾಸನ ಕವಿತ್ವವನ್ನು ಕುರಿತು ಅವರು Aesthetic ಎನ್ನುವ ಪದವನ್ನು ಬಳಸಿದ್ದಾರೆ. "ರಸ ಮಯ" ಎನ್ನುವ ಪದ ಈ ಇಂಗ್ಲಿಷ್ ಪದಕ್ಕೆ ಸರಿಹೋಗುತ್ತದೆ. ಆದರೂ ಈ ಇಂಗ್ಲಿಷ್ ಪದಕ್ಕೆ ಪಾಶ್ಚಾತ್ಯ ಸೌಂದರ್ಯ ಸಿದ್ಧಾಂತಗಳಲ್ಲಿ ಅನೇಕ ಅರ್ಥಚ್ಛಾಯೆಗಳುಂಟಾಗುತ್ತಾ ಬಂದಿವೆ. 'ರಸ' ಪದಕ್ಕೆ ಕಾವ್ಯಾನುಭೂತಿ ಜನ್ಯವಾದ 'ಆನಂದ' ಎಂದರ್ಥ. ನಮ್ಮ ಆ ಆಲಂಕಾರಿಕರು ಆನಂದಾನು ಭೂತಿಯು ಪ್ರಧಾನ ಕಾವ್ಯಪ್ರಯೋಜನವೆಂದು ಒತ್ತಿ ಹೇಳಿದರೂ, ಇವುಗಳ ನಿರ್ವಚನದಲ್ಲಿ ಸಾಂಘಿಕ ಪ್ರಯೋಜನವಾದ ಧರ್ಮಸೂತ್ರವು ಅಂತರ್ಗರ್ಭಿತ ವಾಗಿಯೇ ಇದೆ. ಅಲಂಕಾರ ಶಾಸ್ತ್ರ ರಚನಾಕಾಲದಲ್ಲಿ ಧರ್ಮಾಧರ್ಮಗಳನ್ನು ಕುರಿತು ವಿಧಿ ನಿಷೇಧಗಳನ್ನು ಕುರಿತು ಈ ಹೊತ್ತಿನವರಿಗಿರುವ ಅನುಮಾನ ಗಳಾಗಲಿ, ಅಭಿಪ್ರಾಯ ಭೇದಗಳಾಗಲಿ ಇರುವಂಥವಲ್ಲ. ಒಂದು ಸಾಧಾರಣ ವಾದ ಧರ್ಮಸೂತ್ರದ ಸರಣಿಯನ್ನನುಸರಿಸಿ ಆ ಕಾಲದಲ್ಲಿ ಎಲ್ಲರೂ ಆಲೋಚಿಸುವವರಾಗಿದ್ದರು. ಆ ಕಾರಣದಿಂದಲೇ, ಧರ್ಮಾಧರ್ಮ ದೃಷ್ಟಿ ರಸಾನುಭೂತಿಯಲ್ಲಿ ಬರುವ ಪಾಪಾರ್ಪಾಟುಗಳನ್ನು ಕುರಿತ ಚರ್ಚೆ ಅಲಂಕಾರ ಶಾಸ್ತ್ರದಲ್ಲಿ ಅಷ್ಟು ಪ್ರಧಾನವಾಗಿ ಕಾಣಬರದು.

ಆದರೆ ಒಂದೊಂದು ಸಮಯದಲ್ಲಿ ಈ ಧರ್ಮಾಚರಣೆಯಲ್ಲಿ ಕೆಲವು ಲೋಪಗಳು ಸಂಭವಿಸುವುದೂ, ಆಯಾ ಕಾಲಗಳಲ್ಲಿನ ಕಾವ್ಯಗಳಲ್ಲಿ ಆ ಧಾರ್ಮಿಕದೃಷ್ಟಿ ಸೂಕ್ಷ್ಮವಾಗಿ ಬಂದಿರುವುದೂ, ಸಂಸ್ಕೃತ ಸಾಹಿತ್ಯದಲ್ಲಿ ಕೂಡ ಅಲ್ಲಲ್ಲಿ ಸಕೃತ್ತಾಗಿ ಕಾಣಿಸುತ್ತಿದೆ. ಕಾಳಿದಾಸನ ಕವಿತೆ ಪ್ರಧಾನತಃ ರಸಮಯವೇ ಆದರೂ ಇವುಗಳಲ್ಲಿ ಧರ್ಮಸಮಸ್ಯೆ ವ್ಯಂಗ್ಯವಾಗಿ ಸ್ಫುರಿಸುತ್ತಲೇ ಇರುವುದು.

ಕಾಳಿದಾಸನ ಕೃತಿಗಳೆಲ್ಲವರಲ್ಲೂ, ಅದರಲ್ಲೂ ರಘುವಂಶ ಕುಮಾರ ಸಂಭವಗಳಲ್ಲಿ, ವಿಕ್ರಮೋರ್ವಶೀಯ ಅಭಿಜ್ಞಾನ ಶಾಕುಂತಲಗಳಲ್ಲಿ, ಈ ಸಮಸ್ಯಾಧ್ವನಿಯು ಚೆನ್ನಾಗಿ ಕೇಳಿಬರುತ್ತಿದೆ. ಕಾಳಿದಾಸನ ಕೃತಿಗಳಲ್ಲಿ ಕಾಣುವ ಸಮಸ್ಯೆಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. ಒಂದು— ಜೀವನಭೋಗ ಸಮಸ್ಯೆ; ಎರಡು - ಪ್ರೇಮಭಾವ ಸಮಸ್ಯೆ. ಈ ಎರಡೂ ಕಾಳಿದಾಸನ ಕೃತಿಗಳಲ್ಲಿ ಪರಸ್ಪರ ಸಮ್ಮಿಳಿತವಾಗಿ ಕಾಣಬಹುದಾದರೂ. ಒಂದೊಂದು ಕಾವ್ಯದಲ್ಲಿ ಇವುಗಳಲ್ಲಿ ಒಂದೊಂದು ಪ್ರಸ್ಫುಟವಾಗಿ ಧ್ವನಿಸಿರುವುದರಿಂದ, ಇವೆರಡು ಸಮಸ್ಯೆಗಳನ್ನೂ ವರ್ಗೀಕರಿಸುತ್ತಿದ್ದೇನೆ.

ಒಟ್ಟಿನಲ್ಲಿ ಕಾಳಿದಾಸನ ಕಾವ್ಯಗಳೆಲ್ಲದರಲ್ಲಿಯೂ —ಅವುಗಳಲ್ಲಿಯೂ ರಘುವಂಶ ಶಾಕುಂತಲಗಳಲ್ಲಿ—ಈ ಜೀವಿತ ಭೋಗಸಮಸ್ಯೆ ಸ್ಪಷ್ಟವಾಗಿ ಕಂಡುಬರುತ್ತದೆ. ಇಂದ್ರಿಯ ಗೋಚರವಾದ ಸೌಂದರ್ಯವು ಕಾಳಿದಾಸನ ಕವಿತೆಯಲ್ಲಿ ಪ್ರತಿಫಲಿಸಿದಷ್ಟು ಮಹೋಜ್ವಲವಾಗಿ ಮತ್ತಿತರ ಸಂಸ್ಕೃತ ಕವಿಗಳಲ್ಲಿ ಎಲ್ಲಿಯೂ ಸ್ಫುರಿಸದು. ಇದು ಈ ಕವಿತೆಯಲ್ಲಿರುವ ಪ್ರತ್ಯೇಕ ಗುಣ.

ರಘುವಂಶದಲ್ಲಿ ಇಂದುಮತಿಯ ಮರಣಾನಂತರದಲ್ಲಿ, ವಸಿಷ್ಠನು ಅಜನನ್ನು ಸಂತವಿಸುವ ಸಮಯದಲ್ಲಿ, ಶರೀರಧಾರಿಗಳಿಗೆ ಮರಣವೇ ಪ್ರಕೃತಿಯೆಂದೂ, ಜೀವಿತವೇ ವಿಕೃತಿಯೆಂದೂ ಪ್ರಬೋಧಿಸುತ್ತಾನೆ. ಅನಂತರ— "ಕ್ಷಣವಾದರೂ ಉಸಿರಾಡುತ್ತ ಜೀವಿಸಲು ಸಾಧ್ಯವಾಗುವ ವ್ಯಕ್ತಿ ತುಂಬ ಅದೃಷ್ಟವಂತನಲ್ಲವೇ"—ಎಂದು ವಸಿಷ್ಠನು ಅಜನೊಡನೆ ಹೇಳಿ ಒಕ್ಕಣಿಸುತ್ತಾನೆ. ಇಂದುಮತಿಯ ಮರಣ ಕಾರಣದಿಂದ ಅಜನನ್ನು ಕುರಿತು

ವಸಿಷ್ಠನು ಹೇಳಿದ ಈ ಸೂಕ್ತಿಗಳು ತುಂಬ ಸಂದರ್ಭೋಚಿತವಾಗಿ ಸರಿ ಹೋಗಿವೆ. ಆದರೆ ಸೂಕ್ಷ್ಮವಾಗಿ ಕಾಳಿದಾಸನ ಕವಿತೆಯನ್ನು ಪರಿಶೀಲಿಸಿದವರಿಗೆ ಈ ಎರಡನೇ ವಾಕ್ಯವು ವಸಿಷ್ಠ ಸೂಕ್ತಿಯಾಗಿಯೇ ಅಲ್ಲದೆ ಕವಿ ಹೃದಯಾಂತರ್ಗತ ಭಾವವಾಗಿ ಸ್ಫುರಿಸಿಯೇ ತೀರುತ್ತದೆ. ನಿಜವಾಗಿ ಈ ವಾಕ್ಯವನ್ನು ಕಾಳಿದಾಸ ಕವಿಗೆ ಜೀವಿತ ಸೌಂದರ್ಯಾನುಭೂತಿಯ ಮೇಲಿರುವ ಮಮಕಾರವೆಲ್ಲಕ್ಕೂ ಪ್ರತಿನಿಧಿಯಾಗಿ ತೆಗೆದುಕೊಳ್ಳಬಹುದು. ಆದರೆ ಮರಣವೇ ಜೀವಿತಪ್ರಕೃತಿಯಾದುದರಿಂದ ಹಿಂದು ಮುಂದು ನೋಡದೆಯೇ ಭೋಗಲಾಲಸೆಯಲ್ಲಿ ಮೈಮರೆತು ಹೋಗುವುದೇ ಕಾಳಿದಾಸನ ಅಭಿಪ್ರಾಯವೆಂದು ತಿಳಿಯಬಾರದು. ನಿಜವಾಗಿ ಇಂಥ ಉನ್ಮತ್ತಲಾಲಸೆಯಿಂದುಂಟಾಗುವ ತೊಂದರೆಗಳೆಲ್ಲವನ್ನೂ ಈ ಮಹಾಕವಿ ಸಾಕಲ್ಯವಾಗಿ ಪರಿಶೀಲಿಸಿದವನೇ. ಆದ್ದರಿಂದಲೇ ಧರ್ಮಪರರಾದ ರಘುವಂಶೀಯರಲ್ಲಿ ಉದಯಿಸಿದ ಅಗ್ನಿವರ್ಣನಲ್ಲಿ ಈ ಉನ್ಮತ್ತ ಭೋಗಲಾಲಸೆಯ ಕಾರಣದಿಂದುಂಟಾದ ದುಷ್ಫಲಿತಗಳೆಲ್ಲವುಗಳನ್ನೂ ವರ್ಣಿಸದೆಯೇ ಕಾಳಿದಾಸನು ತನ್ನ ಕಾವ್ಯವನ್ನು ಸಮಾಪ್ತಿ ಮಾಡಲೇ ಇಲ್ಲ. ಈ ರೀತಿಯಾಗಿ ಅಗ್ನಿವರ್ಣನಲ್ಲಿ ಉಂಟಾದ ದುಷ್ಫಲಿತಗಳಿಂದ ಕವಿ ಭೋಗಲಾಲಸಾದಿ ದೋಷಗಳು ಪಾಠಕರ ಹೃದಯಗಳಲ್ಲಿ ಅಚ್ಚೊತ್ತುವಂತೆ ಧ್ವನಿಸುವಂತೆ ಮಾಡಿದ್ದಾನೆ. ಅಷ್ಟೇ ಅಲ್ಲದೆ ಕವಿಯು ಕಂಠೋಕ್ತಿಯಾಗಿ ಈ ವಿಷಯವನ್ನು ಖಂಡಿಸಲಿಲ್ಲ. ಒಂದು ಕಡೆಯಲ್ಲಿ ಮಾತ್ರ "ಸ್ವಾದುಭಿಸ್ತು ವಿಷಯೈರ್ಹತಸ್ತತೋ ದುಃಖಮಿಂದ್ರಿಯಗಣೋ ನಿವಾರ್ಯತೇ" ಎಂದು ಮಾತ್ರ ಹೇಳುತ್ತಾನೆ. "ಸ್ವಾದುಗಳಾದ ವಿಷಯಗಳಿಂದ ಆಕರ್ಷಿತವಾದ ಇಂದ್ರಿಯ ಸಮೂಹವನ್ನು ಪುನಃ ಹಿಂತಿರುಗಿಸುವುದು ತುಂಬ ದುಷ್ಕರ" ಎಂದಿದರ ಅರ್ಥ. ಇಷ್ಟು ತಟಸ್ಥವಾಗಿ ಹೇಳಿದ ಕವಿಯ ಸ್ವೀಯೋಕ್ತಿಯನ್ನು ಹಿಡಿದು, ಜೀವಿತ ಸೌಂದರ್ಯಾನುಭೂತಿಯ ಮೇಲೆ ಕವಿಗಿರುವ ಆಸಕ್ತಿ ಅನಾಸಕ್ತಿಗಳು ಮನೋಹರವಾದ ಸಮ್ಮೇಳನದಿಂದ ಪಾಠಕರಿಗೆ ಸ್ಫುರಿಸುತ್ತಲಿವೆ.

"ಅಭಿಜ್ಞಾನ ಶಾಕುಂತಲ"ದಲ್ಲಿ ಈ ಸಮಸ್ಯೆ ಮತ್ತಷ್ಟು ಸ್ಪಷ್ಟವಾಗಿ ಕಂಡುಬರುತ್ತಿದೆ. ಈ ನಾಟಕದಲ್ಲಿ ಪಾಠಕರಿಗೆ ಅನೇಕ ವಿಧವಾಗಿ ವ್ಯಂಗ್ಯಗಳು ಧ್ವನಿಸುತ್ತವೆ. ಒಂದು ವಿಧವಾಗಿ ನೋಡಿದರೆ ಇದು ಭೋಗಪರನಾದ ದುಷ್ಯಂತನ ಜೀವಿತಕ್ಕೂ, ಅನಾಸಕ್ತರಾದ ಅರಣ್ಯವಾಸಿಗಳ ಜೀವಿತಕ್ಕೂ

ಇರುವ ತಾರತಮ್ಯವನ್ನು ಚಿತ್ರಿಸುವ ರೂಪಕದ ಹಾಗೆ ಕಂಡುಬರುತ್ತದೆ. ಶಕುಂತಲೆ ತಾಪಸ ಕನ್ಯೆ. ತಾಪಸಧರ್ಮಾಚರಣೆಯು ಈಕೆ ಇಡುವ ಪ್ರತಿ ಅಡಿಯಲ್ಲಿಯೂ ಧ್ವನಿಸುತ್ತಿರುತ್ತದೆ. ಇನ್ನು ದುಷ್ಯಂತನ ಪಂಥವೇ ಬೇರೆ. ಇವನು ಬಹುಭಾರ್ಯಾಸಕ್ತನು. ಅಂತಃಪುರದಲ್ಲಿ, ಇವನಿಂದ ಒಂದು ಸಾರಿ ಅತ್ಯಾದರಣೆಗೊಂಡು, ಆ ತರುವಾಯ ಉಪೇಕ್ಷಿತಳಾದ ಹಂಸಪದಿಕೆ ವ್ಯಂಗ್ಯವಾಗಿ ಇವನನ್ನು ಕುರಿತು ಹಾಡಿದ ಹಾಡಿನಿಂದಲೇ ಇವನ ಭೋಗ ಪರಾಯಣತೆ ಪಾಠಕರಿಗೆ ಚೆನ್ನಾಗಿ ತಿಳಿದುಹೋಗುತ್ತದೆ.

ವ್ಯಾಸಭಾರತದಲ್ಲಿನ ದುಷ್ಯಂತನಿಗೂ, ಕಾಳಿದಾಸನ ಶಾಕುಂತಲದಲ್ಲಿನ ದುಷ್ಯಂತನಿಗೂ ಎಲ್ಲಿಯೂ ಹೋಲಿಕೆ ಕಂಡುಬರದು. ಭಾರತದ ದುಷ್ಯಂತನು ಆಶ್ರಮದಿಂದ ತಿರುಗಿಬಂದ ತರುವಾಯ, ಮುಖ್ಯವಾಗಿ ಶಕುಂತಲೆಯ ವಿಚಾರವನ್ನೇ ಮರೆತುಬಿಡುತ್ತಾನೆ. ಆದರೂ ಅಶರೀರವಾಣಿಯು ಆತನಿಗೆ ಆಸರೆಯಾಗಿ ನಿಂತು "ಶಕುಂತಲೆಯು ನಿನ್ನ ಭಾರ್ಯೆಯಲ್ಲವೇ!" ಎಂದು ಎಚ್ಚರಿಸುವುದು. ಪ್ರಭುಗಳು ಅಡ್ಡದಾರಿ ಹಿಡಿದಾಗ ಅಶರೀರವಾಣಿ ಅವರನ್ನೆಚ್ಚರಿಸುವುದೂ, ಮತ್ತೆ ಅವರು ಸರಿಯಾದ ಮಾರ್ಗದಲ್ಲಿ ಬಂದು ಬೀಳುವುದೂ, ಆ ಕಾಲದಲ್ಲಿ ಒಂದು ರೂಢಿಯಾಗಿದ್ದಿರಬಹುದು!

ಆದರೆ ಕಾಳಿದಾಸನು ಮಾತ್ರ ದುರ್ವಾಸ ಶಾಪ ವೃತ್ತಾಂತವೊಂದನ್ನು ಕಲ್ಪಿಸಿ, ದುಷ್ಯಂತನ ಸ್ವಭಾವಕ್ಕೆ ಬಹಳಮಟ್ಟಿಗೆ ಮೆರುಗುಕೊಟ್ಟಿದ್ದಾನೆ. ಆದರೂ ಆತನ ಬಹುಭಾರ್ಯಾಸಕ್ತಿಗೆ ಮಾತ್ರ ಎಲ್ಲಿಯೂ ಲೋಪಬರಲೆಡೆ ಗೊಡಲಿಲ್ಲ. ಪತಿಯು ತಿರಸ್ಕರಿಸಿದರೂ ತಪಸ್ವಿನಿಯಾಗಿ ಆತನನ್ನೇ ಅನುಸರಿ ಸುತ್ತ ಕಾಲ ತಳ್ಳಿದ ಶಕುಂತಲೆಯ ಹತ್ತಿರ ನಿಲ್ಲುವಾಗ ದುಷ್ಯಂತನು ದೀವಿಟಿಗೆಯ ಮುಂದೆ ದೀಪದಂತೆ ತರತರಿಸುತ್ತಾನೆ. ಈ ವಿಧವಾದ ಶಕುಂತಲಾ ದುಷ್ಯಂತರ ತಾರತಮ್ಯ ಪ್ರದರ್ಶನವ್ಯಂಗ್ಯದಿಂದ ಕವಿ ಭೋಗ ಪರಾಯಣತೆಯಲ್ಲಿರುವ ಲೋಪಗಳನ್ನು ಬೆರಳೆತ್ತಿ ತೋರಿಸುತ್ತಿದ್ದಂತೆಯೇ ಕಂಡುಬರುತ್ತದೆ.

ಅಭಿಜ್ಞಾನ ಶಾಕುಂತಲವನ್ನು ಮತ್ತೊಂದು ವಿಧವಾಗಿ ಕೂಡ ಪರಿ ಶೀಲಿಸಬಹುದು. ಕಾಳಿದಾಸ ಮಹಾಕವಿಯ ಕಾಲನಿರ್ಣಯವು ಇಲ್ಲಿಯವರೆಗೆ

ಸ್ಪಷ್ಟವಾಗಿ ತಿಳಿದು ಬಂದಿಲ್ಲವಾದರೂ, ಈತನು ತನ್ನ ನಿವಾಸಭೂಮಿಯು ಸರ್ವಸಂಪತ್ ಸಮೃದ್ಧವಾಗಿದ್ದ ಕಾಲದಲ್ಲಿ ಜನಿಸಿದವನಾಗಿದ್ದಿರಬಹುದೆಂದಾದರೂ ವಾಚಕರಿಗೆ ಸ್ಪಷ್ಟವಾಗಿಯೇ ತೋರುತ್ತದೆ. ವಿಮರ್ಶಕರನೇಕರು ಗುಪ್ತಸಾಮ್ರಾಜ್ಯವು ಸರ್ವೋಚ್ಚಸ್ಥಿತಿಯಲ್ಲಿದ್ದಾಗ ಕಾಳಿದಾಸ ಕವಿ ಹುಟ್ಟಿರಬಹುದೆಂದು ಹೇಳಿದ್ದಾರೆ. ಯಾವುದು ಹೇಗಿದ್ದರೂ ಕಾಳಿದಾಸನ ಕವಿತೆಯಲ್ಲಿ, ಭಾರತದೇಶ ಚರಿತ್ರೆಯು ಸರ್ವಸಮೃದ್ಧವಾದೊಂದು ಸ್ವರ್ಣಯುಗವು ಪ್ರತಿಭವಿಸಿದ ವಿಷಯದಲ್ಲಿ ಅಭಿಪ್ರಾಯ ಭೇದವಿದ್ದಂತೆ ತೋರದು.

ಆದರೆ ಕಾಳಿದಾಸ ಕವಿ ಆ ಕಾಲದಲ್ಲಿ ಮಿತಿಮೀರಿದ ಭೋಗಾಸಕ್ತಿಯಲ್ಲಿ ಮೈಮರೆತ ತಾತ್ಕಾಲಿಕ ನಾಗರಿಕ ಜೀವಿತವನ್ನು ವ್ಯಂಗವಾಗಿ ಅಧಿಕ್ಷೇಪಿಸುತ್ತ ತನ್ನ ಕಾವ್ಯನಾಟಕರಚನೆಗುಪಕ್ರಮಿಸಿದಂತೆ ಕಂಡುಬರುತ್ತದೆ. ಅಭಿಜ್ಞಾನ ಶಾಕುಂತಲದಲ್ಲಿ ಆಶ್ರಮ–ನಗರ ಜೀವಿತಗಳ ತಾರತಮ್ಯ ಪರಿಶೀಲನೆ ಚೆನ್ನಾಗಿ ಸೂಕ್ಷ್ಮವಾಗಿ ಸಾಗಿದೆ. ಇದಕ್ಕೆ ಶಕುಂತಲೆಯ ಸಂಗಡ ಹೊರಟುಬಂದ ಕಣ್ವಶಿಷ್ಯರ ಸೂಕ್ತಿಗಳನ್ನಾಧರಿಸಬಹುದು. ಇವರಿಬ್ಬರೂ ಕೇವಲ ಆಶ್ರಮವಾಸಿಗಳು. ಮೊತ್ತಮೊದಲಾಗಿ ಕಣ್ವನ ಆಜ್ಞಾನುಸಾರವಾಗಿಯೇ ಇವರು ದುಷ್ಯಂತನ ನಗರಕ್ಕೆ ಬಂದಂತೆ ಕಾಣುತ್ತಾರೆ. ಇವರಿಬ್ಬರ ಶ್ಲೋಕಗಳು ನಾಗರಿಕ ಜೀವನದಲ್ಲಿರುವ ಬೀಭತ್ಸವನ್ನು ಚೆನ್ನಾಗಿ ವಿವರಿಸುತ್ತವೆ.

"ಮಹಾಭಾಗಃ ಕಾಮಂ ನರಪತಿರಭಿನ್ನಸ್ಥಿತಿರಸೌ
ನ ಕಶ್ಚಿತ್ ವರ್ಣಾನಾಮಪಥಮಪಕೃಷ್ಟೋಽಪಿ ಭಜತೇ
ತಥಾಪೀದಂ ಶಶ್ವತ್ಪರಿಚಿತವಿವಿಕ್ತೇನ ಮನಸಾ
ಜನಾಕೀರ್ಣಂ ಮನ್ಯೇ ಹುತವಹಪರೀತಂ ಗೃಹಮಿವ"

ಇದು ಕಣ್ವಶಿಷ್ಯರಲ್ಲಿ ಮೊದಲಿನವನೆಂದ ಶ್ಲೋಕ. ಇವರ ಅಭಿಪ್ರಾಯವಿದು. "ಈ ನರಪತಿ ಮಹಾನುಭಾವನು. ಇವನು ಒಂದು ಕ್ಷಣವಾದರೂ ಎಚ್ಚರ ತಪ್ಪದೆ ತನ್ನ ರಾಜಧರ್ಮವನ್ನು ನಿರ್ವಹಿಸುತ್ತಿದ್ದಾನೆ. ವರ್ಣಗಳಲ್ಲಿ ಅಧಮವರ್ಣಸ್ಥರು ಕೂಡ ಕೆಟ್ಟಮಾರ್ಗ ಹಿಡಿಯಲು ಹೋಗುವುದಿಲ್ಲ. ಆದರೂ ವಿವಿಕ್ತಮನಸ್ಸಿನಿಂದ ಇದೆಲ್ಲವನ್ನೂ ಪರಿಶೀಲಿಸುತ್ತಿರುವ ನನಗೆ ಈ ಜನಾಕೀರ್ಣ

ವಾದ ನಗರವು ಅಗ್ನಿಸಂಸರ್ಗವಾದ ಭವನದಂತೆ ಭಾಸಿಸುತ್ತದೆ!" ನಗರವು ಅಗ್ನಿಪರೀತವಾದ ಗೃಹದಂತೆ ಇರುವುದೆಂಬ ಈ ಉಪಮಾನದಿಂದ ಕಾಳಿದಾಸನೆಷ್ಟು ಸೂಕ್ಷ್ಮವಾಗಿ ನಾಗರಿಕ ಜೀವನದ ಬೀಭತ್ಸತೆಯನ್ನು ನಮ್ಮ ಕಣ್ಣಿಗೆ ಕಟ್ಟುತ್ತಿದ್ದಾನೆಯೋ ಊಹಿಸಿಕೊಳ್ಳಬಹುದು.

ಎರಡನೆಯ ಶಿಷ್ಯನೆಂದ ಶ್ಲೋಕ ಕೂಡ ಆಶ್ರಮ ಜೀವಿತಕ್ಕೂ, ನಾಗರಿಕಜೀವಿತಕ್ಕೂ ಇರುವ ತಾರತಮ್ಯವನ್ನು ಸ್ಪಷ್ಟವಾಗಿ ಪ್ರತಿಫಲಿಸುತ್ತಿವೆ.

"ಅಭ್ಯಕ್ತಮಿವ ಸ್ನಾತಃ,
ಶುಚಿರಶುಚಿಮಿವ, ಪ್ರಬುದ್ಧ ಇವ ಸುಪ್ತಮ್
ಬದ್ಧಮಿವ ಸ್ವೈರಗತಿ
ರ್ಜನಮಿಹ ಸುಖಸಂಗಿನಮವೈಮಿ"

ಸ್ನಾನ ಮಾಡಿದವನಿಗೆ ಶರೀರವೆಲ್ಲ ತೈಲದಿಂದ ಲೇಪಿಸಿಕೊಂಡ ವ್ಯಕ್ತಿ, ಶುಚಿಯಾದವನಿಗೆ ಅಶುಚಿಯಾದ ಮನುಷ್ಯ, ಎಚ್ಚರವಾಗಿರುವವನಿಗೆ ನಿದ್ದೆ ಹೋಗುವವನು, ಸ್ವೇಚ್ಛಾವಿಹಾರಿಗೆ ಖೈದಿ—ಕಂಡುಬರುವಂತೆ ನನಗೀ ಸುಖಾಸಕ್ತರಾದ ಜನರು ಕಾಣಬರುತ್ತಿದ್ದಾರೆಂದು ಇದರ ಭಾವ. ಇಲ್ಲಿ ಕವಿ ಆಶ್ರಮವಾಸಿಗಳಾಗಿ ನಿರ್ಲಿಪ್ತರಾದ ಜನರಿಗೂ ನಾಗರಿಕರಾಗಿ ಸುಖಲಿಪ್ತರಾದ ಜನರಿಗೂ ತಾರತಮ್ಯವನ್ನು ತೋರಿಸುವುದಕ್ಕೆ ನಾಲ್ಕು ಉಪಮಾನಗಳನ್ನು ಉಪಯೋಗಿಸಿದ್ದಾನೆ. ಈ ನಾಲ್ಕು ಉಪಮಾನಗಳನ್ನು ಬಳಸಿರುವುದರಲ್ಲಿ ತುಂಬ ಅಂತರಾರ್ಥವಿದೆ. ಇವು ಸುಖನಿರ್ಲಿಪ್ತರ ಶಾರೀರಿಕ ಮಾನಸಿಕ ಪರಿಸ್ಥಿತಿಗಳನ್ನು ತುಂಬ ಸೂಕ್ಷ್ಮವಾಗಿ ಪ್ರದರ್ಶಿಸುವ ಉಪಮಾನಗಳು. ಇವೆರಡು ಶ್ಲೋಕಗಳೇ ಅಲ್ಲದೆ ಆಖಂಡವಾಗಿ ಅಭಿಜ್ಞಾನ ಶಾಕುಂತಲವೆಲ್ಲ ನಾಗರಿಕ ಜೀವನದ ಮೇಲೆ ಒಂದು ವ್ಯಂಗ್ಯಾವಹೇಳನವಾಗಿ ತೆಗೆದುಕೊಳ್ಳಬಹುದು.

ಇದಕ್ಕೆ ಮೊದಲು ಕಾಳಿದಾಸನ ಪ್ರಬಂಧಗಳಲ್ಲಿ ಕಾಳಿದಾಸ, ಕವಿತೆಯಲ್ಲಿ ಕಂಡುಬರುವ ಅನಾಸಕ್ತಿ ಜೀವಿತವನ್ನೆದುರುಗೊಳ್ಳದ ವೈರಾಗಿಧೋರಣೆಯಲ್ಲವೆಂದೂ, ಅವನ ಜೀವಿತ ಭೋಗಾಸಕ್ತಿಯಲ್ಲಿಯೇ ಅಂತರ್ಲೀನವಾದ

ನಿರ್ಲಿಪ್ತತೆ ಕೂಡ ಇರುವುದೆಂದೂ ಸೂಚಿಸಿದ್ದೇನೆ. (ಇಲ್ಲಿಗೆ ಇದು ಅನ್ವಯಿಸದು). ಈ ದೃಷ್ಟಿಯಲ್ಲಿ ಅವಲೋಕಿಸಿದರೇಯೆ ಕಾಳಿದಾಸನ ಜೀವಿತ ಸೌಂದರ್ಯಭುಕ್ತಿಯಲ್ಲಿರುವ ಪರಿಪೂರ್ಣತೆ ಚೆನ್ನಾಗಿ ಅವಗಾಹನವಾಗುತ್ತದೆ. ಆದರೆ ಕಾಳಿದಾಸನ ಕವಿತೆಯಲ್ಲಿ ಒಂದು ವೈಚಿತ್ರ್ಯ ಕಂಡುಬರುತ್ತದೆ. ಈ ಕವಿ ತನ್ನ ಕಾಲದಲ್ಲಿರುವ ವಿಶೃಂಖಲ ಭೋಗಾನುಭೂತಿಯಲ್ಲಿರುವ ದೋಷಗಳನ್ನು ವ್ಯಂಗ್ಯವಾಗಿ ಧ್ವನಿಸುತ್ತಿರುತ್ತಾನೆಂದುಕೊಂಡಿದ್ದೇವೆ. ಆದರೂ ಕೇವಲ ವೈರಾಗಿಧರ್ಮವನ್ನು ಉಪದೇಶಿಸದೆ ತನ್ನ ಕವಿತೆಯಲ್ಲಿ ಸರ್ವತ್ರ ಜೀವಿತ ಭೋಗ ಸೌಂದರ್ಯವನ್ನು ಪ್ರತಿಫಲಿಸುತ್ತಿರುತ್ತಾನೆ. ಈ ವಿಧವಾದ ರಕ್ತಿ ವಿರಕ್ತಿಗಳ ಸಮದೃಷ್ಟಿ ಸಮನ್ವಯವು ಕಾಳಿದಾಸನಿಗೊಂದು ಅತಿಸೌಂದರ್ಯಾಪಾದನೆಯನ್ನುಂಟುಮಾಡಿದೆ.

ಕಾಳಿದಾಸ ಕವಿತೆಯಲ್ಲಿ ಪ್ರೇಮಭಾವ ಪರಿಶೀಲನೆ, ಅದಕ್ಕೆ ಸಂಬಂಧಿಸಿದ "ಸಮಸ್ಯೆ"ಗಳು ಕೂಡ ಧ್ವನಿಸುತ್ತಿವೆ ಎಂದಂದುಕೊಂಡಿದ್ದೇವೆ. ಈ ಕಾಲದಲ್ಲಿ 'ಪ್ರೇಮ' ಎಂಬ ಪದಕ್ಕೆ ತುಂಬ ಚಿತ್ರವಿಚಿತ್ರವಾದ ಅರ್ಥವಿಭೇದಗಳೇರ್ಪಟ್ಟಿವೆ. ಕೇವಲ ಶಾರೀರಕ ಕಾಮನವೇ ಮೊದಲುಗೊಂಡು ಶಾರೀರಕ ಮಾನಸಿಕ ಮಿಶ್ರವಾದ ಅನೇಕ ವಿಧ ಮಾನಸಿಕ ಪ್ರವೃತ್ತಿಗಳೆಲ್ಲಕ್ಕೂ ಒಂದೇ ಮಂತ್ರವಾಗಿ ನಮ್ಮ ಬರಹಗಾರರು ಈ ಪದವನ್ನು ಬಳಸುತ್ತಿದ್ದಾರೆ. ಕಾಳಿದಾಸಕವಿತೆಯಲ್ಲಿ ಈ ಸಮಸ್ಯಾಪರಿಶೀಲನೆ ತುಂಬ ಸೂಕ್ಷ್ಮವಾಗಿ ನಡೆದಿದೆ. ಅವನ ಕಾವ್ಯಗಳೆಲ್ಲದರಲ್ಲಿಯೂ ಈ ಪ್ರೇಮಭಾವ ಪರಿಶೀಲನೆ ಒಂದು ವಿಧವಾದ ಕ್ರಮಿಕ ಪರಿಣತಿಯನ್ನು ಹೊಂದಿದಂತೆ ಕಂಡುಬರುತ್ತದೆ. ಆಯಾ ಕಾವ್ಯಗಳಲ್ಲಿಯೂ ನಾಟಕಗಳಲ್ಲಿಯೂ ಈ ಪರಿಣಾಮವು ಹೇಗೆ ಬೆಳೆದುಬಂದಿದೆಯೋ ಮುಂದೆ ನೋಡೋಣ.

"ಋತು ಸಂಹಾರ"ವು ಪ್ರಧಾನವಾಗಿ ಪ್ರಕೃತಿ ವರ್ಣನಾಪರವಾದ ಕಾವ್ಯ. ಕಾಳಿದಾಸನು ತನ್ನ ಪ್ರೇಯಸಿಯನ್ನು ಸಂಬೋಧಿಸುತ್ತ ಈ ಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ ಪ್ರಕೃತಿವರ್ಣನೆಗೆ ಬಂದ ಪ್ರಾಧಾನ್ಯ ಪ್ರೇಮಭಾವಕ್ಕೆ ಬರಲೇ ಇಲ್ಲ. ಇದರಲ್ಲಿ ಕವಿಯ ಪ್ರೇಮವು ಅಂಕುರಾಕಾರದಲ್ಲಿದಯೇ ಹೊರತು, ಅದಕ್ಕಿಂತ ಪರಿಣತಿ ಹೊಂದಲಿಲ್ಲ.

ಈ ವಿಷಯದಲ್ಲಿ ಇದಾದ ಮೇಲೆ ಪರಿಗಣನಾ ಯೋಗ್ಯವಾದ ಕಾವ್ಯವೆಂದರೆ "ಮೇಘದೂತ". ಈ ಕಾವ್ಯರಚನೆಯ ಕಾಲಕ್ಕೆ ಕವಿ ಕೇವಲ ವ್ಯಕ್ತಿಗತ ಭಾವಾಭಿವ್ಯಕ್ತಿಯನ್ನು ಬಿಟ್ಟು ಯಕ್ಷನ ತೆರೆಮರೆಯಲ್ಲಿ ಸ್ವೀಯಭಾವ ಪ್ರಕಟನೆಯನ್ನು ಮಾಡುತ್ತಿದ್ದಾನೆ. ಕವಿಯು ಇಲ್ಲಿ ಯಕ್ಷನ ಪ್ರೇಮವನ್ನು ಸಾಮಾನ್ಯ ಮಾನವಪ್ರೇಮವಾಗಿಯೇ ವ್ಯಕ್ತೀಕರಿಸಿದ್ದರೂ, ಇದರೊಡನೆ ಆಧ್ಯಾತ್ಮಿಕ ಸಮಸ್ಯೆಗಳನ್ನಾಗಲಿ, ಧಾರ್ಮಿಕ ಸಮಸ್ಯೆಗಳನ್ನಾಗಲಿ ಜತೆಗೂಡಿಸಲಿಲ್ಲ. 'ಮೇಘಸಂದೇಶ'ದಲ್ಲಿ ಮಾನವಸಹಜವಾದ ಸರಳ ಪ್ರೇಮಭಾವವು ಚೆನ್ನಾಗಿ ಅಭಿವ್ಯಕ್ತವಾಗಿ ಸಂಪೂರ್ಣ ಪರಿಣತಿಯನ್ನು ಪಡೆದಿದೆ.

'ಮೇಘಸಂದೇಶ'ದಲ್ಲಿನ ಕಾಳಿದಾಸನ ಕವಿತೆಯನ್ನು ಕುರಿತು ಇಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ಕಾಳಿದಾಸನ ಕವಿತಾ ಸ್ವರೂಪವು ಬಹಳವಾಗಿ ಈ ಕಾಲದ ಭಾವಕವಿತೆಗೆ (Lyric) ಸಮಾನವಾದುದೆಂದು ಕೆಲವರು ವಿಮರ್ಶಕರು ಹೇಳುತ್ತಾರೆ. ಆದರೂ ಕಾಳಿದಾಸನ 'ಮೇಘದೂತ'ವು ಪ್ರೇಮಕವಿತೆಗೆ ಸರಿಯಾಗಿ ಅನ್ವಯಿಸದು. ಪಾಶ್ಚಾತ್ಯ ವಿಮರ್ಶಸಾಹಿತ್ಯದಲ್ಲಿನ ಸಂಪ್ರದಾಯ ಕವಿತೆ (Classic), ಭಾವಕವಿತೆ (Lyric) ಮೊದಲಾದ ವಿಭಾಗಗಳು ನಮ್ಮ ಪ್ರಾಚೀನ ಸಾಹಿತ್ಯಕ್ಕೆ ಅನ್ವಯಿಸುವುದಿಲ್ಲ. ಈ ಕಾಲದ ನಮ್ಮ ಭಾವಗೀತೆಗಳ ಮೇಲೆ ಆಂಗ್ಲ ಭಾವಕವಿತಾಛಾಯೆಗಳು ಚೆನ್ನಾಗಿ ಬಿದ್ದಿವೆ. ಆಂಗ್ಲ ಭಾವಕವಿತೆಯಲ್ಲಿ ಆದರ್ಶಮಯ ಪ್ರಿಯಾನ್ವೇಷಣೆಯು ಅತ್ಯಧಿಕವಾಗಿ ಕಂಡುಬರುತ್ತಿದೆ. ಅನೇಕ ಸಾಂಪ್ರದಾಯಿಕ ಕಾರಣಗಳಿಂದ ಆಂಗ್ಲ ಸಾಹಿತ್ಯದಲ್ಲಿ ಈ ವಿಧವಾದ ದೃಷ್ಟಿಯು ಏರ್ಪಟ್ಟಿದೆ. ಕ್ರೈಸ್ತಮತ ಸಂಸ್ಕೃತಿ ಪ್ರಭಾವಗಳಿಂದ ಆ ಕಾಲದಲ್ಲಿನ ಪಾಶ್ಚಾತ್ಯ ಸಾಹಿತ್ಯದಲ್ಲಿ ಶಾರೀರಕ ಸಂಸರ್ಗದ ಮೇಲೆ ಒಂದು ವಿಧವಾದ ಐಹಿಕಭಾವವೇರ್ಪಟ್ಟಿದೆ. ಕ್ಯಾಥಲಿಕ್ ಮತ ಪ್ರಾಬಲ್ಯವಿದ್ದ ದೇಶದಲ್ಲಿ ಈ ಐಹಿಕಭಾವ ಮತ್ತಷ್ಟು ಹೆಚ್ಚಾಗಿ ವಿಜೃಂಭಿಸಿದಂತೆ ಕಂಡುಬರುತ್ತಿದೆ. ಮುಖ್ಯವಾಗಿ ಕ್ರೈಸ್ತಮತ ಸಂಸ್ಕೃತಿಯಲ್ಲಿಯೇ ಶಾರೀರಕಭೋಗಗಳ ಮೇಲೆ ಒಂದು ವಿಧವಾದ ಐಹಿಕ ಭಾವವೇರ್ಪಟ್ಟಿದೆ. ಜೀಸಸ್ ಶಿಲುಬೆಯ ಚಿಹ್ನೆ ಹೆಚ್ಚಾಗಿ ಈ ಅಭಿಪ್ರಾಯದ ಪ್ರೇರಕ ಚಿಹ್ನೆಯಾಗೇರ್ಪಟ್ಟಿರಬಹುದು. ಕ್ರಮವಾಗಿ ಈಚೆಗೆ ಬಂದ

ಪಾಶ್ಚಾತ್ಯ ಸಾಹಿತಿಗಳು ಕೆಲವರು ಈ ಭಾವದ ಮೇಲೆ ಒಂದು ದೊಡ್ಡ ಕ್ರಾಂತಿಯನ್ನು ಎಬ್ಬಿಸಿ ತಮ್ಮ ರಚನೆಯಲ್ಲಿ ಶಾರೀರಕ ಭೋಗಸ್ಕೆ, ಕಾಮ ಪ್ರವೃತ್ತಿಗೆ ಅಗ್ರತಾಂಬೂಲವನ್ನು ಕೊಟ್ಟರು. ಡಿ. ಎಚ್. ಲಾರೆನ್ಸ್ ಎಂಬಾತನು ಈ ವರ್ಗಕ್ಕೆ ಸೇರಿದ ಪ್ರಮುಖರಚಯಿತ. ಆದರೆ ಇದು ಈಚಿನ ಕಾಲದಲ್ಲಿ ಬಂದ ಒಗ್ಗರಣೆ. ಆಂಗ್ಲ ಭಾವಕವಿತಾ ಯುಗವು ಉಚ್ಚಸ್ಥಿತಿಯಲ್ಲಿದ್ದ ಕಾಲದಲ್ಲಿ ಈ ಭಾವನಾ ಜಗತೀವಿಹಾರವು ವಿಶೃಂಖಲ ವಾಗಿ ಚೆನ್ನಾಗಿ ಸಾಗಿದೆ. ಆ ಕವಿತಾಛಾಯೆಯಲ್ಲಿ ಬಿದ್ದ ಇಂದಿನ ತೆಲುಗು ಭಾವಕವಿತೆಯಲ್ಲಿ ಕೂಡ ಆ ಆದರ್ಶಪ್ರಿಯಾನ್ವೇಷಣೆ ಜರುಗಿದೆ.

ಆದರೆ ಭಾರತೀಯ ಸಂಸ್ಕೃತಿಯಲ್ಲಿ—ತತ್ರಾಪಿ ಕಾಳಿದಾಸನ ಕಾಲದ ಭಾರತೀಯ ಸಂಸ್ಕೃತಿಯಲ್ಲಿ ಇಂಥ ದೃಷ್ಟಿಯು ಎಂದೂ ಏರ್ಪಡಲಿಲ್ಲ. ನಿಜವಾಗಿ ಭಾರತೀಯ ಸಂಸ್ಕೃತಿಯಲ್ಲಿ ಉತ್ತಮ ಐಹಿಕಾಮುಷ್ಮಿಕ ಸಮನ್ವಯ ಕಂಡುಬರುತ್ತದೆ. ನಮ್ಮವರು ಈ ಐಹಿಕಾಮುಷ್ಮಿಕಗಳನ್ನೆಂದೂ ಪರಸ್ಪರ ವಿರುದ್ಧಗಳೆಂದು ಭಾವಿಸಲಿಲ್ಲ. ಅವರು ಮಾನವ ಜೀವಿತದಲ್ಲಿ ಪರಸ್ಪರ ಸಮನ್ವಿತವಾದ ಈ ಎರಡಕ್ಕೂ ಸಮುಚಿತವಾದ ಸಮಾನ ಸ್ಥಾನ ಗೌರವಗಳನ್ನು ಕೊಟ್ಟರು. ಆದರೆ ಭಾರತೀಯ ಚರಿತೆಯಲ್ಲಿ ಒಮ್ಮೊಮ್ಮೆ ಈ ಸಮನ್ವಯದ ಮರೆತುಹೋಗುವಿಕೆಯ ಕಾರಣದಿಂದ ಮಾನವ ಜಾತಿಗೆ ಅನೇಕ ಆಘಾತಗಳು ಉಂಟಾಗಿದ್ದರೆ ಆಗಿರಬಹುದು. ಅದು ಬೇರೆ ವಿಷಯ.

'ಮೇಘಸಂದೇಶ'ದಲ್ಲಿ ಮಾನವ ಸಹಜವಾದ ಆ ಪ್ರೇಮಭಾವವು ಸರ್ವಾಂಗಸುಂದರವಾಗಿ ಸಹಜ ಸ್ವರೂಪದಲ್ಲಿ ನಡೆದಿದೆ.

ಕಾಳಿದಾಸನ ಕವಿತೆಯಲ್ಲಿ ಬಂದಿರುವ ಪ್ರೇಮಭಾವವನ್ನು ಪರಿಣತಿ ದೃಷ್ಟ್ಯಾ ನೋಡಬೇಕಾದರೆ "ವಿಕ್ರಮೋರ್ವಶೀಯ" "ಮಾಳವಿಕಾಗ್ನಿಮಿತ್ರ" ಗಳನ್ನು ತೆಗೆದುಕೊಳ್ಳಬೇಕು. ರಚನೆಯನ್ನು ಗಮನಿಸಿ ಪರಿಶೀಲಿಸಿದರೆ, ಎಲ್ಲ ರೂಪಕಗಳಲ್ಲಿಯೂ 'ವಿಕ್ರಮೋರ್ವಶೀಯ'ವು ಎಲ್ಲಕ್ಕಿಂತಲೂ ಮೊದಲು ರಚಿಸಿದ ರೂಪಕದಂತೆ ಕಂಡುಬರುತ್ತದೆ. ಇದರಲ್ಲಿ ಕಾಳಿದಾಸನ ಕವಿತೆ

ಯೌವನೋದ್ರೇಕದಿಂದ ತುಂಬಿ ಹರಿಯುತ್ತದೆ. ಈ ನಾಟಕದಲ್ಲಿ ನಾಯಕನು ಉರ್ವಶಿಯನ್ನು ಬಿಟ್ಟು ಆಕೆಯ ವಿಯೋಗದಲ್ಲಿ ಲತೆಗಳು, ನದಿಗಳು, ಮೊದಲಾದುವೆಲ್ಲವೂ ಉರ್ವಶೀರೂಪ ಪರಿಣಾಮಗಳೆಂದು ಭಾವಿಸುತ್ತ ಉನ್ಮತ್ತನಾಗಿ ಹೋಗುತ್ತಾನೆ. 'ವಿಕ್ರಮೋರ್ವಶೀಯ', 'ಮಾಳವಿಕಾಗ್ನಿಮಿತ್ರ'ಗಳೆರಡರಲ್ಲೂ ಪ್ರೇಮವು ಮಾನವಲೋಕದ ಪರಿಧಿಯಲ್ಲೇ ಸಂಚರಿಸುತ್ತದೆ. 'ವಿಕ್ರಮೋರ್ವಶೀಯ'ದಲ್ಲಿ ಯೌವನಾವೇಶದಲ್ಲಿ ಮೇಲುಬ್ಬಿ ಹರಿದ ಅನುರಕ್ತಿ, 'ಮಾಳವಿಕಾಗ್ನಿಮಿತ್ರ'ದಲ್ಲಿ ತುಂಬ ಸ್ತಿಮಿತವಾಗಿ ಹೋಗಿದೆ. ಈ ನಾಟಕದ ಕಥಾವಸ್ತುವೆಲ್ಲ ಕೇವಲ ಒಂದು ಅಂತಃಪುರದ ಪ್ರೇಮಗಾಥೆ ಮಾತ್ರ. ಇದರ ರಚನಾಕಾಲದಲ್ಲಿ ಕವಿಯು ನಿಶ್ಚಿಂತನಾಗಿ ಕೇವಲ ಜೀವನ ಭೋಗ ಪರಾಯಣನಾಗಿ ಕಾಲಕ್ಷೇಪ ಮಾಡುತ್ತಿದ್ದಂತೆ ಕಾಣಿಸುತ್ತಾನೆ.

ಆ ತರುವಾಯ ಆ ಕ್ರಮದಲ್ಲಿಯೇ ಪರಿಗಣಿಸಲು ತಕ್ಕವು ರಘುವಂಶ ಅಭಿಜ್ಞಾನ ಶಾಕುಂತಲಗಳು. 'ರಘುವಂಶ'ರಚನಾಕಾಲಕ್ಕೆ ಮಹಾಕವಿಯ ಜೀವನ ದೃಷ್ಟಿಯಲ್ಲಿ ತೀವ್ರವಾದ ಪರಿವರ್ತನೆ ಜರುಗಿದಂತೆ ಕಾಣುತ್ತದೆ. 'ರಘುವಂಶ' ಮಹಾಕಾವ್ಯವು ಉದಾತ್ತವಾದ ಧಾರ್ಮಿಕ ದೃಷ್ಟಿಯಿಂದ ರಚಿಸಿದ ಕಾವ್ಯವೆಂದು ಹಿಂದಿನ ಕಾಳಿದಾಸ ವಿಮರ್ಶೆ ಪ್ರಬಂಧಗಳಲ್ಲಿ ಬರೆದಿರುವೆನು. ರಘುವಂಶದ ರಾಜರಲ್ಲಿ ಅಗ್ನಿವರ್ಣನಲ್ಲಿ ಧರ್ಮವಿರುದ್ಧವಾದ ಯಥೇಚ್ಛಾಭೋಗಪ್ರವೃತ್ತಿಯಿಂದ, ತದ್ದ್ವಾರಾ ಉಂಟಾದ ರಾಜಧರ್ಮಪರಿತ್ಯಾಗ ಕಾರಣದಿಂದ ಉಂಟಾದ ಫಲಿತಗಳೆಲ್ಲವನ್ನೂ ಕವಿಯು ಪಾಠಕರಿಗೆ ಕಣ್ಣಿಗೆ ಕಟ್ಟಿದಂತೆ ಪ್ರದರ್ಶಿಸಿದ್ದಾನೆ. 'ರಘುವಂಶ'ದಲ್ಲಿ ಮೊದಲು ವರ್ಣಿಸಿದ ರಾಜರ ಚರಿತ್ರೆಯೆಲ್ಲವೂ ಮಹಾಧರ್ಮಶಿಖರಗಳಂತೆ ಅತ್ಯುಚ್ಚಸ್ಥಿತಿಗೆ ಮುಟ್ಟಿಬಿಟ್ಟವೆ. ಆದರೆ ಈ ಅಗ್ನಿವರ್ಣನು ತನ್ನ ರಾಜ್ಯಧರ್ಮಗಳೆಲ್ಲಕ್ಕೂ ಬೆಂಕಿ ತಗುಲಿಸಿ, ನಿತ್ಯವೂ ಅಂತಃಪುರ ಭೋಗಗಳಲ್ಲಿ ಮುಳುಗಿ ತೇಲುತ್ತ ತನ್ನ ರಾಜ್ಯಧರ್ಮಗಳಿಗೆ ಪೂರ್ತಿಯಾಗಿ ತಿಲೋದಕಗಳನ್ನಿತ್ತನು. ಅತ್ಯಂತ ಭೋಗಲಾಲಸೆಯ ಕಾರಣದಿಂದ ಈತನ ಶರೀರದಲ್ಲಿ ರಾಜಯಕ್ಷ್ಮ ರೋಗ ಅಂಕುರಿಸಿದೆ. 'ರಘುವಂಶ'ದಲ್ಲಿ ಅನೂಚಾನವಾಗಿ ಬರುತ್ತಿದ್ದ ಯೌವರಾಜ್ಯಪಟ್ಟಾಭಿಷೇಕವು ಜರುಗದೆಯೇ ಅಗ್ನಿವರ್ಣನು ಈ ರೋಗದಿಂದ

ಸತ್ತಿದ್ದಾನೆ. ಈತನ ರಾಣಿಯರಲ್ಲಿ ಗರ್ಭವತಿಯಾಗಿದ್ದ ಒಬ್ಬಾಕೆಯ ಗರ್ಭಕ್ಕೆ ಜರುಗಿದ ಪಟ್ಟಾಭಿಷೇಕದೊಡನೆ ರಘುವಂಶೀಯರ ಆದರ್ಶಚರಿತ್ರೆ ಮುಗಿದು ಹೋಗುತ್ತದೆ,

ಆದರೆ ಇಲ್ಲಿ ಕವಿ ರಾಜಧರ್ಮನಿರ್ವಹಣೆಗೆ ಭೋಗಲೋಲುಪತೆಯ ಕಾರಣದಿಂದುಂಟಾದ ದುಷ್ಫಲಿತಗಳನ್ನು ಮಾತ್ರ ಧ್ವನಿಸುವಂತೆ ಮಾಡಿದ್ದಾನೆಯೇ ಹೊರತಾಗಿ, ಅದಕ್ಕಿಂತ ವಿಸ್ತೃತವಾದ ಮಾನವ ಜೀವಿತದಲ್ಲಿ ಧರ್ಮಾಚರಣೆಗೆ ವಿಶೃಂಖಲ ಭೋಗಾಸಕ್ತಿಯ ಕಾರಣದಿಂದುಟಾಗುವ ದುಷ್ಫಲಿತಗಳನ್ನು ಪ್ರದರ್ಶಿಸಲಿಲ್ಲ. ಈ ವಿಧವಾದ ಸೂಕ್ಷ್ಮ ಸೂಚನೆಯ ದ್ವಾರಾ ಸುವಿಶಾಲ ಮಾನವ ಜೀವಿತದ ಭೋಗಸಮಸ್ಯಾ ಪರಿಷ್ಕಾರವನ್ನು ಕೂಡ ಕವಿ ಧ್ವನಿಸುತ್ತಿದ್ದಾನೆಂದು ನಾವು ಇಲ್ಲಿ ಗ್ರಹಿಸಬೇಕಾಗಿದೆ.

"ಅಭಿಜ್ಞಾನ ಶಾಕುಂತಲ"ದಲ್ಲಿ ಕವಿಯ ಪ್ರೇಮಪರಿಣತಿ ಇನ್ನೊಂದು ವಿಧವಾಗಿ ಒಂದು ಅಂತಸ್ತು ಮೇಲೇರಿ ಹೋದಂತೆ ಕಾಣಿಸುತ್ತಿದೆ. 'ಮೇಘಸಂದೇಶ'ದಲ್ಲಿ ಹೆಚ್ಚಾದ ಕವಿಯ ಸ್ವೀಯ ವ್ಯಕ್ತಿಚ್ಛಾಯೆಗಳು 'ಮಾಳವಿಕಾಗ್ನಿಮಿತ್ರ'ಕ್ಕೆ ಬರುವುದರಲ್ಲಿ ಬಹಳ ಮಟ್ಟಿಗೆ ಲೋಪಿಸಿಹೋದುವು. 'ರಘುವಂಶ'ದಲ್ಲಿಯೂ ತತ್ರಾಪಿ 'ಶಾಕುಂತಲ'ದಲ್ಲಿಯೂ ಕವಿಯು ಮಾನವ ಜೀವನದೊಡನೆ ಹೆಣೆದುಕೊಂಡ ಅನುರಾಗ ಸಮಸ್ಯೆಗಳೆಲ್ಲವನ್ನೂ ಚೆನ್ನಾಗಿ ತಟಸ್ಥನಾಗಿ ಪರಿಶೀಲಿಸುತ್ತಿದ್ದಾನೆ.

'ಶಾಕುಂತಲ'ದಲ್ಲಿನ ಪ್ರೇಮಭಾವ ಮಾನವಲೋಕದ ಸರಹದ್ದುಗಳನ್ನು ದಾಟಿ ದಿವ್ಯಲೋಕೋನ್ಮುಖವಾಗಿದೆ. ಶಕುಂತಲೆಯ ಜನನಿ ಮೇನಕೆ. ಈಕೆ ಗಂಧರ್ವ ಸ್ತ್ರೀ. ವಿಶ್ವಾಮಿತ್ರನ ತಪಸ್ಸಮಾಧಿ ಲೋಕಭಯಂಕರವಾಗಿ ಪರಿಣಮಿಸಿದೆ. ಅದರಿಂದ ಭಯಭ್ರಾಂತನಾಗಿ ಹೋದ ದೇವೇಂದ್ರನು ಆತನ ತಪೋಭಂಗ ನಿಮಿತ್ತವಾಗಿ ಮೇನಕೆಯನ್ನು ಕಳಿಸಿದ್ದಾನೆ. ಮೇನಕೆಯ ಹಾವಭಾವಗಳಿಗೆ ಮುಗ್ಧನಾಗಿ ತಪೋಭ್ರಷ್ಟನಾದ ವಿಶ್ವಾಮಿತ್ರನಿಗೆ ಈ ಶಕುಂತಲೆ ಜನಿಸಿದ್ದಾಳೆ. ತರುವಾಯ ಪಶ್ಚಾತ್ತಪ್ತನಾದ ವಿಶ್ವಾಮಿತ್ರನು ಈ ಶಕುಂತಲೆಯನ್ನು ಪಕ್ಷಿಗಳ ರಕ್ಷಣೆಗೆ ಬಿಟ್ಟು ತನ್ನ ದಾರಿ ಹಿಡಿದು ತಾನು ಹೊರಟು

ಹೋಗಿ ಮೂಗುಬಾಯಿಗಳನ್ನು ಬಿಗಿದುಕೊಂಡು ಮತ್ತೆ ತಪಸ್ಸಿಗೆ ಕುಳಿತಿದ್ದಾನೆ. ಅನಂತರ ಈಕೆ ಧರ್ಮನಿರತನಾಗಿ ಆಶ್ರಮಧರ್ಮವನ್ನು ಅವಲಂಬಿಸಿದ ಕಣ್ವನ ಹತ್ತಿರ ಬೆಳೆದಿದ್ದಾಳೆ. ಈ ವಿಧವಾಗಿ ಶಕುಂತಲೆಯ ಪೂರ್ವ ಚರಿತ್ರೆಯನ್ನು ಪರಿಶೀಲಿಸಿದರೆ ಈಕೆಯ ಜೀವನಾಳಗಳಲ್ಲಿ ಧರ್ಮಧ್ವಂಸಕವಾದ ವಿಪ್ಲವೋದ್ರೇಕ ಚಿಹ್ನೆಗಳಿವೆಯೆನ್ನಬಹುದು. ಆದ್ದರಿಂದಲೇ ಈಕೆ ಆಶ್ರಮ ನಿಯಮಗಳನ್ನತಿಕ್ರಮಿಸಿ ತನಗೆ ತಾನೇ ಗಾಂಧರ್ವವಿವಾಹಕ್ಕೆ ಅಂಗೀಕರಿಸಿದ್ದು.

ಇನ್ನು ದುಷ್ಯಂತನ ವಿಷಯವನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿಲ್ಲ. ಇವನಿಗೆ ಈ ಮೊದಲೇ ಅಂತಃಪುರದಲ್ಲಿ ಕೆಲವರು ರಾಣಿಯರಿದ್ದಾರೆ. ಇವನು ಮೃಗಯಾವಿನೋದದ ಸಂದರ್ಭದಲ್ಲಿ ಮುನಿಕನ್ಯಾ ವ್ಯಾಮೋಹದಲ್ಲಿ ಸಿಕ್ಕಿಕೊಂಡಿದ್ದಾನೆ. ಇವನು ಕೂಡ ಆಶ್ರಮ ಮರ್ಯಾದೆಗಳನ್ನತಿಕ್ರಮಿಸಿದ್ದಾನೆ. ಗೌತಮಿಯಂಥ ವೃದ್ಧಸ್ತ್ರೀ ಆಶ್ರಮರಕ್ಷಕಳಾಗಿದ್ದರೂ ಆಕೆಯ ಪ್ರೇಕ್ಷ್ಯವಿಲ್ಲದೆ ಗಾಂಧರ್ವವಿಧಿ ಪ್ರಕಾರ ಶಕುಂತಲೆಗೆ ಕಂಕಣ ಕಟ್ಟಿದ್ದಾನೆ.

'ಅಭಿಜ್ಞಾನ ಶಾಕುಂತಲ'ದ ಪಂಚಮಾಂಕದಲ್ಲಿ ಶಕುಂತಲೆಯನ್ನು ರಾಜನು ತಿರಸ್ಕರಿಸಿದಾಗ ಗೌತಮಿಯು ರಾಜನೊಡನೆ ಹೇಳಿದ ಚಿಕ್ಕ ಶ್ಲೋಕದಲ್ಲಿ ಕವಿಯು ಈ ವಿಷಯಗಳನ್ನೆಲ್ಲ ಧ್ವನಿಸುತ್ತಿದ್ದಾನೆ:

" ನಾಪೇಕ್ಷಿತೋ ಗುರುಜನ
ಸ್ತ್ವಯೂನಯೂ ನ ಪೃಷ್ಟೋ ಬಂಧವಃ
ಏಕೈಕವೇವ ಚರಿತೇ
ಭಣಾಮಿ ಕಿಮೇಕ್ಕೈಕಸ್ಯ ? "

"ನೀನು ಈಕೆಯ ವಿವಾಹದ ವಿಷಯದಲ್ಲಿ ಗುರುಜನರ ಅಭಿಪ್ರಾಯವನ್ನು ಅಪೇಕ್ಷಿಸಲಿಲ್ಲ. ಈಕೆಯಾದರೂ ತನ್ನ ಬಂಧುಗಳನ್ನು ಕೇಳಲಿಲ್ಲ. ಈ ವಿಷಯದಲ್ಲಿ ಒಬ್ಬರಂತೆಯೇ ಏಕೀಭವಿಸಿ ವ್ಯವಹರಿಸಿದ ನಿಮ್ಮಿಬ್ಬರಿಗೂ ಪ್ರತ್ಯೇಕವಾಗಿ ನಾನೇನು ಹೇಳಬಲ್ಲೆ ?" ಎಂಬುದು ಇದರ ಭಾವ. ಈ ಶ್ಲೋಕವು ಪ್ರಸ್ತುತ ಪರಿಸ್ಥಿತಿ ಮಾತ್ರವನ್ನೇ ಅಲ್ಲದೆ ಶಕುಂತಲಾ ದುಷ್ಯಂತರ ಸ್ವೈರ ಗಾಂಧರ್ವವಿಧಿಯನ್ನೇ ತೀವ್ರವಾಗಿ ಅಧಿಕ್ಷೇಪಿಸುವಂತೆ ಧ್ವನಿಸುತ್ತಿದೆ

ಅನಂತರ ಶಕುಂತಲಾ ದುಷ್ಯಂತರು ಇಬ್ಬರೂ ಗಾಢವೇದನಾಪರಿತಪ್ತರಾಗಿ ಪುನೀತರಾಗಿದ್ದಾರೆ. ಇವರಿಬ್ಬರೂ ಪುನಃ ಮಾರೀಚಾಶ್ರಮದಲ್ಲಿ ಕೂಡಿದ್ದಾರೆ. ಇದು ಭೂಸ್ವರ್ಗಲೋಕಗಳಿಗೆ ಮಧ್ಯಮಾರ್ಗದಲ್ಲಿರುವ ದಿವ್ಯಾಶ್ರಮ ಪ್ರದೇಶ. ಇಲ್ಲಿ ಇವರ ಸಮಾಗಮ ಭೂಸ್ವರ್ಗಲೋಕಗಳ ಮಂಗಳೋದ್ವಾಹದಂತೆ ನಮ್ಮ ಕಣ್ಣುಗಳಿಗೆ ಸ್ಫುರಿಸುತ್ತವೆ. ಇಲ್ಲಿ ಶಕುಂತಲಾ ದುಷ್ಯಂತರ ಪ್ರೇಮಕಳೆ ಚಂದ್ರಕಳೆಯನ್ನು ಕೂಡಿದ ಕ್ಷೀರತರಂಗಗಳಂತೆ ಸ್ವರ್ಣಮಯವಾಗಿ ಸ್ತಿಮಿತವಾಗಿದೆ.

'ಶಾಕುಂತಲ'ವನ್ನೋದಿ ಮುಗ್ಧನಾದ ಗಯಟೆ ಮಹಾಕವಿ ತನ್ನ 'ಶಾಕುಂತಲ ಪ್ರಶಸ್ತಿ' ಎಂಬ ಕವಿತೆಯಲ್ಲಿ 'ಶಾಕುಂತಲ'ದಲ್ಲಿ ಸ್ವರ್ಗಮರ್ತ್ಯಲೋಕೋದ್ವಾಹವು ಜರುಗಿದೆಯೆಂದು ಪ್ರಶಂಸಿಸಿದ್ದಾನೆ. ಈ ಪ್ರಶಂಸೆಗೆ ಈ ಪ್ರೇಮಪರಿಣಾಮವೇ ಮುಖ್ಯ. ಅನೇಕ ವಿಧವಾಗಿ ಪ್ರಪಂಚ ಪ್ರಶಂಸೆಗಳನ್ನು ಪಡೆದುಕೊಂಡ 'ಅಭಿಜ್ಞಾನ ಶಾಕುಂತಲ'ದ ಗೌರವಕ್ಕೂ ಕಾಳಿದಾಸನ ಕವಿತಾ ಮಹತ್ವಕ್ಕೂ ಈ ಪರಿಣಾಮಪ್ರದರ್ಶನವೊಂದು ಮುಖ್ಯ ಕಾರಣವೆನ್ನಬೇಕು.

ಇನ್ನು "ಕುಮಾರ ಸಂಭವ" ಕಾವ್ಯವನ್ನು ತೆಗೆದುಕೊಳ್ಳೋಣ. ಇದರಲ್ಲಿ ಕಾಳಿದಾಸೀಯ ಪ್ರೇಮಪರಿಣತಿಯ ಪರಮಾವಧಿ ಕಂಡುಬರುತ್ತದೆ. ಇದರಲ್ಲಿ ನಾಯಿಕಾನಾಯಕರಿಬ್ಬರೂ ಜಗತ್ಸೃಷ್ಟಿಕಾರಕರಾದ ಪಾರ್ವತೀಪರಮೇಶ್ವರರು. ಸತೀದೇವಿ ದಕ್ಷಾಧ್ವರ ಧ್ವಂಸಾನಂತರ ಹಿಮವಂತನ ಮನೆಯಲ್ಲಿ ಪಾರ್ವತಿಯಾಗಿ ಹುಟ್ಟಿದ್ದಾಳೆ. 'ಕುಮಾರಸಂಭವ'ದಲ್ಲಿನ ಕಾಳಿದಾಸೀಯ ಪ್ರೇಮ ಪರಿಶೀಲನ ಗಾಂಭೀರ್ಯವು ಅನಿತರ ಸಾಧಾರಣವಾದುದು. ಪಾರ್ವತೀ ಪರಮೇಶ್ವರರಿಬ್ಬರೂ ಮಾನವತ್ವಸ್ಪರ್ಶವಿಲ್ಲದ ಕೇವಲ ದಿವ್ಯಸ್ವರೂಪರು. ಕಾವ್ಯದಲ್ಲಿ ಮಾತ್ರ ಇವರಿಬ್ಬರೂ ಸಾಮಾನ್ಯ ಮಾನವರಂತೆ ಕಷ್ಟಸುಖಗಳೆಲ್ಲವನ್ನೂ ಅನುಭವಿಸುತ್ತಿರುವಂತೆ ಕಾಣಿಸುತ್ತಾರೆ. ದೇವತೆಗಳು ಪರಮೇಶ್ವರನ ತಪೋಭಂಗವನ್ನು ಮಾಡಬೇಕಾಗಿದೆಯೆಂದು ಮನ್ಮಥನನ್ನು ಪ್ರಾರ್ಥಿಸುತ್ತಾರೆ. ಆದರೆ ದೇವತೆಗಳ ಪ್ರಯತ್ನ ವಿಫಲವಾಗಿಹೋಗಿದೆ. ಶಿವನ ಕೆಂಗಣ್ಣಿಗೆ ಸಿಕ್ಕಿ ಮನ್ಮಥನು ಭಸ್ಮವಾಗಿ ಹೋಗಿದ್ದಾನೆ. ಆದರೂ ಪಾರ್ವತಿಯು ಪಟ್ಟು ಬಿಡದೆ

ಪಂಚಾಗ್ನಿ ಮಧ್ಯದಲ್ಲಿ ನಿಂತುಕೊಂಡು ಘೋರತಪಸ್ಸು ಮಾಡಿದ್ದಾಳೆ. ಕಾಮದಹನ ಕಾರಣದಿಂದ ಇವರ ಅನುರಾಗದಲ್ಲಿ ಸಾಮಾನ್ಯವಾಗಿರುವ ಕಾಮ ಪ್ರವೃತ್ತಿ ಭಸ್ಮೀಭೂತವಾಗಿ ಹೋಗಿದೆಯೆಂದು ಕವಿಯು ಇಲ್ಲಿ ಸೂಚಿಸಿದ್ದಾನೆ. ಈಶ್ವರನು ಬ್ರಹ್ಮಚಾರಿಯ ವೇಷದಲ್ಲಿ ಪಾರ್ವತಿಯ ಭಾವಪರಿಶೀಲನೆ ಮಾಡಿ ಆಕೆಯಲ್ಲಿ ವಿವಾಹೋನ್ಮುಖವಾಗಿದ್ದಾನೆ. ಪಾರ್ವತೀ ಪರಿಣಯಾ ನಂತರದಲ್ಲಿ ಬ್ರಹ್ಮಾದಿಗಳು ಮನ್ಮಥನ ಸೇವೆಯನ್ನು ಸ್ವೀಕರಿಸಬೇಕೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತಾರೆ. ಮನ್ಮಥನು ಮರಳಿ ನವಮನ್ಮಥನಾಗಿದ್ದಾನೆ. ಆದರೆ ಈಶ್ವರನು ಇಲ್ಲಿ ಸ್ವೇಚ್ಛಾಕಟಾಕ್ಷದಿಂದ ಮಾತ್ರವೇ ಮನ್ಮಥನಿಗೆ ಸೇವಾಭಾಗ್ಯವನ್ನುಂಟುಮಾಡಿಕೊಡುತ್ತಾನೆಂದು ಕವಿಯು ಪಾಠಕರಿಗೆ ತಿಳಿಸುತ್ತಿದ್ದಾನೆ.

ಆದರೆ ಈಶ್ವರನ ಸ್ವೇಚ್ಛಾಪ್ರವೃತ್ತಿಯು ಕೂಡ ಕೇವಲ ವಿಶೃಂಖಲವಾದುದಲ್ಲ. ಈ ಪ್ರವೃತ್ತಿಗೆ ಮೂಲ ಲೋಕಸಂರಕ್ಷಣವೇ ಹೊರತು ಕೇವಲ ಭೋಗವಲ್ಲ.

ಈ ವಿಧವಾಗಿ 'ಕುಮಾರಸಂಭವ'ದಲ್ಲಿನ ಭೋಗ ವೈರಾಗ್ಯಗಳು, ಮಾನವತ್ವ ದಿವ್ಯತ್ವಗಳು, ಪರಸ್ಪರ ಸಮ್ಮೇಳನದಲ್ಲಿ ತಮ್ಮ ಪ್ರತ್ಯೇಕತೆಗಳನ್ನು ಬಿಟ್ಟು ಅರ್ಧನಾರೀಶ್ವರಮೂರ್ತಿಗಳಾಗಿ ಅದ್ವೈತತಾದಾತ್ಮ್ಯದಲ್ಲಿ ಲೀನವಾಗಿ ಹೋಗಿವೆ. ಬಹುಶಃ ಈ ಅಭಿಪ್ರಾಯವು ಪ್ರಧಾನವಾಗಿ ಸ್ಫುರಿಸುವಂತೆ ಮಾಡುವುದಕ್ಕೆ ಕಾಳಿದಾಸನು ಈ ಕಾವ್ಯವನ್ನು ಪರಮೇಶ್ವರನ ಭೋಗ ವರ್ಣನೆಯಿಂದಲೇ ಮುಗಿಸಿದ್ದಾನೆಂದು ತೋರುತ್ತದೆ. ಆದರೆ ಕಥೆಯನ್ನು ಇಷ್ಟು ಅಸಂಪೂರ್ಣವಾಗಿ ಮುಗಿಸಿರುವುದರಿಂದ ಕಾವ್ಯನಿರ್ಮಾಣಕ್ಕೆ ಲೋಪ ಬಂದಿದೆಯೆಂದು ಭಾವಿಸುವ ಆವಶ್ಯಕತೆಯಿಲ್ಲ. ಪಾರ್ವತೀ ಪರಮೇಶ್ವರರ ವಿವಾಹದಿಂದಲೇ ತದನಂತರ ಜರುಗುವ ಕುಮಾರಜನನ, ತಾರಕಾಸುರವಧೆಗಳನ್ನು ಆವಶ್ಯಕವಾಗಿ ಜರುಗಿಹೋಗುವ ಸಂಘಟನೆಗಳಾಗಿ ಕವಿ ಧ್ವನಿಸಿರಬಹುದು. ಆದರೂ ಈ ಧ್ವನಿ ಅತ್ಯಂತ ಸೂಕ್ಷ್ಮವಾಗಿ ಸದ್ಯಃ ಸ್ಫೂರ್ತಿಯನ್ನುಂಟುಮಾಡುವುದಿಲ್ಲವೆಂದು ಮಾತ್ರ ಅಂಗೀಕರಿಸಬೇಕು.

ಬ್ಬರಿಂದಲೇ ಸೂಚಿತವಾದ ಚರಿತ್ರೆಯ ವಿಮರ್ಶಕರು ಕೆಲವರು ಈ ಉದ್ದೇಶವು ಪೂರ್ತಿಯಾಗಲಿಲ್ಲವೆಂದು ವಿಮರ್ಶಿಸುವರು. ಕಾಳಿದಾಸನ ಕವಿತೆಯನ್ನು ಆಳವಾಗಿ ನೋಡಿದವರಿಗೆ ಚಾರಿತ್ರಿಕ ವಿಮರ್ಶೆಯು ಯುಕ್ತಿಯುಕ್ತವಾಗಿ ಕಾಣುವುದಿಲ್ಲ.

ಒಂದು ದೃಷ್ಟಿಯಿಂದ ಪರಿಶೀಲಿಸಿದಾಗ ಕಾಳಿದಾಸನ ಕವಿತೆಯಲ್ಲಿ ಸ್ಫುರಿಸುವ ಸಮಸ್ಯೆಗಳು, ಅವುಗಳ ವಿಷಯದಲ್ಲಿ ಕವಿಯು ಧ್ವನಿಸುವಂತೆ ಮಾಡಿದ ದೃಷ್ಟಿ ಇವನ್ನು ಈ ಪ್ರಬಂಧದಲ್ಲಿ ದಿಙ್ಮಾತ್ರವಾಗಿ ಸೂಚಿಸಿದ್ದೇನೆ. ಈ ಮಹಾಕವಿಯ ಕವಿತೆಯಲ್ಲಿ ಇದು ಸಮಸ್ಯೆ ಇದು ಕಥೆ ಇದು ರಚನಾ ಸೌಂದರ್ಯವೆಂದು ಪ್ರತ್ಯೇಕವಾಗಿ ಶೀರ್ಷಿಕೆಗಳನ್ನು ಕೊಟ್ಟು ಪರಿಶೀಲಿಸುವುದು ತುಂಬ ಕಷ್ಟ. ಈ ವಿಷಯಗಳೆಲ್ಲವೂ ಇವನ ಕವಿತೆಯಲ್ಲಿ ಒಂದೇ ಆಕೃತಿಯಲಿ ನಿಂತು ಅವಿಭಾಜ್ಯವಾದ ಅರ್ಧನಾರೀಶ್ವರ ಸೌಂದರ್ಯದಿಂದ ನಮ್ಮ ಕಣ್ಣುಗಳಲ್ಲಿ ಬೆಳಗುತ್ತವೆ! *

[೧೯೫೬.

---

* ಶ್ರೀ ಟಿ. ಗಣಪತಿಶಾಸ್ತ್ರಿಯವರ ಲೇಖನಾನುವಾದವಿದು.

ಟಿ. ವಿ. ವೆಂಕಟಾಚಲಶಾಸ್ತ್ರೀ

೧೯೭೨ ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾದ 'ಕನ್ನಡ ಛಂದಸ್ಸು', ಗ್ರೀಕ್ ನಾಟಕದ ಹಳಗನ್ನಡಾನುವಾದ 'ಬದ್ಧ ಪ್ರಮೀತ್ಯೂಸ್', ನೇಮಿನಾಥ ಪುರಾಣದ ಕಂಸೋಪಾಖ್ಯಾನದ ನಾಟಕ ರೂಪ 'ಕಂಸ', ಮಹಾಕಾವ್ಯ ಲಕ್ಷಣ, ಸಂಖ್ಯಾ ವಿಶಿಷ್ಟ ಪದಕೋಶವಾದ 'ಶ್ರೀವತ್ಸ ನಿಘಂಟು' ಹಾಗೂ 'ಸಾಹಿತ್ಯ ಮಂಥನ' — ವೆಂಕಟಾಚಲ ಶಾಸ್ತ್ರಿಯವರ ಪ್ರಮುಖ ಕೃತಿಗಳು.

ತೋಗೆರೆ ವೆಂಕಟಸುಬ್ಬಶಾಸ್ತ್ರೀ ವೆಂಕಟಾಚಲಶಾಸ್ತ್ರಿಯವರ ಜನನ, ಕನಕಪುರದಲ್ಲಿ, ೧೯೩೩ ರ ಆಗಸ್ಟ್ ೨೬ ರಂದು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಎಂ.ಎ. ವ್ಯಾಸಂಗ ಮುಗಿಸಿ ವಿವಿಧ ಕಾಲೇಜುಗಳಲ್ಲಿ ದುಡಿದು, ಈಗ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಸ್ನಾತಕೋತ್ತರ ಬೋಧನ ಶಾಖೆಯಲ್ಲಿ ಅಧ್ಯಾಪಕರಾಗಿದ್ದಾರೆ.

ಶ್ರೀಯುತರು ಪ್ರಬುದ್ಧ ಕರ್ಣಾಟಕದ ಸಂಪಾದಕರಲ್ಲಿ ಒಬ್ಬರೂ ವಿಷಯ ವಿಶ್ವಕೋಶದ ಉಪಸಮಿತಿಯ ಸದಸ್ಯರೂ ಆಗಿದ್ದಾರೆ.

ವಿದ್ವತ್ಪೂರ್ಣ ಲೇಖನಗಳ ಸಂಗ್ರಹವಾದ 'ಸಾಹಿತ್ಯ ಮಂಥನ' ಸಾಹಿತ್ಯದ ವಿದ್ಯಾರ್ಥಿಗಳಿಗೂ ಜಿಜ್ಞಾಸುಗಳಿಗೂ ಉಪಯುಕ್ತವೆನಿಸುವ ಬೆಲೆಬಾಳುವ ಗ್ರಂಥ. ಇದು ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದ ಪ್ರಕಟಣೆ.